ಮಹಾಕವಿ ಲಕ್ಷ್ಮೀಶ ವಿರಚಿತ

ಕನ್ನಡ ಜೈಮಿನಿ ಭಾರತ

ಸಂಪಾದಕರು


ಸೇವುಡು ನರಸಿಂಹಶಾಸ್ತ್ರೀ, ಎಂ. ಎ.

ಆಸ್ಥಾನವಿದ್ವಾನ್ ಪಂಡಿತರತ್ನಂ

ಎ. ಶಿವಮೂರ್ತಿಶಾಸ್ತ್ರೀ

ಪ್ರಕಾಶಕರು

ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಸಮಿತಿ



ಚಿಕ್ಕಮಗಳೂರು ಜಿಲ್ಲೆಯ ದೇವನೂರು ಗ್ರಾಮದ ಶ್ರೀ ಲಕ್ಷ್ಮೀರಮಣಸ್ವಾಮಿಯ ಮೂಲವಿಗ್ರಹ.

[Photo : J.K.B.

ಮಹಾಕವಿ ಲಕ್ಷ್ಮೀಶ ವಿರಚಿತ

ಕನ್ನಡ ಜೈಮಿನಿ ಭಾರತ

ಸಂಪಾದಕರು :

ದೇವುಡು ನರಸಿಂಹಶಾಸ್ತ್ರೀ, ಎಂ.ಎ.

ಆಸ್ಥಾನವಿದ್ವಾನ್ ಪಂಡಿತರತ್ನಂ

ಬ. ಶಿವಮೂರ್ತಿಶಾಸ್ತ್ರೀ

ಪ್ರಕಾಶಕರು :

ಮೈಸೂರು ಸಂಸ್ಥಾನದ
ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ
ವಿಧಾನಸೌಧ—ಬೆಂಗಳೂರು

ಮೈಸೂರು ಸರ್ಕಾರದ
ಮುದ್ರಣಾಲಯದ ಡೈರೆಕ್ಟರವರಿಂದ ಮುದ್ರಿಸಲ್ಪಟ್ಟಿತು
ಬೆಂಗಳೂರು
1956

ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಎಸ್. ನಿಜಲಿಂಗಪ್ಪ, ಬಿ.ಎ., ಎಲ್‌ಎಲ್.ಬಿ., ಅವರ

ಶುಭಸಂದೇಶ

ನಮ್ಮ ನಾಡಿನ ಅತ್ಯಂತ ಪ್ರೀತಿಗೆ ಪಾತ್ರನಾದ ಲಕ್ಷ್ಮೀಶ ಕವಿಯ ಕನ್ನಡ ಜೈಮಿನಿ ಭಾರತವನ್ನು ಹೊಸದಾಗಿ ಶೋಧಿಸಿ ಪ್ರಸಿದ್ಧಪಡಿಸಿ ತೀರ ಸುಲಭ ಬೆಲೆಗೆ ಒದಗಿಸಿರುವ ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯವರು ಕನ್ನಡಿಗರ ಹೃತ್ಪೂರ್ವಕವಾದ ವಂದನೆಗಳಿಗೆ ಅರ್ಹರು. ಕನ್ನಡಿಗರೆಲ್ಲರೂ ಈ ಕಾವ್ಯವನ್ನು ಓದಿ ಆನಂದಿಸಬೇಕು. ಪ್ರತಿ ಮನೆಯಲ್ಲಿಯೂ ಈ ಮಹಾಗ್ರಂಥ ಇರಲೇ ಬೇಕು. ಇಲಾಖೆಯ ಪ್ರಯತ್ನಕ್ಕೆ ಕನ್ನಡಿಗರಿಂದ ಸಾಕಷ್ಟು ಪ್ರೋತ್ಸಾಹ ದೊರೆಯಲೆಂದು ಹಾರೈಸಿ ಇಲಾಖೆಯನ್ನು ಅಭಿನಂದಿಸುತ್ತೇನೆ.

ಬೆಂಗಳೂರು,
ತಾ|| ೧-೧೨-೧೯೫೭

ಎಸ್. ನಿಜಲಿಂಗಪ್ಪ

ಮುನ್ನುಡಿ

ನಾರಣಪ್ಪನ ಗದುಗಿನ ಭಾರತವೂ, ಲಕ್ಷ್ಮೀಶನ ಜೈಮಿನಿ ಭಾರತವೂ ಕನ್ನಡ ಸಾಹಿತ್ಯದ ಹಿರಿಯ ಕೃತಿಗಳು. ಇವು ಗಾತ್ರದಲ್ಲಿ ಎಷ್ಟು ದೊಡ್ಡವೋ ಗುಣದಲ್ಲೂ ಅಷ್ಟೇ ದೊಡ್ಡವು. ಈಜಿಪ್ಟ್ ದೇಶದ ಪಿರಮಿಡ್ಡುಗಳು ಮಾನವನ ದೇಹಶಕ್ತಿಯ ಔನ್ನತ್ಯಕ್ಕೆ ನಿದರ್ಶನಗಳು. ಈ ಎರಡು ಸಿರಿಯ ಗ್ರಂಥಗಳನ್ನು ಬುದ್ಧಿಶಕ್ತಿಯ ಪಿರಮಿಡ್ಡುಗಳೆಂದು ಕರೆಯಬಹುದು. ಇವು ನಮ್ಮ ಹಿರಿಯರಿಂದ ಲಭಿಸಿದ ಆಸ್ತಿಗಳು. ಇಂಥ ಆಸ್ತಿಗಳಿಗೆ ಹಕ್ಕುದಾರರಾದ ನಾವು ಧನ್ಯರು. ಇವುಗಳನ್ನು ಓದುವಾಗ ಶ್ರದ್ಧಾಸಕ್ತಿಗಳಿಂದ ಓದಬೇಕು. ಕವಿ ನಾರಣಪ್ಪನು "ಆದರಿಸಿ ಭಾರತದಲೊಂದಕ್ಷರವ ಕೇಳ್ದರಿಗೆ" ಪುಣ್ಯ ಪರಂಪರೆಗಳು ಲಭಿಸುತ್ತವೆಯೆಂದು ಹೇಳಿದ್ದಾನೆ. ಈ ಗ್ರಂಥಗಳನ್ನು 'ಆದರಿಸಿ' ಓದಬೇಕು. ಅನಾದರದಿಂದಲ್ಲ. ಈ ಸಂದರ್ಭದಲ್ಲಿ ಲಕ್ಷ್ಮೀಶನು ಹೇಳಿರುವ ಮಾತೂ ನೆನಪಿಗೆ ಬರುತ್ತದೆ—

> "ಕೆನೆವಾಲ ಕಡೆದು ನವನೀತಮಂ ತೆಗೆದ ಬಾ ।
> ಯ್ಗನಿದಾಗಿ ಸವಿಯದದರೊಳಗೆ ಪುಳಿವಿಳಿದು ರಸ ।
> ವನೆ ಕೆಡಿಸಿದೊಡೆ ಕರೆದ ಸುರಭಿಗಪ್ಪುದೆ ಕೊರತೆ . . . ॥"

ಈ ಮಾತಿನ ಗಹನವಾದ ಅರ್ಥವನ್ನು ಗ್ರಹಿಸಿ ಈ ಮಹಾ ಕಾವ್ಯಗಳನ್ನು ಅಧ್ಯಯನಮಾಡಿ ಅದರಿಂದ ದೊರೆತ ಅಮೃತವನ್ನು ಆಸ್ವಾದಿಸಬೇಕು. ಕಾವ್ಯಾನಂದವೇ ಬ್ರಹ್ಮಾನಂದಕ್ಕೆ ಸೋಪಾನವೆಂಬುದನ್ನು ಈ ಕಾವ್ಯಗಳಿಂದ ತಿಳಿಯಬಹುದಾಗಿದೆ.

ಸುಮಾರು ನಾಲ್ಕು ವರ್ಷಗಳ ಕೆಳಗೆ ಕೈಕೊಂಡ ಸಂಸ್ಕೃತಿ ಪ್ರಸಾರ ಕಾರ್ಯ ಈಗ ಮೊದಲನೆಯ ಹಂತವನ್ನು ದಾಟಿ ಎರಡನೆಯ ಹಂತಕ್ಕೆ ಬಂದಿದೆ. ಮೊದಲನೆಯ ಹಂತದಲ್ಲಿ ನಡೆದ ಉಪನ್ಯಾಸ, ಕಾವ್ಯವಾಚನ ಮುಂತಾದ ಕಾರ್ಯಕ್ರಮಗಳ ಫಲವಾಗಿ ಜನತೆಯ ಮನಸ್ಸು ಸಾಹಿತ್ಯ, ಸಂಸ್ಕೃತಿ ಮತ್ತು ವಿಚಾರಶೀಲತೆಗಳ ಕಡೆಗೆ ತಿರುಗಿದೆ. ಇದುವರೆಗೆ ಸಂಸ್ಕೃತಿ ಪ್ರಸಾರದ ಇಲಾಖೆ ನಡೆಸಿರುವ ಕೆಲಸವನ್ನು ಎಲೆಯ ಕೊನೆಯಲ್ಲಿ ಬಡಿಸುವ ಪಾಯಸಕ್ಕೆ ಹೋಲಿಸಬಹುದು. ಅದು ಸವಿಯೆಂದರೂ ಅದಷ್ಟರಿಂದ ನಮ್ಮ ಹಸಿವು ಹಿಂಗುವುದಿಲ್ಲ. ಔತಣದಲ್ಲಿ ಮುಖ್ಯವಾದ ಭಕ್ಷಭೋಜ್ಯಾದಿಗಳನ್ನು ಬಡಿಸುವ ಕೆಲಸ ಈಗ ಮೊದಲಾಗಿದೆ. ಸಂಸ್ಕೃತಿ ದೃಢವಾಗಿ ಬೇರೂರಿ ಕುಡಿಯಿಟ್ಟು ಬೆಳೆಯಬೇಕಾದರೆ

ದೇಶದಲ್ಲಿ ವಿಚಾರವಾಹಿನಿ ಸರ್ವದಾ ಹರಿಯುತ್ತಿರಬೇಕು ; ಆ ಹೊನಲಿನ ಮಂಜುಳ ಸ್ವರ ಕ್ಷಣಕಾಲ ಕಿವಿಯಲ್ಲಿ ಸುಳಿದು ಮಾಯವಾದರೆ ಸಾಲದು. ಆದ್ದರಿಂದ ಸಂಸ್ಕೃತಿ ಪ್ರಸಾರದ ಇಲಾಖೆ ಇನ್ನು ಮುಂದೆ, ಸಾಹಿತ್ಯ, ಕಲೆ ಮತ್ತು ಶಾಸ್ತ್ರಗಳ ಪರಿಚಯ ಮಾಡಿಕೊಡುವ ಗ್ರಂಥಗಳ ಪ್ರಕಟನೆಗೆ ಹೆಚ್ಚು ಗಮನ ಕೊಡಬೇಕೆಂದು ಸಂಕಲ್ಪ ತೊಟ್ಟಿದೆ.

ಈ ಕಾರ್ಯಕ್ರಮಕ್ಕೆ ಮೊದಲ ಹೆಜ್ಜೆಯಾಗಿ ಈಗಾಗಲೇ "ಸಂಸ್ಕೃತಿ", "ಭಗವಾನ್ ಬುದ್ಧ" ಎಂಬ ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾಗಿದೆ. ಇವೆರಡೂ ಸಂದರ್ಭೋಚಿತವಾಗಿ ಜನತೆಗೆ ಅರ್ಪಿಸಿದ ಬಿಡಿ ಹೂಗಳು ಎನ್ನಬಹುದು. ಇಲಾಖೆಯ ಪುಸ್ತಕಮಾಲೆ ನಿಜವಾಗಿ ಪ್ರಾರಂಭವಾಗುವುದು ಈಗ ಪ್ರಕಟಿಸುತ್ತಿರುವ "ಕನ್ನಡ ಜೈಮಿನಿ ಭಾರತ"ದಿಂದ. ಈ ಕಾವ್ಯವನ್ನು ಮೊದಲು ಪ್ರಕಟಿಸುವುದರಲ್ಲಿ ಔಚಿತ್ಯವಿದೆ. ಸದ್ಯದಲ್ಲೇ ಪ್ರಕಟಿತವಾಗಲಿರುವ ಕುಮಾರ ವ್ಯಾಸಭಾರತದ ಮಹತ್ವವೂ, ವ್ಯಾಪ್ತಿಯೂ ಇದಕ್ಕಿಂತ ಹೆಚ್ಚಿನದೆಂದು ಒಪ್ಪಬಹುದು. ಆದರೆ, ಜೈಮಿನಿ ಭಾರತ ಹೆಚ್ಚು ಸರಳವಾದ ಕಾವ್ಯ. ಸಂಸ್ಕೃತ ಸಾಹಿತ್ಯಾಭ್ಯಾಸಿಗಳಿಗೆ "ರಘುವಂಶ" ಇರುವಂತೆ ಕನ್ನಡಿಗರಿಗೆ ಜೈಮಿನಿ ಭಾರತ. ಈ ಕಾವ್ಯವನ್ನು ಆಸ್ಥಾನವಿದ್ವಾನ್, ಪಂಡಿತರತ್ನಂ, ಕೀರ್ತನಾಚಾರ್ಯ ಶ್ರೀ ಬ. ಶಿವಮೂರ್ತಿಶಾಸ್ತ್ರಿಗಳವರೂ, ಶ್ರೀ ದೇವುಡು ನರಸಿಂಹಶಾಸ್ತ್ರಿಗಳವರೂ ಬಹಳ ಶ್ರಮವಹಿಸಿ ಸಂಪಾದಿಸಿಕೊಟ್ಟಿದ್ದಾರೆ. ಅವರ ಉಪಕಾರವನ್ನು ಸಂತೋಷದಿಂದ ನೆನೆಯುತ್ತೇನೆ.

ಕರ್ಣಾಟಕದ ಹಳ್ಳಿಹಳ್ಳಿಯಲ್ಲೂ ಜಗಲಿಗಳ ಮೇಲೆ ವ್ಯಾಸಪೀಠದಲ್ಲಿ ಗದುಗಿನ ಭಾರತ ಮತ್ತು ಜೈಮಿನಿ ಭಾರತಗಳನ್ನಿಟ್ಟುಕೊಂಡು ಓದುವುದು ನಮ್ಮ ಜನತೆಯ ಶ್ರೇಯಸ್ಕರವಾದ ಪದ್ಧತಿ. ಈ ಪದ್ಧತಿಗೆ ಮತ್ತಷ್ಟು ಪುಷ್ಟಿ ಪೋಷಣೆಗಳನ್ನು ಕೊಡುವುದು ಜನತಾ ಸರ್ಕಾರದ ಕರ್ತವ್ಯವಾಗಿದೆ. ಈ ಕರ್ತವ್ಯದ ಕಾಣಿಕೆಗಳೇ ಈ ಸದ್ಗ್ರಂಥಗಳ ಪ್ರತಿಗಳು.

ಇನ್ನು ಮುಂದೆ ಈ ಗ್ರಂಥಗಳ ಪ್ರಕಟನೆಯಿಂದ ಎಲ್ಲ ಕಡೆಯಲ್ಲೂ ಈ ಮಹಾಕಾವ್ಯಗಳ ದಿವ್ಯ ಘೋಷವು ಕೇಳಿಬರಲೆಂದು ಹಾರೈಸುತ್ತೇನೆ.

"ದೇವಪುರನಿಲಯ ಲಕ್ಷ್ಮೀರಮಣನಾಸ್ಯ ಚಂದ್ರನಾನಂದಮಂ ನಮಗೀಯಲಿ"

ಬೆಂಗಳೂರು
ತಾ॥ ೨೫-೭-೧೯೫೭.

ಕೆ. ಹನುಮಂತಯ್ಯ,
ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿಗಳು.

ಸಂಪಾದಕರ ಬಿನ್ನಹ

ಕನ್ನಡ ಜೈಮಿನಿ ಭಾರತವನ್ನು ಮೈಸೂರು ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ಪ್ರಕಟಿಸಬೇಕೆಂದು ಘನ ಸರ್ಕಾರದವರು ಸಂಕಲ್ಪಿಸಿ, ಆ ಕಾರ್ಯವನ್ನು ಕೃಪೆಮಾಡಿ ನಮಗೆ ಒಪ್ಪಿಸಿದರು. ಈ ಕೆಲಸವನ್ನು ನಾವು ಶ್ರದ್ಧೆಯಿಂದಲೂ, ಕನ್ನಡದ ಮೇಲಿನ ಅಭಿಮಾನದಿಂದಲೂ, ಯಥಾಶಕ್ತಿಯಾಗಿ ನಿರ್ವಹಿಸಿದ್ದೇವೆ. ಸಂಪಾದಕ ಮಂಡಲಿಯವರು ಈಗ ಅಚ್ಚಾಗಿರುವ ಗ್ರಂಥಗಳನ್ನೂ ತಾಳೆಯೋಲೆ ಗ್ರಂಥಗಳನ್ನೂ ಪರೀಕ್ಷಿಸಿ, ಶುದ್ಧವಾದ ಪಾಠವನ್ನು ಕಂಡುಹಿಡಿದು ಈ ಗ್ರಂಥದಲ್ಲಿ ಪ್ರಕಟಿಸಬೇಕೆಂದೂ, ಇದು ಜನಸಾಮಾನ್ಯರಿಗೆ ಉಪಯೋಗವಾಗುವ ಆವೃತ್ತಿಯಾದುದರಿಂದ ಪಾಠಾಂತರಗಳ ಪಟ್ಟಿ ಬೇಕಿಲ್ಲವೆಂದೂ ನಿರೂಪಿಸಿದರು. ಅಲ್ಲದೆ, ಈ ಗ್ರಂಥವು ಕರ್ಣಾಟಕ ಭಾಷಾರತ್ನಂ, ಮಹಾವಿದ್ವಾನ್, ಕೈ॥ ಕರಿಬಸವಶಾಸ್ತ್ರಿಗಳ ಕನ್ನಡ ಜೈಮಿನಿ ಭಾರತದ ಪಾಠವನ್ನು ಅನುಸರಿಸಬೇಕೆಂದೂ ಸಲಹೆಮಾಡಿದರು. ನಾವು ಈ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಈ ಗ್ರಂಥವನ್ನು ಸಂಪಾದಿಸಿದ್ದೇವೆ. ಮುದ್ರಣ ಕಾಲದಲ್ಲಿ ಓದುಗರಿಗೂ ಗಮಕಿಗಳಿಗೂ ಅನುಕೂಲವಾಗಲೆಂದು ಕೆಲವೆಡೆ ಒತ್ತಕ್ಷರಗಳನ್ನು ಬಿಡಿಸಿ ಅಚ್ಚುಮಾಡಿಸಿದ್ದೇವೆ. ಕವಿಕಾವ್ಯ ವಿಚಾರವನ್ನು ಕುರಿತು ವಿಸ್ತಾರವಾದ ಪ್ರಸ್ತಾವನೆಯನ್ನು ಬರೆಯಲಾಗಿದೆ. ಈ ಗ್ರಂಥದ ಕಡೆಯಲ್ಲಿ ಕಠಿಣ ಶಬ್ದಗಳ ಅರ್ಥಕೋಶ ಮತ್ತು ವಿಶೇಷ ವಿಚಾರಗಳು ಅಗತ್ಯವೆಂದು ನಮಗೆ ತೋರಿದರೂ ಇಲಾಖೆಯವರ ಇಷ್ಟದಂತೆ ಗ್ರಂಥಪ್ರಕಟಣೆ ತಡವಾಗುವುದೆಂಬ ನಿಮಿತ್ತದಿಂದ ಆ ಕಾರ್ಯವನ್ನು ನಾವು ಮಾಡಲಿಲ್ಲ. ದೇವನೂರಿನ ಶ್ರೀ ಲಕ್ಷ್ಮೀರಮಣಸ್ವಾಮಿ ದೇವಾಲಯದ ಚಿತ್ರಗಳು ಈ ಗ್ರಂಥವನ್ನು ಅಲಂಕರಿಸಿದ್ದು ಓದುಗರಿಗೆ ಹೆಚ್ಚು ಹುರುಪನ್ನುಂಟುಮಾಡುತ್ತದೆಂದು ಭಾವಿಸಿದ್ದೇವೆ. ಈ ಗ್ರಂಥ ಸಂಪಾದನೆಯ ಮಹತ್ಕಾರ್ಯದಲ್ಲಿ ನಮ್ಮ ಬಗ್ಗೆ ಸಹಾನುಭೂತಿಯಿಂದ ವರ್ತಿಸಿದ ನಿವೃತ್ತ ಡೈರೆಕ್ಟರಾದ ರಾಜಸೇವಾಸಕ್ತ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಮತ್ತು ಈಗಿನ ಡೈರೆಕ್ಟರಾದ ಪ್ರೊ॥ ಎ. ಎನ್. ಮೂರ್ತಿರಾಯರು, ಇವರ ಸಹಾಯ ಅಧಿಕಾರಿ ಶ್ರೀ ಜೀರಗೆ ಕಟ್ಟೆ ಬಸವಪ್ಪನವರು ಮೊದಲಾದ ಅಧಿಕಾರ

ವರ್ಗದವರಿಗೂ ಸರ್ಕಾರಿ ಮುದ್ರಣಾಲಯದವರಿಗೂ ನಮ್ಮ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ನಾವು ಈ ಗ್ರಂಥವನ್ನು ಪ್ರಕಟಿಸುವ ಸಂದರ್ಭಲ್ಲಿಯೇ ಲಕ್ಷ್ಮೀಶ ಕವಿ ವಿರಚಿತಗಳಾದ 'ಹತ್ತು ಹಾಡುಗಳು' ನಮ್ಮ ಗಮನಕ್ಕೆ ಬಂದುವು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾದ ಅವನ್ನು ಈ ಗ್ರಂಥದ ಕಡೆಯಲ್ಲಿ ಪರಿಶಿಷ್ಟದಲ್ಲಿ ಕೊಟ್ಟಿದ್ದೇವೆ. ಈ ಹಾಡುಗಳನ್ನು ಗ್ರಂಥದ ಕಡೆಯಲ್ಲಿ ಕೊಡಬೇಕೆಂದು ಉಪಯುಕ್ತ ಸಲಹೆ ಕೊಟ್ಟ ಪ್ರೊ॥ ಡಿ. ಎಲ್. ನರಸಿಂಹಾಚಾರ್ ಅವರ ಉಪಕಾರವನ್ನು ಇಲ್ಲಿ ಸ್ಮರಿಸುವುದು ಅಗತ್ಯ.

ಪ್ರಮಾದವಶಾತ್ ಈ ಗ್ರಂಥದಲ್ಲಿ ಕೆಲವು ಅಚ್ಚಿನ ತಪ್ಪುಗಳು ಹಾಗೆಯೇ ಉಳಿದುಹೋಗಿವೆ. ಇದಕ್ಕಾಗಿ ನಾವು ವಿಷಾದಿಸುತ್ತೇವೆ. ಒಟ್ಟಿನಲ್ಲಿ ಬಹಳ ಪ್ರಮಾದವಾದವುಗಳೆಂದು ಕಂಡುಬಂದ ದೋಷಗಳ ಶುದ್ಧ ಪಾಠಗಳನ್ನು ಈ ಗ್ರಂಥದ ಕೊನೆಯಲ್ಲಿ "**ಶುದ್ಧಾಶುದ್ಧ ಪತ್ರಿಕೆ**"ಯಲ್ಲಿ ಸೂಚಿಸಲಾಗಿದೆ.

ಇಂತು

ಬೆಂಗಳೂರು, **ದೇವುಡು ನರಸಿಂಹಶಾಸ್ತ್ರೀ**

ತಾ॥ ೧೫-೬-೧೯೫೬. **ಬ. ಶಿವಮೂರ್ತಿಶಾಸ್ತ್ರೀ**

(ಸಂಪಾದಕರು)

ವಿಷಯ ಸೂಚಿಕೆ

ಕನ್ನಡ ಜೈಮಿನಿ ಭಾರತ

(ಕವಿ-ಕಾವ್ಯ ವಿಚಾರ)

ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅತ್ಯಂತ ಜನಪ್ರಿಯವಾದ ಕಾವ್ಯಗಳಲ್ಲಿ ಜೈಮಿನಿ ಭಾರತವು ಪರಿಗಣಿಸಲ್ಪಟ್ಟಿದೆ. ಪಂಡಿತರು, ಪಾಮರರು, ಶೈವರು, ವೈಷ್ಣವರು, ಅರಮನೆಯವರು, ಗುರುಮನೆಯವರು, ಸನಾತನಿಗಳು, ಸುಧಾರಕರು ಎಂಬ ಭೇದ ಭಾವವಿಲ್ಲದೆ ಎಲ್ಲರ ಪ್ರೀತಿ-ಗೌರವಗಳಿಗೂ ಪಾತ್ರವಾಗಿರುವುದು ಈ ಗ್ರಂಥದ ವೈಶಿಷ್ಟ್ಯವೆನ್ನಬಹುದು. ಕೆಲವು ವರ್ಷಗಳ ಹಿಂದೆ ನಮ್ಮ ಕನ್ನಡನಾಡಿನಲ್ಲಿ ಜೈಮಿನಿ ಭಾರತವನ್ನು ಓದಿ ಅರ್ಥ ಹೇಳುವವರನ್ನು ಜನರು ಬಹಳವಾಗಿ ಗೌರವಿಸುತ್ತಿದ್ದರು. ಜೈಮಿನಿಯನ್ನು ಓದಿ ಅರ್ಥ ಹೇಳುವವನು ಒಳ್ಳೆಯ ವಿದ್ವಾಂಸನೆಂದೂ, ಸಹೃದಯನೆಂದೂ, ಲೋಕಾನುಭವಿಯೆಂದೂ ಜನರು ಭಾವಿಸುತ್ತಿದ್ದರು. ಈಗಲೂ ಆ ಭಾವನೆ ಕನ್ನಡಿಗರಲ್ಲುಂಟು. ಹೀಗೆ ಈ ಗ್ರಂಥವು ಕನ್ನಡಿಗರ ಸಂಸ್ಕೃತಿಯ ಅಳತೆಗೋಲಾಗಿ ಭಾವಿಸಲ್ಪಟ್ಟಿದೆ.

ನವರಸಭರಿತವಾದ ಈ ಕಾವ್ಯವನ್ನು ಪಂಡಿತಪಾಮರರೆಲ್ಲರೂ ಸುಲಭವಾಗಿ ಓದಲೆಂಬ ಕಾರಣದಿಂದ ನಮ್ಮ ನಾಡಿನ ಹಿಂದಿನ ವಿದ್ವಾಂಸರನೇಕರು ಈ ಮಹಾಕಾವ್ಯಕ್ಕೆ ಟೀಕೆ-ಟಿಪ್ಪಣಿಗಳನ್ನು ಬರೆದು ಪ್ರಕಟಿಸಿರುತ್ತಾರೆ. ಇಂತಹ ಸಟೀಕ ಜೈಮಿನಿ ಗ್ರಂಥಗಳಲ್ಲಿ ೧೮೧೩ರಲ್ಲಿ ಶ್ರೀ ದಕ್ಷಿಣಾಮೂರ್ತಿಶಾಸ್ತ್ರಿಗಳೂ, ೧೮೧೪ರಲ್ಲಿ ಕರ್ಣಾಟಕ ಭಾಷಾರತ್ನಂ ಶ್ರೀ ಕರಿಬಸವಶಾಸ್ತ್ರಿಗಳೂ, ೧೯೩೨ರಲ್ಲಿ ಶ್ರೀ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳೂ ಪ್ರಕಟಿಸಿದ ಟೀಕಾ ಗ್ರಂಥಗಳು ಗಣನಾರ್ಹವಾಗಿವೆ. ಇಷ್ಟೊಂದು ಬಗೆಯಿಂದ ಟೀಕೆ-ಟಿಪ್ಪಣಿಗಳನ್ನು ಪ್ರಕಟಿಸಿಕೊಂಡ ಗ್ರಂಥವು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಜೈಮಿನಿ ಭಾರತ ಹೊರತು ಮತ್ತೊಂದು ಗ್ರಂಥವಿಲ್ಲವೆನ್ನಬಹುದು. ಈ ಟೀಕೆ-ಟಿಪ್ಪಣಿಗಳೂ ಸಹ ಗ್ರಂಥದ ಜನಪ್ರಿಯತೆಗೆ ನಿದರ್ಶನವಾಗಿವೆ. ಜನಸಾಮಾನ್ಯರು ಇತರರ ಸಹಾಯವಿಲ್ಲದೆ ಈ ಗ್ರಂಥವನ್ನು ಓದಿ ತಿಳಿದುಕೊಳ್ಳಲು ಈ ಟೀಕೆ ಟಿಪ್ಪಣಿಗಳು ಸಹಾಯವಾಗಿವೆ.

ಮನೋಹರವಾದ ಶೈಲಿ, ಆಕರ್ಷಕವಾದ ಕಥಾವಸ್ತು, ಪ್ರತಿಭಾಮಯವಾದ ವರ್ಣನೆ, ಉತ್ತಮೋತ್ತಮ ಪಾತ್ರ ಪೋಷಣೆ, ಹೃದಯಂಗಮ ರಸಭಾವ

ನಿರೂಪಣೆ. ಕಿವಿಗಿಂಪಾದ ಶಬ್ದಾಲಂಕಾರ-ಅರ್ಥಾಲಂಕಾರಗಳು, ಚಿತ್ತ ಪರಿಪಾಕವನ್ನುಂಟುಮಾಡುವ ನೀತಿಬೋಧೆ, ಎಲ್ಲಕ್ಕೂ ಮಿಗಿಲಾಗಿ ಉದಾರವೂ, ಗಂಭೀರವೂ, ಉಜ್ವಲವೂ ಆದ ಭಾವನೆಗಳಿರುವುದೇ ಈ ಗ್ರಂಥದ ಸರ್ವೋತ್ಕೃಷ್ಟತೆಗೆ ಕಾರಣವೆನ್ನಬಹುದು. ಈ ಕಾವ್ಯದ ಹಿರಿಮೆಯನ್ನು ಕುರಿತು ಹಿಂದಿನ ಮತ್ತು ಇಂದಿನ ವಿದ್ವಾಂಸರು ಏನು ಹೇಳಿರುವರೆಂಬುದನ್ನು ಮೊದಲು ನಾವಿಲ್ಲಿ ತಿಳಿಯೋಣ.

"ಕನ್ನಡ ಕವಿಚರಿತ್ರೆ"ಯಲ್ಲಿ ಮಹಾಮಹೋಪಾಧ್ಯಾಯ **ಪೂಜ್ಯ ಆರ್. ನರಸಿಂಹಾಚಾರ್ಯರು,** "ಈತನಿಗೆ 'ಕರ್ಣಾಟ ಕವಿಚೂತ ವನಚೈತ್ರ' ಎಂಬ ಬಿರುದಿದ್ದಂತೆ ತಿಳಿಯುತ್ತದೆ.........ಇವನ ಬಂಧವು ಲಲಿತವಾಗಿಯೂ, ಮನೋಹರವಾಗಿಯೂ ಇದೆ. ಆಧುನಿಕವಾದರೂ ಈ ಗ್ರಂಥಕ್ಕೆ ಕನ್ನಡನಾಡಿನಲ್ಲಿರುವ ಪ್ರಾಶಸ್ತ್ಯವೂ, ಪ್ರಸಿದ್ಧಿಯೂ ಮತ್ತಾವ ಗ್ರಂಥಕ್ಕೂ ಇಲ್ಲ. ಇದು ಪಂಡಿತ-ಪಾಮರರೆಲ್ಲರ ಆದರಕ್ಕೂ ಪಾತ್ರವಾಗಿದೆ. ಪ್ರಾಯಿಕವಾಗಿ ಇದನ್ನು ಓದದ ಕನ್ನಡಿಗರೇ ಇಲ್ಲ....ಶೈಲಿಯಲ್ಲಿ ಸ್ವಲ್ಪಮಟ್ಟಿಗೆ "ಚೆನ್ನಬಸವ ಪುರಾಣ"ವನ್ನು ಅನುಸರಿಸಿದಂತೆ ತೋರುತ್ತದೆ." ಎಂದು ಹೇಳಿರುತ್ತಾರೆ. [ಕನ್ನಡ ಕವಿಚರಿತ್ರೆ, ಭಾಗ ೨, ಪು. ೫೨೩-೨೪.] ಆಸ್ಥಾನ ಮಹಾವಿದ್ವಾಂಸ, ಕರ್ಣಾಟಕ ಭಾಷಾರತ್ನಂ ಪೂಜ್ಯ **ಕೈ| ಕರಿಬಸವಶಾಸ್ತ್ರಿಗಳು,** "ಈ ಗ್ರಂಥವು ಸರಸಾಲಂಕಾರಸಂಶೋಭಿತವಾಗಿಯೂ, ಮಧುರತರ ಪದಪುಂಜರಂಜಿತವಾಗಿಯೂ, ಮನೋಜ್ಞಸಂದರ್ಭಗರ್ಭಿತವಾಗಿಯೂ ಇರುವುದರಿಂದ ಈ ಕಾವ್ಯವನ್ನು ಕನ್ನಡಿಗರಾದ ಪಂಡಿತ-ಪಾಮರರೆಲ್ಲರೂ, ಪಠನ, ಲೇಖನ, ಅರ್ಥ, ಕಥನ, ಶ್ರವಣಾದಿಗಳಿಂದ ಪ್ರಚಾರದಲ್ಲಿ ತಂದರು. ಕರ್ಣಾಟಕದೇಶದಲ್ಲಿ ಕನ್ನಡ ಭಾರತ, ಜೈಮಿನಿ ಭಾರತಗಳಿಗಿರುವ ಪ್ರಾಶಸ್ತ್ಯವೂ, ಪ್ರಸಿದ್ಧಿಯೂ, ಪುರಸ್ಕಾರವೂ, ಯಾವ ಗ್ರಂಥಗಳಿಗೂ ಬರಲಿಲ್ಲ." ಎಂದು ಪೀಠಿಕೆಯಲ್ಲಿ ಹೇಳಿರುತ್ತಾರೆ. ಪೂರ್ವೋಕ್ತ ಬ್ರಹ್ಮಶ್ರೀ **ದಕ್ಷಿಣಾಮೂರ್ತಿ ಶಾಸ್ತ್ರಿಗಳು,** "ಜನರು ಇದನ್ನು ಓದಿದ್ದರಿಂದ ಭಕ್ತಿಯುಳ್ಳವರಾಗಿ, ಭಗವದುಪಾಸನೆಯಿಂದ ಕೃತಕೃತ್ಯರಾಗಲೆಂಬುದಾಗಿ ನವರಸಭರಿತವಾಗಿರುವಂತೆ ವಾರ್ಧಕ ಷಟ್ಪದಿರೂಪವಾಗಿ ಕವಿ ಜೈಮಿನಿ ಭಾರತವನ್ನು ರಚಿಸಿದನು." ಎಂದು ಹೇಳಿರುತ್ತಾರೆ. ಹಾಗೆಯೇ **ಶ್ರೀ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು,** "ಪದಲಾಲಿತ್ಯ, ಅರ್ಥಗಾಂಭೀರ್ಯ, ಮಾಧುರ್ಯ, ಶೈಲಿ, ಸರಸತೆ, ಸಾರಳ್ಯ, ಅರ್ಥಚಮತ್ಕೃತಿ, ಭಾವ ವೈಚಿತ್ರ್ಯ, ಅಲಂಕಾರ ವೈಖರಿ, ಗುಣಪರಿಪಾಟಿ, ಭಾವೋದಯ ಪಕ್ವಿಕೆ, ಶ್ರಾವ್ಯತೆ ಮುಂತಾದುವುಗಳನ್ನು ಎಷ್ಟು ಕೊಂಡಾಡಿದರೂ ಸಾಲದು. ಕನ್ನಡ ಕಾವ್ಯಾಮೃತಪಾನವನ್ನು ಮಾಡಬೇಕೆಂದು ಬಯಸುವ ಕನ್ನಡಿಗರಿಗೆ ಇಂತಹ ಅಮೃತನಿಧಿಯು ಮತ್ತೊಂದಿಲ್ಲ" ಎಂದು ಹೇಳಿದ್ದಾರೆ.

"A History of Kannada Literature" ಎಂಬ ಗ್ರಂಥವನ್ನು ಬರೆದ ಇ. ಪಿ. ರೈಸ್, ಬಿ.ಎ., ಅವರು (೧೯೨೧ರಲ್ಲಿ) "Jaimini Bharata—(which) is more famous than any other work of Kanarese literature, esteemed alike by learned and unlearned and universally studied........His poem is written throughout in Shatpadi, and is the best specimen of that style. (Page 85.)' ಎಂದು ಅಭಿಪ್ರಾಯಪಟ್ಟಿರುತ್ತಾರೆ. "ಕನ್ನಡ ಸಾಹಿತ್ಯ ಚರಿತ್ರೆ" ಯನ್ನು ಬರೆದಿರುವ ಪ್ರೊ|| ಆರ್. ಎಸ್. ಮುಗಳಿಯವರು, "ಜೈಮಿನಿ ಭಾರತವು ಸಾಂಪ್ರದಾಯಿಕ ಲಕ್ಷಣಗಳಿಂದ ಮಹಾಕಾವ್ಯ........ಅವನದು ಮಹಾಕವಿ ಯೋಗ್ಯತೆ. ಇಡಿಯ ಗ್ರಂಥದಲ್ಲಿಯ ಛಂದಸ್ಸು-ಶೈಲಿಗಳ ಪರಿಪಾಕದಿಂದಲೂ ಅವನ ಹಿರಿಯ ಶಕ್ತಿ ತಿಳಿಯುತ್ತದೆ. ಅವನು ಪ್ರಥಮತಃ ಪಂಡಿತನೆನ್ನುವದಕ್ಕಿಂತಲೂ ಕಥನಕವಿ ಎಂದರೆ ಹೆಚ್ಚು ಯುಕ್ತ. ಸಾಂಪ್ರದಾಯಿಕನಾದರೂ ಸಂಪ್ರದಾಯ ಶರಣನಲ್ಲ. ಪಾಂಡಿತ್ಯ ಚಮತ್ಕೃತಿಗಳ ವ್ಯಾಮೋಹ ಅವನ ಕಾವ್ಯರಚನೆಯಲ್ಲಿ ಎದ್ದು ಕಾಣಿಸುತ್ತಿದ್ದರೂ, ಅದರ ಬುಡದಲ್ಲಿ ಕವಿತಾ ಸತ್ವವು ಸಿಲುಕಿ ಜರ್ಜರಿತವಾದ ಸಂದರ್ಭಗಳು ಕಡಿಮೆ. ಒಟ್ಟಿನಲ್ಲಿ ಲಕ್ಷ್ಮೀಶ ಮಹಾಕವಿಯಾದರೂ ಅವನ ಜೈಮಿನಿ ಭಾರತವು ಅಂಶದಲ್ಲಿ ಮಹತ್ತಾಗಿದೆ." [ಕನ್ನಡ ಸಾಹಿತ್ಯ ಚರಿತ್ರೆ, ಪುಟ ೨೭೫.] ಎಂದು ಹೇಳಿರುತ್ತಾರೆ.

ಸುಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ ತ. ಸು. ಶಾಮರಾಯರು, "ಪುಷ್ಪ ಸಮುದಾಯದಲ್ಲಿ ಗುಲಾಬಿ ಹೇಗೋ ಕವಿ ಸಮುದಾಯದಲ್ಲಿ ಲಕ್ಷ್ಮೀಶ ಹಾಗೆ. ಗುಲಾಬಿಗಿಂತಲೂ ಸುಂದರವಾದ ಪುಷ್ಪಗಳಿರಬಹುದು. ಅವುಗಳಿಗದರ ವಾಸನೆ ಇಲ್ಲ. ಗುಲಾಬಿಗಿಂತಲೂ ತಂಪಾದ ಕಂಪನ್ನು ಪಡೆದಿರುವ ಪುಷ್ಪಗಳಿರಬಹುದು. ಆದರೆ ಅವುಗಳಿಗದರ ಸೊಬಗಿಲ್ಲ. ಸೊಬಗು—ಸುವಾಸನೆಗಳೆರಡನ್ನೂ ಏಕಕಾಲದಲ್ಲಿ ಪಡೆದು ಮೆರೆಯುವ ಭಾಗ್ಯ ಗುಲಾಬಿಯದು. ನಮ್ಮ 'ಕವಿ ಚೈತ್ರವನ ಚೂತನು' ಅದರಂತೆಯೇ ವಿಶಿಷ್ಟ ವ್ಯಕ್ತಿತ್ವವುಳ್ಳವನು. ಆತನಿಗಿಂತಲೂ ದೊಡ್ಡ ಕವಿತಾಶಕ್ತಿಯುಳ್ಳವರು ಕನ್ನಡ ಸಾಹಿತ್ಯ ಜಗತ್ತಿನಲ್ಲಿದ್ದಾರೆ. ಆದರೆ ಆ ಪಾಂಡಿತ್ಯ, ಆ ಷಟ್ಪದ ಝೇಂಕಾರ, ಆ ಹಿತಮಿತ ಜ್ಞಾನ, ಆ ಪ್ರಜ್ಞೆ ಇವು ಎಲ್ಲಿ ದೊರೆತಾವು? ಲಕ್ಷ್ಮೀಶನಿಗಿಂತಲೂ ಪಂಡಿತರಾದ ಕವಿಗಳಿಗೆ ನಮ್ಮಲ್ಲಿ ಕೊರತೆಯೇನೂ ಇಲ್ಲ. ಆದರೆ ಆತನ ಪದಲಾಲಿತ್ಯ, ಪ್ರಜ್ಞಾಪೂರ್ಣ ಪ್ರತಿಭೆ ಮತ್ತೆಲ್ಲಿ ದೊರೆತಾವು? ಒಂದು ದೃಷ್ಟಿಯಿಂದ ನಮ್ಮ ಲಕ್ಷ್ಮೀಶ ಅದ್ವಿತೀಯ." ಎಂದಿದ್ದಾರೆ. [ಜೈಮಿನಿ ಭಾರತ ಸಂಗ್ರಹ, ಪೀಠಿಕೆ]

ವಿಖ್ಯಾತ ಆಧುನಿಕ ಕವಿಗಳಾದ ಪ್ರೊ|| ಕೆ. ವಿ ಪುಟ್ಟಪ್ಪನವರು, "ಕಾವ್ಯ ಭಾಗಗಳಲ್ಲಿ ಲಕ್ಷ್ಮೀಶನ ಕಥಾಲಾಪನೆಯು ಆದರ್ಶ ಸೀಮಾಸ್ಪರ್ಶವಾಗಿದೆ. ಆತನ ಶೈಲಿಯು ವಸಂತವನ ಶೋಭೆಯೊಡನಾಡುವ ವಿಹಂಗಮ ಕೂಜ

ನದಂತೆ ಸುಂದರ ಮಂಜುಳವಾಗಿದೆ. ಅಲ್ಲಿ ಕಂಡುಬರುವ ನುಣ್ಪುನಯಗಳು ಅನ್ಯಾದೃಶವೆಂದು ಹೇಳಿದರೆ ಇತರ ಷಟ್ಪದಿ ಕರ್ತೃಗಳು ಕರುಬಲಾರರು.'' ಎಂದು ಹೇಳಿದ್ದಾರೆ. [ಕವಿ ಲಕ್ಷ್ಮೀಶ. ಪುಟ ೧೯೩.] ಈ ಮೇಲೆ ಕಂಡ ವಿದ್ವಾಂಸರ ಅಭಿಪ್ರಾಯಗಳಿಂದ ಲಕ್ಷ್ಮೀಶನ ಕಾವ್ಯವು ಪಷ್ಟೊಂದು ಜನಮನ್ನಣೆಯನ್ನು ಪಡೆದಿದೆ ಎಂಬುದನ್ನು ನಾವು ಸುಲಭವಾಗಿ ಅರಿತುಕೊಳ್ಳಬಹುದು.

ಕವಿಯ ಸ್ಥಳ

ಮಹಾಕವಿ ಲಕ್ಷ್ಮೀಶನು ಯಾವ ಊರಿನವನು ಎಂಬ ಬಗ್ಗೆ ವಿದ್ವಾಂಸರಲ್ಲಿ ತುಂಬ ಚರ್ಚೆ ನಡೆದಿದೆ. ಕವಿ ಈ ಕಾವ್ಯದಲ್ಲಿ "ದೇವಪುರ ಲಕ್ಷ್ಮೀರಮಣ" (ಸಂ. ೧. ಪ. ೧.), "ಗೀರ್ವಾಣ ಪುರನಿಲಯ ಲಕ್ಷ್ಮೀವರಂ" (ಸಂ. ೧. ಪ. ೮), "ದೇವಪುರದ ಲಕ್ಷ್ಮೀಶ", (ಸಂ. ೧. ಪ. ೧೧), "ದೇವಪುರ ಲಕ್ಷ್ಮೀಶ" (ಸಂ. ೨. ಪ. ೬೭), (ಸಂ. ೩. ಪ. ೪೨) ಮತ್ತು (ಸಂ. ೪. ಪ. ೭೨), "ಸುರಪುರದ ಲಕ್ಷ್ಮೀಶನು" (ಸಂ. ೬. ಪ. ೫೫), "ದೇವಪುರ ಲಕ್ಷ್ಮೀಪತಿ" (ಸಂ. ೭. ಪ. ೬೭) ಮತ್ತು (ಸಂ. ೮. ಪ. ೪೯), "ಸುರಪುರದ ಲಕ್ಷ್ಮೀಕಾಂತ" (ಸಂ. ೯. ಪ. ೩೪), "ದಿವಿಜಪುರದ ಲಕ್ಷ್ಮೀಶ" (ಸಂ. ೧೦. ಪ. ೫೪), "ದೇವಪುರದ ಲಕ್ಷ್ಮೀಪತಿ" (ಸಂ. ೧೧. ಪ. ೪೧), "ದೇವಪುರ ನಿಲಯ ಲಕ್ಷ್ಮೀಪತಿ" (ಸಂ. ೧೨. ಪ. ೫೧), "ದೇವಪುರದೊಡೆಯ ಲಕ್ಷ್ಮೀವರಂ" (ಸಂ. ೧೨. ಪ. ೬೩), "ಅಮರಪುರದೊಡೆಯ ಲಕ್ಷ್ಮೀಕಾಂತ" (ಸಂ. ೩೪. ಪ. ೪೦), " —ಹೀಗೆ ಪ್ರತಿ ಸಂಧಿಯ ಕಡೆಯಲ್ಲಿಯೂ ತನ್ನ ಇಷ್ಟದೇವತೆಯಾದ ಲಕ್ಷ್ಮೀರಮಣನನ್ನು ಸ್ಮರಿಸಿದ್ದಾನೆ.

ಈ ಕವಿಯ ಜನ್ಮಸ್ಥಳವಾದ "ದೇವಪುರ" ಯಾವುದು ಎಂದು ಚರ್ಚಿಸುವ ವಿದ್ವಾಂಸರಲ್ಲಿ ಕೆಲವರು ಚಿಕ್ಕಮಗಳೂರು ಜಿಲ್ಲಾ **ದೇವನೂರು** ಎಂದೂ, ಮತ್ತೆ ಕೆಲವರು ಗುಲ್ಬರ್ಗ ಜಿಲ್ಲಾ ಸುರಪುರದ ಪಕ್ಕದಲ್ಲಿರುವ **ದೇವಪುರ** ಎಂದೂ ಹೇಳುತ್ತಾರೆ. ಈ ಎರಡು ಊರುಗಳಲ್ಲಿಯೂ ಲಕ್ಷ್ಮೀಪತಿಯ ದೇವಾಲಯವಿದೆ. ಈ ಉಭಯ ಸ್ಥಳಗಳಲ್ಲಿಯೂ, 'ಕವಿ ನಮ್ಮಲ್ಲಿ ಹುಟ್ಟಿದವನು, ತಮ್ಮಲ್ಲಿ ಹುಟ್ಟಿದವನು' ಎಂದು ಹೇಳುವ ಕಥೆಗಳು ಪ್ರಸಿದ್ಧವಾಗಿವೆ. ಆದರೆ ಕವಿಯ ವರ್ಣನಾವೈಭವವನ್ನು ನೋಡಿದರೆ ಅವನು ಪ್ರಕೃತಿಸೌಂದರ್ಯದ ನೆಲೆವೀಡಾದ ಚಿಕ್ಕಮಗಳೂರು ಜಿಲ್ಲಾ ದೇವನೂರಿನವನೇ ಆಗಿರಬೇಕೆಂದು ವಾದಿಸುವವರ ಪಕ್ಷಕ್ಕೆ ಬಲ ಹೆಚ್ಚಾಗಿದೆ ಎಂದು ನಮಗೆ ತೋರುತ್ತದೆ. "ದೇವನೂರು" ಎಂಬುದರ ಸಂಸ್ಕೃತದ ರೂಪಗಳೇ ಗೀರ್ವಾಣಪುರ, ಸುರಪುರ, ದೇವಪುರ, ಅಮರಪುರ ಮೊದಲಾದ ಹೆಸರುಗಳು.

ಈ ದೇವನೂರಿನ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಆಳ್ವಾರರುಗಳೆಂಬ ಭಕ್ತರ ವಿಗ್ರಹಗಳ ಜತೆಯಲ್ಲಿ ಲಕ್ಷ್ಮೀಶನ ವಿಗ್ರಹವು ಪೂಜಿಸಲ್ಪಡುತ್ತಿದೆ. ದೇವಸ್ಥಾನದ ಪಶ್ಚಿಮಭಾಗದ ಮಂಟಪವನ್ನು "**ಲಕ್ಷ್ಮೀಕಾಂತ ಹೆಬ್ಬಾರ ಮಂಟಪ**" ಎಂದು ಆ ಊರಿನ ಜನರು ಕರೆಯುತ್ತಾರೆ. ದೇವನೂರಿನ ಶ್ರೀ ವೈಷ್ಣವ ಬ್ರಾಹ್ಮಣರ ಮನೆಯಲ್ಲಿನ ಶುಭಶೋಭನಾದಿ ಕಾರ್ಯಗಳಲ್ಲಿ ಲಕ್ಷ್ಮೀಶನಿಗೆ ಅಗ್ರತಾಂಬೂಲವನ್ನೆತ್ತುವ ಸಂಪ್ರದಾಯವಿದೆ. ದೇವರ ಪೂಜೆಯ ಕಾಲದಲ್ಲಿ ಜೈಮಿನಿ ಭಾರತದ ಸ್ತೋತ್ರಗಳನ್ನು ಹೇಳುತ್ತಾರೆ. ಲಕ್ಷ್ಮೀಶನು ದೇವನೂರಿಗೆ ಅನತಿದೂರದಲ್ಲಿರುವ ವಿಜಯನಗರದ ವೈಭವವನ್ನು ಕಣ್ಣಾರೆ ಕಂಡು ಆ ಅನುಭವಗಳನ್ನು ತನ್ನ ಕಾವ್ಯದಲ್ಲಿ ಸಮಾವೇಶಗೊಳಿಸಿ ಬಣ್ಣಿಸಿರುವನೆಂದು ಹಲವಾರುಮಂದಿ ವಿಮರ್ಶಕರು ಹೇಳಿರುವುದನ್ನು ನೋಡಿದರೆ, ಅವನ ಕಾವ್ಯದಲ್ಲಿ ತೆಂಗು, ಕಂಗು, ನಾಗವಲ್ಲಿ ಮೊದಲಾದುವುಗಳ ವರ್ಣನೆಯು ಮೇಲಿಂದ ಮೇಲೆ ಬಂದಿರುವುದನ್ನು ನೋಡಿದರೆ, ಅವನು ಇಂತಹ ಪ್ರಕೃತಿ ಸೌಂದರ್ಯದಿಂದ ಕೂಡಿದ ಚಿಕ್ಕಮಗಳೂರು ಜಿಲ್ಲೆಯ ದೇವನೂರಿನವನೇ ಎಂದು ನಾವು ಹೇಳಬೇಕಾಗುತ್ತದೆ. ಈ ಕವಿಯು ಕನ್ನಡ ಜೈಮಿನಿ ಭಾರತವನ್ನಲ್ಲದೆ ಕೆಲವು ಕೀರ್ತನೆಗಳನ್ನೂ ಬರೆದಿರುವನು. ಅವನ್ನು ಈ ಗ್ರಂಥದ ಕಡೆಯಲ್ಲಿ ಕೊಟ್ಟಿದೆ. ದೇವನೂರು ಹೊಯ್ಸಳರ ಕಾಲದಿಂದ ಸಾಹಿತ್ಯಸೇವೆಗೆ ಪ್ರಸಿದ್ಧವೆನಿಸಿದೆ.

ಕರ್ಣಾಟಕ ಬ್ರಾಹ್ಮಣ ಕವಿಗಳಲ್ಲಿ ಪ್ರಖ್ಯಾತನೂ ಪ್ರಾಚೀನನೂ ಆದ ರುದ್ರಭಟ್ಟನು (೧೧೮೦) ತನ್ನ "ಜಗನ್ನಾಥ ವಿಜಯ" ಎಂಬ ಮಹಾಕಾವ್ಯದ ಅಶ್ವಾಸದ ಕಡೆಯ ವಚನದಲ್ಲಿ, "ಸಕಲಾಮ್ನಾಯತಂತ್ರ **ಲಕ್ಷ್ಮೀಕಾಂತ** ಶ್ರೀಪಾದ ಭಕ್ತಿಯುಕ್ತ ಸುಕವೀಂದ್ರ ರುದ್ರಪ್ರಣೀತ" ಎಂದು ಹೇಳಿರುವುದರಿಂದಲೂ; ರುದ್ರಭಟ್ಟ–ಷಡಕ್ಷರದೇವ–ಲಕ್ಷ್ಮೀಶರಿಗೆ ಸಂಬಂಧಪಟ್ಟಂತೆ ದಂತಕತೆಯು ಪ್ರಸಿದ್ಧವಾಗಿದ್ದು ಆ ಕತೆಯಲ್ಲಿ 'ರುದ್ರಭಟ್ಟನ ಗೌರವ ಉಳಿಸಿಕೊಳ್ಳಲು ಲಕ್ಷ್ಮೀಶನು ಕಾವ್ಯರಚನೆ' ಮಾಡಿದಂತೆ ಹೇಳಿರುವುದರಿಂದಲೂ; ರುದ್ರಭಟ್ಟನು ಕೂಡ ಭಾಗವತ ಪಂಥದ ಕವಿಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವುದರಿಂದಲೂ, ಮಹಾಕವಿ ರುದ್ರಭಟ್ಟ ಮತ್ತು ಲಕ್ಷ್ಮೀಶರಿಬ್ಬರೂ ದೇವನೂರಿನವರೇ ಆಗಿರಬೇಕೆಂದು ನಾವು ತರ್ಕಿಸುತ್ತೇವೆ. ರುದ್ರಭಟ್ಟನು (ಕ್ರಿ. ಶ. ೧೧೭೩-೧೨೨೦) ಹೊಯ್ಸಳರ ವೀರಬಲ್ಲಾಳನ ಆಶ್ರಿತನಾಗಿದ್ದನೆಂದೂ, ಅವನು ದ್ವಾರಸಮುದ್ರಕ್ಕೆ ಸಮೀಪದ ದೇವನೂರಿನವನೇ ಆಗಿರಬೇಕೆಂದೂ ತರ್ಕಿಸಲು ಕಾರಣವಿದೆ. ರುದ್ರಭಟ್ಟನ ಗೌರವ ಕಾಪಾಡಲು ಲಕ್ಷ್ಮೀಶನು ಕಾವ್ಯರಚನೆ ಮಾಡಿದನೆಂಬ ದಂತ ಕಥೆಯು ಈ ಉಭಯರೂ ದೇವನೂರಿನವರೆಂಬುದನ್ನೂ, ಒಂದೇ ಪಂಥದವರೆಂಬುದನ್ನೂ ಸಮರ್ಥಿಸುತ್ತದೆ.

ಲಕ್ಷ್ಮೀಶನ ಕಾಲ

ಈ ಕವಿಯ ಕಾಲದ ಬಗ್ಗೆ ಕೂಡ ವಿದ್ವಾಂಸರು ಬಹಳವಾಗಿ ಚರ್ಚಿಸಿದ್ದಾರೆ. 'ಕನ್ನಡ ಕವಿ ಚರಿತ್ರೆ' ಕಾರರು ಈತನು ಸುಮಾರು ಕ್ರಿ. ಶ. ೧೬೦೦ರಲ್ಲಿ ಇದ್ದವನೆಂದು ಹೇಳುತ್ತಾರೆ. ಅದಕ್ಕೆ ಅವರು ೧೬೨೪ರಲ್ಲಿದ್ದ ಲಕ್ಷ್ಮಕವಿ, ೧೬೬೦ರಲ್ಲಿದ್ದ ಬಬ್ಬೂರು ರಂಗ, ೧೬೪೦ರಲ್ಲಿದ್ದ ಕೋನಯ್ಯ—ಈ ಕವಿಗಳು ಲಕ್ಷ್ಮೀಶನನ್ನು ಸ್ತುತಿಸಿರುವುದರಿಂದ ಈ ಕವಿ ಸುಮಾರು ೧೬೦೦ಕ್ಕೆ ಈಚೆಯವನಲ್ಲವೆಂದು ತೋರುತ್ತದೆ ಎಂದು ಹೇಳಿದ್ದಾರೆ. ಮಿ॥ H. H. ವಿಲ್ಸನ್‌ರವರು, 'ಲಕ್ಷ್ಮೀಶಕವಿ ಕಾಲ ಹದಿಮೂರನೆಯ ಶತಮಾನದ ಆದಿ' ಎಂದು ಹೇಳಿದ್ದಾರೆ. (Catalogue of Mackenzie Manuscripts, pages 305, 1828, Calcutta). ಮಿ॥ ಕಿಟ್ಟಲ್ ಸಾಹೇಬರು ಛಂದೋಂಬುಧಿಯ ಪೀಠಿಕೆಯಲ್ಲಿ ೧೬೬೦ ಎಂದು ಹೇಳಿದ್ದಾರೆ. ಮಿ॥ ರೈಸ್‌ರವರು ಶಬ್ದಾನುಶಾಸನದ ಉಪೋದ್ಘಾತದಲ್ಲಿ (ಪು. ೪೬) ೧೬೧೫ ಎಂದು ಹೇಳಿದ್ದಾರೆ. ದಿ॥ ಟಿ. ಯಸ್. ವೆಂಕಣ್ಣಯ್ಯನವರು "ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ" ಯಲ್ಲಿ (ಸಂ ೫. ಪುಟ ೧–೧೨) ೧೪೧೫ ಎಂದು ಹೇಳಿದ್ದಾರೆ. ಇತಿಹಾಸ ಸಂಶೋಧಕರಾದ **ಶ್ರೀ ರಾಜಪುರೋಹಿತರು** "ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ" ಯಲ್ಲಿ (ಸಂ. ೭. ಪುಟಗಳು ೨೪೨–೨೫೨) ೧೫೨೦ ಎಂದು ಹೇಳಿದ್ದಾರೆ. ಮಾನ್ಯ ಗೋವಿಂದಪೈ ರವರು "ಕರ್ಣಾಟಕ ಕೇಸರಿ" ಯಲ್ಲಿ (ಸಂ. ೨. ಸಂ. ೨–೬), ೧೩೩೫–೧೩೫೩ ಎಂದು ತಿಳಿಸಿದ್ದಾರೆ. ದೇವನೂರಿನ ಸ್ಥಳ ಪುರಾಣದಲ್ಲಿ ಈ ಕವಿಯ ಕಾಲ ೧೧೩೭ ಎಂದು ಹೇಳಿದೆ. ಆದರೆ ಇತ್ತೀಚೆಗೆ ತಿಳಿದುಬಂದಿರುವಂತೆ "ನಂದಿ ಮಹಾತ್ಮೆ" ಯನ್ನು ಬರೆದ ಗೋಪ ಅಥವಾ ಗೋವಿಂದನೆಂಬ ಕವಿಯು ಈ ಲಕ್ಷ್ಮೀಶನನ್ನು ಸ್ತುತಿಸಿರುವುದರಿಂದ—"ಚತುರಾಸ್ಯರುದ್ರ **ಲಕ್ಷ್ಮೀಪತಿ** ಯನಂತ" (ನಂದಿ ಮಹಾತ್ಮೆ—ಪೀಠಿಕಾ ಸಂಧಿ) ಈ ಕವಿಗಿಂತಲೂ ಲಕ್ಷ್ಮೀಶನು ಹಿಂದಿನವನಾಗುತ್ತಾನೆ. ಈ ಗೋವಿಂದನ ಕಾಲವು ಸುಮಾರು ಕ್ರಿ.ಶ. ೧೬೦೦ ಎಂದು ಶ್ರೀ ಡಿ. ಎಲ್. ನರಸಿಂಹಾಚಾರ್ ಹೇಳಿರುತ್ತಾರೆ. (ಕವಿ ಲಕ್ಷ್ಮೀಶ, ಪು. ೫೪)

ನಾವು ಇದುವರೆಗೆ ಹೇಳಿದ ವಿದ್ವಾಂಸರ ಅಭಿಪ್ರಾಯಗಳ ಪ್ರಕಾರ ಕ್ರಿ.ಶ. ೧೧೩೭ ರಿಂದ ೧೬೦೦ ರವರೆಗೆ ಈ ಕವಿಯ ಕಾಲವು ತೂಗುಯ್ಯಾಲೆಯ ಹಾಗೆ ಆಡುತ್ತಿದೆ ಎಂಬುದು ಸ್ಪಷ್ಟವಾಗಿದೆ.

ಕಟ್ಟಕಡೆಯಲ್ಲಿ ಮಾನ್ಯ ಗೋವಿಂದಪೈ ರವರು, "ಲಕ್ಷ್ಮೀಶನ ಕಾಲದ ಉತ್ತರಾವಧಿ ಕ್ರಿ.ಶ. ಸುಮಾರು ೧೪೦೦ ರಷ್ಟಕ್ಕೆ ಹಿಂದೆ ಹೋಗುತ್ತದೆ. ಇದೇ ಲಕ್ಷ್ಮೀಶನ ನೇರಾದ ಕಾಲವೋ ಅಥವಾ ಅದು ಮತ್ತೂ ಹಿಂದಕ್ಕಿದೆಯೋ ಎಂಬುದನ್ನು ತೀರ್ಮಾನಿಸಬೇಕು" ಎಂದು ಹೇಳಿದ್ದಾರೆ (ಶ್ರೀ ಪಂಜೆಯವರ ನೆನಪಿ

ಗಾಗಿ, ಪುಟ ೧೮೯). ಕವಿವರ್ಯ ಬೇಂದ್ರೆಯವರು, "ಲಕ್ಷ್ಮೀಶ—ವಿರೂಪಾಕ್ಷ ಪಂಡಿತರು ಸ್ವಲ್ಪ ಹೆಚ್ಚು-ಕಡಿಮೆ ಸಮಕಾಲೀನರೆಂದು ತಿಳಿಯುವುದೇ ಅರ್ಹ ವೆಂದು ತೋರುವುದು.... ... ...ಜೈಮಿನಿಯ ಕಾಲವು ಕ್ರಿ.ಶ. ೧೫೨೦ಕ್ಕಿಂತ ಹಿಂದಿನದಲ್ಲ ಎಂದು ನಾವು ಸದ್ಯಕ್ಕೆ ಇಟ್ಟುಕೊಳ್ಳಬಹುದು. ಕನಕದಾಸನ "ಮೋಹನ ತರಂಗಿಣಿ" ಯಲ್ಲಿ ಲಕ್ಷ್ಮೀಶನ ಪ್ರಭಾವ ಕಂಡುಬರುವುದರಿಂದ ಲಕ್ಷ್ಮೀಶನ ಕಾಲ ೧೫೫೭-೫೮ಕ್ಕೆ ಪೂರ್ವದ್ದು. ಲಕ್ಷ್ಮೀಶನ ಕಾವ್ಯದಲ್ಲಿ ಸಿಡಿಗುಂಡಿನ ಮಾತು ಬಂದಿರುವುದು. ಆದಕಾರಣ 'ಸಿಡಿಗುಂಡು' ಉಪಯೋಗಿ ಸಿದ ಕೃಷ್ಣದೇವರಾಯನ ರಾಯಚೂರು ವಿಜಯದ (ಕ್ರಿ.ಶ. ೧೫೨೦) ವರ್ಷವೇ ಲಕ್ಷ್ಮೀಶನ ಜೈಮಿನಿಯ ಕಾಲವಾಗಬಹುದು." ಎಂದು ಅಭಿಪ್ರಾಯಪಟ್ಟಿದ್ದಾರೆ. **ವಿಂಟರ್ ನಿಜ್** ರವರು, "History of Indian Literature" ಎಂಬ ಗ್ರಂಥದಲ್ಲಿ ಲಕ್ಷ್ಮೀಶನ ಕಾಲವು ೧೫೮೫ ರಿಂದ ೧೭೨೪ ಎಂದು ಸೂಚಿಸಿದ್ದಾರೆ.

ಮಹಾಕವಿ ಲಕ್ಷ್ಮೀಶನ ಕಾಲವು ಹೀಗೆ ಸಂದಿಗ್ಧವಾಗಲು ಆ ಕವಿಯು ತನ್ನ ಗ್ರಂಥರಚನೆಯ ಕಾಲವನ್ನು ಹೇಳದೆ ಇರುವುದೂ, ಹೆಸರಿಟ್ಟು ಯಾವ ಪೂರ್ವ ಕವಿಗಳನ್ನೂ ಸ್ಮರಿಸದೆ ಇರುವುದೂ ಮುಖ್ಯ ಕಾರಣಗಳಾಗಿವೆ. ಕನ್ನಡ ಸಾಹಿತ್ಯದಲ್ಲಿ ಜೈಮಿನಿ ಭಾರತದಂತೆಯೇ ಜನಪ್ರಿಯವೂ, ಪ್ರಸಿದ್ಧವೂ ಆದ ವಿರೂಪಾಕ್ಷ ಪಂಡಿತನ "ಚೆನ್ನಬಸವ ಪುರಾಣ" ಕ್ಕೂ ಈ ಕನ್ನಡ ಜೈಮಿನಿಗೂ ಕೆಲವು ಹೋಲಿಕೆಗಳು ಇರುವುದರಿಂದ ಈ ಎರಡು ಮಹಾಕಾವ್ಯಗಳೂ ಪರಸ್ಪರ ವಾಗಿ ಸ್ಪರ್ಧಿಸಿರಬೇಕೆಂದು ವಿದ್ವಾಂಸರು ತರ್ಕಿಸಿದ್ದಾರೆ. ಉದಾಹರಣೆಗಾಗಿ—

ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಭ ।
ಕ್ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜಗ ।
ತೀವಲಯದಮಲ ಸೌಭಾಗ್ಯರತ್ನಾಕರಂ ಪೆರ್ಚಿನಿಂ ಮೇರೆವರಿಯೆ ॥
ಆವಗಂ ಸರಸ ಕರುಣಾಮೃತದ ಕಳೆಗಳಿಂ ।
ತೀವಿದೆಳನಗೆಯ ಬೆಳುದಿಂಗಳಂ ಪಸರಿಸುವ ।
ದೇವಪುರ ಲಕ್ಷ್ಮೀರಮಣನಾಸ್ಯ <u>ಚಂದ್ರನಾನಂದವಮಂ ನಮಗೀಯಲಿ</u> ॥ (ಜೈ. ಭಾ. ಸಂಧಿ ೧) ಪದ್ಯ ೧.)

ಶ್ರೀ ಗಿರಿಜೆಯಾಸ್ಯ ಕಮಲದ ಸೊಂಪು ಪೊಳೆಯೆ ಪಿರಿ ।
ದಾಗಿ ಕುಚಚಕ್ರಯುಮಳದ ಪೆಂಪು ಬಳೆಯೆ ತರೆ ।
ವಾಗಿ ಕಣ್ನೈದಿಲಲರಿಕೆಯಿಂಪು ಕಳೆಯೆ ನಾಸಾನಿಲನ ಕಂಪು ಸುಳಿಯೆ ॥
ಬೇಗೆ ಕುಂತಳತಮಂ ಸಾಗೆ ಚೆಂದುಟಿಗೆಂಪು ।
ಮೇಗೆ ಸೌಜ್ಯೋದಯದ ಬೆಳಗ ಪಸರಿಸಿ ನಿತ್ಯ ।
ನಾಗೆಸೆವ ಪಂಪಾ ವಿರೂಪಾಕ್ಷ <u>ಸೂರ್ಯನಾನಂದವಮಂ ನಮಗೀಯಲಿ</u> ॥ (ಚೆ.ಪು. ಸಂಧಿ. ೧.ಪ. ೨)

ಸ್ಫುರದುತ್ಕಟಾಕ್ಷ ಚಂಚಲದಿಂದೆ ಚಾರುಪೀ।
ವರ ಪಯೋಧರದಿಂದೆ ಪರಿವೃತ ಸುಮೇಖಲಾ।
ತರಳ ಸತ್ಕಲ ಕಿಂಕಿಣೀಘನ ಸ್ವನದಿಂದೆಸೆವ ಕಂಕಣಂಗಳಿಂದೆ ॥
ಸರಸತರ ಲಾವಣ್ಯ ಪೂರಪ್ರವಾಹದಿಂ ಭ।
ರಿತ ಕಬರೀ ಬರ್ಹಿ ಲೀಲೆಯಿಂ ಮಳೆಗಾಲ।
ದಿರವನೆಚ್ಚರಿಪರಸಿಯಂ ಕಂಡು ರಾಮನ ಮನಶ್ಚಾತಕಂ ನಲಿದುದು॥ (ಜೈ.ಭಾ. ಸಂಧಿ ೧೮.
ಪ. ೨೭.

ಹರಿಗೆಗಳ್ ಮೇಘದೊಡ್ಡಣೆ ಕತ್ತಿಗಳ ತೊಳಪ।
ದಿರವೆ ಹೊಂಚುವ ಮಿಂಚು ಕವಿದೆಸೆವ ಸಾಯಕದ।
ಸರಿಯೆ ಸರಿವಳೆ ಭುಜಂ ಬೊಯ್ದು ಬೊಬ್ಬಿರಿದಿಡುವ ಶಕ್ತಿಯಬ್ಬರವೆ ಸಿಡಿಲು ॥
ಭರದೆ ಪೊಯ್ದಾಡಲಸಿ ಯಸಿಯಿಂದೊಗೆವ ಕಿಡಿಯು।
ಹರಿಗೋಪಮಾ ವೀರರಸವೆ ಪರಿವೊನಲಾಗೆ।
ವರಪಷದಂತಿರ್ಪ ರಣಮಂ ಕಂಡು ವೀರರ ಮನಶ್ಚಾತಕಂ ನಲಿದುದು ॥ (ಚೆ.ಪು. ಸಂಧಿ.
೩೮. ಪ ೩೭.)

ಇಂತಹ ಅನೇಕ ಹೋಲಿಕೆಗಳನ್ನು ಈ ಉಭಯ ಕಾವ್ಯಗಳಲ್ಲಿಯೂ ಕಾಣಬಹುದು. ಕಥಾವಸ್ತು ಸಂಗ್ರಹ, ಯುದ್ಧಗಳ ವರ್ಣನೆ, ಮತಧರ್ಮ ನಿರೂಪಣೆ, ಸ್ವೀಕೃತ ಶೈಲಿ ಮೊದಲಾದುವುಗಳಲ್ಲಿ ಜೈಮಿನಿ ಭಾರತ ಮತ್ತು ಚೆನ್ನಬಸವ ಪುರಾಣಗಳು ಹೆಚ್ಚಿನ ಹೋಲಿಕೆಯನ್ನು ಪಡೆದಿವೆ. ಶ್ರೀ ಬೇಂದ್ರೆಯವರು ಹೇಳುವಂತೆ ಈ ಉಭಯಕಾವ್ಯ ಕರ್ತೃಗಳೂ ಸ್ವಲ್ಪ ಹೆಚ್ಚು ಕಡಿಮೆ ಸಮಕಾಲೀನರೆಂದು ತಿಳಿಯುವುದು ನ್ಯಾಯವೆಂದು ನಮಗೆ ತೋರುತ್ತದೆ.

"ಚೆನ್ನಬಸವ ಪುರಾಣ"ದಲ್ಲಿ ಕವಿಯು ತನ್ನ ಗ್ರಂಥ ನಿರ್ಮಾಣ ಕಾಲವನ್ನು ತಿಳಿಸಿದ್ದಾನೆ. ಆ ಕಾಲ ಶಕ ೧೫೦೬ನೆಯ ತಾರಣ ವರ್ಷ. ಅಂದರೆ ಕ್ರಿ. ಶ. ೧೫೮೪ ಎಂದಾಗುತ್ತದೆ. ಆದ್ದರಿಂದಲೇ ಕವಿ ಚರಿತ್ರೆಕಾರರು ವಿರೂಪಾಕ್ಷ ಪಂಡಿತನ ಕಾಲ ೧೫೮೪ ಎಂದು ಹೇಳಿದ್ದಾರೆ. ಅಂದಮೇಲೆ ಲಕ್ಷ್ಮೀಶನೂ ಕೂಡ ಅವನ ಅಕ್ಕಪಕ್ಕದವನೇ ಆಗಬೇಕಾಗುತ್ತದೆ. ಜೈಮಿನಿ ಭಾರತದ ನಾಂದಿ ಪದ್ಯದಲ್ಲಿ ಕವಿಯು, "ದೇವಪುರ ಲಕ್ಷ್ಮೀರಮಣನಾಸ್ಯ ಚಂದ್ರನಾನಂದಮಂ ನಮಗೀಯಲಿ" ಎಂದು ಹೇಳಿದ್ದಾನೆ. ಚೆನ್ನಬಸವ ಪುರಾಣದ ಪ್ರಾರಂಭದಲ್ಲಿ, "ನಿತ್ಯನಾಗೆಸೆವ ಪಂಪಾವಿರೂಪಾಕ್ಷ ಸೂರ್ಯನಾನಂದಮಂ ನಮಗೀಯಲಿ" ಎಂದು ಕವಿ ಹೇಳಿದ್ದಾನೆ. ಸಂಸ್ಕೃತ ಸಾಹಿತ್ಯದಲ್ಲಿ "ಪ್ರಬೋಧ ಚಂದ್ರೋದಯಂ" ಎಂಬ ನಾಟಕದ ಮೇಲೆ "ಸಂಕಲ್ಪ ಸೂರ್ಯೋದಯಂ" ಎಂಬ ಮತ್ತೊಂದು ನಾಟಕವು ಸ್ಪರ್ಧೆಯಿಂದ ವಿರಚಿತವಾಗಿದೆ. ಪ್ರಕೃತಿಯಲ್ಲಿಯೂ ಕೂಡ ಚಂದ್ರೋದಯದ ಮೇಲೆ ಸೂರ್ಯೋದಯವಾಗುವ ನಿಯಮವಿದೆ.

ಸೂರ್ಯೋದಯವಾದಮೇಲೆ ಜಗತ್ತಿಗೆ ಚಂದ್ರನ ಬೆಳಕು ಕಾಣಿಸುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ಮಾತು. ಅದೇ ಪ್ರಕಾರ ಲಕ್ಷ್ಮೀಶ ಕವಿಯು ಹೇಳಿದ "ಜೈಮಿನಿ ಭಾರತವೆಂಬ ಕಾವ್ಯ ಚಂದ್ರ"ನ ಮೇಲೆ ವಿರೂಪಾಕ್ಷ ಪಂಡಿತನ "ಚೆನ್ನಬಸವ ಪುರಾಣವೆಂಬ ಕಾವ್ಯ ಸೂರ್ಯ"ನ ಉದಯವಾಗಿರಬಹುದೆ ಎಂದು ಇಲ್ಲಿ ನಾವು ತರ್ಕಿಸಲು ಅವಕಾಶವಿದೆ. ಈ ನಮ್ಮ ತರ್ಕವು ನಿಜವಾದರೆ ವಿರೂಪಾಕ್ಷ ಪಂಡಿತನಿಗಿಂತ ಲಕ್ಷ್ಮೀಶನು ಹಿಂದಿನವನಾಗುತ್ತಾನೆ. ಈ ನಮ್ಮ ಮಾತಿಗೆ ಶ್ರೀ ಟಿ. ತಾತಾಚಾರ್ಯ ಶರ್ಮರು ಹೇಳಿರುವ "ಅದರಲ್ಲಿಯೂ ಕೃಷ್ಣದೇವರಾಯನ ಆಳ್ವಿಕೆಯಲ್ಲಿಯೇ (೧೫೩೦) ಇದರ, ಅಂದರೆ ಕನ್ನಡ ಜೈಮಿನಿ ಭಾರತದ ರಚನೆಯಾಗಿರಬೇಕೆಂದು ನನ್ನ ನಂಬಿಕೆ." (ಜೈ. ಭಾ. ಸಂಗ್ರಹ ಪೀಠಿಕೆ. ಪುಟ ೧೧) ಎಂಬ ಮಾತುಗಳು ಹೊಂದಿಕೆಯಾಗುತ್ತವೆ. ಇದೇ ಮಾತನ್ನು ಕವಿ ಬೇಂದ್ರೆಯವರು "ಜೈಮಿನಿ ಭಾರತಕ್ಕೆ ಮುನ್ನುಡಿ" ಎಂಬ ಗ್ರಂಥದಲ್ಲಿ, "ಲಕ್ಷ್ಮೀಶನು ಕ್ರಿ. ಶ. ೧೫೨೦ ರಿಂದ ೧೫೮೫ರವರೆಗಿನವನಾಗಿರಬಹುದು" ಎಂದು ಹೇಳುವ ಮಾತು ಹೊಂದಿಕೆಯಾಗುತ್ತದೆ. ಈ ಎಲ್ಲ ಚರ್ಚೆಯ ಫಲಿತಾಂಶವಾಗಿ ಮಹಾ ಕವಿ ಲಕ್ಷ್ಮೀಶನು ಕ್ರಿ. ಶ. ೧೫೩೦ರಲ್ಲಿ ಇದ್ದಿರಬೇಕೆಂದು ನಾವು ತೀರ್ಮಾನಕ್ಕೆ ಬಂದಿರುತ್ತೇವೆ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು, "ಲಕ್ಷ್ಮೀಶನ ಕಾಲ ೧೬೦೦ಕ್ಕೆ ಹಿಂದೆ ಎಂಬುದು ನಿರ್ವಿವಾದವಾದ ಮಾತು" (ಕವಿ ಲಕ್ಷ್ಮೀಶ, ಪುಟ ೫೪) ಎಂದು ಅಭಿಪ್ರಾಯಪಟ್ಟಿರುವುದಕ್ಕೂ ಇದು ಬೆಂಬಲವಾಗಿದೆ. ಶ್ರೀ ಕೃಷ್ಣದೇವರಾಯನ ಕಾಲವು (೧೫೦೯ ರಿಂದ ೧೫೩೦) ಇಂತಹ ಮಹಾಕಾವ್ಯಗಳ ಆವಿರ್ಭಾವಕ್ಕೆ ಅರ್ಹವಾದ ಕಾಲವೇ ಆಗಿದ್ದಿತೆನ್ನಬಹುದು.

ಲಕ್ಷ್ಮೀಶ ಕವಿಯ ಬಿರುದು

ಮಹಾಕವಿ ಲಕ್ಷ್ಮೀಶನು ಚಿಕ್ಕಮಗಳೂರು ಜಿಲ್ಲಾ ದೇವನೂರಿನವನೆಂದು ಈ ಹಿಂದೆಯೇ ಹೇಳಿದೆ. ಈತನ ತಂದೆಯ ಹೆಸರು ಅಣ್ಣಮಾಂಕ (ಸಂ. ೧. ಪ. ೧೧, ಸಂ. ೩೪. ಪ. ೪೧). ಕವಿ ಭಾರದ್ವಾಜ ಗೋತ್ರಕ್ಕೆ ಸೇರಿದವನು. ಈ ಕವಿಯ ಗುರು ಯಾರೆಂಬುದು ಸ್ಪಷ್ಟವಾಗಿಲ್ಲ. ಈತನು ಯಾವ ಪೂರ್ವ ಕವಿಗಳನ್ನೂ ಹೆಸರಿಟ್ಟು ಕರೆಯದೆ, "ಪೂರ್ವ ಸತ್ಕವಿಗಳ್ಗೆ ನಮಿಸಿ ನಾಂ ಕೃತಿ ಪೇಳ್ವೆನು" ಎಂದು ಸಾಮೂಹಿಕವಾಗಿ ಎಲ್ಲ ಕವಿಗಳನ್ನೂ ಕಾವ್ಯಾರಂಭದಲ್ಲಿ ನಮಿಸಿದ್ದಾನೆ. ಈ ಕಾವ್ಯವನ್ನು ಕವಿಯು "ವಿದ್ವತ್ಸಭಾವಲಯ ಮರಿಯೆ ವಿರಚಿಸಿದಂ" (ಸಂ. ೧. ಪ, ೧೧) ಎಂದು ಹೇಳಿರುವುದರಿಂದ ಈ ಗ್ರಂಥವನ್ನು ತನ್ನ ಸಮಕಾಲೀನ ವಿದ್ವಾಂಸರ ಸಭೆಯಲ್ಲಿ ಓದಿ ಅವರ ಮೆಚ್ಚುಗೆಯನ್ನು ಪಡೆದಂತೆ ಕಾಣುತ್ತದೆ. ಒಂದು ವೇಳೆ ಈ ವಿದ್ವತ್ಸಭೆಯು ಶ್ರೀ ಕೃಷ್ಣದೇವ

ರಾಜನ ಆಸ್ಥಾನದಲ್ಲಿ ಆಗಿದ್ದಿರಬಹುದೇ? ಎಂಬುದು ನಮ್ಮದೊಂದು ಊಹೆ ಮಾತ್ರ.

ಸಮಕಾಲೀನ ವಿದ್ವಾಂಸರ ಮೆಚ್ಚುಗೆಯ ಫಲವಾಗಿಯೇ “ಕರ್ಣಾಟ ಕವಿ ಚೂತವನ ಚೈತ್ರ” ಎಂಬ ಬಿರುದು ಈತನಿಗೆ ಬಂದಿರಬಹುದೆಂದು ತೋರುತ್ತದೆ. ಈ ಬಿರುದಿಗೆ ಈ ಕವಿಯು ಸಂಪೂರ್ಣವಾಗಿ ಅರ್ಹನಾಗಿದ್ದಾನೆ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು, “ಲಕ್ಷ್ಮೀಶನ ಬಿರುದು ಕರ್ಣಾಟ ಕವಿಚೂತವನ ಚೈತ್ರ” ಎಂಬುದಾಗಿ ಹಲವುಕಡೆ ಅಚ್ಚಾಗಿದೆ. ಆದರೆ ನಮಗೆ ದೊರೆತ ಎರಡು ಹಳೆಯ ಓಲೆಯ ಪ್ರತಿಗಳಲ್ಲಿಯೂ (ಒಂದರ ಕಾಲ ೧೭೦೮, ಇನ್ನೊಂದರ ಕಾಲ ೧೭೫೩) ‘ಕರ್ಣಾಟ ಕವಿ ಚೈತ್ರವನ ಚೂತ’ ಎಂದು ಲಿಖಿತವಾಗಿದೆ. ಲಕ್ಷ್ಮೀಶನು ತನ್ನ ನಮ್ರಸ್ವಭಾವಕ್ಕೆ ತಕ್ಕಂತೆ ‘ಕರ್ಣಾಟ ಕವಿಚೂತವನ ಚೈತ್ರ’ನೆಂದು ಕರೆದುಕೊಳ್ಳಲು ಒಡಂಬಡಲಾರನು. ಆದುದರಿಂದ ಅವನ ನಿಜವಾದ ಬಿರುದು ‘ಕರ್ಣಾಟ ಕವಿಚೈತ್ರವನ ಚೂತ’ ಎಂದು ನನಗೆ ತೋರುತ್ತದೆ.” ಎಂದು ಬರೆದಿರುತ್ತಾರೆ.

ಇದೇ ವಿಷಯವನ್ನು ಇತಿಹಾಸ ಸಂಶೋಧಕರಾದ ಶ್ರೀ ಪಾಂಡುರಂಗ ದೇಸಾಯಿಯವರು (ಶರಣಸಾಹಿತ್ಯ ಸಂ. ೧೭. ಸಂ. ೬ ರಲ್ಲಿ) “ಕರ್ಣಾಟ ಕವಿ ಚೈತ್ರವನ ಚೂತ” ಎಂಬ ಲೇಖನದಲ್ಲಿ, “ಕರ್ಣಾಟ ಕವಿ ಚೈತ್ರವನಚೂತ” ಎಂಬ ಪಾಠವು ಒಂದು ಕಾಲದ ನಾನಾ ಭಾಗಗಳಲ್ಲಿ ಸಾಕಷ್ಟು ಪ್ರಸಾರದಲ್ಲಿ ಇದ್ದಿತು ಎಂಬ ಅಂಶವು ಪ್ರತೀತಿಗೆ ಬರುತ್ತದೆ. ಈ ವಿಷಯದಲ್ಲಿ ಹೆಚ್ಚಿನ ಅನ್ವೇಷಣಗಳು ನಡೆದರೆ ಈ ಪಾಠವನ್ನು ಪುಷ್ಟೀಕರಿಸುವ ಇನ್ನೂ ಅನೇಕ ಸಾತ್ಯಕೆಗಳು ದೊರೆಯಬಹುದು. ‘ಕರ್ಣಾಟಕವಿಚೂತವನಚೈತ್ರ’ ಎಂಬ ಪ್ರಚಲಿತ ಪಾಠವು ಪ್ರಾಮುಖ್ಯತೆಗೆ ಬರಲು ಕಾರಣವೇನು ಎಂಬ ಸಂಗತಿ ವಿಚಾರಾರ್ಹವಾಗಿದೆ. ಈ ಎರಡು ಪಾಠಗಳಲ್ಲಿ ತಾರತಮ್ಯವರಿಯದೆ ವಿನಯದಿಂದ ಕವಿಗೆ ಹೆಚ್ಚಿನ ಗೌರವ ಸಲ್ಲುತ್ತದೆ ಎಂಬ ಕಲ್ಪನೆಯಿಲ್ಲದ ಕೆಲ ಅಭಿಮಾನಿಗಳು ಒಂದನೆಯದನ್ನು ಮರೆಯಿಸಿ ಎರಡನೆಯದನ್ನು ಮುಂದಕ್ಕೆ ತಂದರೆಂದು ಊಹಿಸಬಹುದು. ಈಗಲಾದರೂ ‘ಕರ್ಣಾಟ ಕವಿಚೈತ್ರವನ ಚೂತ’ ಎಂಬ ಪಾಠವು ಸರಸವಾಗಿದೆ ಎಂದೂ ಇದುವೇ ಮೂಲಪಾಠವಾಗಿರಬೇಕೆಂದೂ ನಮಗೆ ತೋರುತ್ತದೆ. ಈ ಬಿರುದೇ ಕವಿಯ ವಿನಯಶೀಲ ಭಾವನೆಗೆ ಅನುಗುಣವಾದುದೆಂದು ನಮ್ಮ ನಂಬುಗೆ.” ಎಂದು ಅನುಮೋದಿಸಿದ್ದಾರೆ. ನಮಗಾದರೂ ಶ್ರೀ ದೇಸಾಯಿಯವರ ವಾದವೇ ಸಮಂಜಸವೆಂದು ತೋರುತ್ತದೆ.

ಕನ್ನಡ ಜೈಮಿನಿ ಭಾರತದಲ್ಲಿ ೩೪ ಸಂಧಿಗಳೂ ೧೯೦೬ ಪದ್ಯಗಳೂ ಇವೆ. ಈ ಕಾವ್ಯದಲ್ಲಿ ಪೌಜು, ಜೀಯು, ಚಪ್ಪನ್ನ ಮೊದಲಾದ ಕನ್ನಡೇತರ ಶಬ್ದಗಳ ಪ್ರವೇಶವಾಗಿರುವುದರಿಂದ ಇದು ೧೬ನೆಯ ಶತಮಾನದಲ್ಲಿ ವಿರಚಿತವಾದುದೆಂದು ನಾವು ನಿರ್ಧರಿಸಬಹುದಾಗಿದೆ.

ಕಥಾವಸ್ತು ವಿಚಾರ

ಕನ್ನಡ ಜೈಮಿನಿ ಭಾರತವು ಸಂಸ್ಕೃತ ಜೈಮಿನಿ ಭಾರತದ ಅನುವಾದ. ಕಥಾವಸ್ತುವು ಬಹುಮಟ್ಟಿಗೂ ಮೂಲವನ್ನೇ ಅನುಸರಿಸಿದೆ. ಮಹರ್ಷಿ ಜೈಮಿನಿಯು ಜನಮೇಜಯ ಮಹಾರಾಜನಿಗೆ ಕಥೆಯನ್ನು ಹೇಳಿದಂತಿದೆ. ಕವಿಯ ಜನ್ಮಸ್ಥಳವಾದ ದೇವನೂರಿಗೆ ಸಮೀಪವಾಗಿರುವ ಕಿರಿಯಮುಗಳೂರು ಜನಮೇಜಯನು ಸರ್ಪಯಾಗವಾಡಿದ ಸ್ಥಳವೆಂಬ ಪ್ರತೀತಿ ಇದೆ. ಈ ಜೈಮಿನಿಯ ಅಶ್ವಮೇಧಪರ್ವದಲ್ಲಿ ಅಶ್ವಮೇಧದ ಕಥೆಯಲ್ಲಿ ಪದ್ಮಪುರಾಣಾಂತರ್ಗತ ರಾಮಾಶ್ವಮೇಧದ ಛಾಯೆ ಇದೆಯೆಂದು ವಿದ್ವಾಂಸರು ತರ್ಕಿಸಿದ್ದಾರೆ. ಮೂಲ ಸಂಸ್ಕೃತ ಜೈಮಿನಿಯಲ್ಲಿರುವ ನಕುಲೋಪಾಖ್ಯಾನವು ಕನ್ನಡದಲ್ಲಿ ಕಂಡುಬರುವುದಿಲ್ಲ. ಮೂಲ ಸಂಸ್ಕೃತ ಕಾವ್ಯದಲ್ಲಿ ಇಲ್ಲದಿರುವ ಪುಂಡರೀಕನ ಹೆಸರು ಕನ್ನಡ ಜೈಮಿನಿಯಲ್ಲಿದೆ. "ಸಲೆಕೀರ್ತಿಯಿಂ ಪುಂಡರೀಕನಾಗಿ" (ಸಂ. ೩೯, ಪ. ೧೪) ಎಂದು ಹೇಳಿರುವುದು ಕಾಣಬರುತ್ತದೆ. ಈ ಪುಂಡರೀಕನ ಹೆಸರನ್ನು ಕ್ರಿ. ಶ. ೧೩೦೦ರಲ್ಲಿದ್ದ ಚೌಂಡರಸನೂ, ೧೫೩೦ರಲ್ಲಿದ್ದ ವಾದಿರಾಜರೂ, ೧೫೫೦ರಲ್ಲಿದ್ದ ಕನಕದಾಸರೂ ತಮ್ಮ ಗ್ರಂಥಗಳಲ್ಲಿ ಹೇಳಿರುತ್ತಾರೆ. ಈ ಪುಂಡರೀಕನು ಪಂಡರಪುರದ ಪಾಂಡುರಂಗನ ಭಕ್ತನೇ ಆಗಿರಬೇಕೆಂದು ತೋರುತ್ತದೆ. ಶ್ರೀ ಕೃಷ್ಣದೇವರಾಯನು ವಿಜಯನಗರದಲ್ಲಿ ವಿಜಯವಿಠಲ ದೇವಾಲಯವನ್ನು ಕಟ್ಟಿಸಿದಮೇಲೆ, ವ್ಯಾಸರಾಯರು, ವಾದಿರಾಜರು, ಪುರಂಧರದಾಸರು ಮೊದಲಾದ ವೈಷ್ಣವ ಶಿಖಾಮಣಿಗಳ ಧರ್ಮಪ್ರಚಾರ ಕಾರ್ಯ ನಡೆದಮೇಲೆ ಪಾಂಡುರಂಗನ ಭಕ್ತನಾದ ಪುಂಡರೀಕನ ಪರಿಚಯವು ಕನ್ನಡಿಗರಿಗೆ ಹೆಚ್ಚಾಗಿ ಆಗಿರಬೇಕು.

ಕವಿಯು ವರ್ಣನೆಯಲ್ಲಿ ಅಲ್ಲದೆ ವಿಷಯ ನಿರೂಪಣೆಯಲ್ಲಿಯೂ ಸ್ವಾತಂತ್ರ್ಯ ವಹಿಸಿದ್ದಾನೆಂದು ತಿಳಿಯುತ್ತದೆ. ಮೂಲ ಸಂಸ್ಕೃತ ಪುರಾಣದಲ್ಲಿ ೬೮ ಅಧ್ಯಾಯಗಳೂ ೫,೧೯೪ ಶ್ಲೋಕಗಳೂ ಇವೆ. ಕ್ರಿ. ಶ. ೧೫೭೫ರಲ್ಲಿ ಲಿಖಿತವಾದ ಸಂಸ್ಕೃತ ಜೈಮಿನೀ ಭಾರತದ ಹಸ್ತಪ್ರತಿ ಸಿಕ್ಕಿದೆ. ಆಂಧ್ರ ಭಾಷೆಯಲ್ಲಿ ಪಿಲ್ಲಲ ಮರಿಪಿನ ವೀರಭದ್ರ ಕವಿಯು ೧೪೭೦ರಲ್ಲಿ ಪದ್ಯರೂಪದಿಂದ ಜೈಮಿನಿ ಭಾರತವನ್ನು ರಚಿಸಿದ್ದಾನೆ. ಇದನ್ನು ಮೂಲಸಂಸ್ಕೃತ ಜೈಮಿನಿ ಭಾರತದಿಂದ ಭಾಷಾಂತರ ಮಾಡಿದ್ದಾನೆ. ಮರಾಠಿಯಲ್ಲಿ ಶ್ರೀಧರ ಕವಿಯು ಕ್ರಿ. ಶ. ೧೭೦೦ರಲ್ಲಿ ಜೈಮಿನಿ ಭಾರತವನ್ನು ಮೂಲ ಸಂಸ್ಕೃತದಿಂದ ಭಾಷಾಂತರಮಾಡಿದ್ದಾನೆಂದು ತಿಳಿದುಬರುತ್ತದೆ. ಸಂಸ್ಕೃತ ಜೈಮಿನಿ ರಚನೆಯ ಕಾಲ ಕ್ರಿ. ಪೂ. ೧೦೦ ಆಗಿರಬಹುದೆಂದು ವಿದ್ವಾಂಸರು ತರ್ಕಿಸಿದ್ದಾರೆ. ಆದರೆ ಸಮುದ್ರಗುಪ್ತನ ಅಶ್ವಮೇಧ ಯಾಗದ ಪರಿಣಾಮ ಈ ಜೈಮಿನಿ ಭಾರತದಲ್ಲಿ ಕಾಣುವುದರಿಂದ ಸಂಸ್ಕೃತ ಜೈಮಿನಿಯು ಆತನ ಕಾಲಕ್ಕಿಂತ (ಕ್ರಿ. ಶ ೩೩೫–೩೭೫) ಬಹುಮಟ್ಟಿಗೆ ಈಚಿನದಾಗಿರಬೇಕೆಂದು ಹೇಳಬೇಕಾಗುತ್ತದೆ.

ರೆವರೆಂಡ್ ಮೌಲಿಂಗನು ಕನ್ನಡ ಜೈಮಿನಿ ಭಾರತವನ್ನು ಜರ್ಮನ್ ಭಾಷೆಗೆ ಅನುವಾದ ಮಾಡಿದನೆಂದು ತಿಳಿದುಬಂದಿದೆ. [Lakshmica :—Erstes und zweises kapitel des altkanaresischen Jeimini Bhārata einer uberarbeitnag des Acvamedha Parva des Mahābhārata Ans den Kanareschen umgeschricben, wortlich ubrsetzt und mit Erlanternnugen Versehen Von Dr. Mogling. Zeitschrift der Dentsehen Morgenlandischen Gesellschaft, Vol. xxiv, 1870, pp. 309 and ff; Vol. xxv, 1871, pp. 22 and ff, Vol. xxvii. 1873, pp. 364 and ff.—Linguistic Survey of India. Vol. iv.] ಕನ್ನಡ ಜೈಮಿನಿಯು ಚೆನ್ನಬಸವ ಪುರಾಣದಂತೆಯೇ ಇಂಗ್ಲೀಷ್ ಭಾಷೆಗೆ ಕೂಡ ಭಾಷಾಂತರವಾದಂತೆ ತಿಳಿದುಬಂದಿದೆ. (೧)

ಮೂಲ ಸಂಸ್ಕೃತ ಜೈಮಿನಿಯು ಪುರಾಣ ಧರ್ಮಪ್ರದವಾಗಿದೆ. ಲಕ್ಷ್ಮೀಶನ ಕಾವ್ಯವು ರಮಣೀಯ ಕಾವ್ಯಧರ್ಮದಿಂದ ಕಂಗೊಳಿಸುತ್ತಿದೆ. ಮೂಲದ ಕಥೆಗಳನ್ನೂ ಅಲ್ಲಿನ ಉಪದೇಶಗಳನ್ನೂ ಲಕ್ಷ್ಮೀಶನು ತನ್ನ ಕನ್ನಡಕಾವ್ಯಕ್ಕೆ ಹದವರಿತು ಬಳಸಿಕೊಂಡಿದ್ದಾನೆ. ಆದರೆ ಮೂಲಪುರಾಣದ ಶೈಥಿಲ್ಯವಾಗಲಿ, ನೀತಿ ಧರ್ಮಗಳ ಉಪದೇಶದ ಆವೇಶವಾಗಲಿ, ಭಾಷಾಶೈಲಿಯ ನೀರಸತ್ವವಾಗಲಿ ಕನ್ನಡ ಕಾವ್ಯದಲ್ಲಿಲ್ಲ. ಮೂಲಸಂಸ್ಕೃತ ಪುರಾಣದಲ್ಲಿರುವ ಕಥನ ಕೌಶಲ್ಯ, ಭಕ್ತಿಯ ಆವೇಗ, ಉಕ್ತಿಗಳ ಚಮತ್ಕಾರ, ಇವನ್ನು ಲಕ್ಷ್ಮೀಶನು ಅನುಸರಿಸಿದ್ದಾನೆ. ಅಲ್ಲದೆ ತನ್ನ ಕನ್ನಡ ಕಾವ್ಯದಲ್ಲಿ ರಸಪರವಶತೆಯನ್ನೂ, ಉಚಿತಪದಪ್ರಯೋಗವನ್ನೂ, ಪಟ್ಟುದಗಳ ಝೇಂಕಾರವನ್ನೂ ಬೆರಸಿ ಕನ್ನಡಕಾವ್ಯವು ಮೂಲಕ್ಕಿಂತಲೂ ಹೆಚ್ಚು ಆಕರ್ಷಕವಾಗುವಂತೆ ಮಾಡಿದ್ದಾನೆ. ಮೂಲಪುರಾಣದ ವೈಷ್ಣವಾತಿರೇಕವು ಕನ್ನಡದಲ್ಲಿಲ್ಲ. ಕನ್ನಡ ಜೈಮಿನಿಯು ಹರಿಹರಭಕ್ತಿ ಸಮನ್ವಯದಿಂದ ಅದ್ವೈತದ ಸುಮಧುರ ದುಂದುಭಿಯನ್ನು ಮೊಳಗಿಸುತ್ತದೆ. ಮೂಲ ಕಥೆಗಳ ಸ್ವಾರಸ್ಯವು ಕೆಡದಂತೆ ಎಚ್ಚರದಿಂದ ಕವಿ ಚಿತ್ರಿಸಿದ್ದಾನೆ. ಸಂಸ್ಕೃತ ಜೈಮಿನಿಗೂ ಕನ್ನಡ ಜೈಮಿನಿಗೂ ಇರುವ ಸಾಮ್ಯ–ವೈಷಮ್ಯಗಳನ್ನು ಕುರಿತು ಶ್ರೀ ಎಚ್. ಅನಂತ ರಂಗಾಚಾರ್‌ರವರು, “ ಲಕ್ಷ್ಮೀಶನಿಗೆ ಈಗ ದೊರೆತಿರುವ ಬಹುಭಾಗದ ಗೌರವಕ್ಕೆ ಮೂಲ ಗ್ರಂಥವೇ ಕಾರಣ. ಕನ್ನಡ ಜೈಮಿನಿ ಭಾರತದಲ್ಲಿ ತೋರಿಬರುವ ಕಥಾ ಸಂವಿಧಾನ ಕೌಶಲ, ಸಂಭಾಷಣೆಗಳ ಸ್ವಾರಸ್ಯ, ಹಾಸ್ಯರಸ ಪ್ರತಿಪಾದನೆ, —ಇದೆಲ್ಲವೂ ಮೂಲ ಗ್ರಂಥದಲ್ಲಿಯೇ ಸ್ಪಷ್ಟವಾಗಿದೆ. ಕನ್ನಡ ಗ್ರಂಥದ ಬಹುಭಾಗವು ಸಂಸ್ಕೃತ ಗ್ರಂಥದ ಅನುವಾದ ಮಾತ್ರವಾಗಿದೆ............ ಲಕ್ಷ್ಮೀಶನು ಮೂಲದಲ್ಲಿರುವ ವಿಷಯವನ್ನು ಹಿಗ್ಗಿಸಿ, ತಗ್ಗಿಸಿ ಕನ್ನಡದಲ್ಲಿ ಒಂದು ಮಹಾಕಾವ್ಯವನ್ನು ರಚಿಸಿದ್ದಾನೆ.

ಕಾವ್ಯದೃಷ್ಟಿಯಿಂದ ಅನಾವಶ್ಯಕವೆಂದು ತೋರಿದ ಕೆಲವು ಭಾಗಗಳನ್ನು ತೇಲಿಸಿದ್ದಾನೆ. ಮರುತ್ತನ ಯಜ್ಞವಿಷಯವನ್ನು ವ್ಯಾಸ ಭಾರತದಿಂದ ಶೇಖರಿಸಿದ್ದಾನೆ. ಋತು, ಪುಷ್ಪಾಪಚಯ, ಸೂರ್ಯ–ಚಂದ್ರರ ಉದಯಾಸ್ತಗಳು ಮೊದಲಾದ ವರ್ಣನೆಗಳನ್ನು ಹೊಸದಾಗಿ ಸೇರಿಸಿದ್ದಾನೆ.

ಅಲ್ಲಲ್ಲಿ ಸ್ತ್ರೀವರ್ಣನೆಯಿಂದ ಶೃಂಗಾರಪೂರ್ಣವಾಗಿಯೂ, ಶ್ರೀ ಕೃಷ್ಣ ಪ್ರಾರ್ಥನೆಗಳಿಂದ ಭಕ್ತಿರಸಭರಿತವಾಗಿಯೂ, ಯುದ್ಧ ವರ್ಣನೆಯಿಂದ ವೀರ್ಯ ಯುಕ್ತವಾಗಿಯೂ ಆಗುವಂತೆ ಮಾಡಿದ್ದಾನೆ.'' ಎಂದು ಹೇಳಿರುತ್ತಾರೆ. [ಲಕ್ಷ್ಮೀಶ ಪುಟ ೮–೯.]

ಸುಪ್ರಸಿದ್ಧ ಸಾಹಿತಿಗಳಾಗಿದ್ದ ದಿವಂಗತ ಎಂ. ಆರ್. ಶ್ರೀನಿವಾಸ ಮೂರ್ತಿಗಳು ಸಂಸ್ಕೃತ ಹಾಗೂ ಕನ್ನಡ ಜೈಮಿನಿಗಳ ಹೋಲಿಕೆಯನ್ನು ಕುರಿತು ಹೇಳುತ್ತಾ, ''ಸಂಸ್ಕೃತ ಜೈಮಿನಿಯಲ್ಲಿ ಮರುತ್ತರಾಯನ ಕಥೆ ವಿಸ್ತಾರವಾಗಿಲ್ಲ. ಬಹಳ ಸಂಕ್ಷೇಪವಾಗಿದೆಯೆಂದೇ ಹೇಳಬೇಕು. ಲಕ್ಷ್ಮೀಶನು ಇದನ್ನು ವಿಸ್ತಾರವಾಗಿ ಬರೆದಿರುವುದಲ್ಲದೆ—

ನಾರದನ ಬುದ್ಧಿಯಂ ಕೇಳ್ದು ಸಂತೋಷದಿಂ ।
ಭೂರಮಣನಲ್ಲಿಂದೆ ಬೀಳ್ಕೊಂಡು ಶಶಿಮೌಳಿ।
ತಾರಕ ಬ್ರಹ್ಮೋಪದೇಶದಿಂ ಪ್ರಾಣಿಗಳ್ಗಾತ್ಮ ಸಾಯುಜ್ಯ ವೀವ ॥
ಭೂರಿದುರಿತಂಗಳಂ ಕಂಡವಾತ್ರದೊಳೆ ಸಂ।
ಹಾರಮಂ ಮಾಳ್ಪ ನಿಖಿಳ ಪ್ರಳಯ ಬಾಧೆಗ।
ಳ್ದೂರಮೆನಿಪ ವಿಮುಕ್ತ ಕಾಶಿ ಗೈತಂದು ವಿಶ್ವೇಶಂಗೆ ಪೊಡಮಟ್ಟನು ॥

ಎಂಬ ಪದ್ಯ ಬರೆದಿದ್ದಾನೆ. ಇದು ಸಂಸ್ಕೃತ ಮೂಲದಲ್ಲಿಲ್ಲ. ಸ್ವಾಹಾದೇವಿಯನ್ನು ಅಗ್ನಿಗೆ ಮದುವೆಮಾಡಿಕೊಟ್ಟ ಸಂದರ್ಭ, ಸೌಭರಿ ಮುನಿಯ ಆಶ್ರಮ ವರ್ಣನೆ, ಸಂಸ್ಕೃತ ಮೂಲದಲ್ಲಿ ಸಾಮಾನ್ಯವಾಗಿದೆ. ಇವನ್ನೆಲ್ಲಾ ಲಕ್ಷ್ಮೀಶನು ಮಾರ್ಪಡಿಸಿದ್ದಾನೆ'' ಎಂದು ಹೇಳಿದ್ದಾರೆ. (ಪ್ರಬುದ್ಧ ಕರ್ಣಾಟಕ ಸಂ. ೧೫. ಸಂಚಿಕೆ ೨. ಪುಟ ೮೩–೮೪)

ಈ ಉಭಯ ವಿದ್ವಾಂಸರ ಅಭಿಪ್ರಾಯಗಳು ಕವಿ ಲಕ್ಷ್ಮೀಶನು ಸ್ವತಂತ್ರ ಪ್ರತಿಭೆಯುಳ್ಳವನೆಂಬುದಕ್ಕೂ ಕೇವಲ ಚರ್ವಿತ ಚರ್ವಣದ ಕವಿಯಲ್ಲವೆಂಬುದಕ್ಕೂ ನಿದರ್ಶನವೆನಿಸಿವೆ. ಅಲ್ಲದೆ ಮೂಲಸಂಸ್ಕೃತದ ಕಥೆಗೂ, ಕನ್ನಡ ಜೈಮಿನಿಗೂ ತಕ್ಕಷ್ಟು ವ್ಯತ್ಯಾಸಗಳಿವೆಯೆಂದು ತಿಳಿಯಲು ಸಹಾಯವೆನಿಸಿವೆ.

ಕವಿಯ ಮತವಿಚಾರ

ಲಕ್ಷ್ಮೀಶ ಕವಿಯ ಕಾಲ ಮತ್ತು ಊರುಗಳ ಬಗ್ಗೆ ಚರ್ಚೆ ನಡೆದಂತೆಯೇ ಕವಿಯ ಮತದ ಬಗ್ಗೆ ಕೂಡ ದೀರ್ಘವಾದ ವಿಮರ್ಶೆ ನಡೆದಿದೆ. ನಿಜವಾಗಿ

ಕವಿಯು ಯಾವ ಜಾತಿಗೂ ಸೇರಿದವನಲ್ಲ. ಅವನ ಜಾತಿ ಸಾಹಿತಿಯ ಜಾತಿ ; ಅವನ ನೀತಿ ವಿಶ್ವಧರ್ಮದ ನೀತಿ ; ಅವನ ರೀತಿ ಸಹೃದಯರ ರೀತಿ. ಲಕ್ಷ್ಮೀಶನು ನಿಜವಾಗಿಯೂ ಉದಾರ ಮತ್ತು ಉದಾತ್ತ ಧರ್ಮಕ್ಕೆ ಸೇರಿದವನು. ಆದರೆ ಇಲ್ಲಿ ನಾವು ಮಾಡುವ ವಿಮರ್ಶೆ ಕವಿಯ ಚರಿತ್ರೆಯನ್ನು ತಿಳಿಯಲು ಮಾತ್ರ.

ಕನ್ನಡ ಜೈಮಿನಿಯ ಮಂಗಳ ಶ್ಲೋಕವು ಶ್ರೀ ವಿಷ್ಣುವಿನ ಪರವಾಗಿದೆ. ಪ್ರತಿಯೊಂದು ಸಂಧಿಯ ಕಡೆಯಲ್ಲಿಯೂ ಇಷ್ಟದೇವತೆಯಾದ ಲಕ್ಷ್ಮೀಶನನ್ನು ಕವಿ ಸ್ತುತಿಸುತ್ತಾನೆ. ಆದುದರಿಂದ ಈತನು ವೈಷ್ಣವ ಸಂಪ್ರದಾಯಕ್ಕೆ ಸೇರಿದವನೆಂದು ತಿಳಿಯಬಹುದು. ಆದರೆ ಕಾವ್ಯದ ಎರಡನೆಯ ಪದ್ಯವು ಶಿವನಪರವಾಗಿಯೂ, ಮೂರನೆಯ ಪದ್ಯವು ವಿಘ್ನೇಶ್ವರನ ಪರವಾಗಿಯೂ ಇರುವುದರಿಂದಲೂ ಕಾವ್ಯದ ಮಧ್ಯದಲ್ಲಿ ಶಿವಪಾರ್ವತಿಯರ ಮಹಿಮಾ ಸನ್ನಿವೇಶಗಳು ಬರುವುದರಿಂದಲೂ, ಇವನು ಅದ್ವೈತಸಿದ್ಧಾಂತವನ್ನು ಅಂಗೀಕರಿಸಿದವನೆಂದು ತಿಳಿಯಬಹುದು. "ಹರಿಹರಾರ್ಚನೆಯ ಸುಕೃತಂಗಳಾದಪುವು ಜೈಮಿನಿ ಭಾರತದೊಳೊಂದು ವರ್ಣಮಂ ಪ್ರೀತಿಯಿಂ ಕೇಳ್ದವರ್ಗೆ." (ಸಂ ೩೪. ಪ ೬೩). ಎಂಬ ಈ ಮಾತಿನಿಂದ ಕವಿಯು ಮೂಲ ಸಂಸ್ಕೃತದಲ್ಲಿ ಇಲ್ಲದಿರುವುದನ್ನು ಸ್ವತಂತ್ರಿಸಿ ಹೇಳಿರುವುದರಿಂದ ಇವನು ವೀರವೈಷ್ಣವನಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಇನ್ನೊಂದು ಕಡೆ "ಜೀವ ಪರಮಾತ್ಮರ ವಿಚಾರಿಸುವ ತೆರದಿಂದೆ ಕೃಷ್ಣಫಲುಗುಣರನರಸಿದನು" (ಸಂ ೧೪. ಪ. ೭) ಎಂದು ಹೇಳಿರುವುದನ್ನು ನೋಡಿದರೆ, ಅಹಂ ಬ್ರಹ್ಮಾಸ್ಮಿ, ಶಿವೋಹಂ–ಇತ್ಯಾದಿ ತತ್ವಗಳನ್ನು ಹೇಳುವ ಶುದ್ಧವಾದ ಅದ್ವೈತಮತಕ್ಕೆ ಸೇರಿದವನಲ್ಲವೆಂದು ತಿಳಿಯಬಹುದು. ಮೂಲಸಂಸ್ಕೃತ ಕಾವ್ಯದಲ್ಲಿ ಇಲ್ಲದಿರುವ ಪಾರ್ವತಿಯ ಸ್ತೋತ್ರವು ಚಂದ್ರಹಾಸನ ಕಥೆಯಲ್ಲಿ (ಸಂ ೩೧. ಪ ೭೨–೭೩) ಬಂದಿರುವುದನ್ನು ನೋಡಿದರೆ ಕವಿಯು ಆದಿಶಕ್ತಿಯನ್ನು ಅರ್ಚಿಸುವ ಶಾಕ್ತೇಯ ಪಂಥವನ್ನು ಕೂಡ ಗೌರವಿಸಿದಂತೆ ಕಾಣುತ್ತದೆ.

ಇದನ್ನೆಲ್ಲ ನೋಡಿದರೆ ಹರಿಹರರನ್ನು ಸಮಾನವಾಗೆಣಿಸುವ, ಕ್ರಿ.ಶ. ನಾಲ್ಕನೆಯ ಶತಮಾನದಿಂದ ಭಾರತದಲ್ಲಿ ಪ್ರಚಲಿತವಾಗಿರುವ, ಭಾಗವತ ಧರ್ಮಕ್ಕೆ ಕವಿ ಸೇರಿದವನೆಂದು ನಾವು ಸ್ಥೂಲವಾಗಿ ಹೇಳಬಹುದು. ಮೂಲ ಸಂಸ್ಕೃತ ಜೈಮಿನಿ ಭಾರತದಲ್ಲಿ ಕೂಡ ಭಾಗವತ ಧರ್ಮವು ನಿರೂಪಿತವಾಗಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಕವಿಯು ಭೀಷ್ಮನನ್ನು ಕುರಿತು "ಸ್ವೇಚ್ಛಾಮರಣಿ ಭಾಗವತ ಮಸ್ತಕಮಣಿ" (ಸಂ. ೯. ಪ ೩೦) ಎಂದೂ, ಚಂದ್ರಹಾಸನನ್ನು ಕುರಿತು, "ಭಾಗವತ ಶಿರೋಮಣಿ" ಎಂದೂ ಹೇಳಿರುವುದರಿಂದ ಇವನು ಭಾಗವತ ಪಂಥದ ಕವಿ ಎಂಬ ಮಾತು ಚೆನ್ನಾಗಿ ದೃಢಪಡುತ್ತದೆ.

ಕನ್ನಡ ಜೈಮಿನಿ ಭಾರತವನ್ನು ಆದ್ಯಂತವಾಗಿ ಓದಿದರೆ ಅವನು ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮೊದಲಾದ ಯಾವ ಮತಗಳಿಗೂ ಕಟ್ಟು ಬಿದ್ದಿಲ್ಲ

ವೆಂದು ಹೇಳಬಹುದು. ಕವಿಯು, ಉದಾರವಾದ ಭಾಗವತ ಪಂಥಕ್ಕೆ ಸೇರಿದುದ ರಿಂದ ಅವನು ಯಾವ ಮತವನ್ನೂ ನಿರಾಕರಿಸಲು ಕಾರಣವಿಲ್ಲ. ಮೂಲ ಸಂಸ್ಕೃತ ಜೈಮಿನಿಯು ಭಾಗವತ ಪಂಥದ ಗ್ರಂಥವಾಗಿರುವುದು ಲಕ್ಷ್ಮೀಶನ ಸಾಧನೆಯನ್ನು ಸುಗಮ ಮಾಡಿದೆ. ಅಲ್ಲದೆ ರುದ್ರಭಟ್ಟ, ಚಾಮರಸ, ಕುಮಾರ ವ್ಯಾಸ, ಕುಮಾರ ವಾಲ್ಮೀಕಿ, ಕನಕದಾಸ, ಮುಂತಾದ ಹೆಸರಾದ ಕನ್ನಡ ಕವಿಗಳ ಭಾಗವತ ಪಂಥಕ್ಕೇ ಈ ಲಕ್ಷ್ಮೀಶನು ಸೇರಿದವನೆಂದೇ ತೋರು ತ್ತದೆ. ಈ ಎಲ್ಲ ಕವಿಗಳಲ್ಲಿಯೂ ತ್ರಿಮೂರ್ತಿಗಳನ್ನು ಗೌರವಿಸುವುದು, ಹರಿಹರರಲ್ಲಿ ಭೇದವನ್ನು ಕಾಣದಿರುವುದು, ಭಕ್ತಿ ಮಾರ್ಗವನ್ನು ಮುಖ್ಯವಾಗಿ ಬೋಧಿಸುವುದು, ಎಲ್ಲ ದೇವತೆಗಳನ್ನೂ ಗೌರವಿಸುವುದು. ಶ್ರೀ ವಿಷ್ಣುವಿಗೂ ಅವನ ಅವತಾರ ಗಳಿಗೂ ಒಂದು ಬಗೆಯ ವಿಶಿಷ್ಟ ಮಹತ್ವವನ್ನು ಕೊಡುವುದು, ಇತ್ಯಾದಿ ಲಕ್ಷಣ ಗಳನ್ನು ನಾವು ಕಾಣಬಹುದು. ಲಕ್ಷ್ಮೀಶನು ಇಂತಹ ಉದಾತ್ತ ಧರ್ಮವನ್ನು ಅನುಸರಿಸಿದ್ದರಿಂದಲೇ ಅವನ ಅಮರ ಕಾವ್ಯವು ಹೆಚ್ಚು ಜನಪ್ರಿಯವಾಯಿ ತೆಂದು ತೋರುತ್ತದೆ.

ಮಹಾಕವಿ ಲಕ್ಷ್ಮೀಶನ ಜೈಮಿನಿಯಲ್ಲಿ ಧರ್ಮರಾಜನ ಯಜ್ಞಾಶ್ವವು ಪರಿ ಭ್ರಮಿಸುವ ಸಂದರ್ಭದಲ್ಲಿ ಅಹಿಂಸಾಧರ್ಮದ ಪ್ರಭಾವ ಕಂಡುಬರುತ್ತದೆ. ಇದಕ್ಕೆ ನಿದರ್ಶನವಾಗಿ "ಉಳಿದ ಯಜ್ಞಂಗಳೊಳ್ ಕಟ್ಟಿದ ಪಶುಗಳಂ ಕರೆದು ಬಿಟ್ಟಮಂ ಬಿಡಿಸಿ; ತೊಳಗಿ ಬೆಳಗಿದನ್ ಇಂದ್ರತೇಜದಿಂ ಮನುಜೇಂದ್ರನು" (ಸಂ. ೩೪. ಪ. ೩೦). ಅಂದರೆ ಯಜ್ಞಾರ್ಥವಾಗಿ ಬಂದಿದ್ದ ಮತ್ತೆ ಇದ್ದ ಎಲ್ಲ ಪಶುಗಳನ್ನೂ ವಧಿಸದೆ ಹಾಗೆಯೇ ಬಿಟ್ಟರೆಂದು ಹೇಳಿದೆ. ಇದೂ ಕೂಡ ಅಹಿಂಸಾಧರ್ಮಕ್ಕೆ ನಿದರ್ಶನವಾಗಿದೆ. ಇಲ್ಲಿ ಆದ ಹವನವು ಸಾತ್ವಿಕವಾಗಿದೆ. ಯಜ್ಞದಲ್ಲಿ ಸತ್ತ ಪಶುವಿಗೆ ಸ್ವರ್ಗವುಂಟೆಂದು ಶಾಸ್ತ್ರಜ್ಞರು ಹೇಳಿದ್ದಾರೆ. ಆದರೆ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ "ಅವಭೃಥದ ಪರಿಯಾಣದಿಂ ಬೆಳೆದ ಅಶ್ವಪದವಿಯುಂ ಕಾಣೆನಲ್ಲಿಂ ಉಪಮೆಗೈದದ ಕೃಷ್ಣಸಾಯುಜ್ಯಮಂ ಪಡೆವು" ದೆಂದು ತನ್ನಲ್ಲಿ ಹೇಳಿಕೊಂಡು ವಿಪುಲಮತಿ ನಕುಲನು ಹೇಳುತ್ತಾನೆ. (ಸಂ. ೩೪, ಪ. ೧೩) ಆ ಮೇಲೆ ಭೀಮನು ಅಶ್ವದ ತಲೆಯನ್ನು ಕಡಿದನು. ಆ ತಲೆ ಆಗಸಕ್ಕೆ ಜಿಗಿದು "ನಡೆಸ್ಸಳಕೆ ಅಡರ್ದ ಅಡಗಿತು ಘನಮಂಡಲದೊಳು" (ಸಂ. ೩೪, ಪ. ೧೬). ಅನಂತರ ಆ ಕುದುರೆಯು 'ಜೀವಾತ್ಮನತಿತೇಜ ದಿಂದಚ್ಯುತನ ದೇಹದೊಳಡಗಲು' ಶ್ರೀ ಕೃಷ್ಣನ ಹೃದಯದಲ್ಲಿ ಅಡಗುತ್ತದೆ. ಇದನ್ನು ನೋಡಿದ ಋಷಿಗಳು "ಎಲೆ ಯುಧಿಷ್ಠಿರ, ಪೂರ್ವಯುಗದ ಅಧ್ವರಂಗಳೊಳ್ ಕಾಣಿಪೇಪರಿಪ್ರತದ ಪಶುವನು ಇದು ನಿನಗೆ ದೊರೆಕೊಂಡು ದು ಸವಿಭವಾದುದು" (ಸಂ. ೩೪, ಪ. ೧೮) ಎಂದು ಹೇಳುತ್ತಾರೆ. ಈ ಚಮತ್ಕಾರ ಇಷ್ಟಕ್ಕೇ ನಿಲ್ಲದೆ "ಪಡೆಲ್ಲಿಂ ಅಶ್ವರ್ಯಮಂ ಬಳಿಕವಾಯು ಜೀವರಂ ಕರ್ಪೂರವಾದುದು ಅತಿಶುಭ್ರದಿಂ." ಎಂಬಂತೆ ಕುದುರೆಯ ದೇಹವು

ಕರ್ಪೂರಮಯವಾಗಿಬಿಡುತ್ತವೆ. ಇಷ್ಟೂ ಅಲ್ಲದೆ, "ಕರಾಗ್ರದಿಂ ಪಿಡಿದು ಹಯದ ಎಡಗಿವಿಯಂ ಸೀಳಿದೊಡೆ ನೆತ್ತರಿಲ್ಲದೆ ಮಹಾಕ್ಷೀರಧಾರೆ ಪೊರಮಟ್ಟುದು.' (ಸಂ. ೩೪, ಪ. ೧೬) ಎಂದು ಹೇಳಿ ಕವಿಯು ಈ ಧರ್ಮರಾಜನ ಯಾಗವು ಅಹಿಂಸಾಮಯವಾದುದೆಂದು ಹೇಳಲು ಯತ್ನಿಸಿರುತ್ತಾನೆ. ಆದರೆ ಈ ಕಥಾವಸ್ತುವು ಮೂಲ ಸಂಸ್ಕೃತ ಜೈಮಿನಿ ಭಾರತದಲ್ಲಿರುವುದು ಗಮನಾರ್ಹವಾಗಿದೆ. ಕವಿಯು ದಯಾಧರ್ಮ ನಿರೂಪಣೆಗೆ ಇದು ನೆರವಾಗಿದೆ. ಭಾರತದಲ್ಲಿ ಜೈನ-ಬೌದ್ಧ ಧರ್ಮಗಳು ತಲೆಯೆತ್ತಿ ಅಹಿಂಸಾ ಧರ್ಮವನ್ನು ಎತ್ತಿಹಿಡಿದ ಮೇಲೆ ಸಂಸ್ಕೃತ ಜೈಮಿನಿ ಭಾರತ ವಿರಚಿತವಾಗಿದ್ದು. ಅಶ್ವಮೇಧ ಯಾಗವು ಅಹಿಂಸಾತ್ಮಕವೆಂಬಂತಾಗಲು ಕಾರಣವಾಗಿರಬೇಕು. ಪರಮವೈದಿಕರಾದ ಶ್ರೀ ಮಧ್ವಾಚಾರ್ಯರು ಪಿಷ್ಟಪಶು ವಧೆಯನ್ನು ಹೇಳಿರುವುದು ಇಲ್ಲಿ ಗಮನಾರ್ಹವಾಗಿದೆ.

ಇದೇ ಸಂದರ್ಭವು ಮಹಾಭಾರತದಲ್ಲಿ ಇದಕ್ಕೆ ಭಿನ್ನವಾಗಿದೆ. ವಿಜಯನಗರದ ಕೃಷ್ಣದೇವರಾಯನಿಗೆ ಅಂಕಿತವಾಗಿ ತಿಮ್ಮಣ್ಣಕವಿಯಿಂದ ವಿರಚಿತವಾಗಿರುವ ಕಡೆಯ ಎಂಟು ಪರ್ವಗಳ ಭಾರತ ಕಾವ್ಯ ಕನ್ನಡದಲ್ಲಿ ಅಚ್ಚಾಗಿ ಪ್ರಕಟವಾಗಿದೆ. ಅದರಲ್ಲಿ—

ಕ್ಷಿತಿಪ ಕೇಳ್ ಯೂಪಂಗಳಲಿ ವಿಧಿ ।
ಯುತವೆನಿಪ ಮೃಗಪಕ್ಷಿ ಜಲ ಚರ ।
ತತಿಗಳನು ಸಂಯೋಜಿಸಿದರುಚಿತದಲಿ ಋತ್ವಿಜರು ॥
ಅತಿ ಲಲಿತ ವೆಂಬಂದದಲಿ ತತ ।
ಕ್ರತುವಿನಲಿ ಮುನ್ನೂರು ನಂದಾ ।
ಯುತವ ಮಾಡಿದರುಚಿತ ಲಕ್ಷಣ ಯುಕ್ತ ಪಶುಚಯವ ॥

ಲಲಿತಯೂಪ ಸುಯೋಜಿತಾಶ್ವವ ।
ಬಳಸಿಕೊಂಡಿಪ್ಪಂತೆ ಪಶುತತಿ ।
ಗಳನು ನಿಲಿಸಿದರಾಗವೋಕ್ತ ಕ್ರಮವಿದೆಂಬಂತೆ ।
ಬಳಿಕ ತತ್ಕ್ರಮ ಋತ್ವಿಜಾವಳಿ ।
ಯೊಳಗೆ ನದಲಂಕಾರವಾಗುತ ।
ಲಲಘು ಮಹಿಮೆಯನುಳ್ಳ ಪಾರಾಶರ್ಯನೊಪ್ಪಿದನು ॥

ಬಲದು ಸರ್ವಪಶು ಶ್ರವಣಗಳ ।
ನಲವು ವಿಧಿಯಲಿ ಮಾಡಿಕ್ರಮದಲಿ ।
ಬಳಿಕ ಶಾಲ್ಪಂಬನವ ಪರಿರಚಿಸಿದರು ಯಾಜ್ಞಿಕರು ॥
ಲಲಿತವಾದಾ ಹಯದ ಮಾಂಸಂ ।
ಗಳನು ತತ್ತದ್ದೇವತಾ ಸಂ ।
ಕುಳಕುಚಿತವೆಂಬಂದದಲಿ ಯಾಹುತಿಯ ಮಾಡಿದರು ॥

ಬಳಿಕ ಶೇಷಿಸಿ ದಶ್ವಮಾಂಸಂ ।
ಗಳನು ಯಾಜಕರಾಗ ಯಾಗ ।
ಜ್ವಲನೊಳಗಾಹುತಿಯ ಮಾಡಿದರರುಹ ಮಂತ್ರದಲಿ ॥ (ಕನ್ನಡ ಮಹಾಭಾರತ, ಅಶ್ವಮೇಧ ಪರ್ವ, ಸಂ. ೮. ಪ. ೧೯, ೨೦, ೨೧, ೨೨).

ಮೇಲೆ ಕಂಡ ಪದ್ಯಗಳು ಮಹಾಭಾರತದ ಅಶ್ವಮೇಧದಲ್ಲಿ ಪ್ರಾಣಿಹಿಂಸೆಯು ಧಾರಾಳವಾಗಿ ನಡೆದಂತೆ ಹೇಳಿದೆಯಲ್ಲವೆ?



ಚಿಕ್ಕಮಗಳೂರು ಜಿಲ್ಲೆಯ ದೇವನೂರು ಗ್ರಾಮದ ಶ್ರೀ ಲಕ್ಷ್ಮೀರಮಣಸ್ವಾಮಿಯ
ದೇವಸ್ಥಾನದ ಹೊರನೋಟ.

Photo : J.K.B.

ಲಕ್ಷ್ಮೀಶನ ಕಾವ್ಯ ಸಂಪತ್ತು

ಕನ್ನಡ ಜೈಮಿನಿ ಭಾರತವು ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಸಹೃದಯರು, ದೈವಭಕ್ತರು, ಸಾಹಿತ್ಯಾಭಿಲಾಷಿಗಳು, ಗಮಕಿಗಳು, ಕವಿಗಳು, ಪಂಡಿತರು ಇತ್ಯಾದಿ ಎಲ್ಲರನ್ನೂ ಆಕರ್ಷಿಸಿದೆ. ಹೀಗೆ ಜನಪ್ರಿಯವಾಗಲು ಈ ಕಾವ್ಯದಲ್ಲಿರುವ ಬಹುಮುಖವಾದ ಸ್ವಾರಸ್ಯವೇ ಕಾರಣವೆನ್ನಬಹುದು. ಒಂದು ಉತ್ತಮ ಕಾವ್ಯದಲ್ಲಿ ಪ್ರಾಸಾದಿಕಶೈಲಿ, ಆಕರ್ಷಕ ಕಥಾವಸ್ತು, ವಿನೂತನ ವರ್ಣನೆಗಳು, ಒಳ್ಳೆಯ ರಸಭಾವ ನಿರೂಪಣೆ, ಶ್ಲಾಘ್ಯವಾದ ಅರ್ಥಾಲಂಕಾರ ಮತ್ತು ಶಬ್ದಾಲಂಕಾರಗಳು, ಚೈತನ್ಯ ಪೂರ್ಣವಾದ ಪಾತ್ರಸೃಷ್ಟಿ, ಕುಶಲ ಸಂಭಾಷಣೆ, ಅಪೂರ್ವ ಪದಪ್ರಯೋಗ, ಜಾಣ್ನುಡಿಗಳ ಸಮಾಕರಣ ಇತ್ಯಾದಿಗಳೆಲ್ಲವೂ ಇರಬೇಕು. ಕನ್ನಡ ಜೈಮಿನಿ ಭಾರತವು ಮೇಲೆ ಕಂಡ ಎಲ್ಲ ಸದ್ಗುಣಗಳನ್ನೂ ಒಳಗೊಂಡಿದೆ. ಆದ್ದರಿಂದಲೇ ಈ ಕಾವ್ಯವು ಎಲ್ಲ ವರ್ಗದ, ಎಲ್ಲ ಸಾಹಿತಿಗಳ ಮನ್ನಣೆಗೂ ಪಾತ್ರವಾಗಿ, ಕನ್ನಡ ಕಾವ್ಯ ಪ್ರಪಂಚದ ಕಲ್ಪವೃಕ್ಷ, ಸಹೃದಯರ ಚಿಂತಾಮಣಿ ಮತ್ತು ರಸಿಕರ ಕಾಮಧೇನು ಎನಿಸಿದೆ.

ಭಾಗ್ಯಶಾಲಿಯಾದ ಕವಿಗೆ ಮಾತ್ರ ಒಳ್ಳೆಯ ಶೈಲಿ ಅಳವಡುತ್ತದೆ. ಒಳ್ಳೆಯ ಶೈಲಿಯು ಕೈವಶವಾಗಬೇಕಾದರೆ ಕವಿಯು ಕಾವ್ಯ ಸಮಾಧಿಯಲ್ಲಿ ಸಿದ್ಧನಾಗಿರಬೇಕು. ಕವಿಯು ಶಾಸ್ತ್ರಜ್ಞನೂ ಲೋಕಾನುಭವಿಯೂ ಆಗಿರಬೇಕು. ಮೇಲಾಗಿ ಭಗವಂತನ ಕೃಪೆಗೆ ಪಾತ್ರನಾಗಿರಬೇಕು. ಈ ಎಲ್ಲ ಸದ್ಗುಣಗಳೂ ಲಕ್ಷ್ಮೀಶನಲ್ಲಿ ಇರುವುದರಿಂದಲೇ "ಗೀರ್ವಾಣ ಪುರನಿಲಯ ಲಕ್ಷ್ಮೀವರಂ ತಾನೆ ಸಂಗೀತ ಸುಕಲಾ ನಿಪುಣನು ವೀಣೆಯಿಂ ಗಾನಮಂ ನುಡಿಸುವಂದದೊಳ್ ಎನ್ನ ವಾಣಿಯಿಂ ಕವಿತೆಯಂ ಪೇಳಿಸಿದಂ" ಎಂದು ಹೇಳಿಕೊಂಡಿದ್ದಾನೆ. (ಸಂ. ೧, ಪ. ೮) ಇದು ಕವಿಯ ನಿರಹಂಕಾರಭಾವನೆಗೆ ನಿದರ್ಶನವಾಗಿದೆಯಲ್ಲದೆ, ತಾನು ಲಕ್ಷ್ಮೀಶನ ಕೈವೀಣೆ ಮಾತ್ರ ಎಂಬ ವಿನಮ್ರಭಾವನೆಗೂ ಗುರುತಾಗಿದೆ. ತನ್ನ ಕಾವ್ಯವು "ವರವರ್ಣದಿಂದೆ ಶೋಭಿತಮಾಗಿ ರೂಪವಿಸ್ತರದಿಂದೆ ಚೆಲ್ವಾಗಿ ಮಧುರತರ ನವರಸೋದರಭರಿತದಿಂದೆ ವಿಲಸಿತಮಾಗಿ ಸುಮನೋನುರಾಗದಿಂ ಪ್ರಚುರಮಾಗಿ ನಿರುತ ಮಂಜುಳ ಶಬ್ದದಿಂದೆ ಕಿವಿಗಿಂಪಾಗಿ" ಇದೆ ಎಂದು ಕವಿ ಹೇಳುತ್ತಾನೆ (ಸಂ. ೧. ಪ. ೧೨). ಅಲ್ಲದೆ, ಒಂದು ಒಳ್ಳೆಯ ಕಾವ್ಯವು ಛಂದಸ್ಸು, ಲಕ್ಷಣ, ಅಲಂಕಾರ, ಭಾವ, ರಸ ಇವುಗಳಿಂದ ಕಳೆವೆತ್ತ ಸತ್ಕೃತಿ, ಚಮತ್ಕೃತಿ ಯುಕ್ತವೆಂದೂ, ಇಂತಹ ಸುಗುಣಗಳಿಂದ ಕೂಡಿದ ಕಾವ್ಯವೇ ಸುಶ್ರಾವ್ಯವೆಂದೂ, ಹಾಗಿಲ್ಲದ ಕಾವ್ಯವು ಅಶ್ರಾವ್ಯವೆಂದೂ ಲಕ್ಷ್ಮೀಶನು ಹೇಳುತ್ತಾನೆ. ತನ್ನ ಕಾವ್ಯವು ವೀಣಾಧ್ವನಿಯಂತೆ, "ನಿರುತ ಮಂಜುಳ ಶಬ್ದದಿಂದ ಕಿವಿಗಿಂಪಾಗಿ" ಪರಿಶೋಭಿಸುವುದೆಂದು ಕವಿ

ಆತ್ಮವಿಶ್ವಾಸದಿಂದ ಹೇಳಿದ್ದಾನೆ. ಇವನ ಕಾವ್ಯದಲ್ಲಿ ಕನ್ನಡ ಮತ್ತು ಸಂಸ್ಕೃತ ಶಬ್ದಗಳು ಉಚಿತವರಿತು ಪ್ರಯೋಗಿಸಲ್ಪಟ್ಟಿವೆ. ಪದಮೈತ್ರಿಯು ಅತಿಶಯವಾಗಿದೆ. ಇದು ಕಾವ್ಯದ ಘನತೆಯನ್ನು ಹೆಚ್ಚಿಸಿದೆ.

ಒಳ್ಳೆಯ ಕಾವ್ಯದಲ್ಲಿ ಪದಮೈತ್ರಿ ಬಹಳ ಅಗತ್ಯ. ಕಾವ್ಯಗಳನ್ನು ಗಮಕಿಗಳು ಓದುವಾಗ, ಶ್ರೋತೃಗಳ ಮನಸ್ಸಿಗೆ ಸೊಂಪು, ಕಿವಿಗಳಿಗೆ ಇಂಪು, ಆತ್ಮಕ್ಕೆ ತಂಪು ಉಂಟಾಗುವಂತೆ ಮೃದು ಮಧುರ ಪದಪುಂಜ ರಂಜಿತವಾಗಿ ರಚಿತವಾದ ಕಾವ್ಯಗಳೇ ನಿಜವಾದ ಮಹಾಕಾವ್ಯಗಳು.

ಕನ್ನಡದಲ್ಲಿ ಪಂಪ, ರನ್ನ, ಜನ್ನ, ಹರಿಹರ, ಚಾಮರಸ, ಷಡಕ್ಷರದೇವ, ಕುಮಾರವ್ಯಾಸ, ವಿರೂಪಾಕ್ಷ ಪಂಡಿತ, ಬಸವಪ್ಪಶಾಸ್ತ್ರಿ, ಮುದ್ದಣ ಮೊದಲಾದ ಕವಿಗಳಿಗೆ ಇಂತಹ ಶೈಲಿಯು ಅಳವಟ್ಟಿದೆ. ನಮ್ಮ ಲಕ್ಷ್ಮೀಶನು ಈ ಪ್ರಾಸಾದಿಕ ಶೈಲಿಯ ಮಹಾಕವಿಗಳ ಮಾಲೆಯಲ್ಲಿ ಪರಿಗಣಿಸಲ್ಪಟ್ಟಿದ್ದಾನೆ. ಅವನ ಶೈಲಿಯು "ವರವರ್ಣದಿಂದೆ ಶೋಭಿತಮಾಗಿ, ಮಧುರತರ ನವರಸೋದರದಿಂದೆ ವಿಲಸಿತಮಾಗಿ" ಆಹ್ಲಾದಕರವಾಗಿದೆ. ಅದು ಕಾರಣವೇ ಕನ್ನಡ ಜೈಮಿನಿಯು ತನ್ನನ್ನು ಕೇಳಿದ "ಜಾಣರಂ ತಲೆದೂಗಿಸದೆ ಇರದು" ಎನ್ನಬಹುದು.

ಭಾರತದ ಕಥಾವಸ್ತುವು ಅತ್ಯಂತ ಚಮತ್ಕಾರವಾದುದು. ಆ ಕಥೆಗಳು ಕೇಳುವವರ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡುವ ಸುಖ–ದುಃಖ, ಲಾಭ–ನಷ್ಟ, ಮಾನ–ಅಪಮಾನ, ಪ್ರೇಮ–ದ್ವೇಷ ಮೊದಲಾದುವುಗಳನ್ನು ಅನುಭವಕ್ಕೆ ತರುತ್ತವೆ. ಆದ್ದರಿಂದಲೇ ಭಾರತದ ಕಥೆಗಳು ಹೆಚ್ಚು ಜನಪ್ರಿಯವೆನಿಸಿವೆ. ಜೈಮಿನಿ ಭಾರತದಲ್ಲಿ ಧರ್ಮರಾಜನ ವ್ಯಸನ, ವೇದವ್ಯಾಸರ ಉಪದೇಶ, ವೃಷಕೇತು ಯೌವ್ವನಾಶ್ವರ ಯುದ್ಧ, ಭೀಮಕೃಷ್ಣರ ಸಲ್ಲಾಪ, ಅರ್ಜುನ ನೀಲಧ್ವಜರ ಆಜಿ, ಜ್ವಾಲೆಯ ಛಲ, ಉದ್ದಾಲಕನ ಕಥೆ, ಸುಧನ್ವಾರ್ಜುನರ ಕಾಳಗ ಯಜ್ಞಾಶ್ವವು ಹೆಣ್ಣು ಕುದುರೆಯಾಗಿ ಕಡೆಗೆ ಹುಲಿಯಾದ ವಿಚಾರ, ಅರ್ಜುನ ಪ್ರಮೀಳೆಯರ ವಿವಾಹ, ಅರ್ಜುನ ಬಭ್ರುವಾಹನರ ಭಯಂಕರವಾದ ಯುದ್ಧ, ರಾಮಾಶ್ವಮೇಧದ ಕಥೆ, ಕುಶಲವರ ಕಾಳಗ, ತಾಮ್ರಧ್ವಜನಿಂದ ಕೃಷ್ಣಾರ್ಜುನರ ಪರಾಜಯ, ಬ್ರಾಹ್ಮಣ ವೇಷಧಾರಿಯಾದ ಶ್ರೀ ಕೃಷ್ಣನು ಮಯೂರಧ್ವಜನನ್ನು ಯಾಚಿಸುವುದು, ವೀರವರ್ಮನ ಕಥೆ, ಚಂದ್ರಹಾಸನ ಆಶ್ಚರ್ಯಕರವಾದ ಕಥೆ, ಬಕದಾಲ್ಭ್ಯನ ಸಾನ್ನಿಧ್ಯದ ವಿಚಾರ, ಧರ್ಮರಾಜನ ಅಶ್ವಮೇಧಯಾಗ ಇತ್ಯಾದಿ ವಿಚಾರಗಳು ಕುತೂಹಲ ಜನಕವಾದ ಕಥೆಗಳಿಂದ ಕೂಡಿವೆ. ಈ ಕಥೆಗಳಲ್ಲಿ ಯುದ್ಧ ಪ್ರಸಂಗವು ಬಹಳವಾಗಿ ಬರುವುದರಿಂದ ಆ ವರ್ಣನೆಯಲ್ಲಿ ಬರುವ ವೀರರಸವು ಜನತೆಗೆ ಸ್ಫೂರ್ತಿಯನ್ನುಂಟುಮಾಡುತ್ತದೆ. ಸುಧನ್ವನನ್ನು ಹಂಸಧ್ವಜನು ಎಣ್ಣೆಯ ಕೊಪ್ಪರಿಗೆಯಲ್ಲಿ ಬೇಯಿಸಿದುದು, ನಿರಪರಾಧಿ ಸೀತಾ

ದೇವಿಯನ್ನು ಶ್ರೀರಾಮನು ಅರಣ್ಯಕ್ಕೆ ಅಟ್ಟಿದುದು, ಭಾಗವತ ಶಿರೋಮಣಿ ಚಂದ್ರಹಾಸನನ್ನು ದುಷ್ಟಬುದ್ಧಿ ಕಟುಕರ ಪಾಲುಮಾಡಿದುದು ಇತ್ಯಾದಿ ಕಥಾ ಸಂದರ್ಭದಲ್ಲಿ ಬರುವ ಕರುಣರಸವು ಓದುವವರ ಮತ್ತು ಕೇಳುವವರ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ಚಂಡಿಯ ಕಥೆ, ಭೀಮ ಕೃಷ್ಣರ ರಸಹಾಸ್ಯ, ನಾರದನ ವಿನೋದ ಇತ್ಯಾದಿ ಸನ್ನಿವೇಶಗಳಲ್ಲಿ ಬರುವ ತಿಳಿಹಾಸ್ಯವು ಓದುಗರನ್ನು ಹುರಿದುಂಬಿಸುತ್ತದೆ. ಈ ಜೈಮಿನಿ ಭಾರತದಲ್ಲಿ ಬರುವ ದುಷ್ಟಬುದ್ಧಿ, ಜ್ವಾಲೆ ಮುಂತಾದವರ ದುರಂತ ಜೀವನ ಚಿತ್ರಗಳು, ಸುಪ್ರಸಿದ್ಧ ಷೇಕ್ಸ್‌ಪಿಯರನ ನಾಟಕಗಳ ದುರಂತ ಪ್ರತಿನಾಯಕರ ಕಥೆಗಳನ್ನು ನೆನಪಿಗೆ ತರುತ್ತವೆ. ಇವೆಲ್ಲಕ್ಕೂ ಮಿಗಿಲಾಗಿ ಈ ಕಾವ್ಯದ ಆದ್ಯಂತದಲ್ಲಿ ಬರುವ ಶ್ರೀ ಕೃಷ್ಣಮಹಿಮೆಯೂ, ಅವನ ಅನಂತ ಲೀಲಾವಳಿಯೂ, ದಿವ್ಯವಾದ ದೇವಾಲಯಕ್ಕೆ ಸುವರ್ಣದ ಗೋಪುರದಂತೆ ಇಲ್ಲಿ ಕಂಗೊಳಿಸುತ್ತಿವೆ.

ಕವಿ ಲಕ್ಷ್ಮೀಶನು "ವಿಮಲ ಜೈಮಿನಿ ಭಾರತದ ಕಥೆಯನು" ಹೇಳಲು ಹೊರಟು ಅವನು ಸಂಪೂರ್ಣವಾಗಿ ಹೇಳಿರುವುದು ಶ್ರೀ ಕೃಷ್ಣಮಹಾತ್ಮ್ಯ. ಆದುದರಿಂದಲೇ "ಪುಣ್ಯಮಿದು ಶ್ರೀ ಕೃಷ್ಣಚರಿತಾಮೃತಂ" ಎಂದು (ಸಂ. ೩೪, ಪ. ೪೭) ತನ್ನ ಕಾವ್ಯದ ಆತ್ಮ ಯಾವುದೆಂಬುದನ್ನು ಬಾಯಿಬಿಟ್ಟು ಹೇಳಿದ್ದಾನೆ. ಸಂಸ್ಕೃತದ ಮೂಲ ಜೈಮಿನಿಯು ಭಾರತವಾಗಿದೆಯೇ ಹೊರತು "ಶ್ರೀ ಕೃಷ್ಣಚರಿತಾಮೃತಂ" ಆಗಿಲ್ಲವೆಂಬುದು ನಮಗೆ ವಿದಿತವಾಗಿದೆ. ಆದರೆ, ಕನ್ನಡ ಜೈಮಿನಿಯು ಶ್ರೀ ಕೃಷ್ಣಚರಿತಾಮೃತವಾಗಿದೆ. ಅಷ್ಟೇ ಅಲ್ಲ. ಜೈಮಿನಿ ಭಾರತಕ್ಕೆ ಪಾಂಡವರು ನಿಜವಾಗಿ ಕಥಾನಾಯಕರೆನಿಸಿದ್ದರೆ ಲಕ್ಷ್ಮೀಶಕವಿಯ ಕಾವ್ಯದಲ್ಲಿ ಶ್ರೀ ಕೃಷ್ಣನೇ ಕಥಾನಾಯಕನೆಂಬಂತೆ ಕಂಗೆಗೊಳಿಸುತ್ತಾನೆ. ಇದು ಕವಿಯ ಶ್ರೀ ಕೃಷ್ಣಭಕ್ತಿಯ ಪರಿಣಾಮವೆನ್ನಬಹುದು.

ಲಕ್ಷ್ಮೀಶನು ದೂರ ದೃಷ್ಟಿಯುಳ್ಳ ವಿನಯಶೀಲನಾದ ಕವಿ. ಆದುದರಿಂದಲೇ ಅವನು ಪೂರ್ವ ಕವಿಗಳಿಂದ ತಕ್ಕಷ್ಟು ಪ್ರಯೋಜನವನ್ನು ಪಡೆದು ತನ್ನ ಕಾವ್ಯವನ್ನು ಕಳೆಗೊಳಿಸಿದ್ದಾನೆ; ಬಲಗೊಳಿಸಿದ್ದಾನೆ; ಬೆಲೆಗೊಳಿಸಿದ್ದಾನೆ. ಉದಾಹರಣೆಗೆ:

ಕಂದ ॥ "ಪೂಡುವ ಕುದುರೆ ಬೆಸಂ ಕೊಂ।
ದೋಡುವ ತೇರ್ಗೊಂದೆ ಗಾಲಿ ಪೊಳೆವಂ ಪೆಳವಂ ॥
ಕೇಡಿಂಗಲಸಿದೊಡಕ್ಕುಮೆ ।
ನೋಡಿರೆ ರವಿ ಕೆಡೆದನಸ್ತಗಿರಿ ಮಸ್ತಕದೊಳ್ ॥"

(ಆಶ್ವಾಸ ೫, ಪ. ೪) ಎಂಬ ನೇಮಿಚಂದ್ರನ "ಅರ್ಧನೇಮಿ" ಪುರಾಣದ ಪದ್ಯವನ್ನು ತನ್ನ ಕಾವ್ಯದ (ಸಂ. ೨೭, ಪ. ೨೭)ರಲ್ಲಿ ಸೊಗಸಾಗಿ ಬಳಸಿ

ಕೊಂಡಿದ್ದಾನೆ. ಅಂತೆಯೇ ದೇವಕವಿಯ ಕುಸುಮಾವಳಿಯಲ್ಲಿನ (ಆ. ೭. ಪದ್ಯ ೧೨).

ಕಂದ ॥ " ನಗೆದಳಾರ್ವ ಮಾಗೆಯ ಹಿಮ ।
ಕಗಿದಾಗಳೆ ಶಶಿಯನಮರ ನದಿಯಂ ಬಿಟ್ಟಾ ॥
ನಗಜಾತೆಯ ತನುವಂ ತಾಂ ।
ಬಗಿಯುಪ್ಪಿದ್ದರ್ಧನಾರಿಯಾದನುಮೇಶಂ ॥"

ಎಂಬ ಪದ್ಯದ ತಾತ್ಪರ್ಯವನ್ನು ತನ್ನ ಕಾವ್ಯದಲ್ಲಿ (ಸಂ. ೨೮, ಪ. ೩) ಹದವರಿತು ಬಳಸಿಕೊಂಡಿದ್ದಾನೆ. ಈ ರೀತಿ ಹಿಂದಿನ ಕವಿಗಳು ಕೂಡ ವರ್ತಿಸಿದ್ದಾರೆ. ಪ್ರಾಚೀನ ಷಟ್ಪದಿಕಾರನಾದ ರಾಘವಾಂಕನಿಂದ ಕೂಡ ಈ ಕವಿ ತಕ್ಕಷ್ಟು ಪ್ರಯೋಜನ ಪಡೆದಿರುವನೆಂಬುದನ್ನು ಹರಿಶ್ಚಂದ್ರ ಕಾವ್ಯ ಮತ್ತು ಜೈಮಿನಿ ಭಾರತಗಳ ಅವಲೋಕನದಿಂದ ಮನಗಾಣಬಹುದು. ಹರಿಶ್ಚಂದ್ರ ಕಾವ್ಯವು ಕನ್ನಡದಲ್ಲಿ ಪ್ರಪ್ರಥಮ ಸಾರ್ಥಕ ಷಟ್ಪದಿ ಕಾವ್ಯವಾಗಿರುವುದು ಇಲ್ಲಿ ಗಮನಾರ್ಹವಾದ ಸಂಗತಿಯಾಗಿದೆ.

ಭಾಸನ ಭಾವಗಳು ಕಾಳಿದಾಸನಲ್ಲಿಯೂ, ಪಂಪನ ಅಭಿಪ್ರಾಯಗಳು ರನ್ನನಲ್ಲಿಯೂ, ಸುರಂಗನ ಪ್ರಯೋಗಗಳು ಷಡಕ್ಷರದೇವನಲ್ಲಿಯೂ ಕಂಡು ಬರುವುದನ್ನು ನಾವು ಸಾಹಿತ್ಯದಲ್ಲಿ ನೋಡುತ್ತಿದ್ದೇವೆ. ಇದನ್ನು ಒಂದು ಬಗೆಯ ಕವಿ ಸಂಪ್ರದಾಯವೆಂದು ಕೂಡ ನಾವು ಕರೆಯಬಹುದು. ಮತ್ತೆ ಕೆಲವು ವಿದ್ವಾಂಸರು ಹೇಳಿರುವಂತೆ, ಲಕ್ಷ್ಮೀಶನ ಕಾವ್ಯಪ್ರಭಾವವು ಚೆನ್ನಬಸವ ಪುರಾಣ, ಭಾವ ಚಿಂತಾರತ್ನ, ಸೌಂದರ ಪುರಾಣ, ಮೋಹನ ತರಂಗಿಣಿ ಮೊದಲಾದ ಮಹಾಕಾವ್ಯಗಳಲ್ಲಿಯೂ ಕಂಡುಬರುತ್ತವೆ. ಕೋನಯ್ಯನ "ಕೃಷ್ಣಾರ್ಜುನ ಸಂಗರ", ಬಬ್ಬೂರು ರಂಗನ "ಪರಶುರಾಮ ರಾಮಾಯಣ", ಲಕ್ಷ್ಮ ಕವಿಯ "ಭಾರತ", ಗೋಪ ಕವಿಯ "ನಂದಿ ಮಹಾತ್ಮ್ಯೆ" ಮೊದಲಾದ ಗ್ರಂಥಗಳಲ್ಲಿಯೂ ಲಕ್ಷ್ಮೀಶನ ಪ್ರಭಾವ ಕಂಡುಬರುತ್ತದೆ.

ಕನ್ನಡ ಭಾಷೆಯಲ್ಲಿ ಒಳ್ಳೆಯ ವ್ಯತ್ಪತ್ತಿಯನ್ನು ಸಂಪಾದಿಸಬೇಕೆನ್ನುವವರು ಜೈಮಿನಿ ಭಾರತ ಮತ್ತು ರಾಜಶೇಖರ ವಿಳಾಸಗಳನ್ನು ಕಂಠಪಾಠಮಾಡುವ ಪದ್ಧತಿ ನಮ್ಮ ದೇಶದಲ್ಲಿ ಬಹಳ ವರ್ಷಗಳಿಂದ ಬಂದಿದೆ. ಈ ಎರಡು ಕಾವ್ಯಗಳನ್ನೂ ಚೆನ್ನಾಗಿ ಅಭ್ಯಾಸಮಾಡಿದವನು ಮತ್ತಾವ ಕನ್ನಡ ಕಾವ್ಯಗಳನ್ನಾದರೂ ಸುಲಭವಾಗಿ ಜೀರ್ಣಿಸಿಕೊಳ್ಳಬಹುದೆಂಬುದು ಸಹೃದಯರ ಅಭಿಪ್ರಾಯವಾಗಿದೆ.

ಲಕ್ಷ್ಮೀಶನ ಕಾವ್ಯದಲ್ಲಿ ಬರುವ ಉಪಮೆಗಳು ಬಹಳ ಆಕರ್ಷಕವಾಗಿವೆ. ವಿಮರ್ಶಕರು ಈ ಕವಿಯನ್ನು "ಉಪಮಾಲೋಲ" ಎಂದು ಒಕ್ಕಣಿಸಿದ್ದಾರೆ. ಮತ್ತೆ ಕೆಲವರು "ನಾದಲೋಲ" ಎಂದು ಹೊಗಳಿದ್ದಾರೆ. ಓದುಗರ

ಮನಸ್ಸಿನ ಮೇಲೆ ವಿಷಯವು ಸ್ಪಷ್ಟವಾಗಿ ನಿರೂಪಣೆಯಾಗಲು, ಕಾವ್ಯದ ಸೌಂದರ್ಯವು ಅಧಿಕವಾಗಲು ಅದಕ್ಕೆ ಈ ಉಪಮಾಲಂಕಾರವು ಅಗತ್ಯ. ಕವಿಯು ದುಃಖಿಸುವ ಧರ್ಮರಾಯನನ್ನು ಕುರಿತು, "ಅನಿಲ ಸಂಚಾರ ಮೊಂದಿನಿತಿಲ್ಲದುರಿವ ಕಡುವೇಸಗೆಯ ಬಿಸಿಲಿಂದೆ ಬಸವಳಿದ ಕೋಮಲ ರಸಾಲ ದಂತೆ" (ಸಂ. ೨, ಪ. ೧೪) ಎಂದೂ, ಕಟುಕರ ಕೈಯ್ಯಲ್ಲಿ ಸಿಕ್ಕಿದ ಚಂದ್ರಹಾಸನನ್ನು ಕುರಿತು, "ಪಾಪಿಗಳ ಒಡಲೊಳಿಹ ಪರಮಾತ್ಮನಂತೆ, ಯಮದೂತರೆಳೆತಂದ ಅಜಾಮಿಳನಂತೆ, ಕಾಕ ಸಂಘಾತದೊಳ್ ಸಿಕ್ಕಿರ್ದ ಕೋಗಿಲೆಯ ಮರಿಯಂತೆ, ನಲುಗಿ ಕತ್ತಲೆಯೊಳಿರ್ದ ಶೀತಲ ಮರೀಚಿರಾಂಧನದಂತೆ, ಚಪಳ ಕೋಪಾತಿಶಯದೊಳಗಿಹ ವಿವೇಕದಂತೆ, ಆಗ ಪಶುಘಾತಕಿಗಳೆತ್ತಿಕೊಂಡೊಯ್ಯು ಬಾಲಕನಿರ್ದನು." (ಸಂ. ೧೮, ಪ. ೩೧.) ಎಂದೂ ಹೇಳಿದ್ದಾನೆ. ದುಷ್ಟಬುದ್ಧಿಯ ಮನಸ್ಸು "ಕ್ರೂರ ನಕ್ರಾಕುಲಮೊಳಡಿದಿರ್ದ ಪೆರ್ಮಡು ಗಭೀರ ನಿರ್ಮಲಜಲದೊಳೆಸೆವಂತೆ" (ಸಂ. ೨೮, ಪ. ೨೮) ಇದ್ದಿತು. ಉದ್ದಾಲಕನು ಚಂಡಿಯೊಡನೆ ಸಂಸಾರ ಹೂಡಿದೊಡನೆ "ಮುಳ್ಳಿಡಿದ ಮರನೇರಿದಂತಾದುದು" (ಸಂ. ೧೦, ಪ. ೨೪) ಎಂದು ಹೇಳಿದ್ದಾನೆ. ಸುರಥನು ಶತ್ರುಗಳ ಮೇಲೆ ರಭಸದಿಂದ ಬೀಳುವುದನ್ನು ಕುರಿತು, "ಸೊಕ್ಕಾನೆ ಪೊಕ್ಕು ಕಾಸಾರಮಂ ಕಲಕುವಂತೆ" (ಸಂ. ೧೪, ಪ. ೬) ಎಂದು ವರ್ಣಿಸಿದ್ದಾನೆ. ಲಕ್ಷ್ಮಣನ ಮಾತು ಕಿವಿಗೆ ಬಿದ್ದಾಗ ಗರ್ಭಿಣಿಯಾದ ಸೀತಾದೇವಿಯು ನೆಲಕ್ಕೆ ಬಿದ್ದಳೆಂಬುದನ್ನು "ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆಗೊರಗುವಂತೆ" (ಸಂ. ೧೯, ಪ. ೧೬) ಎಂದು ಕವಿ ಉಪಮಿಸಿದ್ದಾನೆ. ಈ ಬಗೆಯ ಉಪಮೆಗಳೂ, ನಿದರ್ಶನಗಳೂ ಪ್ರಗಲ್ಭನಾದ ಕವಿಗೆ ಮಾತ್ರ ಹೇಳಲು ಸಾಧ್ಯವು.

ಕಲಿಯುಗದ ವಿಪ್ರರಾಚಾರಮಂ ಬಿಡುವಂತೆ (೧೮—೫೧), ಕರೆವ ಕಪಿಲೆಯಂ ಅಡವಿಗಟ್ಟುವರೆ (೧೮—೫೨), ಮಂತ್ರ ಪೂತದ ಹವಿಯನರಿದೆಂಜಲಿಪುದೆ ವಾಯಸಂ (೧೮—೪೬), ಮಮತೆಯಂ ಮಹಾಯೋಗಿ ಬಿಡುವಂತೆ (೧೮—೫೪), ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ (೧೯—೩೨), ಜಗದೊಳುಪಕಾರಿಯಾದವಂ ತನ್ನ ನೋವಂ ನೋಳ್ಪನೆ (೧೯—೩೫), ಸಿಡಿಲ ಗರ್ಜನೆಗೆ ಮೊರೆವ ಮರಿಸಿಂಗದಂತೆ (೨೦—೧೩), ಕೂಟ ಸಾಕ್ಷಿಯ ಸಿರಿಪೋಲು (೨೦–೧೬), ಕನ್ಯಾವಿಕ್ರಯಂಗೈದು ಜೀವಿಸುವ ಮಾನವನ ಚಿತ್ರಗಳಂತೆ (೨೦–೩೧), ಪೆಣ್ಣಿಗೆ ಸೋಲದವರಾರ್ (೩೦–೪) ಕಡಮರವನೆಡಹಿ ಸಂಧಿಸಿದ ಕಡುಬಡವನಂತೆ (೨೮–೫೪), ಆರ್ತರಂ ನೋಡಿ ಮಿಗೆ ಮರುಗದಿಹ ಮಾನವಂ ಪಾಪಿಯಲ್ತೆ (೨೨–೩೫), ಕತ್ತಲೆಯ ಮನೆಗೆ ಮಣಿದೀಪಮಾದಂತೆ, ಬತ್ತಿದ ಸರೋವರಕೆ ನವಜಲವೊದವಿದಂತೆ, ಬಿತ್ತರದ ಕಾವ್ಯ

ರಚನೆಗೆ ದೇವತಾಸ್ತುತಿ ನೆಗಳ್ದಂತೆ (೨೦_೬೩), ಸನ್ನುತ ವಸಂತದೊಳ್ ಬಾಯ್ದೆರೆವ ಕೋಗಿಲೆಯ ಮರಿಯವೊಲ್ (೨೯-೩೦), ಪೆಣ್ಗಳಾಸ್ಯಕೆ ಸೋಲ್ದುವಾ ಕೊಳದ ಕಮಲಂಗಳ್ (೩೦-೯), ಉಲ್ಲಂಘಿಸುವರುಂಟೆ ವಿಧಿಕೃತವನು (೩೦-೨೬), ದೀಪಮಂ ಕೆಡಿಸುವ ಪತಂಗದಂತೆ (೩೧_೫೨), ಲೋಭಿಯ ಧನಂ ಕಾಕಭಾಜನಮಪ್ಪುದು ಅಡವಿಯೊಳ್ ಬಿದ್ದ ಪೆಣನಂತೆ (೨೪-೩೭), ನಿಧಾನವನಭಾಗ್ಯಂ ಕಾಣದಿರ್ಪಂತೆ (೩-೩೦), ಪರನಿಂದೆಗೈದರ್ಗೆ ಪರಿಭವಂ ಕೈಯ್ಯೊಡನೆ ತೋರದಿಹುದೆ (೧೭-೪೩), ತನ್ನಂ ತಾತನುಳಿದುದಿಲ್ಲವೆ ಸತ್ಯಭಾಷೆಗಾಗಿ (೧೮-೫೦), ಸಮರ್ಥರ್ಗೆ ತನುಧನ ಮನೊಪ್ಪಿಸದೊಡೆ ಉಳಿವರೆ ಕೃಶರ್ (೨೪-೩೬), ಪ್ರಾಣನಾಯಕನಿರೆ ಮರೆದೊರೆಗಿದ ಅಧಮಾಂಗನೆಯ ಒಲ್ (೨೫-೬೦), ಗರುಡ ಹನುಮಂತರ್ಗೆ ಚಕ್ರ ಪಣ್ಯಂಚಿದಂತೆ (೨೬-೬೧), ಮಾತರಿಶ್ವ ಪಿತ್ರುಜ್ವಾಲೆ ಪೊರೆಯೊಳ್ ಇರೆ ಭೇಷಜವನರಸುವರೆ (೨೬-೭೪), ಕನ್ಯಾಶುಲ್ಕಂ ಅತಿ ದೋಷಕರಂ (೨೭-೨೯), ಕಮಲಾಂಬಿಕೆಯರ ಕೃತಕದ ಚೇಟ (೨೯-೩೫)—ಇತ್ಯಾದಿ ಜೈಮಿನಿ ಭಾರತದಲ್ಲಿ ಬರುವ ಸವಿಕಟ್ಟಾದ ಮಾತುಗಳು ಲಕ್ಷ್ಮೀಶನ ಹೃದಯದ ಸಂದೇಶದಂತಿವೆ. ಇಂತಹ ಜೀವಂತ ವಾಕ್ಯಗಳನ್ನು ಪ್ರಯೋಗಿಸುವ ಜಾಣ್ಮೆ ರಾಘವಾಂಕ-ಲಕ್ಷ್ಮೀಶರಂತಹ ವರಕವಿಗಳಿಗೆ ಮಾತ್ರ ಮೀಸಲಾದುದು. 'ರನ್ನವೊಂದಂ ತಳೆದಹಿ ರತ್ನಾಕರಕ್ಕೆ ಸರಿವಂದಪುದೆ?'

ಲಕ್ಷ್ಮೀಶನ ಕಾವ್ಯದಲ್ಲಿ ಓದುಗರನ್ನು ಒಲಿಸಿಕೊಳ್ಳುವ ಶೃಂಗಾರವು ಮೊದಲಿಂದ ಕಡೆಯವರೆಗೂ ಬಂದಿದೆ. ಸ್ತ್ರೀವರ್ಣನೆಗಳಲ್ಲಿ ಈತನಿಗೆ ಪೂರ್ವಕವಿಗಳಾದ ನೇಮಿಚಂದ್ರ-ಸೋಮರಾಜರು ಮಾರ್ಗದರ್ಶಕರೆಂದು ತೋರುತ್ತದೆ. ಕವಿ ಒಳ್ಳೆಯ ಸೌಂದರ್ಯೋಪಾಸಕನಾದುದರಿಂದ ಸೂಕ್ಷ್ಮವಾಗಿ ಪ್ರಕೃತಿ ವರ್ಣನೆಯನ್ನು ಮಾಡುವ ಜತೆಗೆ ಸ್ತ್ರೀವರ್ಣನೆಯನ್ನೂ ಅತಿಶಯವಾಗಿಯೇ ಮಾಡಿರುತ್ತಾನೆ. ಈ ಕಾವ್ಯವು ರಸಿಕರ ಹೃದಯವನ್ನು ಆಕರ್ಷಿಸಲು ಇದೂ ಒಂದು ಕಾರಣವಾಗಿರಬೇಕು. ಸುಧನ್ವ ಪ್ರಭಾವತಿಯರ ಸಮಾಗಮ, ಸೀತಾರಾಮರ ಪ್ರೇಮಾವಲೋಕನ, ವಿಷಯೆ ಚಂದ್ರಹಾಸರ ಸಮಾಗಮ, ರತ್ನಪುರದ ಸೂಳೆಗೇರಿಯ ವರ್ಣನೆ—ಮೊದಲಾದ ಸನ್ನಿವೇಶಗಳಲ್ಲಿ ಶೃಂಗಾರವು ಅತಿಶಯವಾಗಿಯೇ ಬಂದಿದೆ. ಈಗಿನ ಕಾಲದ ಕೆಲವು ಮಂದಿ ಇಲ್ಲಿ ಶೃಂಗಾರವು ಅಧಿಕವಾಯ್ತೆಂದು ಹೇಳಿರುವರಾದರೂ, ಹಿಂದಿನ ಕಾಲದ ಜನರ ಅಭಿರುಚಿಗೆ ತಕ್ಕಂತೆ ಇಲ್ಲಿ ಕವಿ ಸ್ತ್ರೀವರ್ಣನೆಗಳನ್ನು ಮಾಡಿದ್ದಾನೆಂದು ನಾವು ತಿಳಿಯಬೇಕು. ಕಾಲ ಬದಲಾದಂತೆ ಸಮಾಜದ ಕಾವ್ಯಾಭಿರುಚಿಯೂ ಬದಲಾಯಿಸುವುದನ್ನು ನಾವು ಎಲ್ಲ ಸಾಹಿತ್ಯ ಚರಿತ್ರೆಯಲ್ಲಿಯೂ ಕಾಣಬಹುದು.

ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಹೇಳುವಂತೆ, "ಲಕ್ಷ್ಮೀಶನ ಕಾವ್ಯದಲ್ಲಿ ಸ್ತ್ರೀಪಾತ್ರಗಳು ಪುರುಷಪಾತ್ರಗಳಿ

ಗಿಂತ ವಿಶೇಷ ಮನೋಹರವಾಗಿವೆ. ಕವಿಯು ಸ್ತ್ರೀ ಪಾತ್ರರಚನೆಯಲ್ಲಿ ವಿಶೇಷ ಕೌಶಲವನ್ನು ತೋರಿದ್ದಾನೆ'' ಎಂಬುದು ಇಲ್ಲಿ ಗಮನಾರ್ಹವಾಗಿದೆ. ಜೈಮಿನಿ ಭಾರತದಲ್ಲಿ ರಸಿಕಳಾದ ಚತುರೆ ಸತ್ಯಭಾಮೆ, ವಕ್ರಳಾದ ಚಂಡಿ, ಸಾಧ್ವಿಯಾದ ಸೀತಾದೇವಿ, ಚಲಗಾರ್ತಿಯಾದ ಜ್ವಾಲೆ, ಸುಮಕೋಮಲೆಯಾದ ಪ್ರಭಾವತಿ, ಸ್ತ್ರೀ ರಾಜ್ಯದ ಒಡತಿ ಪ್ರಮೀಳೆ, ನಾಗಕನ್ನಿಕೆಯಾದ ಚಿತ್ರಾಂಗದ, ಭೋಗಾಕಾಂಕ್ಷಿಣಿಯಾದ ವಿಷಯೆ ಇತ್ಯಾದಿ ಪಾತ್ರಗಳು ಈ ಕಾವ್ಯದ ಸೌಂದರ್ಯವನ್ನೂ ಮಹತ್ವವನ್ನೂ ಹೆಚ್ಚಿಸಿವೆ. ಈ ಸ್ತ್ರೀ ಪಾತ್ರಗಳ ಸೃಷ್ಟಿಯಲ್ಲಿ ಕವಿಯು ತೋರಿಸಿರುವ ಪ್ರತಿಭೆಯೂ ಕೌಶಲ್ಯವೂ ಅಸಮಾನವಾಗಿವೆ.

ಒಟ್ಟಿನಲ್ಲಿ ಲಕ್ಷ್ಮೀಶನ ಶೈಲಿಯು ಪಂಪ ಭಾರತದ ನಾರಿಕೇಳಪಾಕದಂತೆ ಕಠಿಣವೂ ಅಲ್ಲ, ಕನಕದಾಸರ ನಳಚರಿತ್ರೆಯ ದ್ರಾಕ್ಷಾಪಾಕದಂತೆ ಸುಲಭವೂ ಅಲ್ಲ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಚಾಮರಸನ ಪ್ರಭುಲಿಂಗ ಲೀಲೆ, ರತ್ನಾಕರನ ಭರತೇಶವೈಭವ, ಕುಮಾರವ್ಯಾಸನ ಮತ್ತು ಕುಮಾರ ವಾಲ್ಮೀಕಿಯ ಭಾರತ—ರಾಮಾಯಣಗಳಂತೆ ಕದಳೀಪಾಕದಿಂದ ಕೂಡಿದೆ. ಸುಕೃತಶಾಲಿಯಾದ ಮಾನವನು ಪಡೆಯಬಹುದಾದ ಬ್ರಹ್ಮಾನಂದ, ಕಾಂತಾನಂದ, ಕಾವ್ಯಾನಂದ ಎಂಬ ಆನಂದ ತ್ರಯಗಳಲ್ಲಿ ಮಹಾಕವಿ ಲಕ್ಷ್ಮೀಶನು ನಮಗೆ ಒಳ್ಳೆಯ ಕಾವ್ಯಾನಂದವನ್ನು ಒದಗಿಸಿಕೊಟ್ಟು ಉಪಕಾರಮಾಡಿರುತ್ತಾನೆ.

ಲಕ್ಷ್ಮೀಶನು ಹೀಗೆ ಮಹಾ ಪ್ರತಿಭಾಶಾಲಿಯೆನಿಸಿದರೂ ಇವನ ಕಾವ್ಯದಲ್ಲಿಯೂ ಕೆಲವು ಲೋಪದೋಷಗಳುಂಟೆಂದು ವಿಮರ್ಶಕರು ಹೇಳುತ್ತಾರೆ. '' ಕಾವ್ಯಮಂ ನಡೆಸುವಾತಂ ರಸಾವೇಶಮರಹಾಲಸ್ಯ ವೆಡೆಗೊಳಲು ತಪ್ಪುಗುಮಲ್ಲದೆ ಕಾವ್ಯಕರ್ತೃ ತಪ್ಪುವನೆ ಒಂದೆರಡೆಡೆಯೊಳು.'' (ಹರಿಶ್ಚಂದ್ರ ಕಾವ್ಯ ಸಂಗ್ರಹ ೧–೫) ಎಂದು ಮಹಾಕವಿ ರಾಘವಾಂಕನು ಹೇಳುವಂತೆ ಕವಿಗಳು ರಸಾವೇಶ, ಮರಹು, ಆಲಸ್ಯ ಇವುಗಳಿಂದ ಒಂದೆರಡು ತಪ್ಪುಗಳನ್ನು ಮಾಡುವುದೂ ಉಂಟು. '' ಗೋವರ್ಧನಂಗೆ ಮೊಲೆಗೊಟ್ಟ ಪೂತನಿಯ ಪೊಲಾಯ್ತು'' (ಸಂ. ೨೧, ಪ. ೩) ಎಂದು ರಾಮದೂತರು ರಾಘವನ ಮುಂದೆ ಹೇಳಿದಂತೆ ಕವಿ ಚಿತ್ರಿಸಿದ್ದಾನೆ. ಇಲ್ಲಿ ಮುಂದೆ ಬರುವ ಕೃಷ್ಣಾವತಾರದ ಕಥೆ ಹಿಂದಣ ರಾಮಾವತಾರದ ಸಂದರ್ಭದಲ್ಲಿ ಹೇಳುವುದು ಉಚಿತವಲ್ಲವೆಂದೂ, ಇದು ಕವಿಯ ಮೈಮರವೆಯಿಂದ ಆಗಿರಬೇಕೆಂದೂ ವಿಮರ್ಶಕರು ಹೇಳುತ್ತಾರೆ. ಅನಂತರ ತಾಮ್ರಧ್ವಜನ ಪ್ರತಾಪಕ್ಕೆ ಶ್ರೀ ಕೃಷ್ಣಾರ್ಜುನರು ಸೋತು ಮುಂದೇನುಗತಿಯೆಂದು ಯೋಚಿಸುವ ಸನ್ನಿವೇಶದಲ್ಲಿ, ಅವನ ರತ್ನಪುರದ ಕೇರಿ ಕೇರಿಗಳಲ್ಲಿ ಹೋಗಿ, ವೇಶ್ಯಾಸ್ತ್ರೀಯರ ಮತ್ತು ವಿಟಪುರುಷರ ವೈಭವಗಳನ್ನು ನೋಡುತ್ತಾ ಹೋದರೆಂದು ಹೇಳುವ ಸಂದರ್ಭವು ಅಷ್ಟು ಉಚಿತವಾದುದಲ್ಲವೆಂದು ವಿಮರ್ಶಕರು ಹೇಳುತ್ತಾರೆ. ''ಇರ್ದಪುದೆ ನಿರ್ಗುಣಮುಂ ನಿರ್ದೋಷಮುಂ ಎನಿಪ

ವಸ್ತುಲೋಕದೊಳ್'' ಎಂಬ ಅಭಿನವಕಾಳಿದಾಸ ಬಸವಪ್ಪಶಾಸ್ತ್ರಿಗಳ ಮಾತು ಇಲ್ಲಿ ನಮಗೆ ಸ್ಮರಣಾರ್ಹವಾಗಿದೆ (ದಮಯಂತೀ ಸ್ವಯಂವರ, ಪೀಠಿಕಾಸಂಧಿ, ಪ. ೨೫). ಹಂಸಕ್ಷೀರ ನ್ಯಾಯದಂತೆ ಗುಣವನ್ನು ಸ್ವೀಕರಿಸುವುದೇ ಸಹೃದಯರ ಮಾರ್ಗವಾಗಿದೆ. ಕನ್ನಡ ಜೈಮಿನಿಯು ಜನಪ್ರಿಯವಾಗಲು ಇದರಲ್ಲಿನ ಸಂಭಾಷಣಾ ವೈಖರಿಯೂ ಒಂದು ಕಾರಣವಾಗಿರಬೇಕು. ಈ ವಿಷಯದಲ್ಲಿ ಲಕ್ಷ್ಮೀಶನು ಪ್ರಾಚೀನ ಕವಿಗಳಾದ ರನ್ನ, ರಾಘವಾಂಕ ಮತ್ತು ಕುಮಾರವ್ಯಾಸರಿಂದ ಹೆಚ್ಚಿನ ಉಪಕಾರವನ್ನು ಪಡೆದಂತೆ ತೋರುತ್ತದೆ. ಈ ಜೈಮಿನಿ ಭಾರತದ ಕಥೆಗಳು ಅಲ್ಲಿಂದೀಚೆಗೆ ಅನೇಕ ನಾಟಕಗಳಾಗಿ ಪರಿವರ್ತಿಸಲ್ಪಟ್ಟಿವೆ. ಉದಾಹರಣೆಗೆ.—ಪ್ರಮೀಳಾರ್ಜುನೀಯ, ಸುಧನ್ವಾರ್ಜುನರ ಕಾಳಗ, ಬಭ್ರುವಾಹನಾರ್ಜುನರ ಕಾಳಗ, ಚಂದ್ರಹಾಸ ನಾಟಕ, ಕುಶಲವರ ಕಾಳಗ ಇತ್ಯಾದಿ ನಾಟಕಗಳು ಜನರಲ್ಲಿ ಹೆಚ್ಚು ಬಳಕೆಯಲ್ಲಿರುವುದನ್ನು ನೆನಪಿಗೆ ತಂದುಕೊಳ್ಳಬಹುದು. ಈ ಎಲ್ಲ ನಾಟಕಗಳ ಮೇಲೆಯೂ ಲಕ್ಷ್ಮೀಶನ ಪ್ರಭಾವ ಬಿದ್ದಿದೆ. ಇದಕ್ಕೆ ಈ ಕಾವ್ಯದಲ್ಲಿರುವ ನಾಟಕೀಯತೆಯೇ ಮುಖ್ಯ ಕಾರಣ. ಸೋಲೂರು ಹುಚ್ಚಕವಿ ಎಂಬಾತನು ಜೈಮಿನಿ ಭಾರತವನ್ನು 'ಯಾಗ ಚರಿತ್ರೆ' ಎಂಬ ಹೆಸರಿನಿಂದ ಯಕ್ಷಗಾನವಾಗಿ ಬರೆದಿರುವನು.

ಜೈಮಿನಿ ಭಾರತದ ಕಥೆಯನ್ನು ವೈಶಂಪಾಯನನ ಶಿಷ್ಯನಾದ ಜೈಮಿನಿಯು ಮಹಾರಾಜ ಜನಮೇಜಯನಿಗೆ ಹೇಳಿದ್ದಾನೆ. ಈ ಮಹಾಕಾವ್ಯದಲ್ಲಿ ಬರುವ ಕೆಲವು ಉಪಕಥೆಗಳನ್ನು ಬೇರೆಬೇರೆಯವರೂ ಹೇಳಿದ್ದಾರೆ. ಉದಾಹರಣೆಗೆ, ನಾರದನು ಚಂದ್ರಹಾಸನ ಕಥೆಯನ್ನು ಅರ್ಜುನನಿಗೆ ಹೇಳುತ್ತಾನೆ. ಚಂಡಿಯ ಕಥೆಯನ್ನು ಸೌಭರಿ ಮುನಿಯು ಹೇಳುತ್ತಾನೆ. ಕೆಲವು ಕಥೆಗಳು ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾಗಿರುವ ತಮಿಳು ಪೆರಿಯ ಪುರಾಣದ ಶಿವಭಕ್ತರ ಕಥೆಗಳನ್ನು ನೆನಪಿಗೆ ತರುತ್ತವೆ. ಹಂಸಧ್ವಜನು ಸುಧನ್ವನನ್ನು ಕಾಯುವ ಎಣ್ಣೆಯಲ್ಲಿ ಬೇಯಿಸಿದುದು, ಮಯೂರಧ್ವಜನು ಬ್ರಾಹ್ಮಣನಾಗಿ ಬಂದ ಶ್ರೀಕೃಷ್ಣನಿಗೆ ತನ್ನ ದೇಹವನ್ನೇ ಕೊಯ್ದು ಕೊಟ್ಟುದು ಈ ಕಥೆಗಳನ್ನು ನಾವಿಲ್ಲಿ ನಿದರ್ಶನವಾಗಿ ನೋಡಬಹುದು.

ಮಹಾಭಾರತವನ್ನು ಓದಿದ ಜನ ಜೈಮಿನಿ ಭಾರತವನ್ನು ಓದಿದಾಗ ಒಂದು ದೊಡ್ಡ ವ್ಯತ್ಯಾಸವನ್ನು ಕಾಣುತ್ತಾರೆ. ಭಾರತದಲ್ಲಿ ಕೃಷ್ಣಾರ್ಜುನರು ಅತ್ಯಂತ ಪ್ರತಾಪ ಮತ್ತು ಪ್ರಭಾವಶಾಲಿಗಳಾಗಿ ಕಂಗೊಳಿಸಿದ್ದಾರೆ. ಆದರೆ, ಜೈಮಿನಿಯಲ್ಲಿ ಈ ಉಭಯರ ಶಕ್ತಿ ಸಾಮರ್ಥ್ಯಗಳೂ ಕುಂದಿದಂತೆ ಕಂಡುಬರುತ್ತದೆ. ಈ ಅಶ್ವಮೇಧದ ಕಥೆಯಲ್ಲಿ ಅರ್ಜುನನು ಜಯಿಸಿರುವುದು ತುಂಬಾ ಸ್ವಲ್ಪ; ಸೋತಿರುವುದು ಬಹಳ. ಅಲ್ಲಾಗಿರುವ ಗೆಲುವೂ ಶ್ರೀಕೃಷ್ಣನ ಅವತಾರ ಮಹಾತ್ಮ್ಯದಿಂದ. ಅರ್ಜುನನು ಸುಧನ್ವ–ಸುರಥರ ಕೂಡೆ ಯುದ್ಧಮಾಡಿದಾಗ ಶ್ರೀಕೃಷ್ಣನ ಸಹಾಯವಿಲ್ಲದೆ ಅವರನ್ನು ಗೆಲ್ಲುವುದು ಅಸಾಧ್ಯವಾಗಿದೆ. ತಾಮ್ರಧ್ವಜನು

ಕೃಷ್ಣಾರ್ಜುನರನ್ನು ಮೂರ್ಛೆ ಕೆಡವಿದ್ದಾನೆ. ಚಂದ್ರಹಾಸನು ಶ್ರೀಕೃಷ್ಣನ ದಾಕ್ಷಿಣ್ಯಕ್ಕಾಗಿ ಅರ್ಜುನನನ್ನು ಗೌರವಿಸಿದ್ದಾನೆ. ಬಭ್ರುವಾಹನನು ಅರ್ಜುನನನ್ನು ಕಣ್ ಕಣ್ ಬಿಡಿಸಿ ಕಡೆಗೆ ಅರ್ಜುನನ ತಲೆಯನ್ನು ಕತ್ತರಿಸಿದ್ದಾನೆ. ಈ ಎಲ್ಲ ಸನ್ನಿವೇಶಗಳನ್ನೂ ಓದಿದಾಗ ಮಹಾಭಾರತದ ಅರ್ಜುನನ ಸಾಮರ್ಥ್ಯ ಜೈಮಿನಿಯ ಅರ್ಜುನನಲ್ಲಿ ಕಂಡುಬರುತ್ತಿಲ್ಲವಲ್ಲಾ ಅನ್ನಿಸುತ್ತದೆ.

ಮತ್ತೆ ಕೆಲವು ವಿಮರ್ಶಕರ ಅಭಿಪ್ರಾಯದಂತೆ ವಿಜಯನಗರ ಸಾಮ್ರಾಜ್ಯದಲ್ಲಿ ಆಳುತ್ತಿದ್ದ ಶ್ರೀಕೃಷ್ಣದೇವರಾಯನನ್ನು (೧೫೦೯–೩೦) ಗುರಿಯನ್ನಾಗಿ ಇಟ್ಟುಕೊಂಡು ಕವಿಯು ಜೈಮಿನಿ ಭಾರತವನ್ನು ಶ್ರೀಕೃಷ್ಣ ಚರಿತಾಮೃತವನ್ನಾಗಿ ಮಾಡಿದ್ದಾನೆಂದೂ, ಅಲ್ಲಿ ವರ್ಣಿಸಲ್ಪಟ್ಟಿರುವ ಭದ್ರಾವತಿಯ ವೈಭವವು ವಿಜಯನಗರದ ವೈಭವವೆಂದೂ ತಿಳಿದುಬಂದಿದೆ. ಶ್ರೀಕೃಷ್ಣರಾಯನ ರಾಯಚೂರು ವಿಜಯ ಮೊದಲಾದುವುಗಳನ್ನು ಕಂಡು ಕೇಳಿ ಕವಿಯು ಸ್ಫೂರ್ತಿಗೊಂಡು ಶ್ರೀಕೃಷ್ಣನ ವ್ಯಾಜದಿಂದ ಕನ್ನಡ ರಾಜನಾದ ಶ್ರೀಕೃಷ್ಣದೇವರಾಯನನ್ನು ಅಭಿವರ್ಣಿಸಿರುವನೆಂಬ ವಿಷಯ ಪರಿಶೀಲನಾರ್ಹವಾಗಿದೆ. ಕೃಷ್ಣದೇವರಾಯನು ಪರಮ ವೈಷ್ಣವನಾಗಿಯೂ, ದೊರೆಯಾಗಿಯೂ, ವಿಷ್ಣುವಿನ ಅಂಶೀಭೂತನಾಗಿಯೂ ಇದ್ದುದರಿಂದ ವಿಷ್ಣುಭಕ್ತನಾದ ಕವಿಗೆ ಆ ರಾಜನು ಶ್ರೀಕೃಷ್ಣಾಂಶನಾಗಿಯೇ ಕಂಡುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ತಮ್ಮ ರಾಜರನ್ನು ಕವಿಗಳು ಅಭಿವರ್ಣಿಸುವುದನ್ನು ಪಂಪ ರನ್ನರ ಕಾವ್ಯಗಳಲ್ಲಿ ನಾವು ಕಂಡಿರುತ್ತೇವೆ.

ಕಾವ್ಯವು ರಸಋಷಿಗಳಾದ ಕವಿಗಳ ಹೃದಯದ ಭಾಷೆ. ರಸವತ್ತಾದ ವಾಕ್ಯಗಳ ಸರಣಿಯೇ 'ಕಾವ್ಯ' ಎಂದು ಆಲಂಕಾರಿಕರು ಹೇಳಿದ್ದಾರೆ. ವಾಚ್ಯಾರ್ಥಕ್ಕಿಂತ ವ್ಯಂಗ್ಯವು ಕಾವ್ಯದ ಸ್ವಾರಸ್ಯವನ್ನು ಹೆಚ್ಚಿಸುತ್ತದೆ ಎಂಬುದು ರಸಿಕರ ಅಭಿಪ್ರಾಯ. ಕಾವ್ಯದ ಜೀವವು ರಸ; ಕಾವ್ಯದ ಒಡಲು ಭಾವ; ಅರ್ಥವೇ ಅವಯವ; ಶಬ್ದ ವಿರಸವೇ ನುಡಿ; ಅಲಂಕಾರವೇ ತೊಡಿಗೆ; ಸುಲಕ್ಷಣವೇ ಕಾವ್ಯಲಕ್ಷಣ ; ವಿಮಳ ಪದನ್ಯಾಸ ನಡೆ; ರೀತಿಯೇ ಸುಕುಮಾರತೆ; ರಸಿಕತನವೇ ಸುಳಿ; ಸುಖವೇ ನಿಲಯ—"ಇಂತಪ್ಪ ಪೊಸಕಾವ್ಯ ಕನ್ನಿಕೆ" ಯು ಭಗವಂತನಿಗೆ ಅರ್ಪಿಸಲು ಅರ್ಹಳು ಎಂದು ಕವಿ ರಾಘವಾಂಕನು (ಹರಿಶ್ಚಂದ್ರ ಕಾವ್ಯ ೧–೩೩) ಹೇಳಿದ್ದಾನೆ. ಲಕ್ಷ್ಮೀಶನೂ ಇಂತಹ "ಪೊಸಕಾವ್ಯಕನ್ನಿಕೆ" ಯನ್ನು ಸೃಷ್ಟಿಸಿ,

"ತೊಳಗುವ ಸುವರ್ಣಭೂಷಣದಿಂದೆ ಸೇರಿಸಿದ ।
ಲಲಿತ ಮುಕ್ತಾಹಾರದಿಂದೆ ಪರಿರಂಜಿಸುವ !
ಪಲವಲಂಕಾರಂಗಳಡಿಡ ಚೆಲ್ವಿನ ದೇವಪುರದ ಲಕ್ಷ್ಮೀಕಾಂತನ ॥
'ವಿಲಸಿತ ಕೃತಿಲಲನೆ' ಮೃದುಪದವಿಲಾಸದಿಂ ।
ಸಲೆಸೊಗಸಲೆಡಿಗಡಿಗೆ ನಡೆಯಲ್ಕೆ
ಚಿತ್ತಂಗಳೊಲಿದೆರಗದಿರ್ದಪುದೆ ಧರೆಯೊಳಗೆ
ರಸಿಕರಾಗಿರ್ದ ಭಾವುಕನಿಕರದ.................. ॥
(ಜೈಮಿನಿ ಭಾರತ ೩೪—೪೪)

ಈ ಪದ್ಯದಲ್ಲಿ ತನ್ನ ಕಾವ್ಯವು 'ವಿಲಸಿತ ಕೃತಿಲಲನೆ' ಎಂದು ಹೇಳಿ ಆ ಕಾವ್ಯ ಕನ್ನಿಕೆಯನ್ನು ಅನುರೂಪನಾದ ತನ್ನ ಇಷ್ಟದೇವತೆ ದೇವಪುರದ ಲಕ್ಷ್ಮೀಶನಿಗೆ ಒಪ್ಪಿಸಿದ್ದಾನೆ ; ಹಾಗೂ ಅವನ ಅನುಗ್ರಹವನ್ನು ಸಂಪೂರ್ಣವಾಗಿ ಆರ್ಜಿಸಿದ್ದಾನೆ. ಇಂತಹ ಸಾಹಸವು ಮಹಾಕವಿಗಳಿಗೆ ಮಾತ್ರ ಸಾಧ್ಯವಾದುದು. 'ನಿಗ್ರಹಾನುಗ್ರಹ ಸಮರ್ಥರಲ್ಲವೆ ಕವಿಗಳ್' ಎಂದು ನೇಮಿಚಂದ್ರನು ಹೇಳಿಲ್ಲವೆ ?

ಕವಿಗಳಲ್ಲಿ ವಾಗ್ವಶ್ಯರು ಮತ್ತು ವಶ್ಯವಾಕ್ಕುಗಳು ಎಂದು ಎರಡು ಬಗೆಯು ವರಿದ್ದಾರೆ. ವಾಗ್ವಶ್ಯರನ್ನು ಸಾಮಾನ್ಯ ಕವಿಗಳೆಂದೂ, ವಶ್ಯವಾಕ್ಕುಗಳನ್ನು ಮಹಾ ಕವಿಗಳೆಂದೂ ವಿದ್ವಾಂಸರು ಕರೆದಿದ್ದಾರೆ. ಕನ್ನಡ ಜೈಮಿನಿ ಭಾರತದಲ್ಲಿ ಬರುವ ಯತಿ, ಗಣ, ಪ್ರಾಸ, ಅನುಪ್ರಾಸ, ಯಮಕ ಮೊದಲಾದ ಕಾವ್ಯಾಂಶಗಳನ್ನೂ, ಶ್ಲೇಷ, ಉತ್ಪ್ರೇಕ್ಷೆ, ಉಲ್ಲೇಖ, ಉಪಮೆ, ರೂಪಕ, ದೃಷ್ಟಾಂತ, ಸ್ವಭಾವೋಕ್ತಿ, ಅತಿಶಯೋಕ್ತಿ ಮೊದಲಾದ ಅಲಂಕಾರಗಳನ್ನೂ ನಾವು ಪರಿಶೀಲಿಸಿದಾಗ ಲಕ್ಷ್ಮೀಶನನ್ನು ವಶ್ಯವಾಕ್ಕಾದ ಮಹಾ ಕವಿಯೆಂದು ಧಾರಾಳವಾಗಿ ಒಪ್ಪಿಕೊಳ್ಳ ಬಹುದು. ಇವನ ಮಹಾ ಕಾವ್ಯವು ಕಠಿಣವಾದ ನಾರಿಕೇಳಪಾಕವನ್ನೂ, ಅತಿ ಸುಲಭವಾದ ದ್ರಾಕ್ಷಾಪಾಕವನ್ನೂ ಉಳಿದು, ಸುಮಧುರವಾದ ಕದಳೀಪಾಕದಲ್ಲಿ ವಿರಚಿತವಾಗಿರುವುದರಿಂದಲೂ, ಕವಿಯ ಪ್ರತಿಭೆ, ಪಾಂಡಿತ್ಯ, ದೈವಭಕ್ತಿ, ಲೋಕಾನುಭವ, ಉದಾರಭಾವನೆಗಳ ಫಲವಾಗಿ ಕಾವ್ಯವು ಪ್ರಾಸಾದಿಕ ಶೈಲಿ ಯಿಂದ ಕೂಡಿರುವುದರಿಂದಲೂ ಈ ಕಾವ್ಯವು ವಾಚಕರಿಗೂ ಶ್ರೋತೃಗಳಿಗೂ ಅಮೃತಪಾನಮಾಡಿದಂತೆ ಸಂತೋಷವನ್ನುಂಟುಮಾಡುತ್ತದೆ.

ಸಾಹಿತ್ಯ ಪ್ರಪಂಚದ ಪರಿಚಯವುಳ್ಳವರಿಗೆ ಒಬ್ಬೊಬ್ಬ ಮಹಾಕವಿಯು ಒಂದೊಂದು ವಿಚಾರದಲ್ಲಿ ಗಣ್ಯತೆಯನ್ನು ಪಡೆದಿರುವನೆಂಬುದು ತಿಳಿದ ವಿಚಾರ. ಸಂಸ್ಕೃತ ಕವಿಗಳಲ್ಲಿ ಭಾಸನು ವಿನೂತನ ಪ್ರತಿಭೆಗೂ, ಕಾಳಿದಾಸನು ರಸಜ್ಞ ತೆಗೂ, ಬಾಣಭಟ್ಟನು ವರ್ಣನೆಗಳಿಗೂ, ಭವಭೂತಿಯು ಗಂಭೀರಶೈಲಿಗೂ ಹೆಸರಾಗಿರುವರೆಂಬುದು ಪಂಡಿತರಿಗೆ ತಿಳಿದಿರುವ ಸಂಗತಿ. ಅಂತೆಯೇ ಕನ್ನಡ ವಾಙ್ಮಯದಲ್ಲಿ ಆದಿ ಪಂಪನು ಗಂಭೀರ ಭಾವನೆಗಳಿಗೂ, ಕವಿಚಕ್ರವರ್ತಿ ರನ್ನನು ರಸನಿರೂಪಣೆಗೂ, ಅದರಲ್ಲಿಯೂ ವೀರರಸ ಪ್ರತಿಪಾದನೆಗೂ, ಕನ್ನಡ ಜಾಣ ಹರಿಹರನು ಭಕ್ತಿರಸ ಪ್ರತಿಪಾದನೆಗೂ, ರಾಘವಾಂಕನು ಅನ್ಯಾದೃಶ ಕರುಣ ರಸಕ್ಕೂ, ಷಡಕ್ಷರದೇವನು ವಿಗಿಲಾದ ಶೃಂಗಾರ ವಿಲಾಸಗಳಿಗೂ, ಕುಮಾರ ವ್ಯಾಸನು ಸುಂದರ ಪಾತ್ರಸೃಷ್ಟಿಗೂ ಪ್ರಾಮುಖ್ಯತೆಯನ್ನು ಪಡೆದಿರುವರೆಂಬ ವಿಚಾರ ಪ್ರಖ್ಯಾತವಾದುದು. ಆದರೆ,ಮಹಾಕವಿ ಲಕ್ಷ್ಮೀಶನಲ್ಲಿ ಈ ಮೇಲೆ ಕಂಡ ಎಲ್ಲ ಸದಂಶಗಳೂ ಒಟ್ಟುಗೂಡಿರುವುದು ಆಶ್ಚರ್ಯಕರವೂ ಅನ್ಯಾದೃಶವೂ ಆದ ಸಂಗತಿ ಯಾಗಿದೆ. ಈ ವೈಶಿಷ್ಟ್ಯದಿಂದಲೇ ಕವಿಯು ಹೆಚ್ಚು ಜನಪ್ರಿಯನಾಗಿದ್ದಾನೆ. ಕನ್ನಡ ಜೈಮಿನಿಯು ಪಂಪ ಭಾರತದಂತೆ ಗಂಭೀರ ಶೈಲಿಯಿಂದ ಕೂಡಿಯೂ,

ಗದಾಯುದ್ಧದಂತೆ ವೀರರಸ ಪ್ರಚೋದಕವಾಗಿಯೂ, ಗಿರಿಜಾಕಲ್ಯಾಣದಂತೆ ಭಕ್ತಿರಸ ಬಂಧುರವಾಗಿಯೂ, ಹರಿಶ್ಚಂದ್ರ ಕಾವ್ಯದಂತೆ ಕೋಡಿವರಿವ ಕರುಣರಸ ದಿಂದ ಕೂಡಿಯೂ, ಕನ್ನಡ ಭಾರತದಂತೆ ಸ್ವಾರಸ್ಯವಾದ ಪಾತ್ರಸೃಷ್ಟಿಭರಿತವಾ ಗಿಯೂ, ಷಡಕ್ಷರದೇವನ ರಾಜಶೇಖರದಂತೆ ಶೃಂಗಾರ ವಿಲಾಸಮಯವಾಗಿಯೂ ಕಂಗೊಳಿಸುತ್ತಿದೆ. ಜೇನುತುಪ್ಪದಲ್ಲಿ ಎಲ್ಲ ಹೂವುಗಳ ರಸವೂ ಒಟ್ಟುಗೂಡಿರು ವಂತೆ ಕನ್ನಡ ಜೈಮಿನಿ ಭಾರತದಲ್ಲಿ ಎಲ್ಲ ರಸಗಳೂ, ಎಲ್ಲ ಭಾವಗಳೂ, ಎಲ್ಲ ಗುಣಗಳೂ ಒಟ್ಟುಗೂಡಿವೆ. ಆದುದರಿಂದಲೇ ಕನ್ನಡ ಜೈಮಿನಿಯು ಸಹೃದಯರ ಹಾಗೂ ಪಂಡಿತರ ಕರ್ಣಕಮನೀಯ ಕಾವ್ಯವೆನಿಸಿದೆ.

ಲಕ್ಷ್ಮೀಶನು ಕನ್ನಡ–ಸಂಸ್ಕೃತ ಭಾಷೆಗಳೆರಡರಲ್ಲಿಯೂ ಅದ್ವಿತೀಯ ಪಂಡಿತನಾಗಿದ್ದನು. ಕನ್ನಡ ಭಾಷೆಯ ಬೆಡಗು–ಬಿನ್ನಾಣಗಳನ್ನೂ, ಸಂಸ್ಕೃತ ಸಾಹಿತ್ಯದ ಗಾಂಭೀರ್ಯ–ಮಾಧುರ್ಯಗಳನ್ನೂ ಚೆನ್ನಾಗಿ ಬಲ್ಲವನಾಗಿದ್ದನು. ಅವನ ಕಾವ್ಯದಲ್ಲಿ ಪ್ರಾಸಾದಿಕ ಗುಣವೇ ಅಲ್ಲದೆ ಪಾಂಡಿತ್ಯದ ಪ್ರಭಾವವೂ ಎದ್ದು ಕಾಣು ತ್ತದೆ. ಅವನು ಉಭಯ ಕವಿತಾವಿಶಾರದನಷ್ಟೇ ಅಲ್ಲ; ವಿದ್ವತ್ಕವಿಯೂ ಅಹುದು. ಒಬ್ಬ ಸುಭಾಷಿತಕಾರನು ಹೇಳುವಂತೆ, “ವಿದ್ವತ್ಕವಯಃ ಕವಯಃ। ಕೇವಲ ಕವಯಸ್ತು ಕೇವಲಂ ಕಪಯಃ॥ ಕುಲಜಾ ಜಾಯಾ ಜಾಯಾ। ಕೇವಲ ಜಾಯಾತು ಕೇವಲಂ ಮಾಯಾ॥”—ಅಂದರೆ ‘ವಿದ್ವತ್ತಿನಿಂದ ಕೂಡಿದ ಕವಿಗಳೇ ನಿಜವಾದ ಕವಿಗಳು. ಏನೋ ಕಪಿಗಳಾದವರು ಕೇವಲ ಕಪಿಗಳೇ ಸರಿ. ಸತ್ಕುಲ ಪ್ರಸೂತಳಾದ ಪತ್ನಿಯೇ ನಿಜವಾದ ಪತ್ನಿ. ಕೇವಲ ಪತ್ನಿಯಾದವಳು ಶುದ್ಧ ಮಾಯೆ’ ಎಂಬಂತೆ ಸಂಸ್ಕೃತ ಮತ್ತು ಪಾಂಡಿತ್ಯಗಳೆರಡರಿಂದ ಕೂಡಿ ದವರು ಮಹಾಕವಿಗಳೆನಿಸಿಕೊಳ್ಳುತ್ತಾರೆ. ದೇಶಾಟನ, ಪಂಡಿತ ಭಾಷಣ, ಪ್ರಾಚೀನ ಕಾವ್ಯಪಠಣ ಇವುಗಳಿಂದ ಕವಿಯ ಜ್ಞಾನವು ವಿಕಾಸಗೊಳ್ಳುತ್ತದೆ. ಈ ಪಾಂಡಿತ್ಯಕ್ಕೆ ಭಗವಂತನ ಅನುಗ್ರಹವೂ ಕೂಡಿದರೆ ಚಿನ್ನಕ್ಕೆ ಸುವಾಸನೆ ಬಂದಂತೆ; ಹಾಲಿಗೆ ಸಕ್ಕರೆ ಸೇರಿದಂತೆ, ಕವಿಯ ಕಾವ್ಯ ಲೋಕೋತ್ತರವೆನಿಸು ತ್ತದೆ. ಲಕ್ಷ್ಮೀಶನು ಇಂತಹ ಉನ್ನತಮಟ್ಟದ ಕವಿ ಎನಿಸಿದ್ದಾನೆ. ಅವನ ಕನ್ನಡ ಭಾಷಾ ಪಾಂಡಿತ್ಯವನ್ನು ಇಲ್ಲಿ ಕಾಣಬಹುದು.

ಕೊಡೆಯೆಂಬರಾತ ಪತ್ರವನುದರ ದೇಶಮಂ।
ಪೊಡೆಯೆಂಬರೊಲದು ಮಂಥನವನೆಸೆಗೆಂಬುದಂ।
ಕಡೆಯೆಂಬರಾರಡಿಯ ನಳಿಯೆಂಬರುದಕಪ್ರವಾಹಮಂ ತೊರೆಯೆಂಬರು॥
ಮಡಿಯೆಂಬರಂಬರದ ಧೌತಮಂ ಕಬರಿಯಂ।
ಮುಡಿಯೆಂಬರೆಡವಿಡದೆ ಮುಸುಕಿರ್ದ ಮೇಘಮಂ।
ಜಡಿಯೆಂಬರುರುಶಿಲೆಯ ನರೆಯೆಂಬರಲ್ಲದಿವನುಡಿಯುರವನಾಳ್ವಬಳೆಯೊಳು॥

(ಸಂ. ೨. ಪ. ೬.)

ಈ ಮೇಲಿನ ಪದ್ಯದಲ್ಲಿ ಕೊಡೆ, ಪೊಡೆ, ಕಡೆ, ಅಳಿ, ತೊರೆ, ಮಡಿ, ಮುಡಿ, ಜಡಿ, ಅರೆ—ಎಂಬ ಕನ್ನಡ ಶಬ್ದಗಳನ್ನು ಎರಡರ್ಥ ಬರುವಂತೆ ಕವಿ ಹೇಳಿದ್ದಾನೆ. ಈ ಶಬ್ದಗಳಿಗೆ ಒಂದು ವಿಧವಾದ ಕೆಟ್ಟ ಅರ್ಥಗಳಿದ್ದರೂ ಧರ್ಮರಾಜನ ರಾಜ್ಯದ ಜನರು ಈ ಶಬ್ದಗಳನ್ನು ಒಳ್ಳೆಯ ಅರ್ಥದಲ್ಲಿಯೇ ಬಳಸುತ್ತಾರೆ ಎಂದು ಕವಿ ಹೇಳಿದ್ದಾನೆ. ಇದರಿಂದ ಲಕ್ಷ್ಮೀಶನು ಕನ್ನಡ ಜಾಣನೆಂಬುದು ಸಿದ್ಧವಾಗುತ್ತದೆ.

ಲವನು ಸೂರ್ಯನನ್ನು ಸ್ತೋತ್ರಮಾಡುವ ಮತ್ತೊಂದು ಸಂದರ್ಭದಲ್ಲಿ ಕನ್ನಡ ಛಂದಸ್ಸಾದ ಷಟ್ಪದಿಯಲ್ಲಿ ಶುದ್ಧ ಸಂಸ್ಕೃತ ಭಾಷೆಯಲ್ಲಿ ಪದ್ಯವನ್ನು ಬರೆದು ತನ್ನ ಗೀರ್ವಾಣ ಭಾಷಾ ಪಾಂಡಿತ್ಯವನ್ನು ಕವಿಯು ವ್ಯಕ್ತಪಡಿಸಿದ್ದಾನೆ. ಅದನ್ನಿಲ್ಲಿ ನೋಡಬಹುದು.

ಮಿತ್ರಾಯ ಸೂರ್ಯಾಯ ಹಂಸಾಯ ಪೂಷ್ಣೇ ನ ।
ಏತ್ರೇ ಜಗಚ್ಚಕ್ಷುಷೇ ಚಂಡಘೃಣಯೇ ಪ ।
ಏತ್ರಾಯ ಪಿಂಗಾಯ ಪುರುಷಾಯ ಭಾನವೇ ಜ್ಯೋತಿಷೇ ಭಾಸ್ಕರಾಯ ॥
ನಕ್ಷತ್ರೈಕ ರೂಪಾಯ ವಿಮಲಾಯ ವಿಶ್ವರ ।
ಕ್ಷಿತ್ರೇ ಸಹಸ್ರ ಕಿರಣಾಯ ರವಯೇ ಮಂದ ।
ಪಿತ್ರೇ ದಿವಾಕರಾಯ ಬ್ರಹ್ಮವಿಷ್ಣು ರುದ್ರಾತ್ಮನೇ ತುಭ್ಯಂ ನಮಃ ॥ (ಸಂ. ೨೦. ಪ. ೪೦.)

ಈ ಮೇಲಿನ ಪದ್ಯದಲ್ಲಿ ಕವಿಯು ಕನ್ನಡದಷ್ಟೇ ಧಾರಾಳವಾಗಿ ಸಂಸ್ಕೃತದಲ್ಲಿಯೂ ಕವಿತೆಯನ್ನು ಬರೆಯಬಲ್ಲನೆಂಬುದಕ್ಕೆ ನಿದರ್ಶನವಿದೆ. ಷಡಕ್ಷರದೇವ ಮೊದಲಾದ ಉದ್ದಾಮ ಕವಿಗಳ ರಾಜಶೇಖರ ವಿಳಾಸ ಮೊದಲಾದ ಕಾವ್ಯಗಳಲ್ಲಿ ಇಂತಹ ಉಭಯ ಭಾಷಾಪಾಂಡಿತ್ಯ ಪೂರ್ಣ ಕವಿತಾ ಪ್ರಯೋಗಗಳನ್ನು ನಾವು ಕಾಣಬಹುದು.

ಕವಿಚೈತ್ರವನಚೂತನಾದ ಲಕ್ಷ್ಮೀಶನು ಉಚಿತ ಪದಪ್ರಯೋಗಗಳಿಗೂ, ಬಿಗಿಯಾದ ಪ್ರಾಸ, ಮಧುರವಾದ ಯತಿಗಳ ಹೊಂದಾಣಿಕೆಗೂ ಹೆಸರಾಗಿದ್ದಾನೆ. ಚಂದ್ರಹಾಸನ ಕಥೆಯಲ್ಲಿ ರಾಜಪುತ್ರಿ—ಮಂತ್ರಿಪುತ್ರಿಯರ ಜತೆಯಲ್ಲಿ ಬಂದ ತರುಣಿಯರು "ಕಳೆದುಳಿದ ರನ್ನೆಯರ್" (ಸಂ. ೩೦, ಪ. ೩) ಎಂದು ಹೇಳುವಲ್ಲಿ ವನಕ್ಕೆ ಬಂದ ಆ ತರುಣಿಯರು ಬಾಲ್ಯವನ್ನು ಕಳೆದು, ವೃದ್ಧತ್ವವನ್ನುಳಿದು ಕೇವಲ ಯೌವನದಿಂದ ಅಥವಾ ಏರುಂಜವ್ವನದಿಂದ ಕೂಡಿದ್ದರೆಂಬುದು ಕವಿಯ ತಾತ್ಪರ್ಯ. ಧರ್ಮರಾಜನು ವೇದವ್ಯಾಸರಲ್ಲಿ ಮಾತನಾಡುವಾಗ "ರಾಜಕುಲದ ನೃಪರ ಸಾಧುಚಾರಿತ್ರಮೆನ್ನಿಂದೆ ಸೊಗಡಾಗದಂತೆ ಆದರಿಸಿ ನೀವೆ ಕಾರುಣ್ಯದಿ ಮಾಳ್ಪುದು ಶುಭೋದಯವನು." (ಸಂ. ೨, ಪ. ೨೪) ಎಂದು ಹೇಳಲಾಗಿದೆ. ಇಲ್ಲಿ ಬಂದಿರುವ "ಸೊಗಡು" ಎಂಬ ಶಬ್ದವು ಆ

ಸಂದರ್ಭಕ್ಕೆ ಅತ್ಯಂತ ಉಚಿತವಾಗಿದೆ. ಇಂತಹ ನೂರಾರು ಉಚಿತ ಪದ ಪ್ರಯೋಗಗಳನ್ನು ನಾವು ಈ ಕಾವ್ಯದಲ್ಲಿ ಓದಬಹುದು.

ದುಷ್ಟಬುದ್ಧಿಯು ತನ್ನ ಮಗ ಮದನನಿಗೆ ಬರೆದ ಪತ್ರದಲ್ಲಿ "ಮಹಾಹಿತ" (ಮಹಾಅಹಿತ) "ಸ ರ್ವ ಥಾ ಮಿ ತ್ರ ನ ಪ್ಪಂ" (ಸರ್ವಥಾ–ಅಮಿತ್ರನಪ್ಪಂ) "ಸಾಮಾನ್ಯದವನಲ್ಲ" (ಅಸಾಧಾರಣ ಪುರುಷ, ಮುಂದೆ ಇವನಿಂದ ತೊಂದರೆ ಬರುವ ಸಂಭವವಿದೆ) ಇತ್ಯಾದಿ ಮಾತುಗಳನ್ನು ಕವಿಯು ತುಂಬಾ ಸ್ವಾರಸ್ಯವಾಗಿ ಉಪಯೋಗಿಸಿದ್ದಾನೆ. "ಮರುಳಹರೆ ಭೂಪಾಲ ಬಾದರಾಯಣನಿಕ್ಕಿದುರುಳ ಕಣ್ಣಿಗೆ" (ಸಂ. ೨, ಪ. ೫೬) ಎಂದು ಶ್ರೀ ಕೃಷ್ಣನುಹೇಳುವ ಮಾತೂ, "ಆಹಾ ಮಹಾದೇವ ಚಿತ್ರವಂ ಕೇಳಿದೆವಲಾ, ಕರಡಿಯ ಮಗಳನಾಳ್ದ ನಿನಗೋಹೋ ಧರೆಯೊಳದ್ಭುತಾಕಾರರಾರೊ" (ಸಂ ೨, ಪ. ೫೯) ಎಂದು ಭೀಮಸೇನನು ಹೇಳುವ ಮಾತೂ, "ವಂದನೀಯರಿಗೆ ವಂದಿಸಿ, ವಂದಿಸುವ ಜನದ ವಂದನೆಗಳಂ ಕೊಂಡು ಸಮಬಂಧುಗಳನಪ್ಪಿ" (ಸಂ. ೩೩, ಪ. ೨೫) ಎಂಬಲ್ಲಿ ಕವಿಯು ಉಪಯೋಗಿಸಿರುವ ಮಾತುಗಳೂ, "ನೋಡಿದಂ ನಾರದ ಮುನೀಂದ್ರನೀ ಕೌತುಕವಂ ಸತ್ಯಭಾಮೆಯ ಮನೆಗೆ ಬಂದು" (ಸಂ. ೩೩. ಪ. ೪೭) "ನಿನ್ನ ಸಂತಸದೇಳ್ಗೆಗೆ ಖಂಡನಂ ಮಾಳ್ಪುದು ಅನನದಿರವು" (ಸಂ. ೨, ಪ. ೧೫) "ಚಕ್ರಿಗಭಿಮುಖನಾದ ಬಳಿಕಲ್ಲಿ ಮುಕ್ತಿಯಲ್ಲದೆ ಬೇರೆ ಜಯಮುಂಟೆ" (ಸಂ. ೧೧, ಪ. ೧೩) "ಈ ಪುರದ ಸಕಲನಾರೀಗಣಂ ಪತಿವ್ರತಾಶೀಲಮಂ ತಾಳ್ದಿಸೆವುದು" (ಸಂ. ೧೭, ಪ. ೧೬) "ತಾಯೆ ನೀನೇತಕೆಳೆಸಿದೆ ನಿನ್ನನೀಗ ರಘುರಾಯುಂ ತಪೋವನಕೆ ಕಳುಹಿ ಬರಹೇಳಿದಂ" (ಸಂ. ೧೮, ಪ. ೬೧) "ಜಾನಕಿಯು ಕಣ್ಗೆ ತೋರಿತು ಸನ್ನುತ ರಘೂದ್ವಹನ ಕೀರ್ತಿಯೆನೆ ಪರವ ದಿವಿಜನದಿ" (ಸಂ. ೧೯, ಪ. ೪) "ಕೊಯ್ಯಲೊಲ್ಲದೆ ಕೊರಳನಿಂತು ತನ್ನಂ ಬಿಡಲ್ ಮಾಡಿದಪರಾಧಮುಂಟೆ" (ಸಂ. ೧೯, ಪ. ೧೭) ಇತ್ಯಾದಿ ಭಾವಪೂರ್ಣವಾದ ಪ್ರಯೋಗಗಳು ಕವಿಯ ಪ್ರತಿಭೆಗೂ ರಸಜ್ಞತೆಗೂ ಲೋಕಾನುಭವಕ್ಕೂ ನಿದರ್ಶನವೆನಿಸಿವೆ.

ಕವಿಯು ಜನಾಂಗದ ಪ್ರತಿನಿಧಿ. ಜನತಾ ಸಂಸ್ಕೃತಿಯ ಸಂರಕ್ಷಕ. ಕವಿಯೇ ಹಿಂದಿನ ಮತ್ತು ಮುಂದಿನ ಜನಗಳ ಸಂಬಂಧದ ಪ್ರೇಮತಂತು. ಕವಿಯು ಜನತೆಯ ಮಾರ್ಗದರ್ಶಕನೂ ಅಹುದು. ನಾಡಿನ ಸಂರಕ್ಷಕನೂ ಅಹುದು. ಅದು ಕಾರಣವೇ "ನಾನೃಷಿಃ ಕುರುತೇಕಾವ್ಯಂ" ಎಂಬ ವಾಕ್ಯವು ಪ್ರಸಿದ್ಧವಾಗಿರುವುದು. "ಕವಿಯೇ ಸರ್ವರೊಳುತ್ತಮಂ," ಎಂದು ಕವಿ ಸೋಮನೂ, "ಶಾಪಾನುಗ್ರಹ ಸಮರ್ಥರಲ್ಲವೆ ಕವಿಗಳ್" ಎಂದು ನೇಮಿಚಂದ್ರನೂ ಹೇಳಿದ್ದಾರೆ. "ಜನ ಬದುಕಲೆಂದು" ಕವಿಗಳು ಕಾವ್ಯಗಳನ್ನು ಬರೆಯುತ್ತಾರೆ. ಅದು ಕಾರಣವೇ ಕವಿಗಳನ್ನು ನಮ್ಮ ದೇಶದ ರಾಜಾಧಿರಾಜರೂ, ಮಹಾಜನಗಳೂ ಇತಿಹಾಸ

ಕಾಲದಿಂದ ಸನ್ಮಾನಿಸಿಕೊಂಡು ಬಂದಿದ್ದಾರೆ. ಭೋಜರಾಜನು ಕಾಳಿದಾಸನ ಪ್ರತಿಭೆಗೆ ಮಾರುಹೋದನೆಂದೂ, ಶ್ರೀಕೃಷ್ಣದೇವರಾಯನು ಮಹಾಕವಿ ಅಲಸಾನಿ ಪೆದ್ದನ್ನನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಅದಕ್ಕೆ ತನ್ನ ಹೆಗಲುಕೊಟ್ಟು ಕವಿಯನ್ನು ಗೌರವಿಸಿದನೆಂದೂ, ಚಿಕ್ಕದೇವರಾಜನು ಕವಿ ತಿರುಮಲಾರ್ಯನನ್ನು ತನ್ನ ಮಂತ್ರಿಯನ್ನಾಗಿ ಮಾಡಿಕೊಂಡನೆಂದೂ ನಮ್ಮಲ್ಲಿ ಕಥೆಗಳಿವೆ. ಹೀಗೆ ಮಾಡಿದುದರಿಂದ ಜನ ತಮ್ಮನ್ನು ತಾವೇ ಉದ್ಧರಿಸಿಕೊಂಡಂತಾಗುತ್ತದೆ. ಆ ದೃಷ್ಟಿಯಿಂದ ಸುಕವಿ ಲಕ್ಷ್ಮೀಶನನ್ನು ಪೂಜಿಸಿ, ಪ್ರೀತಿಸಿಕೊಂಡು ಬಂದ ಕನ್ನಡ ಜನ ಒಳ್ಳೆಯ ಸಂಪ್ರದಾಯವನ್ನೇ ನಡೆಸಿದ್ದಾರೆನ್ನಬಹುದು.

ಸಾಹಿತ್ಯವು ಜನಾಂಗದ ಜೀವನಾಡಿ, ಸಮಾಜ ಜೀವನದ ಪ್ರತಿಬಿಂಬ. ಒಂದು ದೇಶದ ನಾಗರಿಕತೆಯನ್ನು ಆ ದೇಶದ ಸಾಹಿತ್ಯಾವಲೋಕನದಿಂದ ಸುಲಭವಾಗಿ ಅರಿಯಬಹುದು ಎಂಬುದು ಪ್ರಾಜ್ಞರ ಮತ. ಸಂಸ್ಕೃತಿಯು ಸಮಾಜದ ಪ್ರಾಣ. ಅಂತಹ ಪ್ರಾಣದ ಸಂರಕ್ಷಣೆಗೆ ಸಾಹಿತ್ಯೋದ್ಧಾರವೇ ಒಳ್ಳೆಯ ದಾರಿ. 'ಸಾಹಿತ್ಯವು ಸಮಕಾಲೀನ ಜನರ ರನ್ನಗನ್ನಡಿ' (Literature is the golden mirror of contemporary society) ಎಂಬ ಸ್ವಾಮಿ ವಿವೇಕಾನಂದರ ಮಾತು ಈ ಅರ್ಥವನ್ನೇ ಸಮರ್ಥಿಸುತ್ತದೆ. ಉತ್ತಮ ಸಾಹಿತ್ಯಕ್ಕೆ ಜೈಮಿನಿ ಭಾರತದಂತಹ ಗ್ರಂಥರತ್ನಗಳೇ ಅಂತಃಕರಣ ಗಳು. ಅಂದಮೇಲೆ ಇಂತಹ ಕಾವ್ಯಕರ್ತೃಗಳು ನಮ್ಮ ನಾಡಿಗೆ ಮಾಡಿರುವ ಉಪಕಾರವೆಷ್ಟೆಂಬುದನ್ನು ನಾವು ಅನುಭವದಿಂದ ಮನಗಾಣಬಹುದು. ಆ ಕವಿಗಳ ಉಪಕಾರವನ್ನು ಸ್ಮರಿಸಿ ಅವರಿಗೆ ನಮ್ಮ ಭಕ್ತಿಕಾಣಿಕೆ ಅರ್ಪಿಸಬಹುದು.

"ಬಹುತರ ಜನ್ಮ ಕೋಟಿಗಳೊಳಾರ್ಜಿಸಿದುತ್ತಮ ಪುಣ್ಯದೇಳ್ಗೆಯಿಂ। ಮಹಿಯೊಳೆ ಸತ್ಕವಿತ್ವದಿವಿಷನ್ಮಣಿ ಸಾರ್ಗುಂ" ಎಂದು ಷಡಕ್ಷರಕವಿ ಹೇಳಿದ್ದಾನೆ. ಶಾಸ್ತ್ರವೆಂಬ ಶ್ರೀರೋಹಣಗಿರಿಯನ್ನು ಕವಿ–ಪಂಡಿತ–ಗಮಕಿ–ವಾದಿ–ವಾಗ್ಮಿ–ರಸಿಕ–ಸಹೃದಯ ಮೊದಲಾದವರೆಲ್ಲರೂ ಹತ್ತುತ್ತಾರೆ. ಆದರೆ ಅಲ್ಲಿರುವ ಚಿಂತಾ ರತ್ನವು, ಅಂದರೆ ಕವಿತಾನಾಮಕ ರತ್ನವು "ಮಾರಾರಿಯ ಕೃಪೆಯಿಲ್ಲದಂಗೆ ದೊರೆಗುಮೆ"? ಎಂದು ಕವಿ ಷಡಕ್ಷರನು ಕೇಳುತ್ತಾನೆ. ಭಗವಂತನ ಹಾಗೂ ಶರಣರ ಸೇವೆಗೆ ಮೀಸಲಾಗದ ಕವಿತೆ 'ನಿರರ್ಥಕ' ಎಂದು ಆತ ಹೇಳುತ್ತಾನೆ. ಆದ್ದರಿಂದಲೇ "ನುತಿಸೆನುಳಿದ ಸುರರಂ ನರರಂ" ಎಂದು ಷಡಕ್ಷರನು ಹೇಳಿದ್ದಾನೆ. ತನ್ನ ನಾಲಗೆಯನ್ನು ಸಾರ್ಥಕಪಡಿಸಿಕೊಳ್ಳಲು ಅದನ್ನು "ಅಭವಂಗೆ ಮಾರಿದೆಂ" ಎಂದು ಮಹಾಕವಿ ಸುರಂಗನು ಹೇಳುತ್ತಾನೆ. ಇಂತಹ ಶರಣಕವಿಗಳ ಸಂಪ್ರದಾಯದಲ್ಲಿಯೇ ಲಕ್ಷ್ಮೀಶನು ತನ್ನ ಸರ್ವಸ್ವವನ್ನೂ ಸುರಪುರದ ಲಕ್ಷ್ಮೀರಮಣನಿಗೆ ಒಪ್ಪಿಸಿ ತಾನು ಆ ಭಗವಂತನ ಕೈವೀಣೆಯಾಗಿ ಭಗವಂತನನ್ನೂ, ಮಯೂರಧ್ವಜ, ಚಂದ್ರಹಾಸ, ಯುಧಿಷ್ಠಿರಾದಿ ಭಾಗವತ

ರನ್ನೂ ಅಭಿವರ್ಣಿಸಿ ತನ್ನ ಕವಿತೆಯನ್ನೂ, ಜೀವನವನ್ನೂ, ಸಾರ್ಥಕಪಡಿಸಿ ಕೊಂಡಿದ್ದಾನೆ. ತನ್ನ ಅಮರ ಸಂದೇಶವನ್ನು ಸದಾ ಸಾರುತ್ತಾ ಕನ್ನಡನಾಡನ್ನು ಸ್ಫೂರ್ತಿಗೊಳಿಸಿದ್ದಾನೆ. ಕನ್ನಡ ಸಾಹಿತ್ಯವನ್ನು ಪ್ರಕಾಶಗೊಳಿಸಿದ್ದಾನೆ.

ಈ ಎಲ್ಲ ಕಾರಣಗಳಿಂದ ಲಕ್ಷ್ಮೀಶನು ತನ್ನ ಕಾವ್ಯದಲ್ಲಿ ಚಿತ್ರಿಸಿರುವ ಭಾವನೆಗಳೆಲ್ಲಾ ೧೬ನೇ ಶತಕದ ಸುಭಿಕ್ಷವಾದ ಕರ್ಣಾಟಕದ ಜನರ ಭಾವನೆಗಳೆನ್ನಬಹುದು; ವಿಜಯನಗರ ಕಾಲದ ದೇಶಾಭಿಮಾನಪೂರ್ಣ ವಿಚಾರಗಳೆನ್ನಬಹುದು; ಕನ್ನಡ ಜನತೆಯ ಜೀವನ ಸಾರಸರ್ವಸ್ವವೆನ್ನಬಹುದು; ಭಾಗವತ ಧರ್ಮದ ಅಮರ ಸಂದೇಶವೆನ್ನಬಹುದು.

ಕಾವ್ಯಗಳ ಉದ್ದೇಶವು ಜನತೆಗೆ ವಿವೇಕವನ್ನೂ, ಆನಂದವನ್ನೂ ಏಕ ಕಾಲದಲ್ಲಿ ಉಂಟುಮಾಡುವುದು. ಈ ಅರ್ಥವನ್ನೇ ಕವಿರಾಜಮಾರ್ಗದಲ್ಲಿ (೧–೧೮).

"ಪಾಪಮಿದು ಪುಣ್ಯಮಿದು ಹಿತ।
ರೂಪ ಮಿದಹಿತ ಪ್ರಕಾರಮಿದು ದುಃಖೋ॥
ಪಾತ್ತಮಿದೆಂದರಿಪುಗು।
ಮಾ ಪರಮ ಕವಿ ಪ್ರಧಾನರಾ ಕಾವ್ಯಂಗಳ್॥" ಎಂದು ನೃಪತುಂಗನು ಹೇಳಿದ್ದಾನೆ.

ಮಹಾಕವಿ ಪಂಪನು "ಆದಿಪುರಾಣದೊಳರಿಪುದು ಕಾವ್ಯ ಧರ್ಮಮಂ ಧರ್ಮಮುಮಂ" (ಅ. ೧, ಪ. ೩೮) ಎಂದು ಹೇಳಿ ಮಹಾಕಾವ್ಯಗಳಲ್ಲಿ ಧರ್ಮವನ್ನೂ ಕಾವ್ಯಧರ್ಮವನ್ನೂ ಜತೆಜತೆಯಲ್ಲಿ ನಿರೂಪಿಸುವುದು ಕವಿಯ ಕರ್ತವ್ಯವೆಂದು ಹೇಳಿದ್ದಾನೆ.

ಸತ್ಕಾವ್ಯವು ಸಹೃದಾನಂದದಾಯಕವೆನಿಸಬೇಕು. ಹರೀಶ್ವರನು ತನ್ನ ಗಿರಿಜಾ ಕಲ್ಯಾಣದಲ್ಲಿ ಹೇಳುವಂತೆ (ಆ. ೧, ಪ. ೨೧).

"ಕೇಳರೊಡಂ ಕಿವಿ ಸವಿಯೊಳ।
ಗಾಳದೊಡಂ ತನ್ಮನಂ ಮುಳುಂಗದೊಡಂ ಸೌ॥
ಖ್ಯಾಲಂಬಿಯೆನಿಪ ಚಿತ್ತಂ।
ಲೀಲೆಯೊಳವಗಾಹ ಮಿರದೊಡದು ಸತ್ಕೃತಿಯೇ॥"

ಎಂಬಂತೆ ಕಾವ್ಯವು ಕೇಳಿದವರ ಕಿವಿ ಮನಗಳನ್ನು ಸೂರೆಗೊಂಡು ಚಿತ್ತಾನಂದವನ್ನುಂಟುಮಾಡುವಂತಿರಬೇಕು. ಈ ಎಲ್ಲ ವಿಚಾರಗಳನ್ನೂ ಜೈಮಿನಿಯ ಕವಿ ತನ್ನ ಹೆಗ್ಗುರಿಯಾಗಿ ಉಳ್ಳವನಾಗಿದ್ದಾನೆ. "ಧರೆಯೊಳಾರಾಜಿಸುವ ಕನ್ನಡದ ನುಡಿಗಳ ಬಗೆಯರಿದವರಾವಲಕ್ಷಣದಿಂದೆ ಮುನ್ನ ಕಬ್ಬಗಳನುಸುರಿದರದೇ ಲಕ್ಷ್ಯಮಲ್ಲದೆ ಪೆರತೆನಗೆ ಸಲ್ಲದು" (೧–೧೦) ಎಂದು ಗಂಭೀರವಾಗಿ ಹೇಳಿದ್ದಾನೆ. ಹೀಗೆ

ಕರ್ಣಾಟಕದ ಮಹಾಕವಿ ಪರಂಪರೆಯಲ್ಲಿ ಬೆಳೆದು ಬಂದ ಸುಂದರ ಕಾವ್ಯ ಮಾಕಂದ ವೃಕ್ಷವೇ ಕನ್ನಡ ಜೈಮಿನಿ ಭಾರತ. ಆದುದರಿಂದಲೇ ಈ ಕಾವ್ಯ ಮಾಕಂದವು ರಸಿಕರೆಂಬ ಗಿಳಿಗಳನ್ನೂ, ಗಮಕಿಗಳೆಂಬ ಕೋಗಿಲೆಗಳನ್ನೂ, ಸಹೃದಯರೆಂಬ ದುಂಬಿಗಳನ್ನೂ, ಜಿಜ್ಞಾಸುಗಳೆಂಬ ಪ್ರಾಣಿಜಾಲವನ್ನೂ ಸದಾ ತನ್ನೆಡೆಗೆ ಬರಮಾಡುತ್ತಿರುತ್ತದೆ. ಆದುದರಿಂದಲೇ 'ಕರ್ಣಾಟ ಕವಿಚೈತ್ರವನಚೂತ' ಎಂಬ ಬಿರುದು ಈ ಕವಿಗೆ ಅನ್ವರ್ಥವಾಯಿತೆಂದು ವಿದ್ವತ್ಸಭೆಯು ತೀರ್ಮಾನಿಸಿದೆ. ಕನ್ನಡ ಕವಿಗಳ ಚೈತ್ರವನದಲ್ಲಿ ಲಕ್ಷ್ಮೀಶನು ಸುಂದರ ಚೂತವೃಕ್ಷವೆನಿಸಿ ಸದಾ ಕಂಗೊಳಿಸುತ್ತಿದ್ದಾನೆ. ತನ್ನ ಸುಶ್ರಾವ್ಯವಾದ ಕಾವ್ಯ ವೀಣೆಯಿಂದ ಕವಿಗಿಂಪಾಗಿ ತನ್ನ ಅಮರ ಕಾವ್ಯಗಾನವನ್ನು ಕೇಳಿಸುತ್ತಿದ್ದಾನೆ. ಇಂತಹ ಸುಕೃತವು ಲಕ್ಷ್ಮೀರಮಣನ ಕೃಪೆ ಇಲ್ಲದವರಿಗೆ ಸಾಧ್ಯವೆ?

ಈ ಸಂದರ್ಭದಲ್ಲಿ ರಸಿಕ ಚಕ್ರಿ ಹರೀಶ್ವರನು ಹೇಳುವುದು—

ಕಂದ ॥ ಕ್ಷುದ್ರಂಗೆ ಸಕಲ ಸುಜನ್ರೋ।
ಪದ್ರವ ರೂಪಂಗೆ ಪರರ ಕಾವ್ಯಾರ್ಥವುಮಂ॥
ಛಿದ್ರಿಸುವಂಗತಿ ಶಬ್ದದ।
ರಿದ್ರಂಗಕ್ಕುಮೆ ನವೀನ ಕಾವ್ಯಾರಂಭಂ॥

(ಗಿರಿಜ ಕಲ್ಯಾಣ. ಅ. ೧, ಪ. ೨೬)

ಅಲ್ಪತನವುಳ್ಳವನೂ, ಸತ್ಪುರುಷರನ್ನು ಹಿಂಸಿಸುವವನೂ, ಅನ್ಯರ ಕಾವ್ಯಗಳನ್ನು ವಿನಾಕಾರಣ ಟೀಕಿಸುವವನೂ ಶಬ್ದಾರ್ಥ ದರಿದ್ರನೂ ಆದವನಿಗೆ ನವೀನಕಾವ್ಯ ನಿರ್ಮಾಣವು ಸಾಧ್ಯವಿಲ್ಲವೆಂದು ಇದರ ತಾತ್ಪರ್ಯ. ಅಂದರೆ, ಕವಿಯು ಋಷಿಯ ಅಂಶೀಭೂತನಾದುದರಿಂದ ಋಷಿಯಂತೆಯೇ ಚಿತ್ತಶುದ್ಧನೂ, ದೈವಭಕ್ತನೂ ಆಗಿರಬೇಕೆಂಬುದು ಇದರ ತಾತ್ಪರ್ಯವೆನಿಸಿದೆ.

ಕವಿ ಸಮಯ

ಕನ್ನಡ ಕವಿಗಳನ್ನು ಕವಿತಾವೇಶವುಳ್ಳವರು, ಕವಿತಾವಿಚಕ್ಷಣರು ಎಂದು ಎರಡು ಭಾಗ ಮಾಡಿದರೆ, ಹರೀಶ್ವರ ಕುಮಾರವ್ಯಾಸಾದಿಗಳನ್ನು ಕವಿತಾವೇಶ ಪ್ರಧಾನರೆಂದೂ, ನೇಮಿಚಂದ್ರ ಷಡಕ್ಷರ ದೇವ ಮೊದಲಾದವರನ್ನು ಕವಿತಾ ವಿಚಕ್ಷಣರೆಂದೂ ನಾವು ಹೇಳಬಹುದು. ಆದರೆ, ಕವಿತಾವೇಶ–ಕವಿತಾವಿಚಕ್ಷಣತೆ ಎರಡನ್ನೂ ಸಮಸಮವಾಗಿ ಉಳ್ಳ ಕವಿಗಳಲ್ಲಿ ಲಕ್ಷ್ಮೀಶ ಮತ್ತು ಚಾಮರಸರು ಮುಖ್ಯರೆಂದೂ ಹೇಳಬಹುದು. ಈ ದೃಷ್ಟಿಯಿಂದ ಕೂಡ ಲಕ್ಷ್ಮೀಶನು ಸಮ ತೂಕದ ಕವಿಯೆನ್ನಿಸಿಕೊಳ್ಳುತ್ತಾನೆ. ಆದ್ದರಿಂದಲೇ ಅವನ ಕಾವ್ಯದಲ್ಲಿ ಆವೇಶದ ಸ್ಫೂರ್ತಿಯೂ, ವಿಚಕ್ಷಣತ್ವದ ಪಾಂಡಿತ್ಯವೂ ಓತಪ್ರೋತವಾಗಿ ಸೇರಿವೆ. ಅದು ನಿಮಿತ್ತವೇ ಈ ಕಾವ್ಯ ಎಲ್ಲರ ಮೆಚ್ಚುಗೆಗೂ ಪಾತ್ರವೆನಿಸಿದೆ. ಪ್ರಭು ಸಮ್ಮಿತ



ಚಿಕ್ಕಮಗಳೂರು ಜಿಲ್ಲೆಯ ದೇವನೂರು ಗ್ರಾಮದ ಶ್ರೀ ಲಕ್ಷ್ಮೀರಮಣಸ್ವಾಮಿಯ ಉತ್ಸವ ವಿಗ್ರಹ.

[Photo : J.K.B.

ಗಳಾದ ಕಾವ್ಯಗಳು ಸಹೃದಯರ ಹೃದಯಾಹ್ಲಾದಕರಗಳಾಗಬೇಕಾದರೆ ಅವು ನಿಷ್ಕೇವಳವಾದ ರೂಢಿವಶದಿಂದ ಕವಿ ಜನಪರಿಗ್ರಹೀತವಾಗಿ ಬಂದಿರುವ ಶಿಷ್ಟ ಸಂಭಾವಿತವಪ್ಪ ಕಾವ್ಯ ಸಮಯವನ್ನು ಅನುಸರಿಸಬೇಕು. ಕನ್ನಡ ಜೈಮಿನಿ ಭಾರತವು ಅಂತಹ ಕವಿ ಸಮಯದ ದೃಷ್ಟಿಯಿಂದಲೂ ಶ್ಲಾಘ್ಯವೆನಿಸಿದೆ. ಉದಾಹರಣೆಗಾಗಿ ಕನ್ನಡ ಜೈಮಿನಿ ಭಾರತದಲ್ಲಿ (ಸಂ. ೩೦, ಪ. ೬)

"ಹರಿಯಾಲೋಚನಂ ಅಜಂ ಕಳ್ಳಿರ್ಪತಾಣಂ ಇಂ।
ದಿರೆಯನಿಳಯಂ ದಿವಾಕರನ ಕೆಳೆ ಮನ್ಮಥನ।
ಸರಳ್ ಅರಡಿಗಳಿಕ್ಕೆ ಪರಿಮಳದ ಬೀಡು ಎನಿಸಿಕೊಂಡು ಸಂಪೂರ್ಣತೆಯೊಳು।
ಪರಿಶೋಭಿಸಿದುವಲ್ಲ ನೆರೆತಿಂಗಳಂ ಪೋಲ್ವ।
ತರುಣಿಯರ ಚೆಲ್ವ ನಗೆಮೊಗದ ಮುಂದೆ ಈಗ ತಾವ್।
ಅರೆಯಾದುವೆಂಬಂತೆ ಪೆಣ್ಗಳಾಸ್ಯಕೆ ಸೋಲ್ದುವು ಆ ಕೊಳದ ಕಮಲಂಗಳು॥

(ಸಂ. ೩೦—ಪ. ೬)

ಇದು ಕವಿ ಸಮಯಕ್ಕೆ ಸಮ್ಮತವಾದ ಪದ್ಯ. ತಾವರೆಯ ಹೂವು ಮಹಾ ವಿಷ್ಣುವಿಗೆ ಕಣ್ಣು, ಬ್ರಹ್ಮದೇವನ ಪೀಠ, ಲಕ್ಷ್ಮೀದೇವಿಯ ಮನೆ, ಸೂರ್ಯನ ಸ್ನೇಹಿತ, ಕಾಮರಾಜನ ಬಾಣ, ತುಂಬಿಗಳ ನಿವಾಸ ಸ್ಥಳ, ಸುಗಂಧದ ಬೀಡು ಎನಿಸಿಕೊಂಡು ಹಿರಿಮೆಯಿಂದ ಕೂಡಿದ ತಾವರೆ ಹೂಗಳು ಅಲ್ಲಿ ಪರಿಶೋಭಿಸಿದುವು. ಆದರೆ, ಅಲ್ಲಿ ನೆರೆದ ಚಂದ್ರನನ್ನು ಹೋಲುವ ಹರೆಯದ ಹೆಣ್ಣುಗಳ ಚೆಲುವಾದ ನಗೆಮೊಗವನ್ನು ನೋಡಿ ಚಂದ್ರನೆಂಬ ಭ್ರಾಂತಿಯಿಂದ ಆ ಕಮಲಗಳು ಅಂದರೆ ತಾವರೆಗಳು ತಾವು+ಅರೆ (ತಾವರೆ)ಯಾದುವು. ಅರ್ಥಾತ್ ಆ ಹೆಣ್ಣುಗಳ ಮುಖ ಚಂದ್ರಕ್ಕೆ ಸೋತುಹೋದುವು ಎಂದು ಕವಿ ಚಮತ್ಕಾರವಾಗಿ ಹೇಳಿದ್ದಾನೆ.

ಇಂತಹ ಸಂದರ್ಭಗಳನ್ನು ಪ್ರಾಚೀನ ಕವಿಗಳು ಹೇಗೆ ಸ್ವಾರಸ್ಯವಾಗಿ ಹೇಳಿರುವರೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳೋಣ.

ಕಂದ॥ ಗಿರಿಜೆ ಶಶಿವದನೆ ಕೊಳನಂ।
ಭರದಿಂ ಪೊಗೆ ನೆಯ್ದಿಲೆಯ್ದುದುವು ವಿಕಸನಮಂ।
ವಿರಹವನಾಂತವು ಕೋಕಂ।
ಸರಸಿರುಹಂ ಮುಗಿದುವರರೆ ಪಗಲೊಳ್ ಚಿತ್ರಂ॥

(ಗಿರಿಜಾ ಕಲ್ಯಾಣ ಅ. ೪, ಪ. ೨೧)

ಪಾರ್ವತೀದೇವಿಯು ಸಖಿಯರೊಡನೆ ಕೊಳಕ್ಕೆ ಸ್ನಾನಕ್ಕೆ ಬಂದಾಗ ಆಕೆಯ ಮುಖಚಂದ್ರನನ್ನು ನೋಡಿ ಚಂದ್ರೋದಯವೆಂಬ ಭ್ರಾಂತಿಯಿಂದ ಕನ್ನೈದಿಲೆ ಅರಳಿತು, ತಾವರೆ ಮುಚ್ಚಿತು, ಕೋಕ ಪಕ್ಷಿಗಳು ವಿರಹವಾಂತುವು,

ಹಗಲಿನಲ್ಲಿಯೇ ಇಂತಹ ವಿಚಿತ್ರವಾಯಿತು ಎಂದು ಮಹಾಕವಿ ಹರೀಶ್ವರನು ಹೇಳಿದ್ದಾನೆ.

“ ಹೊನ ಬನದೊಳಿರ್ಪಬಲೆಯರ ತೊಡಿಗೆ ವೆಳಗು ಹೊಂ ।
ಬಿಸಿಲಂತಿರಲ್ ಕಂಡು ಕಮಲವರಳುವವರ ।
ನಸುನಗೆಯ ಬೆಳಗು ಬೆಳ್ದಿಂಗಳಂತಿರೆ ಕಂಡು ಕುಮುದವರಳುವುವಲ್ಲದೆ ॥
ಶಶಿ ರವಿಗಳಾಟವಾ ಬನದೊಳಗೆ ಹೊಗದು ನಿ ।
ಟ್ಟಿಸಲು ರವಿಕಾಣದುದ ಕವಿ ಕಂಡನೆಂಬ ನುಡಿ ।
ಹುಸಿಯಲ್ಲ ಸುಕವಿ ಹಂಪೆಯ ರಾಘವಾಂಕನದರಳವ ಬಣ್ಣಿಸಿದನಾಗಿ ॥

(ಹರಿಶ್ಚಂದ್ರಕಾವ್ಯ. ಸ್ಥಲ ೩—ಪ. ೪೦).

ಈ ಪದ್ಯದಲ್ಲಿ ರಾಘವಾಂಕ ಪಂಡಿತನು, ವನದಲ್ಲಿರುವ ತರುಣಿಯರ ಆಭರಣಗಳ ಕಾಂತಿಯು ಹೊಂಬಿಸಿಲಂತೆ ಕಾಣಲು ಸೂರ್ಯೋದಯವಾಯಿತೆಂಬ ಭ್ರಾಂತಿಯಿಂದ ಕಮಲಗಳು ಅರಳುತ್ತಿವೆಯೆಂದೂ, ಆ ಸುಂದರ ತರುಣಿಯರ ನಸುನಗೆಯ ಬೆಳಗು ಬೆಳುದಿಂಗಳಂತಿರಲು ಚಂದ್ರೋದಯವಾಯಿತೆಂದು ಭಾವಿಸಿ ಕನ್ನೈದಿಲೆಗಳು ಅರಳುವುವೆಂದೂ, ಸೂರ್ಯ ಚಂದ್ರರ ಕಿರಣಗಳು ಪ್ರವೇಶಿಸಲು ಸಾಧ್ಯವಿಲ್ಲದಷ್ಟು ದಟ್ಟವಾಗಿ ಬೆಳೆದಿರುವ ಆ ಅಡವಿಯಲ್ಲಿ ಹೀಗೆ ಸೂರ್ಯ ಚಂದ್ರರ ಉದಯವು ಒಮ್ಮೆಗೇ ಉಂಟಾದ ಪರಿಣಾಮವಾಯಿತೆಂದೂ, ರವಿ ಕಾಣದುದನು ಕವಿ ಕಂಡನೆಂಬ ನುಡಿ ಹುಸಿಯಲ್ಲವೆಂದೂ ಕವಿಯು ಸ್ವಾರಸ್ಯವಾಗಿ ಹೇಳಿದ್ದಾನೆ.

ಹೀಗೆ ಹಿಂದಿನಿಂದ ನಡೆದುಬಂದ ಕವಿಸಮಯ—ಸಂಪ್ರದಾಯಗಳನ್ನು ಕರ್ಣಾಟ ಕವಿಚೈತ್ರವನಚೂತನಾದ ಲಕ್ಷ್ಮೀಶನು ನಡೆಸಿಕೊಂಡು ಬಂದನಲ್ಲದೆ, ಅಂತಹ ಸಂದರ್ಭಗಳಲ್ಲಿಯೂ ತನ್ನ ವಿನೂತನ ಪ್ರತಿಭೆಯನ್ನು ಪ್ರಕಾಶಿಸಿರುವನು.

ಪ್ರಾಚೀನ ಲಾಕ್ಷಣಿಕರು ಒಳ್ಳೆಯ ಕಾವ್ಯದಲ್ಲಿ ಇರಬೇಕೆಂದು ಹೇಳಿರುವ ರಮಣೀಯ, ರಸಾತ್ಮಕ, ವಕ್ರೋಕ್ತಿ, ಗುಣ, ರೀತಿ, ಧ್ವನಿ, ಗಸ ಇತ್ಯಾದಿ ಕಾವ್ಯಾಂಶಗಳೆಲ್ಲವೂ ಲಕ್ಷ್ಮೀಶನ ಕಾವ್ಯದಲ್ಲಿವೆ ಎಂಬುದನ್ನು ಈ ಗ್ರಂಥಾವಲೋಕನದಿಂದ ನಾವು ಮನಗಾಣಬಹುದು.

ಕನ್ನಡ ಸಾಹಿತ್ಯದಲ್ಲಿ ಚಂಪೂ ಗ್ರಂಥಗಳನ್ನು ವಸ್ತುಕ ಕಾವ್ಯಗಳೆಂದೂ, ಷಟ್ಪದಿ, ಸಾಂಗತ್ಯ, ರಗಳೆ ಮೊದಲಾದ ಕಾವ್ಯಗಳನ್ನು ವರ್ಣಕ ಕಾವ್ಯಗಳೆಂದೂ ಪಂಡಿತರು ಕರೆವರು. ಚಂಪೂ ಗ್ರಂಥಗಳು ಶ್ರೇಷ್ಠವೆಂದೂ, ಷಟ್ಪದಿ ಗ್ರಂಥಗಳು ಸಾಮಾನ್ಯವೆಂದೂ ಭಾವಿಸುವವರುಂಟು. ಛಂದಸ್ಸು, ಅಲಂಕಾರ, ವ್ಯಾಕರಣ ನಿಯಮಗಳು ಷಟ್ಪದಿ ಕಾವ್ಯಗಳಿಗೆ ಅಷ್ಟಾಗಿ ಇಲ್ಲವೆಂದು ಹೇಳುವವರೂ ಉಂಟು. ಮಹಾಕವಿ ಲಕ್ಷ್ಮೀಶನು ಬರೆದ ಕನ್ನಡ ಜೈಮಿನಿಯಲ್ಲಿ ಮೇಲೆ ಕಂಡಂತೆ ಹೇಳು

ವವರ ಮಾತನ್ನು ಅಲ್ಲಗಳೆದು ಹಾಡುಗಬ್ಬಗಳೆನಿಸಿದ ಷಟ್ಪದಿಗಳು ಓದುಗಬ್ಬಗಳಂತೆಯೇ "ವಿದ್ವತ್ಸಭಾನೀರೇರುಹಾಕರ"ದಲ್ಲಿ ಝೇಂಕರಿಸುವಂತೆ ಮಾಡಿರುವನು. ಈ ದೃಷ್ಟಿಯಿಂದಲೂ ಕವಿಯು ಕನ್ನಡ ಸಾಹಿತ್ಯಕ್ಕೆ ಉಪಕಾರಿಯೇ ಸರಿ. ಈತನ ಕಾವ್ಯವು ಕವಿಸಮಯದ ಹದಿನೆಂಟು ವರ್ಣನೆಗಳಿಂದ ತುಂಬಿರುವುದು ಗಮನಾರ್ಹವಾಗಿದೆ. ಈ ಅನುಕರಣವು ನಮ್ಮ ಕವಿಗಳ ಜಾಯಮಾನ.

ಕವಿಯ ಆಧ್ಯಾತ್ಮಿಕ ದೃಷ್ಟಿ

ಮಹಾಕವಿ ಲಕ್ಷ್ಮೀಶನು ರಸಿಕಶಿರೋಮಣಿಯಾಗಿದ್ದಂತೆಯೇ ಮಹಾತತ್ವಜ್ಞಾನಿಯೂ ಎನಿಸಿದ್ದನು. ಅವನು ಒಳ್ಳೆಯ ಮುಮುಕ್ಷುವೂ, ತತ್ವಜಿಜ್ಞಾಸುವೂ ಆಗಿದ್ದನೆಂಬುದನ್ನು ನಾವು ಆತನ ಗ್ರಂಥದಲ್ಲೆಲ್ಲಾ ಕಾಣಬಹುದಾಗಿದೆ. "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬ ಶಾಸ್ತ್ರ ವಾಕ್ಯವನ್ನು ಕವಿಯು ಚೆನ್ನಾಗಿ ಮೈಗೂಡಿಸಿಕೊಂಡಿದ್ದನು. ಆದ್ದರಿಂದಲೇ ಅವನು "ದೇವನೊಬ್ಬ ನಾಮ ಹಲವು" ಎಂಬ ಅನುಭವಿಗಳ ಪಂಥವನ್ನು ಅರ್ಥಮಾಡಿಕೊಂಡಿದ್ದನು. ವಿಷ್ಣು, ಶಿವ, ಶಕ್ತಿ, ಗಣಪ, ಸೂರ್ಯ ಮೊದಲಾಗಿ ಯಾವ ರೂಪದಲ್ಲಿ ಪೂಜಿಸಿದರೂ ಅದು ಏಕಮೇವಾದ್ವಿತೀಯನೂ, ಆನಂದಸ್ವರೂಪನೂ ಆದ ಒಬ್ಬ ಭಗವಂತನನ್ನೇ ಸೇರುತ್ತದೆ ಎಂಬ ಗೀತಾ ತಾತ್ಪರ್ಯವನ್ನು ಚೆನ್ನಾಗಿ ಮನನ ಮಾಡಿಕೊಂಡಿದ್ದನು. ಆದ್ದರಿಂದಲೇ ಅವನ ಕಾವ್ಯವು ಒಂದು ಕಡೆ ಶೃಂಗಾರ ವಿಹಾರಗಳಿಂದ ಕಂಗೊಳಿಸುತ್ತಿದ್ದರೂ ಇನ್ನೊಂದು ಕಡೆ ಆಧ್ಯಾತ್ಮಿಕ ವಿಚಾರ ಪ್ರವಾಹದಿಂದ ಜಿಜ್ಞಾಸುಗಳನ್ನು ತೃಪ್ತಿಪಡಿಸುತ್ತಿದೆ. ಹೀಗೆ ಲೌಕಿಕ–ಪಾರಲೌಕಿಕ ಉಭಯದೃಷ್ಟಿಯ ಜನರನ್ನೂ ತೃಪ್ತಿಪಡಿಸುವಹಾಗೆ ಕಾವ್ಯವನ್ನು ಬರೆಯುವುದು ಲಕ್ಷ್ಮೀಶನಂತಹ ಶರಣ ಕವಿಗಳಿಗೆ ಮಾತ್ರ ಸಾಧ್ಯವಾದುದು. ಭಕ್ತಿಪ್ರಧಾನವಾದ ಭಾಗವತ ಧರ್ಮದ ಅನುಷ್ಠಾನವು ಕವಿಗೆ ಹರಿತವಾದ ಈ ಆಧ್ಯಾತ್ಮಿಕ ದೃಷ್ಟಿಯನ್ನುಂಟುಮಾಡಿದೆಯೆಂದು ತೋರುತ್ತದೆ.

ಜೈಮಿನಿಯ ಮೊದಲನೆಯ ಪದ್ಯದಲ್ಲಿ "ಲಕ್ಷ್ಮೀರಮಣನಾಸ್ಯ ಚಂದ್ರನಾನಂದಮಂ ನಮಗೀಯಲಿ" ಎಂದು ಕವಿ ಪ್ರಾರ್ಥಿಸಿದ್ದಾನೆ. ಜಗತ್ತಿಗೆ ಸುಖಸಂತೋಷಗಳನ್ನುಂಟುಮಾಡುವ ಲಕ್ಷ್ಮೀದೇವಿಯ ಪತಿಯಾದ ನಾರಾಯಣನು ಆನಂದಸ್ವರೂಪನೆಂದು ನಿಗಮಾಗಮಗಳು ಸಮರ್ಥಿಸುತ್ತವೆ. ಉಪನಿಷತ್ತುಗಳು ಭಗವಂತನನ್ನು ಸತ್–ಚಿತ್–ಆನಂದ ಸ್ವರೂಪನೆಂದು ಹೇಳುತ್ತವೆ. ಕವಿಯು ಅಂತಹ ಆನಂದಸ್ವರೂಪನಾದ ಲಕ್ಷ್ಮೀರಮಣನನ್ನು ತನಗೂ, ಜಗತ್ತಿಗೂ ಸಂತೋಷವನ್ನುಂಟುಮಾಡೆಂದು ಪ್ರಾರ್ಥಿಸಿರುವಲ್ಲಿ ಎಷ್ಟೊಂದು ಔಚಿತ್ಯವಿದೆ ಎಂದರಿಯಬಹುದು. ಎರಡನೆಯ ಪದ್ಯವಾದ ಶಿವಸ್ತುತಿಯಲ್ಲಿ ಕವಿಯು ಪರಮೇಶ್ವರನನ್ನು ಕುರಿತು, "ಲೋಕವಿಸ್ತರಣ ಪ್ರಭಾವ ನಯನತ್ರಯಂ ದೇವ ಗಂಗಾ

ಧರಂ ಬಿಡದೆ ಸಲಹುಗೆ ನಮ್ಮನು '' ಎಂದು ಪ್ರಾರ್ಥಿಸಿದ್ದಾನೆ. ಇಲ್ಲಿ ಶಿವನ ತ್ರಿನೇತ್ರಗಳಾದ ಸೂರ್ಯ-ಚಂದ್ರ-ಅಗ್ನಿಗಳು ಲೋಕದ ವಿಸ್ತರಣಕ್ಕೆ ಕಾರಣವಾದುವೆಂಬುದು ಕವಿಯ ತಾತ್ಪರ್ಯ. ಶಿವನ ತ್ರಿನೇತ್ರಗಳೂ ಜಗತ್ತಿಗೆ ಪ್ರಕಾಶವನ್ನು ನೀಡತಕ್ಕವು ಎಂಬುದನ್ನು ತಿಳಿಸುವುದು ಕವಿಯ ಅಂತರ್ಗತ ಉದ್ದೇಶವಾಗಿದೆ.

ವಿನಾಯಕನ ಸ್ತೋತ್ರವಾದ ಮೂರನೆಯ ಪದ್ಯದಲ್ಲಿ '' ಸಮಸ್ತ ಸಿದ್ಧಿ ಪ್ರದಾಯಕ ವಿನಾಯಕ ಮಾಳ್ಪುದೆನಗೆ ನಿರ್ವಿಘ್ನತೆಯನು '' ಎಂದು ಕವಿ ಪ್ರಾರ್ಥಿಸಿಕೊಂಡಿದ್ದಾನೆ. ಇಲ್ಲಿ ಮನುಷ್ಯನು ಯಾವುದೊಂದು ಕಾರ್ಯವನ್ನು ಮಾಡಬೇಕಾದರೂ ಮೊದಲು ಈಶ್ವರನ ಕೃಪೆಗೆ ಪಾತ್ರನಾಗಬೇಕು. ''ತೇನ ವಿನಾ ತೃಣಮಪಿ ನಚಲತಿ '' ಎಂಬ ಶಾಸ್ತ್ರ ವಾಕ್ಯವು ಇದಕ್ಕೆ ನಿದರ್ಶನ. ಅಂತೆಯೇ ಕಾವ್ಯಾರಂಭದಲ್ಲಿ ಸಮಸ್ತ ಸಿದ್ಧಿ ಪ್ರದಾಯಕನಾದ ವಿನಾಯಕನು ತನ್ನನ್ನು ಅನುಗ್ರಹಿಸಲಿ ಎಂದು ಕೇಳುವುದರಲ್ಲಿಯೂ ಒಳ್ಳೆಯ ಭಾವನೆ ಇದೆ. ನಾಲ್ಕನೆಯ ಪದ್ಯವಾದ ಸರಸ್ವತೀ ಸ್ತೋತ್ರದಲ್ಲಿ ಜಗತ್ತಿನ ತಾಯಿಯಾದ ಶಾರದೆಯನ್ನು ಕುರಿತು, '' ಕಾವ್ಯಮಿದು ಭುವನದೊಳ್ ಸಕಲ ಜನರಿಂದೆ ಸುಶ್ರಾವ್ಯಮಪ್ಪಂತೆ ಎನ್ನ ವದನಾಬ್ಜದಲ್ಲಿ ನೀನೇ ವ್ಯಾಪಿಸಿರ್ದು ಅಮಲ ಸುಮತಿಯಂ ತಾ ಎನಗೆ ತಾಯೆ ನಗೆಗೂಡಿ ನೋಡಿ '' ಎಂದು ಕವಿ ಕೇಳಿಕೊಳ್ಳುತ್ತಾನೆ. ಇಲ್ಲಿ ಕವಿಯು ತಾನು ಕಾವ್ಯ ಕರ್ತೃವೆಂಬ ಅಹಂಕಾರವನ್ನು ತೊರೆದು, ಈ ಕಾವ್ಯದ ಕರ್ತೃತ್ವವು ವಿದ್ಯಾಭಿಮಾನ ದೇವತೆಯಾದ ಶಾರದೆಗೆ ಸೇರಿದುದು ಎಂದು ಹೇಳಿರುತ್ತಾನೆ. ಇದು ಕವಿಯ ' ದಾಸೋಹಂ ' ಭಾವ ತತ್ವಕ್ಕೆ ನಿದರ್ಶನ.

ಮುಂದೆ ಪೀಠಿಕೆಯಲ್ಲಿ (ಸಂ. ೧, ಪ. ೮.) '' ಗೀರ್ವಾಣಪುರನಿಲಯ ಲಕ್ಷ್ಮೀವರಂ ವೀಣೆಯಿಂ ಗಾನಮಂ ನುಡಿಸುವಂದದೊಳ್ ಎನ್ನ ವಾಣಿಯಿಂ ಕವಿತೆಯಂ ಪೇಳಿಸಿದಂ '' ಎಂದು ಹೇಳುತ್ತಾನೆಂಬುದನ್ನು ಹಿಂದೆಯೇ ತಿಳಿಸಿದೆ. ಇಲ್ಲಿಯೂ ಕವಿಯ ಅಹಂಕಾರ ಶೂನ್ಯತೆ, ದಾಸೋಹಂಭಾವ ಸ್ಪಷ್ಟಗೊಂಡಿದೆ. ಈ ಪದ್ಯದಲ್ಲಿ ಲಕ್ಷ್ಮೀಶನು ತನ್ನನ್ನು ಭಗವಂತನ ಕೈವೀಣೆ ಎಂದು ಮಾತ್ರ ತಿಳಿದುಕೊಂಡಿದ್ದಾನೆ. ಇದು ಕವಿಯ ಮಿಗಿಲಾದ ತತ್ವಜ್ಞಾನದಿಂದುಂಟಾದ ಶರಣಭಾವ. ಮುಂದೆ (ಸಂ. ೨, ಪ. ೧ ೮.) ಧರ್ಮರಾಜನ ಮುಖದಿಂದ '' ಅಖಿಲ ಬಾಂಧವರೊಡನೆ ಬದುಕದ ಮನುಷ್ಯ ಸಂಸಾರದಿಂದೇನು ? ಅದರಿಂ ನಿಜಾಯುಷ್ಯಮುಳ್ಳನ್ನ ಪರ್ಯಂತ ವನವಾಸಮಂ ಮಾಡುವುದೆ ಲೇಸು '' ಎಂದು ಹೇಳಿಸಿದ್ದಾನೆ. ಇದು ತನ್ನ ಸುಖಕ್ಕಾಗಿ ಸಕಲ ಬಂಧು ಬಾಂಧವರನ್ನೆಲ್ಲಾ ಕೊಂದೆನಲ್ಲಾ ಎಂದು ಧರ್ಮರಾಜನು ಪಶ್ಚಾತ್ತಾಪ ಪಡುವ ಸನ್ನಿವೇಶ. ಇಂತಹ ಮನೋಭಾವ ಬರಬೇಕಾದರೆ ಮನುಷ್ಯನಿಗೆ ಅಧ್ಯಾತ್ಮದ ಹಿನ್ನಲೆ ಬೇಕು '' ಶಶಿಮೌಳಿತಾರಕ ಬ್ರಹ್ಮೋಪದೇಶದಿಂ ಪ್ರಾಣಿಗಳ್ಗಾತ್ಮ ಸಾಯುಜ್ಯಮೀವ, ಭೂರಿದುರಿತಂಗಳಂ ಕಂಡ ಮಾತ್ರದೊಳೆ ಸಂಹಾರಮಾಳ್ಪ, ನಿಖಿಳ ಪ್ರಳಯ

ಬಾಧೆಗಳ ದೂರಮೆನಿಪ ವಿಮುಕ್ತಕಾಶಿ'' ಎಂದು (ಸಂ. ೫, ಪ. ೩೦) ಕವಿ ಹೇಳುತ್ತಾನೆ. ಇಲ್ಲಿ ಕವಿಗೆ ಕಾಶಿಯಲ್ಲಿಯೂ ಆ ಕ್ಷೇತ್ರ ಮಹಾತ್ಮ್ಯೆಯಲ್ಲಿಯೂ ಇರುವ ಶ್ರದ್ಧಾಸಕ್ತಿಗಳು ವ್ಯಕ್ತವಾಗಿವೆ. ಇದು ಆಧ್ಯಾತ್ಮದೃಷ್ಟಿ ಇಲ್ಲದ ಕವಿಗೆ ಸಾಧ್ಯವಲ್ಲದ ವಿಚಾರ.

ಕಾದ ಎಣ್ಣೆಯಲ್ಲಿ ಮುಳುಗಿದ್ದ ಸುಧನ್ವನು 'ಗೋವಿಂದ ನೀನಲ್ಲದೆ ವಿಚಾರಿಸುವರಿಲ್ಲ' ಎಂದು 'ಚಿತ್ತದೊಳ್ ಕೃಷ್ಣನಂ ಧ್ಯಾನಿಸುತೆ ನಿರ್ಭಯದಿಂದೆ ಹೇಳುತಿರ್ದನು'(ಸಂ. ೧೧, ಪ. ೩೫.).ಅಂತಹ ಆಪತ್ಕಾಲದಲ್ಲಿಯೂ ಇಷ್ಟೊಂದು ಧೈರ್ಯದಿಂದ ಇದ್ದ ಭಾಗವತ ಶಿರೋಮಣಿ ಸುಧನ್ವನ ನಿಶ್ಚಲತೆ ತತ್ವಜ್ಞಾನ ವಲ್ಲದೆ ಮತ್ತೇನು ? '' ಕೃಷ್ಣನ ಮುಂದೆ ಭಾಷೆಯಂ ಪೂರೈಸಿ ಚೆಂಡೆಣಿಸದೊ ಡಲಂ ತೊರೆದು ಮುಕ್ತಿರಾಜ್ಯಮಂ ವೆಂಚೆಣಿಸಿಕೊಂಡಂ ಸುಧನ್ವಂ'' (ಸಂ. ೧೩, ಪ. ೬೨). ಇಲ್ಲಿ ವೀರರಿಗೆ ಪ್ರಾಪ್ತವಾಗುವ ಮುಕ್ತಿರಾಜ್ಯವು ಭಕ್ತ ವೀರನಾದ ಸುಧನ್ವನಿಗೆ ಪ್ರಾಪ್ತವಾಯಿತೆಂದು ಕವಿ ಹೇಳುತ್ತಾನೆ. ಅಧ್ಯಾತ್ಮದ ಪರಮಾವಧಿಯೇ ಆನಂದ ಮತ್ತು ಮುಕ್ತಿಯಲ್ಲವೆ ? ಮುಂದೆ (ಸ. ೧೫) ಪುಣ್ಯಾರಣ್ಯ ದಲ್ಲಿ ಪಾರ್ವತಿಯು ಶಿವನನ್ನು ಕುರಿತು ತಪಸ್ಸುಮಾಡುವ ರೀತಿಯನ್ನು '' ಇಂದು ಮೌಳಿಯ ಪದಧ್ಯಾನವಂ ಮಾಡುವ ಆನಂದ ಮಿನ್ನೇತರತಿಶಯವೋ '' ಎಂದು ಬಣ್ಣಿಸಿದ್ದಾನೆ. (ಸಂ. ೧೫, ಪ. ೧೬) ತಪಸ್ಸು ಮನುಷ್ಯನ ಆಧ್ಯಾತ್ಮಿಕ ಶಕ್ತಿ ಯನ್ನು ಹೆಚ್ಚಿಸಿ ಜೀವನನ್ನು ದೇವನನ್ನಾಗಿ ಮಾಡುತ್ತದೆ ಎಂಬುದು ಇಲ್ಲಿ ಕವಿಯ ತಾತ್ಪರ್ಯವಾಗಿದೆ.

'' ನಿನ್ನ ಸರ್ವಸ್ವಮಂ ತಾತನಂಘ್ರಿಗೆ ಸಮರ್ಪಿಸಿದೊಡೆ ಆಂ ಮಾಡಿದ ತಪೋನಿಷ್ಠೆ ಸಫಲಮಾದಪುದು'' (ಸಂ. ೧೭, ಪ. ೩೪) ಎಂದು ಬಭ್ರುವಾಹನನಿಗೆ ತಾಯಿಯಾದ ಚಿತ್ರಾಂಗದೆಯು ಪಿತೃಭಕ್ತಿಯನ್ನು ಬೋಧಿಸುವಳು. ''ಆತ್ಮಾವೈ ಪುತ್ರನಾಮಾಸಿ ''—'ತಂದೆಯೇ ಮಗನಾಗಿ ಹುಟ್ಟುವನು'—ಎಂದು ಉಪ ನಿಷತ್ತುಗಳು ಹೇಳುತ್ತವೆ. ತಂದೆಯನ್ನು ವಿರೋಧಿಸುವುದು ಮಗನ ಕರ್ತವ್ಯ ವಲ್ಲ ಎಂಬುದು ಸನಾತನ ಧರ್ಮ ತತ್ವ. ಶ್ರೀರಾಮನ ಅವತಾರ ತತ್ವವು ಅವನ ಪಿತೃಭಕ್ತಿಯಿಂದ ಹೊರಹೊಮ್ಮಿದೆ ಎಂದು ನಾವು ರಾಮಾಯಣದಲ್ಲಿ ಅರಿಯು ತ್ತೇವೆ. ಇಂತಹ ದಿವ್ಯ ತತ್ವಗಳನ್ನೇ ಚಿತ್ರಾಂಗದೆ ಮಗನಿಗೆ ಬೋಧಿಸುತ್ತಾಳೆ. ಪತಿಯಾದ ಅರ್ಜುನನ ಆಗಮನಾರ್ಥವಾಗಿಯೇ ತಾನು ಅದುವರೆವಿಗೂ ತಪಸ್ಸು ಮಾಡಿದುದಾಗಿ ಹೇಳುತ್ತಾಳೆ. ಈ ಮಾತು ಅವಳ ಸತೀಧರ್ಮಕ್ಕೆ ಮೆರಗು ಕೊಟ್ಟಿದೆ. (ಸಂ. ೧೮, ಪ. ೫೪ರಲ್ಲಿ) ಪ್ರಭು ಶ್ರೀರಾಮಚಂದ್ರನು ಲೋಕ ರಂಜನಾರ್ಥವಾಗಿ, ಪ್ರಜೆಗಳ ತೃಪ್ತಿಗಾಗಿ '' ಮಮತೆಯಂ ಮಹಾಯೋಗಿ ಬಿಡು ವಂತೆ '' ನಿರಪರಾಧಿಯೆಂದು ತಿಳಿದಿದ್ದರೂ ಸೀತೆಯನ್ನು ತಾನು ಬಿಡುವುದಾಗಿ ಲಕ್ಷ್ಮಣನೊಡನೆ ಹೇಳುತ್ತಾನೆ. ಅಹಹ ! ಎಂತಹ ತತ್ವನಿಷ್ಠೆಯಿದು.

ಮಮತೆಯು ಎಲ್ಲ ದುಃಖಗಳ ಮೂಲವೆಂದು ವೇದಾಂತ ಶಾಸ್ತ್ರವು ತಿಳಿಸುತ್ತದೆ. ಕಾರಣ ಅಂತಹ ಮಮತೆಯನ್ನು ಬಿಡುವವನೇ ಯೋಗಿಯೆಂದು ಸ್ವಯಂ ಸಿದ್ಧಾಂತವಾಗಿರುವುದಲ್ಲವೆ ? " ಕೊಂದು ಕೊಂಬೊಡೆ ತನ್ನ ಬೆಂದೊಡಲೊಳಿದೆ ಬಸಿರದಂದುಗಂ " (ಸ. ೧೯–೨೪) ಎಂದು ಮಾತೆ ಸೀತೆಯು ಹೇಳುತ್ತಾಳೆ. ಶ್ರೀರಾಮಚಂದ್ರನು ತನ್ನನ್ನು ಲೋಕಾಪವಾದಕ್ಕಾಗಿ ಬಿಟ್ಟನೆಂದೂ, ಉಗ್ರವಾದ ಅಡವಿಗೆ ಅಟ್ಟಿದನೆಂದೂ, ಲಕ್ಷ್ಮಣನಿಂದ ಮಾತುಗಳನ್ನು ಕೇಳಿದ ಮೇಲೆ ಸೀತಾದೇವಿಯು ಆಡಿದ ಮಾತುಗಳಿವು. ನಿರಾಶರೂ ದುಃಖಿತರೂ ಆದ ಸ್ತ್ರೀಯರು ಆತ್ಮಹತ್ಯಮಾಡಿಕೊಳ್ಳಲು ತವಕಿಸುವುದನ್ನು ನಾವು ಲೋಕದಲ್ಲಿ ಕಾಣುತ್ತೇವೆ. ಇದು ಅವರ ಚಿತ್ತ ದೌರ್ಬಲ್ಯದ ಲಕ್ಷಣ; ಆತ್ಮಜ್ಞಾನವಿಲ್ಲದ್ದರ ಫಲ. ಆದರೆ ಲೋಕಮಾತೆ ಸೀತಾದೇವಿಯು ತಾನು ಗರ್ಭಿಣಿಯಾದುದರಿಂದ ಆತ್ಮಹತ್ಯಮಾಡಿಕೊಳ್ಳಲು ತನಗೆ ಹಕ್ಕಿಲ್ಲವೆಂದೂ, ಗರ್ಭದಲ್ಲಿ ಶ್ರೀರಾಮನ ಸಂತಾನವಿದೆಯೆಂದೂ ವಿವೇಕದಿಂದ ಭಾವಿಸುತ್ತಾಳೆ. ಈ ಭಾವನೆಗೆ ಅವಳ ಆತ್ಮಜ್ಞಾನದ ಅರಿವಿನ ಹಿನ್ನೆಲೆ ಇದೆ.

" ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ?" (ಸಂ. ೧೯, ಪ.೫೨), "ಜಗದೊಳುಪಕಾರಿಯಾದವಂ ತನ್ನ ನೋವಂ ನೋಳ್ಪನೆ" (ಪ. ೩೫), ಭೂರಿಶೋಕಾರ್ತರಾಗಿರ್ದರಂ ಕಂಡು ಸುಮ್ಮನೆ ಪೋಪನಲ್ಲ (ಪ. ೩೯). " ವಸುಮತಿಯೊಳ್ ಆರ್ತರಂ ನೋಡಿ ಮಿಗೆ ಮರುಗದಿಹ ಮಾನವಂ ಪಾಪಿಯಲ್ತೆ" (ಸಂ. ೨೮, ಪ. ೩೫), " ಕರುಬರಿದ್ದೂರಿಂದೆ ಕಾಡೊಳ್ಳಿತೆನಿಸುವಂತೆ" (ಪ. ೩೬) " ಬಹುದುರಿತಮಂ ಸ್ವಧರ್ಮದೊಳೊರಸುವಂತೆ" (ಸಂ. ೨೦, ಪ. ೩೨), "ಜೀವ ಪರಮಾತ್ಮರ ವಿಚಾರಿಸುವ ತೆರದಿಂದೆ"(ಸಂ. ೧೪, ಪ. ೭), " ಪರಮಯೋಗಿಗೆ ಭವದ ಬಂಧನಂ ಬಂದಪುದೆ ", " ದುರಿತಗಣಮಿರ್ದಪುದೆ ಗೌತಮಿಯೊಳಾಳ್ದಂಗೆ ", " ಜೀವ ಪರಮರವೋಲಿರ್ದರಾ ವೃಷಧ್ವಜಪಾರ್ಥರು ", " ಲಕ್ಷ್ಮೀಕಾಂತನೊಲವಿಂದೆ ವಿಷಮಮೃತಮಹುದು ", " ಸಂಸಾರ ಪ್ರಲಾಪ ಮಾಲಾಕುಲಮಂ ಅಧ್ಯಾತ್ಮ ಸಾರದಿಂ ತಡೆವ ಯೋಗೀಶ್ವರನ ಚಿತ್ತದಂತೆ" (ಸಂ. ೨೮, ಪ. ೮) " ಘೋರ ಸಂಸಾರದೊಳ್ ಮುಸುಕುವ ಮರವೆಯಂ ನಿವಾರಿಸಿ ಮಹಾಯೋಗಿ ಜೀವ ಪರಮಾತ್ಮರ ವಿಚಾರಿಸುವ ತೆರದಿಂದೆ " (ಸಂ. ೧೪, ಪ. ೭)—ಈ ಮೇಲೆ ಕಂಡ ಎಲ್ಲ ಮಹಾ ವಾಕ್ಯಗಳೂ ಲಕ್ಷ್ಮೀಶ ಕವಿಯ ಭೂತ ಕಾರುಣ್ಯ, ತತ್ವಜ್ಞಾನ, ವಿಶ್ವ ಬಂಧುತ್ವ, ಮಿಗಿಲಾದ ದೈವಭಕ್ತಿ, ಕರುಣಾರ್ದ್ರ ಹೃದಯ–ಇವುಗಳ ಫಲವಾದುವು ಎಂದು ನಾವು ಹೇಳಬಹುದು. ಹೀಗೆ ಕವಿ ಲಕ್ಷ್ಮೀಶನು ಆಧ್ಯಾತ್ಮಿಕ ದೃಷ್ಟಿಯುಳ್ಳವನಾದುದರಿಂದ ಕನ್ನಡ ಜೈಮಿನಿಯನ್ನು ಓದಿದವರಿಗೆ "ಹರಿಹರಾರ್ಚನೆಯ ಸುಕೃತಂಗಳಾದಪುವು" ಎಂದೂ, "ಪುಣ್ಯಮಿದು ಶ್ರೀ ಕೃಷ್ಣಚರಿತಾಮೃತಂ" ಎಂದೂ ಹೇಳಿರುತ್ತಾನೆ. ಹೀಗೆ ಕಾವ್ಯವು ಅಧ್ಯಾತ್ಮದ ಹಿನ್ನಲೆಯಲ್ಲಿ ವಿರಚಿತವಾಗಿರುವುದರಿಂದ ಈ ಗ್ರಂಥ

ವನ್ನು ಮನಮುಟ್ಟಿ ಓದುವವರ ಮನಸ್ಸಿನ ಮೇಲೆ ಗಂಗಾಸ್ನಾನದಿಂದುಂಟಾಗುವ ಚಿತ್ತ ಪಾರಿಶುದ್ಧ್ಯವೂ, ಅಮೃತಪಾನಮಾಡಿದವರಿಗೆ ಉಂಟಾಗುವ ಆನಂದಾತಿಶಯವೂ, ಮಂಜುಳ ವೀಣಾಗಾನವನ್ನು ಕೇಳುವುದರಿಂದುಂಟಾಗುವ ಮನೋವಿಲಾಸವೂ ಅನುಭವಕ್ಕೆ ಬರುತ್ತದೆ.

ಜೈಮಿನಿ ಭಾರತದ ಕಥಾಸಾರ

ಜೈಮಿನಿ ಭಾರತದ ಕಥೆಯನ್ನು ವೈಶಂಪಾಯನನ ಶಿಷ್ಯನಾದ ಜೈಮಿನಿ ಮುನಿಯು ಪಾಂಡವರ ವಂಶೀಯನಾದ ಜನಮೇಜಯ ಮಹಾರಾಜನಿಗೆ ಈ "ಕರ್ಣಾವತಂಸಮೆನೆ ರಂಜಿಸುವ ಸತ್ಕಥೆಯನು" ಹೇಳಿದ್ದಾನೆ.

ಸಹೋದರ ವಧೆಯಿಂದ ಖಿನ್ನನಾಗಿದ್ದ ಯುಧಿಷ್ಠಿರ ಮಹಾರಾಜನಿಗೆ ವೇದವ್ಯಾಸ ಮಹರ್ಷಿಗಳು ಅಶ್ವಮೇಧಯಾಗವನ್ನು ಮಾಡುವುದರಿಂದ ಮನಶ್ಶಾಂತಿ ಉಂಟಾಗುವುದೆಂದು ಬೋಧಿಸುವರು. ಇದು ವಿಖ್ಯಾತ ಕ್ಷತ್ರಿಯರ ಕರ್ತವ್ಯವೆಂದೂ ಹೇಳುವರು. ಧರ್ಮರಾಜನು ಭರತ, ನಹುಷಾದಿ ರಾಜರಂತೆ ಭೂಮಂಡಲವು ಕೊಂಡಾಡುವಂತೆ ರಾಜ್ಯಭಾರ ನಡೆಸುವನು. ಅವನ ರಾಜ್ಯದಲ್ಲಿ ಕಳವು, ಹುಸಿ, ವೈರ, ಕೊಲೆ ಮೊದಲಾದ ದುಷ್ಕೃತ್ಯಗಳಿಲ್ಲದೆ ದೇಶವು ಸುಭಿಕ್ಷವಾಗಿರುವುದು. ಆದರೂ ಧರ್ಮರಾಜನು ಬಂಧು ಬಾಂಧವರ ಸಂಹಾರದಿಂದ ಮನನೊಂದು ದುಃಖಿತನಾಗಿರುವನು. ಆಗ ಗುರುಗಳಾದ ವೇದವ್ಯಾಸರು ಬಂದು ಅವನಿಗೆ ಧರ್ಮೋಪದೇಶವನ್ನು ಮಾಡಿ, ಹಿಂದೆ ಶ್ರೀರಾಮಚಂದ್ರಾದಿಗಳು ನಿರ್ವಹಿಸಿದ ಅಶ್ವಮೇಧಯಾಗಮಾಡೆಂದು ಮಾರ್ಗದರ್ಶನ ಮಾಡಿಸಿದರು. ಆ ಯಾಗದ ವಿಧಾನವನ್ನು ನಿರೂಪಿಸುವರು. ಅದಕ್ಕೆ ಅರ್ಹವಾದ ಕುದುರೆಯು ಭದ್ರಾವತಿಯ ಅರಸನಾದ ಯೌವ್ವನಾಶ್ವನಲ್ಲುಂಟೆಂದು ತಿಳಿಸುವರು.

ಕುದುರೆಯನ್ನು ತರಲು ಭೀಮ ಮತ್ತು ವೃಷಧ್ವಜರು ಸಿದ್ಧರಾಗುವರು. ಆಗ ಕೃಷ್ಣನು ಅಶ್ವಮೇಧವು ಕಷ್ಟವೆಂದೂ, ಇಂದಿನ ರಾಜರು ಹಿಂದಣ ರಾಜರಂತೆ ಸಾಮಾನ್ಯರಲ್ಲವೆಂದೂ ಹೇಳುವನು. ಅದಕ್ಕೆ ಪಾಂಡವರು ಶ್ರೀಕೃಷ್ಣನನ್ನು ಮರೆ ಹೊಕ್ಕು "ನಿನ್ನ ಕರುಣೆಯಿಂದ ಎಲ್ಲವೂ ಸಾಧ್ಯ" ಎಂದು ಪ್ರಾರ್ಥಿಸುವರು. ಅದಕ್ಕೆ ಶ್ರೀಕೃಷ್ಣನು ಹರ್ಷಿಸಿ ಪಾಂಡವರನ್ನು ಹರಸುವನು. ಹೀಗೆ ಶ್ರೀಕೃಷ್ಣನ ಅಪ್ಪಣೆಯನ್ನು ಪಡೆದು ಭೀಮ ವೃಷಕೇತುಗಳು ಭದ್ರಾವತಿಗೆ ಹೋಗಿ, ಆ ದೇಶದ ಸೌಂದರ್ಯವನ್ನು ಮನಸಾರೆ ಶ್ಲಾಘಿಸಿ, ಯೌವ್ವನಾಶ್ವನನ್ನು ಜಯಿಸಿ, ಯಜ್ಞದ ಕುದುರೆಯನ್ನು ತರುವರು. ಪರಾಜಿತನಾದ ಯೌವ್ವನಾಶ್ವನು ಪಾಂಡವರು ಶ್ರೀಕೃಷ್ಣನ ಮಿತ್ರರೆಂದು ಕೇಳಿ ಕುದುರೆಯನ್ನು ಕೊಟ್ಟು ಹಸ್ತಿನಾವತಿಗೆ ಬಂದು ಧರ್ಮರಾಜನನ್ನು ಕಾಣಿಸಿಕೊಳ್ಳುವನು. ಆ ಯಜ್ಞಕ್ಕೆ ಬೇಕಾದ ಧನವನ್ನು ಹಿಮಗಿರಿಯಿಂದ (ಮರುತ್ತರಾಯನು ಅಲ್ಲಿಟ್ಟಿದ್ದ ಅಪಾರ ಧನ) ಹಸ್ತಿನಾವತಿಗೆ ತರಿಸುವರು.

ಯಜ್ಞಕಾಲ ಸಮೀಪಿಸಲು ಭೀಮನು ದ್ವಾರಾವತಿಗೆ ಹೋಗಿ ಶ್ರೀಕೃಷ್ಣನನ್ನು ಕರೆತಂದನು. ಈ ಸಂದರ್ಭದಲ್ಲಿ ಅನುಸಾಲ್ವನು ಶ್ರೀಕೃಷ್ಣನ ಪೂರ್ವ ವೈರಿಯಾದುದರಿಂದ ಯಜ್ಞಾಶ್ವವನ್ನು ಅಪಹರಿಸುವನು. ಕಡೆಗೆ ಅವನು ಪಾಂಡವರಿಗೆ ಸೋತು ಯಜ್ಞಾಶ್ವವನ್ನು ಬಿಟ್ಟುಕೊಟ್ಟು ಪಾಂಡವರನ್ನು ಮರೆಹೊಗುವನು. ಅಸಿಪತ್ರವ್ರತವನ್ನು ಕೈಗೊಂಡ ಧರ್ಮರಾಯನು ಯಜ್ಞದೀಕ್ಷಿತನಾಗಿ ಕುಳಿತುಕೊಳ್ಳುವನು. ಚೈತ್ರ ಹುಣ್ಣಿಮೆಯ ದಿನ ಯಜ್ಞಾಶ್ವವನ್ನು ದೇಶ ಸಂಚಾರಕ್ಕೆ ಬಿಡುವರು. ಕುದುರೆಯ ರಕ್ಷಣೆಗೆ ಅರ್ಜುನ, ವೃಷಕೇತು, ಪ್ರದ್ಯುಮ್ನ, ಸಾತ್ಯಕಿ, ಯೌವ್ವನಾಶ್ವ ಮತ್ತು ಅನುಸಾಲ್ವರು ಹೊರಡುವರು. ಅವರನ್ನು ಶ್ರೀಕೃಷ್ಣ, ಧರ್ಮರಾಯ, ಕುಂತೀದೇವಿಯರು ಹರಸುವರು.

ಕುದುರೆಯು ಮೊದಲು ಮಾಹಿಷ್ಮತೀ ಪಟ್ಟಣಕ್ಕೆ ಬರುವುದು. ಅಲ್ಲಿನ ಅರಸು ನೀಲಧ್ವಜನ ಮಗ ಪ್ರವೀರನು ಕುದುರೆಯನ್ನು ಕಟ್ಟುವನು. ನೀಲಧ್ವಜನಿಗೆ ಅಗ್ನಿಯು ಅಳಿಯನಾದುದರಿಂದ ಯುದ್ಧವು ಭಯಂಕರವೆನಿಸಿತು. ಅರ್ಜುನನು ಅಗ್ನಿಯನ್ನು ಪ್ರಾರ್ಥಿಸಿ ಅವನ ಆಶೀರ್ವಾದ ಪಡೆಯುವನು. ಅಗ್ನಿಯ ಸಲಹೆಯಂತೆ ನೀಲಧ್ವಜನು ಯುದ್ಧವನ್ನು ನಿಲ್ಲಿಸಿ ಯಜ್ಞಾಶ್ವವನ್ನು ಬಿಟ್ಟುಕೊಡುವನು. ಆದರೆ, ಅವನ ಹೆಂಡತಿಯಾದ ಜ್ವಾಲೆ ಮತ್ತೆ ಗಂಡನನ್ನು ಹುರಿದುಂಬಿಸಿ ಯುದ್ಧಕ್ಕೆ ಕಳುಹಿಸಲು ಮಗನು ಮಡಿಯುವನು. ಆಗ ಅರಸನು ಜ್ವಾಲೆಯನ್ನು ಬೈದು ಅರ್ಜುನನ ಕೂಡೆ ಗೆಳೆತನಮಾಡಿ ಕುದುರೆಯ ಸಂರಕ್ಷಣೆಗೆ ಹೊರಡುವನು.

ಆಗ ಹಟಮಾರಿಯಾದ ಜ್ವಾಲೆಯು ತನ್ನ ತಮ್ಮನ ಮಗನಾದ ಉನ್ಮುಖನ ಮನೆಗೆ ಹೋಗುವಳು. ಅವನು ಕೃಷ್ಣ ಮಿತ್ರರಾದ ಪಾಂಡವರನ್ನು ಗೆಲ್ಲುವುದು ಕಷ್ಟವೆಂದು ಅವಳ ಮಾತಿಗೆ ಒಪ್ಪಿಕೊಳ್ಳದೆ ಜ್ವಾಲೆಯನ್ನು ಮನೆಯಿಂದ ಹೊರಗೆ ಓಡಿಸುವನು. ಆಗ ಜ್ವಾಲೆ ಗಂಗಾತೀರಕ್ಕೆ ಬಂದು ಗಂಗೆಯನ್ನು ಪ್ರತ್ಯಕ್ಷ ಮಾಡಿಕೊಂಡು ಗಂಗಾಪುತ್ರನಾದ ಭೀಷ್ಮನನ್ನು ಅರ್ಜುನನು ಕೊಂದನೆಂದು ಅವಳ ನೆನಪಿಗೆ ತಂದು ಅರ್ಜುನನು ಮಗನಿಂದಲೇ ಮರಣ ಹೊಂದುವಂತೆ ಗಂಗೆಯಿಂದ ಶಾಪ ಕೊಡಿಸುವಳು. ಕಡೆಗೆ ಜ್ವಾಲೆ ಅಗ್ನಿಪ್ರವೇಶಮಾಡಿ, ಬಭ್ರುವಾಹನನ ಬಳಿ ಬಾಣವಾಗಿ ಸೇರುವಳು.

ಅಲ್ಲಿಂದ ಹೊರಟ ಕುದುರೆಯು ಮುಂದೆ ಸೌಭರಿ ಮುನಿಯ ಆಶ್ರಮಕ್ಕೆ ಬಂದು ಕಲ್ಲಲ್ಲಿ ಕೀಲಿಸಿಕೊಂಡು ನಿಲ್ಲುವುದು. ಅರ್ಜುನನು ಆಶ್ಚರ್ಯಪಟ್ಟು ಕುದುರೆಯ ಈ ಅಚಲ ಸ್ಥಿತಿಗೆ ಕಾರಣವನ್ನು ಕೇಳಿ, ಮುನಿಮುಖದಿಂದ ಉದ್ದಾಲಕ ಮುನಿಯ ಪತ್ನಿಯಾದ ಚಂಡಿಯ ಕಥೆಯನ್ನು ಲಾಲಿಸಿ, ಮುಂದೆ ಹಂಸಧ್ವಜನ ಚಂಪಕಾವತಿಗೆ ಬರುವನು. ಹರಿಭಕ್ತನಾದ ಹಂಸಧ್ವಜನು ಕುದುರೆಯನ್ನು ಕಟ್ಟುವನು. ಸುಧನ್ವನು ತಂದೆಯ ಅಪ್ಪಣೆಯಂತೆ ಎಣ್ಣೆ ಕೊಪ್ಪರಿಗೆ

ಯಲ್ಲಿ ಅದೊಂದು ತಪ್ಪಿಗಾಗಿ ಬೇಯುವನು. ಶ್ರೀ ಕೃಷ್ಣನ ನಾಮಸ್ಮರಣೆಯಿಂದ ಅವನು ಪಾರಾಗುವನು. ಮುಂದೆ ಸುಧನ್ವ ಸುರಥರು ಕೃಷ್ಣಾರ್ಜುನರ ಕೂಡೆ ಭಯಂಕರವಾದ ಕಾಳಗವನ್ನು ಮಾಡುವರು. ಯುದ್ಧದ ವರ್ಣನೆಯು ಹನ್ನೆರಡನೆಯ ಅಧ್ಯಾಯದ ತುಂಬ ಭಯಂಕರವೆನಿಸಿದೆ. ಯುದ್ಧವು ಅರ್ಜುನ ವೃಷಕೇತುಗಳ ಕೈಮೀರಿ ಹೋಗುವುದು. ಅರ್ಜುನನು ಶ್ರೀಕೃಷ್ಣನನ್ನು ಬರಮಾಡಿಕೊಳ್ಳುವನು. ಸುಧನ್ವನು ವೀರ ಸ್ವರ್ಗವನ್ನು ಹೊಂದುವನು. ಅವನ ತಲೆಯು ಶಿವನ ರುಂಡಮಾಲೆಯಲ್ಲಿ ಸೇರುವುದು. ಸುರಥನು ಅರ್ಜುನನ ಮೇಲೆ ಬಹಳ ಭಯಂಕರವಾದ ಯುದ್ಧವನ್ನು ಮಾಡುವನು. ಸುರಥನು ಸತ್ತು ಅವನ ತಲೆಯೂ ಶಿವನ ರುಂಡಮಾಲೆಯಲ್ಲಿ ಸೇರುವುದು. ಆಮೇಲೆ ಶ್ರೀಕೃಷ್ಣನು ಹಂಸಧ್ವಜನಿಗೆ ಕ್ಷಾತ್ರ ತಾಮಸವನ್ನು ಬಿಡುವಂತೆ ಹೇಳಿ ಯುಧಿಷ್ಠಿರನ ಅಶ್ವಮೇಧಕ್ಕೆ ಹಂಸಧ್ವಜನು ನೆರವಾಗುವಂತೆ ಮಾಡುವನು. ಅರ್ಜುನನನ್ನು ಮುಂದೆ ಕಳುಹಿಸಿ ಶ್ರೀಕೃಷ್ಣನು ಹಸ್ತಿನಾವತಿಗೆ ತೆರಳುವನು.

ಅನಂತರ ಕುದುರೆಯು ಪಾರ್ವತಿಯ ತಪಸ್ಸಿನ ಪುಣ್ಯ ಭೂಮಿಯನ್ನು ಸೇರಿ ಅಲ್ಲಿರುವ ಕೊಳದ ನೀರನ್ನು ಕುಡಿದು ಹೆಣ್ಣು ಕುದುರೆಯಾಗಿ ಮತ್ತೊಂದು ಕೊಳದ ನೀರನ್ನು ಕುಡಿದು ಹೆಬ್ಬುಲಿಯಾಗುವುದು. ಅರ್ಜುನನು ಈ ಆಕಸ್ಮಿಕ ಆಶ್ಚರ್ಯವನ್ನು ಕಂಡು ಭಯಚಕಿತನಾಗುವನು. ಆಗ ಅರ್ಜುನನು ಶ್ರೀ ಕೃಷ್ಣನಾಮವನ್ನು ಸ್ಮರಿಸಿಕೊಂಡು ಕುದುರೆಯನ್ನು ಮೊದಲಿನಂತೆ ಮಾಡಿಕೊಳ್ಳುವನು. ಭಗವಂತನ ಭಕ್ತರಿಗೆ ಬಂದ ಕಷ್ಟಗಳು ಬೇಗನೆ ತೊಲಗುವುವು.

ಮುಂದೆ ಯಜ್ಞಾಶ್ವವು ಸ್ತ್ರೀರಾಜ್ಯವಾದ ಪ್ರಮೀಳೆಯ ದೇಶಕ್ಕೆ ಹೋಗುವುದು. ಆ ಸ್ತ್ರೀರಾಜ್ಯವು ವಿಷಕನ್ಯೆಯರಿಂದ ತುಂಬಿರುವುದು. ಆ ರಾಜ್ಯಕ್ಕೆ ಪ್ರಮೀಳೆಯು ಅಧಿಪತಿ. ಆ ದೇಶದಲ್ಲಿ ತನ್ನ ಸೈನಿಕರು ಸಂಯಮಿಗಳೂ ವಿವೇಕಿಗಳೂ ಆಗಿರಬೇಕೆಂದು ಅರ್ಜುನನು ಎಚ್ಚರಿಸುವನು. ಯಜ್ಞಾಶ್ವವನ್ನು ಪ್ರಮೀಳೆಯು ಕಟ್ಟಲು ಅರ್ಜುನನು ಯುದ್ಧಕ್ಕೆ ಸಿದ್ಧನಾಗುವನು. ಆಗ ಆಕಾಶವಾಣಿಯೊಂದು,—"ಅರ್ಜುನ, ಇವಳ ಮೇಲೆ ಯುದ್ಧ ಮಾಡಬೇಡ, ಇವಳನ್ನು ಮದುವೆಯಾಗು. ಅದರಿಂದ ನಿನಗೆ ಶ್ರೇಯಸ್ಸಾಗುವುದು" ಎಂದು ಹೇಳುವುದು. ಅದರಂತೆ ಅರ್ಜುನನು ಪ್ರಮೀಳೆಯನ್ನು ಮದುವೆಯಾಗಿ ಮುಂದೆ ಶ್ರೀಕೃಷ್ಣನ ದರ್ಶನವಾದನಂತರ ನಿನ್ನನ್ನು ಕೂಡುವೆನೆಂದು ಹೇಳಿ ಪ್ರಮೀಳೆಯನ್ನು ಹಸ್ತಿನಾವತಿಗೆ ಕಳುಹುವನು.

ಅನಂತರ ಕುದುರೆಯು ಕೆಲವು ಆಶ್ಚರ್ಯಕರವಾದ ಪ್ರದೇಶಗಳನ್ನು ಹಾಯ್ದು ಭೀಕರವಾದ ಭೀಷಣನ ರಾಜ್ಯವನ್ನು ಸೇರುವುದು. ರಾಕ್ಷಸನಾದ ಆ ಭೀಷಣನು ಮಾಯಾಜಾಲದಿಂದ ಅರ್ಜುನನನ್ನು ಕಾಡುವನು. ಆದರೆ, ಅರ್ಜುನನ ಬಾಣಗಳು ಅವನ ಮಾಯೆಯನ್ನು ಬಡಿದೋಡಿಸಿ ದೈತ್ಯನನ್ನು ದೆಸೆಗೆಟ್ಟು ಓಡಿಸುವುವು. ರಾಕ್ಷಸನಾದ ಭೀಷಣನು ಶರಣಾಗುವನು.

ಮುಂದೆ ಕುದುರೆಯು ಮಣಿಪುರಕ್ಕೆ ಸಾಗುವುದು. ಮಣಿಪುರದರಸು ಬಭ್ರುವಾಹನನು ಕುದುರೆಯನ್ನು ಕಟ್ಟುವನು. ಅವನ ತಾಯಿ ಚಿತ್ರಾಂಗದೆ ಈ ಸುದ್ದಿಯನ್ನು ಕೇಳಿ, " ಮಗನೆ, ಅರ್ಜುನನು ನಿನ್ನ ತಂದೆ, ತಂದೆಗೆದುರಾಗಿ ನಿಲ್ಲುವುದು ಮಗನ ಲಕ್ಷಣವಲ್ಲ. ನಿನ್ನ ಸರ್ವಸ್ವವನ್ನೂ ಅವನಿಗೆ ಒಪ್ಪಿಸಿ ಶರಣಾಗು " ಎಂದು ಬುದ್ಧಿ ಹೇಳುವಳು. ಅದರಂತೆ ಬಭ್ರುವಾಹನನು ಅರ್ಜುನನನ್ನು ಮರೆಹೊಗಲು ಸಿದ್ಧನಾಗಿ ಬರುವನು. ಬಭ್ರುವಾಹನನ ಈ ವಿನಯವನ್ನು ಅರ್ಥಮಾಡಿಕೊಳ್ಳದ ಅರ್ಜುನನು ವಿಧಿವಿಲಾಸದಿಂದಲೋ ಎಂಬಂತೆ ಆ ವೀರ ಬಭ್ರುವಾಹನನನ್ನು ಕಟಕಿಯಾದ ಮಾತುಗಳಿಂದ ನಿಂದಿಸಿ " ನೀನು ವೈಶ್ಯ ಸಂಭವನಾಗಿರಬೇಕು. ಕ್ಷತ್ರಿಯ ಪುತ್ರನಲ್ಲ " ಎಂದು ನಿಂದಿಸುವನು. ಈ ಮಾತಿನಿಂದ ಕುಪಿತನಾದ ಬಭ್ರುವಾಹನನು ಕೆರಳಿದ ಕೇಸರಿಯಂತೆ ಆವೇಶಗೊಂಡು ಅರ್ಜುನನ ಕೂಡೆ ಭಯಂಕರವಾದ ಯುದ್ಧ ಮಾಡುವನು. ರಾಮ ಕುಶಲವರ ಯುದ್ಧದಂತೆ ಇದು ಅತಿ ಭಯಂಕರವೆನಿಸುವುದು. ಆ ಯುದ್ಧವು ದೇವತೆಗಳನ್ನು ತಲೆದೂಗಿಸುವುದು. ಇನ್ನು ಮುಂದೆ ಜೈಮಿನಿ ಭಾರತದ ಕಥೆಯಲ್ಲಿ ಸಂಗ್ರಹವಾಗಿ ರಾಮಾಯಣದ ಉತ್ತರ ಕಾಂಡದ ಕಥೆಯು ನಿರೂಪಿತವಾಗುವುದು. ಶ್ರೀರಾಮಚಂದ್ರನು ಅಗಸನ ಮಾತಿಗಾಗಿ ಸೀತಾದೇವಿಯನ್ನು ವನವಾಸಕ್ಕೆ ಕಳುಹಿಸಿದುದು, ವಾಲ್ಮೀಕಿಯ ಆಶ್ರಮದಲ್ಲಿ ಕುಶಲವರು ಜನಿಸಿ ಅಭಿವೃದ್ಧಿಯನ್ನು ಪಡೆದುದು, ಮುಂದೆ ಶ್ರೀರಾಮನು ಅಶ್ವಮೇಧಯಾಗವನ್ನು ಕೈಗೊಂಡುದು, ಕುಶಲವರು ಯಜ್ಞಾಶ್ವವನ್ನು ಕಟ್ಟಿದುದು, ಲಕ್ಷ್ಮಣ, ಭರತ, ಶತ್ರುಘ್ನರು ಕುಶಲವರಿಗೆ ಸೋತುದು, ಅನಂತರ ಶ್ರೀರಾಮಚಂದ್ರನೇ ಬಂದು ಯುದ್ಧಮಾಡಿ ಬಾಲಕರ ಬಾಣಗಳಿಂದ ಮೂರ್ಛಿತನಾಗಿ ಭೂಮಿಯನ್ನಾಶ್ರಯಿಸುವುದು, ಆಗ ವಾಲ್ಮೀಕಿ ಮುನಿಯು ಬಂದು ತಂದೆ ಮಕ್ಕಳ ಸಮಾಗಮ ಮಾಡಿಸುವುದು, ಸೀತಾದೇವಿಗೆ ಸಮಾಧಾನ ಹೇಳಿ ಆಕೆಯನ್ನು ಅಯೋಧ್ಯೆಗೆ ಕಳುಹಿಸುವುದು—ಇತ್ಯಾದಿ ಕಥೆಯು ನಿರೂಪಿತವಾಗಿದೆ. ಇತ್ತ ಅರ್ಜುನ, ಬಭ್ರುವಾಹನರ ಕಾಳಗವು ಉಗ್ರ ಸ್ವರೂಪವನ್ನು ತಾಳುವುದು. ಬಭ್ರುವಾಹನನ ಮುಂದೆ ಪಾಂಡವರ ಸೈನ್ಯವು ಮಂಕಾಗುವುದು. ಮೊದಲು ವೃಷಕೇತು ಮಡಿಯುವನು. ಅರ್ಜುನನು ಬಲಹೀನನಾಗುವನು. ಗಂಗೆಯ ಶಾಪ, ಪತಿವ್ರತೆಯಾದ ಚಿತ್ರಾಂಗದೆಯನ್ನು ನಿಂದಿಸಿದ ಪಾಪ, ವೀರ ಬಭ್ರುವಾಹನನ ಪ್ರತಾಪ—ಇವು ಮೂರೂ ಸೇರಿ ಜ್ವಾಲೆಯ ಚಲದ ಪರಿಣಾಮವೋ ಎಂಬಂತೆ ಕಾರ್ತಿಕ ಏಕಾದಶಿಯ ದಿನ ಅರ್ಜುನನ ತಲೆಯು ಕೆಳಗೆ ಬೀಳುವಂತೆ ಮಾಡುವುದು. ಬಭ್ರುವಾಹನನ ಬಾಣದಿಂದ ಅರ್ಜುನನು ಹತನಾಗುವನು. ಬಭ್ರುವಾಹನನು ಜಯೋತ್ಸಾಹದಿಂದ ಬೊಬ್ಬಿರಿದಾಗ ಪತಿವ್ರತೆಯಾದ ಆತನ ತಾಯಿ ಚಿತ್ರಾಂಗದೆ ಬಂದು ತನ್ನ ಪತಿಯಾದ 'ಅರ್ಜುನನು ವಾಸುದೇವನ ಸಖನು ಮಡಿದನೆ' ಎಂದು ಗೋಳಾಡುವಳು. ಅಷ್ಟು ಹೊತ್ತಿಗೆ ಉಲೂಪಿಯೂ

ಬಂದು ದುಃಖದಲ್ಲಿ ಭಾಗಿಯಾಗುವಳು. ಆಗ ಬಭ್ರುವಾಹನನು ಪಿತೃವಧೆಯ ಪಾಪಕ್ಕಾಗಿ ಬೆಂಕಿಗೆ ಬೀಳಲು ಸಿದ್ಧನಾಗುವನು. ಆಗ ಶ್ರೀಕೃಷ್ಣನನ್ನು ಬರಮಾಡೆಂದು ತಾಯಿ ಮಗನಿಗೆ ಬುದ್ಧಿವಾದ ಹೇಳುವಳು. ಕೃಷ್ಣಾಗಮನದಿಂದ ಎಲ್ಲರಿಗೂ ಮಂಗಳವಾಗುವುದೆಂಬುದು ಅವಳ ಅಂತರಂಗದ ಆಶೆ.

ಉಲೂಪಿಯ ಸಲಹೆಯಂತೆ ಪಾತಾಳದಿಂದ ಸಂಜೀವಕಮಣಿಯನ್ನು ತಂದು ಅರ್ಜುನನನ್ನು ಬದುಕಿಸಲು ಬಭ್ರುವಾಹನನು ಸಂಕಲ್ಪಿಸುವನು. ಸರ್ಪರಾಜನು ಆ ಮಣಿಯನ್ನು ಕೊಡಲೊಪ್ಪಿದರೂ ಧೃತರಾಷ್ಟ್ರ ಎಂಬ ಮಂತ್ರಿಯು ಆ ಮಣಿಯನ್ನು ಕೊಡದಂತೆ ಮಾಡುವನು. ಬಭ್ರುವಾಹನನು ಮಂತ್ರಾಸ್ತ್ರಗಳಿಂದ ಸರ್ಪಕುಲವನ್ನು ನರಳಿಸುವನು. ಆಗ ಆದಿಶೇಷನು ಮಣಿಯನ್ನು ತೆಗೆದುಕೊಂಡು ಶ್ರೀಕೃಷ್ಣನ ಸಂದರ್ಶನಾರ್ಥನಾಗಿ ಪಾರ್ಥನ ಕಳೇವರವಿದ್ದೆಡೆಗೆ ಬರುವನು. ಆಗ ಧೃತರಾಷ್ಟ್ರನ ಮಕ್ಕಳು ಪಾರ್ಥನ ತಲೆಯನ್ನಪಹರಿಸುವರು.

ಅತ್ತ ಹಸ್ತಿನಾಪತಿಯಲ್ಲಿ ಕುಂತಿಗೆ ದುಃಸ್ವಪ್ನವಾಗಿ, ತಾಯಿಕರುಳಿನ ಫಲವಾಗಿ ಅರ್ಜುನನಿಗೆ ಕೆಡುಕಾಗಿರಬೇಕೆಂದು ಆಕೆ ಚಿಂತಿಸುವಳು. ಕೂಡಲೇ ಶ್ರೀಕೃಷ್ಣನು ಗರುಡನನ್ನೇರಿ ಕುಂತಿ, ಯಶೋದೆ, ಭೀಮ ಮೊದಲಾದವರೊಡನೆ ಮಣಿಪುರಕ್ಕೆ ಬರುವನು. ವೃಷಕೇತು–ಅರ್ಜುನರ ಸ್ಥಿತಿಯನ್ನು ನೋಡಿ ಭೀಮನು ಕನಲುವನು. ಬಭ್ರುವಾಹನನು ಎಲ್ಲರ ಪಾದಗಳ ಮೇಲೆ ಬಿದ್ದು ಪಿತೃದ್ರೋಹಿಯಾದ ತನ್ನನ್ನು ಕೊಲ್ಲುವಂತೆ ಕೇಳಿಕೊಳ್ಳುವನು. ಕುಂತಿಯ ಶೋಕವು ಮಿಗಿಲಾಗುವುದು. ಮಣಿಪುರವು ದುಃಖದ ಸಾಗರವಾಗುವುದು.

ಈ ಹೊತ್ತಿಗೆ ಆದಿಶೇಷನು ಸಂಜೀವಕಮಣಿಯೊಡನೆ ಬಂದು ಶ್ರೀಕೃಷ್ಣನನ್ನು ಪ್ರಾರ್ಥಿಸುವನು. ಶ್ರೀಕೃಷ್ಣನು ತನ್ನ ಸಂಕಲ್ಪಮಾತ್ರದಿಂದ ಅರ್ಜುನನ ತಲೆಯನ್ನು ಇದ್ದಲ್ಲಿಗೆ ತರಿಸುವನು. ಅಂತೆಯೇ ಸತ್ತ ವೃಷಕೇತು ಮೊದಲಾದವರೆಲ್ಲರನ್ನೂ ಬದುಕಿಸುವರು. ಎಲ್ಲೆಲ್ಲಿಯೂ ಸಂತೋಷವು ಹೊರಸೂಸುವುದು. ಬಭ್ರುವಾಹನನು ಎಲ್ಲರನ್ನೂ ಮಣಿಪುರಕ್ಕೆ ಸ್ವಾಗತಿಸಿ ಸಮಸ್ತರಾಜ್ಯವೈಭವವನ್ನೂ ಕೃಷ್ಣಾರ್ಜುನರಿಗೆ ಒಪ್ಪಿಸುವನು. ಕೃಷ್ಣನು 'ಇದೆಲ್ಲವೂ ಗಂಗೆಯ ಶಾಪದ ಫಲ' ಎಂದು ಅರ್ಜುನನಿಗೆ ತಿಳಿಸುವನು. ಆಗ ಕೃಷ್ಣಾರ್ಜುನರು ಕುದುರೆಯ ಕಾವಲಾಗಿ ಮುಂದೆ ಹೋಗುವರು. ಉಳಿದವರು ಹಸ್ತಿನಾವತಿಗೆ ತೆರಳುವರು.

ಮುಂದೆ ಕುದುರೆಯು ಮಯೂರಧ್ವಜನ ರತ್ನಪುರಕ್ಕೆ ಹೋಗುವುದು. ಅವನು ಏಳು ಅಶ್ವಮೇಧಗಳನ್ನು ಮಾಡಿ ಎಂಟನೆಯದನ್ನು ಸಾಗಿಸಿದ್ದನು. ಯುಧಿಷ್ಠಿರ—ಮಯೂರಧ್ವಜರ ಕುದುರೆಗಳು ಎದುರಾಗುವುವು. ತಾಮ್ರಧ್ವಜನು ಧರ್ಮರಾಜನ ಕುದುರೆಯನ್ನು ಕಟ್ಟುವನು. ತಾಮ್ರಧ್ವಜನಿಗೂ ಕೃಷ್ಣಾರ್ಜುನರಿಗೂ ಭಯಂಕರವಾದ ಯುದ್ಧವಾಗಿ ಕೃಷ್ಣಾರ್ಜುನರು ಮೂರ್ಛಿತ

ರಾಗುವರು. ಈ ಮಾತನ್ನು ಕೇಳಿ ಹರಿಭಕ್ತನಾದ ಮಯೂರಧ್ವಜನು ಶ್ರೀಕೃಷ್ಣನ ಸಂದರ್ಶನಾರ್ಥವಾಗಿ ತನ್ನ ಯಜ್ಞವನ್ನೇ ನಿಲ್ಲಿಸಿ ಕೃಷ್ಣನನ್ನು ಅರಸುವನು. ಮುಂದೆ ಕೃಷ್ಣಾರ್ಜುನರು ಉಪಾಯದಿಂದ ಮಯೂರಧ್ವಜನನ್ನು ವಶಮಾಡಿಕೊಳ್ಳಲು ಬ್ರಾಹ್ಮಣ ವೇಷದಿಂದ ಅವನ ಯಜ್ಞಶಾಲೆಗೆ ಹೋಗಿ, ದಾರಿಯಲ್ಲಿ ಸಿಂಹವೊಂದಕ್ಕೆ ಬಲಿಯಾಗಲಿರುವ ತನ್ನ ಮಗನನ್ನು ಉಳಿಸುವ ಸಲುವಾಗಿ ಮಯೂರಧ್ವಜನು ತನ್ನರ್ಧ ದೇಹವನ್ನು ಕೊಡಬೇಕೆಂದು ಶ್ರೀಕೃಷ್ಣನು ಪ್ರಾರ್ಥಿಸುವನು. ಅದರಂತೆ ಮಯೂರಧ್ವಜನು ಕಪಟ ಬ್ರಾಹ್ಮಣನಿಗೆ ಮಾತುಕೊಟ್ಟು, ತನ್ನ ದೇಹವನ್ನು ಸೀಳಿಸುವನು. ಆಗ ಶ್ರೀಕೃಷ್ಣನು ಮಯೂರಧ್ವಜನ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಮಯೂರಧ್ವಜ—ತಾಮ್ರಧ್ವಜರ ಭಕ್ತಿಯನ್ನು ಸ್ವೀಕರಿಸುವನು. ಮಯೂರಧ್ವಜನು ಎಲ್ಲವನ್ನೂ ಕೃಷ್ಣಾರ್ಜುನರಿಗೆ ಸಮರ್ಪಿಸುವನು.

ಮುಂದೆ ಕುದುರೆಯು ಸಾರಸ್ವತಪುರಕ್ಕೆ ಬರುವುದು. ಅದರ ಅರಸು ವೀರವರ್ಮ. ಅವನ ಮಗಳು ಮಾಲಿನಿಯನ್ನು ಮೋಹಿಸಿ ಯಮನು ಅವನ ಅಳಿಯನಾಗಿರುವನು. ವೀರವರ್ಮನು ಯಜ್ಞಾಶ್ವವನ್ನು ಕಟ್ಟಲು ಅರ್ಜುನನಿಗೂ ಅವನಿಗೂ ಯುದ್ಧವಾಗುವುದು. ಆಗ ಶ್ರೀಕೃಷ್ಣನು ತನ್ನ ಮಹಿಮೆಯನ್ನು ಪ್ರಕಟಿಸಿ ವೀರವರ್ಮನನ್ನು ವಶಮಾಡಿಕೊಳ್ಳುವನು. ಯಮನು ಮಾವನನ್ನು ಶ್ರೀಕೃಷ್ಣನಿಗೆ ಒಪ್ಪಿಸಿ ತನ್ನೂರಿಗೆ ಪ್ರಯಾಣಮಾಡುವನು.

ಮುಂದೆ ಕುದುರೆಯು ಕುಂತಳನಗರಕ್ಕೆ ಬರುವುದು. ದಿವ್ಯಜ್ಞಾನಿಗಳಾದ ನಾರದರೇ ಭಾಗವತ ಶಿರೋಮಣಿಯಾದ ಚಂದ್ರಹಾಸನ ಆಶ್ಚರ್ಯಕರವಾದ ಕಥೆಯನ್ನು ಅರ್ಜುನನಿಗೆ ಹೇಳುವರು. ಕನ್ನಡ ಜೈಮಿನಿ ಭಾರತದಲ್ಲಿ ಈ ಕಥೆಯು ಕುತೂಹಲ ಜನಕವೆನಿಸಿ ಅತ್ಯಂತ ರಮಣೀಯವಾಗಿದೆ. ಮಂತ್ರಿಯಾದ ದುಷ್ಟಬುದ್ಧಿಯ ಕೆಟ್ಟ ಪ್ರಯತ್ನಗಳು ನಡೆಯದೆ ಭಗವದ್ಭಕ್ತನಾದ ಚಂದ್ರಹಾಸನ ಏಳ್ಗೆಯು ಶತಾಧಿಕವಾಗುವುದೆಂಬುದನ್ನು ಇಲ್ಲಿ ನಾವು ನೋಡಬಹುದು. ಭಗದ್ಭಕ್ತರಿಗೆ ಎಂತಹ ಕಷ್ಟಬಂದರೂ ಅವರು ಪಾರಾಗುವರೆಂಬುದು ಇಲ್ಲಿ ನಿರೂಪಿಸಲ್ಪಟ್ಟಿದೆ. ಚಂದ್ರಹಾಸನು ಪುಳಿಂದನ ಮಗನಾಗಿ, ದುಷ್ಟಬುದ್ಧಿಯ ಮಗಳಾದ ವಿಷಯೆಯನ್ನೂ, ಕುಂತಳೇಂದ್ರನ ಮಗಳಾದ ಚಂಪಕಮಾಲಿನಿಯನ್ನೂ ವಿವಾಹವಾಗಿ ಭಾಗವತ ಶಿರೋಮಣಿ ಎನಿಸಿ ಅಭಿವೃದ್ಧಿಗೆ ಬಂದ ಕಥೆ ಇಲ್ಲಿ ನಿರೂಪಿತವಾಗಿದೆ. ಚಂದ್ರಹಾಸನು ಕಡೆಗೆ ಶ್ರೀಕೃಷ್ಣನ ದಾಕ್ಷಿಣ್ಯಕ್ಕಾಗಿ ಅರ್ಜುನನನ್ನು ವಂದಿಸಿ ಯುಧಿಷ್ಠಿರನ ಅಶ್ವಮೇಧಕ್ಕೆ ಬೆಂಬಲವಾಗಿ ನಿಲ್ಲುವನು.

ಮುಂದೆ ಯುಧಿಷ್ಠಿರನ ಕುದುರೆಯು ಸಮುದ್ರತೀರವನ್ನು ಸೇರುವುದು. ಹಂಸಧ್ವಜ ಮೊದಲಾದ ವೈಷ್ಣವರು ಅಂಬುಧಿಯನ್ನು ಹೊಗುವರು. ಅಲ್ಲಿ ಮಹಾತ್ಮನಾದ ಬಕದಾಲ್ಭ್ಯನ ದರ್ಶನವಾಗುವುದು. ಆ ಬಕದಾಲ್ಭ್ಯನ ಮುಖ

ದಿಂದ ಅನೇಕ ಬ್ರಹ್ಮರ ಕಥೆಗಳನ್ನು ಕೇಳುವರು. ಭಗವಂತನ ಲೀಲೆಯನ್ನು ಅರಿಯುವರು. ಸಾವಿರ ಮುಖದ ಪರಮೇಷ್ಠಿಗಳನ್ನು ಕಾಣುವರು. ಧರ್ಮ ರಾಜನ ಯಜ್ಞಕ್ಕಾಗಿ ಶ್ರೀಕೃಷ್ಣನು ಬಕದಾಲ್ಭ್ಯನನ್ನು ಕರೆತರುವನು. ಹೀಗಾ ದುದು ಪಾಂಡವರ ಅದೃಷ್ಟ ವಿಶೇಷವೇ ಸರಿ !!

ಮುಂದೆ ಯಜ್ಞಾಶ್ವವು ಸಿಂಧೂದೇಶವನ್ನು ಸೇರುವುದು. ದುರ್ಯೋಧ ನನ ತಂಗಿ ದುಶ್ಶಳೆಯು (ಜಯದ್ರಥನ ಹೆಂಡತಿ) ಕೃಷ್ಣಾರ್ಜುನರನ್ನು ಮರೆ ಹೊಗುವಳು. ಹಿಂದಿನ ವೈರವನ್ನು ಮರೆತು ತನ್ನ ಮಗನನ್ನು ಅನುಗ್ರಹಿಸು ವಂತೆ ಬೇಡುವಳು. ಶ್ರೀಕೃಷ್ಣನು ಅವಳನ್ನು ಅನುಗ್ರಹಿಸಿ, ತಂಗಿಯಂತೆ ಸಂಭಾ ವಿಸಿ ಯುಧಿಷ್ಠಿರನ ಯಜ್ಞಕ್ಕೆ ಬರುವಂತೆ ಹೇಳಿ ಅವಳನ್ನು ಕರೆತರುವನು.

ವರ್ಷದ ಕಡೆಗೆ ಕುದುರೆಯು ಧರ್ಮರಾಜನಿದ್ದಲ್ಲಿಗೆ ಬರುವುದು. ಧರ್ಮ ರಾಯನು ದಿಗ್ವಿಜಯವಾರ್ತೆಯನ್ನು ಕೇಳುವನು. ಯಜ್ಞಕ್ಕೆ ಎಲ್ಲ ಏರ್ಪಾಡು ಗಳೂ ನಡೆಯುವುವು. ಆಗ ಶ್ರೀಕೃಷ್ಣ ರುಕ್ಮಿಣಿಯರೇ ಮೊದಲಾದ ಅರುವತ್ತು ನಾಲ್ಕುಮಂದಿ ರಾಜದಂಪತಿಗಳು ಗಂಗೋದಕ ತರಲು ಹೊರಡುವರು. ಆಗ ನಾರದರು ಸತ್ಯಭಾಮೆ—ಜಾಂಬುವತಿಯರನ್ನು ರೇಗಿಸಿ ಶ್ರೀಕೃಷ್ಣನ ವಿರಾಡ್ರೂಪ ಮಹಿಮೆಯನ್ನು ಕಂಡು ಬೆರಗಾಗುವರು.

ಯಜ್ಞಶಾಲೆಯಲ್ಲಿ ಮಂತ್ರಪೂತಜಲದಲ್ಲಿ ದ್ರೌಪದೀ–ಧರ್ಮರಾಜರು ಸ್ನಾನಮಾಡಿ ಯಜ್ಞವನ್ನು ಸಾಂಗಗೊಳಿಸುವರು. ಆಗ ಯಜ್ಞದ ಕುದುರೆ ಯನ್ನು ತರಿಸಿ, ವಿಧ್ಯುಕ್ತವಾಗಿ ಮಂತ್ರವನ್ನು ಪಠಿಸಿ "ಎಲೈ ಕುದುರೆಯೆ, ಅಶ್ವಲೋಕದಲ್ಲಿ ನೀನು ಅಮರ ಪದವಿ ಪಡೆ ಹೋಗು. ನಿನಗೆ ಉತ್ತಮ ಸ್ವರ್ಗ ವಾಗಲಿ" ಎಂದು ಹೇಳಲು ಕುದುರೆ ಬೇಡವೆಂದು ತಲೆಯಲ್ಲಾಡಿಸುವುದು ಧರ್ಮರಾಯನು ಅಶ್ವದ ಸಂಜ್ಞೆಯ ಅರ್ಥವೇನೆಂದು ಶಾಸ್ತ್ರಜ್ಞನಾದ ನಕುಲನನ್ನು ಕೇಳುವನು. ಆಗ ನಕುಲನು, "ಮೇಲಿನ ಲೋಕದ ಅಶ್ವಪದವಿ ಬೇಡ. ನನಗೆ ಮೋಕ್ಷರೂಪಿ ವಿಷ್ಣುಸಾಯುಜ್ಯ ಬೇಕು. ಶ್ರೀಕೃಷ್ಣನ ಸಾನ್ನಿಧ್ಯವಿರುವ ಈ ಯಜ್ಞದಲ್ಲಿ ನಾನು ಕೃಷ್ಣನಲ್ಲಿಯೇ ಸೇರುವೆನು" ಎಂದು ಕುದುರೆ ಹೇಳುವುದಾಗಿ ತಿಳಿಸಿದನು. ಕುದುರೆಯನ್ನು ಯೂಪಸ್ತಂಭಕ್ಕೆ ಕಟ್ಟುವರು. ಧೌಮ್ಯರು ಆ ಕುದುರೆಯ ಕಿವಿಯನ್ನು ಕತ್ತರಿಸುವರು. ಅದರಲ್ಲಿ ಕ್ಷೀರಧಾರೆ ಹೊರಡುವುದು. ಆಮೇಲೆ ಭೀಮನು ಕುದುಗೆಯ ತಲೆಯನ್ನು ಕತ್ತರಿಸಲು ಅದು ಆಕಾಶಕ್ಕೆ ಹಾರಿ ಅಡಗುವುದು. ಆಮೇಲೆ ಕುದುರೆಯ ಹೃದಯದಲ್ಲಿದ್ದ ಪ್ರಾಣವು ಶ್ರೀಕೃಷ್ಣನಲ್ಲಿ ಬಂದು ಸೇರುವುದು. ಕೆಳಗೆ ಬಿದ್ದ ಕುದುರೆಯ ದೇಹವು ಕರ್ಪೂರವಾಗುವುದು. ಅದನ್ನೇ ಶಕ್ರನಿಗೆ ಆಹುತಿ ಕೊಡುವರು. ಕೊನೆಗೆ ಹಯಮೇಧ ಫಲವನ್ನು ಧರ್ಮರಾಯನು ಕೃಷ್ಣನಿಗೆ ಅರ್ಪಿಸುವನು. ಹೀಗೆ ಧರ್ಮರಾಜನ ಅಶ್ವಮೇಧ ಯಾಗವು ಶ್ರೀಕೃಷ್ಣನ ಕೃಪೆಯಿಂದ ಸಮಾಪ್ತಿಗೊಳ್ಳುವುದು.

ಮಹಾ ಭಾರತ—ಜೈಮಿನಿ ಭಾರತ

ಮಹಾಭಾರತದ ೧೮ ಪರ್ವಗಳಲ್ಲಿ ಅಶ್ವಮೇಧಿಕವೆಂಬುದೂ ಒಂದು ಪರ್ವ ಇದರಲ್ಲಿ ಧರ್ಮರಾಜನು ಅಶ್ವಮೇಧವನ್ನು ಮಾಡಿದ ವಿಷಯವಿದೆ. ತಿಮ್ಮಣ್ಣ ಕವಿಯು (ಕ್ರಿ. ಶ. 1510) ವ್ಯಾಸ ಭಾರತದ ಕೊನೆಯ ಎಂಟು ಪರ್ವಗಳನ್ನು ಕನ್ನಡದಲ್ಲಿ ಭಾಮಿನಿ ಷಟ್ಪದಿಗಳಲ್ಲಿ ಬರೆದಿದ್ದಾನೆ. ಆದರೆ, ಆ ಭಾರತದ ಅಶ್ವಮೇಧಿಕ ಪರ್ವಕ್ಕೂ ಜೈಮಿನಿಯ ಅಶ್ವಮೇಧಿಕ ಪರ್ವಕ್ಕೂ ಕಥೆಯಲ್ಲಿ ತುಂಬಾ ವ್ಯತ್ಯಾಸವಿದೆ. ಜೈಮಿನಿ ಭಾರತವು ಕೊಂಚ ವಿಸ್ತಾರವಾಗಿ ಸ್ವಾರಸ್ಯವಾಗಿದೆ ಅನ್ನಬಹುದು. ವೇದವ್ಯಾಸರು ಜೈಮಿನಿಯು ಬರೆದ ಭಾರತವನ್ನೆಲ್ಲಾ ಓದಿಸಿ ಕೇಳಿ ಅದರಲ್ಲಿ ಅಶ್ವಮೇಧಿಕ ಪರ್ವವನ್ನು ಮಾತ್ರ ಉಳಿಸಿ ಉಳಿದುದನ್ನು ನಾಶ ಪಡಿಸುವಂತೆ ಹೇಳಿದರೆಂಬ ಕಥೆಯು ಪ್ರಚಾರದಲ್ಲಿದೆ.

ಮಹಾಭಾರತವು ಭಾರತದಲ್ಲೇ ಏಕೆ, ವಿಶ್ವದಲ್ಲಿಯೇ ದೊಡ್ಡ ಕಾವ್ಯ. "ಸಪಾದ ಲಕ್ಷಗ್ರಂಥ"ವೆಂಬ ಪ್ರಖ್ಯಾತಿಗಳಿಸಿದೆ. ಇದನ್ನು "ಭಾರತಃ ಪಂಚಮೋವೇದಃ" ಎಂದು ಹೇಳಿದ್ದಾರೆ. ಆದಿಪಂಪನು "ಭಾರತಂ ಲೋಕಪೂಜ್ಯಂ" ಎಂದೂ, ಕುಮಾರವ್ಯಾಸನು "ಕಾವ್ಯಕೆ ಗುರು" ಎಂದೂ ಹೇಳಿದ್ದಾರೆ.

ಮಹಾಭಾರತವನ್ನು ಜನಮೇಜಯನಿಗೆ ವೈಶಂಪಾಯನ ಮುನಿ ಹೇಳುತ್ತಾನೆ. ಜೈಮಿನಿಯನ್ನು, ವೈಶಂಪಾಯನನ ಶಿಷ್ಯ ಜೈಮಿನಿ ಋಷಿಯು ಜನಮೇಜಯನಿಗೆ ಹೇಳುತ್ತಾನೆ.

ಜೈಮಿನಿ ಭಾರತವನ್ನು ಲಕ್ಷ್ಮೀಶನು "ಶ್ರೀಕೃಷ್ಣಚರಿತಾಮೃತಂ" ಎಂದು ಹೇಳಿದರೆ ಭಾರತವನ್ನು ಕುಮಾರವ್ಯಾಸನು—

> ತಿಳಿಯ ಹೇಳುವೆ ಕೃಷ್ಣಚರಿತೆಯ ।
> ಇಳೆಯ ಜಾಣರು ಮೆಚ್ಚುವಂದದಿ ।
> ನೆಲೆಗೆ ಪಂಚಮಶ್ರುತಿಯನೊರೆವೆನು ಕೃಷ್ಣಮೆಚ್ಚಲಿಕೆ । (ಆದಿಪರ್ವ ಸಂ. ೧, ಪ. ೨೫)

ಎಂದೂ "ಹರಿಕಥಾಮೃತವೆಂಬ ಭಾರತ" (ಅರಣ್ಯಪರ್ವ ಸಂ. ೩, ಪ. ೩೫), ಎಂದೂ ಹೇಳಿದ್ದಾನೆ.

ಮಹಾಭಾರತದ ಕಥೆಗಳಿಗೂ ಜೈಮಿನಿ ಭಾರತದ ಕಥೆಗಳಿಗೂ ಕೆಲವು ಹೋಲಿಕೆಗಳಿವೆ. ಹಲವು ವ್ಯತ್ಯಾಸಗಳೂ ಇವೆ.

ಕಾವೇರೀ ತೀರದ ಮಾಹಿಷ್ಮತಿಯಲ್ಲಿ ನೀಲನೆಂಬ ರಾಜನಿಗೂ ಸಹದೇವನಿಗೂ ಯುದ್ಧವಾಗುತ್ತದೆ. (ಕನ್ನಡ ಭಾರತ, ಸಭಾಪರ್ವ ಸಂ. ೫, ಪ. ೧೧)

ಆದರೆ ಈ ನೀಲನಿಗೂ, ಜೈಮಿನಿಯಲ್ಲಿ ಬರುವ ನೀಲಧ್ವಜನಿಗೂ ಸಂಬಂಧ ಕಾಣಿಸುವುದಿಲ್ಲ.*

ಮಹಾಭಾರತ—ಜೈಮಿನಿ ಭಾರತಗಳನ್ನು ಓದಿದಾಗ ಒಂದು ವ್ಯತ್ಯಾಸ ಕಾಣುತ್ತದೆ. ಸುಧನ್ವ, ಸುರಥ, ತಾಮ್ರಧ್ವಜರ ಮೇಲೆ ಯುದ್ಧಮಾಡುವಾಗ ಅರ್ಜುನನು ಸೋತುಹೋಗುವನು. ಬಭ್ರುವಾಹನನು ಅರ್ಜುನನ್ನು ಕೊಂದು ಬಿಡುವನು. ಶ್ರೀಕೃಷ್ಣನು ಅವತಾರಗಳ ಪುಣ್ಯವನ್ನಿತ್ತರೂ ಅರ್ಜುನನು ಬದುಕುವುದು ಕಷ್ಟವಾಗಿದೆ. ಭಾರತದಲ್ಲಿ ಅರ್ಜುನನು ಮೂರ್ಛೆಬೀಳುವನೆಂದು ಹೇಳಿದೆ. ಹಿಂದೆ ಪಾಂಡವರು ರಾಜಸೂಯ ಮಾಡಿದಷ್ಟು ಹಗುರವಾಗಿ ಈ ಅಶ್ವಮೇಧ ಮಾಡಲು ಸಾಧ್ಯವಾಗುವುದಿಲ್ಲ. ಇಲ್ಲಿ ಶ್ರೀಕೃಷ್ಣನ ಮಹಿಮೆ—ಧರ್ಮರಾಜನ ಪುಣ್ಯ ಅಶ್ವಮೇಧವನ್ನು ಕೊನೆಗಾಣಿಸುತ್ತವೆ.

ಭಾರತದ ಅಶ್ವಮೇಧಿಕ ಪರ್ವದಲ್ಲಿ ಸ್ಪಷ್ಟವಾದ ಅಶ್ವವಧೆ ಮತ್ತು ಹಿಂಸೆ ನಡೆದಿದೆ. ಆದರೆ ಜೈಮಿನಿ ಭಾರತದ ಅಶ್ವಮೇಧಿಕದಲ್ಲಿ ಹಿಂಸೆ ಅಸ್ಪಷ್ಟವಾಗಿ ಸತ್ತ ಕುದುರೆ ಕರ್ಪೂರವಾಗುವ ಸನ್ನಿವೇಶವಿದೆ. ಭಾರತದ ಅಶ್ವಮೇಧಿಕ ಪರ್ವದ ಯಾತ್ರೆಯಲ್ಲಿ ಹೆಚ್ಚು ಯುದ್ಧಗಳ ಸನ್ನಿವೇಶಗಳಿಲ್ಲ. ಅರ್ಜುನನು ತ್ರಿಗರ್ತ,

---

* ಜೈಮಿನಿ ಭಾರತದಲ್ಲಿ ಬರುವ ಚಂದ್ರಹಾಸನು ಕನ್ನಡರಾಜನೆಂಬ ಪ್ರತೀತಿ ಇದೆ. ಕೊಪ್ಪಳ ತಾಲ್ಲೂಕಿನ ಕುಕನೂರು ಕುಂತಳನಗರವೆಂಬ ಹೇಳಿಕೆಯುಂಟು. ಆ ಕಥೆಯಲ್ಲಿ ಬರುವ ಬೇಡರ ರಾಜನು ಶಿವಮೊಗ್ಗ ಪ್ರಾಂತದ ಕುಬಟೂರಿನವನಿರಬೇಕೆಂದು ಕೆಲವರ ಮತ. ಸುಧನ್ವನನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಬೇಯಿಸಿದುದು ತುಮಕೂರು ಜಿಲ್ಲಾ, ಗುಬ್ಬಿ ತಾಲ್ಲೂಕಿನ ಸಂಪಿಗೆಯಲ್ಲಿ ಎಂದೂ, ಜನಮೇಜಯರಾಜನು ಸರ್ಪಯಾಗಮಾಡಿದುದು ಹಿರೇಮಗಳೂರು ಎಂದೂ ನಮ್ಮ ನಾಡಿನಲ್ಲಿ ದಂತ ಕಥೆಗಳಿವೆ.

ಪಾಂಡವರಲ್ಲಿ ಶೂರನೆನಿಸಿದ ಭೀಮಸೇನನ ಪತ್ನಿ ಹಿಡಿಂಬಿ ಚಿತ್ರದುರ್ಗದವಳೆಂದು ಹೇಳುತ್ತಾರೆ. ಆ ಬೆಟ್ಟದಲ್ಲಿರುವ ಹಿಡಿಂಬೇಶ್ವರ ದೇವಾಲಯವು ಇಲ್ಲಿ ಸ್ಮರಣಾರ್ಹ. ಮಹಾಭಾರತದಲ್ಲಿ ಬರುವ ಬಕಾಸುರನ ಊರು ಚಿಂತಾಮಣಿ ತಾಲ್ಲೂಕು, ಕೈವಾರವೆಂದೂ, ಅಲ್ಲಿನ ಬೆಟ್ಟದಲ್ಲಿ ಬಕನಿದ್ದನೆಂದೂ ಹೇಳುತ್ತಾರೆ. ಅಲ್ಲಿ ಪಾಂಡವರಿದ್ದ ಸ್ಮಾರಕಗಳಿವೆ. ಪಾಂಡವರು ಅಜ್ಞಾತವಾಸ ಮಾಡಿದ ವಿರಾಟನಗರ ಧಾರವಾಡ ಜಿಲ್ಲಾ ಹಾನಗಲ್ಲೆಂದು ಕೆಲವು ವಿದ್ವಾಂಸರ ಮತ. ಹಾನಗಲ್ ಕೋಟೆಗೆ ' ವಿರಾಟನಕೋಟೆ ' ಅನ್ನುತ್ತಾರೆ. ಅಲ್ಲಿ ಕೀಚಕನ ಗರಡಿಮನೆ, ಧರ್ಮಾನದಿ ಮೊದಲಾದುವಿವೆ. ಪಾಂಡವರು ವನವಾಸಮಾಡಿದ ಸ್ಥಳವೇ ' ಬನವಾಸಿ ' ಎನ್ನುತ್ತಾರೆ. ಅದು ಕಾರವಾರ ಜಿಲ್ಲೆಯಲ್ಲಿದೆ.

ಗೋಕರ್ಣದಲ್ಲಿರುವ ಸಮುದ್ರತೀರದ ಶತಶೃಂಗ ಪರ್ವತದಲ್ಲಿ ಪಾಂಡವರ ಗವಿ ಇದೆ. ಅಲ್ಲಿ ಪಾಂಡವರು ಕೆಲಕಾಲ ಇದ್ದರೆನ್ನುತ್ತಾರೆ. ಕರ್ಣಾಟಕದ ಹಿರಿಯ ನದಿಗೆ ಕೃಷ್ಣಾನದಿಯೆಂದೂ, ಹಿರಿಯ ಬೆಟ್ಟಕ್ಕೆ ನೀಲಗಿರಿ (ಕೃಷ್ಣಗಿರಿ) ಎಂದೂ ಹೆಸರಿದೆ. ಕರ್ಣಾಟಕದ ಹೊಯ್ಸಳ, ಯಾದವ, ಮೈಸೂರು ಅರಸರು ಶ್ರೀಕೃಷ್ಣನ ವಂಶೀಯರೆಂದು ಹೆಸರಾಗಿದ್ದಾರೆ. ಉಡುಪಿಯಲ್ಲಿ ಶ್ರೀಕೃಷ್ಣನನ್ನು ಆಚಾರ್ಯ ಆನಂದತೀರ್ಥರು ಸ್ಥಾಪಿಸಿದ್ದಾರೆ. ವಿರಾಟನ ಮಗಳು ಉತ್ತರೆ ಅಭಿಮನ್ಯುವನ್ನು ಮದುವೆಯಾಗಿರುವುದರಿಂದ ಶ್ರೀಕೃಷ್ಣನು ಕರ್ಣಾಟಕಕ್ಕೆ ಬಂಧುವೆನಿಸಿಕೊಳ್ಳುತ್ತಾನೆ. ಇವನ್ನೆಲ್ಲಾ ದಂತ ಕಥೆಯೆಂದು ಉಪೇಕ್ಷಿಸಿದರೂ ಕರ್ಣಾಟಕಕ್ಕೂ ಶ್ರೀಕೃಷ್ಣನಿಗೂ–ಪಾಂಡವರಿಗೂ ಇರುವ ಬಾಂಧವ್ಯವನ್ನು ನಾವು ತಿಳಿಯಬಹುದು. ಮಹಾಕವಿಗಳಾದ ರುದ್ರಭಟ್ಟ, ಕುಮಾರವ್ಯಾಸ, ಲಕ್ಷ್ಮೀಶ, ಚಾಟುವಿಠಲ, ಕನಕದಾಸ ಮೊದಲಾದವರು ಶ್ರೀಕೃಷ್ಣನ ಮಹಿಮೆಯನ್ನು ಕೊಂಡಾಡಿದ್ದಾರೆ. ಕನ್ನಡ ಭಾರತ, ಜೈಮಿನಿ ಭಾರತಾದಿ ಕಾವ್ಯಗಳು ಕನ್ನಡಿಗರಿಗೆ ಕರ್ಣಕಮನೀಯವೆನಿಸಿವೆ.

ಪ್ರಾಗ್ಜ್ಯೋತಿಷ, ಸಿಂಧು, ಮಣಲೂರಪುರ (ಮಣಿಪುರ) ಗಳಿಗೆ ಹೋಗುವನು. ಮಣಿಪುರದಲ್ಲಿ ಅರ್ಜುನನು ಬಭ್ರುವಾಹನನ ಬಾಣಕ್ಕೆ ಮೂರ್ಛೆಹೋಗಿ ಮತ್ತೆ ಸಂಜೀವಕಮಣಿಯಿಂದ ಏಳುವನು. ಅಲ್ಲಿಂದ ಅವನು ಚೇದಿ, ಕಾಶಿ, ಕೋಸಲ, ಗಾಂಧಾರ ದೇಶಗಳನ್ನು ಸುತ್ತಿಕೊಂಡು ಅಲ್ಲಿನ ರಾಜರಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಹಸ್ತಿನಾವತಿಗೆ ಹಿಂತಿರುಗುವನು.

ಯಜ್ಞವೆಲ್ಲಾ ಆದ ಮೇಲೆ ಸಂಸ್ಕೃತದಲ್ಲಿ ಮುಂಗುಸಿಯ ಕಥೆ ಬರುತ್ತದೆ. ಕನ್ನಡ ಜೈಮಿನಿಯಲ್ಲಿ ಈ ಮುಂಗುಸಿಯ ಕಥೆ ಇಲ್ಲ. ಒಟ್ಟಿನಲ್ಲಿ ಭಾರತದ ಅಶ್ವಮೇಧಿಕ ಪರ್ವವು ಜೈಮಿನಿ ಭಾರತದ ಅಶ್ವಮೇಧಿಕ ಪರ್ವದಷ್ಟು ಆಕರ್ಷಕ ವಾಗಿಯೂ ಸ್ವಾರಸ್ಯವಾಗಿಯೂ ಇಲ್ಲ ಎಂದು ಹೇಳಬಹುದು.

ಈ ಸಂದರ್ಭದಲ್ಲಿ ಸುಪ್ರಸಿದ್ಧ ಇತಿಹಾಸ ಸಂಶೋಧಕರಾದ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಕನ್ನಡ ಜೈಮಿನಿ ಭಾರತದ ಬಗ್ಗೆ ಪತ್ರಿಕೆ ಗಳಲ್ಲಿ ಬರೆದಿರುವ ಲೇಖನಗಳು ಗಮನಾರ್ಹವಾಗಿವೆ.

"ಮಹಾಭಾರತವು ರಚಿತವಾದ ಎಷ್ಟೋ ಕಾಲದ ಮೇಲೆ ಜೈಮಿನಿ ಭಾರತವು ರಚಿಸಲ್ಪಟ್ಟಿತು. ಮಹಾಭಾರತದ ಅಶ್ವಮೇಧ ಪರ್ವದಲ್ಲಿ ಹೇಳಿರುವ ಅನೇಕ ಯುದ್ಧಗಳು ಜೈಮಿನಿಯಲ್ಲಿ ಹೇಳಿಲ್ಲ. ಬಭ್ರುವಾಹನ ಕಾಳಗ, ಸಿಂಧೂ ದೇಶದ ವಿಜಯದ ವಿಷಯಗಳು ಮಾತ್ರ ಎರಡು ಅಶ್ವಮೇಧಗಳಲ್ಲಿಯೂ ವರ್ಣಿ ಸಲ್ಪಟ್ಟಿವೆ. ಅವುಗಳಲ್ಲಿಯೂ ಹಲವು ವ್ಯತ್ಯಾಸಗಳಿವೆ ......ಸಮುದ್ರಗುಪ್ತನ ದಂಡಯಾತ್ರೆಯ ಕೆಲವು ಅಂಶಗಳನ್ನು ಮಹಾಭಾರತದ ಇತಿಹಾಸದೊಡನೆ ಜೋಡಣೆ ಮಾಡಿಕೊಂಡು ಜೈಮಿನಿ ಭಾರತವೆಂಬ ಹೆಸರಿನಿಂದ ಗ್ರಂಥ ರಚಿಸಿ ದಂತೆ ಭಾಸವಾಗುತ್ತದೆ. ಅದರಂತೆ ಇತಿಹಾಸ ಕಾಲದಲ್ಲಿ ಸಮುದ್ರಗುಪ್ತ ನಡೆಸಿದ ಅಶ್ವಮೇಧ ಯಾಗದ ವಿಜಯಯಾತ್ರೆಯ ವಿಷಯವು ಜೈಮಿನಿ ಭಾರತದಲ್ಲಿ ಸೇರಿದೆ. ವಾಕಾಟಕ ಅಥವಾ ವಿಂಧ್ಯವಂಶದರಸನಾದ ರುದ್ರ ದೇವನನ್ನು ನೀಲಧ್ವಜನೆಂದೂ, ವನರಾಜ್ಯಾಧಿಪತಿಗಳನ್ನು ವ್ಯಾಘ್ರರಾಜ ನೆಂದೂ, ಕಂಚಿಯ ಪಲ್ಲವ ಸಾಮ್ರಾಟನಾದ ಶಿವಸ್ಕಂದವರ್ಮ ಮತ್ತು ಯುವ ರಾಜ ವಿಷ್ಣುಗೋಪರನ್ನು—ಮಯೂರಧ್ವಜ—ತಾಮ್ರಧ್ವಜರೆಂದೂ, ಸೌರಾ ಷ್ಟ್ರದರಸನನ್ನು ವೀರವರ್ಮನೆಂದೂ, ಕುಂತಳದರಸನಾದ ಮಯೂರವರ್ಮ ನನ್ನು ಚಂದ್ರಹಾಸನೆಂದೂ ಹೆಸರುಗಳನ್ನು ಮಾರ್ಪಡಿಸಿ ಸಮುದ್ರಗುಪ್ತನ ದಂಡಯಾತ್ರೆಯ ಕೆಲವು ಅಂಶಗಳನ್ನೂ ಮಹಾಭಾರತದ ಅಶ್ವಮೇಧಯಾಗ ವನ್ನೂ ಸೇರಿಸಿ ಜೈಮಿನಿ ಭಾರತವನ್ನು ಬರೆದಿದ್ದಾರೆ." ಎಂದು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಮತ್ತು ಜಯಕರ್ಣಾಟಕಗಳಲ್ಲಿ ಶ್ರೀ ಜೋಯಿಸರು ಬರೆದಿದ್ದಾರೆ.

ಭಾರತದೇಶದಲ್ಲಿ ಕ್ರಿ.ಶ. ೩೨೦—೬೭೫ರವರೆಗೆ ರಾಜ್ಯಭಾರಮಾಡಿದ ಗುಪ್ತ ರಲ್ಲಿ ಸುಪ್ರಸಿದ್ಧನಾದ ಸಮುದ್ರಗುಪ್ತನು ಅಶ್ವಮೇಧಯಾಗವನ್ನು ಮಾಡಿದ

ವಿಷಯುವು ಕೌಶಾಂಬಿಯ ಶಿಲಾಶಾಸನದಲ್ಲಿ ಪ್ರಸಿದ್ಧವಾಗಿದೆ. ಈತನ ವಂಶೀಯುನಾದ ಕುಮಾರಗುಪ್ತನೂ (ಕ್ರಿ.ಶ. ೪೧೩) ಸಹ ಅಶ್ವಮೇಧಯಾಗಮಾಡಿದ್ದಾನೆ. ಸಮುದ್ರಗುಪ್ತನ ಸಮಕಾಲೀನನಾದ ಕಂಚಿಯ ಪಲ್ಲವ ಅರಸ ಶಿವಸ್ಕಂದ ವರ್ಮನು ಅಶ್ವಮೇಧಯಾಗಮಾಡಿದಂತೆ ಶಾಸನಗಳಿಂದ ತಿಳಿದುಬಂದಿದೆ. ಈ ಶಿವಸ್ಕಂದ ವರ್ಮನೇ ಜೈಮಿನಿ ಭಾರತದ ಮಯೂರಧ್ವಜನೆಂದೂ, ಸಮುದ್ರಗುಪ್ತನೇ ಜೈಮಿನಿಭಾರತದ ಯುಧಿಷ್ಠಿರನೆಂದೂ ಶ್ರೀ ಜೋಯಿಸರು ತರ್ಕಿಸಿರುತ್ತಾರೆ.

ಈ ತರ್ಕದಿಂದ ಇತಿಹಾಸ ಕಾಲದಲ್ಲಿ ಕೂಡ ಉತ್ತರ ಭಾರತ, ಹಾಗೂ ದಕ್ಷಿಣ ಭಾರತದಲ್ಲಿ ಅಶ್ವಮೇಧಯಾಗಗಳು ನಡೆದು ವೈದಿಕ ಧರ್ಮವು ತಲೆ ಎತ್ತಿದ್ದುದು (ಜೈನ ಬೌದ್ಧ ಯುಗಗಳ ಅನಂತರ) ಗಮನಾರ್ಹವಾಗಿದೆ. ಹೀಗೆ ಜೈಮಿನಿ ಭಾರತವು ಪುರಾಣದ ಮೇಲೆ ಇತಿಹಾಸದ ಪ್ರಕಾಶಬಿದ್ದ ಗ್ರಂಥವೆನಿಸಿರುವುದು ಇಲ್ಲಿ ಬಹು ಮುಖ್ಯ ಸಂಗತಿಯಾಗಿದೆ.

ಗ್ರಂಥ ಮಹಾತ್ಮ್ಯೆ

ಕನ್ನಡ ಜೈಮಿನಿ ಭಾರತದ ಕಟ್ಟಕಡೆಯಲ್ಲಿ "ತಾಪಸೋತ್ತಮನಾದ ಜೈಮಿನಿ ಮುನೀಶ್ವರಂ ಭೂಪಾಲ ತಿಲಕ ಜನಮೇಜಯಂಗೊರೆದ ಸಂಗತಿಗಳಂ ಸಕಲ ಜನಕೆ ವ್ಯಾಪಿಸಿದ ಸುಪ್ರೌಢಿ ಮೆರೆಯೆ ಕನ್ನಡದ ಭಾಷಾಪದ್ಧತಿಯೊಳ್ ಅಣ್ಣಮಾಂಕನ ಕುಮಾರ ಲಕ್ಷ್ಮೀಪತಿಯು ಮುಖದಿಂದೆ ಕೃತಿಯಾಗಿ ರಚಿಸಿದಂ **ಸುರಪುರದ ಶ್ರೀಕಾಂತನು**" ಎಂದು ಕವಿಯು ಹೇಳಿ, "ಅಶ್ವಮೇಧಿಕ ಪರ್ವದ ಅಮಲಸತ್ಕಥೆ ಯೌವನಾಶ್ವಾದಿ ನೃಪರ ಚರಿತಂ ಕೇಳ್ದ ಮಾನವರ್ಗೆ" ಐಶ್ವರ್ಯ, ಆರೋಗ್ಯ, ಆಯುಷ್ಯದ ಅಭಿವೃದ್ಧಿ, ಕಲಿನಾಶನಂ, ಶ್ವೇತಕೀರ್ತಿ, ಸುತಲಾಭ, ಶತ್ರುಕ್ಷಯಂ, ಸರ್ವ ಭೋಗಂಗಳಾದಪುವು, ಸರ್ವೇಶ್ವರನ ಭಕ್ತಿ ದೊರೆಕೊಂಡಪುದು ಎಂದು ಫಲಶೃತಿಯನ್ನು ಹೇಳುತ್ತಾನೆ. ಇಷ್ಟೇ ಅಲ್ಲ. "ಜೈಮಿನಿ ಭಾರತದೊಳ್ ಒಂದು ವರ್ಣಮಂ ಪ್ರೀತಿಯಿಂ ಕೇಳ್ದವರ್ಗೆ" ಉಪವನ, ತಟಾಕ, ದೇವಾಲಯ, ಪ್ರಪೆಗಳು—ಇವುಗಳನ್ನು ಪ್ರತಿಷ್ಠೆ ಮಾಡಿಸಿದ ಮತ್ತು ದರ್ಮ, ಉಪಕಾರ, ವೇದಪುರಾಣ ಶಾಸ್ತ್ರ ಶ್ರವಣವನ್ನು ಮಾಡಿದ; ಪುಣ್ಯಕ್ಷೇತ್ರವಾಸ, ತೀರ್ಥಸ್ನಾನ, ಜಪ, ಹೋಮ, ಸುವ್ರತ, ಸಮಾಧಿ, ಯೋಗ, ಧ್ಯಾನ, ತಪಸ್ಸು, ಹರಿಹರಾರ್ಚನೆ—ಇವುಗಳನ್ನು ಮಾಡಿದ ಪುಣ್ಯ ಬರುವುದೆಂದು ಕವಿ ಹೇಳುತ್ತಾನೆ.

ಇದೇ ಅಭಿಪ್ರಾಯಗಳನ್ನು ಸಂಸ್ಕೃತ ಜೈಮಿನಿ ಭಾರತದ ಕಡೆಯಲ್ಲಿಯೂ ಫಲಶ್ರುತಿಯಾಗಿ ಹೇಳಿದೆ. 'ಭಾರತವು ಐದನೆಯವೇದ' ಎಂಬ ನಂಬಿಕೆ ನಮ್ಮ ಜನಗಳಲ್ಲಿದೆ. ಭಗವಂತನಾದ ಶ್ರೀಕೃಷ್ಣ, ಯುಗಪುರುಷನಾದ ಯುಧಿಷ್ಠಿರ, ಗಂಡುಗಲಿಯಾದ ಭೀಮಸೇನ, ಮಹಾಭಾಗ್ಯಶಾಲಿಯಾದ ಅರ್ಜುನ, ದಾನಶೂರನಾದ ಕರ್ಣ, ಸತ್ಯವ್ರತನಾದ ಭೀಷ್ಮ, ನೀತಿವಂತನಾದ ವಿದುರ, ಸಾಧ್ವೀಮಣಿ

ಯಾದ ದ್ರೌಪದಿ, ಸುಪ್ರೌಢೆಯಾದ ಸುಭದ್ರೆ, ಶಸ್ತ್ರಾಗಮಾಚಾರ್ಯನಾದ ದ್ರೋಣ, ಚಿರಂಜೀವಿಯಾದ ಅಶ್ವತ್ಥಾಮ, ವೀರರಾದ ಅಭಿಮನ್ಯು, ಸುಧನ್ವ, ಸುರಥ, ತಾಮ್ರಧ್ವಜ, ವೃಷಕೇತು, ವೀರವರ್ಮ, ಭಾಗವತನಾದ ಚಂದ್ರಹಾಸ, ಮಯೂರಧ್ವಜ ಮೊದಲಾದವರ ಪವಿತ್ರ ಚರಿತ್ರೆಯು ಈ ಭಾರತದಲ್ಲಿ ನಿರೂಪಿಸಲ್ಪಟ್ಟಿದೆ. ಆದುದರಿಂದ ಈ ಭಾರತ ಕಥಾಶ್ರವಣವು ಪುಣ್ಯಪ್ರದವೆಂದು ಹಿಂದಿನಿಂದ ನಮ್ಮ ಜನ ನಂಬಿಕೊಂಡು ಬಂದಿದ್ದಾರೆ. ಜನಮೇಜಯನು ಸರ್ಪಯಾಗಮಾಡಿದ್ದರಿಂದ ಪ್ರಾಪ್ತವಾದ ಕುಷ್ಠರೋಗವನ್ನು ಮಹಾ ಭಾರತ ಕೇಳಿ ಪರಿಹರಿಸಿಕೊಂಡನೆಂದೂ ಉಳಿದ ಅತ್ಯಲ್ಪ ಕುಷ್ಠವು ಜೈಮಿನಿ ಭಾರತ ಶ್ರವಣದಿಂದ ಹೋಯಿತೆಂದೂ ಕಥೆಯಿದೆ. ಈ ಅಭಿಪ್ರಾಯಗಳನ್ನೇ ಸಂಸ್ಕೃತ ಜೈಮಿನಿ ಭಾರತದಲ್ಲಿಯೂ ಹೇಳಿದ್ದಾರೆ.

ಅಶ್ವಮೇಧಿಕ ಮೇತಚ್ಚ ಪರ್ವಂ ತುಭ್ಯಂ ಪ್ರಕೀರ್ತಿತಂ ।
ಶೃಣ್ವಥಾಸ್ಯ ಫಲಂ ರಾಜನ್ ಸತ್ಯಂ ಹಿ ಗದತೋಮಮ ॥

ಈ ಅಶ್ವಮೇಧ ಪರ್ವದ ಕಥೆಯು ನಿನಗಾಗಿ ಹೇಳಲ್ಪಟ್ಟಿದೆ. ಎಲೈ ರಾಜನಾದ ಜನಮೇಜಯನೇ ಇದರ ಫಲವನ್ನು ಕೇಳು.

ಧೇನೂನಾಂ ಹಿ ಸಹಸ್ರೇ ಚ ದತ್ತೇ ಭವತಿ ಯತ್ಫಲಂ ।
ತತ್ ಪ್ರಾಪ್ನೋತಿ ಸಮಗ್ರಮ್ಯಃ ಶೃಣುಯಾದಾಶ್ವಮೇಧಿಕಂ ॥

ಒಂದು ಸಾವಿರ ಹಸುಗಳನ್ನು ದಾನಮಾಡಿದರೆ ಬರುವ ಪುಣ್ಯವು ಈ ಕಥಾಶ್ರವಣದಿಂದ ಬರುತ್ತದೆ.

ಫಲಂ ಶತಗುಣಂ ತಸ್ಮಾತ್ ಗ್ರಂಥತಃ ಸಮವಾಪ್ನುಯಾತ್ ।
ಯೋದದ್ಯಾತ್ ಪುಸ್ತಕಂ ಗಾಂ ಚ ಬ್ರಾಹ್ಮಣಾಯ ಗೃಹಂ ಶ್ರಿಯಂ॥

ಆದಕ್ಕಿಂತ ನೂರುಪಾಲು ಹೆಚ್ಚು ಫಲವು ಗ್ರಂಥ, ಗೋವು, ಮನೆ, ಹಣ ಇವನ್ನು ಶೋತ್ರೀಯರಾದ ಬ್ರಾಹ್ಮಣರಿಗೆ ದಾನಮಾಡುವುದರಿಂದ ಬರುತ್ತದೆ.

ಗೌರೀಂ ವರಯತೇಕನ್ಯಾಂ ನೀಲಂವಾ ವೃಷಮುತ್ಸೃಜೇತ್ ।
ಅಶ್ವಮೇಧಿಕ ಮಧ್ಯಾಯಂ ಶೃಣುಯಾದ್ಯಸ್ಸಮಾಶಿ ಚತಶಿ ॥

ಕನ್ಯಾದಾನ ಗೋದಾನಗಳಿಂದ ಬರುವ ಪುಣ್ಯವು ಈ ಅಶ್ವಮೇಧ ಪರ್ವದ ಕಥಾಶ್ರವಣದಿಂದ ಬರುತ್ತದೆ.

ಯಶ್ವಿವನಾಶ್ವ ಮುಖಾನಾಂ ಚ ನೃಪಾಣಾಂ ಚ ಶುಭಾಃ ಕಥಾಃ।
ಶೃಣುಯಾತ್ ಶ್ರಾವಯೇದ್ಯೋಪಿ ಕಲಿದೋಷೈರ್ನಲಿಪ್ಯತೇ ॥

ಯುವನಾಶ್ವನೇ ಮೊದಲಾದ ಪುಣ್ಯಶೀಲರಾದ ರಾಜರ ಕಥೆಗಳನ್ನು ಯಾವನು ಕೇಳುತ್ತಾನೆಯೋ ಕೇಳಿಸುತ್ತಾನೆಯೋ ಅವನಿಗೆ ಕಲಿದೋಷವಿಲ್ಲ.

ಬ್ರಾಹ್ಮಣೋಲಭತೇ ವಿದ್ಯಾಂ ಧನಾರ್ಥೀ ಪ್ರಾಪ್ನುಯಾತ್ ಧನಂ ।
ಕ್ಷತ್ರಿಯೋ ಜಾಯತೇ ಶೂರಃ ಪ್ರಾಪ್ನುಯಾನ್ನಪರಾಜಯಂ ॥

ಈ ಕಥಾಶ್ರವಣದಿಂದ ಬ್ರಾಹ್ಮಣನು ವಿದ್ಯೆಯನ್ನೂ, ಕ್ಷತ್ರಿಯನು ವಿಜಯವನ್ನೂ, ವೈಶ್ಯನು ಧನವನ್ನೂ ಪಡೆಯುವರು.

" ಅಪುತ್ರೋ ಲಭತೇ ಪುತ್ರಂ ರೋಗೀ ರೋಗೈರ್ವಿಮುಚ್ಯತೇ ।
ಅಷ್ಟಾದಶ ಪುರಾಣಾನಾಂ ಪಠನಾದ್ಯತ್ಫಲಂ ಭವೇತ್ "॥

ಮಕ್ಕಳಿಲ್ಲದವರಿಗೆ ಸಂತಾನವೂ, ರೋಗಿಗಳಿಗೆ ಆರೋಗ್ಯವೂ, ಹದಿನೆಂಟು ಪುರಾಣಗಳ ಶ್ರವಣದ ಫಲವೂ ಈ ಜೈಮಿನಿಯ ಕಥಾಶ್ರವಣದಿಂದ ಉಂಟಾಗುತ್ತದೆ.

ತತ್ಫಲಂ ಸಮವಾಪ್ನೋತಿ ಭಾರತ ಶ್ರವಣಾನ್ನರಃ ।
ಸಮಗ್ರಂ ಭಾರತಂ ತೇನ ಶ್ರುತಂ ಭವತಿ ಭಾರತ ॥

ಈ ಮೇಲೆ ಕಂಡ ಫಲಗಳೆಲ್ಲವೂ ಭಾರತ ಕಥಾ ಶ್ರವಣದಿಂದುಂಟಾಗುತ್ತವೆ. ಈ ಅಶ್ವಮೇಧ ಪರ್ವದ ಕಥಾಶ್ರವಣದಿಂದ ಸಮಗ್ರ ಭಾರತ ಕಥೆಯನ್ನು ಕೇಳಿದ ಪುಣ್ಯ ಪ್ರಾಪ್ತವಾಗುತ್ತದೆ.

ಕಂದ ॥ ಕವಿ ಲಕ್ಷ್ಮೀಶನ ಕಾವ್ಯವ ।
ನ ವಿರಳ ವಿಶ್ವಾಸದಿಂದೆ ಪಠಿಸುವ ರಸಿಕರ್ ॥
ಭುವಿಯೊಳ್ ಪಡೆವರ್ ನಿರುತಮ್ ।
ಪ್ರವಿಮಲ ನವ ಕಾವ್ಯಕಾಂತೆಯೊಲವಿನ ಸುಖಮಮ್ ॥

ದಿನಾಂಕ ೧೫-೬-೧೯೫೭,
ಬೆಂಗಳೂರು.

ಇಂತು ಸುಜನ ವಿಧೇಯ,
ಬ. ಶಿವಮೂರ್ತಿಶಾಸ್ತ್ರೀ



ಚಿಕ್ಕಮಗಳೂರು ಜಿಲ್ಲೆಯ ದೇವನೂರು ಗ್ರಾಮದ ಶ್ರೀಲಕ್ಷ್ಮೀರಮಣಸ್ವಾಮಿ ದೇವಸ್ಥಾನದ ನವರಂಗದಲ್ಲಿ ಸ್ಥಾಪಿತವಾಗಿರುವ ಶಿಲಾವಿಗ್ರಹ. ಇದನ್ನು ಆ ಗ್ರಾಮದ ಜನರು ಕನ್ನಡ ಜೈಮಿನಿ ಭಾರತದ ಕರ್ತೃವಾದ ಲಕ್ಷ್ಮೀಶಕವಿಯ ವಿಗ್ರಹವೆಂದು ಹೇಳುತ್ತಾರೆ.

[*Photo* : J.K.B.

ಜಯ ಶ್ರೀ ಕೃಷ್ಣ ಭಗವನ್

ಕನ್ನಡ ಜೈಮಿನಿ ಭಾರತ

ಮೊದಲನೆಯ ಸಂಧಿ

ವಾರ್ಧಕ ಷಟ್ಪದಿ

ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಭ।
ಕ್ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜಗ।
ತೀ ವಲಯದಮಲ ಸೌಭಾಗ್ಯ ರತ್ನಾಕರಂ ಪೆರ್ಚೆನಿಂ ಮೇರೆವರಿಯೆ॥
ಆವಗಂ ಸರಸ ಕರುಣಾಮೃತದ ಕಲೆಗಳಿಂ।
ತೀವಿದೆಳನಗೆಯ ಬೆಳುದಿಂಗಳಂ ಪಸರಿಸುವ।
ದೇವಪುರ ಲಕ್ಷ್ಮೀರಮಣನಾಸ್ಯ ಚಂದ್ರನಾನಂದಮಂ ನಮಗೀಯಲಿ ॥೧॥

ಪಾವನತುಲಾಭರಣಮಂ ಮಾಡಿಕೊಂಡೆಸೆವ।
ಪಾವನತರಸ್ವರೂಪಂ ನಾರದಾದಿ ಮುನಿ।
ಪಾವನತ ಪಾದ ಪಂಕೇರುಹದ್ವಂದ್ವನೆಂದು ಕಲಾವತಂಸನುಮೆಯ॥
ಭಾವನೆಯನೊಡಗೂಡಿಸುವ ಸಕಲ ಸುರರ ಸಂ।
ಭಾವನೆಯ ಕೈಕೊಳ್ವ ಲೋಕವಿಸ್ತರಣ ಪ್ರ।
ಭಾವ ನಯನತ್ರಯಂ ದೇವ ಗಂಗಾಧರಂ ಬಿಡದೆ ಸಲಹುಗೆ ನಮ್ಮನು ॥೨॥

ಪ್ರಸ್ತುತದೊಳೊಗೆದ ಮುಂಬೆಳಗಮಲದಂತದ ಗ।
ಭಸ್ತಿ ನವ ಪೂರ್ವ ಸಂಧ್ಯಾರುಣಂ ಛಾಳವಿ।
ನ್ಯಸ್ತ ಸಿಂಧೂರಮಂಕುರಿಪ ಪೊಂಬಿಸಿಲೊಡನೆ ಮೂಡುವೆಣ್ಣೇಸರೆಸೆವ।
ಮಸ್ತಕದ ಮಣಿಮಕುಟಮಾಗಲುದಯಾಚಲದ।
ವಿಸ್ತಾರದಂತೆ ಭದ್ರಾಕೃತಿಯೊಳೊಪ್ಪುವ ಸ।
ಮಸ್ತಸಿದ್ಧಿಪ್ರದಾಯಕ ವಿನಾಯಕ ಪಾಲ್ಪುದೆಮಗೆ ನಿರ್ವಿಘ್ನತೆಯನು ॥೩॥

ಭೂವ್ಯೋಮ ಪಾತಾಳ ಲೋಕಂಗಳಲ್ಲಿ ಸಂ।
ಭಾವ್ಯರೆಂದೆನಿಸಿಕೊಳ್ವಖಿಳದೇವರ್ಕಳಿಂ।
ಸೇವ್ಯನಾದಜನ ಪಟ್ಟದ ರಾಣಿ ವರದೆ ಕಲ್ಯಾಣಿ ಫಣಿವೇಣಿ ವಾಣಿ॥
ಕಾವ್ಯಮಿದು ಭುವನದೊಳ್ ಸಕಲ ಜನರಿಂದೆ ಸು।
ಶ್ರಾವ್ಯಮಪ್ಪಂತೆನ್ನ ವದನಾಬ್ಜದಲ್ಲಿ ನೀ
ನೇ ವ್ಯಾಪಿಸಿರ್ದ್ದಮಲಸುಮತಿಯಂ ತಾಯೆನಗೆ ತಾಯೆ ನಗೆಗೂಡಿ ನೋಡಿ ॥೪॥

ಪಾರದೆ ಪದಾರ್ಥಮಂ ವರಯುತಿಗೆ ಭಂಗಮಂ।
ತಾರದೆ ನಿಜಾನ್ವಯಕ್ರಿಯೆಗಳ್ಗೆ ದೂಷಣಂ।
ಬಾರದೆ ವಿಶೇಷಗುಣ ಗಣ ಕಲಾ ಗೌರವಂ ಜೀರದೆ ದುರುಕ್ತಿಗಳ್ಗೆ॥
ಸೇರದೆ ಸುಮಾರ್ಗದೊಳ್ ನಡೆವ ಸತ್ಪುರುಷನ ಗ।
ಭೀರತೆಯುಮಂ ಪೋಲ್ವ ಕಾವ್ಯಪ್ರಬಂಧಮಂ।
ಶಾರದೆಯ ಕರುಣದಿಂ ಪೇಳ್ವೆನಾಂ ದೋಷಮಂ ತೊರೆದೆಲ್ಲರುಂ ಕೇಳ್ವುದು ॥೫॥

ಛಂದಸ್ಸು ಲಕ್ಷಣಮಲಂಕಾರ ಭಾವರಸ।
ಮೊಂದಿ ಕಲೆವೆತ್ತ ಸತ್ಕೃತಿ ಚಮತ್ಕೃತಿ ಯುಕ್ತಿ।
ಯೊಂದುಮಿಲ್ಲದ ಕಾವ್ಯಮಶ್ರಾವ್ಯಮಹುದೆಂದರಿಯದೆ ಕವಿತೆಯನು ಬರಿದೆ॥
ದಂದುಗಕ್ಕೊಳಗಾಗಿ ಪೇಳ್ದೆನೆಂದೆನ್ನ ನಗು।
ವಂದಮಂ ಮಾಡದೆನಗೊಲಿದಿತ್ತನಮಲಮತಿ।
ಯಂ ದೇವಪುರದ ಲಕ್ಷ್ಮೀರಮಣನೆಂದರಿದು ಕೇಳ್ವುದೆಲ್ಲಾ ಸುಜನರು ॥೬॥

ಕೆನೆವಾಲ ಕಡೆದು ನವನೀತಮಂ ತೆಗೆದು ಬಾ।
ಯ್ಗಿನಿವಾಗಿ ಸವಿಯದದರೊಳಗೆ ಪುಳಿವಿಳಿದು ರಸ।
ವನೆ ಕೆಡಿಸಿದೊಡೆ ಕರೆದ ಸುರಭಿಗಪ್ಪುದೆ ಕೊರತೆ ಕಾವ್ಯಮಂ ಕೇಳ್ದು ಮಥಿಸಿ॥
ಜನಿಸಿದ ಪದಾರ್ಥವಂ ತಿಳಿದು ನೋಡದೆ ವಿನೂ।
ತನಕವಿತೆಯೆಂದು ಕುಂದಿಟ್ಟು ಜರೆದೊಡೆ ಪೇಳ್ದ।
ವನೊಳಾವುದೂಣೆಯಂ ಜಾಣರಿದನರಿದು ಮತ್ಸರವ ಮರೆವಾಲಿಸುವುದು ॥೭॥

ಜಾಣರಂ ತಲೆದೂಗಿಸದೆ ನುಡಿದೊಡಾವುದ।
ಕ್ಕೂಣೆಯಂ ಬಹುದೆಂದು ಸರಸೋಕ್ತಿಯಿಂದೆ ಗೀ।
ರ್ವಾಣ ಪುರನಿಲಯ ಲಕ್ಷ್ಮೀವರಂ ತಾನೆ ಸಂಗೀತ ಸುಕಲಾ ನಿಪುಣನು॥
ವೀಣೆಯಂ ಗಾನಮಂ ನುಡಿಸುವಂದದೊಳೆನ್ನ।
ವಾಣಿಯಂ ಕವಿತೆಯಂ ಪೇಳಿಸಿದನೆಂದರಿದು।
ಕೇಣಮಂ ತೊರೆದು ಪುರುಡಿಸುವರಂ ಜರೆದು ಕಿವಿದೆರೆದು ಕೇಳ್ವುದು ಸುಜನರು ॥೮॥

ದುಷ್ಟಾಹಿ ಘೋರತರ ವಿಷವದನದಿಂದೆ ಸಂ |
ಷ್ಟವಾಗಿರುತಿರ್ದೊಡಂ ದೋಷಮಿರ್ದೊಡಂ |
ಷ್ಟ ಕಲೆಯಿಲ್ಲದೊಡಂ ಚಂದ್ರನಂತೆನ್ನ ಕಾವ್ಯದ ರಸಂ ಸುಮನಸರ್ಗೆ ||
ಷ್ಟವಾಗದೆ ಮಾಣದಿನ್ನಾವನಾದೊಡಂ |
ಷ್ಟಮಂ ಬಗೆವನಂ ಚೋರಂಗೆ ವಿರಹಿಗಂ |
ಷ್ಟಾಂತಮಾಗಿ ಸಲ್ವಂ ಧರಾವಳಿಯೊಳ್ ಸಂದೇಹಮೇನಿದರೊಳು || ೯ ||

ಮಿಗವಾದ ಲೇಖಿಯಿಂದೆಸೆವುದಾ ಭಾವಮಂ |
ಮುಗುಳೆ ತೋರುವುದಲ್ಲದನ್ಯ ಪ್ರಕಾರದಿಂ |
ೊಗಯಿಸುವುದೆ ರನ್ನಗನ್ನಡಿ ಧರೆಯೊಳಾರಾಜಿಸುವ ಕನ್ನಡದ ನುಡಿಗಳ |
ಗೆಯರಿದರಾವಲಕ್ಷಣದಿಂದೆ ಮುನ್ನ ಕ |
ಗಳನುಸುರಿದರದೇ ಲಕ್ಷ್ಯಮಿಲ್ಲದೆ ಪೆರತೆ |
ಗೆ ಸಲ್ಲದದರಿಂದೆ ಪೂರ್ವ ಸತ್ಕವಿಗಳ್ಗೆ ನಮಿಸಿ ನಾಂ ಕೃತಿವೇಳ್ವೆನು || ೧೦ ||

ವಿದ್ವತ್ಸಭಾವಳಿಯುಮರಿಯೆ ವಿರಚಿಸಿದಂ ಭ |
ದ್ವಾಜ ಗೋತ್ರಭವನಣ್ಣವಾಂಕನ ಸುತಂ |
ದ್ವಿನುತ ಕರ್ಣಾಟ ಕವಿ ಚೂತವನ ಚೈತ್ರ ಲಕ್ಷ್ಮೀಶನೆಂದೊರ್ವನು ||
ದ್ವನಜದೊಳ್ ದೇವಪುರದ ಲಕ್ಷ್ಮೀಶನ ಪ |
ದ್ವಯವನಾವಗಂ ಧ್ಯಾನಿಸುವರಡಿಗಳಿಂ |
ದ್ವಿನಯದಿಂ ಭಜಿಪ ಬಲ್ಪಿಂದೆ ವಿಮಲ ಜೈಮಿನಿ ಭಾರತದ ಕಥೆಯನು || ೧೧ ||

ವರ ವರ್ಣದಿಂದೆ ಶೋಭಿತವಾಗಿ ರೂಪ ವಿ |
ರದಿಂದೆ ಚೆಲ್ವಾಗಿ ಮಧುರತರ ನವರಸೋ |
ರ ಭರಿತದಿಂದೆ ವಿಲಸಿತವಾಗಿ ಸುಮನೋನುರಾಗದಿಂ ಪ್ರಚುರವಾಗಿ ||
ರುತ ಮಂಜುಳ ಶಬ್ದದಿಂದೆ ಕಿವಿಗಿಂಪಾಗಿ |
ರಿಸುವ ಸುಲಲಿತ ಷಟ್ಪದಿಗಳೆಡೆಬಿಡದೆ ಝುಂ ||
ರಿಸದಿರ್ಪುವೆ ಬಂದು ನೆರೆದ ವಿದ್ವತ್ಸಭಾಸರೋರುಹಾಕರದೊಳು || ೧೨ ||

ಎರಡನೆಯ ಸಂಧಿ

ಸೂಚನೆ ॥ ರಾಜೇಂದ್ರ ಧರ್ಮಜಂ [illegible] |
ವಾಜಿಮೇಧಾಧ್ವರ ವಿಧಾನಮಂ ಕೇಳ್ದು ಬಂ |
[illegible]

ವನಜಾಕ್ಷ [illegible] ಕೇಳ್ದು [illegible] |
[illegible] |
[illegible] |
ಅನವರತ ನರನ ಗೋಷ್ಠಿಗೆ ನೆರೆದ [illegible] |
ಗನೆಯ [illegible] ಕಾಂತಿಯಿಂ |
[illegible]

ಆ ಕನಕ ಗಿರಿಯ ತೆಂಕಣ ದೆಸೆಯೊಳ್ [illegible] |
[illegible] |
[illegible] |
[illegible] |
[illegible] |
[illegible]

[illegible] |
[illegible] |
[illegible] |
[illegible] |
[illegible] |
[illegible]

ಕೇಳ್ದೆ ನೃಪಾಲ [illegible] |
[illegible] |
[illegible] |
[illegible] |
[illegible] |
[illegible]

ಎಲ್ಲರುಂ ಭೋಗಿಗಳ್ ಪಾತಾಳಗತರೆನಿಸ।
ರೆಲ್ಲರುಂ ವಿದ್ಯಾಧರರ್ ನಭೋಜನರೆನಿಸ।
ರೆಲ್ಲರುಂ ದಾಕ್ಷಿಣ್ಯವರ್ತಿಗಳ್ ತೀಱಿಯೆ ಲಂಕಾನಿವಾಸಿಗಳೆನಿಸರು॥
ಎಲ್ಲರುಂ ಸುಮನೋರತರ್ ಮಧುವ್ರತರೆನಿಸ।
ರೆಲ್ಲರುಂ ಗುಣಯುತರ್ ಕಲಿನರೆನಿಸರ್ ಮನುಜ।
ರೆಲ್ಲರುಂ ಕಾಂತಾರಮಿತಭಾಗ್ಯಸಂಪದರ್ ಕುಜರೆನಿಸರವನಿಯೊಳು ॥೧೦॥

ವಸುಗಳಿಂದುಪಭೋಗ್ಯವಾಗದೊಡೆ ಸೌಂಧ್ಯ।
ರಸದಿಂದಮಾರೋಗ್ಯಮೆನಿಸದೊಡೆ ಸಂತತಂ।
ವಿಶದ ಸುಮನೋಯೋಗ್ಯಮಲ್ಲದೊಡೆ ಹರಿವಿಭವ ಸುಶ್ಲಾಘ್ಯಮಲ್ಲದಿರಲು ॥
ಲಸದಪ್ಸರೋದ್ಯಾನ ಸೌಭಾಗ್ಯವೊಂದಿರದೊ।
ದೆಸೆವ ರಾಜೇಂದ್ರಂಗೆ ಸೊಗಸುವೀಡಾಗಿ ರಂ।
ಜಿಸದೊಡೆ ಹಸ್ತಿನಾಪತಿಯನಮರಾವತಿಗೆ ಸರಿಯೆಂಬರೇ ಪ್ರೌಢರು ॥೧೧॥

ನಾಗೇಂದ್ರನಂ ಬಿಡದೆ ತಲೆವಾಗಿಸಿತ್ತು ಪುರ।
ನಾಗೇಂದ್ರನಂ ಬುದ್ಧಿ ದೊರೆನಿಸಿತ್ತು ಪುರಮರ್ದ।
ನಾಗೇಂದ್ರನಂ ನಿಂದು ಬೆರಗಾಗಿಸಿತ್ತಮಲ ಧರ್ಮಜನ ಕೀರ್ತಿ ಬಳಿಕ॥
ನಾಗೇಂದ್ರಶಯನಾಲಯದ ಜಲಧಿಯೆನಿಸಿ ನುತ।
ನಾಗೇಂದ್ರವರದಾಯುಧದ ಪೊಳ್ಪುಗಳೆದು ಮಥ।
ನಾಗೇಂದ್ರಧರನ ಜಾತೆಯ ನಿಲವುಗೆಡಿಸಿ ನೆರೆ ರಾಜಿಸಿತು ಮೂಜಗದೊಳು ॥೧೨॥

ಹರಿಯಂತೆ ಬಲಯುತಂ ಶಿವನಂತೆ ರಾಜಿತೇ।
ಖರನಬ್ಜಭವನಂತೆ ಚತುರಾನನಂ ಸರಿ।
ದ್ವರನಂತೆ ರತ್ನಾಕರಂ ದಿವಾಕರನಂತೆ ನಿರ್ದೋಷನಿಂದ್ರನಂತೆ॥
ಪರಿಚಿತಸುರಥಿರಮ್ಯನಮೃತಾರ್ಥಿಯಂತೆ ವಿ।
ಸ್ತೃತಕುವಲಯನೆಂದು ಧರ್ಮಜನ ಧರೆ ಪೊಗಳು।
ತಿರೆ ಬಳಿಕ ಹಸ್ತಿನಾವತಿಗೆ ವೇದವ್ಯಾಸನೊಂದುದಿವಸಂ ಬಂದನು ॥೧೩॥

ಬರಲಾ ನೃಪಾಲಕಂ ಸೋದರರ್ವೆರಸಿ ಮುನಿ।
ವರನ ಪದಕೆರಗಿದೊಡೆ ಮಣಿದೆತ್ತಿ ಬೋಳೈಸಿ।
ಪರಸಿ ಮಂತ್ರಾಕ್ಷತೆಯನಿತ್ತು ಸತ್ಕಾರಮಂ ಕೊಂಡು ಕುಳ್ಳಿರ್ದ ಬಳಿಕ॥
ಅರಸನನುತಾಪದಿಂ ತಲೆವಾಗಿ ಮಾತಾಡ।
ದಿರುತಿರ್ದನನಿಲ ಸಂಚಾರಮೊಂದಿನಿತಿಲ್ಲ।
ದಿರುವ ಕಡುವೇಸಗೆಯ ಬಿಸಿಲಿಂದ ಬಸವಳಿದ ಕೋಮಲರಸಾಲದಂತೆ ॥೧೪॥

ಕಂಡನರಸನ ಭಾವಮಂ ಬಳಿಕ ನಗುತೆ ದೇಸ |
ಗೊಂಡನಿಂತೆಂದಾ ಮುನೀಂದ್ರನೆಲೆ ನೃಪತಿ ಭೂ |
ಮಂಡಲದ ಸಕಲ ಸಾಮ್ರಾಜ್ಯಮಂ ಪಾಲಿಸುವ ನಿನ್ನ ಸಂತತದೇಳ್ಗೆಗೆ |
ಖಂಡನವೆ ಸಾಳ್ವದಾನವನದಿರವು ಸಾಕು ಮನ |
ದಂಡಲೆಯ ತೊರೆಯೆನಲ್ ಜೀಯ ಸಂತಾಪದಿಂ |
ದಂಡಾದುದೆನ್ನೊಡಲ್ ಸೈರಿಸಲರಿಯೆನೆಂದೆರಡು ಕಪ್ಪೋಸಿದಿ ಸುರಿದನು ||೧೫||

ಕೆತ್ತ ಬಲ್ಗತ್ತಲೆಗೆ ತರಣಿ ಮುಂಗಾಣದಿರೆ |
ಪೊತ್ತುವೆಳಗಂ ಬೇರೆ ತೋರ್ಪರಾರ್ ಬಿಡದೆ ಪ |
ರ್ಕ್ಕೋತ್ತರಕೆ ಮಾರುತಂ ಬೀಸಿರ್ದೊಡಾರ್ ಬೀಸುವರ್ ಬಳಿಕಾಲವಟ್ಟದಿಂದೆ |
ಕ್ಷತ್ರಮದ ವಿಷದ ಸೋಂಕಿಗೆ ಗರುಡನಳವಳಿಯೆ |
ಮತ್ತೆ ರಕ್ಷೆಗೆ ಮಂತ್ರಿಸುವರಾರು ಭೂಪ ನೀ | ||೧೬||
ನೊತ್ತುವನುತಾಪಕೆಡೆಗೊಟ್ಟೊಡಾರ್ ಬಿಡಿಸುವರ್ ಪೇಳೆಂದನಾ ಮುನಿಪನು

ಎನಲಾ ಮುನೀಂದ್ರನಂ ನೋಡಿ ಬಸುರುಯ್ಯುತೊ |
ಯ್ಯನೆ ಮಹೀಪಾಲನಿಂತೆಂದನೆಂತೆನ್ನ ಮನ |
ದನುತಾಪಮಂ ಬಿಡುವೆನಕಟ ಶಿಶುತನದಿಂದೆ ಸಲಹಿದ ಪಿತಾಮಹಂಗೆ |
ನೆನೆದವನುಚಿತವನಗ್ರಜನೆಂದರಿಯದೆ ಕ |
ರ್ಣನನಿರಿದೆವಾಚಾರ್ಯವಧೆಗೆಳಸಿದೆವು ಮುದೋ |
ದನ ಶಲ್ಯ ಮುಖ್ಯ ಬಾಂಧವರನೋರಾಡಿದೆವು ಬದುಕಲೇಕಿನ್ನಿಳೆಯೊಳು ||೧೭||

ಶಿಷ್ಯರಿಂದಭಿವರ್ಧಿಸದ ಗುರುವಿನಂತೆ ವೈ
ದುಷ್ಯದಿಂ ಪೂಜ್ಯನಾಗದ ವಿಪ್ರನಂತೆ ಸುತ |
ವಿಷ್ಯದಿಂ ಶೋಭ್ಯನಾಗದ ವಹ್ನಿಯಂತೆ ನಲಿದಾಶಯವನಾಶ್ರೈಸದ |
ಕೃಷ್ಣದಂತಖಿಳ ಬಾಂಧವರೊಡನೆ ಬದುಕದ ಮ |
ನುಷ್ಯ ಸಂಸಾರದಿಂದೇನದರಿಸೀ ನಿಜಾ |
ಯುಷ್ಯಮುಳ್ಳನ್ನ ಪರಿಯಂತ ವನವಾಸವಂ ಮಾಡುವುದೆ ಲೇಸೆಂದನು ||೧೮||

ಕಾಯದುಪಭೋಗ ಸಿರಿಯುಂಬಯಸಿ ಸುಗತಿಯಂ |
ಕಾಯದುರುತರ ವೈರದಿಂದಖಿಳಬಾಂಧವ ನಿ |
ಕಾಯದುಪಹತಿಯನೆಸಗಿದ ಪಾತಕದ್ರುಮಂ ತನಗೆ ವಿಷವಾಗಿ ಮುಂದೆ |
ಕಾಯದುಳಿಯದು ಮಹಿಯನಿನ್ನಾಳ್ವೊಡಂ ಜನಂ |
ಕಾಯದುರೆ ಮಾಣದದರಿಂದರಸುತನವೆ ಸಾ |
ಕಾ ಯದುಕುಲೇಂದ್ರನಂ ಭಜಿಸುವೆಂ ಚಿತ್ತಶುದ್ಧಿಯೊಳರಣ್ಯದೊಳೆಂದನು ||೧೯||

ಆಗಳರಸನ ಮಾತಿನಾಸರಂ ಕೇಳ್ದು ತಲೆ।
ದೂಗಿ ಮುನಿಪುಂಗವಂ ನುಡಿದನೆಲೆ ಭೂಪ ನಿಗ।
ಮಾಗಮ ಪುರಾಣ ಶಾಸ್ತ್ರಂಗಳ ವಿಚಾರಮಂ ನೀನರಿಯದಪ್ತಿಥನೆ ॥
ಈಗಳನುತಾಪಮೇತಕೆ ನಿಖಿಳ ಸಾಮ್ರಾಜ್ಯ।
ಮಾಗಲಿಳೆಯುಂ ಧರ್ಮದಿಂ ಪಾಲಿಸದೆ ಬನಕೆ।
ಪೋಗಲಾವುದು ಸಿದ್ಧಿ ನಿನಗಪ್ಪುದುಸುರೆನೆ ಧರಾನಾಥನಿಂತೆಂದನು ॥೨೦॥

ಜೀಯ ಚಿತ್ತೈಸಾದೊಡಿನ್ನಖಿಳ ಸಾಮ್ರಾಜ್ಯ।
ಮಾಯಿತೆಂಬುತ್ಸವಂ ತನಗಿಲ್ಲ ಕರ್ಣ ಗಾಂ।
ಗೇಯ ಗುರು ಶಲ್ಯ ಕೌರವರನುಳಿದೀ ಸಕಲಮೇದಿನೀಮಂಡಲವನು ॥
ವಾಯುಜನೊಳಿರಿಸಿ ನಾಂ ಗೋತ್ರ ವಧೆಗೆಯ್ಸಿದೀ।
ಕಾಯಮಂ ವನವಾಸಕ್ಕೈದಿಸುವೆನೆನೆ ಬಾದ।
ರಾಯಣಂ ಗಹಗಹಿಸಿ ನಗುತೆ ನುಡಿ ನುಡಿ ಮತ್ತೆ ನುಡಿಯೆನುತ್ತಿಂತೆಂದನು ॥೨೧॥

ಕ್ಷಾತ್ರಧರ್ಮವನೀಕ್ಷಿಸಲ್ ನಿನಗೆ ಪಾತಕಂ।
ಗೋತ್ರವಧೆಯಿಂದೆ ಬಪ್ಪುದೆ ಮಹಾದೇವ ನೀಂ।
ಧಾತ್ರಿಯಂ ಪಾಲಿಸದಿರಲ್ಕೆ ನಿರ್ದೋಷಿಯೇ ನಾವರಿಯೆವೀಗ ನಿನ್ನ ॥
ಗಾತ್ರಮಂ ವನವಾಸಕ್ಕೈದಿಸುವ ಮತಮಾವ।
ಸೂತ್ರದೊಳ್ ಕಾಣಿಸಿತೊ ಲೇಸು ಲೇಸಾರಣ್ಯ।
ಯಾತ್ರೆಯಂ ಮಾಡು ನೀಂ ಮಾರುತಿಗೆ ಪಟ್ಟಮಂ ಕಟ್ಟುವೆವು ನಾವೆಂದನು ॥೨೨॥

ಧರ್ಮಸುತ ಮರುಳೆ ನೀನಿಂತಾಡುತಿರ್ದೊಡೆ ಬು।
ಧರ್ಮೆಚ್ಚುವರೆ ಸಾಕದಂತಿರಲಿ ಸೋಮಕುಲ।
ಜರ್ಮಹಾಕ್ರತುಗಳಂ ಮಾಡಿದಲ್ಲದೆ ಸಲ್ಲರದರಿಂದೆ ನಿನಗಿಳೆಯೊಳು ॥
ನಿರ್ಮಲಸುಕೀರ್ತಿಯಪ್ಪಂತೆ ಯಜ್ಞಾದಿ ಸ।
ತ್ಕರ್ಮಂಗಳಂ ನೆಗಳ್ಚಲ್ ಗೋತ್ರವಧೆಗಳಂ।
ನಿರ್ಮಿಸಿದಘಂ ಪೋಗಿ ಶುಚಿಯಾಗಿ ಬಾಳ್ದಪೆಯೆನಲ್ ಭೂಪನಿಂತೆಂದನು ॥೨೩॥

ಆದೊಡೆ ತ್ವವಾನುಗ್ರಹಪ್ರಭಾವದೊಳಿನ್ನು।
ಮೇದಿನಿಯ ನಾನೆ ಪಾಲಿಸುವೆನೀ ಗೋತ್ರಹ।
ತ್ಯಾ ದೋಷಮೇತರಿಂ ಪೋಪುದಾ ತೆರನಂ ತಿಳಿಪಿ ರಾಜಕುಲದ ನೃಪರ।
ಸಾಧು ಚಾರಿತ್ರಮೆನ್ನಿಂದೆ ಸೊಗಡಾಗದಂ।
ತಾದರಿಸಿ ನೀವೆ ಕಾರುಣ್ಯದಿಂ ಮಾಳ್ಪುದು ಶು।
ಭೋದಯವನೆನಗೆಂದು ಕೈಮುಗಿಯೆ ಧರ್ಮಜಂಗಾ ಮುನಿಪನಿಂತೆಂದನು ॥೨೪॥

ಎಣಿಕೆ ಬೇಡೆಲೆ ಮಗನೆ ರಾಘವಂ ಪಿಂತೆ ರಾ ।
ವಣನಂ ಮಥಿಸಿ ವಾಜಿಮೇಧದೊಳ್ ಪಾರ್ವರಂ ।
ತಣಿಪಿದಂ ನೀನುಮಂತಾ ಮಹಾಧ್ವರವನೆಸಗಲ್ ನಿನಗೆ ಮೂಜಗದೊಳು ॥
ಎಣೆಯಿಲ್ಲೆನಲ್ಕೆಂತು ಮಾಳ್ಪೆ ನಾನಾವ ಲ ।
ಕ್ಷಣದ ಹಯಮದಕೆ ಋತ್ವಿಜರೆನಿಬರೆನಿಸು ದ ।
ಕ್ಷಿಣೆಗಳದರಂಡಮಂ ವಿಸ್ತರಿಸವೇಳ್ಪುದೆನೆ ಶುಕತಾತನಿಂತೆಂದನು ॥೨೫॥

ಸ್ವಚ್ಛತರ ಧವಳಾಂಗದತಿ ಮನೋಹರ ಪೀತ ।
ಪುಚ್ಛದ ಸುಗಮನದೊಂದೇ ಕಿವಿಯೊಳೆಸೆವ ನೀ ।
ಲಚ್ಛವಿಯ ಕೋಮಲ ತುರಂಗಮಂ ಸಾಧಿಸಿ ಮಹಾಕ್ರತುವನಾಚರಿಪೊಡೆ ॥
ಇಚ್ಛೆಗೈದುರೆ ಸಕಲ ಮೇದಿನೀ ತಳವನೇ ।
ಕಚ್ಛತ್ರದಿಂ ಪಾಲಿಸುವ ನರೇಶ್ವರನವಂ ।
ಗಚ್ಛಿದ್ರಮಾಗಿ ನಡೆವುದು ಭೂಪಕುಲದೀಪ ಕೇಳದರ ಮಾಳ್ಕೆಗಳನು ॥೨೬॥

ಸತ್ಯಶೌಚಾಚಾರ ಕುಲ ವೇದಶಾಸ್ತ್ರ ಪಾಂ ।
ಡಿತ್ಯದ ಸುವಿಪ್ರರಿಪ್ಪತ್ತು ಸಾವಿರಕೆ ನೈ ।
ಪಥ್ಯ ವಸ್ತ್ರಾದಿ ಪೂಜೆಗಳಿಂದೆ ಸತ್ಕರಿಸಿ ಬೇರೆಬೇರವರವರ್ಗೆ ॥
ಪ್ರತ್ಯೇಕವೊಂದೊಂದು ಬಳ್ಳ ಮುಕ್ತಾಫಲವ ।
ನತ್ಯಧಿಕ ಹಯಗಜ ರಥಂಗಳೊಂದೊಂದನೌ ।
ಚಿತ್ಯ ಸಾಲಂಕಾರಗೋಸಹಸ್ರವನೊಂದು ಭಾರ ಪೊನ್ನಂ ಕುಡುವುದು ॥೨೭॥

ಸನ್ನುತ ಕುಲಾಚಾರ ಗುಣ ವೇದಶಾಸ್ತ್ರ ಸಂ ।
ಪನ್ನ ಭೂಸುರರನಿಬರೀ ತೆರದ ಸೌಖ್ಯತರ ।
ಮನ್ನಣೆಗಳಂ ಪಡೆದು ಸಭೆಯಾಗಿ ಕುಳ್ಳಿರ್ದನುಜ್ಞೆಯಂ ಕೊಟ್ಟ ಬಳಿಕ ॥
ಇನ್ನು ಮೇದಿನಿಯೊಳಾರಾದೊಡಂ ಮಿಡುಕುಳ್ಳೊ ।
ಡುನ್ನತ ಪರಾಕ್ರಮಿ ತಡೆಯಲಿ ವಾಜಿಯನೆಂದು ।
ತನ್ನ ಬಿರುದಂ ಬರೆದು ಪೊಂಬಟ್ಟಮಂ ಕಟ್ಟಿ ಬಿಡುವುದಾ ಹಯದ ಫಣೆಗೆ ॥೨೮॥

ಆ ಕುದುರೆ ಬಿಟ್ಟೊಂದು ವರ್ಷ ಪರ್ಯಂತ ತಾ ।
ನೇ ಕಂಡಕಡೆಗೆ ತೆರಳಲ್ಕದರ ಸಂಗಡಂ ।
ಭೂಕಾಂತಸೂನುಗಳ್ ಪಲಬರಡಿಗಡಿಗೆ ಮಣಿಕನಕ ರಾಶಿಗಳ ಸುರಿದು ॥
ಲೋಕಮಂ ತಣಿಸುತ್ತೈತರಲಖಿಳ ದೆಸೆಯೊಳದ ।
ನಾಕೆವಾಳರ್ ತಡೆಯೆ ಬಿಡಿಸಬೇಕನಿಬರಿಂ ।
ನೂಕದೊಡೆ ಕರ್ತೃ ತಾನಾದೊಡಂ ಪೋಗಿ ನಡೆಸುವುದು ಬಳಿಕಾಹಯವನು॥೨೯॥

ಇಂತಾಹಯಂ ತಾನೆ ಮೇದಿನಿಯೊಳೊಂದು ವರು ।
ಷಂ ತಿರುಗಿ ತನ್ನಿಳೆಗೆ ಬಂದು ನಿಲುವಲ್ಲಿಪರಿ ।
ಯಂತಮುಸಿಪತ್ರವೆಂಬುರುತರವ್ರತವನಾಚರಿಸುತಿರ್ದಾ ಮಖವನು ॥
ಮುಂತೆ ವೇದೋಕ್ತದಿಂ ಮಾಳ್ಪುದಿದರಂದಮಿದು ।
ಕುಂತೀಕುಮಾರ ನೀನಾರ್ಪೊಡುಜ್ಜುಗಿಸೆನಲ್ ।
ಚಿಂತಿಸುವೆ ನುಡಿದನೊಯ್ಯನೆ ಧರಿತ್ರೀತಳಾಧಿಪನಾ ತಪೋಧನನೊಳು ॥೨೦॥

ದ್ರವ್ಯಮೆನಗಿಲ್ಲ ಮೇದಿನಿಯೋಳರಸುವೊಡೆ ಕೌ ।
ರವ್ಯರಿಂದಿಳೆನೊಂದುದಿ ನಿತುಲಕ್ಷಣವುಳ್ಳ ।
ದಿವ್ಯ ಹಯುಮಿಲ್ಲ ಸೋದರರಾಹವದೊಳಳಿಸಿದರ್ ಸಹಾಯಂಗಳಿಲ್ಲ ॥
ಸವ್ಯಸಾಚಿಯು ಮಿತ್ರನಿಲ್ಲಲ್ಲ ತನಗಧ್ವ ।
ರವ್ಯಸನಮೆಂತೊಡರ್ವುದು ಪೇಳಿಮೆನಲು ವೇ ।
ದವ್ಯಾಸ ಮುನಿವರಂ ಕರುಣದಿಂದಾ ಯುಧಿಷ್ಠಿರನೃಪನೊಳಿಂತೆಂದನು ॥೨೧॥

ರಾಯ ನೀನಿದಕೆ ಚಿಂತಿಸಬೇಡ ಧನಮಂ ಸ ।
ಹಾಯಮಂ ತುರಗಮಂ ತೋರುವೆಂ ಮರುತನೆಂ ।
ಬಾಯುಗದ ನೃಪನಶ್ವಮೇಧಮಂ ಮಾಡಿ ಬಹು ಕನಕಮಂ ಭೂಸುರರ್ಗೆ ॥
ಈಯಲವರೊಯ್ಯುತೆಡೆಯೊಳಗಲಸಿ ಬಿಟ್ಟರ ।
ಪ್ರೀಯದಿಂದಾ ವಸ್ತುವಿದೆ ಹಿಮಾಲಯುದೊಳದ ।
ಕಾಯಸಂ ಪಿರಿದಿಲ್ಲ ತಂದು ನೀನುಪಯೋಗಿಸೆನಲರಸನಿಂತೆಂದನು ॥೨೨॥

ಅಕಟ ಜಡಮತಿಗೆ ಮರುಳುಮ್ಮತವನಿಕ್ಕಿದೊಡೆ ।
ಸುಕಲೆಯಪ್ಪುದೆ ಜೀಯ ಗೋತ್ರ ಸಂಹರಣ ಪಾ ।
ತಕವನೊರಸುವ ಮಖವನಾ ವಿಪ್ರರೊಡವೆಯಿಂ ಮಾಡಲೆನಗಿಹ ಪರದೊಳು ॥
ಪ್ರಕಟಮೆನಿಪುವೆ ಕೀರ್ತಿ ಸದ್ಗತಿಗಳೆನೆ ಮಗನೆ ।
ಸಕಲ ಭೂಮಂಡಲಂ ದ್ವಿಜರದಲ್ಲವೆ ರಾಜ ।
ನಿಕರವಂ ತರಿದೀಯನೇ ಪರಶುರಾಮನೀ ಧರೆಯನವನೀಸುರರ್ಗೆ ॥೨೩॥

ಬಾಹುಬಲಮುಳ್ಳ ನೃಪರೊಡೆಯರೀ ಧರೆಗೆ ಸಂ ।
ದೇಹಮಿಲ್ಲದರಿಂ ದ್ವಿಜರ್ಗೆ ಸಲ್ಲದು ಬಗೆವೊ ।
ಡಾ ಹಿಮಾಲಯದೊಳಿಹ ವಸ್ತು ನಿನ್ನದು ಯೌವನಾಶ್ವನೆಂಬವನೀಶನು ॥
ಮೋಹದಿಂ ಭದ್ರಾವತೀ ನಗರದೊಳ್ ದಶಾ ।
ಕ್ಷೌಹಿಣೀ ಸೇನೆಯಿಂ ಪಾಲಿಸುವನಿಂತಹ ಮ ।
ಹಾ ಹಯೋತ್ತಮವೊಂದನದು ನಿನಗೆ ಬಾರದಿರ್ಪುದೆ ಶೌರ್ಯಮುಂಟಾದೊಡೆ ॥೨೪॥

ಈ ಘಟೋತ್ಕಚನ ತನುಸಂಭವಂ ಬಡವನೇ ।
ಮೇಘನಾದಂ ಕರ್ಣಸೂನು ವೃಷಕೇತು ತಾಂ ।
ಮೋಘವಿಕ್ರಮನೆ ನಿನ್ನನುಜರೇಂ ಕಿರುಕುಳರೆ ಹರಿ ನೆನಸಿದೊಡೆ ಬಾರನೆ ॥
ನೀ ಘನವಿದೆನ್ನದಿರು ಕೈಕೊಳಧ್ವರವ ತಾ ।
ನೇ ಘಟಿಪುದಿನ್ನು ಸಂಶಯವೇಕೆ ಕರೆಸು ವಿ ।
ಪ್ರಾಘವನೆನಲ್ ನೃಪಂ ನಗುತೆ ಕಲಿಭೀಮನಂ ನೋಡಲವನಿಂತೆಂದನು ॥೩೫॥

ಜೀಯ ಸಂದೇಹಮೇಕುಜ್ಜುಗಿಸು ಮುಖಮಂ ಸ ।
ಹಾಯಮಂ ಧನಮಂ ತುರಂಗಮಂ ನಿನಗೆ ನಿ ।
ರ್ದಾಯದಿಂ ತೋರಿಸಿದನೀ ಮುನಿಪ ನಾಂ ಪೋಗಿ ಭದ್ರಾವತೀನಗರಿಗೆ ॥
ಆ ಯೌವನಾಶ್ವನಂ ಗೆಲ್ದವನ ಸೇನಾನಿ।
ಕಾಯಮಂ ತರಿದಾ ಸುವಾಜಿಯಂ ತಂದು ಮುಖ ।
ಕೀಯದೊಡೆ ಪರಲೋಕಬಾಹಿರಂ ತಾನಪ್ಪೆನೆಂದು ಮಾರುತಿ ನುಡಿದನು ॥೩೬॥

ಯಜ್ಞಕ್ಕೆ ತುರುಗಮಂ ತಹೆನೆಂದು ಭೀಮಂ ಪ್ರ ।
ತಿಜ್ಞೆಯಂ ಮಾಡುತಿರಲಾ ಕ್ಷಣದೊಳಾಹವಕ ।
ಭಿಜ್ಞನೆನಿಸುವ ಕರ್ಣಸುತ ವೃಷಧ್ವಜನೆದ್ದು ನಗುತೆ ಕೈಮುಗಿದು ನಿಂದು ॥
ವಿಜ್ಞಾಪನಂಗೆಯ್ದನೆಲೆ ತಾತ ಕೊಡು ತನಗ ।
ನುಜ್ಞೆಯಂ ಪವಮಾನತನುಜನಾಡಿದ ನುಡಿಗ ।
ವಜ್ಞೆ ಬಂದೊಡೆ ರವಿಕುಮಾರಂಗೆ ಜನಿಸಿದನೆ ನೋಡೆನ್ನಧಟನೆಂದನು ॥೩೭॥

ವ್ಯಗ್ರದಿಂ ಬಾಲನಾಡಿದ ನುಡಿಗೆ ಭೂಪತಿ ಸ।
ಮಗ್ರಸಂತೋಷದಿಂ ತೆಗೆದಪ್ಪಿಕೊಂಡು ನಿ।
ನ್ನುಗ್ರ ಪ್ರತಾಪಮಂ ಬಲ್ಲೆನಾಂ ಮಗನೆ ಕೇಳೆಂದು ನೆಲದಾಸೆಯಿಂದೆ ॥
ಅಗ್ರಜನನಿರಿದುದಲ್ಲದೆ ಪಸುಳೆ ನಿನ್ನನೀ ।
ವಿಗ್ರಹಕೆ ಕಳುಹಿ ಸೈರಿಸುವೆನೆಂತಕಟ ವಾ ।
ಜಿಗ್ರಹಣಕಾರ್ಯಮಂತಿರಲೆಂದೊಡವನೀಶ್ವರಂಗಾತನಿಂತೆಂದನು ॥೩೮॥

ತಾತ ಕೇಳ್ ಸಹಜಾತರಾದ ನಿಮ್ಮೈವರೊಳ್ ।
ತಾ ತಳ್ತರದೆ ವಿರೋಧಿಸಿದನೆಮ್ಮಯ್ಯನಂ ।
ತಾತನಪರಾಧಮಂ ಪರಿಹರಿಸದಿರ್ದೊಡಾನಿರ್ದು ಫಲವೇನು ಬಳಿಕ ॥
ಆ ತುರಂಗಮಕೆ ಪೋಪನಿಲಜನ ಕೂಡೆ ನಡೆ ।
ದಾತುರದೊಳೆಯ್ತರ್ಪ ರಿಪುಚಾತುರಂಗಕಿದಿ ।
ರಾತು ರಣದೊಳ್ ಗೆಲ್ವೆನಹಿತರಂ ತನಗೆ ಬೆಸಸೆಂದನಾ ಕರ್ಣಸೂನು ॥೩೯॥

ಅಪ್ರತಿಪರಾಕ್ರಮಿ ವೃಕೋದರಂ ಪಾಡಿದ ಘ |
ನ ಪ್ರತಿಜ್ಞೆಯನನಿಜತನಯನಾಡಿದ ಗಭೀ |
ರಪ್ರತಾಪವನಾಗಳಾ ಘಟೋತ್ಕಚನ ಸುತ ಮೇಘನಾದಂ ಕೇಳ್ದು ||
ಕ್ಷಿಪ್ರದಿಂದೆದ್ದು ಬಂದವನಿಪಾಲಕನ ಚರ |
ಣಪ್ರದೇಶಕೆ ತನ್ನ ಹೊಳೆಹೊಳೆವ ಲಲಿತ ರತ್ನ |
ಪ್ರಭಾಶೋಭಿತ ಕಿರೀಟಮಂ ಚಾಚುತೊಯ್ಯನೆ ಬಿನ್ನಪಂ ಗೆಯ್ದನು ॥ ೪೦ ॥

ಭದ್ರಾವತಿಗೆ ನಡೆದು ಯೌವನಾಶ್ವನ ಬಲ ಸ |
ಮುದ್ರಮಂ ಕಲಕದಿರ್ಪನೆ ಕೆರಳ್ದೊಡೆ ಕಾಲ |
ರುದ್ರನಲ್ಲಾ ವೃಕೋದರನೀ ವೃಷಧ್ವಜನೊಳದಿರಾಂಪೆನಾಹವದೊಳು ||
ಅದ್ರಿಮಥನಂಗರಿದು ಸಾಕದಂತಿರಲಿ ವೈ |
ರಿದ್ರುಮಂಗಳನೆ ಖಂಡಿಸುವೆನೆಂಬಾಳುತನ |
ದುದ್ರೇಕಮೆನಗಿಲ್ಲ ನಿನ್ನವರ್ಗಾಶ್ವಮಂ ಪಿಡಿದೊಪ್ಪಿಸುವೆನೆಂದನು ॥ ೪೧ ॥

ಕರ್ಣತನುಸಂಭವಂ ಬಂದೊಡೇನೀ ಮೇಘ |
ವರ್ಣನೈತಂದೊಡೇನಾಂ ಪೋದೊಡೇನೀ ಸು |
ಪರ್ಣವಾಹನನ ಬಲ್ಪುಂಟಾದೊಡಷ್ಟದಿವರಿರ್ಪರಂ ಕೂಡಿಕೊಂಡು ||
ಅರ್ಣವೋಪಮ ಯೌವನಾಶ್ವ ಚತುರಂಗಮಂ |
ನಿರ್ಣಾಮವಪ್ಪೆನಿಸಿ ವಾಜಿಗ್ರಹಣಕಾರ್ಯಮಂ |
ನಿರ್ಣಯಿಸಿ ಕೊಡುವೆನಿತ್ತಪುದೆನಗೆ ವೀಳೆಯವನೆಂದನಿಲಜಂ ನುಡಿದನು ॥ ೪೨ ॥

ಇಂದುಕುಲತಿಲಕ ಜನಮೇಜಯನರೇಂದ್ರ ಕೇ |
ಳಂದವರ್ ಮೂವರುಂ ತುರಗಮಂ ಕೊಂಡು ಬಹೆ |
ವೆಂದು ಬೆಸನಂ ಬೇಡಿ ನಿಂದಿರಲ್ ಬಾದರಾಯಣನ ಮೊಗಮಂ ನೋಡುತೆ ||
ಇಂದಿವರನಾಂ ಕಳುಪಲಸುರವೈರಿಗೆ ಬೇಸ |
ರೊಂದಿನಿಸು ತೋರದಿರ್ಪುದೆ ಜೀಯ ತವಗಿದಕೆ |
ಮುಂದುಗಾಣಿಸದು ಕರುಣಿಪುದೆನೆ ಯುಧಿಷ್ಠಿರಂಗಾ ತಪೋನಿಧಿ ನುಡಿದನು
॥ ೪೩ ॥

ಭೂಪ ಕೇಳ್ ನೀಂ ಮರುಳೆ ಹರಿ ನಿನ್ನೆಡೆಯೊಳಲಸ |
ಲಾಪನೇ ಬೆಸನ ಬೇಡುವ ವೃಕೋದರನಪ್ರ |
ತಾಪನೇ ವೃಷಕೇತು ಮೇಘವರ್ಣಕರನೊಡಗೊಂಡು ಕುದುರೆಗೆ ನಡೆಯಲಿ ||
ಈ ಪವನ ತನಯನಂ ಕಳುಹೆಂದು ನಯದೊಳಾ
ತಾಪಸೋತ್ತಮನೊಡಂಬಡಿಸೆ ನುಡಿದಾಜಾನು |
ರೂಪದಿಂದರಸನಿತ್ತಂ ಭೀಮ ಹೈಡಿಂಬಿ ಕರ್ಣಜರ್ಗನುಮತಿಯನು ॥ ೪೪ ॥

ಬಳಿಕ ನೃಪನಂ ಹರಸಿ ಬೀಳ್ಕೊಂಡು ಮುನಿವರಂ ।
ಳರ್ದನಾಶ್ರಮಕತ್ತಲಂಬುಕೆ ಯುಧಿಷ್ಠಿರಂ ।
ಳಿನಾಕ್ಷನಿಪ್ಪೆಡೆಯ್ಗರಸುವಸ್ತ್ರ ಪಿಡಿದೆ ನಡೆಯನು ಕರಿಪುರವನೀಗಳ್ ।
ನಾ ಕರೆಗಾಣಿಸಿಂದಣಕೆಯ್ದಿಳೆಯಲನ್ಪಿಗಂ ।
ಕೊಳ್ಳಿಂ ಕರಮುವ ಬಳ್ಳಿ ಕಾಲೆರೆ ದಹಿದಾಂತರನು ।
ಗಳ್ ಶಿರೆಯ್ಯಮಾಗೆ ಸಂಭ್ರಮದೊಳೈತಂದು ಬನ್ನ್ಯಿಸಿದಂ ಚರನೊರ್ವನು
॥ ೪೫ ॥

ಅವಧಾನ ಬೇಯ ನಮಿನ್ನಾ ಫೊಳಲ ಪೊರೆಗೆ ದಾ ।
ನವರೆರೆಯನಿದೆ ಬಂದನೆನೆ ಪೊಳಲನೆದ್ದು ನಿಂ ।
ದವನ ನುಡಿಗಾಚತವಂ ಕುಡುತೆ ಭಕ್ತ್ಯವಳಿಯ ಬಗೆಯನೊಡರಿಸುವೆಸಯೆನು ।
ವಕಮುನಿತೆಯ್ ಮುರಾರಿಗೆ ಮಹಾದೇವ ಶ್ರೀ ।
ಬಿಮನದೊಳ್ ತಾವೇ ಕೃತಾರ್ಥನದ್ದಾ ಕೆಂತು ।
ವನಿಂದು ಕಂಡೆನೆನುತರಸನರಮನೆಯಿಂದೆ ಪೊರಮಟ್ಟು ನಡೆತಂದನು ॥ ೪೬ ॥

ಮಿತೆಪ್ರೀದವಾಪ್ತರದೊಳೈತಂದು ಹರುಮೇಧ ।
ತ್ರ ಸಾಧನಕೆ ಪೇದವ್ಯಾಸಮುನಿ ದರ್ಮ ।
ತ್ರನಂ ಬೋಧಿಸಿ ಮರಳ್ದನಾ ರಾತ್ರಿಯೊಳ್ ಬಂದನೊಳಿದಿಭನಗರಿಗೆ ।
ಪ್ರೀಂದ್ರಸಾಹಸಂ ಬಳಿಕ್ಕೈದೆ ಪಾಂಡವ ದ ।
ತ್ರೀರಮಣರಿದಿಗೆರ್ಗಂಡರುಗ್ರ ದಣಿಯ ವಿ ।
ತ್ರ ಪಾಠಕರ ವಾದ್ಯಧ್ವನಿಯ ಸಾಲಕ್ಕೈದೀವಿಗೆಯ ಸಂಭ್ರಮದೊಳು ॥ ೪೭ ॥

ಮಿರುವ ಮಣಿಮಕುಟದೊರೆರಣಿವಳಕಾವಳಿಯ ।
ರೆನೊಸಲ ಕಸ್ತೂರಿಯ ಸುಲಲಿತಪುಣ್ಯತಿಲಕೆಯ ।
ರುಗೆವೆಣ ನಿಟ್ಟೆಸಳಂಗಗಳ ಸುನಾಸಿಕದ ಪೊಳೆವಲ್ಲ ನಸುದೋರುವ ।
ಮುಸಗೆಯ ಕದಪುಗಳ ಕುಂಡಲದ ಚೆಲ್ವಿನಿಂ ।
ರೆವ ಸದ್ವದನನಂ ಮೋಹನದ ಮದನನಂ ।
ರೆಸೊಬಗ ಮರ್ದನಂ ಪಡೆದ ನಿಜರೂಪನಂ ಕಂಡನವನೀಪಾಲನು ॥ ೪೮ ॥

ಭೂರಮಣ ಕೇಳ್ ಮುರಧ್ವಂಸಿ ಸಲೀಲಾವ ।
ರಮುಂ ತಾಳ್ದು ಪೊಂದೇರನಿಳಿದೈತಂದು ।
ರಾಸಾನದೊಳಾ ಯುಧಿಷ್ಠಿರನ ಕಾಲ್ಗೆರಗಲಾ ನೃಪಂ ಕೂಡೆ ಕೊಬಗ ।
ರಿಜಾಂಬಕನ ಪದಪಲ್ಲವಕೆ ಮಣಿಮು ತಿರ ।
ನ ರಾಯನಂ ತೆಗೆದು ತಕ್ಕೈಸಲನಿಸನು ।
ರಿಯಂ ಪ್ರೇಮದಿಂ ಬಿಗಿಯಪ್ಪಿದಂ ಮತ್ತೆ ಮುನಿಜನಂ ಬೆರಗಾಗಲು ॥ ೪೯ ॥

ಮುರಹರಂ ಬಳಿಕ ವಂದಿಸುವ ಭೀಮಾದಿ ಭೂ ।
ವರ ಸಹೋದರರನಾಲಿಂಗಿಸುತೆ ಹರುಷದಿಂ ।
ದರಮನೆಗೆ ನಡೆದು ಬರೆ ಪಾಂಚಾಲಿ ಸರಸಿರುಹನಯನ ಫಣಿರಾಜಶಯನ ॥
ಶರಣಜನದುರಿತಾಪಹರಣ ದೈತೇಯಸಂ ।
ಹರಣ ಗೋವರ್ಧನೋದ್ಧರಣ ಪೀತಾಂಬರಾ ।
ವರಣ ವರಕೌಸ್ತುಭಾಭರಣ ಸಲಹೆಂದು ಹರಿಚರಣಕೆರಗಿದಳು ಬಂದು ॥ ೫೦ ॥

ದ್ರುಪದತನುಜಾತೆಯಂ ಪಿಡಿದೆತ್ತಿ ಕರುಣದಿಂ ।
ದುಪಚರಿಸಿ ಮನೆಗೆ ಬೀಳ್ಕೊಟ್ಟು ಸಂದಣಿಸಿ ನೆರೆ ।
ದಪರಿಮಿತ ಪೌರಜನದೊಳವರವರ ತಾರತಮ್ಯಗಳನರಿತು ॥
ಕೃಪೆಯಿಂದೆ ಕಳುಹಿ ಬೇಹವರೊಡನೆ ಬಳಿಕಸುರ ।
ರಿಪು ನೃಪಗೆ ಕೈಗೊಟ್ಟು ನಡೆಯಲಾಸ್ಥಾನಮಂ ।
ಟಪಕೆ ಬಂದಲ್ಲಿ ಕುಳ್ಳಿರ್ದನುತ್ಸವಮಾದುದಂದಿನಿರುಳೋಲಗದೊಳು ॥ ೫೧ ॥

ಶಕ್ರನಾಸ್ಥಾನಮಂ ವಿವಿಧ ವೈಭವದಿಂದ ।
ತಿಕ್ರಮಿಸುವರಸನೋಲಗಮಂ ನಿರೀಕ್ಷಿಸುತು ।
ಪಕ್ರಮಿಸುವೆಳನಗೆಯೊಳಸುರಾರಿ ನುಡಿದನೆಲೆ ನೃಪತಿ ಭೂಮಂಡಲದೊಳು ॥
ವಕ್ರಿಸುವರಿಲ್ಲ ನಿನ್ನೀಸಿರಿಗೆ ರಾಜಧ ।
ರ್ಮಕ್ರಿಯೆಗೆ ನಳ ಪುರೂರವ ಹರಿಶ್ಚಂದ್ರಾದಿ ।
ಚಕ್ರವರ್ತಿಗಳೈದೆ ಸೋಲ್ವರಿನಿತರೊಳಿನ್ನು ಕೃತಕೃತ್ಯರಾವೆಂದನು ॥ ೫೨ ॥

ಎನಲಹುದು ಬಳಿಕೇನು ನಿಮ್ಮಡಿಯ ಸೇವಕರ ।
ಘನತೆಯೊಳು ಕೃತಕೃತ್ಯರಹಿರಲಾ ನೀವಿದಿರೊ ।
ಳನುಮಾನವೇ ಪಾಂಡವಸ್ಥಾಪನಾಚಾರ್ಯನೆಂದು ಧರೆಯುಳ್ಳನ್ನೆಗಂ ॥
ಜನಮಾಡದಿರ್ದಪುದೆ ಸಾಕದಂತಿರಲಿ ಮುಂ ।
ದೆನಗೆ ಮಾಡುವ ರಾಜಕಾರ್ಯಮಂ ಬೆಸವೇಳ್ವು ।
ದೆನುತ ಭೀಮನ ಕಡೆಗೆ ಮೊಗದಿರುಹಿದರಸಂಗೆ ನಳಿನಾಕ್ಷನಿಂತೆಂದನು ॥ ೫೩ ॥

ದಾಯಾದರಿಲ್ಲ ಮಾರ್ಮಲೆವ ಪರಮಂಡಲದ ।
ನಾಯಕರ ಸುಳಿವಿಲ್ಲ ನಿನ್ನಾಳ್ಕೆಗೆಲ್ಲಯುಮ ।
ಪಾಯಮವನಿಯೊಳಿಲ್ಲಮಿನ್ನು ದಿಗ್ವಿಜಯಮಿಲ್ಲವಸರದ ಬೇಂಟೆಯಿಲ್ಲ ॥
ವಾಯುನಂದನ ಧನಂಜಯರೊಳೆರವಿಲ್ಲ ಮಾ ।
ದ್ರೇಯರೊಳ್ ತಪ್ಪಿಲ್ಲ ಚತುರಂಗಕೆಡರಿಲ್ಲ ।
ರಾಯ ನಿನಗೇನು ಮಾಡುವ ರಾಜಕಾರ್ಯಮೆಂದಂ ಮುರಧ್ವಂಸಿ ನಗುತೆ ॥ ೫೪ ॥

ಈ ಚರಾಚರ ವಿಚಾರ ವ್ಯಾಪ್ತಿ ನಿಮ್ಮಡಿಗ ।
ಗೋಚರವೆ ಶಿವಶಿವಾ ಸಾಕಿದೇತಕೆ ಬರಿದೆ ।
ನಾಚಿಸುವಿರೆಂದು ವೇದವ್ಯಾಸವ.ುನಿವರಂ ಬಂದು ಕಾರಣ್ಯದಿಂದೆ ॥
ಆಚಾರಮಿದು ಭರತಕುಲದವರ್ಗೆನುತೆ ಕಾ ।
ಲೋಚಿತವನರಿತು ಹಯಮೇಧವಿಧಿಯಂ ತನಗೆ ।
ಸೂಚಿಸೆ ಪ್ರತಿಜ್ಞೆಗೈದಂ ಭೀಮನದಕಶ್ವಮಂ ತಂದುಕುಡುವೆನೆಂದು ॥ ೫೫ ॥

ತ್ವತ್ಪಾದ ಕಮಲದಾಶ್ರಯದಿಂದೆ ನಾನಾವಿ ।
ಪತ್ಪರಂಪರೆಗಳಂ ದಾಂಟಿದೆವು ರಾಜಸಂ ।
ಪತ್ಪದವನಧಿಕರಿಸಿದೆವು ಬಳಿಕದರ ಸೌಖ್ಯದಿಂದೆ ನಾವಿರುತಿರ್ದೊಡೆ ॥
ಸತ್ಪುರುಷರೈದೆ ಮೆಚ್ಚುವರೆ ಭರತಾನ್ವಯಸ ।
ಮುತ್ಪನ್ನರಾಗಿ ಫಲವೇನಾವತೆರದಿಂ ಜ ।
ಗತ್ಪಾವನಾಶ್ವಮೇಧವನಾಗಿಸುವೆನಿದಕೆ ನೀವೆಂಬುದೇನೆಂದನು ॥ ೫೬ ॥

ಮರುಳಹರೆ ಭೂಪಾಲ ಬಾದರಾಯಣನಿಕ್ಕಿ ।
ದುರುಲ ಕಣ್ಣಿಗೆ ಸಿಲುಕುವರೆ ಭೀಮನೆಂಬವಂ ।
ದುರುಳನರಿಯಾ ಹಿಂದಣವರಲ್ಲ ಯುವನಾಶ್ವ ಪ್ರಮುಖರತಿವೀರರು ॥
ಅರಳಾದ ಮಲ್ಲಿಗೆಯ ಪೊದರೊಳಗೆ ತಿರುಗಿದೊಡೆ ।
ತೆರಳಬಲ್ಲುದೆ ಸಂಪಗೆಯ ಬನಕೆ ಮರಿದುಂಬಿ ।
ತರಳತನದಿಂದೆ ಹಯಮೇಧಕುದ್ಯೋಗಿಪರೆ ಹೇಳೆಂದು ಹರಿ ನುಡಿದನು ॥ ೫೭ ॥

ಮತಿಯುಳ್ಳೊಡಿವನಸುರಬಲಿಗೊದಗಿಸಿದ ಕೂಳ ।
ನತಿಮಹೋದರಕಡಸಿಕೊಂಬನೇ ನೀತಿಗಳ ।
ಗತಿಯನರಿದೊಡೆ ನಿಶಾಚರಿಯನಿವನಾಳ್ವನೇ ರಾಣಿಯೆಂದರಮನೆಯೊಳು ॥
ಕ್ಷಿತಿಯೊಳದ್ಭುತರೂಪನೀ ವೃಕೋದರನಿವನ ।
ಮತವಿಡಿದು ಹಯಮೇಧಕುದ್ಯೋಗಿಸಿದೊಡೆ ಪೂ ।
ರಿತಮಹುದೆ ಮರುಳೆ ಹೇಳೆಂದು ನೃಪನೊಡನೆ ಮುರರಿಪು ಭೀಮನಂ ಜರೆದನು॥೫೮॥

ಆಹಾ ಮಹಾದೇವ ಚಿತ್ರಮಂ ಕೇಳಿದೆವ ।
ಲಾ ಹಲವುಲೋಕಮಂ ಕೊಳ್ಳದೇ ನಿನ್ನುದರ ।
ಮಾಹಾನಿಶಾಚರಿಯರಲ್ಲವೇ ನರಕಾಸುರನ ಮನೆಯ ಬಾಲಿಕೆಯರು ॥
ಈ ಹದಿರದೇಕೆ ಕರಡಿಯ ಮಗಳನಾಳ್ದ ನಿನ ।
ಗೋಹೋ ಧರೆಯೊಳದ್ಭುತಾಕಾರರಾರೊ ನಿ ।
ನ್ನೂಹೆಗಳ ಬಲ್ಲೆ ನಾನಿತ್ತ ಭಾಷೆಗೆ ತಪ್ಪೆನೆಂದು ಭೀಮಂ ನುಡಿದನು ॥೫೯॥

ಭಾಷೆಯಂ ಕೊಟ್ಟು ತಪ್ಪುವನಲ್ಲ ನೀನಾವಿ ।
ಶೇಷಮಂ ಕಂಡು ಬಲ್ಲೆವು ಹಿಂದೆ ರಣದೊಳಭಿ ।
ಲಾಷೆಯಿಂ ಪೈಶಾಚರಂತೆ ಹೇಸದೆ ರಕ್ತಪಾನಮಂ ಮಾಡಿಯೊಡಲ ॥
ಪೋಷಿಸಿದ ಬಂಡತನವಿದು ನಿನ್ನ ಸಾಹಸಕೆ ।
ಭೂಷಣವೆ ಹೋಗೆಲವೊ ಬಾಣಸಿಗ ಲೋಕದೊಳ್ ।
ದೂಷಣಕೆ ಬೆದರೆಯೆಂದಂ ಮುರಧ್ವಂಸಿ ಮಿಗೆ ಸರಸದೊಳ್ ಪವನಜನನು ॥೬೦॥

ಶಿವಶಿವಾ ದೂಷಣಕೆ ಬೆದರಿ ಮಾಡಿದಿರಿ ಕೈ ।
ತವಸಾರವಿದ್ಯೆಗಳ ಹೆಣ್ಣಾಗಿ ಬಾಣಸದ ।
ಪವಣರಿದುದಿಲ್ಲಲಾ ಹೇವರಿಸದಸುರೆಯುಮನೀಂಟಿದವರಾರೊ ಬಳಿಕ ॥
ಅವನಿಪತಿಗಳ ಕೂಡೆ ಗೋವಳಗಾರ್ಪವ ಮೋ ।
ಳವದಿನ್ನು ನುಡಿಯಲಂಜುವೆವೆಮ್ಮ ನಿಜಭಾಷೆ ।
ತವನುಳಿಯೆವಶ್ವಮಂ ತಹೆವು ಕ್ರತುವಂ ನಡೆಸಿ ಮೇಗಾಳುತಿ ನೀವೆಂದನು ॥೬೧॥

ನಕ್ಕನಸುರಾರಿ ಭೀಮನ ಮಾತಿಗೆಲವೊ ಕಲ ।
ಹಕ್ಕೆ ಬೇಸರಿಯಲಾ ತುರಗಮಂ ತಂದುಕುಡು ।
ಪಕ್ಕರುಳ್ವೊಡೆ ನಡೆ ವೃಥಾ ಗಳಹಬೇಡ ನಾವೀಗ ಸಾರಿದೆವು ಮುಂದೆ ॥
ಕಕ್ಕಸವಹುದು ವೀರರುಂಟೆಳೆಯ ಮೇಲೆ ಕೈ ।
ಯಿಕ್ಕಲರಿದೀಮುಖವನೈದೆ ನಡೆಸಾಪುದನ್ನ ।
ಯಕ್ಕೆ ತೊಡರಪ್ಪುದು ವಿಚಾರದೊಳ್ ಕೈಕೊಂಬುದೆನೆ ಭೂಪನಿಂತೆಂದನು ॥೬೨॥

ದೇವ ನಿಮ್ಮಡಿಯ ಕಾರುಣ್ಯಮೊಂದುಳ್ಳೊಡೆ ಸ ।
ದಾ ವಿಜಯರಾವದಾರಿದ್ದೇನ ಮಾಳ್ಪರರಿ ।
ದಾವುದೊಲಿದೆನ್ನನುದ್ಧರಿಸವೇಳ್ಕೆಂದು ನೃಪನಚ್ಯುತನ ಪದಕೆರಗಲು ।
ಭೂವರನ ಮಕುಟಮಂ ಪಿಡಿದೆತ್ತಿ ರಾಜಮಂ ।
ಡಾವಳಿಯೊಳುಂಟೆ ನಿನ್ನಂದದರಸಿನ್ನು ನಿನ ।
ಗೀವಾಜಿಮೇಧಮೇನಚ್ಚರಿಯೆ ಕೈಕೊಳಾವಿರ್ದು ನಡೆಸುವೆವೆಂದನು ॥೬೩॥

ನಳಿನೋದರನ ವಚನಮಂ ಕೇಳ್ದು ಸಂತಸಂ ।
ಬಳೆದು ನೃಪನಧ್ವರದ ಕಾರ್ಯಮಂ ನಾಡೆ ನೆಲೆ ।
ಗೊಳಿಸಿ ಪವನಜ ವೃಷಧ್ವಜ ಮೇಘನಾದರಂ ಕುದುರೆ ತಹುದೆಂದು ಬೆಸಸಿ ।
ಬಳಿಕೋಲಗವನಂದು ಬೀಳ್ಕೊಟ್ಟು ಹರಿಸಹಿತ ।
ನಿಳಯದೊಳ್ ಷಡ್ರಸಾದಿಗಳನಾರೋಗಿಸಿ ವಿ ।
ಮಳ ಹಂಸತೂಲದೊಳ್ ಪವಡಿಸಿದನನ್ನೆಗಂ ತೋರಿತಿನಸೂತನೇಳ್ಗೆ ॥೬೪॥

ಮೂಡದೆಸೆಯೊಳ್ ಕೆಂಪು ದೋರೆಯೆ ತಾರಗೆ ಪರಿಯೆ ।
ಕೂಡೆ ತಂಗಾಳಿ ಮುಂಬರಿಯೆ ಕಮಲಂ ಬಿರಿಯೆ ।
ಪಾಡುವೆಳದುಂಬಿಗಳ್ ಮೊರೆಯೆ ಚಕ್ರಂ ನೆರೆಯೆ ನೈದಿಲೆಯ ಸೊಂಪು ಮುರಿಯೆ ॥
ದೀಡುಗೊಂಡಿರ್ದ ಕತ್ತಲೆಯ ಪಾಳೆಯಮೆತ್ತ ।
ಲೋಡಿದುದೊ ನೋಡಿದಪೆನೆಂದು ಪೂರ್ವಾಚಲದ ।
ಕೋಡುಗಲ್ಲಿಂ ಪತ್ತುವಂತೆ ಮೆರೆದಂ ಪ್ರಭೆಯೊಳಾಮತ್ಯನಾದಿತ್ಯನು ॥ ೬೧ ॥

ಇಂದು ವೇದವ್ಯಾಸಮುನಿವರಂ ಕೃಪೆಯೊಳ್ ।
ತಂದು ಸಮ್ಮತವಾಜಿಮೇಧಮಂ ಮಾಡು ನೀ ।
ನೆಂದು ನಿಯಮಿಸಲೀತಕೊಡನೆ ಗರುಡಧ್ವಜಂ ತಾನೆ ಕಾರುಣ್ಯದಿಂದೆ ॥
ಬಂದು ಮೈದೋರಲೀಕಿದು ತನ್ನ ಭಾಗ್ಯವಧು ।
ಪೊಂದುಗೂಡುವ ಕಾಲಮೆಂದು ಹರ್ಷದೊಳರಸ ।
ನಂದು ನಿದ್ರಾಲಲನೆಯಂ ಬಿಟ್ಟುನುಪ್ಪವಡಿಸಿದನೋಲಗಂಗೊಟ್ಟನು ॥ ೬೨ ॥

ಆ ವೇಳೆಯೊಳ್ ಪವನಜಂ ಬಂದು ಭೂಪನಡಿ ।
ದಾವರೆಯೊಳೆರಗಿ ಪಯಣಕೆ ಬೆಸಂಬಡೆದರಸು ।
ಗಾವಲಂ ಫಲುಗುಣನೊಳಿರಿಸಿ ಹೈಡಿಂಬಿಯುಂ ಬರಿಸಿ ಕರ್ಣಜನ ಕರೆಸಿ ॥
ಆ ವೀರರಿರ್ವರಿಂ ಬೆರಸಿ ರಥಮಂ ತರಿಸಿ ।
ದೇವಪುರ ಲಕ್ಷ್ಮೀಶನಂಘ್ರಿಗುಪಚರಿಸಿ ಬರು ।
ದಾವಳಿಯ ಪಾಠಕರ ಗಡಣದಿಂ ಪೊರಮಟ್ಟನಾ ಹಸ್ತಿನಾವತಿಯನು ॥ ೬೩ ॥

ಮೂರನೆಯ ಸಂಧಿ

ಸೂಚನೆ ॥ ಹಸ್ತಿನಾವತಿಯಿಂ ತಳರ್ದು ಭದ್ರಾವತಿಯ ।
ವಿಸ್ತಾರವಂ ತೋರಿದಂ ಸಮೀಪದ ಗಿರಿಯ ।
ಮಸ್ತಕದೊಳಿರ್ದನಿಲಸಂಭವಂ ಕರ್ಣತನಯಂಗೆ ಸಂಪ್ರೀತಿಯಿಂದೆ ॥

ಭೂವಧೂರಮಣ ಕೇಳ್ಮೈ ಮುಂದೆ ನಡೆವ ಸುಕ ।
ಥಾವಿಸ್ತರವನಿನ್ನು ಪಯಣಗತಿಯಿಂದೆ ಭ ।
ದ್ರಾವತೀದೇಶಮಂ ಸೊಕ್ಕರನಿಲಜ ವೃಷಧ್ವಜ ಘಟೋತ್ಕಚತನುಜರು ॥
ಆವಗಂ ನಿರ್ಮಲಶ್ರೀಕರಗ್ರಾಹಿ ಮ ।
ತ್ತಾವಗಂ ಪ್ರಣುತವನಮಾಲಾ ಸುಶೋಭಿ ತಾ ।
ನಾವಗಂ ಮನ್ಮಥೋದ್ಭವಕಾರಿ ಹರಿವೊಲಾನೆಂಬ ಪೆಂಪಿಂದೆಸೆದುದು ॥ ೧ ॥

ಎಲ್ಲಿಯುಂ ಪರಿವ ಪೆರ್ದೊರೆಯಿಂದೆ ಕೆರೆಯಿಂದೆ ।
ಯೆಲ್ಲಿಯುಂ ಕುಸುಮದಾಗರದಿಂದೆ ಸರದಿಂದೆ ।
ಯೆಲ್ಲಿಯುಂ ರತ್ನಮಯದಿಳೆಯಿಂದೆ ಬೆಳೆಯಿಂದೆ ಮಣಿಕೃತಕ ಶೈಲದಿಂದೆ ॥
ಎಲ್ಲಿಯುಂ ಸುಳಿವ ಗೋವ್ರಜದಿಂದೆ ಗಜದಿಂದೆ ।
ಯೆಲ್ಲಿಯುಂ ಕತ್ತುರಿಯ ಮೃಗದಿಂದೆ ಖಗದಿಂದೆ ।
ಯೆಲ್ಲಿಯುಂ ವಿರಚಿತ ಭವನದಿಂದೆ ಜನದಿಂದೆಯಾನಾಡ ಸಿರಿ ಮೆರೆದುದು ॥ ೨ ॥

ಅಂಚೆವಿಂಡಾಡದಕೊಳಂ ಕೊಳಗಳೊಳು ಸಲೆ ಪ ।
ಳಂಚಿ ಸುಳಿಯದ ಗಾಳಿ ಗಾಳಿಗಳ ಬಳಿವಿಡಿದು ।
ಸಂಚರಿಸದೆಳದುಂಬಿ ತುಂಬಿಗಳ ಬಿಡಯಕಿಂಪೆನಿಸದಚ್ಚಲರಲರ್ಗಳ ॥
ಗೊಂಚಲೆರಗಿಸದ ಲತೆ ಲತೆಗಳಡರದತಳ್ಕಿ ।
ನಿಂ ಚಿಗುರದಿಮ್ಮಾವು ಮಾವುಗಳ ಚೆಂದಳಿರ್ ।
ಮಿಂಚದ ಬನಂ ಬನಗಳಿಂ ಬಳಸದೂರೂರ್ಗಳಿಲ್ಲದೆಡೆಯಿಲ್ಲಿಳೆಯೊಳು ॥ ೩ ॥

ಬೆಳೆಯದ ಪೊಲಂಗಳಂ ಬೆಳ್ದಾವರೆಗಳಲ ।
ರ್ಗಳೆಯದಕೊಳಂಗಳಂ ಮಣಿಶಿಲಾ ರೋಚಿಯಿಂ ।
ಪೊಳೆಯದಚಲಂಗಳಂ ತರುಣಾರುಣ ಪ್ರಭಾಲಕ್ಷ್ಮಿಯಂ ನಗುವಂತಿರೆ ॥
ತಳೆಯದ ಬನಂಗಳಂ ಕಿವಿಯೊಳಿಡಿದಾಸರಂ ।
ಕಳೆಯದ ಸೊನಂಗಳಂ ಮನಕನವರತಸುಖಂ ।
ಮೊಳೆಯದ ಜನಂಗಳಂ ಮುಳಿದರಸಲಾಂ ಕಾಣೆನಾಮಹೀಮಂಡಲದೊಳು ॥ ೪ ॥

ಉರ್ವರೆಯ ಶಾಲಿಗಳ ಪಾಲ್ದೆನೆಗೆ ನಭದಿಂ ಮು।
ಸುರ್ವ ಗಿಳಿವಿಂಡುಗಳನುಲಿಯಿಂದೆ ಪಾಮರಿಯ।
ರೆರ್ವಿಸಿದೊಡಿರದೆ ಬಾಂದಳಕೆ ಮುಗುಳೇಳ್ವವೊಲ್ ಕಲಮಂಗಳಿಕ್ಕೆಲದೊಳು ॥
ಕೊರ್ವಿ ನಳನಳಿಸಿ ನೀಳ್ದುರೆ ಬೆಳೆದ ರಸದಾಳಿ.
ಗರ್ವುಗಳ ಸೋಗೆಗಳ ಪಸುರುವೊಗರಾಗಸಕೆ।
ಪರ್ವುತಿಹುದಾನಾಡೊಳೆಲ್ಲಿಯುಂ ದಾರಿಗರ ಕಣ್ಗೆ ಕೌತುಕಮಾಗಲು ॥ ೫ ॥

ತಂಬೆಲರ ಸೊಗಸಿಂಗೆ ತಲೆದೂಗುವಂತೆ ತಳೆ।
ದಂಬುಜದ ಪರಿಮಳಕೆ ಶಿರವನೊಲೆವಂತೆ ಮರಿ।
ದುಂಬಿಗಳ ಗಾನಕ್ಕೆ ಕೊರಲನೊಲೆದಾಡುವಂತೊಯ್ಯೊಯ್ಯನೊಲೆದಾಡುವ ॥
ಪೊಂಬಣ್ಣಮೆಸೆವ ಕಳಮಶ್ರೀಯ ಪರಿಚರ್ಯೆ।
ಯಂ ಬಿಡದೆ ಮಾಳ್ಪ ಕೆಳದಿಯರೆನಲ್ ಕೀರ ನಿಕು।
ರುಂಬಮಂ ಸೋವಲೆಂದಲ್ಲಿರ್ದ ಪಾಮರಿಯರಧ್ವಗರ ನಡೆಗೆಡಿಪರು ॥ ೬ ॥

ಪಾಲ್ದೆನೆಯೊಳಂಡಿಸಿದ ಗಿಳಿವಿಂಡನಬಲೆಯರ್।
ಕಾಲ್ದೆಗೆಯಲಾರ್ದು ಕೈಪರೆಗುಟ್ಟುವಂಡಲೆಗೆ।
ತೇಲ್ದು ಮೇಲುದು ಜಾರೆ ತೋರ್ಪ ಪೊಂಗೊಡವೊಲೆಯನಂಬುಜದ ಮುಕುಳ[ಮೆಂದು ॥
ಸೋಲ್ದೆರಗಿ ತಿರುತಿರುಗಿ ಬರುತಿರ್ಪ ತುಂಬಿಗಳ।
ಸಾಲ್ವಿಜಗಿರಿಯ ಬಳಸುವ ತಮೋರಾಜಿಯುಂ।
ಪೋಲ್ದು ನರೆ ಕಂಗೊಳಿಸುತಿರ್ಪುದಾ ಭೂತಲದೊಳೇನೆಂಬೆನಚ್ಚರಿಯನು ॥ ೭ ॥

ಶಾಲಿಗಳ ಕೈಗಂಪ ಪೊಲಗಾವ ಪಾಮರಿಯ।
ರೋಳಿಗಳ ಮೈಗಂಪ ಸತತ ಕುಸುಮಿತ ತರು ಲ।
ತಾಳಿಗಳ ಪೂಗಂಪ ತಿಳಿಗೊಳಂಗಳೊಳಲರ್ದ ಪೊಚ್ಚಪೊಂದಾವರೆಗಳ ॥
ಧೂಳಿಗಳ ತನಿಗಂಪನುಂಡು ಮಿಂಡೆದ್ದ ಭೃಂ।
ಗಾಳಿಗಳ ಬಳಗಂ ಪರಿಯಲೊಡನೆ ಸುಳಿವ ತಂ।
ಗಾಳಿಗಳ ಕಡುಗಂಪ ಸೇವಿಸುತೆ ಪಥಿಕರಾಸರ್ಗಳೆವರಾನಾಡೊಳು ॥ ೮ ॥

ಬಟ್ಟೆಬಟ್ಟೆಯೊಳೆಲ್ಲಿಯುಂ ಕುಳಿರ್ವೆರಸಿದರ।
ವಟ್ಟಿಗೆಯ ಸದನಂಗಳಿಂದೆ ಬಾಗಿಲ್ಗೆ ಪೊರ।
ಮಟ್ಟು ಕಲಶಮನೆತ್ತಿ ನೀರೆರೆವ ಕಾಮಿನಿಯರುರುಬಾಹುಮೂಲದೆಡೆಗೆ ॥
ದಿಟ್ಟಿ ಪರಿಸರಿದು ಮೊಗವೊರ್ಗುಡಿಸೆ ಸರಿನಕಳ।
ನಟ್ಟ ಜಲಧಾರೆ ಪೊರಸೂಸೆ ಬಯಲಿಗೆ ಬಾಯ।
ಬಿಟ್ಟು ನಗಿಸುವರಲ್ಲಿ ತೃಷೆಯಿಂದೆ ಬಂದ ಪಥಿಕರ್ಕಳಾ ಬಾಲೆಯರನು ॥ ೯ ॥

ಸ್ವಾದು ಸ್ವಚ್ಛತೆ ಶೈತ್ಯಮಾಮೋದವೊಂದಿ ಸೊಗ।
ಸಾದ ಲಲಿತಾಂಗಿಯರ ಕರತಳದ ವಿಮಲ ಕಲ।
ಶೋದಕವನೊಲಿದೀಂಟುತಿರ್ದೊಡಂ ಮನದಣಿಯದಧ್ವಗರ್ಗ್ಗ ಹೆಂಗಳ ॥
ಮಾದಳಿರ ಪಳಿವ ಚೆಂದುಟಿಯ ಸವಿಗೆಳನಗೆಯೊ।
ಳಾದರಿಪ ಕಡೆಗಣ್ಣ ನಿಚ್ಚಳಿಕೆ ಪೀವರಪ।
ಯೋಧರದ್ವಯವನಪ್ಪುವ ತಂಪಿಗೆಸೆವ ಮೈಗಂಪಿಂಗೆ ಬಯಸಿ ಬಯಸಿ ॥ ೧೦ ॥

ತಳಿರೆಡೆಯೊಳಿರ್ದ ಮಾವಿನ ತೋರ ತನಿವಣ್ಣ।
ಗಿಳಿ ಕರ್ದುಂಕಿದೊಡೆ ರಸವೊಸರಿ ಸೋರ್ವಂತೆ ಹೆಂ।
ಗಳ ಕರತಳದ ಪೊಂಗಳಸದ ಜುಳಿಗೆಯೊಳಿಟ್ಟ ಬೆರಲಂ ತೆಗೆದು ಬಿಡಲ್ಕೆ॥
ಲಲಿತ ಚಂಪಕ ತನುಚ್ಛಾಯೆಯಿಂ ಕೆಂಪಿಡಿದ।
ಜಳಧಾರೆ ಕಂಗೊಳಿಸುತಿರ್ಪುದಧ್ವಶ್ರಮಂ।
ಗಳನಾಂತು ಬಂದ ಪಥಿಕರ್ಕಳೀಂಟುವ ಸಮಯದೊಳ್ ಪ್ರಪಾಶಾಲೆಗಳೊಳು॥೧೧॥

ಲಲಿತ ಕರತಳದೊಳ್ ಪಿಡಿದ ಚಂದ್ರಕಾಂತಕೃತ।
ಕಲಶಮಾಸ್ಯೇಂದುಮಂಡಲರುಚಿಗೊಸರ್ವ ನಿ।
ರ್ಮಲ ಜಲಮಿದೆಂಬಂದದಿಂದೆ ಸೊಗಯಿಸುವ ಶೀತಾಂಬುಧಾರೆಯನೀಂಟುತೆ॥
ಲಲನೆಯರ ಕೋಮಲಾವಯವ ಲಾವಣ್ಯಮಂ।
ಸಲೆಕಂಡು ಮೆಚ್ಚಿ ಮನಮುಳುಗಿದಾನಂದದಿಂ।
ತಲೆದೂಗುವರ್ ಪಥಿಕರಾಸೀರ್ಗೆ ತಣಿವ ನೆವದಿಂದಮಾ ಜನಪದದೊಳು ॥೧೨॥

ಏಂ ತಾಳ್ದುದೋ ಚೆಲ್ವನೀದೇಶಮೆಂದು ನಲ।
ವಾಂತು ಮುಂದಳೆಯುತಿರೆ ಕಂಡರವರಾ ಪುರ।
ಪ್ರಾಂತದೊಳ್ ಸನ್ನಿಗೈದಿನಿಯರಂ ಬರಿಸಿ ನವರತಿಕಲಾಪ್ರೌಢಿಯಿಂದೆ॥
ಸ್ವಾಂತಸುಖಮಂ ಪಡೆವ ಪೌರನಾರಿಯರ ವಿ।
ಶ್ರಾಂತಿಗಮರಿದ ರನ್ನವಾಸರೆಗಳಿಂದೆ ಶಶಿ।
ಕಾಂತಶಿಲೆಗಳ ಕಂದರಂಗಳಿಂದತಿಮನೋಹರಮಾದ ಗಿರಿಯೊಂದನು ॥ ೧೩ ॥

ಆ ಗಿರಿಯ ಮಸ್ತಕವನಡರಲ್ಕದರ ಪೂರ್ವ।
ಭಾಗದೊಳ್ ಮೆರೆವ ಭದ್ರಾವತಿಯ ಸಿರಿಗೆ ತಲೆ।
ದೂಗುತೆ ವೃಕೋದರಂ ನುಡಿದನೆಲೆ ವೃಷಕೇತು ನೋಡಿದೈ ಕೌತುಕವನು ॥
ಈಗಳೀ ನಗರಂ ಮಹೀಲಲನೆಗಾಸ್ಯಾಬ್ಜ।
ಮಾಗಿರ್ಪುದೆತ್ತಲುಂ ಗಗನದೆಡೆಗೇಳ್ವ ಬಹು।
ಯಾಗಧೂಮಂಗಳೆಂಬಾಲೋಲನೀಲಾಳಕಾವಳಿಯ ಚೆಲ್ವಿನಿಂದೆ ॥ ೧೪ ॥

ಎನಿಸು ಜನಮಿರ್ದೊಡಂ ತ್ರಿದಶಜನಕಾವಾಸ।
ಮೆನಿಪುದಮರಾವತೀಪತ್ತನಂ ಮೂಜಗದೊ।
ಳೆನಿಸು ಜನವಡೆದೊಡಂ ಗುಹ್ಯಕಾಸ್ಪದಮೆನಿಪುದಳಕಾಪುರಂ ತಿಳಿವೊಡೆ ॥
ಎನಿಸುಜನಮಿರಲೆನಿಸುಜನವಡೆಯಲದರಿಂದೆ ।
ತನಗಿನಿಸು ಕುಂದಿಲ್ಲಮೆಂಬ ಪೆಂಪಿಂದೆ ಪುರ।
ವನಿತೆ ಗಹಗಹಿಸಿ ನಗುವಂತೆಸೆವ ಸೌಧಂಗಳ ಮೌರೀಚಿ ನೋಡೆಂದನು ॥ ೧೫ ।

ಶ್ವೇತಾದ್ರಿಶಿಖರದೊಳ್ ಕಂಗೊಳಿಸುವುಜ್ಜ್ವಲ ।
ಜ್ಯೋತಿರ್ಲತೆಯೊ ಮೇಣು ಸಲ್ಲಲಿತ ಶುಭ್ರ ಜೀ ।
ಮೂತದೊಡ್ಡಿನ ಮೇಲೆ ಪೊಳೆವ ಸೌದಾಮಿನಿಯೊ ಶಿವನ ಮಸ್ತಕದೊಳೆಸೆವ ॥
ಶೀತಾಂಶುರೇಖೆಯೋ ಬಗೆವೊಡೀನಗರದ ವಿ ।
ನೂತನ ಪ್ರಾಸಾದದಗ್ರದೊಳ್ ಸುಳಿವಂಬು ।
ಜಾತನಯನೆಯರ ತನುವಲ್ಲರಿಯ ಕಾಂತಿಯೋ ಕರ್ಣಸುತ ನೋಡೆಂದನು ॥೧೬॥

ನಳನಳಿಪ ತರುಣತೆಯ ಸೊಂಪುವೆತ್ತರುಣತೆಯ ।
ತಳಿರಿಡಿದ ತೋರಣದ ಚೆಲ್ವನಾಂತೋರಣದ ।
ತೊಳಪ ಕಳಸದ ಗುಡಿಯ ಸಾಲ್ದಳೆದ ಕನ್ನಡಿಯ ಸೆಳೆಯ ಸೀಗುರಿ ಚಮರಿಯ ॥
ಚಲಿತ ಲೀಲಾಸ್ಯದ ಪತಾಕೆಗಳ ಲಾಸ್ಯದ ಪ ।
ವಳದ ಮುತ್ತುಗಳ ಗೊಂಚಲ್ಗಳೊತ್ತುಗಳ ಗೊಂ।
ದಳದ ಬಗೆ ಕಂಗಳಿಂಬಿಗೆ ಕೌತುಕಂಗಳಿಂ ಬೀದಿಗಳೊಳೆಸೆದಿರ್ಪುವು ॥ ೧೭ ॥

ಒತ್ತರಿಸಿದುನ್ನತ ಪ್ರಾಸಾದದಬಲೆಯರ ।
ವೃತ್ತವದನೇಂದು ಮಂದಸ್ಮೇರಚಂದ್ರಿಕೆಯೊ ।
ಳುತ್ತುಂಗ ದೇವಾಲಯದ ಗೋಪುರದ ಮಾಣಿಕದ ಕಲಶದೆಳವಿಸಿಲೊಳು ॥
ಕತ್ತಲೆ ಪರಿವುದಲ್ಲದೀ ನಗರದೊಳ್ ಬೇರೆ।
ಮತ್ತೆ ಸೋಮಾದಿತ್ಯ ಕಿರಣಂಗಳೈದುವೊಡೆ ।
ಸುತ್ತಲುಂ ಮುಗಿಲ ಮುಟ್ಟಿದ ಕೋಟೆಗಳ ವಳಯವಣುಗ ನೋಡಚ್ಚರಿಯನು ॥೧೮॥

ಕುಸಿದು ಪಾತಾಳದೊಳಗಿರ್ದು ಪಲಕಾಲಮಂ ।
ದ್ವಿಸಹಸ್ರ ನಯನಂಗಳಿಂದೆ ನೋಡಿದೊಡೆ ಕಾ ।
ಣಿಸಿ ಕೊಳ್ಳದೀ ಪುರದಗಳ ಘಾತಮಿದನಜಂ ಬಲ್ಲನೋ ಕೇಳೈನೆಂದು ॥
ಬಿಸಜಸಂಭವನ ಪೊರೆಗೆಂದಿಳೆಯನುಗಿದುಚ್ಚ।
ಳಿಸಿ ಬಳೆದ ಫಣಿಪತಿಯ ಮಣಿವೆಡೆಯ ಸಾಲಿವೆನ।
ಲೆಸೆವುಪಾಗಸದೊಳೀ ಪೊಳಲ ಕೋಟೆಯ ರನ್ನದೆನೆಗಳೆಲ್ಲಾ ದೆಸೆಯೊಳು ॥ ೧೯ ॥

ವಾಯುಪಾಶಂ ಪರಿಯೆ ದರೆಗುರುಳ್ದ ಪೆವಿದಕು ।
ಪಾಯಮಿನ್ನೇನೆಂದು ನವರತ್ನ ಖಚಿತ ಕಮ ।
ನೀಯ ಕಾಂಚನಮಯೋನ್ನತ ದೃಢಪ್ರಾಕಾರದೊತ್ತುಗೊಂಡಲ್ಲಲ್ಲಿಗೆ॥
ದಾಯ ಮಿಗೆ ನಿಲಿಸಿದರೊ ಖೇಚರರ್ ತಮ್ಮ ಶೋ ।
ಭಾಯಮಾನಾಲಯಂಗಳನೆನಲ್ ಕಣ್ಗೆ ರಮ ।
ಣೀಯಮಾಗಿವೆ ಕರ್ಣತನಯ ನೋಡೀಪುರದ ಮುಗಿಲಟ್ಟಳೆಯ ಸಾಲ್ಗಳು ।೨೦॥

ಮೇಲೆ ನಿಚ್ಚಂ ಪರಿವ ದಿನಮಣಿಯ ಮಣಿರಥದ ।
ಗಾಲಿಗಳ ನೇಮಿಗಳ ಪೊಯ್ಲಿಂದ ಪುಡಿವಡೆದ ।
ಸಾಲ ಹೊಂಗೋಟೆದೆನೆಗೊನೆಗಳಿಂದೇಳ್ವ ಧೂಳಿಲ್ಲಗಲ್ಲಗೆ ನಭದೊಳು॥
ಸ್ಥೂಲದಂಡಾಕೃತಿಯನಾಂತವೊಲ್ ಪ್ರಾಕಾರ ।
ಜಾಲಮಂ ಪಿರ್ವ ಹೇಮದ ಡೆಂಕಣಿಯ ಕೈಗ ।
ಳಾಲಿಗಟ್ಟರಿಯೆನಿಸಿ ತೋರುತಿವೆ ತನಯ ನೋಡೀ ನಗರದೆಣ್ದೆಸೆಯೊಳು ॥ ೨೧॥

ಈ ನಗರವಧು ತನ್ನಡೆಯೊಳಾವಗಂ ಬಾಳ್ವ।
ಮಾನಿಸರ್ಗೆಯ್ದೆ ಸೌಖ್ಯಂ ಪೆರ್ಚರೆಂದೊಮ್ಮೆ।
ತಾನಿಷ್ಟದೇವತೆಯ ಬೇಡಿಕೊಳುತಿರ್ದೊಡಾ ಪರಕೆ ಕೈಗೂಡಲೊಡನೆ॥
ಸಾನುರಾಗದೊಳುಟ್ಟ ಪಸುರ ಡಿಗೆಯೆನೆ ಧರಾ ।
ಮಾನಿನಿಯ ಮೊಗದಾವರೆಯ ಮುಸುಕಿಕೊಂಡಿಹ ನ ।
ವೀನಪತ್ರಾವಳಿಗಳೆನೆ ನಗರಮಂ ಬಳಸಿದುಪವನಂಗಳ್ ಮೆರೆವುವು ॥ ೨೨ ॥

ಆವಗಂ ವೃಷ್ಟಿಣಿಯರಾಗಿರ್ಪರಿಲ್ಲಿಯ ಲ ।
ತಾವಧುಗಳಿವರ ಸೋಂಕಲೆ ಬಾರದೆಂದು ರಾ।
ಜೀವಮಿತ್ರಂ ತನ್ನ ನಿರ್ಮಲ ಕರಂಗಳಂ ಪೆರದೆಗೆದನೆಂಬಂತಿರೆ ॥
ಆವೆಡೆಯೊಳಂ ಛಿದ್ರಮಿಲ್ಲೆನಿಸಿ ವಿವಿಧದ್ರು।
ಮಾವಳಿಯ ನಿಬಿಡಪತ್ರಚ್ಛಾಯೆಗಳ ಸೊಂಪು ।
ದೀವಿದಾರಾಮಂಗಳೆಂದುಮಿಾ ಪುರಜನರ್ಗೇಂ ವಿಲಾಸವನೀವುವೋ ॥ ೨೩ ॥

ನಿಚ್ಚಳದೊಳೆಸೆವ ತಿಳಿಗೊಳನ ಕಲಕಾಡಿ ಬಿರಿ ।
ದಚ್ಚಲರ ಧೂಳಿಗಳ ಚೆಲ್ಲಾಡಿ ಸಲೆ ಮದಂ ।
ವೆಚ್ಚಿ ತರುಲತೆಯನಣೆದಾಡಿ ಮರಿದುಂಬಿಗಳ ಕೂಡಿಕೊಂಡೀಬನದೊಳು॥
ನಿಚ್ಚಮಲೆವೆಲರೆಂಬ ಸೊಕ್ಕಾನೆ ತಾನೆ ತ!
ನ್ನಿಚ್ಛೆಯಿಂ ತಿರುಗುತಿದೆ ತೊಲತೊಲಗಿ ವಿಟಪಿಗಳ್ ।
ಚೆಚ್ಚರದೊಳೆಂದೆತ್ತಲುಂ ಪುಯ್ಯಲಿಡುವಂತೆ ಕೂಗುತಿವೆ ಕೋಗಿಲೆಗಳು ।೨೪।

ಮಿಗೆ ಮುತ್ತಿ ಮೊರೆವ ತುಂಬಿಗಳ ತಿಂತಿಣಿಯುನೇ।
ಮುಗಿಲೆಂದು ಸುಳಿವ ಗಾಳಿಗೆ ದಿಡದೆ ನರ್ತಿಪ ಲ।
ತೆಗಳ ಕುಡಿಗೊನರ ನುಣ್ಬೊಗರನೇ ಮಿಂಚೆಂದು ಸೊಗಯಿಸುವ ಪೂಗಳಿಂದೆ॥
ಉಗುವ ಮಕರಂದ ಬಿಂದುಗಳನೇ ಮಳೆಗಳೆಂ।
ದೊಗೆದಸಂತಸದೊಳಾವಗಮೆಯ್ದಿ ಕುಣಿವ ಸೋ।
ಗೆಗಳ ಬಳಗಂಗಳಂ ಮಗನೆ ಕಂಡೈ ತಳಿತ ನಗರೋಪವನದೆಡೆಯೊಳು ॥ ೨೫ ॥

ಪೂಗಳ ಪರಾಗವೊಕ್ಕಿರ್ದಿಳೆಯ ಮೇಲೆ ಹಂ।
ಸೀಗಣಂ ನಡೆಯುಲದರಡಿವಜ್ಜೆ ಪತ್ತಿ ಸಾ।
ಲಾಗಿರಲ್ಕೀ ಬನವ ವಿರಹಿಗಳ್ ಪುಗದಂತೆ ಮನ್ಮಥಂ ಬರೆದಿಳಿಸಿದ॥
ನಾಗರದ ಯಂತ್ರದಕ್ಕರಗಳೆಂಬಂದದಿಂ।
ದಾಗೆ ತಮಗಿರುಳಹ ವಿಯೋಗಮಂ ನೆನೆದಂಜಿ।
ವೇಗದಿಂ ತೊಡೆವಂತೆ ಪೊರಳ್ದು ರತಿಗೈವ ಕೋಕಂಗಳಂ ನೋಡೆಂದನು॥ ೨೬ ॥

ನಸುಗಾಳಿ ಸಂಧಿಸೆ ಕೆದರ್ದ ಪೊಂದಾಳೆಗಳ।
ಕುಸುರಿಗಳ್ ತಳಿವಕ್ಷತೆಗಳಮಲಮಂಜರಿಯು।
ಕುಸುಮಂಗಳಾಂತ ಪುಷ್ಪಾಂಜಲಿಗಳೊಂದಿ ಕಿಕ್ಕಿರಿದ ಪೆರ್ಗೊನೆಗಳಿಂದೆ॥
ಎಸೆವ ಚೆಂದೆಂಗಾಯ್ಗಳೊಂದೊಂದನೊಡೆಯುತ್ತ।
ಸೊಸರಿ ಸೋರ್ವೆಳನೀರ್ಗಳರ್ಘ್ಯಂಗಳಾಗೆ ರಂ।
ಜಿಸುವ ಬನದೇವಿ ಭೂದೇವತೆಯನರ್ಚಿಪವೊಲಿದೆ ಕುವರ ನೋಡೆಂದನು ॥೨೭॥

ತರುಣ ಪಲ್ಲವದ ವಿಸ್ತಾರದಿಂ ನೇರದಿಂ।
ಪರಗೈವ ಕಲವಿಕೋಚ್ಚಾರದಿಂ ಸಾರದಿಂ।
ಸುರಿವ ಪೂದೊಂಗಲ ತುಷಾರದಿಂ ಸ್ವೈರದಿಂ ಸಲ್ಲಾಪಕೆಳಸಿ ಬಳಸಿ॥
ಮೊರೆವ ತುಂಬಿಗಳ ಝುಂಕಾರದಿಂ ತೋರದಿಂ।
ಪರಿಪಕ್ವಮಾದ ಫಲಭಾರದಿಂ ಕೀರದಿಂ।
ಗರಮೆಸೆಯುತಿರ್ಪ ಸಹಕಾರದಿಂ ತೀರದಿಂಪೆಲ್ಲಿಯುಂ ನಂದನದೊಳು ॥ ೨೮ ॥

ಎಮ್ಮಂತೆ ಕೂರ್ವರಂ ಬಿಡದಪ್ಪಿಕೊಂಡಿರದೊ।
ಡೊಮ್ಮೆಯುಂ ನಿಲಲೀಯನೀ ಬನದೊಳಂಗೋದ್ಭ।
ವಮ್ಮೋಹಿಗಳನೆಂದು ದೃಷ್ಟಾಂತಮಂ ತೋರಿ ಭೋಗಿಸುವ ಮಾನವರ್ಗೆ॥
ಎಮ್ಮಿಂದ ವಸ್ತುವಂ ಪಡೆಯಲ್ಕೆ ಸಂಯೋಗ।
ವಮ್ಮಾಳ್ಪವೊಲ್ ನಾಗವಲ್ಲಿಗಳ್ ಫಲಭಾರ।
ದಮ್ಮೆರೆವ ಪೂಗವೃಕ್ಷಂಗಳಂ ಪರ್ವಿ ಕಂಗೊಳಿಸುತಿವೆ ನೋಡೆಂದನು ॥೨೯॥

ಭೂತಳದ ಭೋಗಿಸಂಕುಲಕೆ ಬಹುವಿಧ ಸುಗಂ ।
ಧಾತಿಶಯ ಸೌಖ್ಯದಿಂ ನೆರೆತಣಿಸಿ ಬಳಿಕ ಸಂ ।
ಪ್ರೀತಿಯಿಂದತಳದ ಮಹಾಭೋಗಿಚಯಕೊಂದುಬಗೆಯ ಕಂಪಿನ ಸೊಂಪನು ।
ಪಿತಕುಣಿಸದೆ ಬಿಡುವಳೀ ವನಾಂಗನೆಯೆಂಬ ।
ರೀತಿಯಿಂ ಬೇರ್ವರಿದ ಮುಡಿವಾಳಮಿರಲಳಿ ।
ಪ್ರಾತಮರಿಯದೆ ತಿರುಗುತಿದೆ ನಿಧಾನವನಭಾಗ್ಯಂ ಕಾಣದಿರ್ಪಂತಿರೆ ॥ ೩೦ ॥

ಕುದ್ದಾಲಹತಿಯನುರೆ ತಾಳ್ದಿಮ್ಮನಿನ್ನೆಗಂ ।
ಮುದ್ದುಗೈದೀ ವಸುಧೆ ಬೆಳೆಯಿಸಿದಳೆಂದು ತುರು ।
ಗಿದ್ದ ತನಿವಣ್ಗಳಿಂದೆಸೆವ ಪೆರ್ಗೊನೆಗಳಂ ಸಲೆ ನೆಮರ್ಪಿಸಲೊಡರ್ಚಿ ॥
ಎದ್ದಿರದೆ ಬಾಗಿದುವೊ ಕದಳಿಗಳ್ ಧರಣಿಗೆನ ।
ಲಿದ್ದಪರೆ ಮರೆದು ಪುರುಷಾರ್ಥಮಂ ಮಾಡಿದರ ।
ನುದ್ದಾಮಗುಣಮುಳ್ಳ ಜೀವಿಗಳ್ ತನುಜ ನೋಡೆಂದನಾ ಪವನಸೂನು ॥ ೩೧ ॥

ಕಡುಗೆಂಪೆಸೆವ ತಳಿರ ತನಿಗೆಂಡಮಂ ಕಲಕಿ ।
ನಡೆದು ಮೊನೆಮುಗುಳ ಶಸ್ತ್ರಂಗಳಂ ಪಾಯ್ದು ಮಾ ।
ಮಿಡಿಯ ಜೊಂಪದ ವಜ್ರಮುಷ್ಟಿಯಂ ಜಡಿದು ಲತೆಗಳ ಕೊನರ ಚಾಟಿಯಿಂದೆ ॥
ಬಡಿದು ಕೋಗಿಲೆಯ ನಿಡುಸರದ ಬೊಬ್ಬೆಯೊಳಾರ್ದು ।
ಬಿಡದೆ ವನದೇವಿಯೋಲಗದೊಳುತ್ಸವದಿಂದ ।
ಮಡಿಗಡಿಗೆ ತೂಣಗೊಂಡವನಂತೆಸೆವ ಮಂದಮಾರುತನ ನೋಡೆಂದನು ॥ ೩೨ ॥

ಬಕುಳ ಮಂದಾರ ಪಾದರಿ ಕರ್ಣಿಕಾರ ಚಂ ।
ಪಕ ಕೋವಿದಾರ ಪ್ರಿಯಂಗು ಕರವೀರ ಕುರ ।
ವಕ ತಿಲಕ ಸುರಗಿ ನಂದ್ಯಾವರ್ತ ಮೇರು ಸೇವಂತಿಗೆ ಶಿರೀಷಮೆಂಬ ॥
ಸಕಲ ತರುನಿಚಯಂಗಳಂಗಜನ ವಿವಿಧ ಸಾ ।
ಯಕದ ಮೂಡಿಗೆಗಳಂತೆಸೆವ ನವಕುಸುಮಸ್ತ ।
ಬಕದಿಂದಮೊಪ್ಪುತಿವೆ ಕುಂದಮಾಲತಿಮಲ್ಲಿಕಾದಿಪೂವಲ್ಲಿಗೂಡಿ ॥ ೩೩ ॥

ಸಾಲಸಾಲಂಗಳಿಂ ಬಕುಳ ಕುಳದಿಂದೆ ಹಿಂ ।
ತಾಲತಾಲಂಗಳಿಂ ಮಾದಲದಲರ್ಗಳಿಂ ತ ।
ಮಾಲಮಾಲತಿಗಳಿಂ ಸಂರಂಭರಂಭದಿಂ ಮಂದಮಂದಾರದಿಂದೆ ॥
ಜಾಲಜಾಲಂಗಳಿಂ ಸುರಹೊನ್ನೆ ಹೊನ್ನೆ ಬಗೆ ।
ಪಾಲ ಪಾಲಾತತರು ತರುಣಾಮ್ರಚಯ ಕಿಂಕಿ ।
ಲಾಲಿ ಲಾಲಿತ ನವಾಶೋಕದಿಂದುದ್ಯದುದ್ಯಾನಮೇಂ ಚೆಲ್ವೆನಿಪುದೋ ॥ ೩೪ ॥

ಬಗೆವೊಡಿವು ಮುನ್ನ ಮಾಡಿರ್ದ ದೈವದ್ರೋಹ।
ದಘದಿಂದೆ ಬನದ ಪೊರವಳಯದೊಳ್ ಬಹುಕಂಟ।
ಕಿಗಳಾಗಿ ಬಂದು ಸಂಭವಿಸಿರಲ್ ತಳಿತ ಹೊಂಗೇದಗೆಗಳವರೊಳಾಡಿ॥
ಮಿಗೆ ಮಲಿನವಾಯ್ತು ಸರ್ವಾಂಗಮುಂ ಭ್ರಮರಾವ।
ಳಿಗೆ ತಮಗದರ ಸಂಗಮೇಕೆಂದು ಪೂತ ಸಂ।
ಪಗೆಗಳತಿಶುಚಿಗಳಂತೆಸೆಯುತಿವೆ ನೋಡು ನಂದನ ಪುರದ ನಂದನದೊಳು ॥ ೩೫ ॥

ಮುಡಿವಾಳ ಲಾಮಂಚಗಳ ಬೇರ್ಗಳಿಂ ಬೇರ್ಗ।
ಳಿಡಿದಗರುಚಂದನಂಗಳ ಕೊಂಬಿನಿಂ ಕೊಂಬು।
ತೊಡರಿದಟ್ಟೆಸಲು ಮಲ್ಲಿಗೆ ಜಾಜಿಗಳ ಪೂಗಳಿಂ ಪೂಗಳೊಂದುಗೂಡಿ॥
ಕಡುಗಂಪುವಡೆದುವಾಮೂಲಾಗ್ರಮೀ ಬನದ।
ನಡುವೆ ಪುಟ್ಟಿದ ಕಾಳ್ಮರಂಗಳೆಲ್ಲಂ ಸೋಂಕಿ।
ದೊಡೆ ತಂಬೆಲರ್ಗೆ ಪರಿಮಳವನೀಯದ ಕುಜಂ ನಂದನದೊಳೊಂದಿಲ್ಲೆನೆ ॥ ೩೬ ॥

ಈ ವನದ ನಡುನಡುವೆ ತೊಳತೊಳಗುತಿರುತಿಹ ಸ।
ರೋವರವರದೊಳೆ ದಳೆದಳೆದು ಬೆಳೆಬೆಳೆದು ರಾ।
ಜೀವದಲರಲರ ತುಳಿತುಳಿದಿಡಿದಿಡಿದ ಬಂಡನೊಡನೊಡನೆ ಸವಿದು ಸವಿದು॥
ಅವಗವಗಲದೆ ಯುಗಯುಗವಾಗಿ ನೆರೆನೆರೆದು।
ಕಾವ ಸೊಗಸೊಗಸಿನಲಿ ನಲಿದು ಮೊರೆಮೊರೆವ ಭೃಂ।
ಗಾವಳಿಯ ಗಾವಳಿಯ ಕಳಕಳಂಗಳ ನೋಡುನೋಡು ರವಿತನಯತನಯ ॥ ೩೭ ॥

ಸಗ್ಗದಾಣ್ಮನ ವಜ್ರಹತಿಯಿಂದೆ ಸಾಗರಕೆ।
ಮುಗ್ಗುವ ಕುಲಾದ್ರಿಗಳ ಮರಿಗಳ ಸಮೂಹಮೆನ।
ಲೊಗ್ಗಿನಿಂ ಪೆರ್ಗಡಲ ನೀರ್ವೊರ್ಗೆಯುಲಿಳಿದ ಕಾರ್ಮುಗಿಲ ಬಳಗಂಗಳೆನಲು॥
ದಿಗ್ಗಜಮನೇಕಂಗಳಾದುವೆನೆ ಕರಿಘಟೆಯು।
ಮೊಗ್ಗರಂ ತಿಳಿಗೊಳಂಗಳ ಸಲಿಲಪಾನಕ್ಕಿಳೆ।
ನೆಗ್ಗಿದಲ್ಲದೆ ಮಾಣದೆಂಬಿನಂ ಪೊಳಲ ಪೊರಮಟ್ಟು ಬಂದಪುದೆಂದನು ॥ ೩೮ ॥

ಖಳರ ಪುರುಷಾರ್ಥಮಂ ಕಾಮಿಸುವ ಯಾಚಕಾ।
ವಳಿಯಂತೆ ಪೊಳಲಿಂದೆ ಪೊರಮಟ್ಟು ಸರಸಿಯೊಳ್।
ಮುಳುಗುತಿರ್ಪ್ಪಾನೆಗಳ ದಾನಾಭಿಲಾಷೆಯಂ ಬಿಟ್ಟಳಿಕುಳಂ ತೊಲಗಲು॥
ಕಳಕಳಿಸಿ ನಗುವ ಸಜ್ಜನರವೊಲ್ ಸರಸ ಪರಿ।
ಮಳದ ಮಕರಂದಮಂ ಭ್ರಮರಾವಳಿಗೆ ಮಾಜ।
ದೊಲಿದಿತ್ತು ಮೆರೆವ ಬೆಳ್ದಾವರೆಯ ಬಿಚ್ಚಲರ್ಗಳ ಪೆರ್ಚ ನೋಡೆಂದನು ॥ ೩೯ ॥

ಕಾರ್ಗಾಲದಭ್ರಮಾಲೆಗಳಮರನರಣಿಯೋಳ್ ।
ತಾರ್ಗೂಡುಕೆತ್ತಲುಂ ನಿಬಿಡಮಪ್ಪಂದದಿಂ ।
ನೀರ್ಗುಡಿಯೆ ಪೊಳಲ ಪೆರ್ಬಾಗಿಲ್ಗಳಿಂದೆ ಪೊರಮಡುವ ವರನರರಸಿಯಿಂದ ॥
ಊರ್ಗೆ ಮರಳುವ ತೇಜಿಗಳ ಸಾಲ್ಗಳಾ ಮಧ್ಯ ।
ಮಾರ್ಗದೊಳ್ ತವೆ ತೀವಿ ಸಂದಣಿಸುತಿವೆ ನೃಪರೊ ।
ಳಾರ್ಗಿವನ ಸೌಭಾಗ್ಯಮುಂಟಮಮ ಪೇಳ್ಗೆನೆಂತಣುಗ ನೋಡಚ್ಚರಿಯನು ॥೪೦॥

ದೇರೆಬೇರಿನಿತೆಲ್ಲಮಂ ಕರ್ಣತನಯಂಗೆ ।
ತೋರುತಿರ್ದಂ ಭೀಮನನ್ನೆಗಂ ಬಿಸಿಯ ಬಿಸಿ ।
ಲೇರಿಮದು ಭದ್ರಾವತಿಯೊಳುಳ್ಳ ತೇಜಿಗಳ ಚಪಲತೆಯ ಸಾರಂಥದೆ ॥
ಮೀರಿದ ಜವಂಗಳಂ ಕಂಡು ಕಾಲ್ಗಟ್ಟೆಯ ।
ರಾರದೊಯ್ಯನೆ ನಡೆವ ತೇರ್ಗುದುರೆಯಂ ಕಂಡು ।
ನೂರೆಲೆಗಳೆಯನುಗ್ರಕೋಪದಿಂದುರಿಯನುಗುಳದೆ ಮಾಣನೆಂಬಂತಿರೆ ॥ ೪೧॥

ಭಾನು ಮಧ್ಯಾಹ್ನಗತನಾದನೀ ಕುದುರೆಗಳೊ ।
ಳಾನುತ್ತಮಾಶ್ವಮಂ ಕಂಡುದಿಲ್ಲದರಿಂದ ।
ಮೇನದಂ ಪೊರಮಡಿಸರೋ ಪೊಳಲೊಳಿಲ್ಲವೋ ಕಣ್ಗೆ ಗೋಚರಮಾಗದೋ ॥
ಈ ನಿದಾನವನರಿವೊಡೆಂತುಟೆಮಗೆಲೆ ಕರ್ಣ ।
ಸೂನು ಪೇಳೆಂದು ಚಿಂತಾವಿಷ್ಟನಾಗಿ ಪವ ।
ಮಾನಜಂ ಚಿತ್ತದೊಳ್ ದೇವಪುರ ಲಕ್ಷ್ಮೀಶನಂಘ್ರಿಯಂ ಧ್ಯಾನಿಸಿದನು ॥ ೪೨॥

ನಾಲ್ಕನೆಯ ಸಂಧಿ

ಚನೆ । ಜಡಿದು ಧರ್ಮಾವತಿಯೊಳಮಲಶರ ವಾಜಿಯಂ ।
ಪಿಡಿದು ಕಲಿಯುವನಾಶ್ವನ ತಾಕುರಂಗಮಂ ।
ಬಿಡದವನನಲ್ಲಿ ಕಾಣಿಸಿಕೊಂಡು ಹಸ್ತಿನಾವತಿಗೆ ಭೀಮಂ ಬಂದನು ।

ಜನಮೇಜಯಕ್ಷಿತಿಪ ಕೇಳ್ ಪ್ರಣಯ ಕಲಹದೊಳ್ ।
ನಿದ ಕಾಂತೆಯ ಕುಪಿತ ವದನಾರವಿಂದದೊಳ್ ।
ಮುಗುಳೆನಗೆ ತೋರುವನ್ನೆಗಂ ಚಿತ್ತದೊಳ್ ಕುದಿವ ನಾಗರಿಕನಂತೆ ।
ಲಸುತನಾಹಯಂ ಪೊಳಲ ಘೋರಮಡುವಿನಂ ।
ನದುದ್ವೇಗದೊಳ್ ಚಿಂತಿಸಿ ಮತ್ತೆ ಕರ್ಣಜಾ ।
ವದನಮಂ ನೋಡುತನುತಾಪದಿಂ ತನ್ನ ಪಳಿದುಕೊಳುತಿಂತೆಂದನು ॥ ೧ ॥

ಗಾದ್ರೇಕದಿಂ ಮುನಿವರನೊಳಾಡಿ ತಪ್ಪಿದ ಗು ।
ದ್ರೋಹಮೊಂದಚ್ಯುತನೊಳಾಡಿ ಹೊಳೆದ ದ್ವೈ ।
ದ್ರೋಹಮೆರಡರಸನವಸರಕೊದಗದ ಸ್ವಾಮಿದ್ರೋಹಮೈದೆ ಮೂರು ।
ಚಿತ ಪೇಳ್ದಪ್ರತಿಜ್ಞೆ ಕೈಗೂಡದಾ ।
ದ್ರೋಹಮದುವೆ ನಾಲ್ಕಿದರ ಸಂಗಡಕೆ ಧ ।
ದ್ರೋಹಮೈದಾಗದಿಹುದೆ ಕನಗಶ್ವಮಂ ಕಂಡು ಕೊಂಡೊಯ್ಯದಿರಲು ॥ ೨ ॥

ಪ್ರಸಿದನೆ ಬಯಲ್ಗೆ ವೇದವ್ಯಾಸಮುನಿ ಪುಸಿದೊ ।
ರಾರಿ ಸೈರಿಸನೆ ಸೈರಿಸಿದೊಡೊಳ್ಳಿತೆಂ ।
ರುವುದೆ ಶಕುನಂಗಳುಸಿರಿದೊಡಭಾಗ್ಯನೇ ಭೂವರನಭಾಗ್ಯನಾಗೆ ।
ಳಿಪುದೆ ಶಶಿಕುಲಂ ಮಸುಳಿಸಿದೊಡದ್ದುಪುದೆ ।
ಧೆಯುದ್ದೊಡೆ ತನ್ನ ನುಡಿ ಬಂಜೆಯಪ್ಪುದಿದು ।
ತದೇಂ ಪಾಪದಿಂ ಕಾಣಸದೊ ತುರಗಮೆಂದನಿಲಜಂ ಚಿಂತಿಸಿದನು ॥ ೩ ॥

ನಾತಕಿಗೆ ನುಡಿದ ಸೋಲ್ ಪುಸಿಯಹುದು ಪರದಾರ ।
ಕಿಗೆ ನೆನೆದೆಣಿಕೆ ಬಯಲಹುದು ಗುರುವಿಪ್ರ ।
ಕಗೆ ಕಾಣ್ಬೊಡವೆ ಮರೆಯಹುದು ತಥ್ಯಮಿದು ಜಗದೊಳೆನಗಾವ ಭವದ ।
ಕಿಲ್ಬಿಷಮೊ ಯಾದವಕುಲ ಮಹಾಂಬುನಿಧಿ ।
ರಣಂ ತನ್ನ ಶರಣರನುಳಿದನೊ ಹಯ ।
ಕಿಂತಕಟ ಕಾಣಸದೊ ಶಿವಶಿವಯೆಂದು ಪವನಜಂ ಚಿಂತಿಸಿದನು ॥ ೪ ॥

ತಲ್ಲಕ್ಷಣಾಂಗಳಿಂ ಸಲ್ಲಲಿತವಾದ ಹಯ |
ಮಿಲ್ಲಿ ವಿಧಿವಶದಿಂದಮಿಲ್ಲಿದಿರ್ದೊಡೆ ಧರಾ |
ವಲ್ಲಭನ ರಂಜಿಸುವ ಮೆಲ್ಲಡಿಗಳಂ ಕಾಣಬಲ್ಲೆನೆ ಮಹೀತಳದೊಳು ||
ಎಲ್ಲಿರ್ದೊಡಾ ತಾಣದಲ್ಲಿ ಪೊಕ್ಕರಸಿ ತಂ |
ದಲ್ಲದೆನ್ನಯ ಬಾಷೆ ಸಲ್ಲದಿದಕೆಂತೆನುತೆ |
ಪಲ್ಲಿಸುವ ಚಿಂತೆಯಿಂ ನಿಲ್ಲದೆ ವೃಕೋದರಂ ತಲ್ಲಣಿಸುತಿರುತಿರ್ದನು ||

ಅನಿತರೊಳನೇಕ ಸೇನೆಗಳ ಸನ್ನಾಹದಿಂ |
ಘನವಾದ್ಯ ರಭಸದಿಂ ಸೂತರ ಪೊಗಳ್ಕೆಯಿಂ |
ದನುಕರಿಸಿದಮಲ ವಸ್ತ್ರಾಭರಣ ಗಂಧಮಾಲ್ಯಾದಿಗಳ ಪೂಜೆಯಿಂದೆ ||
ವಿನುತಾತಪತ್ರ ಚಮರಂಗಳಿಂದೆಡಬಲದೊ |
ಳನುವಾಗಿ ವಾಘೆಯಂ ಪಿಡಿದು ನಡೆತಪ್ಪ ನೃಪ |
ತನುಜರಿಂದಾ ಹಯಂ ನೀರ್ಗೆ ಪೊರಮಟ್ಟು ಸಂಭ್ರಮದೊಳೈತರುತಿರ್ದುದು ||

ವಿಧುಬಿಂಬದುದಯಮಂ ಕಂಡೊತ್ತರಿಸಿ ಪಯೋ |
ನಿಧಿ ಮೇರೆವರಿದುಕ್ಕುವಂತೆ ನಿರ್ಮಳವಾದ |
ಸುಧೆಯೋಳ್ಗೆಯಂ ಕಂಡು ಪುಳಕಂ ನೆಗಳ್ದು ಜಂಭಾರಿ ಸಂಭ್ರಮಿಸುವಂತೆ ||
ಅಧಿಕಬಲ ಯೌವನಾಶ್ವಾವನಿಪನೈಶ್ವರ್ಯ |
ವಧುವಿನ ಕಟಾಕ್ಷದಂತೊಪ್ಪುವ ತುರಂಗಮಂ |
ಕುಧರೋಪಮಾನ ಪವಮಾನಜಂ ಕಂಡು ನೆರೆ ಸುಮ್ಮಾನಮಂ ತಾಳ್ದನು ||

ಚತುರಪದಗತಿಯ ಸರಸಧ್ವನಿಯ ವರ್ಣಕೋ |
ಚಿತದಲಂಕಾರದ ಸುಲಕ್ಷಣದ ರಾಲಿತ |
ಶ್ರುತಿರಂಜನದ ವಿಶೇಷಾರ್ಥಸಂಚಿತದ ವಿಸ್ತಾರದಿಂ ಪೊಸತೆನಿಸುವ |
ನುತ ಸತ್ಕವಿಪ್ರೌಢತರ ಸುಪ್ರಬಂಧದಂ |
ತತಿ ಮನೋಹರಮೆನಿಪ ವಾಜಿಯಂ ಕಂಡು ಹ |
ರ್ಷಿತನಾಗಿ ನೋಡುತಿರ್ದಂ ಕಲಾವಿದನಪ್ಪ ಮಾರುತಿ ಮಹೋತ್ಸವದೊಳು ||

ಮೂಜಗದೊಳೀ ತುರಂಗಮವೆ ಪೊಸತೆಂದು ವರ |
ವಾಜಿಯಂ ನಿಟ್ಟಿಸುವ ಭೀಮಸೇನನ ಪದಸ |
ರೋಜಯುಗಳಕ್ಕೆರಗಿ ಮೋಹನಾದಂ ನೀವು ನೋಳ್ಪುದೆನ್ನದಟನೀಗ |
ವಾಜಿಯಂ ತಹೆನೆನುತ್ತಲ್ಲಿಂ ತಳರ್ದ ವಾ |
ಯೂಜಾಲಮಂ ಬೀಸಿದಂ ನಭೋಮಂಡಲ |
ಕ್ಕಾಜನಪನಶ್ವರಕ್ಷೆಯುಬಲಂ ಕಂಗೆಡಲ್ ಭೂಪ ಕೇಳದ್ಭುತವನು

ರುಗಿತೆತ್ತಲುಂ ಪ್ರಳಯಕಾಲದ ಮೇಘ।
ಗುತಿವೆ ಬರಿಯ ಬರಸಿಡಲ ಳೆತ್ತೆತ್ತಲುಂ।
ಯುತಿದೆ ಬಿರುಗಾಳಿ ದೂಳನೆತ್ತೆತ್ತಲುಂ ಕತ್ತಲೆಗಳಟ್ಟಣಿಸಿವೆ॥
ದಾರದು ಕಣ್ಣ ಮರೆದು ಕಣ್ದೆರೆಯೆ ದಿ।
ದಾರದು ಮಹಾದ್ಭುತಮಿದೆತ್ತಣದೊ ಜಗ।
ನೇ ಬಲ್ಲನೆನುತಿರ್ದುದಾ ಸೈನಿಕಂ ಹೈಡಿಂಬಿಕೃತಮಾಯೆಗೆ ॥ ೧೦ ॥

ಗನದೊಳ್ ಸುಳಿಯುತನಿಮಿಷನೊರ್ವನಿವನ ಮಹಾ।
ಧಯುಂಗೊಂಡು ಕಡುವೇಗದಿಂ ಪೋಗಿ ಪ।
ದೂರರಾತಂ ಚರರ ಕಳುಪಿ ಕೇಳಿದೊಡೀತ ನಾಂ ಭೀಮಸುತನ॥
ದ್ಧರಕೆ ಹಯಮನೊಯ್ದಪೆನೆನಲ್ಕವಂ।
ಳದಿಂ ಪೋಗಿ ಸುರಪತಿಗೆ ಬಿನ್ನೈಸೆ ನಸು।
ತಮಂ ದೇವರ್ಕಳೊಡಗೂಡಿ ಬಂದನಲ್ಲಿಗೆ ಸಮರಮಂ ನೋಡಲು ॥ ೧೧ ॥

ತ್ತಲೀಕುದುರೆಗಾಪಿನ ಭಟರ ಕಣ್ಗೆ ಬ।
ರೆಗಳಂ ದೂಳ್ಗಳಂ ಕವಿಸಿ ಬೀತಿಯಿಂ।
ನೆಲಕಿಳಿದು ಪಡಿವಾಘೆಯುಂ ಪಿಡಿದರಸುಮಕ್ಕಳಂ ಬೀಳೆಹೊಯ್ದು।
ರಗಮಂ ಕೊಂಡು ಚಿಗಿದನಾಗಸಕೆ ಸರ।
ಣಿಂದಂಚೆ ಬೆಳುದಾವರೆಯನೆತ್ತುಯಿಂ।
ನಭಕೇಳ್ವಂತೆ ಮೇಘನಾದಂ ಭೀಮಕರ್ಣಜರ್ ಬೆರಗಾಗಲು ॥ ೧೨ ॥

ರಾಹು ತುಡುಕಿದ ಚಂದ್ರಮಂಡಲಮೊ ಗರುಡನು।
ಪದಿಂದೆತ್ತಿ ಕೊಂಡೊಯ್ದಮೃತಕಲಶಮೊ ಬ।
ಕಂ ತಾಳ್ದ ಬೆಳ್ಮಿಂಚಿನೊಬ್ಬುಳಿಯೊ ಪೊಸತೆನೆ ಘಟೋತ್ಕಚತನಯನು।
ಬಲದಿಂದೆಡದ ಕಕ್ಷದೊಳಿರುಂಕಿದ ಮ।
ಯಂ ಗಗನಮಾರ್ಗದೊಳ್ಕೈದುತಿರೆ ಕುದುರೆ।
ನ ಚತುರ್ಬಲಂ ಕಂಡು ಬೊಬ್ಬಿರಿದಾರ್ದು ಕಾಳಗಕೆ ಮುಂಕೊಂಡುದು ॥೧೩॥

ಪೋಹಾಗಿ ಪೂಡುವೊಡೆ ಸಾಲದೇಳೀ ಹಯಂ।
ಡಿಸುವೆನೀ ತುರಗಮಂ ತನ್ನ ತೇರ್ಗೆಂದು।
ದಿಂ ಬಾಂಗೆತ್ತಿ ಕೊಂಡೊಯ್ದಿರನಬ್ಜಸಖನೆಂಬ ಶಂಕೆಯಿಂದೆ॥
ಪಿಸಿದ ಮಂದೇಹಸೇನೆ ಬಂದೆಡ್ಡೆಸೆಗೆ।
ಡಿದುದೊ ಮುತ್ತಿಗೆಯನೆನೆ ಮೇಘನಾದನ ಪಿ।
ಪಿಸಿ ಚತುರ್ಬಲಂ ಕವಿಯೆ ಲೆಕ್ಕಿಸದವಂ ಸೈವರಿದನಾಗಸದೊಳು ॥೧೪॥

ಬಳಿಕಾಬಲಂ ಕಂಡುದಭ್ರಮಾರ್ಗದೊಳೆ ಮುಂ।
ದಳೆಯುತಿಹ ಮೇಘನಾದನನೆಲವೊ ಬರಿಮಾಯೆ।
ಗಳನೆಸಗಿ ಮೋಸದೊಳ್ ತುರಗಮಂ ಕೊಂಡು ಬಾಂದಳಕಡರ್ದೊಡೆ ನಿನ್ನನು॥
ಉಳುಹುವರೆ ಯೌವನಾಶ್ವನ ಸುಭಟರಕಟ ನಿ।
ನ್ನಳವನರಿಯದೆ ಬಂದು ಕೆಣಕಿದೆಯಲಾ ಜೀವ।
ದುಳಿವನಾರೈದುಕೊಳ್ಳೆನುತಾತನಂ ಮುತ್ತಿಕೊಂಡು ಕಪಿದಿಸುತಿರ್ದುದು ॥ ೧೫ ॥

ಪಿಂತಿರುಗಿ ನೋಡಿದಂ ಕಂಡೆನಲ್ಲವೆ ಜೀವ।
ಮಂ ತೆಗೆದುಕೊಂಡೊಯ್ವ ಕಾಲನಂ ಪೆಣನಟ್ಟು।
ವಂತಾಯ್ತಲಾ ನಿಮ್ಮ ಸಾಹಸಂ ಜಾಗುಜಾಗೆನುತೆ ಹೈಡಿಂಬಿ ನಗುತೆ॥
ಸಂತತಂ ಕರೆವ ಕಲ್ಮಳೆಗಳಂ ಸೃಜಿಸಿ ಬಲ।
ಮಂ ತವೆ ಪೊರಳ್ಚಿ ಮುಂದಳೆಯಲಾಪುಯ್ಯಲೂ।
ರಂ ತಾಗೆ ಪೊರಮಟ್ಟುದಾ ನೃಪನ ಸೈನ್ಯಮಕ್ಷೌಹಿಣಿಯ ಗಣನೆಯಿಂದೆ ॥ ೧೬ ॥

ತನ್ನೊಳಿರ್ದಮಲ ಹಯರತ್ನಮಂ ಕೊಂಡು ಕಳ।
ವಿನ್ನಭಸ್ಥಳಕೊಯ್ದನೆಂಬ ಕಡುಗೋಪದಿಂ।
ದೆನ್ನಬಿಡದೆದ್ದುನಡೆದುದೊ ಗಗನಕೀಧರಣಿಯೆನೆ ಘಟೋತ್ಕಚತನುಜನು॥
ಮುನ್ನ ಮಾಡಿದ ರಜದ ಮಾಯೆಗಿಮ್ಮಡಿಸಿ ಪಡಿ।
ಯನ್ನೆಗಳ್ಚಿದರೊ ವೈರಿಗಳೆನೆ ರಣೋತ್ಸಾಹ।
ದಿನ್ನಡೆವ ಚಾತುರಂಗದ ಪದಹತಕ್ಕೇಳ್ವ ಧೂಳ್ ಮುಸಗಿತಂಬರದೊಳು ॥ ೧೭ ॥

ಪಟಹ ನಿಸ್ಸಾಳ ತಮ್ಮಟ ಭೇರಿಗಳ ಸಮು।
ತ್ಕಟನಾದಮುಗ್ರಗಜಘಟೆಯ ಘಂಟಾರವಂ।
ಚಟುಲ ವಾಜಿಗಳ ಖುರಪುಟದ ರಭಸಂ ಹರಿವ ಸುಟಿಯ ರಥಚಕ್ರಧ್ವನಿ॥
ಲಟಕಟಿಪ ಸಮರಲಂಪಟರ ಭುಜಗಳ ಹೊಯ್ಲು।
ಘಟರ ಚಾಪಸ್ವನಂ ಪಟುಭಟರ ಬೊಬ್ಬೆಯಾ।
ರ್ಭಟೆಗಳೊಂದಾಗಿ ಸಂಘಟಿಸಿತೀಬ್ರಹ್ಮಾಂಡ ಘಟಮಿಂದೊಡೆಯದಿರದೆನೆ ॥ ೧೮ ॥

ಎತ್ತಿಬಹ ಸತ್ತಿಗೆಯ ಮೊತ್ತಂಗಳೆತ್ತಲುಂ।
ಕತ್ತಲಿಸೆ ಪೊತ್ತ ಮಸೆವೆತ್ತ ಬಲ್ಗತ್ತಿಗಳ।
ಕಿತ್ತು ಭಟರೆತ್ತಿ ಜಡಿಯುತ್ತಿರಲ್ಮಿಕ್ಕ ಬೆಳಗಿತ್ತುವವು ಮತ್ತೆ ಬಲಕೆ॥
ಸುತ್ತಲುಂ ಕೆತ್ತವೋಲ್ ಮತ್ತಗಜವೊತ್ತರಿಸಿ।
ಮುತ್ತಿನಡೆಯುತ್ತೆಲರನೊತ್ತಿ ನಿಲಿಸುತ್ತಿರಲು।
ದತ್ತಚವರೋತ್ಥಿತ ಮರುತ್ತತಿಯೊಳುತ್ತಮ ಹಿಮೋತ್ತರಂ ಬಿತ್ತರಿಸಿತು ॥ ೧೯ ॥

ತಡೆಯೊಳಿರ್ದಖಿಳ ಮೇಘಂಗಳಂ ಪ್ರಳಯದೊಳ್ ।
ಬಿಡಲು ಘುಡಿಘುಡಿಸುತ್ತೆ ನಡೆವಂದದಿಂದೆ ಜೊ ।
ದ್ಭಿಡುತವಧಿಯಿಲ್ಲದೈತರುತಿರ್ಪ ಯೌವನಾಶ್ವನ ಸೈನ್ಯಮಂ ನೋಡುತೆ ॥
ಎಡಗಯ್ಯ ತುರುಗಮಂ ಬಲಿದಡವಳಿಸಿ ತನ್ನ ।
ಕಡುಗವಂ ಜಡಿದನಿಬರೆಲ್ಲರಂ ಚಿತ್ರದೊಳ್ ।
ಗಡಣಿಸದೆ ಕಲಿಘಟೋತ್ಕಚಸುತಂ ನಸುನಗುತೆ ಗಗನದೊಳ್ ಬರುತಿರ್ದನು ॥ ೨೦ ॥

ಡಿಳ್ಳವಾದುದೆ ಯೌವನಾಶ್ವಭೂಪತಿಯ ಬಲ ।
ಹೊಳ್ಳಿಗರ ನೂಕು ನೂಕು ನೂಕಾವೆಡೆಯೊಳಾ ಕುದುರೆ ।
ಗಳ್ಳನಂ ತೋರು ತೋರೆನುತೆ ನಡೆತಂದು ಹೈಡಿಂಬಿಯಂ ಮುತ್ತಿಕೊಂಡು ॥
ಒಳ್ಳಿತೋ ವೀರ ಹಯಚೋರ ಜೀವದೊಳಾಸೆ ।
ಯುಳ್ಳೊಡೀಕುದುರೆಯಂ ಬಿಟ್ಟು ಸಾಗಲ್ಲದೊಡೆ ।
ಕೊಳ್ಳಾ ಮಹಾಸ್ತ್ರಪ್ರತತಿಯನೆಂದಂಬರವನಂಬಿನಿಂ ತುಂಬಿಸಿದರು ॥ ೨೧ ॥

ನಿಮ್ಮರಾಯನ ಪೊರೆಯ ಪರಿವಾರದೊಳ್ ನೀವೆ ।
ದಿಮ್ಮಿದರೊ ಮತ್ತೆ ಕೆಲರೊಳರೊ ಕಳವಲ್ಲ ಹಯ ।
ಮಮ್ಮೊಗದ ಮುಂದೆ ಕೊಂಡೊಯ್ವೆನಾರ್ಪೊಡೆ ಶಕ್ತಿಯಿಂ ಬಿಡಿಸಿಕೊಳ್ಳಿ ಬರಿದೆ ॥
ಉಮ್ಮಳಿಸಬೇಡ ನೀವತಿಸಾಹಸಿಗಳಾದೊ ।
ಡೊಮ್ಮೆ ಹಮ್ಮೈಸದಿರಿ ಸಾಕೆಂದು ಮೇಘನಾ ।
ದಮ್ಮಹಾಮಾಯಾಭಯಂಗಳಂ ಸೃಜಿಸಿದಂ ಮೂಜಗಂ ತಲ್ಲಣಿಸಲು ॥ ೨೨ ॥

ಪೊಡೆವ ಸಿಡಿಲ್ ಕರೆವ ಮಳೆ ಜಡಿವ ಕಲ್ಗುಂಡು ಧೂ ।
ಳಿಡುವ ಬಿರುಗಾಳಿ ಕಂಗೆಡಿಪ ಕತ್ತಲೆ ಮೇಲೆ ।
ಕೆಡೆವ ಗಿರಿತರುಗಳುರೆ ಕಡಿವ ವಿವಿಧಾಯುಧಂ ನಡುವ ಶಸ್ತ್ರಾಸ್ತ್ರಂಗಳು ॥
ಪಿಡಿವ ಪುಲಿಕರಡಿ ಬಾಯ್ವಿಡುವ ಭೂತಂಗಳಸು ।
ಗುಡಿವ ಪಾವುಗಳಟ್ಟಿ ಸುಡುವ ಕಾಳ್ಕಿಚ್ಚುಳಿಯ ।
ಗುಡವವನ ಮಾಯೆಯಿಂ ತಡೆವರಿಲ್ಲಾ ಬಲಂ ಪುಡಿವಡೆದುದೇವೇಳ್ವೆನು ॥ ೨೩ ॥

ಮಾಯೆಯಿಂ ಪಡೆಯೆಲ್ಲಮಂ ಕೊಂದು ಹಯಮಂ ವಿ ।
ಹಾಯಸಪಥದೊಳೊಯ್ವ ಹೈಡಿಂಬಿಯಂ ಕಂಡ ।
ಕೇಯರಂಬರದ ವಿವರಂಗಳಂ ಪುಗುವೆಂಟುಸಾವಿರ ಮಹಾರಥರನು ॥
ಆ ಯೌವನಾಶ್ವನೃಪನಟ್ಟಿದೊಡೆ ನಭಸೊಳಸ ।
ಹಾಯಃಶೂರನ ಮಾರ್ಗಮಂ ಕಟ್ಟಿ ನಿಲ್ಲು ಖಳ ।
ಹಾಯದಿರ್ ಬಿಡು ಬಿಡು ತುರಂಗಮವನೆನುತೆ ಸೈಗರೆದರಂಬಿನ ಮಳೆಯನು ॥ ೨೪ ॥

ವೀರರಹುದೋ ಜಗಕೆ ನೀವಲಾ ಸ್ವಾಮಿಹಿತ ।
ಕಾರಿಗಳ್ ತಲೆಯಾಸೆಯಿಲ್ಲೆನುತೆ ಹೈಡಿಂಬಿ ।
ತೋರಗದೆಯಿಂದವರ ತೇರ್ಗಳಂ ಚಾಪದಾಣಂಗಳಂ ಕುದುರೆಗಳನು ॥
ಸಾರಥಿಗಳಂ ಧ್ವಜಪತಾಕೆಗಳನಪ್ಪಳಿಸಿ ।
ವಾರುವಂಬೆರಸಿ ಕಡುವೇಗದಿಂದೈತಂದು ।
ಮಾರುತಸುತನ ಮುಂದೆ ನಿಲುತಿರ್ದನನ್ನೆಗಂ ಮತ್ತೆ ಪಡಿಬಲವೊದಪಿತು ॥೨೫॥

ಹರಿಗಳಿಂ ನಾಗಂಗಳಿಂ ಸ್ಯಂದನಂಗಳಿಂ ।
ಶರಜಾಲ ಕದಳಿದಳ ಪುಂಡರೀಕಂಗಳಿಂ ।
ಸುರಗಿಖಡ್ಗಂಗಳಿಂ ನಡೆವ ಕಾಂತಾರದಂತೆಸೆವ ಚತುರಂಗದೊಡನೆ ॥
ಧರದಿಂ ಸುವೇಗನೆಂದಾ ಯೌವನಾಶ್ವ ಭೂ ।
ವರನ ತನುಜಾತನಾಹವಕೆ ನಿರ್ಭೀತನು ।
ಬ್ಬರದ ಬಿಲ್ದಿರುವಿನಬ್ಬರದ ಕೋಳಾಹಳಕೆ ಧರೆ ಬಿರಿಯೆ ನಡೆತಂದನು ॥ ೨೬ ॥

ಅಂಬರದೊಳಡ್ಡೈಸಿದೊಡೆ ನಮ್ಮ ರಥಿಕರ್ಕ ।
ಳಂ ಬಗೆಯದಹಿತಂ ಹಯಂಬೆರಸಿ ಸೈವರಿದ ।
ನೆಂಬುದಂ ಕೇಳ್ದಾಗಳಾ ಯೌವನಾಶ್ವಭೂಪಂ ತಾನೆ ಕೋಪದಿಂದೆ ॥
ತುಂಬಿವರಿ ಸಂಪಗೆಯಲರ ಪರಿಮಳದ ಸೂರೆ ।
ಗಂ ಬಯಸಿ ಬಂದುದಿದು ಮಿಗೆ ಪೊಸತೆನುತೆ ಹರಿಸಿ ।
ದಂ ಬೇಗದಿಂ ಮಣಿವರೂಥಮಂ ಕೆಲಬಲದ ಮನ್ನೆಯರ ಗಡಣದಿಂದೆ ॥೨೭॥

ಇದು ಭಗೀರಥರಥವ ಬೆಂಕೊಂಡು ಪರಿವ ಸುರ ।
ನದಿಯ ಪ್ರವಾಹಮೆನಲಾ ನೃಪನ ವರವರೂ ।
ಥದ ಪಿಂತೆ ಬಹುವಾದ್ಯರಭಸದಿಂದೆಡೆವರಿಯದೈತಪ್ಪ ಚತುರಂಗದ ॥
ಪದಹತಿಗೆ ಧರೆ ನಡಗುತಿರೆ ಜಹ್ನುಮುನಿಪನಂ ।
ತದರ ಸಂಭ್ರಮಕೆ ಸೈರಿಸದಂತರಂಗದೊಳ್ ।
ಕುದಿಯುತಿರ್ದಂ ಕರ್ಣಸುತನವನ ಭಾವಮಂ ಪವನಜಾತಂ ಕಂಡನು ॥೨೮॥

ಕಟ್ಟಿ ತರುಮೂಲಕಶ್ವಮನದರ ಕಾವಲ್ಗೆ ।
ದಿಟ್ಟಹೈಡಿಂಬಿಯಂ ಬೈಚಿಟ್ಟು ತಮ್ಮನರೆ ।
ಯಟ್ಟಿ ಬಹ ಯೌವನಾಶ್ವನ ಪಡೆಗೆ ಕಾರ್ಣಿಯಂ ಕಳುಹಿ ಕಾಲಾಗ್ನಿಯಂತೆ ॥
ಇಟ್ಟಣಿಸುತೈದುವ ಸುವೇಗನ ಬಲೌಘಕಿದಿ ।
ರಿಟ್ಟು ನಿಂದಂ ಭೀಮನುತ್ಸಾಹದಿಂದೆ ಪೆ ।
ರ್ಚಿಟ್ಟೊತ್ತಿ ನೂಕುವ ಮಹಾವಾತಘಾತಮಂ ತಡೆದೊಲೆಯದಿಪ್ಪಂತಿರೆ ॥೨೯॥

ಕೇಳ್ ಮಹೀಪಾಲಕ ಸುವೇಗನ ಭಟರ್ ಚೂಣಿ ।
ಯೊಳ್ ಮುತ್ತಿಕೊಂಡರ್ ವೃಕೋದರನನಿತ್ತ ಕೆಂ ।
ಧೂಳ್ ಮುಸುಕಲೆಣ್ದೆಸೆಗಳಂ ನೃಪರ ಮಣಿಭೂಷಣದ ಕಾಂತಿ ಝುಗಝುಗಿಸಲು ।
ತೋಳ್ ಮಿಡುಕಿನಿಂದಾರ್ದು ಝಳಪಿಸುವ ಭಟರ ಕರ ।
ವಾಳ್ ಮಿಂಚೆ ಛತ್ರಚಮರಂಗಳ ವಿಡಾಯಿ ಮಿಗೆ ।
ಸೂಳ್ ಮೆರೆಯೆ ನಿಸ್ಸಾಳಕೋಟಿ ಕಲಿಯೌವನಾಶ್ವಕ್ಷಿತಿಪನೈತಂದನು ॥೨೦॥

ಒತ್ತಿಬಹ ಯೌವನಾಶ್ವನ ಪಡೆಯ ಚೂಣಿಯಂ ।
ಕಿತ್ತು ನಿಂದಂ ಕರ್ಣಸುತನದಂ ಕಂಡು ಕಪಿ ।
ದತ್ತವನಮೇಲೆ ಕರಿ ತುರಗ ರಥ ಪಾಯದಳವೊಂದಾಗಿ ಸಂದಣಿಯೊಳು ॥
ಹತ್ತಿಸಿದ ಚಾಪಮಂ ಜೇಗೈದು ಕೂಡೆ ಮಸೆ ।
ವೆತ್ತ ಕೂರಂಬುಗಳನಾರ್ದಿಸಲ್ ಸೇನೆ ಮುರಿ ।
ದತ್ತವನ ಬಾಣಘಾತಿಗೆ ಹಯದ ಚೋರನೇಂ ವೀರನೋ ಜಗದೊಳೆನುತೆ ॥೨೧॥

ಎಲ್ಲಿ ಹಯಚೋರನಂ ತೋರವನ ನೆತ್ತರಂ ।
ಚೆಲ್ಲುವೆಂ ಭೂತಗಣಕೆನುತೆ ಖತಿಯಿಂದೆ ನಿಂ ।
ದಲ್ಲಿ ನಿಲ್ಲದೆ ಬರ್ಪ ಯೌವನಾಶ್ವನ ರಥಕೆ ಮಾರಾಂತು ಕರ್ಣಸೂನು ॥
ಬಿಲ್ಲೊಳಂಬಂ ಪೂಡಲಾರು ನೀನೆಲಪೂ ನ ।
ಮ್ಮಲ್ಲಿ ಸೆಣಸಿದೆ ನೋಡಿದೊಡೆ ಬಾಲಕಂ ನಿನ್ನೊ ।
ಳೊಲ್ಲೆನಾಹವಕೆಮ್ಮ ಕುದುರೆಯಂ ಬಿಟ್ಟು ಪೋಗೆಂದೊಡವನಿಂತೆಂದನು ॥೨೨॥

ಅರಾದೊಡೇನಶ್ವಮಂ ಬಿಡುವನಲ್ಲ ಮದ ।
ವಾರಣಂ ಪಿರಿದಾದೊಡೆಳಸಿಂಗಮಂಜಿ ಕೆಲ ।
ಸಾರುವುದೆ ನಿನ್ನ ತನುವಿನ ತೋರದಾಯತಕೆ ಕಲಿಗಳೆದೆ ಕಾತರಿಪುದೆ ॥
ವೀರನಾದೊಡೆ ಕೈದುಮುಟ್ಟಿಗಳ ಘೋರ ಪ್ರ ।
ಹಾರಮಂ ತೋರಿಸೀ ಸ್ಥೂಲಸೂಕ್ಷ್ಮಂಗಳ ವಿ ।
ಚಾರವೇಕೆನುತ ವೃಷಕೇತು ತೆಗೆದೆಚ್ಚನಾ ನೃಪನ ಕಾಯಂ ನೋಯಲು ॥೨೩॥

ಲೋಕದೊಳ್ ತನ್ನೊಳ್ ಪೋಣರ್ವ ಭಟರಿಲ್ಲ ನೀ ।
ನೇ ಕಲಿಕಣಾ ಪಸುಳೆಯೆಂದು ಸೈರಿಸಿದೆ ನಿನ ।
ಗಾಕೆವಾಳಿಕೆಯ ಧೀರತ್ವಮುಂಟಾದೊಡದು ಬಳಿಕೆಮ್ಮ ಪುಣ್ಯಮೆನುತೆ ॥
ಆಕರ್ಣಪೂರದಿಂ ತೆಗೆದೆಚ್ಚನಾ ಭೂಪ ।
ನೀಕರ್ಣಸಂಭವಂ ಕಡಿದನೆಡೆಯೊಳ್ ಸರಳ ।
ನೇಕಾರ್ಣವಂ ಮೇರೆದಪ್ಪಿತೆನೆ ಮುಸುಕಿದಂ ಕಣೆಯಿಂದವನ ರಥವನು ॥೨೪॥

ಮಾರ್ಗದೊಳ್ ಮಾರ್ಗಣಂಗಳನರಿದು ಕರ್ಣಜಂ ।
ಕೂರ್ಗಣೆಯ ಕಾರ್ಗಾಲಮಂ ಸೃಜಿಸಲಾ ನೃಪನ ।
ತೇರ್ಗೆರಗಿ ಕೂರ್ಗೊಂಡು ಮುತ್ತಿತು ಶತಾಘಮದನೇನೆಂಬೆನಾಕ್ಷಣದೊಳು ॥
ಏರ್ಗಳಿಂದೊಗುರ್ಡಿಸಿ ಸಾರಥಿ ಬಿಳಲ್ಕೆ ಕೆ ।
ನ್ನೀರ್ಗಾರಿ ದೀರ್ಘಶಯನಂಗೆಯ್ಯೆ ಕುದುರೆಗಳ್ ।
ನೇರ್ಗೋಲ ಪೋರ್ಗಳಾ ನೃಪನಂಗದೊಳ್ ಕಾಣಿಸಿದುವು ಜಾಳಂದ್ರದಂತೆ ॥೩೫॥

ಒಡಲೊಳಿಡಿದಸ್ತ್ರಮಂ ಕಿತ್ತೊಡನೆ ಚಿತ್ತದೊಳ್ ।
ಕಿಡಿಯಿಡುವ ಕಡುಗೋಪದುರಿ ಮೆಯ್ಯೊಳಿರದೆ ಪೊರ ।
ಮಡುವುದೋ ಕಣ್ಗಳಿಂದೆನೆ ಕೆಂಪಡದಾಲಿಗಳ್ ಭಯಂಕರಮಾಗಲು ॥
ತುಡುಕಿ ಪಾವಕಮಹಾಬಾಣಮಂ ತಿರುಪಿನೊಳ್ ।
ತುಡಿಸಿ ಕಿವಿವರೆಗೆ ತೆಗೆದೆಚ್ಚೊಡವನಂದು ಕೈ ।
ಗೆಡಪೆ ಕರ್ಣಾತ್ಮಜಂ ವಾರುಣಾಸ್ತ್ರಪ್ರಯೋಗದೊಳದಂ ತಂಪಿಸಿದನು ॥೩೬॥

ಹವ್ಯವಾಹಾಸ್ತ್ರಮಂ ವರುಣಾಸ್ತ್ರದಿಂ ಗೆಲ್ದು ।
ನವ್ಯಮೇಘಾಸ್ತ್ರಮಂ ಕರ್ಣಜಂ ಪೂಡೆ ವಾ ।
ಯವ್ಯಾಸ್ತ್ರದಿಂದೆ ಬರಿಕೈದವಂ ತಿಮಿರಾಸ್ತ್ರಮಂ ಜೋಡಿಸಲ್ಕೀತನು ॥
ರವ್ಯಸ್ತ್ರದಿಂ ಜೈಸಿ ಶೈಲಾಸ್ತ್ರಮಂ ತುಡಲ್ ।
ದಿವ್ಯ ಕುಲಿಶಾಸ್ತ್ರದಿಂ ಮುರಿದಾ ನೃಪಾಲನು ।
ಗ್ರವ್ಯಾಳದಸ್ತ್ರಮಂ ತೆಗೆಯಲ್ಕೆ ಗರುಡಾಸ್ತ್ರದಿಂದಿವಂ ಖಂಡಿಸಿದನು ॥೩೭॥

ತುರೇ ತರುಣ ಮಂತ್ರಾಸ್ತ್ರಪ್ರತೀಕಾರ ।
ಚಾತುರ್ಯಮುಂಟಲಾ ನಿನ್ನೊಳದು ಲೇಸು ಗೆ ।
ಲ್ವಾತುರಮದೇಕೆ ನಿನಗೆನುತವಂ ಕೈದೋರಿಸಲ್ ಕಣೆಗಳಾಗಸದೊಳು ॥
ಸೇತುವಂ ಕಟ್ಟಿದವೊಲಿಟ್ಟಣಿಸಲಾಗ ವೃಷ ।
ಕೇತು ತರಿದೊಟ್ಟುತಿರಲವರಿರ್ವರೆಡೆಯೊಳ ।
ಙ್ಧಾತು ನಿಂದುದು ಬಳೆದು ಬಿನಗಡಿದ ಶರಗಿರಿಯದೇನೆಂಬೆನದ್ಭುತವನು ॥೩೮॥

ಅವರಿರ್ವರಿಸುಗೆಯೊಳ್ ಮಂಡಲಾಕೃತಿಯೊಳೊ ।
ಪ್ಪುವ ಕಾರ್ಮುಕಂಗಳುದಯಾಸ್ತಮಯಮಪ್ಪ ಶಶಿ ।
ರವಿಬಿಂಬದಾಯತದೊಲಿರೆ ನಡುವಣಂಬುಗಳ್ ತನ್ಮರೀಚಿಗಳಂತಿರೆ ॥
ಅವಯವದ ಗಾಯದೊಳೊಗುವ ರಕ್ತಧಾರೆಗಳ್ ।
ತವೆ ಸಂಜೆಗೆಂಪಿಡಿದ ತೆರದಿಂದೆ ಕಂಗೊಳಿಸೆ ।
ಭುವನದೊಳ್ ಪೊಸತಾಯ್ತು ಸಂಗರಂ ಸಂಧ್ಯಾಗಮವನಂದು ಸೂಚಿಪಂತೆ ॥೩೯॥

ಎಚ್ಚು ಕೈಗೆಡನಾ ನೃಪಾಲನಾ ಕಣೆಗಳಂ ।
ಕೊಚ್ಚಿ ಬೇಸರನೀ ವೃಷಧ್ವಜಂ ಬಳಿಕದಕೆ ।
ಮೆಚ್ಚಿ ಕೇಳ್ದಂ ಯೌವನಾಶ್ವನೆಲೆ ಬಾಲ ನೀಂ ಪಸುಳೆಯಾಗಿರ್ದೊಡೇನು ॥
ಕೆಚ್ಚೆದೆಯ ಭಟನಪ್ಪೆ ನಿನ್ನ ಪಡೆದವನಾವ ।
ನೆಚ್ಚರಿಸು ನಿಮ್ಮ ಮುತ್ತಯ್ಯನಾರೆನುತ ತೆಗೆ।
ದೆಚ್ಚೊಡಾತನ ಕೋಲ್ಗಳಂ ಕಡಿದು ನಸುನಗುತೆ ಕರ್ಣಸುತನಿಂತೆಂದನು ॥೪೦॥

ಪುಯ್ಯಲೊಳ್ ಬಂದಳವುದೋರುತಿರ್ಪಾಗ ನಿ ।
ಮ್ಮಯ್ಯ ಮುತ್ತಯ್ಯನಾರೆಂದು ತನ್ನಂ ಕೇಳ್ವೈ ।
ಕಯ್ಯರಿದು ಕಾಣಬೇಡವೆ ಕರ್ಣ ಕಮಲಹಿತಕರರವರನುಸಿರಬಹುದೆ ॥
ಪೊಯ್ಯಲೆಳಸಿದ ವಿರೋಧಿಯ ಕಿವಿಗೆ ವಿರಹಿತಂ।
ಗೆಯ್ಯಬೇಕಲ್ಲದೆಲೆ ಮರುಳೆ ಕೋವಿದನಾದೊ ।
ಡೊಯ್ಯನೆ ಪರೋಕ್ಷದೊಳ್ ತಿಳಿದುಕೊಳ್ ಸಾಕೆನುತೆ ವೃಷಕೇತು ತೆಗೆದೆಚ್ಚನು॥೪೧॥

ಅಪ್ರತಿಮನಪ್ಪೆ ಬಾಲಕ ಲೇಸುಲೇಸು ಬಾ।
ಣಪ್ರಯೋಗಂಗಳೆನುತೊಂದು ಕಣೆವೂಡಿ ಕ ।
ರ್ಣಪ್ರದೇಶಕೆ ತೆಗೆದವಂ ಬಿಡಲ್ಕವನುರವನುಗಿಯೆ ಮೈಮರೆದು ಕೂಡೆ ॥
ಸಪ್ರಾಣಿಸುತೆ ಕೆರಳ್ದಿನ್ನು ನೋಡೀ ಸಾಯ।
ಕಪ್ರಭಾವವನೆನುತೆ ದೆಸೆದೆಸೆಗುಗುಳ್ವ ಕನ।
ಕಪ್ರಭೆಯೊಳೆಸೆವ ಸರಳಂ ತೊಟ್ಟು ಕೆನ್ನೆಗೆಳೆದಾರ್ದೆಚ್ಚನಾನೃಪನನು ॥೪೨॥

ಏನೆಂಬೆನರಸ ಕರ್ಣಜನ ಬಾಣದ ಘಾತ ।
ಕಾ ನರೇಂದ್ರಂ ಕರದ ಚಾಪಮಂ ಬಿಟ್ಟು ಮೂ।
ರ್ಛಾನುಗತನಾಗಲಾತನ ಬಲಂ ಮುಂಕೊಂಡು ಬಂದಿವನಮೇಲೆ ಕವಿಯೆ ॥
ಆನೆಯಂ ಪೊಯ್ದಳಿವ ಸಿಂಗಮಂ ಮುತ್ತುವ ಮೃ ।
ಗಾನೀಕಮಂ ಕಂಡೆವಿಂದೆನುತೆ ತುಳುಕಿದನ।
ನೂನ ಶರಜಾಲಮಂ ಕರಿ ತುರಗ ರಥ ಪದಾತಿಗಳ ಸಂದಣಿ ದಣಿಯಲು ॥೪೩॥

ತರಿತರಿದು ಕತ್ತರಿಸಿ ಚುಚ್ಚಿ ನಟ್ಟುಚ್ಚಳಿಸಿ।
ಕೊರೆದರೆದು ಕಡಿದಿರಿದು ಬಗಿದುಗಿದು ಗಬ್ಬರಿಸಿ।
ಪರಿದು ಸೀಳ್ದುತ್ತರಿಸಿ ಕೆತ್ತಿ ಖಂಡಿಸಿ ಬಳಿಚಿ ತಿವಿದಿಕ್ಕಿ ಕೊಯ್ದು ಪೊಯ್ದು ॥
ಎರಗಿ ಕವಿದಿಡಿದೊತ್ತಿ ಕದುಕಿ ಕೀಲಿಸಿ ಕೇರಿ ।
ತುರುಗಿ ತುಂಡಿಸಿ ತುಳುಕಿ ನಾಂಟಿ ತುರುವೊನೆಗೊಂಡು।
ನೆರೆ ಪೊರಳ್ಚಿದುವರಿಚತುರ್ಬಲವನೆಲ್ಲಮಂ ಕರ್ಣಜನಿಸುವ ಕಣೆಗಳು ॥೪೪॥

ತಲೆ ಬೀಳಲಟ್ಟೆಗಳ್ ಕಾದಿದುವು ಮೇಣಟ್ಟೆ |
ನೆಲಕುರುಳೆ ತಲೆಗಳೆದ್ದಾಡಿದುವು ಕೈದುಗಳ |
ನಲುಗಿದುವು ಖಂಡಿಸಿದ ತೋಳ್ಗಳುರೆ ಕಡಿದ ಕಾಲ್ಗಳ್ ಮುಂದಕಡಿಯಿಟ್ಟುವು ||
ಕಲಿತನಮದೆಂತೊ ಪಟುಭಟರಳಿವಿಗೊಟ್ಟಾಗಿ |
ಸಲೆ ಸರಳ ಸಾರದಿಂ ಮಡಿಯುತಿರ್ದರು ಸಮು |
ಜ್ವಲ ದೀಪದೆಡೆಗೆ ಮುಗ್ಗುವ ಪತಂಗಪ್ರಕರಮೆನೆ ವೃಷಧ್ವಜನಿದಿರೊಳು ||೪೫||

ಕಡಿಕಡಿದು ಬಿದ್ದ ಕೈಕಾಲ್ಗಳಿಂ ತೋಳ್ಗಳಿಂ |
ಪೊಡೆಗೆಡೆದ ಹೇರೊಡಲ ಸೀಳ್ಗಳಿಂ ಪೋಳ್ಗಳಿಂ |
ಮಡಿಮಡಿದುರುಳ್ವ ಕಟ್ಟಾಳ್ಗಳಿಂ ಪಾಳ್ಗಳಿಂದೊಡೆದ ತಲೆಪೋಳ್ಗಳಿಂದೆ ||
ಕಡುಭಯಂಕರಮಾಗಲಾರಣದ ಮಾರಣದ |
ನಡುವೆ ಕಲ್ಪಾಂತಭೈರವನಂತೆ ಜವನಂತೆ |
ಕಡುಮುಳಿದವನ ಕಾಣುತವೆ ಬಿಟ್ಟು ಸಲೆ ಕೆಟ್ಟು ಸರಿದರೆಣ್ದೆಸೆಗೆ ಭಟರು ||೪೬||

ಮೈಮರೆದ ಭೂಪನಂ ಬಿಟ್ಟು ಪಟುಭಟರುಳಿದೆ |
ವೈ ಮಹಾದೇವನಂತೆ ಸರಿದರೆಣ್ದೆಸೆಗಿವಂ |
ಕೈಮಾಡಲೊರ್ವರಂ ಕಾಣದೆ ಬಳಲ್ದು ರಿಪು ಚೇತರಿಸಿಕೊಳ್ಳದಿರಲು ||
ವೈಮನಸ್ಯದೊಳಕಟ ತಪ್ಪಿತೆ ರಣಾಟೋಪ |
ವೈಪೊಗಂ ಬಲ್ಲನೆನುತವನೆಡೆಗೆ ಬಂದಿದೇ |
ನೈ ಮೂರ್ಖ ನಿನಗೆನಲ್ ನುಡಿಯದಿರಲೊಯ್ಯನಾ ನೃಪನುಸಿರನಾರೈದನು ||೪೭||

ಸತ್ಯಮೆನಗುಂಟಾದೊಡಾಂ ಧೀರನಾದೊಡಾ |
ದಿತ್ಯಂಗೆ ಪೌತ್ರನಾದೊಡೆ ತನ್ನ ತಾತಂಗ |
ಪತ್ಯ ನಾನಾದೊಡೀ ನೃಪತಿ ಜೀವಿಸಲೆನುತ ಕರ್ಣಜಂ ಪಗೆಮಾಡುವ ||
ಕೃತ್ಯಮಂ ಬಿಟ್ಟು ಮಹೀಶನ ಬಳಲ್ಕೆಗೌ |
ಚಿತ್ಯಮಾದುಪಚಾರದಿಂದೆ ಸಮರಶ್ರಮಾ ಪ |
ರಿತ್ಯಾಗಮಪ್ಪಂತೆ ಸಂತೈಸುತಿರಲಾ ಧರಾಧಿಪಂ ಮೈಮುರಿದನು || ೪೮ ||

ಅರಸ ಕೇಳಾ ಯೌವನಾಶ್ವನಿಂತಾಗ ಮೈ |
ಮುರಿದು ಕಣ್ದೆರೆವನಿತರೊಳಗಾತನರಿಯದಂ |
ತಿರೆ ಕರ್ಣಸಂಭವಂ ಮುನ್ನ ತಾನಿರ್ದ ಪ್ರದೇಶಕ್ಕೈತಂದು ನಿಂದು ||
ಕರದ ಕಾರ್ಮುಕವನೊದರಿಸಿ ದಿವ್ಯಬಾಣಮಂ |
ತಿರುಪುತಾರ್ದಿಸುವ ತೆರದಿಂ ಬರಿದೆ ಮುಳಿಸಿನು |
ಬ್ಬರಮಂ ನೆಗಳ್ಚಿ ತನ್ನಾಳ್ತನದ ಬಿಂಕಮಂ ಕಾಣಿಸಿದನೇವೇಳ್ವೆನು ||೪೯||

ಕುಸಿದೆ ಕಣ್ದೆರೆದೆದ್ದು ಚೇತರಿಸಿ ದೆಸೆಗಳಂ ।
ನೋಡಿ ತನ್ನ ವೈರಿವರ್ಗಮಂ ಕಾಣದಿದಿರೆ ಕೈ ।
ಮಾಡದೆ ಪೃಥಾಜೋಪಮಂ ನೆಗಳ್ದುವ ವಿರೋಧಿಯ ವಿಕ್ರಮವನೆ ಕಂಡು ॥
ಸಿರಿವಿದ ವಿರಕ್ತಿಯಿಂ ನಾಚಿ ಮನದೊಳ್ ಪಂತ ।
ನಾಡಿವನೊಳಿನ್ನು ಸಲ್ಲದು ತನಗೆ ಕಾರುಣ್ಯ ।
ದಾಡದ ಒಳಿಕದೇತಕೆ ಸಮರವೆಮುತವಂ ಕರ್ಣಜಂಗಿಂತೆಂದನು ॥ ೫೦ ॥

ಮೂರೆಲೋಕದೊಳ್ ತನಗೆ ಸಮನಾದ ಮೇದಿನೀ ।
ಪಾಲರಂ ಸುಭಟರಂ ಕಾಣೆನೆಂದಾಸಿತು ।
ಕಾಲವರಂ ಬೆಸೆತಿರ್ದನೆನ್ನುವಂ ಗೆಲ್ದು ನೀನತಿಬಲನೆನಿಸಿಕೊಂಡೆರಾ ।
ಬಾಲ ನೀನಾರವಂ ನಿನ್ನ ಪೆಸರೇನೆಳೆಗೆ ।
ಮೇಲೆನಿಸುವೀ ಹಯಂ ನಿನಗದೇತಕೆ ನಿನ್ನ ।
ಪಾಲಕಾಂ ವಾರುಪ್ಪೋದಂ ಕಾದರೊಳ್ಲೆನ್ನುಸಿರೆಂದೊಡಿಂತೆಂದನು ॥ ೫೧ ॥

ಆದೊಡೀ ಜಗಕೆ ಲೋಚನನೆನಿಸಿ ನಭದೊಳೆಸೆ ।
ವಾದಿತ್ಯನಿಂದೊಗೆದ ಕರ್ಣನಂ ಕೇಳ್ದರಿವೆ ।
ಮಾದೊಡಾತನಸುತಂ ಪೆಸರೆನಗೆ ವೃಷಕೇತುವೆಂದು ನರಲೋಕಂಗಾಗಿ ॥
ಯಾದವರ್ಗನಾದ ಕೃಷ್ಣಂ ಭರತಕುಲದ ।
ಮೇದಿನೀಶ್ವರ ಯುಧಿಷ್ಠಿರನಿಂ ಮುಖಂಗೈಸ ।
ದೀ ದಿವ್ಯಹಯಕೆ ಭೀಮನನಟ್ಟುಲವನೊಡನೆ ಬಂದೆನಿದು ಹದನೆಂದನು ॥ ೫೨ ॥

ಎಂದೊಡೆಲೆ ಕುವರ ನೀನಿನ್ನೆಗಂ ತನ್ನೊಳಿಂ ।
ಕೊಂದುದಿಲ್ಲಕಟ ಧರ್ಮದ ರೂಪು ತಾನೀತ ।
ನೆಂದೆಂಬರಾ ಯುಧಿಷ್ಠಿರಮಹೀಪತಿಯುನವನಿಂ ಮುಖಂಗೈಸಿದವನೆ ॥
ಇಂದಿರಾವಲ್ಲಭನ ಪದಕೆ ನವಿಸ್ತ್ರಹಯವ ।
ಕೊಂದನೊಯ್ಯುರ ತನ್ನ ಸರ್ವಸ್ವಮಂ ತಾನೆ ।
ಕಂದು ಹರಿಪದಕರ್ಪಿಸುವೆನೆಲ್ಲಿ ಭೀಮನಂ ತೋರೆಂದನಾ ಭೂಪನು ॥ ೫೩ ॥

ಎನಲಚ್ಯುತನ ಪದಕೆ ಸರ್ವಸ್ವಮೊಪ್ಪಿಸುವ ।
ಮನಮುಳ್ಳನಾವನಾತಂಗೆ ಪಾಂಡವರೊಳೆರ ।
ಸಿನಿತಿಲ್ಲವಾ ಪಾರ್ಥಿವರ ಸಖ್ಯಮಾವಂಗೆ ದೊರೆವುದಾತಂಗೆ ಹರಿಯು ॥
ಮುನಿಸಿಲ್ಲಮದರಿಂದೆ ಭೀಮನಂ ಕಾಣ್ಬುದೀ ।
ಗನುನಯಂ ನಿನಗೆಂದು ಕರ್ಣಜಂ ನುಡಿದೊಡಾ ।
ಜನಪನುತ್ಸವದೊಳಳವಡಿಸಿದಂ ತನ್ನ ಮಣಿರಥವನಿರ್ವರುಮ್ಮೈದಲು ॥ ೫೪ ॥

ಮಾನವಾಧೀಶ ಕೇಳ್ ಬಳಿಕ ವೃಷಕೇತು ಸು ।
ಮ್ಮಾನದಿಂದಾ ಯೌವನಾಶ್ವಭೂಪತಿಗೆ ಪವ ।
ಮಾನಸುತನಂ ಕಾಣಿಸುವೆನೆಂಬ ತವಕದಿಂದಾತನ ವರೂಥದೊಳಗೆ ॥
ಮಾನದಿಂದಡರ್ದವಂವೆರಸಿ ನಡೆತರುತಿರೆ ವಿ ।
ಮಾನದಿಂ ನೋಡುವನಿಮಿಷನಿಕರಮಿತನ ಸ ।
ಮಾನದವರಿಲ್ಲೆಂದು ಕೊಂಡಾಡುತಾಗಸದೊಳಲರ ಸರಿಯಂ ಕರೆದರು ॥ ೫೫ ॥

ಅನ್ನೆಗಂ ಭದ್ರಾವತೀಶ್ವರನ ಸುತನ ಸೈ ।
ನ್ಯನ್ನಡೆದು ಬಂದಾ ವೃಕೋದರನ ಮುತ್ತಿದೊಡ ।
ವನ್ನಿಜಗದಾದಂಡಮಂ ಕೊಂಡು ದಿಂಡುಗಡಪಿದೊಡಾ ನೃಪಾಲಸೂನು ॥
ತನ್ನ ಸಾಹಸದೊಳನಿಲಜನ ಕೋಪಾಟೋಪ ।
ಮನ್ನಿಲಿಸಿ ಕಾದುತಿರಲಾ ಸಮಯಕಿವರೊಂದ ।
ರನ್ನದೇರೊಳಗಿರ್ವರುಂ ಬರುತಿರಲ್ ಕಂಡು ಬೆರಗಾದರವರತ್ತಲು ॥ ೫೬ ॥

ಪವಮಾನನಂದನ ಸುವೇಗರನ್ಯೋನ್ಯಮಾ ।
ಹವದ ಬೇಳಂಬಮಂ ಮರೆದೊಂದೆ ಪೊಂದೇರೊ ।
ಳವರಿರ್ವರುಂ ಬರಲ್ ಕಂಡು ವಿಸ್ಮಿತರಾಗಿ ನಿಂದರನಿತರೊಳಿತ್ತಲು ।
ರವಿಸುತನ ಸೂನು ಕಲಿಯೌವನಾಶ್ವಂಗೆ ಪಾಂ ।
ಡವರಾಯನನುಜನಂ ತೋರಿಸಿದೊಡಾ ವರೂ ।
ಥವನಿಳದು ನಡೆಯುತಾ ಭೂವರಂ ತನ್ನ ತನುಸಂಭವಂಗಿಂತೆಂದನು ॥ ೫೭ ॥

ತನಯ ದಿವ್ಯಾಶ್ವಮಂ ಪಿಡಿದರಿವರೆಂಬ ಮನ ।
ದನುತಾಪವಂ ಬಿಡು ಸರೋಜಾಂಬಕಂ ಪಾಂಡು ।
ಜನಪನಂದನ ಯುಧಿಷ್ಠಿರನರೇಶ್ವರನ ಮುಖಕೆಂದು ನಮ್ಮಿ ಕುದುರೆಗೆ ॥
ಅನಿಲಸುತನಂ ಕಳುಹಿದೊಡೆ ಬಂದನಾತಂಗೆ।
ವಿನಯದಿಂದೆಮ್ಮ ಸರ್ವಸ್ವಮಂ ಕುಡುವೆವಿ ।
ನ್ನನುವರವದೇಕೆ ನಿಲ್ಲೆನಲವಂ ಶರಧನುವನಿಳುಹಿ ಪಿತನಂ ಸಾರ್ದನು ॥ ೫೮ ॥

ಬಳಿಕ ತನುಜಾತನಂ ಕೂಡಿಕೊಂಡಾ ನೃಪಂ ।
ನಳಿನಸಖಸುತನ ಮಗನೊಡನೆ ಬಂದನಿಲಜನ ।
ಬಳಿಸಾರ್ದು ಕಾಲ್ಗೆರಗಲವನೀ ವೃಷಧ್ವಜನ ಮೊಗನೋಡುತಿವರಾರೆನೆ ॥
ಎಳನಗೆಯೊಳಾತನಿವನೀಗಳೀ ಮೇದಿನೀ ।
ತಳಕರಸೆನಿಪ ಯೌವನಾಶ್ವನೀತಂಗೆ ಮೈ ।
ನೆಳಲೆನಿಪ ಕುವರಂ ಸುವೇಗನೆಂಬವನೀತನೆನುತೆ ಮಣಿದಂ ಪದದೊಳು ॥ ೫೯ ॥

ಇವರಚ್ಯುತಾಂಘ್ರಿ ದರ್ಶನಲಂಪಟತ್ವದಿಂ ।
ದವನಿಪತಿಕುಲಶಿರೋಮಣಿಯೆನಿಪ ಧರ್ಮಸಂ ।
ಭವನಡಿಯನೋಲೈಸಲೆಂದು ನಿನ್ನಂ ಕಾಣಲೋಸುಗಂ ಬಂದರೆಂದು ॥
ಪವನಜಂಗಾ ವೃಷಧ್ವಜನೊರೆದೊಡಾತನು ।
ತ್ಸವದೊಳಾ ಭೂಪಾಲನಂ ತೆಗೆದು ತಕ್ಕೈಸು ।
ತವನ ತನುಜಾತನಂ ಬಿಗಿಯಪ್ಪಲಾ ನೃಪಂ ಬಕವೈರಿಗಿಂತೆಂದನು ॥ ೬೦ ॥

ಎಲೆ ವೃಕೋದರ ಬಾಹುಬಲಮುಳ್ಳ ವೀರರುಂ ।
ಪಲಬರುಂಟಿಳೆಯೊಳವರಂ ಕಂಡು ಬಲ್ಲೆನಾಂ ।
ಕಲಹದೊಳ್ ಮಲೆತವಂ ಮೈಮರೆದೊಡಿರಿವರಲ್ಲದೆ ಪಗೆಯ ಪೊರೆಗೆ ಬಂದು ॥
ಅಲಸಿದನನಿವಂ ಧುರದೊಳೆಂದವನನುಪಚರಿಸಿ ।
ಸಲಹಿದ ಪರಾಕ್ರಮಿಗಳಾರ್ ಮಹೀತಲದೊಳೀ ।
ಕಲಿವೃಷಧ್ವಜನಲ್ಲದಮರ ದಾನವ ಮಾನವರೊಳೊಗೆದ ಪಟುಭಟರೊಳು ॥೬೧॥

ಆವನ ವಿನೋದಮಾತ್ರದೊಳೀ ಸಮಸ್ತಭುವ ।
ನಾವಳಿಗಳಾಗಿ ಬಾಳ್ದಳಿವುವಾವಿಭು ನಿಮ್ಮ ।
ಸೇವೆಯೊಳ್ ಗಡ ನಾನದೇಸರವನೆಂದೆನ್ನ ಮೇಲೆ ಸಾಹಸವನೆಸಗಿ ॥
ಈ ವಾಜಿಯುಂ ಪಿಡಿದಿರಕಟ ತಪ್ಪಿದಿರಿ ಲ ।
ಕ್ಷ್ಮೀವರನ ಕಿಂಕರರ್ಗೀಯದನೆ ತಾನೆನ್ನ ।
ಜೀವಮಂ ಸಮರದೊಳ್ ಕಾದುಳಿಪಿದಂ ಕರ್ಣತನಯನದನೇವೇಳ್ವೆನು ॥೬೨॥

ಈ ವೃಷಧ್ವಜನಿಂದು ಸಮರದೊಳ್ ಕಾಯಬೊಡೆ ।
ಹಾ ವೃಥಾಕೃತಮಾಗಿ ಪೋಗುತಿರ್ದುದು ಜನ್ಮ ।
ಮಾವ್ರತಸಮಸ್ತಯಾದವನಾಗಿ ನಿಮ್ಮೊಳಗೆ ನರಲೀಲೆಯಂ ನಟಿಸುವ ॥
ಶ್ರೀವೃತ್ತಕುಚ ಕುಂಕುಮಾಂಕನಂ ಕಂಡಪೆನ ।
ಲಾ ವೃಕೋದರ ನೀವು ಮಾಡಿದುಪಕಾರಕಟ।
ಲಾವೃಂದ ಸಹಿತ ಬಂದೆನ್ನ ಸರ್ವಸ್ವಮಂ ಹರಿಗರ್ಪಿಸುವೆನೆಂದನು ॥ ೬೩ ॥

ಎಂದೊಡರಸಂಗೆ ಸೋದರರಾವು ನಾಲ್ವರುಂ ।
ಟಿಂದುವರೆಗಿನ್ನು ನೀಂ ಸಹಿತೈವರಾದೆಪಿದ ।
ರಿಂದೆ ಹರಿದರ್ಶನಮಸಾಧ್ಯಮಪ್ಪುದೆ ನಿನಗೆ ಧರ್ಮಜನ ವರಮುಖವನು ॥
ನಿಂದು ಮಾಡಿಸುವ ಭಾರಕನಸುರಹರನಾ ಮು ।
ಕುಂದನಂ ಕಾಣ್ಬುದುಳ್ಳೊಡೆ ತನ್ನ ಕೂಡೆ ನೀಂ ।
ಬಂದು ಸೇವಿಪುದೆನಲ್ ಮಾರುತಿಗೆ ವಿನಯದಿಂದಾ ಭೂಪನಿಂತೆಂದನು ॥ ೬೪ ॥

ಅಹುದು ನೀನೆಂದುದಂ ಮೀರೆ ನೆನ್ನೂರ್ವುಗದೆ।
ಬಹಿರಂಗದಿಂ ತೆರಳ್ವುದು ನೀತಿಯಲ್ಲೆನ್ನೊ।
ಳಹ ಸೇವೆಯಂ ಪುರದೊಳೊಂದೆರಡು ದಿವಸಂಗಳಿರ್ದು ಕೈಕೊಂಡ ಬಳಿಕ ॥
ಬಹು ವಸ್ತುಚಯ ಸಹಿತ ಪಡೆವೆರಸಿ ನಿನ್ನೊಡನೆ ।
ಬಹೆನೆನ್ನನೊಡಗೊಂಡು ಮುದದೆ ಪೋಪಂತನು ।
ಗ್ರಹಿಸೆಂದವಂ ಬೇಡಿಕೊಳಲೊಪ್ಪಿದಂ ಕೀಚಕಾಂತಕಂ ಸಂತಸದೊಳು ॥ ೬೫ ॥

ತರಿಸಿ ಕೋಳ್ವಿಡಿದ ಹಯಮುಮಂ ಸುವೇಗನ ವಶದೊ ।
ಳಿರಿಸಿ ಬಳಿಕನಿಲಜಂ ಹೈಡಿಂಬಿಕರ್ಣಜ ।
ರ್ವೆರಸಿ ಭದ್ರಾವತಿಗೆ ಬರಲಾನೃಪಂ ಪೊಳಲ ಸಿಂಗರಿಸಿ ಮೇಣವರನು ॥
ಅರಸಿಯರ ಗಡಣದೊಳಿದಿರ್ಗೊಂಡು ಮನೆಯೊಳಾ।
ದರಿಸಿ ದಿವಸತ್ರಯಂ ತಡೆದೊಡನೆ ಮಂತ್ರಿಯಂ ।
ಕರೆಸಿ ರಾಜ್ಯದ ಭಾರಮಂ ಪೊರಿಸಿ ಹಸ್ತಿನಾಪುರಕ್ಕೈದಲನುವಾದನು ॥ ೬೬ ॥

ತೀವಿರ್ದ ನಿಖಿಳಭಂಡಾರಮಂ ತೆಗಿಸಿ ನಾ ।
ನಾವಸ್ತುನಿಚಯಮಂ ಪೇರಿಸಿ ಸಮಸ್ತಸೇ।
ನಾವಿತತಿ ಸಹಿತಾಹಯಂ ಸಹಿತ ಸುತ ಸಹೋದರ ಬಂಧುವರ್ಗ ಸಹಿತ ॥
ಆ ವಸುಮತೀವಲ್ಲಭಂ ಪ್ರಭಾವತಿಯೆಂಬ।
ದೇವಿಸಹಿತಗಣಿತ ವಧೂಜಾಲಸಹಿತ ಭ ।
ದ್ರಾವತಿಯ ಪುರಜನಂಸಹಿತ ಪೊರಮಟ್ಟನೊಲವಿಂ ಭೀಮಸೇನನೊಡನೆ ॥೬೭॥

ಎಲ್ಲರುಂ ಪೊರಮಟ್ಟ ಬಳಿಕಾನೃಪಂ ರಮಾ ।
ವಲ್ಲಭನ ದರ್ಶನಕೆ ಮಾತೆಯಂ ಕರೆಯಲವ ।
ಳೊಲ್ಲೆ ನಾನಿಲ್ಲರದೊಡೀಬದುಕ ಸಾಗಿಸುವರಾರೆಂದು ಚಂಡಿಗೊಳಲು ॥
ಪುಲ್ಲನಾಥಂಗೆ ಸರ್ವಸ್ವಮೊಪ್ಪಿಸುವೊಡಿವ ।
ಳಿಲ್ಲದಿರದಾರದೆಂದಾಕೆಯಂ ಬಲ್ಪಿನಿಂ।
ನಿಲ್ಲದಂದಳವನೇರಿಸಿ ಮತ್ತೆ ಮಾರುತಿಯೊಡನೆ ಪಯಣಕನುವಾದನು ॥ ೬೮ ॥

ಪಟ್ಟಣದೊಳಾರುಮಿಲ್ಲೆನಿಸಿ ತನ್ನೊಡನೆ ಪೊರ ।
ಮಟ್ಟುವಖಿಳಪ್ರಜೆಗಳಿವರ ನಡೆಸಲ್ ದಿನಂ ।
ತಟ್ಟಿದಲ್ಲದೆ ಮಾಣದನ್ನೆಗಂ ಧರ್ಮಜಂಗೀ ರಾಜಕಾರ್ಯದನುವ ॥
ಮುಟ್ಟಿಸದಿರಲ್ ಬಾರದೆಂದಾ ಮಹೀಶ್ವರನ ।
ಬಟ್ಟೆಗಾವಲ್ಗೆ ಕರ್ಣಜ ಮೇಘನಾದರಂ ।
ಕೊಟ್ಟು ನಿಂದಲ್ಲನಿಲ್ಲದೆ ಬಂದು ಭೀಮಸೇನಂ ಪೊಕ್ಕನಿಭಪುರಿಯನು ॥ ೬೯ ॥

ನುತವಸಂತಾಗಮುಪನೆಚ್ಚರಿಪ ಮಲಯಮಾ ।
ರುತನುಪವನಸ್ಥಳಕೆ ಸುಳಿವಂತೆ ಪವನಜಂ ।
ಕ್ಷತಿಪನಾಸ್ಥಾನಮಂ ಪೊಕ್ಕರಸನಂ ಕಂಡು ಪಾದಪಲ್ಲವಕೆರಗಲು ॥
ಅತಿಶಯಪ್ರೀತಿಯಿಂ ತೆಗೆದು ಬಿಗಿಯಪ್ಪಿ ರವಿ ।
ಸುತಜ ಹೈಡಿಂಬಿಗಳದೆಲ್ಲಿ ನೀಂ ಪೋದಸಂ ।
ಗತಿಯದೆಂತೈ ನಿನ್ನ ಭಾಷೆಗಳಿವಿಲ್ಲಲಾ ತುರಗವಿಷಯದೊಳೆಂದನು ॥ ೭೦ ॥

ಎನಲವನಿಪತಿಗೆ ಬಿನ್ನೈಸಿದಂ ಪವಮಾನ।
ತನಯನಲ್ಲಿಂದೆ ಭದ್ರಾವತಿಗೆ ನಡೆದುದಂ।
ವಿನುತ ಹಯರತ್ನಮಂ ಪಿಡಿದುದಂ ಮುಂಕೊಂಡು ಸೇನೆಯುಂ ಸದೆಬಡಿದುದಂ ॥
ಅನುವರದೊಳಹಿತನಂ ಜಡಿದುದಂ ಬಳಿಕವಂ ।
ತನಗೆರಗಿ ನುಡಿದುದಂ ತನ್ನ ಸರ್ವಸ್ವಮಂ ।
ದನುಜಾರಿಗೀಯಲ್ ಕುದುರೆವೆರಸಿ ಹೈಂಡಿಂಬಿಕರ್ಣಜರೊಡನೆ ಬಹುದನು ॥೭೧॥

ಕೇಳಿ ನೃಪನುತ್ಸವದೊಳನುಜನಂ ತಕ್ಕೈಸಿ ।
ಬೀಳುಕೊಡಲರಸಿಯರ ತಂಡದಾರತಿಗಳ ಸೀ ।
ವಾಳಿಗಳ ಸಡಗರದೊಳರಮನೆಗೆ ಬಂದು ಪಾಂಚಾಲಗೀ ಸಂಗತಿಯನು ॥
ಹೇಳಿ ಮುರಹರನ ಮಂದಿರಕೆ ನಡೆತಂದು ನಿಜ ।
ಭಾಳಮಂ ಚರಣದೊಳ್ ಚಾಚಿ ತಮ್ಮಯ ವಿಜಯ ।
ದೇಳಿಗೆಯನೊರೆಯಲ್ಕೆ ಮನ್ನಿಸಿದನಾತನಂ ದೇವಪುರ ಲಕ್ಷ್ಮೀಶನು ॥ ೭೨ ॥

ಐದನೆಯ ಸಂಧಿ

ಸೂಚನೆ ॥ ಧರ್ಮಜಂ ಯೌವನಾಶ್ವನನಿದಿರ್ಗೊಂಡು ನೃಪ ।
ಧರ್ಮದಿಂ ಕೃಷ್ಣನಂ ದ್ವಾರಕೆಗೆ ಕಳುಹಿ ವರ ।
ಧರ್ಮಂಗಳಂ ಕೇಳ್ದನೊಲವಿಂದೆ ಸರೆ ಬಾದರಾಯಣ ಮುನೀಶ್ವರನೊಳು ॥

ಸತ್ಸಂಗತಿಯನಾಲಿಸಿನ್ನೆಲೆ ಮಹೀಶ್ವರ ಮ ।
ರುತ್ಸುತನ ಮನೆಗೆ ಬೀಳ್ಕೊಟ್ಟನೊಲವಿಂ ಭಕ್ತ ।
ವತ್ಸಲಂ ಬಳಿಕಿತ್ತಲರಸಾಳ್ಗಳಾ ಯುಧಿಷ್ಠಿರಭೂಮಿಪತಿಗೆ ಬಂದು ॥
ತ್ಯತ್ಸಮೀಪದ ಸೇವೆಗೋಸುಗಂ ತನ್ನ ಸಂ।
ಪತ್ಸಹಿತಮಾ ಯೌವನಾಶ್ವ ಧರಣೀಂದ್ರನ ।
ತ್ಯುತ್ಸವದೊಳೈತಂದನಿದೆ ನಿನ್ನ ಪಟ್ಟಣದ ಬಾಹ್ಯದೇಶದೊಳೆಂದರು ॥ ೧ ॥

ಉಚಿತಮಂ ತೆಗೆದವರ್ಗಿತ್ತು ಬಳಿಕನುಜ ಮಂ ।
ತ್ರಿ ಚಮೂಪ ಸಾಮಂತ ಗುರು ಪುರೋಹಿತ ಸುಭಟ ।
ನಿಚಯಮಂ ಕರೆಸಿಕೊಂಡಸುರಾರಿಸಹಿತಖಿಳ ಚತುರಂಗಸೈನ್ಯದೊಡನೆ॥
ಅಚಲನಿಭದಿಭದ ಮೇಲಡರಿ ಸಿಂಗರದ ಗುರು ।
ಕುಚೆಯರರಸಿಯ ಕೂಡೆ ಬರಲಿ ಗುಡಿತೋರಣದ ।
ರಚನೆ ಮೆರೆಯಲಿ ಪುರದೊಳೆನುತೆ ಪೊರಮಟ್ಟನವನಿಪನೊಸಗೆವರೆ ಮಸಗಲು ॥೨॥

ಸಿಂಗರದೊಳಾ ಹಸ್ತಿನಾವತಿಯೊಳಿರ್ದ ಜನ ।
ಜಂಗುಳಿ ಮಹೀಪಾಲನೊಡನೆ ಪೊರಮಟ್ಟ ಬಳಿ ।
ಕಂಗನೆಯರಾ ದ್ರುಪದಸುತೆಯ ಪೊನ್ನಂದಳದ ಕೂಡೆ ಸಂದಣಿಸಿ ಬರಲು ॥
ಮಂಗಳಧ್ವಾನದಿಂದುಲಿವ ಭೇರಿಗಳ ನಾ ।
ದಂಗಳೈದಿದುವಷ್ಟದಿಕ್ಪಾಲಕರ ಪಟ್ಟ ।
ಣಂಗಳ್ಗೆ ಪಾಂಡವರ ಪುರದ ಸಂಭ್ರಮವನೆಚ್ಚರಿಸಿ ನಾಚಿಸುವಂತಿರೆ ॥ ೩ ॥

ಭದ್ರಗಜಕಂಧರದೊಳರಸನೆಸೆದಿರ್ದಂ ಲ ।
ಸದ್ರತ್ನಭೂಷಣಂಗಳ ಕಾಂತಿಯಂ ಮೂಡ ।
ಣದ್ರಿಯೊಳ್ ತೊಳಗುವೆಳನೇಸರೆನೆ ಬಳಿಕದಿರ್ಗೊಂಬ ಹರ್ಷವನೆ ಕಂಡು ॥
ಭದ್ರಾವತೀಶ್ವರನೆನಿಪ ಯೌವನಾಶ್ವಂ ಜ ।
ಗದ್ರಾಜನಾದ ಪಾಂಡವನೆಡೆಗೆ ಬಂದಂ ಸು ।
ಹೃದ್ರಾಗದಿಂ ತನಗೆ ಭೀಮನಭಿಮುಖನಾಗಿ ಬರಲಾತನೊಡನೆ ನಗುತೆ ॥ ೪ ॥

ವಾಯುಸುತನೊಡನೆ ತಾನಿರ್ದ ಪೊರೆಗಾಗಿ ಬ।
ರ್ಪಾಯೌವನಾಶ್ವನಂ ಕಂಡಿಥವನಿಳಿದು ನಿಂ ।
ದಾ ಯುಧಿಷ್ಠಿರನರೇಶ್ವರನಡಿಗೆ ಕಾಣಿಕೆಯನಿತ್ತೆರಗಿ ಕೈಮುಗಿಯಲು॥
ಪ್ರೀಯದಿಂದಾತನಂ ತೆಗೆದು ತಕ್ಕೈಸಿ ವಾ ।
ದ್ರೇಯ ಭೀಮಾರ್ಜುನರ ಸಮವೆನಗೆ ನೀನದರಿ ।
ನೀ ಯಾದವೇಂದ್ರನಂ ಭಾವಿಸೆಂದರಸಂ ಮುಕುಂದನಂ ತೋರಿಸಿದನು ॥ ೫ ॥

ಬಳಿಕವಂ ಕಂಡನುತ್ಪಲದಳಶ್ಯಾಮ ಕೋ ।
ಮಲತರಶರೀರನಂ ನವರತ್ನ ಮಕುಟ ಕುಂ ।
ಡಲ ಕನಕ ಕೇಯೂರಹಾರನಂ ಪ್ರಕಟ ಕಟಿಸೂತ್ರ ಮಣಿಮಂಜೀರನಂ॥
ವಿಲಸಿತ ಶ್ರೀವತ್ಸ ಕೌಸ್ತುಭ ಶುಭೋದರನಂ ।
ಲಲಿತ ಪೀತಾಂಬರೋಜ್ಜ್ವಲದಲಂಕಾರನಂ।
ಜಲಜಸಮ ಚರಣಯುಗ ಮೋಹನಾಕಾರನಂ ಲಕ್ಷ್ಮೀಮನೋಹಾರನಂ ॥ ೬ ॥

ಅಚ್ಯುತನ ಮಂಗಳ ಶ್ರೀಮೂರ್ತಿ ಕಣ್ಮನವ ।
ನೊಚ್ಚತಂಗೊಳಲೇಳ್ವ ರೋಮಪುಳಕದೊಳೆ ಮೈ ।
ವೆಚ್ಚಿ ಪತಿಹರ್ಷದಿಂದಜ ಭವ ಸುರೇಂದ್ರ ಮುನಿಮುಖ್ಯರ್ಗೆ ಗೋಚರಿಸದ ॥
ಸಚ್ಚಿದಾನಂದಮಯನಂ ಕಂಡುದಿದು ಜಗದೊ ।
ಳಚ್ಚರಿಯಲಾ ನರರ್ಗೆನುತಾನೃಪಾಲಕಂ ।
ಬೆಚ್ಚನಸುರಾಂತಕನ ಪದಕೆ ಪೊಸಮಿಸುನಿವೆಳಗೆಸೆವ ಮಕುಟದ ನೊಸಲನು ॥೭॥

ಕಮಲದಳನಯನ ಕಾಳಿಯಮಥನ ಕಿಸಲಯೋ ।
ಪಮಚರಣ ಕೀಶಪತಿಸೇವ್ಯ ಕುಜಹರ ಕೂರ್ಮ ।
ಸಮಸತ್ಕಪೋಲ ಕೇಯೂರಧರ ಕೈರವಶ್ಯಾಮ ಕೋಕನದಗೃಹೆಯ ॥
ರಮಣ ಕೌಸ್ತುಭಶೋಭ ಕಂಬುಚಕ್ರಗದಾಬ್ಜ ।
ವಿಮಲಕರ ಕಸ್ತೂರಿಕಾತಿಲಕ ಕಾವುದೆಂ।
ದಮಿತಪ್ರಭಾಮೂರ್ತಿಯಂ ನುತಿಸಲಾತನಂ ಹರಿ ನೆಗಪಿದಂ ಕೃಪೆಯೊಳು ॥ ೮ ॥

ಎದ್ದಾ ನೃಪಂ ಕೃತಾಂಜಲಿಪುಟಾವನತನಾ ।
ಗಿದ್ದಾಗ ಭೀಮನಂ ನೋಡಿ ವಿಷಯಂಗಳಂ ।
ಗೆದ್ದ ನಿರ್ಮಲತಪಸ್ವಿಗಳ ನಿಶ್ಚಲಹೃದಯಮಧ್ಯ ಪಂಕೇಜಾತದಾ ॥
ಗದ್ದುಗೆಯೊಳೆಸೆವ ಚಿದ್ರೂಪನಂ ಜಗವರಿಯೆ ।
ದೊದ್ದೆಯೊಳ್ ಕೂಡಿ ತೇರ್ಗುದುರೆಯಂ ಪೊಡೆವುದಂ ।
ಪೊದ್ದಿಸಿದ ಪಾರ್ಥನಾರಿದರೊಳೆನಲರ್ಜುನಂ ಬಂದಾತನಂ ಕಂಡನು ॥೯॥

ಗುಣದೊಳಾ ಯೌವನಾಶ್ವಕ್ಷಿತಿಪನೆರಗಿ ಫಲು ।
ಗುಣನ ಮೊಗಮಂ ನೋಡಿ ನೀನಲಾ ತಿಳಿಯಲ' ತ್ರಿ ।
ಗುಣದೊಳೊಂದದ ಘನಶ್ರುತಿಶಿರೋಮಣಿಯನಿಳೆಯರಿಯೆ ನಿಜಭಕ್ತಿಯೆಂಬ ॥
ಗುಣದಿಂದೆ ಬಂಧಿಸಿದ ಕೋವಿದನದೇಂ ಬಯಲ ।
ಗುಣವಿರ್ದರಕಟ ಯೋಗಿಗಳೆಂದು ನರನ ಸ ।
ದ್ಗುಣವನುರೆ ಕೊಂಡಾಡಿ ಬಳಿಕ ಸಹದೇವ ನಕುಲಾದ್ಯರಂ ಮನ್ನಿಸಿದನು ॥೧೦॥

ಬಳಿಕ ಹೊಳೆಹೊಳೆವ ಮಿಂಚಿನ ಗೊಂಚಲೆತ್ತಲುಂ ।
ಬಳಸಿ ಕಂಗೊಳಿಸುತಿರಲಡಿಗಡಿಗೆ ಘುಡುಘುಡಿಸಿ ।
ಮೊಳಗುವ ಸಿತಾಭ್ರಮಂ ಕುಲಗಿರಿತಟಪ್ರದೇಶಕೆ ಸಾರ್ಚುವಸಿಲನಂತೆ ॥
ಲಲಿತ ಕನಕಾಭರಣಗಳ ಕಾಂತಿಯಿಂ ಸುಗತಿ ।
ಗುಲಿವ ಹೊಂಗೆಜ್ಜೆಗಳ ರಭಸದಿಂದೆಸೆವ ನಿ ।
ರ್ಮಲವಾಜಿಯಂ ಸುವೇಗಂ ತಂದು ನಿಲಿಸಿದಂ ಧರ್ಮಜನ ಸಮ್ಮುಖದೊಳು ॥೧೧॥

ತುರಗಮೇಧಂಗೆಯ್ಯದೊಂದಿನಿಸು ಕುಂದೆನ್ನ ।
ಸಿರದ ಮೇಲಿದೆ ತಾನಿದಂ ತಾಳಲಾರೆ ನೀಂ ।
ಪರಿಹರಿಪುದೆಂದು ನಿಜಕೀರ್ತಿ ಹಯರೂಪದಿಂ ಭೂಪನಂ ಬೇಡಿಕೊಳಲು ॥
ಪೊರೆಗೆ ಬಂದಪ್ಪೊಲೇಕಕರ್ಣದಸಿತತ್ವದಿಂ ।
ಪರಿಶೋಭಿಸುವ ಶುಭ್ರವಾಜಿಯಂ ಕಾಣುತ ।
ಚ್ಚರಿವಟ್ಟು ಸಕಲಜನಮೈತಂದು ನೋಡುತಿರ್ದುದು ಬಳಸಿ ದೆಸೆದೆಸೆಯೊಳು ॥೧೨॥

ಕೊಂಡುಬಂದಾ ಹಯವನೊಪ್ಪಿಸಿ ಯುಧಿಷ್ಠಿರನ ।
ಕಂಡಂ ಸುವೇಗನತಿಭಕ್ತಿಯಿಂದೆರಗಿದಂ ।
ಪುಂಡರೀಕಾಕ್ಷಂಗೆ ಬಳಿಕರ್ಜುನಾದಿಗಳ್ಗುಚಿತದಿಂ ವಂದಿಸಿದನು ।
ಬಂಡಿಪೇರೆತ್ತೊಟ್ಟೆಗಳ ಮೇಲೆ ತಂದಖಿಳ ।
ಭಂಡಾರಮಂ ಕರಿರಥಾಶ್ವಮಂ ನಾರಿಯರ ।
ತಂಡಮಂ ಗೋಮಹಿಷ ಮೊದಲಾದ ವಸ್ತುಗಳನಾ ಕ್ಷಣದೊಳೊಪ್ಪಿಸಿದನು ॥೧೩॥

ಮೇಲೆ ಪರಿತೋಷದಿಂದಾ ಯೌವನಾಶ್ವಭೂ ।
ಪಾಲಕಂ ತನ್ನ ಸರ್ವಸ್ವಮಂ ತಂದು ಲ ।
ಕ್ಷ್ಮೀಲೋಲನಂಘ್ರಿಗೊಪ್ಪಿಸಿದ ಬಳಿಕವನೊಡನೆ ಬಂದಿಹ ಸಮಸ್ತಜನರು ॥
ನೀಲಮೇಘಶ್ಯಾಮಲನ ಕೋಮಲಾಂಗದ ವಿ ।
ಶಾಲತರ ಲಾವಣ್ಯಲಹರಿಯ ಸುಧಾಂಬುಧಿಯೊ ।
ಳೋಲಾಡುತಿರ್ದರಡಿಗಡಿಗೆ ವಂದಿಸಿ ನುತಿಸಿ ಜಯಜಯನಿನಾದದಿಂದೆ ॥೧೪॥

ಇತ್ತಲಾ ಯೌವನಾಶ್ವನ ರಾಣಿ ಕಾಣಿಕೆಯ |
ನಿತ್ತು ಕುಂತಿಗೆ ನಮಿಸಿ ಬಳಿಕ ಪಾಂಚಾಲಭೂ |
ಭೃತ್ತನೂಜೆಯ ಚರಣ ಸೀಮೆಗಾನತೆಯಾಗಲವಳ ಕಚಭರವೆಸೆದುದು ||
ಒತ್ತಿಡಿದ ಸಂಜೆಗೆಂಪಿನ ಮೇಲೆ ಕವಿದ ಬ |
ಲ್ಗತ್ತಲೆಯೊ ಶೋಣಗಿರಿತಟಕಿಳಿವ ಕಾರ್ಮುಗಿಲ |
ಮೊತ್ತಮೊ ಕಮಲಕೆರಗುವಳಿಕುಲವೊ ತಳಿಗೆರ್ಂಬಡರ್ದ ಬರ್ಹಿಯೊ ಪೇಳೆನೆ ||೧೫||

ದ್ವೇಷಮಂ ಬಿಟ್ಟು ಕೆಂದಾವರೆಯ ಚೆಲ್ವಿನ ವಿ |
ಶೇಷಮಂ ನೋಡಲ್ ಸವಿಪಾಪಮಂ ಸಾರ್ದ ಪೀ |
ಯೂಷಕರಬಿಂಬಮೆನಲಾ ಪ್ರಭಾವತಿಯ ಮೊಗವಂಘ್ರಿದೇಶದೊಳೊಪ್ಪಿರೆ |
ಭೂಷಣಂ ಚಲಿಸೆ ಮಣಿದೆತ್ತಿ ಬಿಗಿಯಪ್ಪಿ ಸಂ |
ತೋಷದಿಂದವಳನುಪಚರಿಸಿ ತಿರುಗಿದಳಖಿಳ |
ಯೋಷಿಜ್ಜನದೊಳತಿವಿಲಾಸದಿಂ ದ್ರೌಪದಿ ಸುಭದ್ರಾದಿ ಸತಿಯರೊಡನೆ ||೧೬||

ಶೌರಿಸಹಿತರಸಂ ಬಳಿಕ ರಜತಗಿರಿಯಂತೆ |
ಗೌರಾಂಗದಿಂದೆ ಕಣ್ಗೊಳಿಸುವ ತುರಂಗಮದ |
ಸಾರಂಭಮಂ ನೋಡಿ ಬಿಗಿಯಪ್ಪಿ ಮುಂಡಾಡಿ ಕೈಡಿಂಬಿ ಕರ್ಣಜರನು ||
ಗೌರವಂ ಮಿಗೆ ಯೌವನಾಶ್ವಭೂಪಾಲನಂ |
ಪೌರುಷದೊಳುಪಚರಿಸಿ ತಂದನಿಭಪುರಿಗಖಿಳ |
ಪೌರಜನ ಪರಿಜನದ ರಥನಾಗವಾಜಿಗಳ ಸಂವಣಿಯ ಸಂಭ್ರಮದೊಳು ||೧೭||

ಭೂವಲ್ಲಭಂ ಮುದದೊಳಾ ಯೌವನಾಶ್ವನಂ |
ಭಾವಿಸಿದ ಬಳಿಕ ಪಕ್ಷದ್ವಯಂ ಹರಿ ಹಸ್ತಿ |
ನಾವತಿಯೊಳಿರ್ದು ನೃಪವರನೊಳಿಂತೆಂದನೀ ಚೈತ್ರಮಾಸಂ ಪೋದುದು ||
ಈ ವೇಳೆಗಧ್ವರದ ಸಮಯುಪನುಪಕ್ರಮಿಸ |
ಲಾವಿರಲ್ ಬಂದೊಂದು ವರ್ಷಮಪ್ಪುದು ಮುಂದೆ |
ನೀವು ಕರೆಸಿದೊಡೆ ಬಂದಪೆವಂಡಿಗೊದವಿದ ಸಮಸ್ತ ವಸ್ತುಗಳ ಕೊಂಡು ||೧೮||

ರಾಯ ನೀಂ ಕರೆಸಿದೊಡೆ ನಿನ್ನಯ ಮಹಾಧ್ವರ ಸ |
ಹಾಯಕೆ ಸಮಸ್ತವಸ್ತುವನಖಿಳ ಯಾದವ ನಿ |
ಕಾಯಮಂ ಕೂಡಿಕೊಂಡೈತಪ್ಪೆವನ್ನೆಗಂ ಸುಯ್ದಾನದಿಂ ಹಯವನು ||
ಈ ಯೌವನಾಶ್ವಭೂಪತಿಸಹಿತ ಕಾವುದೆಂ |
ದಾ ಯಮಸುತಾದಿಗಳನಂದು ಬೀಳ್ಕೊಂಡು ಕಮ |
ಲಾಯತಾಕ್ಷಂ ಬಂಧುಕೃತ್ಯದಿಂ ದ್ವಾರಕಾಪುರಕೆ ಬಿಜಯಂಗೈದನು || ೧೯ ||

ಇತ್ತಲವನಿಪನಸುರಹರನ ಕಳುಹಿದ ಚಿಂತೆ ।
ಗಿತ್ತು ನಿಜಬುದ್ಧಿಯಿಂ ಮುಂದರಿಯದಿರೆ ಬಂದು ।
ಮತ್ತೆ ವೇದವ್ಯಾಸಮುನಿ ತಿಳುಹಲಮಲಮಂಟಪವನೋಜೆಯೊಳು ರಚಿಸಿ ॥
ತತ್ತುರಗಮಂ ನಿಲಿಸಿ ಬಳಿಕ ಕಾವಲ್ಗೆ ರಥ ।
ಮತ್ತಗಜ ಹಯ ಪದಾತಿಗಳ ಸಂದೋಹಮಂ ।
ಮತ್ತಲುಂ ಪರುಠವಿಸಿ ಕೇಳ್ದನಾ ಋಷಿಯೊಳ್ ಮರುತ್ತನೃಪತಿಯ ಕಥೆಯನು ॥೨೦॥

ವಿಧುಕುಲಲಲಾಮ ಕೇಳ್ ಧರ್ಮಸುತನಾ ತಪೋ ।
ನಿಧಿಗೆ ಕೈಮುಗಿದು ಬೆಸಗೊಂಡಂ ಮರುತ್ತನೃಪ ।
ನಧಿಕತರ ಯಾಗಮದನಾವ ಋಷಿಮುಖದಿಂದಮಂದು ವಿರಚಿಸಿದನದರ ॥
ವಿಧಿಯಂ ತನಗೆ ಪೇಳ್ವುದೆನೆ ಬಾದರಾಯಣಂ ।
ಮಧುರೋಕ್ತಿಯಿಂದವನಿಪತಿಗೆ ವಿಸ್ತರಿಸಿದಂ ।
ಬುಧಜನಪ್ರೀತಿಕರಮಾಗಲಾ ರಾಯನ ಮಹಾಕ್ರತುವನೀ ಕ್ರಮದೊಳು ॥ ೨೧॥

ಆದೊಡೆ ನರೇಂದ್ರ ಕೇಳಾದಿಯುಗದಲ್ಲಿ ವಿಮ ।
ಲಾದಿತ್ಯವಂಶದೊಳ್ ಮೆರೆದರಿಕ್ಷ್ವಾಕು ಮೊದ ।
ಲಾದವರ್ ಧರ್ಮ ಕೀರ್ತಿ ಪ್ರತಾಪಂಗಳಿಂದವರ ಪಾರಂಪರೆಯೊಳು ॥
ಮೇದಿನೀಪತಿ ಕರಂಧಮನೆಂಬವಂ ಸಕಲ ।
ಭೂದೇವಕುಲದೊಳುದ್ದಾಮನೆನಿಪಂಗಿರನ ।
ನಾದರಿಸಿ ವರಿಸಿ ಹಯಮೇಧಶತಮಂ ಮಾಡಿ ಸುರಪದವಿಯಂ ಪಡೆದನು ॥ ೨೨ ॥

ಆ ಕರಂಧಮನ ಸುತನಾವಿಕ್ಷಿಯೆಂಬ ವಸು ।
ಧಾಕಾಂತನಾತನಿಂದುದಯಿಸಿ ಮರುತ್ತಂ ತ್ರಿ ।
ಲೋಕವಿಖ್ಯಾತನಾದಂ ಪಗೆಗಳಂ ಗೆಲ್ವೆಡೆಯೊಳುಸುರ್ವಿಡುತಿರಲ್ಕೆ ॥
ವ್ಯಾಕೀರ್ಣ ಚಾತುರ್ಬಲಂ ಪುಟ್ಟುತಿಹುದವಂ ।
ಬೇಕೆಂದಕಡೆ ಸಾಧ್ಯಮಾಗಿ ಬಹುದೀಧರೆಯ ।
ನೇಕಾಧಿಪತ್ಯದಿಂದಾಳ್ದನಂದಮಲಧರ್ಮದ ಮೇರೆ ತಪ್ಪದಂತೆ ॥ ೨೩ ॥

ಪ್ರಾಜ್ಯವೈಭವದಿಂದೆ ರಂಜಿಸುವ ಧರೆಯ ಸಾ ।
ಮ್ರಾಜ್ಯಾಧಿಪತ್ಯದ ಮಹಾದಿನಂ ಸುರವಿಪ್ರ ।
ಭೋಜ್ಯಮಪ್ಪವೊಲಾ ನೃಪಾಲಕಂ ತುರುಗಮೇಧಾಧ್ವರದ ಮಾಳ್ಕೆಗೆಳಸಿ ॥
ಯಾಜ್ಯಯಾಜನಕೆ ವರಿಸುವೊಡಂಗಿರನ ಸುತಂ ।
ಪೂಜ್ಯನೆಮ್ಮೀಕುಲದವರ್ಗೆಂಬ ನಿಶ್ಚಯದೊ ।
ಳಾಜ್ಯಪಗ್ರಾಚಾರ್ಯನಾಗಿಹ ಬೃಹಸ್ಪತಿಯ ಪೊರೆಗೆ ಬಂದಿಂತೆಂದನು ॥ ೨೪ ॥

ಎಲೆ ಬೃಹಸ್ಪತಿ ಮತ್ಪಿತಾಮಹಂ ಕ್ರತುಗಳ್ಗೆ ।
ಸಲೆ ನಿನ್ನ ತಾತನಂ ವರಿಸಿರ್ದನದರಿಂದೆ ।
ಕುಲಧರ್ಮಮಂ ಬಿಡದೆ ನೀನೆನಗೆ ಯಜ್ಞಮಂ ಮಾಡಿಸೆನಲವನೊಪ್ಪಲ ॥
ಬಲರಿಪು ಕನಲ್ದು ಮಾನವರ ಮಖಯಾಜನಂ ।
ಪೊಲೆ ಸುರಗರ್ಚಿತಮಲ್ಲೆಂದು ಗುರುವಂ ತಡೆದು ।
ನಿಲಿಸಲಾ ನೃಪತಿ ಭಂಗಿತನಾಗಿ ಬರುತೆ ನಾರದಮುನಿಪನಂ ಕಂಡನು ॥ ೨೫ ॥

ದುಗುಡದಿಂದಾನೃಪಂ ನಾರದಂಗೆರಗೆ ನಸು ।
ನುಗುತಿದೇನೆಲೆ ರಾಯ ನಿನಗೆ ದುಮ್ಮಾನಮೆನೆ ।
ಮಿಗೆ ಬೃಹಸ್ಪತಿ ತನಗೆ ಮಾಡಿದವಮಾನಮಂ ಪೇಳ್ದತಿವಿರಕ್ತಿಯಿಂದೆ ॥
ನಗರಮಂ ಪುಗದರಣ್ಯದೊಳುಗ್ರತಪದಿಂದೆ ।
ಜಗದೊಳುತ್ಕೃಷ್ಟಪದಮಂ ಪಡೆವೆನೆನೆ ಕೇಳ್ದು ।
ವಿಗಡಮುನಿವರನಾಗಳಾ ಮಹೀಪಾಲನಂ ಸಂತೈಸುತಿಂತೆಂದನು ॥ ೨೬ ॥

ಜನಪ ನಿನಗೆಚ್ಚರಿಪೆನಾದಿಯೊಳ್ ಪಂಕಜಾ ।
ಸನನ ಮಾನಸಪುತ್ರನಾದನಂಗಿರನವನ ।
ತನುಜರ್ ಬೃಹಸ್ಪತಿಯುಮಿನ್ನೊರ್ವ ಸಂವರ್ತನೆಂಬವಂ ಬಳಿಕವರ್ಗೆ ॥
ದಿನದಿನಕೆ ದಾಯಾದಮತ್ಸರಂ ಪೆರ್ಚುತಿರೆ ।
ಮನೆವಾಳ್ತೆಯೊಳ್ ಪಸುಗೆಯಂ ಕುಡದೆ ಗುರು ತಗು ।
ಳ್ದನುಜನಂ ಪೊರಮಡಿಸೆ ಕಾಶಿಯೊಳ್ ಪೋಗಿರ್ಪನಾತನವಧೂತನಾಗಿ ॥ ೨೭ ॥

ಆತನಂ ವರಿಸಿದೊಡೆ ಯಜ್ಞಮಾದಪುದು ನಿನ ।
ಗೇತಕಿನ್ನೆಣಿಕೆ ನಡೆ ಕಾಶಿಕಾ ಪಟ್ಟಣದೊ ।
ಳಾ ತಪೋನಿಧಿ ನಿನ್ನ ಕಣ್ಗೆ ಗೋಚರಿಸದಿರೆ ಪೊಳಲ ಪೆರ್ಬಾಗಿಲೊಳಗೆ ॥
ಘಾತಿಯಾಗಿರ್ದ ಪೆಣನಂ ಬಿಸುಡಿಸದನಖಿಳ ।
ಜಾತಿಗಳ್ ತುಳಿದು ಕೊಂಡೆಡೆಯಾಡುತಿರ್ಪುವವ ।
ಧೂತನಾಗಿರ್ದವಂ ಕಂಡು ತೊಲಗಿದೊಡರಿದು ಬೆಂಬಿಡದೆ ಪೋಗೆಂದನು ॥ ೨೮ ॥

ಪೊಕ್ಕಲ್ಲಿ ಪೊಕ್ಕು ಬೆಂಬಿಡದೆ ನೀಂ ಬರೆ ಕಂಡು ।
ಸಿಕ್ಕಿದೆತ್ತಣದೆಂದು ಬಯ್ದಪಂ ಪೊಯ್ದಪಂ ।
ಮುಕ್ಕಳಿಸಿ ಮೇಲುಗುಳ್ದಪನೇನನಾದೊಡಂ ಮಾಡುವಂ ನೀವದಕ್ಕೆ ॥
ಹೆಕ್ಕಳಿಸಿ ಹಿಮ್ಮೆಟ್ಟದಿದಿರ್ದೊಡಾರೊರೆದರೆ ।
ನ್ನಿಕ್ಕೆಯಂ ಪೇಳೆಂದವಂ ಕೇಳ್ದೊಡೆನ್ನನಿದಿ ।
ರಿಕ್ಕಿ ನಾರದನರಿಪಿ ತಾಂ ಕಿಚ್ಚಿನೊಳ್ ಬಿದ್ದನೆಂದುಸಿರ್ ಪೋಗೆಂದನು ॥ ೨೯ ॥

ನಾರದನ ಬುದ್ಧಿಯಂ ಕೇಳ್ದು ಸಂತೋಷದಿಂ ।
ಭೂರಮಣನಲ್ಲಿಂದೆ ಬೀಳ್ಕೊಂಡು ಶಶಿಮೌಳಿ ।
ತಾರಕಬ್ರಹ್ಮೋಪದೇಶದಿಂದೆ ಪ್ರಾಣಿಗಳ್ಗಾತ್ಮಸಾಯುಜ್ಯವೀವ ॥
ಭೂರಿದುರಿತಂಗಳಂ ಕಂಡಮಾತ್ರದೊಳೆ ಸಂ।
ಹಾರವಂ ಮಾಳ್ಪ ನಿಖಿಳಪ್ರಳಯಬಾಧೆಗಳ್ ।
ದೂರಮೆನಿಪವಿಮುಕ್ತಕಾಶಿಗೈತಂದು ವಿಶ್ವೇಶಂಗೆ ಪೊಡಮಟ್ಟನು॥ ॥ ೩೦ ॥

ಬಳಿಕಲ್ಲಿ ನಾರದಂ ಪೇಳ್ದಂತೆ ಭೂವರಂ ।
ಪೊಳಲ ಪೆರ್ಬಾಗಿಲ್ಗೆ ಕುಣಪಮಂ ತಂದಿರಿಸ ।
ಲುಳಿಯದೆಡೆಯಾಡುತಿರ್ದುದು ಜನಂ ಕಂಡು ಸಂವರ್ತನತ್ತಲೆ ತೊಲಗಲು ॥
ಬಳಿವಿಡಿದು ಪೋದೊಡವನೀಶನಂ ಬೈದು ಪೋ ।
ಯ್ದಳಲಿಸಿ ಕನಲ್ದುಗುಳ್ದೋಕರಿಸಿ ನೂಕಲದ ।
ಕಳುಕದಿರ್ದೊಡೆ ತಾನದಾರೆಂದು ಬಂದೆ ನೀನೆಂದು ನೃಪನಂ ಕೇಳ್ದನು ॥ ೩೧ ॥

ಸುರಪುರೋಹಿತನನುಜನಂಗಿರನ ಸೂನು ಮುನಿ।
ವರಮೌಳಿ ಸಂವರ್ತನೆಂದರಿದು ಬಂದು ನಿ ।
ನ್ನಿರವಂ ಪರೀಕ್ಷಿಸಿದೆನೆಂದು ನೃಪನುಸಿರಲವರಾರ್ ನಿನಗೆ ಪೇಳ್ದರೆನಲು ॥
ಪರಮರ್ಷಿನಾರದಂ ತನಗೊರೆದು ಕೂಡೆ ತಾ ।
ನುರಿಯೊಳ್ ಪ್ರವೇಶಿಸಿದನೆನೆ ತಾಪಸಂ ತಿಳಿದು ।
ಕರುಣದಿಂದೇತಕ್ಕೆತಂದೆ ನೀನಾರೆನ್ನೊಳಹ ಕಜ್ಜಮೇನೆಂದನು ॥ ೩೨ ॥

ಆದೊಡೆ ಮರುತನಾ ನಾವಿಕ್ಷಿನೃಪಸುತಂ ।
ಮೇದಿನಿಯೊಳೆನಗೆ ಹಯಮೇಧಮಂ ಮಾಡಿಸೆಂ ।
ದಾದರಿಸಿ ನಿಮ್ಮಣ್ಣನಂ ಕೇಳ್ದೊಡಾತಂ ತಿರಸ್ಕರಿಸಿದೊಡೆ ನಿನ್ನನು ॥
ಆ ದೇವಮುನಿ ಪೇಳ್ದೊಡೈತಂದೆನೆನ್ನಧ್ವ।
ರೋದಯಕೆ ನೀನಲ್ಲದನ್ಯರಂ ಕಾಣೆನೆಂ।
ದಾ ದಿನಪಕುಲದರಸನಂದು ಸಂವರ್ತನಂ ಬೇಡಿಕೊಳಲಿಂತೆಂದನು ॥ ೩೩ ॥

ಲೇಸಾದುದೆಲೆ ರಾಯ ನಿನ್ನ ಯಜ್ಞಕ್ಕೆ ತಾ ।
ನೋಸರಿಸುವವನಲ್ಲ ಪುರುಡಿಂ ಮದಗ್ರಜಂ ।
ವಾಸವನ ಮುಖದಿಂದೊಡಂಬಡಿಸಿ ಮಖಕೆ ತಾನಧ್ಯಕ್ಷನಪ್ಪೆನೆಂದು ॥
ಆಶೆಯಿಂ ಕೇಳ್ದೊಡೇಗೈವೆ ನೀಂ ಪೇಳೆನಲ್ ।
ಭೂಸುರನ ಕೊಂದಗತಿ ತನಗಹುದು ನಿಮ್ಮಂ ಪ್ರ।
ಯಾಸದಿಂ ಬಿಟ್ಟೊಡೆಂದರಸಂ ಪ್ರತಿಜ್ಞೆಯಿಂ ಮಾಡಲವನಿಂತೆಂದನು ॥ ೩೪ ॥

ಯಾಜಕಂ ತಾನಪ್ಪೆನಧ್ವರಕೆ ನೀನಿನ್ನು ।
ರಾಜಿಪ ಹಿಮಾಲಯದೊಳೆಸೆವ ರಜತಾದ್ರಿಯೊಳ್ ।
ತೇಜೋಮಯಂ ಸದಾಶಿವನಿರ್ಪನಾತನ ಪದಾಬ್ಜಮಂ ಪೋಗಿ ಕಂಡು ॥
ಪೂಜೆಗೈದೊಡೆ ಕನಕರಾಶಿಗಳನಿತ್ತಪಂ ।
ಮೂಜಗಂ ತಣಿವಂತೆ ವರಮಖಂ ನಡೆವುದೆನ ।
ಲಾ ಜನಪನಲ್ಲಿಗೈತಂದು ಗಿರಿಜೇಶನಂ ಪ್ರಾರ್ಥಿಸಿದನರ್ತಿಯಿಂದೆ ॥೩೫॥

ತರುಣೇಂದುಮೌಳಿಯಂ ಪ್ರಾರ್ಥಿಸಿದೊಡಿತ್ತನತಿ ।
ಕರುಣದಿಂದಪರಿಮಿತವಸ್ತುವಂ ಬಳಿಕ ಹಿಮ ।
ಗಿರಿತಟದೊಳಾ ನೃಪಂ ಕಟ್ಟಿಸಿದನಧ್ವರದ ಶಾಲೆಯಂ ಕನಕದಿಂದೆ ॥
ವರವೈದಿಕ ಪ್ರಮಾಣದೊಳಂದು ವಿಪ್ರರಂ ।
ಕರೆಸಿ ಸಂವರ್ತನಂ ಕೂಡಿಕೊಂಡುತ್ಸವದೊ ।
ಳರಸಂ ಮಹಾಕ್ರತು ಪ್ರಾರಂಭದೊಳ್ ಮೆರೆದನೈಶ್ವರ್ಯವಿಭವದಿಂದೆ ॥೩೬॥

ಕೇಳ್ದಂ ಬೃಹಸ್ಪತಿ ಮರುತ್ತನ ಮಖೋದಯಮ ।
ನಾಳ್ದನತಿಚಿಂತೆಯೊಳ್ ಮುಂದೆ ಧನಯುತನಾಗಿ ।
ಬಾಳ್ದಪಂ ಸಂವರ್ತನೆಂಬ ಪುರುಡಿಂದುಬ್ಬೆಗಂಬಟ್ಟು ದಿವಿಜಪತಿಗೆ ॥
ಪೇಳ್ದೊಡವನಗ್ನಿಯಂ ಕಳಿಪಿದೊಡೆ ದೀಕ್ಷೆಯಂ ।
ತಾಳ್ದೆಸೆವ ಭೂಪನೆಡೆಗೈತಂದು ವೃತ್ರನಂ ।
ಸೀಳ್ದವಂ ತನ್ನೊಳಾಡಿದಮಾತನಿಂತೆಂದು ವಿವರಿಸಿದನಾ ಕೃಶಾನು ॥೩೭॥

ರಾಯ ಕೇಳಿಂದ್ರನಾಡಿದಮಾತನೊರೆವೆನಾ ।
ನೀ ಯಜ್ಞಮಂ ಬೃಹಸ್ಪತಿಯ ಕೈಯಿಂ ತೊಡಗಿ ।
ಸಾಯಸಂಬಟ್ಟು ಸಂವರ್ತನಂ ವರಿಸದೇಡೆನ್ನಾಜ್ಞೆಯಂ ಮೀರ್ದೊಡೆ ॥
ವಾಯದಿಂದಧ್ವರಂ ಕೆಡುವಂತೆ ಮಾಡುವೆನ ।
ಪಾಯಮಂ ನಿನಗೆಂದು ಪೇಳ್ದಂ ಸುರಪನೆಂಬ ।
ವಾಯುಸಖನಂ ನೋಡಿ ನಸುನಗುತೆ ವಿನಯದಿಂ ಭೂಪಾಲನಿಂತೆಂದನು ॥೩೮॥

ಗುರುವೆ ಕುಲಗುರುವೆಂದು ಮೊದಲೆ ನಾಂ ಪೋಗಿ ವಿ ।
ಸ್ತರದಿಂದೆ ಮಾಡಿಸಧ್ವರವನೆಂದಾಡಿದೊಡೆ ।
ನರಯಾಜನಕ್ಕೊಲ್ಲೆನೆಂದ ಬಳಿಕೈಸಲೇ ಸಂವರ್ತನಂ ಮಖಕ್ಕೆ ॥
ವರಿಸಿದೆನಸತ್ಯಮಂ ನುಡಿಯಲಂಜುವೆನಿನ್ನು ।
ತುರಗಮೇಧಂ ನಡೆಯದೊಡೆ ಮಾಣಲೆಂದು ಭೂ ।
ವರನಗ್ನಿಯಂ ಬೇಡಿಕೊಳುತಿರಲ್ ಕಂಡು ಮುಳಿದಾ ಮುನಿಪನಿಂತೆಂದನು ॥೩೯॥

ಭೂಕಾಂತ ನಿನಗಿವನೊಳುಪಚಾರಮೇಕಿನ್ನು ।
ಸಾಕೀತನಂ ಕಳುಹು ಯಜ್ಞಮಂ ಕಿಡಿಸಿದೊಡೆ ।
ನಾಕಮಂ ಕಿಡಿಸುವೆಂ ಸಕಲಮಂ ಸುಡುವನಲನಂ ಸುಡುವೆನೀಕ್ಷಣದೊಳು ॥
ಪಾಕಶಾಸನನನೊಡಗೊಂಡು ಬರಲಗ್ನಿಯಂ ।
ನೂಕೆಂದು ಸಂವರ್ತನಾಡಲ್ ಬೆದರ್ದು ಸುರ ।
ಲೋಕಕ್ಕೆ ಪೋಗಿ ವೈಶ್ವಾನರಂ ವಜ್ರಿಗರುಹಿದೊಡಾತನಿಂತೆಂದವು ॥ ೪೦ ॥

ಇನ್ನೊಂದುಬಾರಿ ನೀಂ ಪೋಗಿ ಪೇಳಾ ನೃಪತಿ ।
ಗೆನ್ನ ವಜ್ರಕ್ಕೆ ಗುರಿಯಾಗಬೇಡೆಂಡೆನಲ್ ।
ತನ್ನ ಕಯ್ಯೊಳ್ ಸಾಗದಂಜುವೆಂ ಸಂವರ್ತನತಿತಪೋಬಲನಿಳೆಯೊಳು ॥
ಮುನ್ನ ಭೂಸುರಶಾಪದಿಂದೆ ಪಲರಳಿದುಳಿದು ।
ಬನ್ನ ಬಟ್ಟವರುಂಟು ಸಾಕೆಂದು ಶಿಖಿ ತೊಲಗೆ ।
ಮನ್ನಿಸಿ ಪುರಂದರಂ ಧೃತರಾಷ್ಟ್ರನೆಂಬ ಗಂಧರ್ವಂಗೆ ನೇಮಿಸಿದನು ॥ ೪೧ ॥

ಧೃತರಾಷ್ಟ್ರನೆಂಬ ಗಂಧರ್ವರಾಜಂ ಬಂದು ।
ಶತಮುಖಂ ಸಂವರ್ತನಂ ಬಿಟ್ಟು ವರಬೃಹ ।
ಸ್ಪತಿಯುನಧ್ವರಕೆ ವರಿಸದೊಡೀಗ ವಜ್ರದಿಂದರಿದಪಂ ನಿನ್ನನೆಂದು ॥
ಕ್ಷಿತಿಪಂಗೆ ಪೇಳ್ದೊಡದ ಕೇಳ್ದಾ ಮುನೀಶ್ವರಂ ।
ಖತಿಗೊಂಡೊಡಾತಂ ಮರಳ್ದು ಶಕ್ರಂಗರುಹ ।
ಲತುಳಸನ್ನಾಹದಿಂ ಪೊರಮಟ್ಟನಮರೇಂದ್ರನನಿಮಿಷರ ಗಡಣದಿಂದೆ ॥ ೪೨ ॥

ಕೋಪದಿಂದಾಗಳೆತ್ತಿದ ವಜ್ರಹಸ್ತದಿಂ ।
ದಾಪುರಂದರನೈದೆ ಕಂಡು ನಡುನಡುಗುತಿಹ ।
ಭೂಪನಂ ಸಂತೈಸಿ ಸಂವರ್ತನಿಂದ್ರಾಗ್ನಿ ಮೊದಲಾದಮರಗಣವನು ॥
ರೂಪಿಸಿದ ಚಿತ್ರಪಟದಂತಾಗ ನಿಲಿಸಲ್ ಪ್ರ ।
ತಾಪಂಗಳುಡುಗಿ ನಿರ್ಜರನಿಕರಮಳವಳಿಯ ।
ಲಾ ಪರಮಧಾರ್ಮಿಕ ಮರುತ್ತಂ ತಪಸ್ವಿಯಂ ಬೇಡಿಕೊಂಡಂ ನಯದೊಳು ॥ ೪೩ ॥

ಎಲೆ ಮುನೀಶ್ವರ ಹವಿರ್ಭಾಗಮಂ ಕೊಂಬಮರ ।
ಕುಲಮಿಂತಿರಲ್ ಬಹುದೆ ಪ್ರತ್ಯಕ್ಷಮಾಗಿ ಬಂ ।
ದೊಲಿದೆನ್ನ ಯಾಗದೊಳ್ ವಿನಯದಿಂದೀಸಿಕೊಳಲಾಹುತಿಯ ಪಸುಗೆಗಳನು ॥
ಸಲಿಸಬೇಕೆನ್ನ ಬಿನ್ನಪವನೀ ಸುರಪನೊಳ್ ।
ಕಲಹಮಂ ಬಿಡಿಸೆಂದು ಭೂವಲ್ಲಭಂ ಕೃತಾಂ ।
ಜಲಿಯಿಂದೆ ಸಂವರ್ತನಂ ಪ್ರಾರ್ಥಿಸಿದೊಡಿತ್ತನಾ ನೃಪನ ವಾಂಛಿತವನು ॥ ೪೪ ॥

ಭೂಮಿಶ ಕೇಳ್ ಬಳಿಕ ಸಂವರ್ತಮುನಿವರನ ।
ಸಾಮರ್ಥ್ಯಮಂ ನೋಡಿ ವೈರಮಂ ಬಿಟ್ಟು ಸು ।
ತ್ರಾಮಮಂ ಸಕಲದಿವಿಜರೊಡಗೂಡಿ ಯಜ್ಞದ ಹವಿರ್ಭಾಗಮಂ ಕೊಳಲ್ಕೆ ॥
ಪ್ರೇಮದಿಂ ಪ್ರತ್ಯಕ್ಷವಾಗಿ ಬಂದಿರುತಿರ್ದ ।
ನಾ ಮರುತ್ತಂಗೆ ಸಂತೋಷಂ ನೆಗಳ್ದುದು ಮ ।
ಹಾಮಖಂ ನೆರೆದುದು ಸಮಸ್ತ ವೈಭವದ ವಿಸ್ತಾರದಿಂ ಖ್ಯಾತವಾಗಿ ॥ ೪೫ ॥

ವರ್ತಿಸಿತು ವೈದಿಕವಿಧಾನದಿಂದೆಸೆವ ಸಂ ।
ವರ್ತಮುನಿ ಮಾಡಿಸೆ ಮಹಾಧ್ವರಂ ಸಕಲದಿವಿ ।
ಜರ್ತಮ್ಮ ತಮ್ಮ ಭಾಗಂಗಳಂ ಪ್ರತ್ಯಕ್ಷವಾಗಿ ಕೈಕೊಂಡರಿರ್ದು ॥
ಮರ್ತ್ಯಲೋಕಂ ಕನಕಮಯಮಾಗೆ ಭೂಮಿಯುಮ ।
ರರ್ತಿಗೆದು ಹೊತ್ತ ದಕ್ಷಿಣೆಗಳಿಂ ದಣಿದು ಬಿಸು ।
ಟರ್ತುಹಿಮಗಿರಿಯೊಳಗಣಿತಹೇಮರಾಶಿಗಳನೇನೆಂಬೆನಚ್ಚರಿಯನು ॥ ೪೬ ॥

ಪಾರ್ಥಿವಾಗ್ರಣಿ ಮರುತ್ತಂ ಬಳಿಕ ವಿನಯದಿಂ ।
ಪ್ರಾರ್ಥಿಸಿದನಿಂದ್ರಾದಿಗಳನವರ್ ಮುದದೊಳಿ ।
ಷ್ಟಾರ್ಥಮಂ ಸಲಿಸಿದರ್ ತಣಿವಲಸಿದರ್ ದ್ವಿಜರ್ ಭೂರಿದಕ್ಷಿಣೆಗಳಿಂದೆ॥
ಸ್ವಾರ್ಥಮೆಲ್ಲಮನಿತ್ತು ಸಂವರ್ತಮುನಿಗೆ ಮಖ ।
ತೀರ್ಥದೊಳ್ ಮಿಂದು ಶುಚಿಯಾಗಿ ದೇವರ್ಕಳಿದು ।
ಸಾರ್ಥಮೆನೆ ಚಿರಕಾಲಮವನಿಯೊಳವಂ ಬಾಳ್ದು ಪಡೆದನುತ್ತಮಗತಿಯನು॥೪೭॥

ರಾಯ ಕೇಳಾ ಯಜ್ಞ ಸಂಗತಿಯನಾ ಬಾದ ।
ರಾಯಣಂ ಪೇಳೆ ಬಳಿಕವನಿಪಂ ಧರ್ಮಸಾ ।
ರಾಯಮಂ ಕೇಳ್ದನಾ ಮುನಿವರನೊಳಾವ ನರನಾವ ಕೃತ್ಯಂಗೆಯ್ಯಲು ॥
ದೀಯದ ಜನಂ ಬಳೆವುದಿಲ್ಲಿ ನಾರಕದ ಬಿರು ।
ದೀಯದ ಸುಖಂ ಪರದೊಳೆಂತು ದೊರಕೊಂಬುದೆಂ ।
ಬೀಯವಸ್ಥೆಯನೆನಗೆ ವಿಸ್ತರಿಸಿ ಪೇಳ್ವುದೆನೆ ಶುಕತಾತನಿಂತೆಂದನು ॥ ೪೮ ॥

ಸಾರ್ವನಿಗಮಾರ್ಥಮಂ ತಿಳಿದು ಸತ್ಕರ್ಮಮಂ ।
ಸಾರ್ವಕಾಲಂಗೆಯ್ದು ಪರವಧೂವಿಷಯಮಂ ।
ಸಾರ್ವ ಚಿಂತೆಯನುಳಿದು ಲೋಕಾಪವಾದಮಂ ಪರಿಹರಿಸಿ ಪರರೊಡವೆಗೆ ।
ಪಾರ್ವನಲ್ಲದೆ ಸದಾಚಾರದಿಂ ನಡೆದೊಡಾ ।
ಪಾರ್ವನಿಹದೊಳ್ ಕೀರ್ತಿಪರನಾಗಿ ಬಳಿಕಮಂ ।
ಪಾರ್ವನುತ್ತಮಗತಿಗೆ ದೇಹಾವಸಾನದೊಳ್ ಭೂಪಾಲ ಕೇಳೆಂದನು ॥೪೯॥

ಸರ್ವಧರ್ಮಂಗಳನರಿದೋವಿದೊಡೆ ರಣಕೆ ಬೇ ।
ಸರ್ವನಲ್ಲದೊಡಾತ್ಮವಿದನಾದೊಡಿಳೆಯೊಳ್ ಪೆ ।
ಸರ್ವಡೆದು ಕ್ಷತ್ರಿಯಂ ಕಾದಿ ಮಡಿದೊಡೆ ಸೂರೆಗೊಂಬನಮರಾವತಿಯನು ॥
ದುರ್ವಚನಮಂ ನುಡಿಯದತಿಥಿಗಳ ಕೆಡೆನುಡಿಯು ।
ದುರ್ವಧನಮಂ ಕೂಡಿ ಗೋರಕ್ಷಣಂವಾಳ್ವ ।
ದುರ್ವರೆಯೊಳಿದು ಕೀರ್ತಿ ವೈಶ್ಯಂಗೆ ಪರಗತಿ ಮುಕುಂದಸೇವೆಯೊಳಪ್ಪುದು ॥೩೦॥

ದ್ವಿಜರಾಸರಂದಳೆದು ಬೆಸಗೈವ ಶೂದ್ರನುಂ ।
ದ್ವಿಜರಾಜವಾಹನಸ್ಮರಣೆಯಿಂದೈದುವಂ ।
ದ್ವಿಜರಾಜಸನ್ನಿಭದ ಸುಗತಿಯಂ ಜಗದೊಳಂತದು ಕುಲಸ್ತ್ರೀಯರೊಳಗೆ ॥
ನಿಜನಾಥಭೀತೆ ಸುಚರಿತ್ರೆ ಗುಣವತಿ ಮಾನಿ ।
ನಿ ಜನಾಪವಾದವಿರಹಿತೆಯೆನಿಪ ನಾರಿ ನ ।
ನ್ನಿ ಜನಾರ್ದನಾದಿ ನಿರ್ಜರವರ್ಯವಿನುತೆಯಹಳೆನಲವಳ ಸುಕೃತಮೆಂತೋ ॥೩೧॥

ಪತಿ ದೈವಮೆಂದರಿದು ನಡೆವ ಸತಿಗಹುದು ಪರ ।
ಗತಿಯಲ್ಲದಂಗನೆಯರತಿಸಾಹಸಿಗಳವರ ।
ಕೃತಕಶೀಲಂಗಳಂ ನಂಬಲಾಗದು ಮೇಣ್ ಸ್ವತಂತ್ರಮಂ ಕುಡಲಾಗದು ॥
ಪಿತನಿಂದೆ ಬಾಲ್ಯದೊಳ್ ಪತಿಯಿಂದೆ ಹರೆಯದೊಳ್ ।
ಸುತನಿಂದೆ ವೃದ್ಧಾಪ್ಯದೊಳ್ ಕುಲಸ್ತ್ರೀ ಸುರ ।
ಕ್ಷಿತೆಯಾಗದಿರ್ದೊಡವಳಿಂದೆ ನಿಜವಂಶಕುಹಪತಿ ದಾರದಿರದಿಳೆಯೊಳು ॥೩೨॥

ವರಯಜ್ಞಶಾಲೆಯುಂ ಬಾಲೆಯುಂ ದ್ವಿಜಪಙ್ತ ।
ಪರಿಶೋಭಿಸದೊಡೆ ಸತ್ಪವಿತೆಯುಂ ಯುವತಿಯುಂ ।
ಚರಣಗತಿ ಸಮತೆವೆತ್ತಿರದೊಡಬ್ಜಾರಿಯುಂ ನಾರಿಯುಂ ಚಾರುತರದ ॥
ಕರಭೋರುಕಾಂತಿ ಸಂಯುಕ್ತಮಾಗಿರದಿರ್ದೊ ।
ಡರಸಾಳ್ವ ಧರಣಿಯುಂ ತರುಣಿಯುಂ ಶಾಲಿಸುಂ ।
ದರಮಾಗಿರದೊಡೆ ಸೌಮಂಗಳ್ಯಮಾಗಿಯುಂ ಮೇಲೆಯುನ್ನತಿಯಪ್ಪುದೆ ॥೩೩॥

ಮಾವಂಗೆ ಭಾವಂಗೆ ಮೇಣತ್ತೆಗೈದೆ ಸಂ ।
ಭಾವಿಸುತೆ ಸೇವಿಸುತೆ ಕಾಂತಂಗೆ ಸುರತಸಂ ।
ಜೀವನವನೀವ ನವಯುವತಿಯಹ ಲಕ್ಷಣಂ ಸುಕೃತಫಲಮಂತಲ್ಲದೆ ॥
ಪಾಪಿನಂತಾಪಿನಂತಡಿಗಡಿಗೆ ಮೊರೆದೆದ್ದು ।
ಡಾವರಿಸಿ ಸೀವರಿಸಿ ಮನೆಗೆಲಸಮಂ ಗೆಯ್ಯ ।
ದಾವನಿತೆ ಸಾವನಿತೆ ಲೇಸೆನಿಸದಿಹಳೆ ತತ್ಪತಿಗೆ ತದ್ಗುರುಜನಕ್ಕೆ ॥೩೪॥

ತಾಲುನಾಲಗೆಗಳುಂ ಕಪ್ಪಾಗಿ ಮೇದಿನಿಯ।
ಮೇಲೆ ಕಾಲಂಗುಲಿಗಳೋರಗೆಯೊಳೊಂದದಿರೆ।
ಬಾಲೆಗೀ ಲಕ್ಷಣಂ ಮುತ್ತೈದೆತನವಾಗಲರಿಯದು ವಿಧವೆಯಾದೊಡೆ॥
ಶೀಲಮಾಲಂಬಿಸಿ ತವರ್ಮನೆಯೊಳಿರ್ದನಿತು।
ಕಾಲಮಾಲಸ್ಯಮಿಲ್ಲದೆ ಸದಾಚಾರಕನು।
ಕೂಳೆಯಾಗಿರುತಿರ್ದು ದೇಹಮಂ ದಂಡಿಸಲ್ ಪತಿಲೋಕಮಂ ಪಡೆವಳು ॥೫೫॥

ವಿಟಗೋಷ್ಠಿಯೊಳ್ ಭೋಗಮಂ ಬಯಸಿ ಕಾಮಲಂ।
ಪಟೆಯಾಗಿ ಮೇಣರ್ಥಮಂ ಗಳಿಸಿ ಗರ್ವದಿಂ।
ಜಠರಮಂ ಪೊರೆಯುತ್ತೆ ಗರಿಯೊಗೆದುರಗಿವೊಲಿಹ ದುಷ್ಟವಿಧವೆಯರ ರತಿಯು॥
ಘಟಿಪುದಾಪಂಗವನುಮವಳುಮವಳಾಣ್ಮನುಂ।
ನಟೆಯಲ್ಲ ಮೂವರುಂ ಪತಿತರದರಿಂದೆ ಸಂ।
ಕಟದೊಳಂ ನೋಡಲಾಗದು ಪರಸ್ತ್ರೀಯರಂ ನೆರೆವೊಡುಕ್ಕಲಮಪ್ಪುದೆ ॥೫೬॥

ಗೃಹಕೃತ್ಯಮಂ ಬಿಟ್ಟು ನೆರೆಮನೆ ತವರ್ಮನೆಯೊ।
ಳಿಹಳೆಳೆಯರಂ ಚುಂಬಿಸುವಳೊಲಿದು ಪಾಡುವಳ್।
ಗಹಗಹಿಸಿ ಬರಿದೆ ನಗುವಳ್ ಬೀದಿಗರನ್ನೈದೆ ಬಾಗಿಲೊಳ್ ನೋಡುತಿಹಳು॥
ಬಹುಜನದ ಮುಂದೆ ಸುಳಿವಳ್ ನಾಡಮಾತಂ ಗ।
ಳಹುವವಳ್ ತರುವಲಿಗಳೊಡನಾಡುವಳ್ ತನ್ನ।
ಸಹಜಮಲ್ಲದೆ ಪಿರಿದಲಂಕರಿಸಿ ಕೊಂಬುವಳ್ ನಿಲ್ವಳೀ ಶಿಕ್ಷಿಸಿದೊಡೆ ॥೫೭॥

ನರ್ತಕಿಯ ನಾಪಿತೆಯ ಪರ್ಣವಿಕ್ರಯಿಯ ಪ್ರ।
ವರ್ತಕಿಯ ದಾಸಿಯ ಬುರುಂಡೆಯ ಕಪಾಲಿನಿಯ।
ಭರ್ತಾರನುಳಿದವಳ ಮಾರೆಗಾತಿಯ ಜಟಿಯ ಸೂತಕಿಯ ಸೈರಂಧ್ರಿಯ॥
ಕರ್ತವ್ಯದಿಂದಿನಿಬರೊಡನಾಡಿದೊಡೆ ಬಾಲೆ।
ಯಾರ್ತವೆ ದುರಾಚಾರಮಂ ಕಲಿವರದರಿಂ ಬು।
ಧರ್ತರುಣಿಯರ ನಡೆವಳಿಗೆ ಭಂಗಮಂಕುರಿಸದಂತೆ ಪಾಲಿಸವೇಳ್ವುದು ॥೫೮॥

ಪುರುಷಾಂತರಕ್ಕೆಳಸಿ ಪುಷ್ಪಶರತಾಪದಿಂ।
ಕರಗಿ ಕಾತರಿಸಿ ಮೆಲ್ಲನೆ ದೂತಿಯೊರ್ವಳಂ।
ಕರೆದೊಡಂಬಡಿಸಿ ಬೇಡಿದನಿತ್ತು ಸತ್ಕರಿಸಿ ಪೊತ್ತುವೇಳೆಗಳನರಸಿ॥
ನೆರೆಹೊರೆಯುರಿಯದಂತೆ ಪತಿಯಂ ಮರೆಸಿ ಮನೆಯ।
ಪರನೆಲ್ಲರಂ ಜೋಣಿದು ಮದನಕೇಳಿಗೆ ಸಂದು।
ಮರಳಿ ಮಾನಿನಿಯರಂತಿರಬಲ್ಲರವರೆ ಜಾರೆಯರವರನೋವಬಹುದೆ ॥೫೯॥

ಸೋಲ್ದನಂ ಕಂಡು ಕಣ್ಗೊನೆಗೊಳೆದು ನೋಟಮಂ ।
ಜೋಲ್ದುರುಬನೊಂದಿಸುವ ನೆವದಿಂದೆ ಕೈನೆಗಪಿ ।
ಸಾಲ್ದ ಮೇಲುದನೋಸರಿಸಿ ಮೊಲೆಗೆಲದ ಪೊಗರ್ದೋರಿ ಪುಸಿಲಜ್ಜೆಯಿಂದೆ ॥
ತೇಲ್ದವಳ ತೆರದಿಂದೆ ನಸುನಗೆಯ ಪಸರಿಸುತೆ ।
ಕಾಲ್ದೆಗೆಯದೊಯ್ಯನೊಯ್ಯನೆ ನಡೆವ ಭಂಗಿಯಂ ।
ನಾಲ್ದೆಸೆಗೆ ಕಾಣಿಸುವ ಮೈಸಿರಿಯ ಕಾಮಿನಿಯರವರೆ ಜಾರೆಯರೆನಿಪರು ॥೬೦॥

ಚಪಲೆ ಚಂಚರೆ ಚಾಟುವತಿ ಚಂಡಿ ಚಲವಾದಿ ।
ಕುಪಿತೆ ಕುತ್ಸಿತೆ ಕುಹಕೆ ಕುಜೆ ಕುಟಿಲೆ ಕುಲಗೇಡಿ ।
ಕಪಟಿ ಕಂಟಕಿ ಕಟುಕ ಕಡುದುಷ್ಟೆ ಕಲಹಾರ್ಥಿ ವಿರಸೆ ಪರವಶೆ ಪಾದರಿ ॥
ವಿಫಲೆ ವಿಹ್ವಲೆ ವಿಷಮೆ ವಿರಹಿ ವಿಪರೀತೆ ಮಿಗೆ ।
ತಪಿತೆ ತಸ್ಕರೆ ತವಕಿ ತವೆ ತಂದ್ರಿ ತಾಮಸಿಯೆ ।
ನಿಪ ವನಿತೆಯರ ನಿಜಕೆ ನಿಲಿಸಿ ನಿಶ್ಚೈಸಿದೊಡೆ ಬಳಿಕ ಬಳಲಿಕೆ ದಾರವೆ ॥೬೧॥

ಹಲವು ಮಾತೇನರಸ ಚಿತ್ರದೊಳ್ ಬರೆದ ಕೋ ।
ಮಲೆಯರಂ ನಂಬದಾರದು ನಿರುತಮೆನಲವರ ।
ಪೊಲಬುಗಂಡವರುಂಟೆ ಸಾಕದಂತಿರಲಿ ಪರಿಕಲ್ಪಿತವ್ರತ ಸಮಾಧಿ ॥
ಸಲೆ ತೀರ್ಥಯಾತ್ರೆ ಜಪತಪನಿಷ್ಠೆ ಬೇಕೆಂಬ ।
ವಿಲಗವಿಲ್ಲಾತ್ಮಪತಿಸೇವೆಯಂ ಪ್ರತಿದಿನದೊ ।
ಳಲಸವೆ ನೆಗಳ್ಚಿದೊಡೆ ಸತಿಯರ್ಗೆ ಕೀರ್ತಿಸುಗತಿಗಳಪ್ಪುವಿಹಪರದೊಳು ॥೬೨॥

ಭೂಪಾಲ ಕೇಳ್ ಧರ್ಮಸಾರಮಿದು ಜಗದೊಳ್ ಮ ।
ಹೀಪತಿಗಳರ್ಥಲೋಲುಪ್ತಿಯಿಂ ತಮ್ಮಯ ಸ ।
ಮೀಪದೊಳ್ ದ್ಯೂತರತರಂ ನಾಸ್ತಿಕರನೈದೆ ಪಿಸುಣರನಸೂಯಕರನು ॥
ಸೋಪಚಾರದೊಳಿರಿಸಿಕೊಂಡಿರುತಿರಲ್ ಪ್ರಜಾ ।
ಲೋಪಮಪ್ಪುದು ರಾಜ್ಯಮದರಿನಪಕೀರ್ತಿಯಿಂ ।
ಪಾಪದಿಂದರಸುಗಳ್ಗಿಹಪರಂ ಕಿಡುಗುಮಿದನರಿಯದಿರಬಹುದೆ ನೃಪರು ॥೬೩॥

ಆಚಾರಧರ್ಮದಿಂ ನಡೆಯಲರಿಯದ ವಿಪ್ರ ।
ನೇ ಚಕ್ರಿಯಾಜ್ಞೆಯಂ ಮೀರಿದಪನವನಿಂದೆ ।
ನೀಚನೆ ಹರಿಪ್ರಿಯಂ ಮಾಧವನ ಪೂಜೆಗೆಯ್ಯದವಂಗೆ ಸುಗತಿಯುಂಟೆ ॥
ಈ ಚತುರ್ದಶ ಜಗದೊಳಂತಿರಲದಿನ್ನು ಸಲೆ ।
ಸೂಚಿಪೆಂ ನಿನಗೆ ಬೆಸಗೊಂಬುದೆನೆ ರಮೆ ನೆಲಸಿ ।
ಗೋಚರಿಪಳಾವನ ಮನೆಯೊಳೆಂದು ಭೂವರಂ ಕೇಳ್ದೊಡಾ ಮುನಿ ನುಡಿದನು ॥೬೪॥

ವತ್ಸ ಕೇಳಾದೊಡೀ ಧರೆಯೊಳಖಿಳಪ್ರಾಣಿ।
ವತ್ಸಲನ ಸತ್ಯಶೌಚಾನ್ವಿತನ ಮನೆಗೆ ಶ್ರೀ।
ವತ್ಸಲಾಂಛನನರಸಿ ತೊಡವೆನಿಪಳಾವಗಂ ಪತಿ ಪರಾಯಣೆಯಾಗಿಹ॥
ಸತ್ಸತಿಯುದೆಲ್ಲಿ ಮೇಣುಸ್ಮಖಾನಂಗವಿಕ।
ಸತ್ಸರೋಜಾಸ್ತ್ರಕಳುಕದ ಪುರುಷನೆಲ್ಲಿ ವಿಲ।
ಸತ್ಸಮುದ್ರಾತ್ಮಜೆ ಸರಾಗದಿಂದಲ್ಲಿ ಸುಸ್ಥಿರೆಯಾಗಿ ನೆಲಸಿರ್ಪಳು ॥ ೬೫ ॥

ರನ್ನದಿಂ ಧಾನ್ಯಮೆ ವಿಶೇಷಮೆಂದೊದವಿಸುವ।
ನನ್ನಮೇ ಕರಿಸದಿಂ ಕಡೆಯೆಂದು ವೆಚ್ಚಿಸುವ।
ನುನ್ನಿಸಲ್ ಬಾಲಕನುಮತಿಥಿಯುಂ ಸರಿಯೆಂದು ಸತ್ಕರಿಪನಾವನವನ॥
ತನ್ನ ತಾಯ್ತಂದೆ ಸೋದರ ಬಂಧು ಬಳಗಮಂ।
ಮನ್ನಿಸುವನಾವನಾತನ ಸದಾಚಾರಸಂ।
ಪನ್ನನಾವನವನ ಮಂದಿರದೊಳೈಶ್ವರ್ಯ ಲಕ್ಷ್ಮಿನೆಲೆಯಾಗಿರ್ಪಳು ॥ ೬೬ ॥

ಮಧುರವಾಣಿಯ ಕೃತಜ್ಞನ ದಾನಪರನ ಪರ।
ವಧುವಿನೊಲ್ಮೆಯ ಬೇಟಕೊಳಗಾಗದನ ಮಾನ।
ನಿಧಿಯೆನಿಸುವನ ತೀರ್ಥಸಂಗತನ ಸಲೆ ಕೂಟಸಾಕ್ಷ್ಯವಂ ನುಡಿಯದವನ॥
ವಿದಿತಕರ್ಮದ ಮಾಳ್ಕೆಯಂ ಮಾಜದಾತನ ವ।
ಸುಧೆಯೊಳಿಷ್ಟಾರ್ಥವಂ ತವೆ ನೆಗಳ್ಚುವನ ಬಹು।
ವಿಧದ ಧರ್ಮಂಗಳಂ ರಚಿಸುವನ ಮನೆಯೊಳಿಂದಿರೆ ಬಿಡದೆ ನೆಲಸಿರ್ಪಳು ॥ ೬೭ ॥

ಹೊಸ್ತಿಲೊರಳೊನಕೆಗಳ ಮೇಲೆ ಕುಳ್ಳಿರ್ಪವನ।
ಮಸ್ತಕವನೆರಡುಕಯ್ಯಿಂ ತುರಸಿಕೊಂಬವನ।
ವಿಸ್ತರದ ಜೂಜುಗಳ್ಗೆಳಸುವನ ಪಿರಿಸುಂಬುವನ ನಿಂದು ನೀರ್ಗುಡಿವನ॥
ಅಸ್ತಮಯದುದಯಕಾಲದೆ ನಿದ್ರೈಗೈವನಾ।
ತ್ಮಸ್ತುತಿಯ ಪರನಿಂದೆಯುವನ ಸಾಧಿಸಿ ಪರರ।
ವಸ್ತುವಂ ಕಳುವನ ನಿರುದ್ಯೋಗದವನ ಸಿರಿ ತೊಲಗಿದಲ್ಲದೆ ಮಾಣ್ಬಳೆ ॥ ೬೮ ॥

ಜಡನ ಮೂರ್ಖನ ಶಠನ ತಾಮಸನ ನಿಷ್ಠುರದ।
ನುಡಿಯುವನ ಪಿಸುಣನ ಕೃತಘ್ನನ ಕರುಬನ ಬಾ।
ಯ್ಬಡಿಕನ ಕುಚೇಷ್ಟಕನ ಕಾಮುಕನ ಹಿಂಸಕನ ಡಾಂಭಿಕನ ಪಾಷಂಡಿಯ॥
ಕಡುಕೋಪದವನ ಬಹುಭಕ್ಷಕನ ಖೂಳನನ।
ಧೃಢನ ಕುತ್ಸಿತನ ಕುಹಕನ ದುರಾಚಾರದಿಂ।
ನಡೆವವನ ವಿಶ್ವಾಸಘಾತಕನ ಪಾತಕನ ಲಕ್ಷ್ಮಿತೊಲಗದೆ ಮಾಣ್ಬಳೆ ॥ ೬೯ ॥

ಈ ಪರಿಯೊಳಾ ಮುನಿ ಸಮಸ್ತಧರ್ಮಂಗಳಂ।
ಭೂಪತಿಗೆ ವಿಸ್ತರಿಸಿ ಬಳಿಕ ಮಖಕಾಲಂ ಸ।
ಮೀಪವಾದಪುದಿನ್ನು ಹಿಮಗಿರಿಯೊಳಿರ್ಪ ಧನಮಂ ತರಿಸವೇಳ್ಪುದೆಂದು॥
ಆ ಪರಾಶರಸುತಂ ನೇಮಿಸಿದೊಡರಸಂ ಚ।
ಮೂಪರಂ ಕರೆಸಿ ಪೊರಮಟ್ಟು ನಡೆಗೊಂಡಂ ಪ್ರ।
ತಾಪದಿಂ ಪಯಣಪಯಣಕೆ ಬಿಡುವ ಬೀಡುಬೀಡುಗಳ ಸನ್ನಾಹದಿಂದೆ ॥೨೦॥

ಸವ್ಯಸಾಚಿಪ್ರಮುಖರೊಡಗೂಡಿ ಹಿಮಗಿರಿಯ।
ದಿವ್ಯಸ್ಥಳಂಗಳಂ ನೋಡುತೊಲವಿಂದೆ ವೇ।
ದವ್ಯಾಸಮುನಿವೆರಸಿ ವಿಪ್ರರೊಡಗೂಡಿ ಮರುತಾಧ್ವರದೊಳಂದು ಬಿಸುಟ॥
ದ್ರವ್ಯದೆಡೆಗೈತಂದು ಗಂಧಾಕ್ಷತೆಗಳಿಂದೆ।
ನವ್ಯಕುಸುಮೋತ್ಕರಸುಧೂಪದೀಪಂಗಳಿಂ।
ಗವ್ಯಮಧುಶರ್ಕರಾದ್ಯುಪಹಾರದಿಂ ನೃಪಂ ಧನದನಂ ಪೂಜಿಸಿದನು ॥೨೧॥

ಅಷ್ಟದಿಕ್ಪಾಲರ್ಗೆ ಪೂಜೆಯಂ ಮಾಡಿ ಚೌ।
ಷಷ್ಟಿಯೋಗಿನಿಯರ್ಗೆ ಬಲಿಗೊಟ್ಟು ಭೂತಸಂ।
ತುಷ್ಟಿಯಪ್ಪಂತೆ ಕುರಿಕೋಣಂಗಳಂ ಪೊಯ್ಸಿ ಬಣ್ಣಗೂಳಂ ಪಸರಿಸಿ॥
ದೃಷ್ಟವಾದಖಿಳಧನಮಂ ತೆಗೆಸಿ ಭೂಪನು।
ತ್ಕೃಷ್ಟಮಖಮಿನ್ನು ಸಂಪೂರ್ತಿಯಾದಪುದೆಂಬ।
ಹೃಷ್ಟತೆಯೊಳರ್ಥಮಂ ಸಾಗಿಸಿದನಿಭಪುರಿಗೆ ಪೆರ್ಪೊರೆಗಳಿಟ್ಟಣಿಸಲು ॥೨೨॥

ಪೊರೆಯಾಳ್ಗಳೊಟ್ಟೆ ಪೇಸರಮೆತ್ತು ಬಂಡಿಗಳ್।
ನೆರೆಕನಕಭಾರದಿಂದ್ಯೆದಿದುವು ಮಾರ್ಗದೊಳ್।
ತೆರೆಪಿಲ್ಲಮೆನೆ ಕೋಟಿಸಂಖ್ಯೆಯಿಂ ಕೃಷ್ಣಮುನಿಸಹಿತ ನೃಪನುತ್ಸವದೊಳು॥
ಮೆರೆವ ನಿಜನಗರಪ್ರವೇಶಮಂ ಮಾಡುತ।
ಕ್ಕರೊಳಂದು ಭೀಮನಂ ಕಳುಹಿದಂ ದೇವಪುರ।
ವರೆಯ ಲಕ್ಷ್ಮೀಶನಂ ದ್ವಾರಕಿಗೆ ಪೋಗಿ ಬಿಜಯಂಗೈಸಿ ತಪ್ಪುದೆಂದು ॥೨೩॥

ಆರನೆಯ ಸಂಧಿ

ಸೂಚನೆ ॥ ಸಿಂಧುರನಗರದಿಂದೆ ನಡೆತಂದು ಪವನಜಂ ।
ಸಿಂಧುರಂಗದೊಳೆಸೆವ ದ್ವಾರಕೆಯೊಳೈದೆ ಮುಳಿ ।
ಸಿಂ ಧುರದೊಳಸುರರಂ ಗೆಲ್ವವನನಾರೋಗಣೆಯ ಸಮಯದೊಳ್ ಕಂಡನು ॥

ಎಲೆ ಮಹೀಶ್ವರ ನಾಗನಗರಮಂ ಪೊರಮಟ್ಟು ।
ನಿಲಸುತಂ ಪಯಣಗತಿಯೊಳ್ ಬರುತೆ ಕಂಡನಘ ।
ಕುಲದ ಪವಿಘಾತ ಭಯ ಶಮನೌಷಧಿಯನತುಲಕಲ್ಲೋಲನಿರವಧಿಯನು॥
ಜಲಜಂತು ಚಾರಣವಿಧಿಯನಿಳಾಮಂಡಲದ ।
ಬಳಸಿನ ಪರಿಧಿಯ ನಪಹೃತಗಣಿತಸುಧಿಯ ನವಿ ।
ರಳಘೋಷದುದಧಿಯ ನನೇಕರತ್ನಪ್ರತತಿಗಳ ನಿಧಿಯನಂಬುಧಿಯನು ॥ ೧ ॥

ಮುನಿ ಮುನಿದು ಪೀರ್ದುದಂ ರಾಜವಂಶಕುಠಾರ ।
ಕನ ಕನಲ್ಕೆಗೆ ನೆಲಂಬಿಟ್ಟುದಂ ರಘುಜರಾ ।
ಮನ ಮನದ ಕೋಪದುರುಬೆಗೆ ಬಟ್ಟೆಗೊಟ್ಟುದಂ ಬಡಬಾನಲಂ ತನ್ನೊಳು ॥
ದಿನದಿನದೊಳವಗಡಿಸುತಿರ್ಪುದಂ ಬಹಳ ಜಡ ।
ತನ ತನಗೆ ಬಂದುದಂ ಭಂಗಮೆಡೆಗೊಂಡುದಂ ।
ನೆನೆನೆನೆದು ನಿಟ್ಟುಸಿರ್ವಿಟ್ಟು ಸುಯ್ವಂತುದಧಿ ತೆರೆವೆರ್ಚುಗೆಯೊಳಿರ್ದುದು ॥ ೨ ॥

ಘುಳಿಘುಳಿಸುತೇಳ್ವ ಬೊಬ್ಬುಳಿಗಳಿಂ ಸುಳಿಗಳಿಂ ।
ಸೆಳೆ ಸೆಳೆದು ನಡೆವ ಪೆರ್ದೆರೆಗಳಿಂ ನೊರೆಗಳಿಂ ।
ಪೊಳೆವ ತುಂತುರಿನ ಸೀರ್ಪನಿಗಳಿಂ ಧ್ವನಿಗಳಿಂ ವಿವಿಧರತ್ನಂಗಳಿಂದೆ ॥
ಒಳಕೊಳ್ವ ನಾನಾಪ್ರವಾಹದಿಂ ಗ್ರಾಹದಿಂ ।
ದಳತೆಗಳವಡದೆಂಬ ಪೆಂಪಿನಿಂ ಗುಂಪಿನಿಂ ।
ದಳದ ಪವಳದ ನಿಮಿರ್ದ ಕುಡಿಗಳಿಂ ತಡಿಗಳಿಂದಾ ಕಡಲ್ ಕಣ್ಗೆಸೆದುದು ॥ ೩ ॥

ಪಾಕಶಾಸನನ ಸಕಲೈಶ್ವರ್ಯ ಸಂಪದಕೆ ।
ಬೇಕಾದ ವಸ್ತುವಂ ಪಡೆದಿತ್ತೆನ್ನವ ।
ರ್ಗೆಕುಲಿಶಧರನುಪಕೃತಿಯನೆಸಗನದರಿಂದಮಿನ್ನಿಳೆಗೆ ಮುನ್ನಿನಂತೆ ॥
ಜೋಕೆ ಮಿಗೆ ತೆರಳಿ ನೀನೆಂದು ಸಂತೈಸಿ ರ ।
ತ್ನಾಕರಂ ಕಳುಹಿದ ಕುಲಾದ್ರಿಗಳ ಪರ್ಬುಗೆಗ ।
ಳೇ ಕರಮಿವಹುವೆನಲ್ ಪೆರ್ದೆರೆಗಳೆದ್ದು ಬರುತಿರ್ದವು ಮಹಾರ್ಣವದೊಳು ॥ ೪ ॥

ಶಿವನಂತೆ ಗಂಗಾಹಿಮಕರಾವಹಂ ರಮಾ ।
ಧವನಂತೆ ಗೋತ್ರೈಕಪಾಲಕಂ ಪಂಕರುಹ ।
ಭವನಂತೆ ಸಕಲಭುವನಾಶ್ರಯಂ ಶಕ್ರನಂತನಿಮಿಷನಿಕರಕಾಂತನು ॥
ದಿವಸಾಧಿಪತಿಯಂತನಂತರತ್ನಂ ರಾಜ ।
ನಿವಹದಂತಪರಿಮಿತವಾಹಿನೀಸಂಗತನು ।
ಪವನಾಳಿಯಂತೆ ವಿದ್ರುಮಲತಾಶೋಭಿತಂ ತಾನೆಂದುದಧಿ ಮೆರೆದುದು ॥ ೫ ॥

ಚಿಪ್ಪೊಡೆದು ಸಿಡಿವ ಮುತ್ತುಗಳಲ್ಲದಿವು ಮಗು ।
ಳ್ದುಪ್ಪರಿಸುವೆಳಮೀನ್ ಬಿದಿರ್ವ ಶೀಕರಮಲ್ಲ ।
ಮೊಪ್ಪುವ ಸುಲಲಿತಶಂಖದ ಸರಿಗಳಲ್ಲದಿವು ಬೆಳ್ನೊರೆಗಳೊಟ್ಟಿಲಲ್ಲ ॥
ತಪ್ಪದೊಳಗಣ ರನ್ನವೆಳಗಲ್ಲದಿವು ತೊಡ ।
ರ್ದಿಪ್ಪ ಕೆಂಬವಳಮಲ್ಲಿವು ಪಯೋನಿಧಿಯು ಕೆನೆ ।
ಯೊಪ್ಪಮಲ್ಲದೆ ನೀರ್ ಮೊಗೆಯಲಿಳಿವ ಮೇಘಂಗಳಲ್ಲೆನಿಸಿದುವು ಕಡಲೊಳು ॥೬॥

ಕ್ರೂರ ಕರ್ಕಟಕ–ಕಟಕಂ ಕಮಠಮಠಮಿಡಿದ ।
ನೀರಾನೆಗಳ್ ನೆಗಳ್ದೆಡೆ ಮುದಮುದಯಿಪ ಶಾ ।
ಲೂರಕುಲರಾಜಿ ರಾಜಿಪ ಗೃಹಂ ನಿಬಿಡ ಗಂಡೂಪದ ಪದಂ ಪೆರ್ಚಿದ ॥
ಘೋರ ಸಮುದಗ್ರದ ಗ್ರಾಹಭವ ಭವನಮುಂ ।
ಭೂರಿಭೀಕರ ಮಕರಮಹಿ ತಿಮಿತಿಮಿಂಗಿಲ ಕ ।
ಠೋರತರ ರಾಜೀವ ಜೀವಪ್ರತತಿ ವಾಸವಾ ಸಮುದ್ರದೊಳೆಸೆದುದು ॥ ೭ ॥

ಸಾಳಿದೊಂದು ಮೀನ್ನುಂಗಿತಾ ಮೀನನಾ ।
ಗಳೆ ನುಂಗಿತೊಂದು ಮೀನಾ ಮೀನ ನುಂಗಿದುದು ।
ಬಳಿಕೊಂದು ಮೀನದಂ ಮತ್ತೊಂದು ಮೀನ್ನುಂಗಿತಾ ಮೀನ ನುಂಗಿತೊಂದು ॥
ತೊಳಲುತೊಂದೊಂದನೊಂದಿಂತು ನುಂಗಲ್ ತಿಮಿಂ ।
ಗಿಳನೆಲ್ಲಮಂ ನುಂಗುತಿರ್ಪುದೆನೆ ಬೆದರಿ ಮೀ ।
ನ್ಗಳೆ ತಿರುಗುತಿರ್ದುವೆರಕೆಗಳೊಡನೆ ಮುಂಪೊಕ್ಕ ಗಿರಿಗಳೆಡೆಯಾಡುವಂತೆ ॥ ೮ ॥

ಆ ಮಹಾಂಭೋಧಿಯಂ ನೋಡಿ ಹರ್ಷಿತನಾಗಿ ।
ಭೀಮಸೇನಂ ಬಳಿಕ ನಲವಿನಿಂ ದ್ವಾರಕೆಯ ।
ಸೀಮೆಗೈತಂದು ನಗರದ್ವಾರಮಂ ಪೊಕ್ಕು ಬರೆ ರಾಜಮಾರ್ಗದೊಳಗೆ ॥
ಸಾಮಜಗಿರಿಯ ಹಯತರಂಗದ ನೆರವಿದೊರೆಯ ।
ಚಾಮರ ಶಫರಿಯ ಬೆಳ್ಗೊಡೆನೊರೆಯ ಭೂಷಣ ।
ಸ್ತೋಮಮಣಿಗಣದ ಕಳಕಳರವದ ಜನದ ಸಂದಣಿಯ ಕಡಲಂ ಕಂಡನು ॥೯॥

ಪೆಚ್ಚಿದಿಂಗಡಲೂರ್ಮಿಮಾಲೆ ಮಾಲೆಗಳೆಡೆಯೊ ।
ಳುಚ್ಚಳಿಸಿ ಹೊಳೆಹೊಳೆವ ಮರಿಮೀನ್ಗಳೆನೆ ತೊಳಗು ।
ವಚ್ಚಬೆಳ್ಮುಗಿಲೊಡ್ಡುಗಳ ತರತರಂಗಳೊಳ್ ತಲೆದೋರ್ಪ ಮಿಂಚುಗಳೆನೆ ॥
ಅಚ್ಚರಿಯೆನಿಪ ರಾಜಮಾರ್ಗದಿಕ್ಕೆಲದೊಳಿಹ ।
ನಿಚ್ಚಳದ ಕರುಮಾಡದೋರಣದ ನೆಲೆನೆಲೆಯೊ ।
ಳೊಚ್ಚೇರೆಗಂಗಳೆಳವೆಂಗಳ ಕಟಾಕ್ಷದ ಮರೀಚಿಗಳ್ ಸೊಗಯಿಸಿದುವು ॥ ೧೦ ॥

ವಿರಚಿಸಿದ ಕರುವಾಡದಿಕ್ಕೆಲದ ನವರತ್ನ ।
ಪರಿಖಚಿತ ಕನಕತೋರಣಮೊಪ್ಪಿದುದು ರಜತ ।
ಗಿರಿಶಿಖರಮಂ ಸಾರ್ದ ಶುಭ್ರಾಭ್ರದೊಳ್ ಮೂಡಿದಮರೇಂದ್ರಚಾಪದಂತೆ ॥
ಪರಿಪರಿಯ ಗುಡಿ ಕಳಸ ಕನ್ನಡಿ ಪತಾಕೆ ಸೀ ।
ಗುರಿಚವರಿಗಳ ಸಾಲ್ಗಳೆಸೆದುವು ಗಗನಮೆಂಬ ।
ಕರಿಯ ಸಿಂಗರಿಸಿದರೊ ಪರಿಮಳೋತ್ಸವಕೆ ಪೊರಮಡುವನಿಲರಾಜಂಗೆನೆ ॥ ೧೧ ॥

ಹರ್ಮ್ಯಾಗ್ರದೊಳ್ ವಿರಾಜಿಪ ಚಂದ್ರಶಾಲೆಗಳ ।
ನಿರ್ಮಲಸ್ಥಳದೊಳೇಕಾಂತದಿಂ ತನುಲತೆಯ ।
ಘರ್ಮಶ್ರಮಂಗಳೆವ ಸೊಕ್ಕು ಜೌವನದ ನೀರಜಗಂಧಿಯರ ಕೊಬ್ಬಿದ ॥
ಪೆರ್ಮೊಲೆಗಳೆಡೆಯ ಚಂದನದಣ್ಪ ಮಲ್ಲಿಗೆಯ।
ಲರ್ಮುಡಿಯ ತನಿಗಂಪ ನೆರವಿ ನೆರವಿಗೆ ತಂಬೆ ।
ಲರ್ವೆಲ್ಲಮೆಲ್ಲನೆ ಪರಪುತಿರ್ದುದಾ ರಾಜಮಾರ್ಗದೊಳ್ ಪಿಸುಣರಂತೆ ॥ ೧೨ ॥

ದುರ್ಗಮ ಜಡಾಶ್ರಯಮನುಗ್ರಜಂತುಗಳ ಸಂ ।
ಸರ್ಗಮಂ ಬಿಟ್ಟು ಮುಕ್ತಾಳಿ ವಿದ್ರುಮ ರತ್ನ ।
ವರ್ಗಂಗಳಿಲ್ಲಿ ಸೇರಿದುವೆಂದೊಲೊಪ್ಪಿದವನರ್ಘ್ಯಮಣಿವಸರಂಗಳು ॥
ಭರ್ಗಸಖನೊಲಿದು ನವನಿಧಿಗಳಂ ಧಾತ್ರಿಯು ಪ ।
ನರ್ಗೆ ವಿಸ್ತರಿಸಿ ತೋರಿಸಿದನೆನೆ ಚಿನ್ನವರ ।
ದರ್ಗುಡಿಸಿಗೊಂಡಿರ್ಪ ರಾಸಿಪೊನ್ಗಳ್ ಪಿಂಗದಂಗಡಿಗಳೆಸೆದಿರ್ದುವು ॥ ೧೩ ॥

ದಾನವಧ್ವಂಸಿಗೀ ದ್ವಾರಕಾಪುರಿ ರಾಜ ।
ಧಾನಿ ಗಡ ಸಕಲವೈಭವದೊಳಾತನ ರಾಣಿ ।
ತಾನಿರದಿಹಳೆ ಲಕ್ಷ್ಮಿ ಮೇಣವಳುಮರಸಿಯಲ್ಲವೆ ಧರಣಿ ತನ್ನೊಳಿರ್ದ ॥
ನಾನಾ ಸುವಸ್ತುಗಳನೊದವಿಸದಿಹಳೆ ಚೋದ್ಯ ।
ಮೇನೆನೆ ವಣಿಗ್ವಾಟಪಂಕ್ತಿಗಳ್ ಶೋಭಾಯ ।
ಮಾನವಾದುವು ರಾಜಮಾರ್ಗದೊಳ್ ಬಹಳ ಧನಸಂಪತ್ಸಮಾಜದಿಂದೆ ॥ ೧೪ ॥

ಸವಿಯೆ ಪ್ರಿಯರಾಗಮದ ರಾಗಮದರಾಗ ಮದ ।
ನವಿಲಾಸವೆಂದು ತಾಂಬೂಲಮಂ ತೋರ್ಪರ್ ಮು ।
ಡಿವೊಡೆ ಬೇಕಾದಲರ್ಕಾದಲರ್ಕಾದಲಕ್ಕಂಗಜಾಹವದೊಳೆಂದು ॥
ನವಸುಗಂಧಾಮೋದಕುಸುಮಂಗಳಂ ತೋರಿ ।
ಸುವರೊಂದುವೇಕಾಂತಕಾಂತಕಾಂತರನೊಲಿಸ ।
ಲಿವು ಒಲ್ಲುವೆಂದು ಪರಿಮಳದ ಕರಡಿಗೆಗಳಂ ತೋರ್ಪರ್ ಪಲರ್ ವಿಟರ್ಗೆ ॥೧೫॥

ನಸುನಗೆಯೊಳರೆವಿರಿದ ಮಲ್ಲಿಗೆಯನುರೆಪೊಳೆವ ।
ದಶನದೊಳ್ ಕುಂದಮಂ ಮೊಗದೊಳರವಿಂದಮಂ ।
ಮಿಸುಪ ನಳಿತೋಳೊಳ್ ಶಿರೀಷಮಾಲೆಯನೆಸೆವನಾಸದೊಳ್ ಸಂಪಗೆಯನು ॥
ಎಸಳ್ಗಣ್ಣೊಳುತ್ಪಲವನುಗುರ್ಗಳೊಳ್ ಕೇತಕಿಯ ।
ನೊಸೆದಿರಿಸಿ ಕೊಂಡುಳಿದಲರ್ಗಳಂ ಮಾರ್ವೊಲ್ ।
ಕುಸುಮದ ಪಸರದೊಳೊಪ್ಪಿದರಲ್ಲಿ ಪೂವಡಿಗವೆಣ್ಗಳದನೇವೇಳ್ವೆನು ॥೧೬॥

ಕಬ್ಬುವಿಲ್ ತುಂಬಿವೆದೆ ಪೂಸರಲ್ ಪೂಣ್ದನಲ್ ।
ನಿಬ್ಬರಮಿದೆಂದು ಮದನಂ ಮಾಲೆಗಾರ್ತಿಯರ ।
ಹುಬ್ಬೆಂಬ ಚಾಪಮಂ ಕುರುಳೆಂಬ ನಾರಿಯಂ ಕಣ್ಣೆಂಬ ಕೂರ್ಗಣೆಯನು ॥
ಉಬ್ಬರದ ಸಾಹಸದೊಳಳವಡಿಸಿಕೊಂಡು ಬಿಡ ।
ದಬ್ಬರಿಸಿ ಸೋವಿ ತಂದವರ ಬಲ್ಮೊಲೆಯೆಂಬ ।
ಹೆಬ್ಬಟ್ಟದೆಡೆಯಿರುಬಿನೊಳ್ ಕೆಡಪುತಿಹನಲ್ಲಿ ವಿಟ ಪಕ್ಷಿಮೃಗಕುಲವನು ॥೧೭॥

ಮಲ್ಲಿಗೆಯಲರ್ವಿಡಿದು ಕೆಂಜಾದಿಯೆಂದೀವ ।
ರುಲ್ಲಾಸದಿಂದೆ ನೀಲೋತ್ಪಲವನೆಳನಗೆಯ ।
ಸೊಲ್ಲಿಂದೆ ಕುಮುದಮೆಂದುಸಿರುವರ್ ಸುರಹೊನ್ನೆಯಲರ ಮಾಲೆಯನೊಪ್ಪುವ ॥
ಸಲ್ಲಲಿತ ಕಾಯದ ಸರಿಸಕೆತ್ತಿ ಸುರಗಿಯೆಂ ।
ದೆಲ್ಲರ್ಗೆ ತೋರಿಸುವರರುಣ ತಾಮರಸಮಂ ।
ಚೆಲ್ಲಗಣ್ಗೊನೆಯೊಳೀಕ್ಷಿಸಿ ಪುಂಡರೀಕಮೆಂದೆಚ್ಚರಿಪರೆಳವೆಣ್ಗಳು ॥ ೧೮ ॥

ಪಸರದೊಳ್ ಮಾರ್ವಲರ್ಗಳ ಸರಂಗಳ್ಗೆ ಸೊಗ ।
ಯಿಸುವ ಸುಯ್ಯೆಲರ ಕಂಪಿಂದೆ ಕಂಪೇರಿಸುವ ।
ರೊಸೆದು ಕೋಮಲದ ತನುವಲ್ಲರಿಯ ಸೊಂಪಿಂದೆ ಸೊಂಪುದೋರಿಸುತಿರ್ಪರು ॥
ಲಸದವಯವಂಗಳಾಕೃತಿಯ ಚೆಲ್ವಿಕೆಯಿಂದೆ ।
ಪೊಸತೆನಿಪ ಚೆಲ್ವಿಕೆಯನೆಯ್ದೆ ನಲಪಿಂದೆ ಕಾ ।
ಣಿಸುವರಲ್ಲಿಯ ಮಾಲೆಗಾರ್ತಿಯರ್ ಮದನಶರಮೂರ್ತಿಯರ್ ವಿರಹಿಗಳ್ಗೆ ॥೧೯॥

ನಾನಾಸುವಸ್ತುಗಳ ವಿಸ್ತರವನೊಲಿದು ಪವ ।
ಮಾನಾತ್ಮಜಂ ನೋಡುತ್ಕೈತರಲ್ ಮುಂದೆ ಗಣಿ ।
ಕಾ ನಾರಿಯರ ಸದನಪಙ್ತಿಗಳ ಲೋವೆಗಳ ಸಾರ್ಮೆರೆದುವಿಕ್ಕೆಲದೊಳು ॥
ಏನಾದೊಡಂ ಮುನಿಮೃಗಾವಳಿಯ ಬೇಂಟೆಯಂ ।
ತಾನಾಡಲೆಂದು ಸಿಂಗರದ ಪೇರ್ಗಾಡಿನೊಳ್ ।
ಮೀನಾಂಕನೃಪತಿ ಕಟ್ಟಿಸಿದ ಬೆಳ್ಳಾರಂಗಳಾಗಬೇಕೆಂಬಂತಿರೆ ॥ ೨೦ ॥

ಘನಕುಚದ್ವಯಕೆ ಲೋಚನಯುಗಕೆ ಸೊಗಯಿಸುವ ।
ತನುಮಧ್ಯಕಿಂಪಾದನುಣ್ದೊಡೆಗೆ ಪಡಿಗಟ್ಟು ।
ವನಿತು ಸೊಬಗುಳ್ಳ ವಸ್ತುಗಳನಂಬುಜಭವಂ ಭುವನದೊಳ್ ಕಾಣೆನೆಂದು ॥
ಜನಮರಿಯೆ ಪೆರ್ಗವತೆ ಸೇರೆ ಪಿಡಿ ಕರಭಂಗ ।
ಳೆನಿಪಿವರೊಳಭಿನಯಿಸಿ ತೋರಿಸಲ್ ಮೃದುಪಾಣಿ ।
ವನಜಮುಂ ಸೃಷ್ಟಿಸಿದನೆಂಬ ಚೆಲ್ವಿನ ಕೋಮಲೆಯರಲ್ಲಿ ಕಣ್ಗೆಸೆದರು ॥ ೨೧ ॥

ಗುರುಕುಚದ ಭರಣಿ ಸುಂದರಗಜಾರೋಹಿಣಿ ಮ ।
ಧುರಕಾಮಕೇಳೀರಸಾರ್ದ್ರೆ ಸಮ್ಮೋಹನೋ ।
ತ್ತರೆ ಸುರತ ತಂತ್ರವಿರಚಿತ ಹಸ್ತಚಿತ್ತೆ ಹ್ರಸ್ವಾತಿವರ್ತುಳಸುಕಂಠ ॥
ವರಬಾಹುಮೂಲೆ ಮಣಿಭೂಷಣಶ್ರವಣೆ ವಿ ।
ಸ್ತರಗುಣಾಪೂರ್ವೆಯೆನಿಸುವ ಬಾಲಿಕೆಯರಲ್ಲಿ ।
ಪರಿಶೋಭಿಸಿದರೆಸೆವ ನಕ್ಷತ್ರಗಣದಂತೆ ಮೊಗಸಸಿಯ ಸೇರುವೆಯೊಳು ॥ ೨೨ ॥

ಅಡಿಯುಮಮಲಾಸ್ಯಮುಂ ಕಮಲಮಂ ಕಮಲಮಂ ।
ನಡೆಯುಮೆಳವಾಸೆಯುಂ ನಾಗಮಂ ನಾಗಮಂ ।
ಕಡುಚೆಲ್ವಪಾಣಿಯುಮಧರಮುಂ ಪ್ರವಾಳಮಂ ಲಲಿತಪ್ರವಾಳಮಣಿಯಂ ॥
ತೊಡೆಯುಮೆಸೆವಕ್ಷಿಯುಂ ಬಾಳೆಯಂ ಬಾಳೆಯುಂ ।
ನಡುವುಂ ಸುವಾಣಿಯುಂ ಹರಿಯುಮಂ ಹರಿಯುಮಂ ।
ಬಿಡದೆಪೋಲ್ತಿರೆ ಮೆರೆವ ಕಾಂತೆಯರ್ ನೀಲಾಳಕಾಂತೆಯರ್ ಸೊಗಯಿಸಿದರು
॥ ೨೩ ॥

ನಾಗರಿಪುಮಧ್ಯಮುರ್ವಸಿಯ ನಡುವಿಂಗೆ ಸರಿ ।
ಯಾಗಬಲ್ಲುದೆ ಪೊಸವಸಂತೋತ್ಸವದೊಳುಲಿವ ।
ಕೋಗಿಲೆಯ ಸರ ಮೇನಕೀನಿತಂಬಿನಿಯ ನುಣ್ದನಿಗೆ ಪಾಸಟಿಯಪ್ಪುದೇ ॥
ಪೂಗಣೆ ವಿಲಾಸದಾರಂಭೆಯ ವಿರಾಜಿಸುವ ।
ಸೋಗೆಗಣ್ಗೆಣೆಯಹುದೆ ನೋಡೆಂದು ಪೊಗಳ್ದನನು ।
ರಾಗದಿಂದೊರ್ವಳಂ ವಿಟನಪ್ಸರಸ್ತ್ರೀಯರಂ ಪೆಸರಿಸುವ ನೆವದೊಳು ॥ ೨೪ ॥

ಸುನಿಮೇಷ ಮೀನಚಾಪಲನೇತ್ರೆ ಚಕ್ರೋನ್ನತ ।
ಘನಕುಂಭಕುಚೆ ಮಕರಕೇತು ವರಮಾತುಲಾ ।
ನನೆ ಸಿಂಹಮಧ್ಯೆ ವೃಷಭಾಂಕವೈರಿಯ ಪಟ್ಟದಾನೆ ಕನ್ಯಾಕುಲಮಣೀ ।
ಮನಸಿಜ ಶಶಾಂಕ ಕರ್ಕಟಾಚೇಳಂಗುಡುವ ।
ತನಿಸೊಬಗುವಡೆದ ಸನ್ಮೋಹನದ ಕಣಿಯೆ ಬಾ ।
ಯೆನುತೊರ್ವನೀರೆ ಸಖಿಯಂ ಕರೆದಳೀರಾರುರಾಶಿಯಂ ಪೆಸರಿಪವೊಲು ॥೨೫॥

ಜೀಡ ಪೂರ್ವಸ್ನೇಹಮಿನ್ನು ದಾಕ್ಷಿಣ್ಯಮಂ ।
ಮಾಡದಿರ್ ನಿನಗಪರವಯಸಾದೊಡೊರ್ವರುಂ ।
ನೋಡರರಿದಿರುತ್ತರಂಗುಡು ಬಿಡಿಸು ವಾಸವಂ ನುಡಿದ ಕಾಲಂ ನಡೆಯದು ।
ಕೂಡಿರ್ದ ಪಾಶಿಯನುಬಂಧವಂ ಪರಿ ಧನದ ।
ಕೋಡರೆತನಂ ನೂಕು ಸಾಕೆಂದು ಬುದ್ಧಿಯಂ ।
ಜೋಡಿಸಿದಳೊರ್ವಳಣುಗಿಗೆ ನಾಲ್ಕು ದೆಸೆಯಾಣ್ಮರಂ ಪೆಸರಿಸುವ ನೆವದೊಳು॥೨೬॥

ಮೊಳೆ ಮೊಲೆಯೊಳೆಸೆವ ಸಸಿ ವದನದೊಳ್ ಕುಡಿ ನೋಟ ।
ದೊಳೆ ಪರ್ಬು ತೋಳ್ಗಳೊಳ್ ಬೆಳೆದುಬ್ಬು ಜಘನದೊಳ್ ।
ಸೆಳೆ ನಡುವಿನೊಳ್ ಸುಳಿ ಕುರುಳ್ಗಳೊಳ್ ಸೊಗಯಿಸುವ ಮಡಲಿಡಿದ ಸೌಂದರ
ತಳಿರಡಿಗಳೊಳ್ಮುಗುಳ್ ನಗೆಯೊಳಲರಕ್ಷಿಯೊಳ್ । [ದೊಳು॥
ತಳೆದು ಸಲೆರಾಜಿಸುವ ತನುಲತೆಯೊಳೊಪ್ಪಿರ್ದ ।
ರೆಳವೆಣ್ಗಳೆಚ್ಚಪೊಸ ಜೌವನದೊಳಾವಗಂ ವಿಟಪೀವರಾಶ್ರಯದೊಳು ॥೨೭॥

ದಾನಸಾಮಜ ಭೇದನೋದ್ದಂಡದುಗ್ರ ಪಂ ।
ಚಾನನಂ ಗೆಲ್ವ ಚತುರೋಪಾಯಮಂ ಬಿಟ್ಟು ।
ತಾನಳ್ಕಿ ಬಳ್ಕಿ ಕಡುದೈನ್ಯದಿಂದೀಗ ಮುಗ್ಧಾಂಗವಂ ತಳೆದಿರ್ಪುದು ॥
ಪನಿದಟ್ಟರಿಯೆಂದು ವಿಟನೊರ್ವಳಂ ಕೇಳ್ದೊ ।
ಡಾ ನೀರೆ ನಗುತುಮಬಲಾಶ್ರಯದೊಳಿರೆ ಮೇರು ।
ಮಾನವನ ಕೈವಿಡಿತೆಗೊಳಗಪ್ಪುದೆಲೆ ಮರುಳೆ ನೀನರಿದುದಿಲ್ಲೆಂದಳು ॥೨೮॥

ಕಲಹಂಸಗಮನೆ ಪೂರ್ಣೇಂದುಮುಖಿ ಚಾರುಮಂ ।
ಗಳಗಾತ್ರಿ ಘನಸೌಖ್ಯಸುಂದರವಿಲಾಸಿನಿ ವಿ ।
ಮಲಗುರುಪಯೋಧರೆ ಸರಸಕವಿನುತಪ್ರಮದೆ ಮಲ್ಲಿಕಾಮಂದಸ್ಮಿತೆ ॥
ವಿಲಸದ್ಭುಜಂಗಸಂಗತೆ ಮದನಕೇತು ಚಂ ।
ಚಲನೇತ್ರೆ ಕೇಳ್ ನಿನ್ನ ದೆಸೆಗಿದೆ ನವಗ್ರಹಂ ।
ಗಳ ಪೆಸರ ಬಲಮಿನ್ನು ಸೋಲ್ದಪುದು ನಿನಗೆ ಜನಮೆಂದಳೊರ್ವಳ್ ಸಖಿಯೊಳು
॥೨೯॥

ಇನ್ನು ಪಿಡಿಯದಿರು ಸಾಕಾಳ ಪನ್ನಗವೇಣಿ ।
ಮುನ್ನಾನೆ ಸಿಕ್ಕಿದುದ ನೋಡಿದಾ ಶಶಿವದನ ।
ಯೆನ್ನಮನೆಯೊಳ್ ಪೋದುದಕಟಕಟ ನಿನ್ನ ಕೈಗುದುರೆ ಪೊಂಗೊಡವೊಲೆಯುಳೆ ॥
ನಿನ್ನ ತೇರ್ವಾರ್ಪಜ್ಜೆಗೆಟ್ಟುದು ಸರೋಜಾಕ್ಷಿ ।
ನಿನ್ನಾಟ ಕಟ್ಟಿತರಸಂಚೆನಡೆಯುಳೆ ಪೋಗು ।
ನಿನ್ನ ಚದುರಂಗಮಂ ಗೆಲ್ದೆನೆಂದೊರ್ವನಾಡುತೆ ಮುನಿದನಿನಿಯಳೊಡನೆ ॥೩೦॥

ಅಚ್ಚಪವದಿಯ ಕಾಯು ಜೋಡ ಮೇಲೊತ್ತದೊಡೆ ।
ನಚ್ಚಿರ್ದ ಕೈಯ್ಯ ಕರಿದಿನ ಪಿಂಡ ಪಿಡಿಯದೊಡೆ ।
ಮೆಚ್ಚನಾಟಕೆ ಪಾರಿ ಬಂದ ಕೆಂಪಿನ ಹಣ್ಣನಂಡಲೆದು ಬಡದಿರ್ದೊಡೆ ॥
ಬಚ್ಚನಾಲಗೆಯ ಬೀಳೆಂದು ಹಾಸಂಗಿಯಂ ।
ಪಚ್ಚೆಯ ವಿದೂಷಕನುರುಳ್ಚಿದಂ ಬಾಲೆಯುರ ।
ಮೆಚ್ಚಿಸುವ ಕಟಕಿವಾತುಗಳ ಜಾಣ್ಮೆಗಳಿಂದೆ ಪಗಡೆಯಾಡುವ ನೆವದೊಳು ॥೩೧॥

ಕೈಗೆ ವೊಲೆಗಳ ಬಣ್ಣ ಕಣ್ಗೆ ಚೆಲ್ವಿನ ಸೊಂಪು ।
ಬಾಯ್ಗೆ ಚೆಂದುಟಿಯಿಂಪು ಕಿವಿಗೆ ನುಡಿಗಳ ನುಣ್ಪು ।
ನುಯ್ಗೆ ತನುವಿನ ಕಂಪು ಸೋಂಕಿಗಣ್ಪಿನ ತಂಪು ಚಿತ್ತಕೆ ಸೊಗಸಿನಲಂಪು ॥
ಮೈಗೊಟಿದೊಳ್ ಸಮನಿಪೆಳವೆಣ್ಗಳೆಸೆದಿರ್ದ ।
ರೈಗಣೆಗಳಿಸುಗೆಗಳುಕದ ಯೋಗಿನಿಕರಮಂ ।
ಸೈಗಡಪಲೆಂದಂಗಜಂ ಪೂಜೆಗೈವ ಸಮ್ಮೋಹನಾಸ್ತ್ರಂಗಳೆನಲು ೩೨ ॥

ಇವಳ ಮನಮೇಕಿವಳ ತುಂಗಕುಚದಂತಾದು ।
ದಿವಳ ಸನ್ಮಾನಮೇಕಿವಳ ನಡೆಯಂತಾದು।
ದಿವಳೊಲವಿದೇಕಿವಳ ಮಧ್ಯದಂತಾದುದಿರ್ದವೊಲೀಗಳೆನ್ನೆಡೆಯೊಳು ॥
ಇವಳ ನುಡಿಯೇಕಿವಳ ಕುರುಳಂದಮಾದುದಿಂ ।
ದಿವಳರಿಯಳಿವಳ ತಾಯ್ಬೋಧಿಸಿದಳಾಗಬೇ ।
ಕಿವಳನೆಂದವಳ ಕಣ್ಣಂ ತಾಗಿ ನಿಜಸಖನೊಳೊರ್ವನಾಲೋಚಿಸಿದನು ॥ ೩೩ ॥

ಸವಿನೋಟದೊಳ್ ಸಂಚು ನಗೆಯೊಳ್ ಪ್ರಪಂಚು ಸೊಗ।
ಟುವ ಬೇಟದೊಳ್ ಕೃತಕವೊಲವಿನೊಳ್ ಗತಕಮುನಿ ।
ಸುವ ಲಲ್ಲೆಯೊಳ್ ಕೊಂಕು ಬಗೆಯೊಳ್ ಕಳಂಕು ಸವಿಗಲಿಗೆಗಳೊಳ್ ಸಲೆ ವಂಚನೆ॥
ಸವಕದೊಳ್ ಪುಸಿಯುಳವು ತಕ್ಕೆಯೊಳ್ ಕಳವು ಮಿಾ ।
ಸುವ ನೇಹದೊಳ್ ನುಸುಳು ಕೂಟದೊಳ್ ಮಸುಳು ಸೇ ।
ಬವೆಯಾಗಿ ನೆಲೆಗೊಂಡ ಗಣಿಕೆಯರ ತಂಡಮಾ ತೆರದ ಚೆಲ್ವಂ ಪಡೆದುದು॥೩೪॥

ಅಕ್ಕಜವ ಮಾಡದಿರಿವಂ ನಿನ್ನಮೈವಳಿಗೆ ।
ತಕ್ಕನಲ್ಲಂ ನೀನೊಲಿವಗೊಡವೆಯೇಕಿನ್ನು ।
ಕಕ್ಕುಲಿತೆ ಬೇಡಿವನ ಕೂಟಮಂ ಪರಿದ ಬಳಿಕಿವನ ಲೇಸಾವುದುಂಟು ॥
ಠಕ್ಕಿಪೊಡೆ ಪೊನ್ನಿಲ್ಲದಾತನಿವನಾಗನಿದಿ ।
ರಿಕ್ಕದಿರ್ ಸಾಕೆಂದು ಮುಳಿಸಿನೊಳ್ ವಿಟನ ಚಿ ।
ತ್ತಕ್ಕೆಸೊಗಸೆನೆ ಸೂಳೆಗವಳ ದೂತಿಕೆ ನುಡಿದಳವನ ಜರೆದು ಪೊಗಳ್ವೊಲು ॥೩೫॥

ತಾಂ ತವೆ ಕೃತಾಂತರಿಪುನೇತ್ರದಿಂದುರಿದ ವೃ ।
ತ್ತಾಂತಮಂ ನೆನೆಯದೆ ಲತಾಂತಶರನಗಲ್ದವನಿ
ತಾಂತರ್ ನಿತಾಂತವನಮಂ ಸುಡುವೆನೆಂದು ಪೊರಮಟ್ಟು ನಡೆತಪ್ಪನಂತೆ ॥
ಕಾಂತೆ ನೀನೇಕಾಂತದಿಂ ಪವಡಿಸುವ ಚಂದ್ರ ।
ಕಾಂತಭವನದೊಳಗೇಕಾಂತದೊಳಿಹಂ ನಿನ್ನ ।
ಕಾಂತನೇಕಾಂತರಂಗವೊಳೆಣಿಕೆಯೆಂದೊರ್ವ ಚಸಳೆ ತರಳೆಗೆ ನುಡಿದಳು ॥೩೬॥

ತೋಟಿಗೆಳಸದರನೊಯ್ಯೊಯ್ಯನೆ ಮನೋಭವನ ।
ಧಾಟಿಗೊಳಗಾಗಿ ನಿಲಿಸುವ ಮದನಕಲೆಗಳಂ ।
ಪಾಟಿಸುನ ಬಗೆಯನೆಳೆಯರ್ಗೆ ಕಲಿಸುವ ನಾಯಕಿಗೆ ಧನಯುತರನೊಲಿಸುವ ॥
ತಾಟಿ ಗಂಟಿಕ್ಕಿ ಸಂಧಿಗಳನೆಸಗುವ ಮುಳಿಯೆ ।
ಮೇಟಿಗೊರ್ವನನರಸಿ ಸೊಗಸು ಬಲಿಸುವ ಚಾರು ।
ಚೇಟಿಯರ್ ಚಲಿಸುವರನಂಗಶಬರನ ಬೇಂಟೆದೋಹಿನ ಮೃಗಂಗಳಂತೆ ॥೩೭॥

ಇಂತೆಸೆವ ಗಣಿಕಾ ಸಮೂಹಮಂ ನೋಡುತ ।
ಲ್ಲಂ ತಳರ್ದನಿಲಜಂ ಬರೆ ಮುಂದೆ ನಾನಾದಿ ।
ಗಂತದಿಂ ಮುರಹರನ ಕೀರ್ತಿಯಂ ಕೇಳ್ದುದವಿದಿಷ್ಟಾರ್ಥಮಂ ಪಡೆಯಲು ॥
ತಂತಮ್ಮ ವಿದ್ಯಾವಿನೋದಮಂ ತೋರಿಸುವ ।
ಸಂತಸದೊಳೈತಂದು ನೆರೆದಿರ್ದ ಕೋವಿದರ ।
ತಿಂತಿಣಿಯ ರಾಜಿ ರಾಜಿಪ ರಾಜಗೇಹದ ಸಮೀಪದೆಡೆಯಂ ಕಂಡನು ॥೩೮॥

ತಗರ್ವೆಣಗಿಸುವ ಸಿಪಿಲೆಗಟ್ಟಿಸುವ ಕೋಳಿಗಾ ।
ಳೆಗವ ಕಾದಿಸುವ ಕರಿತುರಗದೇರಾಟಮಂ ।
ಮಿಗೆ ತೋರಿಸುವ ನೆತ್ತಪಗಡೆಯೊಳ್ ಬಿನದಿಸುವ ಜೂಜುಗಳನೊಡ್ಡಿ ನಲವ ।
ಬಗೆಬಗೆಯ ರಾಜಪುತ್ರರ ತನುವಿಲೇಪನಾ ।
ದಿಗಳೊರಸೊರಸಿನಿಂದುದಿರ್ದ ಪರಿಮಳದ ಧೂ ।
ಳಿಗಳನಲ್ಲಿರ್ದ ಸೊಕ್ಕಾನೆಗಳ್ ಮೊಗೆಮೊಗೆದು ಮಿಗೆ ಚೆಲ್ಲಿಕೊಳುತಿರ್ದುವು ॥೩೯॥

ತನ್ನೊಳಿರ್ದಚ್ಯುತಂ ದ್ವಾರಕೆಗೆ ಬಂದಿರಲ್ ।
ಮುನ್ನ ತಾನೈತಂದು ನಿಂದುದೋ ರಾಜಿಸುವ ।
ರನ್ನಂಗಳೊಡನೆ ಪಾಲ್ಗಡಲೆನಲ್ ಮಣಿಸೌಧಕಾಂತಿಗಳ್ ಕಣ್ಗೊಳಿಸುವ ॥
ಪನ್ನಗಾರಿಧ್ವಜನ ರಾಜಗೃಹಮಂ ಕಂಡು ।
ಸನ್ನುತವರೂಥದಿಂದಿಳಿದು ವೆಯ್ಯಿಕ್ಕಿ ಸಂ ।
ಪನ್ನಮತಿ ಪವನಜಂ ತಳರ್ದನಲ್ಲಿಗೆ ವಿಪುಲಪುಲಕೋತ್ಸವಂ ಪೊಣ್ಮಲು ॥೪೦॥

ಮಾರನಂ ಪಡೆದ ಚೆಲ್ವಿಂದಿರೆಯನಾಳ್ದ ಸಿರಿ ।
ವಾರಿಜಾಸನ ಮುಖ್ಯ ದೇವರ್ಕಳಂ ಪೊರೆವು ।
ದಾರಂ ತನಗೆ ಸಾಲದೆಂದು ಭೂಪಾಲಕರ ಭಾಗ್ಯಮಂ ತಳೆದನೆಂಬ ॥
ನೀರದಶ್ಯಾಮನರಮನೆಯೆಂದೊಡದರ ವಿ।
ಸ್ತಾರಮಂ ಬಣ್ಣಿಸುವೊಡೆನ್ನಳವೆ ಪೇಳೆನಲ್ ।
ಮಾರುತಿಯ ಕಣ್ಗೆ ರಮಣೀಯಮಾದುದು ಬಹುಳ ಮಣಿತೋರಣಪ್ರಭೆಗಳು ॥೪೧॥

ಪಾರಿಜಾತಪ್ರಸವ ಪರಿಮಳಕೆ ಗಗನದೊಳ್ ।
ಸೇರಿದಳಿಮಾಲೆಗಳನುಜ್ಜ್ವಲಪ ನೀಲಮಣಿ ।
ತೋರಣಪ್ರಭೆಗಳಂ ಬೇರ್ಪಡಿಸಲರಿದೆನಲ್ ಮೆರೆವ ಹರಿಯರಮನೆಯನು ॥
ಸಾರಿದಂ ಪವನಜಂ ಬಾಗಿಲೊಳ್ ತನ್ನ ಪರಿ।
ವಾರಮಂ ನಿಲಿಸುತೊಳವೊಕ್ಕನೇಂ ಸಲುಗೆಯೊ ಮು ।
ರಾರಿಯೆಡೆಯೊಳ್ ದ್ವಾರಪಾಲಕರ್ ತಡೆಯರೊರ್ವರುಮಂತರಾಂತರದೊಳು ॥೪೨॥

ಜನಪ ಕೇಳಾ ಸಮಯಕಸುರಾರಿ ಕನಕಭಾ ।
ಜನ ರತ್ನದೀಪ್ತಿಗಳ ಸಾಲ್ಗಳಿಂದೆಸೆವ ಭೋ ।
ಜನಶಾಲೆಗೈತಂದು ಬಾಂಧವರ್ವೆರಸಿ ಕುಳ್ಳಿರ್ದು ದಿವ್ಯಾಸನದೊಳು ॥
ಜನನಿಯರುಣಿಸನಿಕ್ಕ ಸವಿಗೊಳಿಸೆ ಚಮರವ್ಯ ।
ಜನಮಂ ಪಿಡಿದು ರಾಣಿಯರ್ ಕೆಲದೊಳಿರೆ ಸುರಂ।
ಜನ ಕಥಾಲಾಪ ರಸದಿಂ ಷಡ್ರಸಾನ್ನದಾರೋಗಣೆಯೊಳಿರುತಿರ್ದನು ॥೪೩॥

ಎಸೆವ ಪೊಂಬರಿವಾಣ ಮಿಸುನಿವಟ್ಟಲ್ಗಳೊಳ್ ।
ಮಿಸುಪ ಶಾಲ್ಯೋದನಂ ಸೂಪ ಘೃತ ಭಕ್ಷ್ಯ ಪಾ ।
ಯಸ ಪರಡಿ ಮಧು ಶರ್ಕರಾಮಿಷ ಪಳಿದ್ಯ ಸೀಕರಣೆ ಶಾಕ ತನಿವಣ್ಗಳ ॥
ರಸ ರಸಾಯನ ಸಾರ್ಗಳುಪ್ಪುಗಾಯ್ ಬಾಳುಕಂ।
ಕೃಸರಿ ಕಚ್ಚಡಿ ಪಾಲ್ಕೊಸರ್ಗಳಿವು ಬಗೆಗೊಳಿಸಿ ।
ಪೊಸತೆನಿಸಿರಲ್ ಸವಿದನಚ್ಯುತಂ ದೇವಕಿಯಶೋದೆಯರ್ ತಂದಿಕ್ಕಲು ॥೪೪॥

ಗುಪ್ತದಿಂದಮರರ್ಗಮೃತವನುಣಿಸಿದ ನಿತ್ಯ ।
ತೃಪ್ತಂ ಸಕಲಮಖಂಗಳ ಹವಿರ್ಭಾಗಮಂ।
ಸಪ್ತಾರ್ಚಿಮುಖದಿಂದೆ ಕೈಕೊಂಡದರ ಫಲಮನೂಡಿಸುವ ಪರಮಾತ್ಮನು॥
ಕ್ಲುಪ್ತಮೆನಿಸುವ ರಾಜಭೋಗ್ಯದೊಳಗಾವುದುಂ।
ಲುಪ್ತಮಾಗದವೊಲಾರೋಗಣೆಯನೆನ್ನದೆ ಲೋ।
ಲುಪ್ತಿಯಿಂ ಮಾಡುತಿರ್ದಂ ತನ್ನ ಮಾನುಷ್ಯಲೀಲೆಗಿದು ಸಾರ್ಥಮೆನಲು ।೪೫॥

ಹಾರ ನೂಪುರ ಕಂಕಣಾದಿ ಭೂಷಣ ಝಣ।
ತ್ಕಾರಧ್ವನಿಗಳ ಮೇಲುವಿನೊಳ್ ಪೊದಳ್ವ ಕುಚ।
ಭಾರದಿಂ ನಸುವಾಗಿದಂಗಲತೆ ಲಹರಿಗಳ ಸಿರಿವೊಗಕೊಲಿವ ಕಂಗಳ॥
ಸ್ಮೇರೋಲ್ಲಸದ್ರುಚಿರದಂತಪಜ್ಞ್ತಗಳ ಶ್ರಂ।
ಗಾರಸರಸೋಕ್ತಿಗಳ ವಿನುತಾಷ್ಟಮಹಿಷಿಯರ್।
ಚಾರು ಚಾಮರ ತಾಲವೃಂತಮಂ ಪಿಡಿದಿರ್ದರಚ್ಯುತನ ಕೆಲಬಲದೊಳು ॥೪೬॥

ಕದ್ದು ಮನೆಮನೆವೊಕ್ಕು ಬೆಣ್ಣೆಪಾಲ್ಮೊಸರುಗಳಂ ।
ಮೆದ್ದು ಗೋವಳರ ಮೇಳದ ಕಲ್ಲಿಗೂಳ ಕೈ।
ಮುದ್ದೆಯಂ ತೆಗೆದುಂಡು ತುರುಗಾವ ಪಳ್ಳಿಯಂ ಬಿಟ್ಟು ಬಳಿಕೆರವಿಲ್ಲದೆ॥
ಹೊದ್ದಿ ಪಾಂಡವರನೋಲೈಸಲಾದುದು ಭಾಗ್ಯ।
ಮಿದ್ದಪುವು ರಾಜಭೋಜ್ಯಂಗಳಿವು ಪಡೆದವರ್।
ಮುದ್ದುಗೈದಪರೂಟದೆಡೆಗಳೊಳ್ ಚೋದ್ಯಮೆಂದಳ್ ಸತ್ಯಭಾಮೆ ನಗುತೆ ॥೪೭॥

ಬರಿದೆ ಗಳಹದಿರತ್ತೆಮಾವದಿರಿರಲ್ಕೆ ನೀ।
ನರಿಯಲಾ ತನ್ನ ಬಂಧನವಿಮೋಚನುದಯಿಸಲ್।
ಪರಿದುದೀತನೆ ಜಗದ್ಗುರು ಕಣಾ ಪಾಲಿಸುವನಿಂದ್ರಾದಿ ನಿರ್ಜರರನು॥
ಕುರುಪಿಡಲ್ಬಹುದೆ ಮಾನವನೆಂದು ಕೃಷ್ಣನಂ।
ಜರಿಯೆ ನೀನೇಸರವಳೊಡನಾಡಿತನದಿಂದೆ।
ಬೆರೆಯಬೇಡತ್ತಹೋಗೆಂದು ದೇವಕಿ ಸತ್ಯಭಾಮೆಯಂ ಗರ್ಜಿಸಿದಳು ॥೪೮॥

ನಿಮ್ಮ ಬಂಧನವ ಬಿಡಿಸಿದವಂಗೆ ತವೆ ಬಂಧ।
ನಮ್ಮಗುಳದೇಕಾಯ್ತು ದಿವಿಜರಂ ಪೊರೆವವಂ।
ಚಿಮ್ಮಟಿಗೆವಿಸಿಯಲೇತಕೆ ನರನ ಕುದುರೆಗಾಣಿಸಿದವಂ ಪೇಳಪಿಗೊಲ್ದು॥
ನಮ್ಮನೇತಕೆ ಸಿಕ್ಕಿದಂ ಜಗದ್ಗುರುವೆನಲ್।
ನಮ್ಮ ಜಗದೊಳಗಿರಿ ನೀವು ನಿಮಗೆಯು ಗುರುವೆ।
ನಮ್ಮನಂಜಿಸದೆ ನೀಂ ತಿಳಿಪುದೆಂದಳ್ ದೇವಕಿಗೆ ಮತ್ತೆ ಸತ್ಯಭಾಮೆ ॥೪೯॥

ಸತ್ಯಭಾಮಾದೇವಿ ನುಡಿದ ಕಟಕಿಯ ಮಾತಿ।
ಗತ್ಯಂತಹರ್ಷಮಂ ತಾಳ್ದದಕೆ ನಸುನಗುತೆ।
ಪ್ರತ್ಯುತ್ತರಂಗುಡುವೆನೆಂಬನಿತರೊಳ್ ಭೀಮಸೇನನ್ಯೆತರುತಿಹುದನು॥
ಧೃತ್ಯರೆಚ್ಚರಿಸಿದೊಡೆ ಭಾನವ್ಮೆದುನತನದ।
ಕೃತ್ಯದಿಂದಚ್ಯುತಂ ಸೂಚಿಸಲ್ ತಡೆದಳೌ।
ಚಿತ್ಯಮಲ್ಲೊಳವುಗುವೊಡಾರೋಗಣೆಯ ಸಮಯವೆಂದು ಸೈರಂಧ್ರಿಬಂದು॥೫೦॥

ಆರೋಗಣೆಯ ಸಮಯವಾರ್ಗೆ ಭೂತಂ ಪೊಯ್ದು।
ದಾರನೀ ಮನೆಯೊಳಿಂತೀಗಳೇತಕೆ ಮಾನ।
ಮಾರುಮಿಲ್ಲವೆ ಪೊರೆಯೊಳಿಹಳೆ ದೇವಕಿ ಸತ್ಯಭಾಮೆಗಾವುದುಮಿಲ್ಲಲಾ॥
ಆರೆನ್ನನಿಂತು ತಡೆಸಿದರಾಯ್ತು ದುರ್ಭಿಕ್ಷ।
ಮೂರೊಳ್ ಬೆಳೆಯದೆ ಧಾನ್ಯಂ ಕರೆಯದೇ ವೃಷ್ಟಿ।
ನಾರಿಯರನಿಸಿಬರಂ ಕಟ್ಟಿಕೊಳಲೇಕೆ ಬಿಡಲೆಂದು ಮಾರುತಿ ನುಡಿದನು ॥೫೧॥

ಭೀಮನಾಡಿದ ನುಡಿಯ ಕೇಳಿ ರುಕ್ಮಿಣಿ ಸತ್ಯ।
ಭಾಮೆಯರ ಮೊಗನೋಡಿ ನಸುನಗುತೆ ಮುರಹರಂ।
ತಾ ಮತ್ತೆ ರಭಸದಿಂ ಭೋಜನಂಗೆಯ್ಯುತೊಡನೊಡನೆ ಧರ್ಮನೆ ತೇಗಲು॥
ತಾಮಸಮಿದೇಕೆ ನಾಂ ಬಂದನೊರ್ವನೆ ಮುಳಿವೊ।
ಡೀಮೂಜಗಂ ನಿನ್ನ ಬಾಯ್ಗೊಂದು ತುತ್ತಾಗ।
ದೀ ಮನುಜಗಿನುಜರಂ ಬಲ್ಲರಾರೆನ್ನನುಳುಹೆಂದನಿಲಜಂ ಚೀರ್ದನು ॥೫೨॥

ಬಿಡದೆ ಕಳವಿಂದೆ ಲೋಗರ ಮನೆಗಳಂ ಪೊಕ್ಕು।
ತುಡುತಿಂದವನ ಭೋಜನಕ್ಕೆ ಮೃಷ್ಟಾನ್ನಮಾ।
ದೊಡೆ ಕೆಲಬಲಂಗಳಂ ನೋಡುವನೆ ಗೋಪಳಂಗರಸುತನವಾದ ಬಳಿಕ॥
ಪೊಡವಿಯುಂ ಕಂಡು ನಡೆವನೆ ಮುಳಿದು ಮಾವನಂ।
ಬಡಿದವಂ ನೆಂಟರನರಿವನೆ ಮೊಲೆಗೊಟ್ಟಳಸು।
ಗುಡಿದವಂ ಪುರುಷಾರ್ಥಿಯಾದಪನೆ ನಾವಜ್ಞರೆಂದು ಮಾರುತಿ ಜರೆದನು॥೫೩॥

ದೇವತ್ವನಮಂ ಬಿಟ್ಟು ನರನಾದವಂಗೆ ಬಳಿ।
ಕಾವ ಗೌರವಮಿಹುದಿಸಂ ನಾಚುವನೆ ಸಾಕು।
ನಾವಿಂತನಂ ಕಾಣ್ಬುದುಚಿತಮಲ್ಲೆಂದು ಬೀಮಂ ವಿಭಾಡಿಸಲಿತ್ತಲು॥
ಶ್ರೀವರಂ ನಸುನಗೆಯೊಳಾಗರಿಸಂದಿಂ।
ದಾವಾಗ ಬಂದನನಿಲಜಸಿತ್ತು ಕರೆ ತಡೆದ।
ಳಾವಳೇತಕೆ ಕೋಪಸುನೆ ಮತ್ತೆ ಪವನಸುತನೊಳವುಗುತ್ತಿಂತೆಂದನು ॥೫೪॥

ದೇವ ನಿಮ್ಮರ್ಜುನನ ಸಲುಗೆ ನಮಗುಂಟೆ ಸಂ।
ಭಾವಿಸುವರಿಲ್ಲೆಮ್ಮನಿಲ್ಲ ನಿಲಿಸಿದರೆನಲ್।
ನಾವು ತಡೆಸಿದೆವಿತ್ತ ಬಾಯೆನುತೆ ಸೆರಗುವಿಡಿದೊಡನೆ ಕುಳ್ಳಿರಿಸಿಕೊಂಡು ‖
ಆ ವಿವಿಧ ಭೋಜ್ಯದಿಂದಾರೋಗಿಸಿದ ಬಳಿಕ ।
ತೀವಿದ ಸುಗಂಧ ಕರ್ಪೂರ ತಾಂಬೂಲ ಪು ।
ಷ್ಪಾವಳಿಗಳಿಂದೆ ಸತ್ಕರಿಸಿದಂ ಭೀಮನಂ ಸುರಪುರದ ಲಕ್ಷ್ಮೀಶನು ‖ ೫೫ ।

ಏಳನೆಯ ಸಂಧಿ

ಸೂಚನೆ ॥ ಅಧ್ವರಕೆ ಯಾದವರ ಗಡಣದಿಂ ದಾನವ ಕು ।
ಲಧ್ವಂಸಿ ಹಸ್ತಿನಾವತಿಗೆ ಬಿಜಯಂಗೆಯ್ದು ।
ತಧ್ವರದೊಳ್ ತಾಗಿದನುಸಾಲ್ವನಂ ಗೆಲ್ದು ಪಾಂಡವರನಾರೆ ಪಾಲಿಸಿದನು ॥

ಧೂರಮಣಕೇಳನಿಲತನಯನಂ ಕೂಡಿಕೊಂ ।
ಡಾರೋಗಿಸಿದಬಳಿಕ ನವಕುಸುಮಗಂಧ ಕ ।
ರ್ಪೂರ ತಾಂಬೂಲಮಂ ಕೊಟ್ಟು ಕೃತವರ್ಮನಂ ಕರೆಸಿ ಧರ್ಮಜನ ಮುಖಕೆ ॥
ವಾರಣನಗರಿಗೀಗ ನಮ್ಮೊಡನೆ ನಡೆತರಲಿ ।
ದ್ವಾರಕೆಯೊಳಿರ್ದ ಜನರೆಲ್ಲರುಂ ಪೊಯ್ಸು ಗೂ ।
ಡಾರಮಂ ಪೊರಗೆ ಸಾರಿಸು ಪುರದೊಳೆಂದು ಮಧುಸೂದನಂ ನೇಮಿಸಿದನು ॥ ೧ ॥

ವಸುದೇವ ಹಲಧರರ್ ಪೊಳಲಿನಲ್ಲಿರ್ದು ಪಾ ।
ಲಿಸಲುಳಿದ ಪ್ರದ್ಯುಮ್ನ ಗದ ಸಾಂಬನನಿರುದ್ಧ ।
ನಿಶಠ ಶಠನಕ್ರೂರ ಸಾತ್ಯಕಿ ಪ್ರಮುಖ ಯಾದವರೆಮ್ಮ ಕೂಡೆ ಬರಲಿ ॥
ಒಸಗೆ ಮಿಗೆ ದೇವಕಿಯೊಡನೆ ತೆರಳಲರಸಿಯರ್ ।
ಪೊಸತೆನಿಪ ವಸ್ತುವಂ ತೆಗೆಸು ಭಂಡಾರದಿಂ ।
ದೆಸೆವ ಪುರಜನ ಪರಿಜನ ಸ್ತ್ರೀಯರ್ಕೈದಲೆಂದಸುರಾರಿ ನೇಮಿಸಿದನು ॥ ೨ ॥

ಬಳಿಕ ಕೃತವರ್ಮಕನ ನೇಮದಿಂ ನಗರದೊಳ್ ।
ಮೊಳಗಿದುವು ನಿಸ್ಸಾಳಕೋಟಿಗಳ್ ಪೊರಮಟ್ಟು ।
ದುಳಿಯದೆ ಸಮಸ್ತ ಜನವೈದಿದುವು ದೇವಕಿ ಯಶೋದೆಯರ ದಂಡಿಗೆಗಳು ॥
ಕೆಳದಿಯರ್ವೆರಸಿ ರುಕ್ಮಿಣಿ ಸತ್ಯಭಾಮಾದಿ ।
ಲಲನೆಯರ ಪಲ್ಲಕ್ಕಿಗಳ ಸಾಲ್ಗಳಂದು ಕೆಲ ।
ಬಲದ ಸುಯ್ಯಾನದಿಂ ತೆರಳಿದುವು ಕೋಶದ ಸುವಸ್ತುಗಳನೆತ್ತಿಸಿದರು ॥ ೩ ॥

ಸುತ ಸೋದರ ಜ್ಞಾತಿ ಮಿತ್ರ ಬಾಂಧವ ಪುರೋ ।
ಹಿತರೊಡನೆ ಪೊರಮಟ್ಟನಸುರಾಂತಕಂ ಸಮಾ ।
ವೃತವಟುಗಳಿಂದೆ ಸನ್ನಿಹಿತಶಾಸ್ತ್ರಂಗಳಿಂ ದ್ವಿಜರಾಯುಧಂಗಳಿಂದೆ ॥
ಚತುರಂಗ ಬಲದಿಂದೆ ಭೂಭುಜರ್ ದ್ರವ್ಯದಿಂ ।
ದತುಳ ಸಂಭಾರದಿಂ ವೈಶ್ಯರ್ಕೈದಿತು ಶೂದ್ರ ।
ವಿತತಿ ನಾನಾಜಾತಿಗಳ ನೆರವಿಯಿಂ ತಮ್ಮ ತಮ್ಮ ವಿನಿಯೋಗದಿಂದೆ ॥ ೪ ॥

ಒಟ್ಟೆಗಳ ವೇಸರದ ಪೊರೆಯಾಳ ಕಂಬಿಗಳ।
ಕೊಟ್ಟಿಗೆಯ ಕೋಲ್ಕಾರಬಂಡಿಗಳ ಮೇಲೆ ಸರ।
ಕಿಟ್ಟಣಿಸಿ ನೂಕಿದುದು ಗೋಮಹಿಷಿಕುಲದ ಕೀಲಾರ ಬಿಡದೆಯ್ದುತೊಡನೆ ॥
ದಟ್ಟಿಸಿದುವಾನೆ ಕುದುರೆಯ ರಥದ ಸೇನೆ ಪೊರ।
ಮಟ್ಟುದಂದಣದ ಪಲ್ಲಕ್ಕಿಗಳ ರಾಜಿ ಸಾ।
ಲಿಟ್ಟು ನಡೆದುವು ಛತ್ರಚಾಮರ ಪತಾಕೆಗಳ್ ತೆರಳಿತು ಜನಂ ಮುದದೊಳು ॥ ೫॥

ವಿಟರ ಮೇಳಂಗಳಿಂ ಚೇಟಿಯರ ಗಡಣದಿಂ।
ನಟ ವಿದೂಷಕ ವಂದಿ ಗಾಯಕರ ತಂಡದಿಂ।
ಕಟಕಿಧ್ವನಿ ವ್ಯಂಗ್ಯ ಸರಸೋಕ್ತಿಗಳ ಬೆಡಗು ಬಯಲನಗೆ ನೋಟಂಗಳ ॥
ನಟನೆಗಳ ನಡೆಯ ಭಂಗಿಯ ಬರಿಯ ಬೇಟದತಿ।
ಕುಟಿಲಾಂಗದೊಲವುಗಳ ವಾರನಾರೀಜನಂ।
ಕಟಕದೊಳ್ ಕಾಮುಕರ ನಡೆಗೆಡಿಸುತೊಗ್ಗಿನಿಂ ಪೊರಮಟ್ಟು ಬರುತಿರ್ದುದು ॥೬॥

ನಾಗಪತಿಗಸದಳಂ ಕಮಠಂಗರಿದು ದಿಶಾ।
ನಾಗತತಿಗಳವಲ್ಲ ಧರಿಸಲ್ಕಿದೆಂಬಂತೆ।
ನಾ ಗಣಿಸಲರಿಯೆನಿದು ಪೊಸತೆನಲ್ ಪಣಹ ನಿಸ್ಸಾಳ ಕಹಳಾರವದೊಳು ॥
ಸಾಗರದ ಮಧ್ಯದಿಂದೆದ್ದುದೋ ಮತ್ತೊಂದು।
ಸಾಗರಂ ಪೇಳೆನಲ್ಕಖಿಳ ಯಾದವಕಟಕ।
ಸಾಗರಂ ದ್ವಾರಕಾನಗರಮಂ ಪೊರಮಟ್ಟು ನಡೆಗೊಂಡುದೇವೇಳ್ವೆನು ॥ ೭॥

ಕಳಿಪುತ್ತೈತಂದ ವಸುದೇವ ಬಲಭದ್ರರಂ।
ಬಳಿಕ ವಂದಿಸಿ ಪರಕೆಗೊಂಡು ಸಂತೈಸಿ ನಿಜ।
ನಿಳಯರಕ್ಷೆಗೆ ನಿಲಿಸಿ ಭೀಮನಂ ಬೀಳ್ಕೊಳಿಸಿ ಸಿತ ಹಯಾರೂಢನಾಗಿ॥
ಉಳಿದ ಯಾದವರೆಲ್ಲರಂ ಕೂಡಿಕೊಂಡು ಮುಂ।
ದಳೆದು ಮಧುಸೂದನಂ ಮಧ್ಯಮಾರ್ಗದೊಳೊಂದು।
ಕೊಳನಿರಲ್ಕಲ್ಲಿ ಬೀಡಂಬಿಡಿಸಿ ನಸುನಗುತೆ ರುಕ್ಮಿಣಿಯೊಳಿಂತೆಂದನು ॥೮॥

ರಾಜಮುಖಿ ನೋಡೀ ಸರೋವರದ ಪದ್ಮಿನಿಗೆ।
ರಾಜಹಂಸಕ್ರೀಡೆ ಪುನ್ನಾಗಕೇಳಿ ವಿ।
ಭ್ರಾಜಿತಮಧುಪಗೋಷ್ಠಿ ಸಂದಪುದು ರವಿಗೆ ತಾನರಸಿಯಾದಪಳದೆಂತೋ ॥
ಸ್ತ್ರೀಜನಕೆ ಸಹಜಮಿದು ಮೇಲೆ ಕರ್ದಮಜಾತೆ।
ಮಾಜುವಳೆದೆಯೊಳಿರ್ದ ಕೃಷ್ಣತೆಯಮಿದು ಜಗಕೆ।
ಸೋಜಿಗವೆ ಚಂಚಲೆಯುಲಾ ಪತಿಯನೆಣಿಸುವಳೆ ಪೇಳೆಂದೊಡಿಂತೆಂದಳು ॥ ೯॥

ದೇವ ನೀ ಪದ್ಮಿನಿಗೆ ಪಳಿವನಾರೋಪಿಸುವು।
ದಾವ ಸಮ್ಮತಿ ರಾಜಹಂಸ ಪುನ್ನಾಗ ಮಧು ।
ಪಾವಳಿಯನೋವಲಾಗದೆ ಮಾತೆ ಮಕ್ಕಳೊಡಗೂಡಿರ್ದೊಡೇಂ ಧರೆಯೊಳು ॥
ಜೀವನಂ ನಿಂದೊಡಾದುದು ಪಂಕಮಿಲ್ಲ ತಾ।
ನಾವಿರ್ಭವಿಸಿದೊಡೇಂ ಕೃಷ್ಣಹೃದಯಕೆ ದೋಷ।
ಮಾವುದಣ್ಮಂಗೆ ನಡುನಡುಗಿದೊಡೆ ಚಂಚಲೆಯೆ ನಾವರಿಯೆವಿದನೆಂದಳು ॥೧೦॥

ಪುರುಷನೊರ್ವಂಗೆ ನಾರಿಯರುಂಟು ಪಲಬರೀ।
ಧರೆಯೊಳಂಗನೆಗೆ ಪತಿಯೊರ್ವನೇ ಗತಿಯೆಂಬ ।
ಪರಿವಿಡಿಯ ನರುಹಿಸುವೊಡಾವಿರ್ವರಲ್ಲದೊರ್ವರಾಮಿಲ್ಲಮಿನ್ನು ಬರಿದೆ॥
ಸರಸಿಯೊಳಗಣ ಪದ್ಮಿನಿಯನೆ ದೂಷಿಸಬೇಡ।
ಪರಮಪಾವನೆಯೆಂದು ಶಿವನುತ್ತಮಾಂಗದೊಳ್।
ಧರಿಸಿದನೆನಲ್ ಪತಿವ್ರತೆಯಲ್ಲದಿಹಳೆ ಪೇಳೆಂದು ರುಕ್ಮಿಣಿ ನುಡಿದಳು ॥ ೧೧ ॥

ನರಕಾಂತ ಕೇಳ್ ಬಳಿಕ ರುಕ್ಮಿಣಿಯ ಮಾತಿಂಗೆ ।
ನರಕಾಂತಕಂ ಮೆಚ್ಚಿ ನಸುನಗುತೆ ನಿಂದು ವಾ।
ನರಕಾಂತಕೇತನಾಗ್ರಜನೊಳ್ ಸರಸವಾಡುತೊಲವಿಂದೆ ಪಾಳೆಯುವನು॥
ಸರದ ಸುತ್ತಣ ತೀರದೊಳ್ ಬಿಡಿಸಿ ಸುಭಟಪ್ರ।
ಸರದ ಸುಯ್ದಾನದಿಂದಿರ್ದನೆಂದು ಪರಿವಾ । [॥ ೧೨ ॥
ಸರದ ಸೂರ್ಯೋದಯದೊಳಲ್ಲಿಂದೆ ಯಾದವರ ವಂಡು ನಡೆದುದು ಪಥದೊಳು

ಆ ಮಾಧವಂ ಪಯಣಗತಿಯಿಂದೆ ಗಜಪುರದ।
ಸೀಮೆಗೈತಂದು ಗಂಗಾನದಿಯ ತೀರದೊಳ್।
ಭೀಮನಂ ಸುಯ್ದಾನಕಿರಿಸಿ ಯಾದವಕಟಕಸಾಗರವನಲ್ಲಿ ಬಿಡಿಸಿ ॥
ಭೂಮಿಶ ದರ್ಶನೋತ್ಸವಕೆ ಬಿಜಯಂಗೈದ ।
ನಾ ಮಧ್ಯಮಾರ್ಗದೊಳ್ ಕಂಡುದು ಮಹಾಜನಂ।
ತಾಮರಸನೇತ್ರನಂ ತಮತಮಗೆ ನುತಿಸಿದರ್ ನಿಗಮಾಗಮೋಕ್ತಿಯಿಂದೆ ॥ ೧೩ ॥

ಶ್ರುತಿ ಧರ್ಮಶಾಸ್ತ್ರಾಗಮ ಸ್ಮೃತಿ ವಿಚಾರದಿಂ।
ಗತಿಗೆಟ್ಟ ಬ್ರಹ್ಮಹತ್ಯಾದಿಪಾತಕಕೆ ನಿ।
ಷ್ಕೃತಿ ತವಸ್ಮರಣಮಾತ್ರದೊಳಪ್ಪುದೆಂದೊಡಾಶ್ರಮನಾಲ್ಕರೊಳ್ ಮಾಡಿದ॥
ವ್ರತ ದಾನ ಜಪ ತಪಸ್ಸ್ವಾಧ್ಯಾಯ ಪೂಜೆ ಸ।
ತ್ಕ್ರತು ಸಮಾಧಿಗಳೆಮಗೆ ನಿನ್ನನೀಕ್ಷಿಸಲನು।
ಷ್ಠಿತವಾದುವೆಂಬುದೇಂ ನುತಿಯೆ ನಿನಗೆಂದು ಹರಿಯಂ ಪೊಗಳ್ದರಾ ಪಾರ್ವರು
॥ ೧೪ ॥

ಕಾಣಿಕೆಯನಿತ್ತೆರಗಿ ಕಂಡುದು ಸಕಲಜನ।
ಶ್ರೇಣಿ ತಮತಮಗೆ ಮುಗಿದೆತ್ತಿದರ್ ನೊಸಲೆಡೆಗೆ।
ಪಾಣಿಗಳನಾ ಪಥದೊಳೊರ್ವ ನರ್ತಕಿ ಬಂದು ನಾನಾಪ್ರಕಾರದಿಂದೆ॥
ವೇಣು ವೀಣಾದಿ ಸಂಗೀತ ವಾದ್ಯಶ್ರುತಿಯ।
ಕೇಣಿಗೊಂಡುರುಪು ತಿರುಪಭಿನವಕಳಾ ಸಪ್ತ।
ಮಾಣದ ಸುನೃತ್ತದಿಂ ಮೆಚ್ಚಿಸಿದಳಚ್ಯುತನನಚ್ಚರಿಯರಚ್ಚರಿಯೆನೆ ॥ ೧೫ ॥

ನಾಗನಗರಿಯುನಗಧರಂ ಪೊಕ್ಕು ಬರುತಿರ್ದ।
ನಾಗ ನಗರಿಪು ಮುಖರೈದೆ ಸಾಸಿರಪೆಡೆಯು।
ನಾಗನ ಗರ್ರೀಯಾಂಗತಲ್ಪದವನಿವನೆಂದು ಗಗನದೊಳ್ ಕೈವಾರಿಸೆ॥
ಬಾಗಿಲಂ ಸಾರ್ದು ತಮತಮಗೆ ಕಾಮಿನಿಯರಿಂ।
ಬಾಗಿ ಲಂಬಿಸುವಲರ್ಮುಡಿಗಳ ಶಿರಂಗಳಿಂ।
ಬಾಗಿ ಲಕ್ಷ್ಮೀಪತಿಗೆ ವಂದಿಸಿದರೊಲವಿಂದೆ ರಾಜಮಾರ್ಗಾಂತರದೊಳು ॥ ೧೬ ॥

ರಾಜಮಾರ್ಗದ ಕೆಲಬಲದ ಗೋಪುರದೊಳಿರ್ದ।
ರಾಜವದನೆಯರಗರು ಚಂದನ ಸುಧೂಪ ನೀ।
ರಾಜನ ಫಲಾಳಿ ತಾಂಬೂಲ ಬಹುವಿಧ ಕುಸುಮ ಲಾಜ ದೂರ್ವಾಕ್ಷತೆಗಳ॥
ರಾಜಿಗಳನಳವಡಿಸೆ ಮಣಿತೋರಣಪ್ರಭೆ ವಿ।
ರಾಜಿಸುವ ಧರ್ಮಸುತನರಮನೆಯ ಬಾಗಿಲ್ಗೆ।
ರಾಜೀವಲೋಚನಂ ಬರೆ ಕೇಳ್ದು ಭೂವರನಿದಿರ್ಗೊಂಡನುತ್ಸವದೊಳು ॥ ೧೭ ॥

ಧರ್ಮಸುತನಂ ಕಂಡು ನಗುತೆ ಮುರರಿಪು ಹೇಮ।
ನಿರ್ಮಿತವರೂಥದಿಂದಿಳಿದು ನೃಪವರನಡಿಗೆ।
ನಿರ್ಮಲಕಿರೀಟಮಂ ಚಾಚುತಿರೆ ತೊಲಗಿ ಹರಿಯಂಘ್ರಿಗೆರಸಂ ನಮಿಸಲು॥
ಪೆರ್ಮೆಯಿಂ ತೆಗೆದು ಬಿಗಿಯಪ್ಪಲವನೀಶ್ವರಂ।
ನಿರ್ಮಾಯನಂ ಮಗುಳೆ ತಕ್ಕೈಸಲಾಗಳಮ।
ರರ್ಮಹೀಪಾಲಕನ ಪೂರ್ವಕೃತಪುಣ್ಯಮಂ ಬಣ್ಣಿಸಿದರಂಬರದೊಳು ॥ ೧೮ ॥

ತದನಂತರದೊಳಾ ಮುರಾಂತಕಂ ಧೃತರಾಷ್ಟ್ರ।
ವಿದುರ ಕೃಪ ಗಾಂಧಾರಿ ಕುಂತಿಯರ್ಗಭಿನಮಿಸಿ।
ಮುದದಿಂದೆ ನರ ನಕುಲ ಸಹದೇವ ವೃಷಕೇತು ಯೌವನಾಶ್ವಾದಿಗಳನು॥
ಪದಕಮಲಕೆರಗಿದೊಡೆ ತೆಗೆದು ತಕ್ಕೈಸಿ ದ್ರೌ।
ಪದಿ ಸುಭದ್ರೆಯರನೊಲವಿಂದೆ ಕಾಣಿಸಿಕೊಂಡು।
ಪದುಳಮಂ ಕೇಳ್ದು ಸುಖಗೋಷ್ಠಿಯಿಂ ಕುಳ್ಳಿರ್ದ ಬಳಿಕ ನೃಪನಿಂತೆಂದನು ॥೧೯॥

ದೇವ ದೇವಕಿದೇವಿ ಮೊದಲಾದವರ್ಗೆ ವಸು
ದೇವ ಹಲಧರ ಮನ್ಮಥಾದಿಗಳ್ಗಖಿಳರಾ ।
ಜೀವಾಸಕ್ತೈದೆ ಪಯಣಮೆ ಭೀಮಸೇನನೇಗೈದನಾರುಂ ಬಾರದೆ ॥
ನೀವೆ ಚಿತ್ತೈಸಿದಿರಿದೇನೆನೆ ಸಮಸ್ತಪ್ರ।
ಜಾಪಿಭವದಿಂದೆ ಮಾರುತಿಸಹಿತ ಬಂದು ಗಂ।
ಗಾವರನದೀತೀರದೊಳ್ ಬಿಟ್ಟುದೆಮ್ಮ ಕಟಕಂ ನೋಳ್ಪುದೇಳೆಂದನು ॥ ೨೦॥

ಎಂದು ಹರಿ ನುಡಿಯಲರ್ಜುನನ ಮೊಗನೋಡಿ ನಾ।
ಎಂದು ಧನ್ಯರ್ ಭಕ್ತರೆಡೆಗೀ ದಯಾರ್ಣವಂ।
ಬಂದುದಚ್ಚರಿಯುಲಾ ಬಾಂಧವರ ದರ್ಶನಂ ನಮಗೆ ಕೌತುಕಮಪ್ಪುದು॥
ಮಂದಿಯಂ ಕರೆಸು ನಡೆ ನಗರಿ ಗುಡಿತೋರಣಗ।
ಳಿಂದೆ ಮೆರೆಯಲಿ ಬರಲಿ ಸಿಂಗರದ ಬಾಲಕಿಯ।
ರಂದಣಗಳಂ ಪಿಡಿಯಲರಸಿಯರ್ ಪೊರಮಡಲಿ ಜನವೆಂದು ನೃಪನೆದ್ದನು॥೨೧॥

ಬಳಿಕ ನೃಪನಾಜ್ಞೆಯಿಂದಾ ಹಸ್ತಿನಾಪತಿಯ।
ಪೊಳಲನುರೆ ಸಿಂಗರಿಸೆ ಮೊಳಗಿದುದು ಕೂಡೆ ಮಂ।
ಗಳವಾದ್ಯಸಂಕುಲಂ ನೆರೆದುದು ಸಕಲಪೌರಜನಮಲಂಕಾರದಿಂದೆ॥
ಪೊಳೆವ ಮಣಿಭೂಷಣದ ಪೆಣ್ಗಳಿಟ್ಟಣಿಸಿದರ್ ।
ತಳತಂತ್ರಮೈದೆ ಸಂದಣಿಸಿದುದು ಪಾಠಕರ ।
ಕಳಕಳದ ನೃತ್ತಗೀತಂಗಳ ವಿಲಾಸದಿಂದಿದಿರ್ಗೊಳಲ್ ಪೊರಮಟ್ಟರು ॥೨೨॥

ಉತ್ಸವದೊಳಧ್ವರಹಯಂ ಮುಂದೆ ನಡೆಯೆ ಭೀ।
ಭತ್ಸು ಮೊದಲಾದನುಜರೆಡದೊಳಡಿಯಿಡೆ ಭಕ್ತ ।
ವತ್ಸಲಂ ಚಲದ ಭಾಗದಿ ಬರಲ್ ಪಿಂತೆ ಮುನಿನಿಕರಮೈತರೆ ಮುದದೊಳು ॥
ಸತ್ಸಿಕತಮಯ ವಿರಾಜಿತ ವಿಮಲ ನಿರ್ಜರ ಸ ।
ರಿತ್ಸಮೀಪದೊಳೆಸೆವ ಯಾದವರ ಪಾಳೆಯವ ।
ನುತ್ಸುಕದೊಳವನೀಶ್ವರಂ ಸಾರ್ದನಂಬುಧಿಯನಂಭೋಧಿ ಬೆರಸಿದಂತೆ ॥೨೩॥

ದೇವಕಿ ಯಶೋದೆ ರೋಹಿಣಿಯರ್ಗೆ ಪಾಂಡವರ್ ।
ಭೂವರಾರ್ಜುನ ಕುಂತಿಯರ್ಗಖಿಳಯಾದವರ್ ।
ಭಾವಿಸಿದರುಳಿದವರ್ಗಾಲಿಂಗನೆಗಳಾದವನ್ಯೋನ್ಯಮವರವರ್ಗೆ ॥
ಆ ವಾಯುಜಂ ಕಂಡನರಸನಂ ರುಕ್ಮಿಣೀ ।
ದೇವಿ ಮೊದಲಾದರಂ ದ್ರೌಪದಿಸುಭದ್ರೆಯರ್ ।
ತಾವಪ್ಪಿದರ್ ಪ್ರಭಾವತಿ ಹರಿಯ ರಾಣಿಯರ್ಗೆರಗಿ ಕಾಣಿಕೆಗೊಟ್ಟಳು ॥೨೪॥

ಮೂಡುವೆಳನಗೆಗೂಡಿ ದ್ರುಪದನಂದನೆಯ ಮೊಗ ।
ನೋಡಿ ನೀನೆ ಚದುರೆ ಲೋಕದೊಳ್ ಕೃಷ್ಣನಂ ।
ಷೋಡಶ ಸಹಸ್ರ ನಾರಿಯರ್ಕೈದಲರಿಯುರಾತನನೊಲಿಸಿಕೊಂಡೆ ನಿನ್ನ ॥
ಗಾಡಿಗಿದು ಪೊಸತೆ ಗಂಡರನೈವರಂ ಮರುಳು ।
ಮಾಡುವ ಮಹಾಪತಿವ್ರತೆ ನಿನ್ನೊಳಾವು ಮಾ ।
ತಾಡಲಂಜುವೆವೆಂದು ಸತ್ಯಭಾಮಾದೇವಿ ನುಡಿಯಲವಳಿಂತೆಂದಳು ॥೨೫॥

ಕಾರುಣ್ಯನಿಧಿಯನಾನೊಲಿಸಿಕೊಳದಿರ್ದೊಡೆ ವಿ ।
ಚಾರಿಸುವರುಂಟೆ ಎನ್ನಭಿಮಾನಹಾನಿಯಂ ।
ಕೌರವನ ಸಭೆಯೊಳುಳಿದವರಿರ್ದೊಡೇನಾಯ್ತು ಕೃಷ್ಣನೇ ಪಾಲಿಸಿದನು ॥
ಪಾರಿಜಾತದ ನೋಂಪಿಗೆಂದು ನಿಜರಮಣನಂ ।
ನಾರದಮುನಿಗೆ ಕೊಟ್ಟುಬಳಿಕೊಡೆಯರುಂಟೆ ನಿನ ।
ಗೀರುಕ್ಮಿಣೀಧವನನಾಥರ್ಗೆ ನಾಥನೆಂಬುದು ಪುಸಿಯೆ ಪೇಳೆಂದಳು ॥೨೬॥

ಎಂದು ದ್ರೌಪದಿ ನುಡಿದ ಮಾತು ಮುಗಿವನಿತರೊಳ್ ।
ಮಂದಿಯಂ ಕಡೆಗೆ ತೊಲಗಿಸಿ ಯಜ್ಞತುರಗಮಂ ।
ತಂದು ನಿಲ್ಲಿಸಿದರಲ್ಲಿ ಹರಿ ನಿರೂಪಿಸಲರಸನಾಜ್ಞೆಯಿಂದಾ ಕ್ಷಣದೊಳು ॥
ಇಂದೀವರಾಕ್ಷಿಯರ್ ನೋಡಿದರ್ ಕೌತುಕಮಿ ।
ದೆಂದು ವಸ್ತ್ರಾಭರಣ ಪುಷ್ಪ ಗಂಧಾಕ್ಷತೆಗ ।
ಳಿಂದೆ ಪೂಜಿಸುತಿರ್ದರಶ್ವಮಂ ಭೂಪ ಕೇಳ್ ಮೇಲಾದ ಸಂಗತಿಯನು ॥೨೭॥

ಆ ಸಮಯದೊಳ್ ಸಾಲ್ವನನುಜನನುಸಾಲ್ವನೀ ।
ವಾಸುದೇವನ ಪೂರ್ವವೈರಕಲ್ಲಿಗೆ ಬಂದು ।
ಮೋಸದೊಳ್ ತಾಗಿ ತತ್ತುರಗಮಂ ಪಿಡಿದೆತ್ತಿಕೊಂಡೊಯ್ದು ಕಟ್ಟಿ ಬಳಿಕ ॥
ಆಸುತ್ತುವಳಯದೊಳ್ ಪದ್ಧನಾಕಾರಕೆ ಮ ।
ಹಾಸೇನೆಯಂ ನಿಲಿಸಿ ತಾನದರ ಮುಖದೊಳ್ ಶ ।
ರಾಸನದೊಳಂಬನೇರಿಸಿ ನಿಂದು ನುಡಿದಂ ಸುಧಾರನೆಂಬಾಪ್ತದೊಡನೆ ॥೨೮॥

ಅಣ್ಣನಂ ಕೊಂದೆಮ್ಮ ಸೌಭನಗರವನಿರಿದ ।
ಬೆಣ್ಣೆಗಳ್ಳನ ಕೊಬ್ಬಿದುದರದೊಳ್ ಪೊಚ್ಚಪೊಸ ।
ಸುಣ್ಣವಂ ಪೊಯ್ದು ನೀರೆರೆದಂತೆ ಮಾಡಿ ಯಾದವಪಾಂಡವರ ಬಿಂಕದ ॥
ಬಣ್ಣವಂ ಕೆಡಿಸಿ ಕಾಳಗದೊಳುಬ್ಬಸಮನುರೆ ।
ಹಣ್ಣಿದಲ್ಲದೆ ಮಾಣೆನಹಿತರ್ಗೆ ಪಗೆಯನ್ನ ।
ಕಣ್ಮುಂದೇಂ ಸುಳಿದು ಜೀವಿಪನೆ ಸೇನೆ ಸನ್ನದ್ಧವಾಗಿರಲೆಂದನು ॥೨೯॥

ಇಂದು ತುರಗಾಹಿಯಂ ಬಂದಿರಿಯದವನೆನಗೆ ।
ಸಂದ ಪಗೆ ಗೋವಳೆಯರುಪನಾಯಕನ ರಣಕೆ ।
ನಿಂದು ಕಾದುವನಾಪ್ತನನಿತರೊಳ್ ಸಂದೇಹಮಿಲ್ಲ ಪರಿವಾರದೊಳಗೆ ‖
ಹಿಂದಣಪರಾಧಮಂ ಮುಂದಣ ದ್ರೋಹಂಗ ।
ಳೊಂದುಮಂ ನೋಡೆ ನೂರುಂಬಳಿ ಗಜಾಶ್ವ ಗೋ ।
ವೃಂದ ಧನ ಯುವತಿಯರ್ ಮೊದಲಾದ ಸಕಲವಸ್ತುಗಳನಿತ್ತಪೆನೆಂದನು ‖೨೦‖

ಸೊಕ್ಕಿದನುಸಾಲ್ವನೀತೆರದಿಂದೆ ತನ್ನ ಪಡೆ ।
ಗಿಕ್ಕಿದೀ ಸೆಲವಂ ಸುಧಾರನೆಂಬಾ ಸಚಿವ ।
ನಕ್ಕರಿಂದಖಿಳ ಸೇನಾವಳಯದೊಳ್ ಸಾರಿಸಲ್ ಪ್ರಳಯ ಮೇಘಂಗಳ ‖
ಕಕ್ಕಸದ ಸಿಡಿಲ ಗರ್ಜನೆಗಳಂ ಕಲ್ಪಾಂತ ।
ಕುಕ್ಕುವಬ್ಧಿಗಳ ಪೆರ್ದೆರೆಗಳ ಸುಘೋಷವಂ ।
ಮಿಕ್ಕವು ಸಮಸ್ತ ವಾದ್ಯ ಧ್ವನಿಗಳತಿಬಲರ ಬೊಬ್ಬೆಯಬ್ಬರದ ಕೂಡೆ ‖೨೧‖

ಇತ್ತಲಡಹಾಯ್ದು ಮೋಸದೊಳಾ ತುರಂಗಮವ ।
ನತ್ತಲನುಸಾಲ್ವನೆಳೆದುಯ್ವ ಭರಕಬಲೆಯರ ।
ಮೊತ್ತಮಗಲಕೆ ಚೆಲ್ಲಿತಂಜಿದರ್ ವನಿಗಳೆಲ್ಲಾ ಜನಂ ತಲ್ಲಣಿಸಿತು ‖
ಚಿತ್ತದೊಳ್ ನೃಪನಣಕೆಗೊಳುತಿರ್ದನುಳಿದವರಿ ।
ದೆತ್ತಣದ್ಭುತವೆಂದು ಬೆಗಾದರಸುರಹರ ।
ನುತ್ತಮಾಂಗವನೊಲೆಯುತಂದು ವಿಕಮಾನದಿಂ ಪಟುಭಟರ್ಗಿಂತೆಂದನು ‖೨೨‖

ಈತನನುಸಾಲ್ವನೆಂಬಾತನಿವನಣ್ಣನಂ ।
ಘಾತಿಸಿದೆವಂದದರ ಖಾತಿಗೆವ್ಮೊಡನೆ ಸ ।
ತ್ವಾತಿಶಯಮಂ ತೋರುವಾತುರದೊಳತಿಬಲವ್ರಾತಮಂ ಕೂಡಿಕೊಂಡು ‖
ಭೀತಿಯಿಲ್ಲದೆ ಪರಮಹೀತಳಕೆ ಬಂದು ನ ।
ಮ್ಮಾತುರಗವಂ ಪಿಡಿದನೇತರಪರಾಕ್ರಮದ ।
ಮಾತು ನಮಗಿನ್ನು ಮಝುಪೂತು ದಾನವಯೆನುತೆ ಪೀತಾಂಬರಂ ಪೊಗಳ್ದನು ‖೨೩‖

ಆರೀತನಂ ಗೆಲ್ದು ಕುದುರೆಯಂ ಬಿಡಿಸಿ ತಹ ।
ವೀರರೀ ಪಟುಭಟರೊಳವರ್ಗಿದೆಕೊ ವೀಳೆಯಂ ।
ಪೂರೈಸುವಡೆ ಪಿಡಿಯಲೆಂದು ಹರಿ ನುಡಿಯಲತಿಬಲರಂಜಿ ಸುಮ್ಮನಿರಲು ‖
ಚಾರುಹಯಮಂ ತಂದು ಕುಡುವೆನಲ್ಲದೊಡೆ ವೃಷ ।
ಸೀರಮಣನುಗ್ರಗತಿಗಿಳಿವೆನೆಂದಸುರಸಂ ।
ಹಾರನಡಿಗೆರಗಿ ತಾಂಬೂಲಮಂ ಪ್ರದ್ಯುಮ್ನನಾಂತು ಕಳುಹಿಸಿಕೊಂಡನು ‖೨೪‖

ಬಳಿಕ ವೃಷಕೇತು ಗರುಡಧ್ವಜನ ವೃದುಪದಯು ।
ಗಳಕೆರಗಿ ದೇವ ಚಿತ್ತೈಸಾದೊಡಿನ್ನು ಕೇಳು ।
ಗುಳದೊಳನುಸಾಲ್ವನೆಂದೆಂಬ ಖಳನಂ ಪಿಡಿದು ನಿಮ್ಮಂಘ್ರಿಗೊಪ್ಪಿಸದೊಡೆ ॥
ಮುಳಿದು ವಿಪ್ರನ ವಧೆಗೆಳಸಿದವನ ಗತಿಗೆ ತಾ ।
ನಿಳಿವೆನೆನ್ನಂ ಕಳುಹಬೇಕೆಂದು ಕೈಮುಗಿಯೆ ।
ನಳಿನಾಕ್ಷನಾತನಂ ತೆಗೆದು ತಕ್ಕೈಸಿ ವೀಳೆಯವಿತ್ತು ಬೀಳ್ಕೊಟ್ಟನು ॥೩೫॥

ಸರ್ವೋಗಿಜಯದ ಮೀನಧ್ವಜವನಳವಡಿಸಿ ।
ವಿದ್ಯುತ್ಪ್ರಚಾರವಂ ಗೆಲ್ವ ಹಯವಂ ಪೂಡಿ ।
ಖದ್ಯೋತಬಿಂಬವಂ ಮಣಿಖಚಿತ ಕಾಂಚನಮಯ ಪ್ರಭೆಗಳಿಂದೆ ನಗುವ ॥
ಉದ್ಯದ್ರಥವಂ ಜೋಡಿಸಿ ಮಹಾಸಮರ ।
ಕುದ್ಯುಕ್ತನಾಗಿ ಸಾರಥಿ ತಂದು ನಿಲಿಸಲಾ ।
ಪ್ರದ್ಯುಮ್ನನಡರ್ದು ನಿಜಚಾಪಮಂ ಜೇಗೈದು ಬಂದನಾಹವಕೆ ನಲಿದು ॥೩೬॥

ಕಂಡನನುಸಾಲ್ವನಿವನಾರೀಗ ರಣಕೆ ಮುಂ ।
ಕೊಂಡು ಬಹ ವೀರನಸುರಾರಿಯಾದೊಡೆ ಕೇತು ।
ದಂಡದಗ್ರದೊಳಿರದು ಮತ್ಸ್ಯವಿವನವನ ಸುತನಾಗಬೇಕಿಲ್ಲ ಬರಲಿ ॥
ದಿಂಡುಗೆಡವುವೆನೆನುತೆ ಸೇನೆಯುಂ ಪಿಂದಿಕ್ಕಿ ।
ಪುಂಡರೀಕಾಕ್ಷನ ಕುಮಾರನಂ ತಡೆಯೆ ಕೋ ।
ದಂಡದೊಳ್ ಪ್ರದ್ಯುಮ್ನನೈದುಕಣೆಯುಂ ಪೂಡಿ ದೈತ್ಯನಂ ತೆಗೆದೆಚ್ಚನು ॥೩೭॥

ವ್ಯಗ್ರವೇತಕೆ ನಿನಗೆ ನಾವಿಂದ್ರಿಯಂಗಳಂ ।
ನಿಗ್ರಹಿಸಿದವರಲ್ಲ ವಿರಹವೆಮಗಿಲ್ಲ ಸುರ ।
ತಗ್ರಾಹ್ಯ ಮೋಹನದ ಪಂಚಬಾಣಪ್ರಯೋಗಂಗಳೇಕೀಗ ನಿನ್ನ ॥
ವಿಗ್ರಹಕೆ ನಮಗಿಕ್ಷುಚಾಪವಾರಡಿವೆದೆ ಸ ।
ಮಗ್ರಕುಸುಮಾಸ್ತ್ರಂಗಳಿಲ್ಲ ನೋಡೆಮ್ಮದೊಂ ।
ದುಗ್ರಸಾಯಕವನೆಂದಾರ್ದು ತೆಗೆದೆಚ್ಚನನುಸಾಲ್ವನಚ್ಯುತನ ಸುತನ ॥೩೮॥

ಪೃಥಿವಿಪತಿ ಕೇಳೆದೆಯಮೇಲೆ ಕೋಲ್ ಕೀಲಿಸಲ್ ।
ವ್ಯಥಿಸಿ ಮೈಮರೆದನಾ ಪ್ರದ್ಯುಮ್ನನೊಡನೆ ಸಾ ।
ರಥಿ ಕೃಷ್ಣನಿದ್ದೆಡೆಗೆ ತೇರನಾಗಳೆ ಕೊಂಡು ಬರೆ ಶೌರಿ ಕಂಡು ಬಳಿಕ ॥
ಪೃಥುಲಪೌರುಷದಿಂದೆ ನಮ್ಮ ಸುತನಿಂದು ರಿಪು ।
ಮಥನಮಂ ಮಾಡಿ ಬಳಲಿದನೆನುತೆ ಬಂದೆಲಪೊ ।
ಶಿಥಿಲಪೌರುಷ ನಿನ್ನನೇಗೆಯ್ಯಲೆಂದು ಹರಿಯೊದೆದನೆಡಗಾಲ್ಬುದಿಯೊಳು ॥೩೯॥

ದ್ವಾರಕೆಯನೆಂತಬಲೆಯುರ ಮುಂದೆ ಪುಗುವೆ ಪೋ ।
ಗಾರಣ್ಯಕೆನಲಲ್ಲಿ ಮುನಿಗಳ್ಗೆ ಸೇರೆ ಕೆ ।
ಟ್ಸಾರ್ರೂರ ಸಾರ್ದೊಡಂ ನೀಂ ವಿರಹಿತನು ವಿಷಮನೆಂದೋರ್ವರುಂ ಕೂಡರು ॥
ಆರಿನ್ನು ಗತಿ ನಿನಗೆ ಸಂಬಂಧಿ ಬಾಣನಂ ।
ಹಾರೈಸುವೊಡೆ ನಿನ್ನ ಬೇರ್ಗ್ಗೊಲೆಗೆ ಶಿವನಿಪ್ಪ ।
ಕಾರಣವನಂಗತ್ವಮೇ ಪ್ರಾಪ್ತಮೆಂದು ಹರಿ ತನ್ನ ಸುತನಂ ಜಗೆದನು ॥ ೪೦ ॥

ಕಾಲ್ಬುದಿಯೊಳೊದೆಯಲ್ಕೆ ನಿನ್ನ ಮಗನೀತಂಗೆ ।
ಸೋಲ್ದಪನೆ ಸಾಕಿನ್ನು ಕರ್ಣನ ಕುಮಾರಂಗೆ ।
ಮೇಲ್ದಳವನಟ್ಟೆಂದು ಮಾರುತಿ ನುಡಿಯೆ ಶೌರಿ ಪೋಗು ನೀನಾದೊಡೆನಲು ॥
ಸೋಲ್ದುದಿನ್ನಾಹವಂ ತನಗೆಂಬ ಹರ್ಷದಿಂ ।
ನಾಲ್ದೆಸೆಗಳದಿರೆ ಬೊಬ್ಬಿರಿದಾರ್ದು ಬಿಲ್ವೆದೆಗೆ ।
ಕೋಲ್ದುಡಿಸಿ ತೆಗೆದಿಸುತ ರಿಪುಚಾತುರಂಗಮಂ ತಾಗಿದಂ ಪವನಸೂನು ॥ ೪೧ ॥

ಆ ಭೀಮನುರವಣಿಸೆ ಕಂಡು ವೃಷಕೇತು ನಗು ।
ತೀ ಭೂಮಿಗಿಂದು ಪೊಸತಾದುದೆಲೆ ತಾತ ಬಾ ।
ಲಾಭಿಲಾಷೆಯ ಫಲಕೆಳಸುವರೆ ಪಿತರ್ ತನಗೆ ಮಿಾಸಲೀ ಸಮರಮಿದಕೆ ॥
ಲೋಭದಿಂ ನೀಂ ಬರ್ಪುದುಚಿತಮೇ ಪೇಳೆನಲ್ ।
ಶೋಭಿಸುವ ಪಣ್ಣಿಡಿದು ತಂದೆ ಸವಿಸದೊಡೆ ತಾ ।
ನೇ ಭುಂಜಿಪನೆ ಪಸುಳೆ ನಿನಗೆ ರಣದನುದೋರಬಂದೆನೆಂದಂ ಮಾರುತಿ ॥ ೪೨ ॥

ನಸುನಗುತೆ ವೃಷಕೇತು ಬಳಿಕ ಕಾರ್ಮುಕವನೊದ ।
ರಿಸುತೆ ರಿಪುಸೈನ್ಯಮಂ ತಾಗಿದಂ ಮಾರ್ದು ಗ ।
ರ್ಜಿಸಿ ವನಾಂತರಕೆ ಸಿಡಿಲೆರಗಿದಂತಿದಿರಾಂತ ಭಟರ ಗೋಣ್ಗಳನರಿಯಲು ।
ಮಸಗಿ ಚಿಮ್ಮುವ ರಕ್ತಧಾರೆಗಳ್ ಕೂಡೆ ಕ ।
ಣ್ಸೆದುವಲ್ಲಿಯ ಕಿಚ್ಚಿನಂತೊಡನೆ ಮುಸುಕಿತೆ ।
ಣ್ದೆಸೆಯನಿಸುವಂಬು ಬಿರುವಳೆಯಂತೆ ಹೊನಲಾಯ್ತು ರುಧಿರಂ ಪ್ರವಾಹದಂತೆ ॥ ೪೩ ॥

ಝುಷಕೇತನಂ ತನಗೆ ಸೋಲ್ದು ಹಿಮ್ಮೆಟ್ಟಿದಂ ।
ವೃಷಭಾಂಕಿತಧ್ವಜಸ್ತಂಭದವನಾರಿವಂ ।
ವಿಷಮಗೋಪಾಲನಲ್ಲೆನುತೆ ಕಡುಗೋಪದಿಂದನುಸಾಲ್ವನಿವನ ಮೇಲೆ ॥
ಇಷುವೃಷ್ಟಿಯಂ ಕರೆಯುಲಾ ಕರ್ಣಸಂಭವಂ ।
ಮೃಷೆಯಲ್ಲದೆನ್ನೊಡನೆ ತೋರಿಸಾ ನಿನ್ನ ಪೌ ।
ರುಷವನೆಂದೆನುತವಂ ಮುಸುಕಿದಂ ಪೊಸಮಸೆಯ ವಿಶಿಖದೊಳವನ ರಥವನು ॥ ೪೪ ॥

ಉಚ್ಚಳಿಸಿ ಹಾಯ್ದುವಂಬುಗಳವನ ಕಾಯದಿಂ ।
ದೆಚ್ಚರಿಲ್ಲದೆ ನಿಮಿಷವಿರ್ದ ಚೇತರಿಸಿ ಕೊಂ ।
ಡೆಚ್ಚನನುಸಾಲ್ವನೀ ಕರ್ಣಜನ ವಕ್ಷಸ್ಥಲವನೊಂದು ಬಾಣದಿಂದೆ ॥
ಅಚ್ಚಪೂರಾಯ ಗಾಯದೊಳೆ ಮೈಮರೆದು ಕ ।
ಣ್ಮುಚ್ಚುತೆ ವರೂಥದೊಳಾ ಪಾಲಗರ್ಕ ಕಂಡು ಖತಿ ।
ವೆಚ್ಚು ಪವಮಾನಜಂ ಬಂದವನ ತೇರನಪ್ಪಳಿಸಿದಂ ಬಲ್ಗದೆಯೊಳು ॥೪೫॥

ಮುಗ್ಗಿದುದು ಕುದುರೆ ಸಾರಥಿ ಮಡಿದನಾ ರಥಂ ।
ನೆಗ್ಗಿದುದು ಚಿಗಿದನನುಸಾಲ್ವನಾತನ ಬಲಂ ।
ಮುಗ್ಗಿದುದು ಸಂದಣಿಸಿ ಪವನಜನ ಮೇಲೆ ಶಸ್ತ್ರಾಸ್ತ್ರಪ್ರಯೋಗದಿಂದೆ ॥
ತಗ್ಗಿದುದು ದಿಗ್ದಂತಿ ಭೋಗಿರಾಜನ ಕೊರಲ್ ।
ಕುಗ್ಗಿದುದು ಧರಣಿತಲಮಿಬ್ಭಾಗವಾಗಿ ಸಲೆ ।
ಹಿಗ್ಗಿದುದು ಪೋಗೆನಲ್ ಪೊಯ್ದನುರುಗದೆಯಿಂದೆ ಪರಸೈನ್ಯಮಂ ಭೀಮನು ॥೪೬॥

ಕಾದಿ ದಂದುಗವಡದ ಮುನ್ನವೇ ತನ್ನಳವಿ ।
ಗೈದಿದಂಕದ ಭಟರ ತೇರ್ಗಳಂ ಕೆಗದಿಳೆಗೆ
ಮೋದದಿಂ ಕೊಂದನಡಗೆಡಹಿದಂ ಸದೆವನೊದೆದಂ ಪಿಡಿದು ಸುಂಡಿಲ್ಗಳ ॥
ಸೇದಿ ದಂತಿಗಳ ನೀಡಾಡಿದಂ ರುಧಿರದಿಂ ।
ನಾದಿದಂ ಧರೆಯನುಸಿರ್ಗಾಳಿಯಿಂದಂ ಪಾರ ।
ಲೂದಿದಂ ರಣದೊಳ್ ಪೆಣದ ರಾಶಿಮಾಡಿದಂ ಪರಬಲವೊಳಾ ಭೀಮನು ॥೪೭॥

ಮೆಟ್ಟಿದಂ ಮಡದೊಳಿಟ್ಟೊರಸಿ ಕಾಲಾಳ್ಗಳಂ ।
ಘಟ್ಟಿಸಿದನುರುಬುವ ಹಯಂಗಳಂ ನಭಕೆ ತೆಗೆ ।
ದಿಟ್ಟನಾನೆಗಳನಪ್ಪಳಿಸಿದಂ ತೇರ್ಗಳಂ ಧುರದೊಳನಿಲಜನ ಕೂಡೆ ॥
ಮುಟ್ಟಿ ಕಾದುವರುಂಟೆ ಸೇನೆ ನಿಮಿಷಾರ್ಧದೊಳ್ ।
ಬಟ್ಟಬಯಲಾಯ್ತು ಪೊಸರಥದೊಳೈತಂದಳವಿ ।
ಗೊಟ್ಟನನುಸಾಲ್ವನಂಬುಗಳ ಮಳೆಯಂ ಕರೆಯುತಾ ವೃಕೋದರನ ಮೇಲೆ ॥೪೮॥

ಸಾಲ್ವಾನುಜಂ ಪೂಣ್ದು ಸಲ್ಕೆ ಯಮದಂಡಮಂ ।
ಪೋಲ್ವಗದೆಯಂ ಕೊಂಡು ಮತ್ತೆ ಮಾರುತಸುತಂ ।
ಮೇಲ್ವಾಯ್ದು ಬರಲೊಂದುಬಾಣಮಂ ಕಿವಿವರೆಗೆ ತೆಗೆದೆಚ್ಚು ಬೊಬ್ಬಿರಿಯಲು ॥
ಕೋಲ್ವಕ್ಷದೊಳ್ ನಾಂಟಿತಳವಳಿದು ಪವನಜಂ ।
ತೇಲ್ವಿನತರೊಳ್ ಕಂಡು ದೈತ್ಯನುಳಿದಟಗರ್ಗೆ ।
ಸೋಲ್ವನಲ್ಲೆಂದಚ್ಯುತಂ ತಾನೆ ಕೋಪದಿಂದಾಹವಕೆ ನಡೆತಂದನು ॥೪೯॥

ದರ್ಪದಿಂ ಕುದುರೆಯುಂ ಕೊಂಡುಬಹೆನೆಂದು ಕಂ।
ದರ್ಪನೊಂದೆಸೆಯೊಳುರವಣಿಸಿದಂ ಕೂಡೆ ನಡೆ।
ದರ್ಪರಬಲಕೆ ಸಾಂಬ ಕೃತವರ್ಮ ಗದ ಸಾತ್ಯಕಿ ಪ್ರಮುಖ ಯದುವೀರರು ॥
ಸರ್ಪವೈರಿಧ್ವಜನ ರಥವೈದೆ ಕಂಡು ನೇ।
ಸರ್ಪಲವನಡಗಿಸುವ ಚಕ್ರದಿಂ ದೈತ್ಯರ ಪೆ।
ಸರ್ಪರೆಯುದಂತೆ ಮಾಡುವ ಕೃಷ್ಣನಿವನೆಂದರಿದು ಮೊರೆದನನುಸಾಲ್ವನು ॥೫೦॥

ಪೊಳೆವಮಿಂಚುಗಳೈಸೆ ತೇಜಿಗಳಿವಲ್ಲ ಬ।
ಲ್ಮೊಳಗುಗಳಿವೈಸೆ ರಥಚಕ್ರಧ್ವನಿಗಳಲ್ಲ।
ತೊಳಗುವಮರೇಂದ್ರಕಾರ್ಮುಕಮೈಸೆ ಪಿಡಿದಿರ್ದ ಶಾರ್ಙ್ಗಧನುವಲ್ಲ ಬೀಳ್ವ ॥
ಮಳೆವನಿಗಳೈಸೆ ಕೂರಂಬುಗಳಿವಲ್ಲ ಕ।
ಣ್ಗೊಳಿಪ ಕಾರ್ಮುಗಿಲೈಸೆ ಕೃಷ್ಣನಲ್ಲೆಂಬವೋಲ್।
ಕೊಳುಗುಳಕೆ ವೈದೋರೆ ಕಂಡು ಕಲಿಸಿಂಹದಂತಿದಿರಾದನನುಸಾಲ್ವನು ॥೫೧॥

ವ್ಯಗ್ರದಿಂದೈದುವ ಮುರಾರಿಯುಂ ಕಂಡು ತ।
ನ್ನಗ್ರಜನನಂದು ಕೊಂದಾ ಪಗೆವನೀತನಂ।
ನಿಗ್ರಹಿಪೆನೆಂದು ಕಣೆನಾಲ್ಕರಿಂದಚ್ಯುತನ ಹಯಚತುಷ್ಟಯವನಿಸಲು ॥
ಉಗ್ರಶರಘಾತಿಗವು ಸೂತನಂ ಕೈಕೊಳದೆ।
ವಿಗ್ರಹವನುಳಿದೊಂದು ಕಡೆಗೆ ಹಾಯ್ದುವು ಯದುಕು।
ಲಾಗ್ರಣಿಯನಿದಿರೆ ಕಾಣದೆ ನೊಂದು ತನ್ನವರ್ಗನುಸಾಲ್ವನಿಂತೆಂದನು ॥೫೨॥

ನವೆದಪುದೊ ಪರಿವಾರಮೀವ ಧನಮಂ ತರಿಸ।
ಲಪಚಾರದಿಂ ಪ್ರಜೆಗಳಲಸಿದರೊ ದೇಶದೊಳ್।
ತವಕ ವಿ ಗೆ ನಾರಿಯರ್ ಪತಿಗಳಿರಲನ್ಯರೊಳ್ ಮೆರೆದಪರೊ ಮತ್ಕೋಶಕೆ ॥
ತವೆ ಪುತ್ರರಿಲ್ಲದಳಿದವರೊಡವೆ ಸಾರ್ದಪುದೊ।
ಬವರಕ್ಕೆತಂದ ರಿಪು ಕೃಷ್ಣನಂ ಕಾಣದಿಹ।
ಪವಣಾವುದಕಟ ಪೊಸತಿದು ತನ್ನ ಹಗೆ ಹರಿಯದೆಂದು ಚಿಂತಿಸುತಿರ್ದನು ॥೫೩॥

ಅನ್ನೆಗಂ ಕುದುರೆಗಳನುಪಚರಿಸಿ ಸಾರಥಿಗೆ।
ಸನ್ನೆಗೈದನುಸಾಲ್ವನಭಿಮುಖಕೆ ಮುರಹರಂ।
ಕೆನ್ನೆಗೇರಿಸಿ ಚಾಪದೊಳ್ ಪೂಡಿದಂಬನಾರ್ದಿಸುತೆ ಬರಲವನತ್ತಲು ॥
ಪನ್ನಗಾರಿಧ್ವಜಂ ಮಗುಳ್ಕೈತರಲ್ ಕಂಡು।
ತನ್ನೊಳ್ ಪೊಣರ್ವ ಭರದಿಂ ಬಂದು ಸಮರದೊಳ್।
ಗನ್ನಗತಕವನೆಸಗಲೇನಹುದು ಮಾರಾಂತು ನೋಡೆನುತೆ ತೆಗೆದೆಚ್ಚನು ॥೫೪॥

ಸಂಜನಿಸುವೆಳನಗೆಯೊಳಗಧರಂ ಮಾರಾಂಘ್ರೀ।
ಡಂಜುವೆವು ನಿಮಗೆ ಸಂಗ್ರಾಮದೊಳ್ ದಾನವರ।
ಭಂಜನೆಗಲಸಿದೊಡಂ ಬಿಡದಲಾ ನವುಗೆನುತೆ ತೆಗೆದಿಸಲಡಂ ಸ್ವೈರಿಸಿ॥
ಶಿಂಜಿನಿಯೊಳೊಂದು ಸರಳಂ ಪೂಡಿ ಬರೆಸೆಳೆದು।
ರಂಜಿಪ ವಿಶಾಲವಕ್ಷಸ್ಥಳವನೆಚ್ಚನಂ।
ದಂಜನಾದ್ರಿಯಮೇಲೆ ಸಿಡಿಲೆರಗಿದಂತಾಗೆ ದನುಜಾರಿ ಮೈಮರೆದನು ॥೫೫॥

ಪಾಥೋರುಹಾಕ್ಷನಂ ದಾರುಕಂ ನಿಟ್ಟಿಸಿ ವ।
ರೂಥಮಂ ತಿರುಗಿಸಿದನಖಿಳ ಯಾದವರ ವರ।
ಯೂಥಮದು ಮಸಗಿತು ಭಯಂಗೊಂಡು ಪುರಜನದ ನೆರವಿ ಪೆರ್ಬಾಗಿಲ್ಗಳ।
ವೀಥಿಗಳೊಳಿಟ್ಟಣಿಸಿ ಪಟ್ಟಣಕೆ ಸರಿಯೆ ನರ।
ನಾಥನಿರ್ದಲ್ಲಿ ಬೆರಗಾಗೆ ನಿಂದಂ ವಧೂ।
ಯೂಥಮಸುರಾರಿಯಂ ಬಳಸಿತದರೊಳ್ ಸತ್ಯಭಾಮೆ ನಗುತಿಂತೆಂದಳು ॥೫೬॥

ದಾನವಂಗಿದಿರಾಗಿ ಪೋಗಿ ರಣದೊಳ್ ಪ್ರಾಣ।
ದಾನಂ ಪಡೆದು ಮರಳಿದ ನಿನ್ನ ಸತ್ವದ ನಿ।
ದಾನವಂ ತಿಳಿದಹಿತರೇಗೆಯ್ಯರಕಟ ನಿಜಶೌರ್ಯದಿಂ ಪ್ರದ್ಯುಮ್ನನ॥
ಮಾನವಂ ಭಂಗಿಸಿದೆ ನಿನ್ನಂ ಜಗದೊಳಾವ।
ಮಾನವಂ ಬಣ್ಣಿಸುವನಿನ್ನು ನಿನ್ನದಟಿಗೆ ಸ।
ಮಾನರಂ ಕಾಣೆನೆಂದಳ್ ಸತ್ಯಭಾಮೆ ನಗುತುರೆ ಜರೆದು ನಿಜಪತಿಯನು ॥೫೭॥

ಕಂದೆರೆಮ ವಲ್ಲಭೆಯ ನುಡಿಗೆ ಲಜ್ಜಿಸಿ ಮನಂ।
ಕಂದೆ ಕಣ್ಣಾಲಿಗಳ್ ಕೆಂಪಡರೆ ಖತಿ ಮಿಗ।
ಲ್ಕಂದೆಡಬಲಂಗಳಂ ನೋಡಿ ಹರಿ ಮತ್ತೆ ರಣಕನುವಾಗುತಿರಲತ್ತಲು॥
ನಿಂದು ವೃಷಕೇತುವನುಸಾಲ್ವನಂ ತಡೆದು ನೀ।
ನಿಂದು ಮುರವೈರಿಯಂ ತೆರಳಚಿದೆ ವೀರ ಎ।
ನ್ನಿಂದುಳಿದೆಯಾದೊಡಾಂ ಕರ್ಣಜನೆ ನಿಲ್ಲೆನುತೆ ತೆಗೆದೆಚ್ಚು ಬೊಬ್ಬಿರಿದನು॥೫೮॥

ಹೆಂಗುಸಂ ಕೊಂದದಟತನದಿಂದೆ ಬಂಡಿಯಂ।
ಭಂಗಿಸಿದ ಬಲ್ಪಿಂದಲೆತ್ತು ಕತ್ತೆಯನಿರಿದ।
ತುಂಗವಿಕ್ರಮದಿಂದೆ ಹಕ್ಕಿ ಹಾವಂ ಸದೆದ ಸಾಹಸದೆ ಬೆರೆತಿರ್ದೊಡೆ॥
ಸಂಗರದೊಳಾಳಹನೆ ಗೋಪನವನಂ ಯುದ್ಧ।
ರಂಗದೊಳ್ ತೊಲಗಿಪುದೆನಗ ಪರಾಕ್ರಮವೆ ನಿ।
ನ್ನಂಗವಣೆಯಾವುದೆಮ್ಮೊಡನೆ ಸೆಣಸಿದೆಯೆನುತೆ ತೆಗೆದೆಚ್ಚನನುಸಾಲ್ವನು ॥೫೯॥

ಎಲೆವೊ ಖಳ ನೀನರಿಯದಿರ್ದೊಡೇನಚ್ಯುತಂ ।
ತಿಳಿಯೆ ಗೋಪಾಲನಲ್ಲವೆ ಕಪಟರೂಪದಿಂ ।
ಮುಳಿದು ದುಷ್ಟರನ್ನೈದೆ ಶಿಕ್ಷಿಸದೆ ಮಾಣ್ದಪನೆ ನೊಣನೂರಿ ಮದಗಜವನು॥
ಬಳಲಿಪುದು ಗಡ ದಿಟಂ ನಿನಗಸುರಕುಲಮಥನ ।
ನಳುಕುವನೆ ಶಿವಶಿವಾ ನಿನ್ನೊಡನೆ ಸೆಣಸುವೊಡೆ ।
ಬಲವಂತರಾವಲ್ಲ ನೋಡು ಸಾಕಿನ್ನೆನುತೆ ತೆಗೆದೆಚ್ಚನಿನಜಸೂನು ॥೬೦॥

ಕರ್ಣಜನ ಕಣೆಗಳಂ ಕತ್ತರಿಸಿ ಪೊಸಮಸೆವೋ ।
ಗರ್ಣಭೋಮಂಡಲವನಂಡಲೆಯಲೊಪ್ಪುವ ಸು।
ವರ್ಣಪುಂಖದ ಸರಳ್ಗರೆದನನುಸಾಲ್ವನದನೆಲ್ಲಮಂ ತತ್‌ಕ್ಷಣದೊಳು॥
ನಿರ್ಣಯಿಸಿ ವೃಷಕೇತು ಕೈಕೊಂಡನಿಸುಗೆಯಂ ।
ದುರ್ನಿರೀಕ್ಷಣಮಾದುದರಸ ಕೇಳದನೆನಗೆ ।
ವರ್ಣಿಸುವೊಡರಿದು ಕೂರಂಬುಗಳ್ಗಂಬರದೊಳಿಂಬಿಲ್ಲಮೆಂಬೊಲಾಯ್ತು ॥೬೧॥

ಮಂಡಲಾಕೃತಿಯಲ್ಲದಿರದು ನೋಡಲ್ಕೆ ಕೋ ।
ದಂಡವಂಬುಗಿವ ಹೂಡುವ ಬಿಡುವ ಭೇದಮಂ ।
ಕಂಡವರದಾರಸ್ತ್ರಮಯಮಾದುದೆಣ್ದೆಸೆಗಳನುಸಾಲ್ವನಳವಳಿದನು॥
ದಿಂಡುರುಳಿತಾತನ ಚತುರ್ಬಲಂ ಬಳಿಕ ಕೋ ।
ದಂಡಮಂ ಕೊಂಡವನ ರಥದೆಡೆಗೆ ಬಂದೆಳೆದು ।
ಕೊಂಡು ಕೃಷ್ಣನ ಪದಾಂಬುಜದ ಹೊರೆಗಾಗಿ ನಡೆತಂದಿಳುಹಿ ಕೈಮುಗಿದನು॥೬೨॥

ಕೊಂಡಾಡಿ ಶೌರಿ ತಕ್ಕೈಸಿದಂ ನೃಪನಪ್ಪಿ ।
ಮುಂಡಾಡಿ ಮನ್ನಿಸಿದನರ್ಜುನಾದಿಗಳಿಳಿಕೆ ।
ಗೊಂಡಾಡಿದರ್ ತಮ್ಮ ಸಾಸಮಂ ಸತಿಯರ್ ಪೊಗಳ್ದರೀ ಕ್ಷತ್ರಿಯರೊಳು॥
ಉಂಡಾಡಿಗಳ್ ಪಲಬರಿರ್ದೊಡೇನಹುದಿವಂ ।
ಗಂಡಾಡಿದುರುಭಾಷೆಗರಿಗಳ ಶಿರಂಗಳಂ ।
ಚೆಂಡಾಡಿ ಪಗೆವನಂ ಪಿಡಿದೊಪ್ಪಿಸಿದನೆಂದರೆಲ್ಲರುಂ ಕರ್ಣಜನನು ॥೬೩॥

ಯುದ್ಧಶ್ರಮಂ ಪೋಗೆ ಕಂದೆರೆದನನಿತರೊಳ್ ।
ಬುದ್ಧಿ ಪಲ್ಲಟಿಸಿತನುಸಾಲ್ವಂಗೆ ಕಂಡನನಿ ।
ರುದ್ಧನ ಪಿತಾಮಹನ ಮೂರ್ತಿಯಂ ದೇವ ನೀನಾವನೆಂದಾನರಿಯದೆ॥
ಬದ್ಧಮಾಯಾಪಾಶನಾಗಿ ಬಿದ್ದಿಹೆನೆನ್ನ ।
ನುದ್ಧರಿಸು ಮರೆವೊಕ್ಕೆನೆನೆ ಕೇಳ್ದು ಕರ್ಣಜಂ ।
ಕ್ರುದ್ಧನಾದಂ ಜರೆದು ನುಡಿದ ಕಲತನಮೆಲ್ಲಿ ಸುಡು ನಿನ್ನೊಡಲನೆಂದನು ॥೬೪॥

ದೋಷಮೋಚಕನ ಮರಳಿ ವೃಷಕೇತು ಕೃಷ್ಣನಂ |
ದ್ವೇಷದಿಂ ಬೈದೊಡಂ ತನ್ನ ಮನವಾರೆ ನಂ |
ತೋಷದಿಂ ನುತಿಗೈದೊಡಂ ಪೋಗದಿರ್ದಪುದೆ ಕೋಟಿಜನ್ಮದೊಳಿರ್ದಘದ |
ದೋಷಂಗಳಿಂದು ಪೇರಾಮೋಹದಿಂದೆ ನಾಂ |
ದಾಸ್ಯದೊಳೆ ದಯಾಂಬುಧಿ ಕಾಪಾಡುವನೆ ಪಿ |
ಶೇಷಸುಕೃತದ ಫಲಂ ದೊರೆಯದೆಂದೆನಗೆಂದವಂ ಬಿದ್ದನಚ್ಯುತನಂಘ್ರಿಗೆ ||೬೭

ನಗುತೆ ಮಧುಸೂದನಂ ಪ್ರೀತಿಯಿಂದಾತನಂ |
ತೆಗೆದಪ್ಪಿ ನೀನಿಂದು ಮೊದಲಾಗಿ ಬಿಡದೆಗೆ |
ಜಗದೊಳಿರದೆನ್ನೊಡನೆ ಧರ್ಮಜನ ಯಜ್ಞದ ಸಹಾಯಕಿಪ್ಪುದೆಂದು |
ಮಿಗೆ ಮನ್ನಿಸಿದರೊಳ್ ಪ್ರದ್ಯುಮ್ನನಾದ ಸೇ |
ನೆಗಳ್ವನಂ ಗೆಲ್ದು ತುರಗಮಂ ಬಿಡಿಸಿಕೊಂ |
ದಗದರ ಸಮ್ಮುಖಕೆ ತಂದು ನಿಲಿಸಿದನಸ್ತ್ರಭಾಷೆಗುತ್ತರವಾಗೆ ||೬೮

ಬಳಿಕ ಜಯರಾಘದಿಂದಸುರಾರಿ ಪಾಂಡವರ |
ಮೊಳಗುವ ನಿಬಿಳವಾದ್ಯಕುಲದಿಂದೆ ವಂದಿಗಳ |
ಕಳಕಳದ ರಭಸದಿಂ ಬಳಸಿದ ಸಮಸ್ತ ಪುರುಷ ಸ್ತ್ರೀಕದಂಬದೊಡನೆ |
ಪೊಳಲಂ ಪುಗಲ್ಕಾ ಯುಧಿಷ್ಠಿರ ನರೇಶ್ವರಂ |
ನಿಳಯಂಗಳತ್ತನಿಬರೆಲ್ಲರಂ ಸತ್ಕರಿಸಿ |
ಕಳುಹಿ ನಿಜಭವನದೊಳ್ ದೇವಪುರಲಕ್ಷ್ಮೀಪತಿಯನುಪಚರಿಸುತಿರ್ದನು ||೬೯

ಎಂಟನೆಯ ಸಂಧಿ

ಅದ್ಭುತೋತ್ಸವಮಾದುದಾವಾಂಗನಾಮಿತ್ರದಿ ಪಿ |
ಬಿದ್ದಜನ ಬುದ್ಧಿಜೀವಿಗಗ್ಗಡಾಂ ಕಂಡರು |
ಅಪ್ಪುದು ವಾದನಾಮಾ ಬಿಸಿತ ದಾಗದು ತಪ್ಪುಪಾದಂ ವಿಸ್ಮಿತ |

ದು ಕೇಳಗಮುಲ್ಪನಂ ಕಂಡಿಕೆಂಡು ಕಮ |
ಂಬರನಬಿಳಯನಾದವರ ಗಡಣದಿಂ |
ವಿಸ್ತೃರನ್ನದನ ಕನ್ಯಾನಮಂ ತರೆಯುತಿರೆ ಜಾತ್ಯಮಿತ್ರಬುದಿನಾ |
ವ್ರರತಾಲೆ ತರಂತ್ಯಪಿತ್ರತದ ವಿಧ |
ವಿಚಿತ್ರ ವೈಭವದಿಂದೆ ಬಳಿಕಾ ಮ |
ಗಡನುಡಮ ಪ್ರಾರಂಭಕಾಲದ ಪಂಚಕರ್ಣ ಸಂಧಿಸಿದ || ೧ ||

ವಿಡೆದೊಳಂ ತನಗೆ ಮಿಂಚಿಲ್ಲದತಿವೇಗ |
ರುತಂ ಪ್ರಬಲವಾಗಿ ಬೀಸುವ ಗಾಳಿ |
ಸ್ತ್ರಮುಮಂ ತೆಪರ್ನಿಗಳಾಕಾರಮಂ ಕೆಂಡುಕೆಂಡು ಮುಕ್ಕು |
ಮಂ ತರೆದು ಮುಲಯಾಚಲದ ಸೀಮೆ |
ಪರಸಿಜದೊಳ್ ದೃಮಿಸುವ ಮರಿದುಂಬಿಗಳ |
ಂ ಕೂಡಿಕೆಂಡರೆವೆಲರ್ ಬಂದುದು ವಿರಹಿಗೆಳೆದೆಯಿರಾವಂತೆ || ೨ ||

ಗುವ ತಳಿರೋರ್ಣರಣಂಗಳಂ ಕಟ್ಟುವುತೆ |
ಗಿಲೆಗಳ ದಾಯ್ದುಳ ಬಲಿದ ಬಂಧನದ |
ಬಡಿಸುತ್ತೆ ತುಂಬಿಗಳ ದಳಕೆ ಕಮ್ಮಲರ್ಗಳಂ ಸೂರೆಬಿಡುತೆ |
ರೆಳೆತ್ತಲುಂ ಸಾರಿಸುತೆ ವಿರಹಿಗಳ |
ತೆ ಜೊನ್ನದ ಬಸಂ ಪೆರ್ಚೆ ಮಧುಸ್ಸಮಂ |
ಟ್ಟ ವಾಗಿಯುನ್ನಡಗಿಸಿ ಸಮಸ್ತ ವನರಾಜ್ಯಮುಂ ಕೈಕೆಂಡನು || ೩ ||

ವನವಶೆಕೋಕಿಲೆಯೊಳ್ ಮರಿದುಂಬಿ ಕೋಗಿಲೆಯೊ |
ಂದಗೆ ಪೊಚ್ಚಪೊಂಗಾವರೆಯೊಳೆಕ್ಕೆ |
ಟ್ಟಗೆಯುಲರ್ ದೆಸತ ಪೆಳಂಗಳೊಳ್ ಗಳಿಂದು ಬನಸಿರಿಯೊಳು |
ಂದೊಂದರೊಳ್ ಮದುವೂಸಕಂಗಜನ |
ತೆ ಖತಿಯಂತೆ ದನದಂತೆ ಜಸದಂತೆ |
ಗಸಿದಂತೆ ಕೆಂದಿಸಿದಂ ವಳದಿ ಪಳಚುವಕ್ಕೆಗಳ ಬಣ್ಣದಿಂದೆ || ೪ ||

ತಳಿತೆಸೆವ ತರುಗಳ ನೆಳಲ್ಗಳಂ ಸಾರ್ದು ಶೀ।
ತಳದ ನಿರ್ಮಲಸುವಾರಿಯನೀಂಟಿ ನವ್ಯಪರಿ।
ಮಳದಿಂದೆ ಸೊಗಸ ತೀಡುವ ತೆಳುವೆಲರ್ಗೆ ಮೆಯ್ಯೊಡ್ಡಿ ಮಾರ್ಗಶ್ರಮವನು॥
ಕಳೆದರಧ್ವಗರೋಪರೊಳ್ ನೆರೆದು ವಿರಹಿಗಳ್।
ಮಲಯಜದ ಘನಸಾರದೊಳ್ ತಂಪುವೆತ್ತು ನಿ।
ಚ್ಚಳದ ಕರುವಾಡದೊಳ್ ಭೋಗಿಸಿದರಂದು ಚೈತ್ರಾಗಮದ ಸಂಭ್ರಮದೊಳು॥ ೫॥

ಆ ಚೈತ್ರಮಾಸಮೆಸೆದುದು ಧರ್ಮಜನ ಕೀರ್ತಿ।
ಭೂಚಕ್ರಮಂ ಮುಸುಕಿದಂತೆ ಬೆಳುದಿಂಗಳಿರೆ।
ಯಾಚಕರನೆತ್ತಲುಂ ಕೂಗಿ ಕರೆವಂತುಲಿಯೆ ಕೋಗಿಲೆಗಳೆಳೆಯ ಜನದ॥
ಲೋಚನಕುದಯಿಪ ಪಸದಂತೆ ಚೂತಾಂಕುರಂ।
ಗೋಚರಿಸೆ ಪಾತಕಕ್ಷಯದಂತೆ ಮಾಗಿಯ ವಿ।
ಮೋಚನಂ ಕಾಣಿಸಲ್ ಪುಣ್ಯವಾಸನೆಯಂತೆ ದಕ್ಷಿಣದ ವಾಯು ಸುಳಿಯೆ ॥ ೬ ॥

ಧಾತ್ರೀಶ ಕೇಳ್ ಬಳಿಕ ಧರ್ಮಜಂ ತಾಮರಸ।
ನೇತ್ರ ವೇದವ್ಯಾಸರಾಜ್ಞೆಯಿಂದಖಿಳರ್ಷಿ।
ಗೋತ್ರದ ಮುನಿಗಳೆಲ್ಲರಂ ಕರೆಸಿ ಮೇಲವರನುಜ್ಞೆಯಿಂದಾ ಯಜ್ಞದ॥
ಸೂತ್ರಪ್ರಕಾರದಿಂಬಾರಾಜಿಸುವ ಬಳಿಃ।
ಕ್ಷೇತ್ರದಧ್ವರಶಾಲೆಯೊಳ್ ದೀಕ್ಷೆಯಂ ತಳೆದು।
ಚೈತ್ರಸಿತಪೌರ್ಣಮಾಸಿಯ ದಿನದೆ ಬಿಟ್ಟನರ್ಚಿಸಿ ಹಯವನುತ್ಸವದೊಳು ॥ ೭ ॥

ಇಂದುಕುಲದಗ್ಗಳೆಯ ಪಾಂಡುವಸುಧಾಪಾಲ।
ನಂದನ ಯುಧಿಷ್ಠಿರ ನರೇಂದ್ರನಧ್ವರಹಯಮಿ।
ದಂ ದಿಟ್ಟರಾರಾದೊಡಂ ಕಟ್ಟಿಕೊಳಲಾರ್ಪೊಡಿಳೆಯೊಳೆಂಬೀ ಲಿಪಿಯನು ॥
ಸಂದಿಸಿ ಬರೆದ ಕನಕಪಟ್ಟಮನದರ ಪಣೆಯೊ।
ಳೊಂದಿಸಿ ತುರಂಗಮವನಮಲವಸ್ತ್ರಾಭರಣ।
ದಿಂ ದಿವ್ಯಗಂಧಮಾಲ್ಯಾಕ್ಷತೆಗಳಿಂದಲಂಕರಿಸಿ ಬಿಟ್ಟರ್ ಶುಭದೊಳು ॥ ೮ ॥

ಶ್ಲಾಘ್ಯದಿಂದಾದ ಮಜ್ಜನಭೋಜನದ ಸದಾ।
ರೋಗ್ಯದಿಂ ತಾಂಬೂಲ ವಸ್ತ್ರ ಭೂಷಣದ ಸೌ।
ಭಾಗ್ಯದಿಂ ಕುಸುಮ ಪರಿಮಳಲೇಪನಂಗಳಿಂ ಸ್ತ್ರೀಪುರುಷರೇಕಾಂತಕೆ॥
ಯೋಗ್ಯವಹ ಸಜ್ಜೆವನೆಯೊಳಗೀರ್ವರುಂ ದಿವ್ಯ।
ಭೋಗ್ಯಮೆನಿಪೊಂದು ಮಂಚದೊಳೊರಗಿ ಕಾಮವೈ।
ರಾಗ್ಯಮಾಗಿರ್ಪುದಸಿಪತ್ರವ್ರತಂ ತದ್ವ್ರತದೊಳರಸನಿರುತಿರ್ದನು ।೯॥

ತವ್ಯಾಗವೊಂದು ಬರಿಸಕೆ ಮುಗಿವುದನ್ನೆಗಂ।
ಸದ್ಯಾಜಮಾನದೀಕ್ಷೆಯನವನಿಪಂ ತಾಳ್ದ ।
ನುದ್ಯುಕ್ತರಾದರರ್ಜುನನೊಡನೆ ಹಯರಕ್ಷೆಗಸುರಹರನಾಜ್ಞೆಯಿಂದೆ॥
ಉದ್ವೃತ್ತಪರಾಕ್ರಮಿಗಳನುಸಾಲ್ವ ಸಾತ್ಯಕಿ।
ಪ್ರದ್ಯುಮ್ನ ಕೃತವರ್ಮ ಯೌವನಾಶ್ವತಿಬಲ।
ಖದ್ಯೋತಸುತಸೂನು ಮೊದಲಾದ ವೀರರೊದಗಿತು ಚಾತುರಂಗದೊಡನೆ ॥೧೦॥

ಇಭಮುಖಾರ್ಚನೆಯುಂ ನವಗ್ರಹದ ಪೂಜೆಯುಂ।
ವಿಭವದಿಂ ಮಾಡಿ ಧರ್ಮಜ ಭೀಮ ಕುಂತಿಗ।
ಳ್ಗಭಿನಮಿಸಿ ಕೃಷ್ಣನ ಪದಾಂಬುಜಕ್ಕೆರಗಿ ದಿಕ್ಪಾಲರಂ ಬೇಡಿಕೊಂಡು॥
ಶುಭಮುಹೂರ್ತದೊಳರಸಿಯರ ಸೇಸೆವೆತ್ತು ಮುನಿ।
ಸಭೆಗೆ ವಂದಿಸಿ ಪರಕೆಗೊಂಡು ಪಾಠಕರ ಜಯ।
ರಭಸದಿಂದೆಸೆವ ಮಂಗಳವಾದ್ಯಘೋಷದಿಂದರ್ಜುನಂ ಪೊರಮಟ್ಟನು ॥೧೧॥

ಮುರಹರನ ರಾಣಿಯರ್ ಧುರಧೀರ ಕರ್ಣಸುತ।
ನರಸಿಯೆಂದೆನ್ನ ಪೊಗಳ್ವಂತೆ ಮಿಗೆ ಸಂಗರದೊ।
ಳರಿಗಳಂ ಗೆಲ್ವುದೆಂದಾರತಿಯನೆತ್ತಿ ಮುತ್ತಿನ ಸೇಸೆಗಳನೆ ಸೂಸಿ॥
ಭರದಿಂದ ಬಂದಪ್ಪಿದಂಗನೆಯ ಮೊಗನೋಡಿ।
ಕುರುಳುಗಳನುಗುರ್ಗಳಿಂ ತಿದ್ದಿ ಮುದ್ದಿಸಿ ತನ್ನ।
ಬೆರಳುಂಗುರಂಗೊಟ್ಟು ಸಂತೈಸಿ ವೃಷಕೇತು ಕಾಂತೆಯಂ ಬೀಳ್ಕೊಂಡನು ॥೧೨॥

ಅಂಕೆಯಿಂದರ್ಜುನಂಗಂದು ಯಾದವಸೈನ್ಯ।
ಮಂ ಕೂಡಿಕೊಟ್ಟು ದಳಪತಿಯಾಗಿ ತನಯನಂ।
ಮುಂಕೊಳಿಸಿ ಕರ್ಣಜ ಸುವೇಗಾನುಸಾಲ್ವರ ಸಹಾಯಮಂ ಕೈವರ್ತಿಸಿ॥
ಪಂಕರುಹಲೋಚನಂ ಪೊರಮಟ್ಟನಿಬರೆಲ್ಲ।
ರಂ ಕಳುಹಿ ತಿರುಗಿದಂ ಸ್ವೇಚ್ಛೆಯಿಂದಾ ಹಯಂ।
ತೆಂಕವೊಗವಾಗಿ ನಡೆದುದು ಕರಿತುರಗರಥಪದಾತಿಗಳ್ ಸಂದಣಿಸಲು ॥೧೩॥

ಊಹಿಸುವೊಡರಿದೆನೆ ತುರಂಗಮದ ಕೂಡೆ ಸ।
ನ್ನಾಹದಿಂ ಮೇರೆದಪ್ಪಿದ ಮಹಾರ್ಣವದ ಪ್ರ।
ವಾಹಮೆನೆ ತಳ್ತಿಡಿದ ತರುಗುಲ್ಮಲತೆಗಳಿಂ ನಡೆಗೊಂಡ ಕಾನನವನೆನೆ॥
ಮೋಹರಂ ಭೂತಳಮನೊಳಕೊಂಡು ಬರುತಿರ್ದು।
ದಾಹಯಂ ಬಳಿಕ ದಕ್ಷಿಣದಿಶಾಮುಖವಾಗಿ।
ಮಾಹಿಷ್ಮತೀಪಟ್ಟಣದ ಬಹಿರ್ಭಾಗದುಪವನದೆಡೆಗೆ ನಡೆತಂದುದು ॥೧೪॥

ಆ ನಗರದರಸು ನೀಲಧ್ವಜಂ ಮೇಣವನ ।
ಸೂನು ಪ್ರವೀರನೆಂಬವನಾಗಳಲ್ಲಿಗು ।
ದ್ಯಾನಕೇಳಿಗೆ ಬಂದನೊಲವಿಂದೆ ಮದನಮಂಜರಿಯೆಂಬ ಕಾಂತೆಯೊಡನೆ ॥
ಆ ನಳಿನಲೋಚನೆಯ ಕೆಳದಿಯರ್ ಬಿಡದುದಿಂ ।
ದಾನಂದನದೊಳು ಸಂಚರಿಸುತಿರ್ದರ್ ಬಳಿಕ ।
ಮೀನಕೇತನ ಮಹೀಪಾಲನರಮನೆಯ ಸೊಕ್ಕಾನೆಗಳ ತಂಡದಂತೆ ॥೧೫॥

ನೋಡಿ ತಿಲಕವನಪ್ಪಿ ಕುರುವಕವನೆಳನಗೆಯೊ ।
ಳೂಡಿ ಸಂಪಗೆಯಂ ಪ್ರಿಯಂಗುವಂ ಸೋಂಕಿ ಮರಿ ।
ದಾಡಿ ಚೂತಮನೊದೆದಶೋಕೆಯಂ ಬಕುಳಮಂ ಮುಕ್ಕುಳಿಸಿ ಮದ್ಯದಿಂದೆ ॥
ಪಾಡಿ ಪುನ್ನಾಗಮಂ ಕರ್ಣಿಕಾರವನೆ ಕೊಂ ।
ಡಾಡಿ ಮಂದಾರಮಂ ಜಾಣ್ನುಡಿದು ಪುಷ್ಪಿತಂ ।
ಮಾಡಿ ತೋರಿದರಂಬುಜಾಕ್ಷಿಯರ್ ನಾನಾವಿಲಾಸದಿಂದಾ ಬನದೊಳು ॥೧೬॥

ಮುಟ್ಟಲ್ ಪ್ರಿಯಂಗು ಪೂವಹ ತರಳೆಯರ ಕೈಗೆ ।
ಸಿಟ್ಟಿಸಲ್ ತಿಲಕಮಲರಹ ನೀರೆಯರ ಕಣ್ಗೆ ।
ಮೆಟ್ಟಿದೊಡಶೋಕಮಂಕುರಮಪ್ಪ ಬಾಲೆಯರ ಮೆಲ್ಲಡಿಗೆ ಮಿಗೆ ಬೆಳ್ನಗೆ ॥
ಪುಟ್ಟಲ್ಕೆ ಸಂಪಗೆ ಮುಗುಳ್ವೋರ್ಪ ಸುದತಿಯರ ।
ಬಟ್ಟಮೊಗಕೆಣೆಯಹವೆ ತಾವರೆಗಳೆಂದವಂ ।
ಬಿಟ್ಟು ತುಂಬಿದ ಜೌವನೆಯರ ತನುಪರಿಮಳಕೆ ಕವಿದುವಾ ಬನದಳಿಗಳು ॥೧೭॥

ಸಣ್ಣನಡು ಸೈಸಿಮಿರೆ ತೋಳಮೊದಲೊಳ್ಪೆಸೆಯೆ ।
ತಿಣ್ಣಮೊಲೆಗಳ್ ಪೊದಳೆ ಚೆನ್ನ ಸೋರ್ಮುಡಿಯುಲಿಯೆ ।
ಕಣ್ಣಬೆಳಗಾಗಸವನಾವರಿಸೆ ಮೊಗಮೆತ್ತಿ ತುದಿಗಾಲ್ಗಳಿಂದೆ ನಿಂದು ॥
ಬಣ್ಣವಳಿಯದ ಪೂಗಳಂ ಕೊಯ್ದು ಬೆಂಡಾಗಿ ।
ತಣ್ಣೆಲರ್ಗೊಡ್ಡಿ ಮೈಬೆಮರನಾರಿಸಿಕೊಂಡು ।
ಪೆಣ್ಣಿಂಡಾ ಬನದೊಳಲರ್ಗಳಂ ತಮ್ಮ ತನುವಿನ ಕಂಪಿನಿಂ ಪೊರೆದರು ॥೧೮॥

ನಿಲುಕಿ ಪೂಗೊಯ್ವ ಲಲಿತಾಂಗಿಯರ ಬಟ್ಟಬ ।
ಲ್ಮೊಲೆಗಳಂ ಪೊರಲಾರದಸಿಯ ಸೆಳೆನಡುವಿದು ಶಿ ।
ಥಿಲಮೆಂದು ಹರಿನೀಲದೆಸೆವೊಂದು ಸಣ್ಣಸರಳಂ ಮನೋಜಂ ನಿರ್ಮಿಸಿ ॥
ನಿಲಿಸಿ ಬಿಗಿದನೊ ಮೂರುಕಟ್ಟನೆಡೆಗೆಡೆಗೆನಲ್ ।
ಸಲೆ ರಾಜಿಸಿತು ವಳಿತ್ರಯದ ಚೆಲ್ವಿಕೆಯಿಂದೆ ।
ಲಲನೆಯರ ಮಧ್ಯದೊಳೊಗೆದ ಬಾಸೆ ಕುಸುಮಾಪಚಯಸಮಯದೊಳ್ ಪೊಸತೆನೆ
॥೧೯॥

ತುಂಬಿಗಳನೋಡಿಸದ ಚಂಪಕಂ ಸೊಕ್ಕಾನೆ ।
ಯಂ ಬೆದರಿಸದ ಸಿಂಗವಿಡಿದಂಧಕಾರವಂ ।
ತುಂಬಿಸದ ಚಂದ್ರಮಂಡಲಮಿರಲ್ ಕಂಡಿಲ್ಲ ನಾವುಪಿರ್ದೊಡೆ ನಮ್ಮನು ॥
ಶಂಬರಾರಿಯ ಶರಂ ಕಾಡದಿರುಳಿನ ವಿರಹ ।
ಕೆಂಬ ನಿಶ್ಚಯದೊಳಗಲದೆ ಬಾಲಿಕೆಯುರುರವ ।
ನಿಂಬುಗೊಂಡೆಣಿಸಕ್ಕಿಯೆನಲೆಸೆದುವಲರ್ಗೊಯ್ವ ನೀರೆಯರ ನೆಲೆವೊಲೆಗಳು॥೨೦॥

ಮೊಳೆವಲ್ಲ ಮೊಲ್ಲೆಯಂ ಚೆಂದುಟಿಯ ಬಂದುಗೆಯ ।
ನೆಳನಗೆಯ ಮಲ್ಲಿಗೆಯ ನೆಸಳ್ಗಣ್ಣ ನೈದಿಲಂ ।
ನಳಿತೋಳ ಸಿರಿಸಮಂ ಸೆಳ್ಳುಗುರ ಕೇತಕಿಯ ನುಣ್ಮೊಗದ ತಾವರೆಯನು ॥
ತೊಳಗುವ ಸುನಾಸಿಕದ ಸಂಪಗೆಯನವಯವದೊ।
ಳಳವಡಿಸಿ ಕುಸುಮಗಂಧಿಯರೇತಕಿನ್ನು ಪೂ ।
ಗಳನರಸಿ ಕೊಯ್ವರೆಂದವರ ನಡು ಚಿಂತಿಸಿಯೆ ಬಡವಾದುದೆನಲೆಸೆದುದು ॥೨೧॥

ಕರವೀರವರ್ಗಮಂ ಬಾಗಿಸಿದರರದಟರಂ ।
ತಿರದೆ ಪುನ್ನಾಗಮಂ ಪತ್ತಿರಂಜಿಸಿದರ್ ಚ ।
ದುರಮಾವುತಿಗರಂತೆ ಜಾತಿಯಂತರವನಳಿದಾಯ್ದುರವನೀಶರಂತೆ ॥
ಸುರಗಿಯಂ ತುಡುಕಿದರ್ ಭಟರಂತೆ ಬಗೆಗೆಳಸಿ ।
ಪರಿದರ್ ಸುವಿಟರಂತೆ ಪಾದರಿಯನರಸಿ ಪಿಡಿ ।
ದುರವಣಿಸಿದರ್ ನಗರಶೋಧನೆಯ ತಳವಾರರಂತೆ ಬನದೊಳ್ ಪೆಣ್ಗಳು ॥೨೨॥

ಜಾತಿ ಸೇವಂತಿಗೆ ಶಿರೀಷಮೊದಲಾದ ಪೂ ।
ಜಾತಿಗಳೊಳಿಂತಲರ್ಗೊಯ್ಯುತುಪವನದೊಳ್ ನಿ।
ಜಾತಿಶಯಲೀಲೆಯಿಂದಿರುತಿರ್ದಳಾ ಮದನಮಂಜರಿ ಕೆಳದಿಯರೊಡನೆ ॥
ಭೂತಳದೊಳಿದು ಶುಭಾಕಾರದಿಂದಾಶ್ಚರ್ಯ।
ಭೂತಮೆನೆ ಮೈದೋರಿತಾಗಳಮರೇಂದ್ರ ಸಂ।
ಭೂತನ ತುರಂಗಮಮದಂ ಕಂಡು ಮುತ್ತಿದರ್ ಮತ್ತಗಜಗಾಮಿನಿಯರು ॥೨೩॥

ವನಿತೆಯರೊಳಾ ಮದನಮಂಜರಿ ಹಯದ ಪಣೆಯ।
ಕನಕಪಟ್ಟದ ಲೇಖನವನೋದಿಕೊಂಡು ಯಮ।
ತನುಜನಗ್ಗಳಿಕೆಯಂ ಕುಡು ನಸುನಗುತ ನಿಜಪತಿಗಾಗಳದನುಸಿರಲು ॥
ಕನಲ್ದನಿಯಳಂ ನೋಡುತವನೆದ್ದು ಕಾಣಬಹು।
ದೆನುತ ಪಿಡಿವಶ್ವಮಂ ಕಟ್ಟಿ ಪಟ್ಟಣಕೆ ಮಾ ।
ನಿನಿಯರಂ ಕಳುಹಿ ಪರಿವಾರಮಂ ಕರೆಸಿ ನರನೊಳ್ ಕಾದಲನುವಾದನು ॥೨೪॥

ಧೂರ್ಲೋಲ ಕೇಳಗ್ನಿ ಮನೆಯಳಿಯನಾಗಿಹಂ।
ನೀಲಧ್ವಜಂಗದೆಂತೆನೆ ಮುನ್ನವನ ಮಗಳ್।
ಮೂಲೋಕದೊಳ್ ಸುಭಗರಾರೆಂದರಸಿ ನೋಂತು ಪಾವಕನ ನೊಲಿಸೆ ಮೆಚ್ಚಿ ॥
ಬಾಲಿಕೆಯನಂದುಮೊದಲಾಗಿ ವೈಶ್ವಾನರಂ ।
ಪಾಲಿಪಂ ಪತಿರೂಪದಿಂದಾ ಪುರದೊಳವನ।
ಮೂಲ ಬಲದಿಂ ಪ್ರವೀರಂ ಪಿಡಿದು ಕಟ್ಟಿದಂ ಪಾರ್ಥನ ತುರಂಗಮವನು ॥೨೫॥

ಕಟ್ಟಿರ್ದ ಕುದುರೆಯಂ ಕಂಡು ಕಾಪಿನ ಭಟರ್ ।
ದಟ್ಟಿಸಿದೊಡಾ ಪ್ರವೀರಂ ಕೆರಳ್ದಾಹವಂ ।
ಗೊಟ್ಟನಾರ್ಪೊಡೆ ಬರಲಿ ತನ್ನೊಡನೆ ಕಾಳಗಕೆ ಪಡೆಸಹಿತ ಪಾರ್ಥನೆಂದು ॥
ತೊಟ್ಟಂ ಶರಾಸನದೊಳಂಬನವನೀ ಮಾತು ।
ಮುಟ್ಟಿದುದು ಫಲ್ಗುಣಂಗೆಳನಗೆಯ ಕೋಪದಿಂ।
ದಟ್ಟಿ ನೋಡಿದೊಡಾಗ ನಡೆದುದು ಚತುರ್ಬಲಂ ಸರ್ವಸನ್ನಾಹದಿಂದೆ ॥೨೬॥

ಚೂಳಿಯ ಚತುರ್ಬಲದ ಧಾಳಿ ನಗರಿಗೆ ನಭಕೆ ।
ದೂಳಿ ದೆಸೆದೆಸೆಗಳ್ಗೆ ಘೀಳಿಡುವವಾದ್ಯರವ ।
ದೋಳಿ ನೆರೆ ಮುಸುಕಿತೊಂದೇ ಬಾರಿ ಪುರಜನಕೆ ರಪಿಗೆ ದಿಕ್ಪಾಲಕರ್ಗೆ ॥
ಜಾಳುವೆ ಮಹಾತೇಜಮತಿಶಯದ ಪದವಿಗಳ್ ।
ಕಾಳಹುದು ಮುಸುಳಿಪುದು ಚಲನಮಹುದೆಂದು ಹೇ ।
ರಾಳಭಯದಿಂ ಶಂಕೆಯಿಂದದ್ಭುತಂಗಳಿಂ ಧೃತಿ ಗತಿ ಮತಿಗಳಳಿದುವು ॥೨೭॥

ಮೇರೆದಪ್ಪಿದ ಮಹಾರ್ಣವದಂತೆ ಭುವನಸಂ ।
ಹಾರಕಾಲದ ಮೇಘಚಯದಂತೆ ಭರದಿಂದೆ ಪ್ರ ।
ವೀರನಂ ಮುಸುಕಿತರ್ಜುನನ ಮುಂಚೂಣಿಯ ಚತುರ್ಬಲಂ ದೆಸೆದೆಸೆಯೊಳು ॥
ತೀರ್ರೈಸದಿರ್ದನವನತಿಸತ್ವದಿಂದೆ ಸಂ ।
ಸಾರಪ್ರಲಾಪಮಾಲಾಕುಲಮನಧ್ಯಾತ್ಮ ।
ಸಾರದಿಂ ತಡೆವ ಯೋಗೀಶ್ವರನ ಚಿತ್ತದಂತೆಚ್ಚರಿನ ಧಾತುಗೆಡದೆ ॥೨೮॥

ಮೇಗೆ ಮುಸುಕಿದ ಚೂಣಿಯನಿತು ಚಾತುರ್ಬಲವ ।
ನಾಗಳೊರ್ವನೆ ಚಾರಿವರಿವರಿದು ಬಾಣಪ್ರ ।
ಯೋಗಂಗಳಿಂ ಪ್ರವೀರಂ ಕೊಲ್ವುವಂ ಕಂಡು ಜಿಲ್ಗೊಂಡು ಕೋಪದಿಂದೆ॥
ಬೇಗದಿಂ ಪ್ರದ್ಯುಮ್ನ ಸಾತ್ಯಕಿ ವೃಷಧ್ವಜ ಸು ।
ವೇಗಾನುಸಾಲ್ವ ಕೃತವರ್ಮಾದಿ ಪಟುಭಟರ್ ।
ತಾಗಿದರ್ ಕಲ್ಪಮೇಘಂಗಳಿಂ ತಡೆವಿಟ್ಟಮಳೆಯೆನಲ್ ಕಣೆಗರೆಯುತೆ ॥೨೯॥

ಆ ಪ್ರವೀರಂ ಬಳಿಕನಿಬರೆಲ್ಲರೊಡನೆ ನಾ ।
ನಾಪ್ರಕಾರದ ಸಮರದೊಳ್ ಕಾದಲಿತ್ತ ಸೇ ।
ನಾಪ್ರತತಿಸಹಿತ ನೀಲಧ್ವಜಂ ನಗರಮಂ ಪೊರೆಮಟ್ಟನೇವೇಳ್ವೆನು ॥
ಈ ಪ್ರಭಾಕರಕಿರಣಮೀ ವಾಯುಸಂಚರಣ ।
ಮೀ ಪ್ರವಹಿಸುವ ನದಿಗಳೀ ಗಗನಮೀ ಧರೆ ಮ ।
ಹಾಪ್ರಳಯಕಡಗುವಂತಡಗಿ ಭುವನತ್ರಯಂ ಬರಿದೂಳಿಮಯವಾಗಲು ॥೨೦॥

ಮೊಗಸಿದರ್ ಪರಬಲವನಾಗಳ್ ಪ್ರವೀರನಂ ।
ತೆಗೆಸಿದರ್ ಪಿನ್ನೆಲೆಗೆ ರಿಪುಸೈನ್ಯದಳವಿಯಂ ।
ತೆಗೆಸಿದರ್ ತವತಮಗೆ ಕೈಕೊಂಡು ವಾರಣ ವರೂಥ ವರವಾಜಿಗಳನು ॥
ಪುಗಿಸಿದರ್ ವೈರಿವ್ಯೂಹರದೊಳಗೆ ಸಾಹಸಂ ।
ಮಿಗಿಸಿದರ್ ಪೊಯ್ದಾಡಿ ತನಿವೀರರಸದಿಂದೆ ।
ಸೊಗಸಿದರ್ ಧುರಧೀರ ನೀಲಧ್ವಜನ ಮನೆಯ ಚತುರ ಚತುರಂಗದವರು ॥೨೧॥

ಮುಗ್ಗಿದರ್ ಮಸಗಿದಂಬುಧಿಯ ತೆರೆಯಂತೆ ಸಲೆ ।
ಮುಗ್ಗಿದರ್ ಮುಗಿಲಮೊಗ್ಗರದಂತೆ ಭೋಂಕರಿಸು ।
ತೊಗ್ಗಿದರ್ ಕವಿದು ಜೇನ್ಸೊಣದಂತೆ ಪೊಯ್ದಾಡಿ ರಿಪುಸೈನ್ಯಕಾನನವನು ॥
ನೆಗ್ಗಿದರ್ ನೆಲೆಗೆಡಿಸಿ ಬಿರುಗಾಳಿಯಂತೈದೆ ।
ನುಗ್ಗಿದರ್ ನುಚ್ಚುನುರಿಯಾಗೆ ಬರಸಿಡಿಲಂತೆ ।
ಹಿಗ್ಗಿದರ್ ಪೆಚ್ಚಿ ವೀರಾವೇಶದಿಂದೆ ಪಟುಭಟರಾಗಳಾಹವದೊಳು ॥೨೨॥

ಪೊಯ್ದಾಡಿ ಮಡಿದ ಕಲಿಗಳ ಶರೀರಂಗಳಂ ।
ತೊಯ್ದೆಳೆದು ಪರಿತಿಂಬ ಮರುಳ್ಗಳಂ ಮೇಣವರ ।
ನೊಯ್ದಲ್ಲಿ ದಿವ್ಯತನುಗಳೊಳಪ್ಪಿ ಚುಂಬಿಸುವ ಸುರಸತಿಯರಂ ಕಾಣುತೆ ॥
ತುಯ್ದುಗೆದಪರೆ ವೀರರೆಂದೊರ್ವರೊರ್ವರಂ ।
ಬಯ್ದು ಮೂದಲಿಸಿ ರಣರಂಗದೊಳ್ ಪಟುಭಟರ್ ।
ಕಯ್ದೋರುತಿರ್ದರೊಡವೆರಸಿ ಕೇಶಾಕೇಶಿಯುದ್ಧದಿಂದಳವಳಿಯದೆ ॥೨೩॥

ಕೃತವರ್ಮನುರವಣೆಯನನುಸಾಲ್ವನುಬ್ಬಟೆಯ ।
ನತಿಬಲಸುವೇಗನ ಪರಾಕ್ರಮವನಾದಿತ್ಯ ।
ಸುತಸುತನ ಶೌರ್ಯಮಂ ಸಾತ್ಯಕಿಯ ವೀರ್ಯಮಂ ವರಯೌವನಾಶ್ವನೃಪನ ॥
ಅತುಳವಿಕ್ರಮವನನಿರುದ್ಧನಾಟೋಪಮಂ ।
ಪ್ರತಿಭಟಭಯಂಕರ ಪ್ರದ್ಯುಮ್ನನದಟನು ।
ನ್ನತಿಗೆಡಿಸಿತಾಗ ನೀಲಧ್ವಜನ ಪರಿವಾರಮೇವೇಳ್ವೆನಾಹವದೊಳು ॥೨೪॥

ಅರ್ಜುನಂ ಕಂಡನಹಿತ ಪ್ರಬಲಬಲಮುಸುರ |
ನಿರ್ಜರರ್ಗರಿದೆನೆ ಕಠೋರದಾಗಲ್ ತನ್ನ |
ವರ್ಜಿಯಿಸಲರಿಯರೇನೆಂದು ಕಡುಗೋಪದಿಂ ಚಾಪಮಂ ಪಿಡಿದು ಮಿಡಿದು |
ಗರ್ಜನೆಯೊಳೆಯ್ದು ಕಡೆಗಾಲದೊಳ್ ಮಳೆಗರೆವ |
ಪರ್ಜನ್ಯನಂತಾರ್ದಿಸುತೆ ನಡೆತಂದಿರಾಂಪ |
ವರ್ಜಗವೊಳಂಟೆ ಮುರಿದುದು ಪುರಕೆ ನೀಲಧ್ವಜನ ಸೇನೆ ಕೆಟ್ಟು ಕೆದರಿ ||೩೫||

ಮುರಿದು ಬಹಸೇನೆಯಂ ಕಂಡಾ ಪ್ರವೀರನುರೆ |
ಜರೆದು ಕೋದಂಡಮಂ ಕೊಂಡು ಕೌಂತೇಯನಂ |
ತರುಬಲಡಹಾಯ್ದು ವೃಷಕೇತು ಬರಲಾತನೊಳ್ ಸರಿಯಾಗಿ ಕಾದುತಿರಲು |
ಪೆರಗಿತ್ತ ಕರ್ಣಜಂ ಮುಂದೆ ನಿಂದನುಸಾಲ್ವ |
ನುರುಬಿದೊಡವಂ ನೋಡಿ ನೀಲಧ್ವಜಂ ತಾನೆ |
ತುರಗಿವಗ್ಗದ ಸಕಲಬಲ ಸಹಿತ ನೂಕಿದಂ ಫಲುಗುಣನ ಪಡೆಯ ಮೇಲೆ ||೩೬||

ವಾನರವರಧ್ವಜಂ ಮುಳಿದು ನೀಲಧ್ವಜನ |
ಸೇನೆಯಂ ತಡೆಗಡಿಯುತಾತನಂ ಮುಸುಕಿದನ |
ನೂನಶರಜಾಲದಿಂ ಬಳಿಕವಂ ಕಂಗೆಟ್ಟು ಪಾವಕಂ ಪೊರೆಯೊಳಿರಲು |
ನೀನಳಿಯನಾಗಿರ್ದುಮೆನಗಿನಿತು ಪಾಯಮೇ |
ಕೀನರನ ದೆಸೆಯ ಭಯಮಂ ಬಿಡಿಸವೇಕೆನೆ ಕೃ |
ಶಾನು ಕೇಳ್ದಾಗ ಸುಡತೊಡಗಿದಂ ತಾನೆ ಪೊಕ್ಕರ್ಜುನನ ಸೈನಿಕವನು ||೩೭||

ಛತ್ರ ಚಾಮರ ಪಟಿಗೆ ಪಕ್ಕರಿಗೆ ಪಲ್ಲಣ ವಿ |
ಚಿತ್ರದ ಪತಾಕೆ ಸೀಗುರಿ ಸಿಂಧ ಸೀಸಕ ತ |
ನುತ್ರ ರಂಜಕೆ ಪಾಶ ವಸ್ತ್ರ ವಾಹನ ವಾದ್ಯ ಕೈದು ಬತ್ತಳಿಕೆ ಬಂಡಿ |
ಪತ್ರ ಬಂಧುರ ಬಾಣ ಕೋದಂಡ ರಥ ರಥಾಂ |
ಗ ತ್ರಿವೇಣುಕ ಯುಗಾಕ್ಷಂಗಳುರಿಗೊಳೆ ಪಾಂಡು |
ಪುತ್ರ ಸೇನೆಯೊಳೆಲ್ಲರುಂ ಬೆದರಿದರ್ ಕೆಟ್ಟು ಕೆದರಿದರ್ ಕಿಡಿಯನೋವರಿ ||೩೮||

ಹೊಗೆಹೊಗೆದು ಹೊಗೆ ಸುತ್ತಿ ಹೊಗುವ ದೆಸೆ ದೆಸೆಗಳಂ |
ಮೊಗೆಮೊಗೆದು ಮೊಗಸಿ ಪಲಮೊಗದೊಳಪ್ಪಳಿಸಿ ಪುಟು |
ನೆಗೆನೆಗೆದು ನೆಗಳ್ದು ಸೋನೆಗಳಾಗಿ ಸುರಿವ ಕಿಡುಗಿಡಿಗಳ ತುಷಾರದಿಂದೆ |
ಧಗಧಗಧಗನೆ ಪೊತ್ತುವಾ ಜ್ವಾಲೆಗಳ ಮಾಲೆ |
ಧುಗುಧುಗುಧುಗಿಲ್ ಗಿಲ್ ಗಿಲೆಂದು ದಾವರಿಸೆ |
ತೆಗೆತೆಗೆದು ತಗುಳ್ದೆಲ್ಲರಂ ದಹಿಸತೊಡಗಿದವು ದಳ್ಳುರಿ ನರನ ಬಲದೊಳು ||೩೯||

ಕಟ್ಟುಗ್ರ ಕೋಪದಿಂ ಮುಳಿದಂದು ರಾಘವಂ ।
ಟ್ಟ ದಾಹದ ಬೆಸನೆಯ ದಬ್ಬರಿಯ ಬಳಿಕೆ ಕಂ ।
ಟ್ಟ ಸಿಡಿಮಿಡಿಗೊಂಡ ಸಾಗರದ ಜೀವಾಳಿಯಂತೆ ಪಾಂಡವನ ಸೇನೆ ॥
ಟ್ಟ ಸುಡುವನಲ ದಹಮುಬ್ಬರಿಗೊಡನೆ ಗೋಳ್ ।
ಟ್ಟ ಹೊದಕುಳಿಗೊಂಡು ಹೊರಳುತಿರಲುದ್ವೇಗ ।
ಟ್ಟ ಪಾರ್ಥಂ ಚಿಂತಿಸಿದನಸ್ತ್ರಮಬ್ಬೆ ತವಿದಂದು ಪಾವಕನುರುಬೆಗೆ ॥೪೦॥

ಉಗ್ರರಾದರ್ ಕೆಲರ್ ಕವಚಾದಿಗಳ್ ಬೆಂದು ।
ಗ್ರರಾದರ್ ಕೆಲರ್ ಕೆಟ್ಟುದುರಿಗಿಚ್ಚಿನೊಳ್
ಉಗ್ರರಾದರ್ ಕೆಲರ್ ತನ್ನ ಸೇನೆಯೊಳಿಂತು ಧರ್ಮಜನ ಹಯಮೇಧದ ।
ಘ್ನವಾದುದೆ ಶಿವಶಿವೆನುತೆ ಚಿಂತಿಸಿದನಿದ ।
ಗ್ನಿಯಂ ಬಳಿಕ ನೋಳ್ಪುದೆಂದು ನಿಜ ಕರ ವಿ ।
ಗ್ನ ಚಾಪವನಿಳುಹಿ ಶುಚಿಯಾಗಿ ಪಾವಕನನರ್ಜುನಂ ಪ್ರಾರ್ಥಿಸಿದನು ॥೪೧॥

ಬಳಿಕನಲ ಸೂಕ್ತಗಳಿಂದೆ ನುತಿಗೆಯ್ದು ಧೃ ।
ಳಿಕೆಯಿಂದಿ ಸಾಷ್ಟಾಂಗದಿಂದೆರಗಿ ನಿಂದು ನಿಂ ।
ಉಳಿಸಲೋಕೇ ಮೊಳಂ ನಿನಗೈಸಲೋ ನಿನ್ನ ದೆಸೆಯಿಂದಖಿಳ ಸುರರ್ಗೆ ।
ಳಿವುದು ಹವಿರ್ಭಾಗವಿಾ ಚರಾಚರದ ಪೊರೆ ।
ಒಳಗೆಲ್ಲಮಂ ನೀನೆ ನಿನ್ನಿಂದೆ ಮೂಲೋಕ ।
ಳಿವುಳಿವು ಸಾಕದಂತಿರಲೆನಗೆ ಮಾರ್ಗಮಂ ಕೊಟ್ಟು ರಕ್ಷಿಪುದೆಂದನು ॥೪೨॥

ದೇವ ನೀನಂದು ಗಾಂಡೀವಮಂ ತನಗಿತ್ತ ।
ನಿಸಿದೆ ಪಾಂಚಾಲೆ ನಿನಗ್ನಿಯುದ್ಭವಿಸಿದಳ್ ।
ನಾವು ರೋಗಗಳೆ ನಿನಗೆ ಪೇಳೆಂದು ನುತಿಸಿ ಕುಂತೀಸುತಂ ಬೇಡಿಕೊಳಲು ॥
ಪಾವಕಂ ಮೆಚ್ಚಿ ನುಡಿದಂ ಪಾರ್ಥ ಕೇಳಾದೊಡೆ ।
ನಾವು ಮುಳಿಯೆವು ನಿಮಗೆ ಹರಿ ಸಹಾಯದೊಳಿರ್ದ್ದ ।
ಾ ವಾಜಿಮೇಧಮೇಕಮ್ಮೆ ತಮದೊಳಗೆಸಿದಂತಾಯ್ತು ನಿಮಗೆಂದನು ॥೪೩॥

ಅದುದು ನೀವೆಂಬುದಂ ನಿರಾಬರ್ದ್ದದೆ ಪರಿಯ ।
ತನಯನಮೇ ಸಾಕು ಜಗದೊಳ್ ಸ್ವಧರ್ಮಮಂ ।
ಹಿತದವರಾರು ಮುನಿವರನಾಜ್ಞೆ ಯಾದಪುದು ದೇಹಾಂತಮಾಲ್ಪದೆಮಗೆ ।
ಖಗೇಂದ್ರವಾಹನಂ ಮಾಡವೇಳ್ಕೆಂದನು ।
ತ್ರಹಿಸಿದಂ ಮಖಮನಿದಕೆಂತೆಂದು ನರನೆನರ್ ।
ಹಿಪ್ಪುದಂ ಪಾರ್ಥನೆಂದದಯಮಿತ್ತಗ್ನಿ ನಿಲ್ಲದೃಜಂಗಿಂತೆಂದನು ॥೪೪॥

ಸಂಗರಂ ಬೇಡ ನರನೊಡನೆ ಸಾಕಾತನ ತು ।
ರಂಗವುವ ಬಿಡು ನಡೆ ನಗರಕೆಂದು ವೈಶ್ವಾನ ।
ರಂ ಗುಣದೊಳರಸನಂ ತಿರುಗಿಸಿದನತ್ತಲರ್ಜುನನುರಿಯು ಡಾವರವನು ॥
ಭಂಗಿಸಿದನೆಚ್ಚು ನಾರಾಯಣಾಸ್ತ್ರದೊಳನ್ನೆ।
ಗಂ ಗಗನ ಮಣಿ ಪಶ್ಚಿಮಾಂಗನೆಯು ಚೈತಲೆಯ ।
ರಂಗು ಮಾಣಿಕದಂತೆ ಕಣ್ಗೆ ಕಾಣಿಸುತಿರ್ದುದಸ್ತಗಿರಿ ಮಸ್ತಕದೊಳು ॥೪೫॥

ರಂಜಿಸುವ ಪಶ್ಚಿಮಾಚಲ ಕಿರಾತಂ ತೊಟ್ಟ।
ಗುಂಜಾಭರಣಮೊ ಮೇಣ್ ಗಗನಾಂಬುಧಿಯ ತಡಿಯ ।
ಮಂಜು ವಿದ್ರುಮ ಲತೆಯೊ ಮೇಣಪರ ದಿಗ್ವಧುವಿನಂಗ ಕುಂಕುಮ ಲೇಪವೋ॥
ಅಂಜನೇಭದ ಸಿಂಧುರವೊ ಶಿವನ ಮಸ್ತಕದ ।
ಕೆಂಜೆಡೆಯೊ ವಿಷ್ಣು ಪದ ಪಂಕರುಹದರುಣತೆಯೊ।
ಸಂಜೆವೆಣ್ಣುಟ್ಟ ರಕ್ತಾಂಬರವೊ ಪೇಳೆನಲ್ಕಾಜೈಗುಗೆಂಪೆಸೆದುದು ॥೪೬॥

ಬಿಚ್ಚುವೆಣ್ವಕ್ಕಿಗಳ ಹೃದಯಮಂ ಜೇಯಿಸುವ।
ಪೊಚ್ಚ ಪೊಸಕೆಂಡಂಗಳೆನೆ ಲೋಕಮಂ ನುಂಗ।
ಲಿಚ್ಚಯಿಸಿ ಬಪ್ಪ ಕತ್ತಲೆಯೆಂಬ ಕಾಳರಕ್ಕಸಿ ಕೋಪದಿಂದುಗಳ್ದ ॥
ಕಿಚ್ಚಿನ ಕೆದರ್ಗಿಡಿಗಳೆನೆ ತನ್ನ ಬಾಳುವೆಗೆ।
ನಚ್ಚಿನವಳೀ ರಾತ್ರಿ ವಧುವೆಂದು ಹಿಮಕರಂ ।
ಮೆಚ್ಚಿ ಮುಂಗಳುಪಿದೆಳಮಾಣಿಕಗಳೆಂಬಂತೆ ಸಂಜೆದಾರೆಗಳೆಸೆದುವು ॥ ೪೭॥

ಓಡಿದುವು ಪಕ್ಷಿಗಳ್ ಗೂಡಿಂಗೆ ದೆಸೆಗಳಂ।
ನೋಡಿದುವು ಘೂಕಂಗಳಳಿಗಳಂ ಸೆರೆಗೆಯ್ದು ।
ಪೊಡಿದುವು ಬಾಗಿಲಂ ಕಮಲಂಗಳರಲ್ದುವಿಂದೀವರಂಗಳ್ ನಭದೊಳು॥
ಮೂಡಿದುವು ತಾರೆಗಳ್ ಚಕ್ರವಾಕಂಗಳಂ ।
ಕಾಡಿದುವು ವಿರಹತಾಪಂಗಳಳೆಯೆಲ್ಲಮಂ ।
ತೀಡಿದುವು ಕತ್ತಲೆಗಳಲ್ಲಗಲ್ಲಿಗೆ ಮನೆಮನೆಗೆ ಸೊಡರ್ ಕಣ್ಗೆಸೆದುವು ॥ ೪೮ ॥

ರವಿ ಪಶ್ಚಿಮಾದ್ರಿಯಂ ಮರೆಗೊಳೆ ತಮಸ್ತೋಮ ।
ಮವನಿಯುಂ ಮುಸುಕಿತೀ ತೆರೆದೊಳಸಿತಧ್ವಜಂ ।
ಬವರದೊಳ್ ಮುರಿದು ಭಂಗಿತನಾಗಿ ತಿರುಗಿದಂ ತನ್ನ ಪಟ್ಟಣಕಿತ್ತಲು ॥
ಪವನ ಸಖನಂ ಬೇಡಿಕೊಂಡು ನಾರಾಯಣಾ ।
ಸ್ತ್ರವನೆಚ್ಚು ಪೆರ್ಚಿದುರಿಯಂ ಕಿಡಿಸಿ ನಿಜ ಸೈನಿ।
ಕವನೆಲ್ಲ ಬಿಡಿಸಿದಂ ದೇವಪುರ ಲಕ್ಷ್ಮೀಪತಿಯ ಮೈದುನಂ ಮುದದೊಳು ॥೪೯॥

ಒಂಬತ್ತನೆಯ ಸಂಧಿ

ಸೂಚನೆ: ಜ್ವಾಲೆ ನಿಜ ಕಾಂತನಂ ಚಲದಿಂದೆ ಬಿಟ್ಟು ತ।
ನ್ನಾಲಯದೊಳಿರದೆ ಪೊರಮಟ್ಟು ಬಂದರ್ಜುನನ ।
ಮೇಲೆ ತಂತ್ರವನಿಕ್ಕಿ ಶಾಪಮಂ ಕುಡಿಸಿದಳ್ ದೇವ ನದಿಯಂ ಕೆರಳ್ದು ।

ಇಂದುಕುಲತಿಲಕ ಜನಮೇಜಯ ನರೇಂದ್ರ ಕೇ।
ಳೆಂದು ನೀಲಧ್ವಜಂ ತಿರುಗಿ ತನ್ನರಮನೆಗೆ।
ಬಂದು ವೈಶ್ವಾನರನನುಜ್ಞೆಯಿಂ ಪಾರ್ಥನ ತುರಂಗಮಂ ಬಿಡುವೆನೆಂದು ॥
ನಿಂದು ಮಂತ್ರಿಗಳ ಕರಸಲ್ಕದಂ ಕೇಳ್ದು ನಡೆ ।
ತಂದು ನುಡಿದಳ್ ಜ್ವಾಲೆಯೆಂಬರಸಿ ಪತಿಗೆ ನೀ ।
ನಿಂದು ಸಿತವಾಹನಂಗೀಯದಿರು ಕುದುರೆಯಂ ಬೆದರದಿರೆನುತೆ ತಡೆದಳು ॥೧॥

ಅನ್ನೆಗಂ ಕೇಳ್ದು ಜನಮೇಜಯ ನರೇಶ್ವರಂ ।
ತನ್ನ ಮನದೊಳ್ ಸಂದೆಗಂಬಟ್ಟು ಬೆಸಗೊಂಡ ।
ನಿನ್ನೊಮ್ಮೆ ತಿಳಿಪೆಲೆ ಮುನೀಂದ್ರ ಪಾವಕನೇತಕಾ ಪಟ್ಟಣದೊಳಿರ್ದನು ॥
ಮನ್ನಣೆಯ ಮನೆಯಳಿಯನೆಂತಾದನಾ ನೃಪನ ।
ಕನ್ನಿಕೆಯದೇನ ಮಾಡಿದಳಿದರ ವೃತ್ತಾಂತ ।
ಮನ್ನಿರೂಪಿಸವೇಳ್ಬುದೆನೆ ಮತ್ತೆ ಜೈಮಿನಿ ಧರಾಧಿಪಂಗಿಂತೆಂದನು ॥ ೨ ॥

ಆಲಿಸಿನ್ನಾದೊಡೆಲೆ ಭೂಪ ನೀಲಧ್ವಜಂ ।
ಜ್ವಾಲೆಯೆಂಬರಸಿಯೊಳ್ ಪಡೆದನತಿರೂಪ ಗುಣ ।
ಶೀಲಂಗಳಿಂದೆಸೆವ ತನುಜೆಯಂ ಸ್ವಾಹಾಭಿಧಾನದಿಂ ಬಳೆಯುತಿರುವ ॥
ಆ ಲೋಲ ಲೋಚನೆಗೆ ಜೌವನಂ ಬರೆ ಪಿತಂ ।
ಮೂಲೋಕದೊಳಗುಳ್ಳ ಪುರುಷರ್ಕಳಂ ಪಟದ ।
ಮೇಲೆ ರೂಪಿಸಿ ತೋರಿಸಿದನಿದರೊಳಾರ್ ನಿನಗೆ ವಲ್ಲಭಂ ಪೇಳ್ವುದೆಂದು ॥ ೩ ॥

ವಿಪುಲ ಗಂಧರ್ವ ಯಕ್ಷೋರಗ ಸುರಾಸುರರ।
ನಪಹಾಸ್ಯಮಂ ಮಾಡಿ ಸಕಲ ಭೂಮಂಡಲದ ।
ನೃಪ ವರ್ಗಮಂ ಪಳಿದು ಹರಿ ಹರ ವಿರಿಂಚಿ ಶಕ್ರಾದಿಗಳನಿಳಿಕೆಗೆಯ್ದು॥
ತಪನೇಂದು ಮನ್ಮಥ ವಸಂತರ್ಕಳಂ ಜರೆದ।
ನುಪಮ ದಿಕ್ಪಾಲಕರ ನಡುವೆ ಕುಳ್ಳಿರ್ದ ಗಾ ।
ಜಿಪ ವೀತಿಹೋತ್ರನಂ ಕಂಡವಳ್ ತೋರಿಸಿದಳೆನಗಿವಂ ಕಾಂತನೆಂದು ॥೪॥

ಆ ನೀಲಕೇತು ನೃಪನವಳ ನುಡಿಗೇಳ್ದಱುಗೆ ।
ನೀನಘಟಿತದ ವರನನುನ್ನಿಸಿದೆ ಪೇಳ್ವೊಡಿ ।
ನ್ನೇನಪ್ಪುದೆಂದು ಚಿಂತಿಸುತಿರ್ಪ ತಾತನಂ ಜರೆದು ಬೀಳ್ಕೊಂಡು ಬಳಿಕ ॥
ಮಾನಿಪ ಪುರೋದ್ಯಾನದೊಳ್ ಪ್ರವಹಿಸುವ ನರ್ಮ ।
ದಾ ನದಿಗೆ ಬಂದಲ್ಲಿ ಮಿಂದು ಸುವ್ರತೆಯಾಗಿ ।
ನಾನಾ ವಿಧಾನದಿಂದರ್ಚಿಸಿದಳಗ್ನಿಯುಂ ಭಕ್ತಿಯಿಂದನುದಿನದೊಳು ॥೫॥

ಪಾವಕಂ ಬಳಿಕ ಮೆಚ್ಚಿದನವಳ ನೋಂಪಿಗೆ ಮ ।
ಹೀ ವಿಬುಧ ವೇಷಮುಂ ತಾಳ್ದು ನೀಲಧ್ವಜನ ।
ಚಾವಡಿಗೆ ಬರಲಾತನದಿರೆದ್ದು ಸತ್ಕರಿಸಿ ಕೈಮುಗಿದು ವಿನಯದಿಂದೆ ।
ನೀವು ಬಿಜಯಂಗೈದ ಕಾರ್ಯಮಂ ಬೆಸಸಿಮೆನ ।
ಲಾವು ಕನ್ಯಾರ್ಥಿಗಳ್ ಕುಡು ನಿನ್ನ ಸುತೆಯನಿದ ।
ಕಾವೇಣಿಕೆ ಬೇಡ ಭೂಭುಜರೀಯಬಹುದು ವಿಪ್ರರ್ಗೆಂದೊಡಿಂತೆಂದನು ॥೬॥

ಕನ್ಯಾರ್ಥಿಯಾಗಿ ನೀಂ ಬಂದು ಬೇಡುವುದಿಳೆಯೊ ।
ಳನ್ಯಾಯಮಲ್ಲ ವಿಪ್ರರ್ಗೆ ಕೊಡಬಹುದು ರಾ ।
ಜನ್ಯರದಕೇನೊಂದು ಚಲದಿಂದೆ ತನ್ನ ಕುವರಿಗೆ ಮರುತ್ಸಖನಲ್ಲದೆ ॥
ಅನ್ಯರಂ ಪತಿಯಾಗಿ ವರಿಸದೇಕೆಂಬ ಚೈ ।
ತನ್ಯಮಿಲ್ಲೇನು ಮಾಡುವೆನಿನ್ನು ನಿನಗೀವ ।
ಧನ್ಯತೆಗೆ ಬಾಹಿರಂ ತಾನಾದೆನೆನಲಾ ಕಪಟ ವಿಪ್ರನಿಂತೆಂದನು ॥೭॥

ಪ್ರಾಪ್ತಮಾದುದು ನಿನ್ನ ಮಗಳೆಣಿಕೆ ಸುವ್ರತ ಸ ।
ಮಾಪ್ತಿಯಂ ಮಾಡಿಸಿನ್ನಾನಗ್ನಿ ಸಂಶಯ ।
ವ್ಯಾಪ್ತಿಯಿಂ ಬಿಡು ಕುಡು ನಿಜಾತ್ಮಜೆಯನೆನೆ ನಂಬದಾನೃಪಂ ಬಳಿಕ ತನ್ನ ॥
ಆಪ್ತ ಮಂತ್ರಿಯೊಳೀಗಳಿವನಂ ಪರೀಕ್ಷಿಸೆನೆ ।
ಗೋಪ್ತಾರನಾಜ್ಞೆಯಿಂ ಬಂದವಂ ನೋಡೆ ಶಿಖಿ ।
ದೀಪ್ತಿಯಂ ತೋರತಿವೆ ಗಡ್ಡಮೀಸೆಗಳುರಿಯಲನಲನೆಂದರಿದನಂದು ॥೮॥

ಸಪ್ತಗಸನಂ ತಪ್ಪದೆಂದಾ ನೃಪಂ ತಿಳಿದು ।
ಗುಪ್ತದಿಂದ ತನ್ನ ಸತಿಯನುಜೆಯಂ ಕರಸಿ ಲೋ ।
ಲುಪ್ತಿಯಿಂ ಬಂದವಿವಗೀಯಬೇಕಿನ್ನುಗಿಯುಂ ಶಿಖಿಯಹುದೆ ನೋಡೆನಲ್ಕೆ ॥
ದೃಪ್ತ ಭಾವಕೊಳಾಕೆ ನಡೆತಂದು ನಿಟ್ಟಿಸಲ್ ।
ತಪ್ತಮಾದುದು ಮೇಲುದಿನ ವಸನವಾಗಳಾ ।
ಕ್ಷಿಪ್ತಮಂ ಮಾಡಿ ನಗುತಿರ್ದನಾ ಭೂವರಂ ಸಭೆಯೊಳ್ ವಿನೋದದಿಂದೆ ॥೯॥

ಧೂಕಾಂತ ಕೇಳ್ ಬಳಿಕ ನೀಲಧ್ವಜಾವನಿಪ।
ನಾ ಕಪಟ ವಿಪ್ರನಂ ಕರೆದಗ್ನಿ ನೀನಾದೊ।
ಡೀ ಕುವರಿಯಂ ಕುಡುವೆನಿಂದ ಮೊದಲಾಗಿ ಮಾಹಿಷ್ಮತಿಯ ಪಟ್ಟಣಕ್ಕೆ॥
ಪ್ರಾಕಾರವಾಗಿ ಯೆನ್ನರಮನೆಯೆಳಿಳೆಂದುಮಿರ।
ಬೇಕೆಂದು ಬೇಡಿಕೊಳಲೊಪ್ಪಿ ಪವಮಾನ ಸಖ।
ನಾ ಕಮಲವದನೆಯಂ ಮದುವೆಯಾದಂ ವಿಧಿ ವಿಧಾನ ವಿಭವಂಗಳಿಂದೆ ॥೧೦॥

ಶ್ರೀ ಹೈಮವತಿಪುರಂ ದುಗ್ಧಾಬ್ಧಿ ಹಿಮಗಿರಿಗ।
ಳಾ ಹರಿಹರರ್ಗೆ ಕೊಟ್ಟಂಬಿಟ್ಟುಕೊಂಡಿಹವೊ।
ಲೀ ಹುತವಹಂಗಾತ್ಮಜೆಯನಿತ್ತು ನಿಲಿಸಿಕೊಂಡು ನೀಲಕೇತು ಬಳಿಕ॥
ಸ್ವಾಹಾ ವನಿತೆಯು ಸಮ್ಮೇಳದತಿಸೌಖ್ಯದಿಂ।
ಮಾಹಿಷ್ಮತೀ ಪಟ್ಟಣದೊಳಿರ್ದ ನನಲಂ ಮ।
ನೋಹರದ ವಿವಿದ ಭೋಗದೊಳಂದು ಮೊದಲಾಗಿ ಸಂದು ಸಂತೋಷದಿಂದೆ॥೧೧॥

ಅಲ್ಲಿ ಪಾವಕನಿರ್ದ ಕಾರಣವಿದೀಗ ವಂ।
ದಿಲ್ಲಿಯ ಕಥಾಂತರವನರಸ ಕೇಳಾ ರಾತ್ರಿ।
ಯಲ್ಲಿ ನೀಲಧ್ವಜಂ ಮನೆಯೊಳಾ ಜ್ವಾಲೆಯು ನಿರೂಪಮಂ ಶಿರದೊಳಾಂತು॥
ಸಲ್ಲಲಿತ ವಾಜಿಯಂ ಬಿಡನೆನ್ನೊಡನೆ ಕಾದಿ।
ದಲ್ಲದೆಂಬಾ ಕಿರೀಟಿಗೆ ಪೇಳಿಸಿದನಿತ್ತ।
ಪಲ್ಲವಿಸಿತಮಲ ಪೂರ್ವಾಶಾ ಲತಿಕೆಯೆನಲ್ ಕೆಂಪಡರ್ದುದು ಮೂಡಲು ॥೧೨॥

ತನ್ನ ಪಗೆಯಾದ ಕತ್ತಲೆಯ ಸಾರೂಪ್ಯದಿಂ।
ದಿನ್ನಿರ್ದೊಡೆಮಗಿನಂ ಮುಳಿಯದಿರನೆಂದಂಜಿ।
ಕನ್ನೆಯ್ದಿಲೆಯ ಮೊಗಂ ಬಾಡಿದುದು ಕೂಡೆ ನಗುತಿರ್ದುವರವಿಂದಂಗಳು॥
ಗನ್ನದೊಳ್ ನೆರೆವ ಜಾರೆಯರ ಕುಂಟಣಿಯಂತೆ।
ಸನ್ನೆಗೈದುವು ತಾಮ್ರ ಚೂಡಂಗಳೊಂದಿದುವು।
ಮುನ್ನಿನಂತಿರೆ ಜಕ್ಕವಕ್ಕಿಗಳ್ ಪಾಡಿದುವು ತುಂಬಿಗಳ್ ಬಂಡನರಸಿ ॥ ೧೩ ॥

ರಾಹು ಮುನ್ನೊಮ್ಮೆ ತನ್ನಂ ತುಡುಕಿ ಬಿಟ್ಟನೆಂ।
ದಾಹಗೆಯ ಮಗುಚಲೆಳಿಳವೊಕ್ಕು ಪಾತಾಳದ ಮ।
ಹಾಹಿ ಸಂಕುಲಮನಾಕ್ರಮಿಸಿ ಪೆಡೆವಣಿಗಳಂ ತೆಗೆದುಕೊಂಡಾಗಳವನು॥
ಸಾಹಸಂ ಮಿಗೆ ದೆಸೆದೆಸೆಗೆ ಚೆಲ್ಲುತ್ತೈತರ್ಪ।
ನೋ ಹರಿದ್ವಾಜಿ ಪೇಳೆನೆ ಪಸುಳೆಪಿಸಿಲ ಪ್ರ।
ವಾಹಂಗಳೆತ್ತಲುಂ ಪರಿಪಿನಂ ದಿನಪನುದಯಂಗೈದು ಬರುತಿರ್ದನು ॥ ೧೪ ॥

ಇತ್ತಲವನೀಶ ಕೇಳುದಯವಾಗದ ಮುನ್ನ।
ಮತ್ತೆ ಮಾಹಿಷ್ಮತಿಯ ಪಟ್ಟಣದ ಕೋಟೆಯಂ।
ಮುತ್ತಿಕೊಂಡುದು ನರನ ಚತುರಂಗವೋಜೆಯೊಳ್ ನೀಲಕೇತುವಿನ ಸೇನೆ॥
ಒತ್ತಿ ಕವಿದುದು ವೀರರೊದಗಿದರ್ ಪೊಯ್ದಾಡಿ।
ತಿತ್ತಂಡವೊಡವೆರಸಿ ಚೂಣಿಗಾಳಗದ ಭಟ।
ರೆತ್ತಿದರ್ ಪಂತಪಾಡುಗಳನಸಿತಧ್ವಜಂ ನಡೆದನರ್ಜುನನಮೇಲೆ ॥ ೧೫ ॥

ತರಣಿ ತೊಲಗಿದ ಬಳಿಕ ಮಿಂಚುಬುಳುವಿಗೆ ತಮಂ ।
ತೆರಳಬಲ್ಲುದೆ ಕೃಶಾನುಜ್ವಾಲೆಗಳುಕದಾ।
ನರನುಳಿದ ವೀರರಂ ಬಗವನೇ ಪಡೆವೆರಸಿ ನೂಕಿದಂ ಕಣೆಗರೆಯುತೆ॥
ಮುರಿದುದುರವಣೆಗವನ ಸೇನೆ ಬಳಿಕಳಪಿಗರ್।
ತರಹರಿಸಿ ಸುತ ಸಹೋದರ ಮಂತ್ರಿ ಬಾಂಧವರ್।
ಧುರದೊಳಾಂತಳಿದರರ್ಜುನನೊಳಾತಂ ಕಾದಿ ನೊಂದು ಮೂರ್ಛಿತನಾದನು ॥೧೬॥

ಬಳಿಕ ಸಾರಥಿ ಮನೆಗೆ ತಂದನಾ ಭೂಪನಂ।
ಪೊಳಲ ಪೆರ್ದಾಗಿಲ್ಗಳಿಕ್ಕಿದುವು ಕೋಟೆ ಕೊ।
ತ್ತಳದ ಕಾವಲ್ಗಳಂ ಬಲಿದರಲ್ಲಲ್ಲಿ ಗಜಬಜವಾಯ್ತು ನಗರದೊಳಗೆ ॥
ತಿಳಿದುದಾತನ ಮೂರ್ಛೆ ಕಣ್ದೆರೆದು ನೋಡಿ ಕೊಳು।
ಗುಳದ ಪರಿಭವಕೆ ಬೆಂಡಾಗಿ ನಿಜ ತನಯರಳಿ ।
ದಳಲಿನಿಂ ಬೈದನಸಿತಧ್ವಜಂ ಜ್ವಾಲೆಯಂ ಪ್ರತಿಕೂಲೆಯಂ ಖತಿಯೊಳು ॥ ೧೭ ॥

ನಿನ್ನೆ ಪಾರ್ಥನ ಹಯವನಾತಂಗೆ ಬಿಡಲೀಯ।
ದೆನ್ನ ಕೆಡಿಸಿದೆಯಲಾ ಪಾತಕಿಯೆ ಸುತರಳಿದ।
ರಿನ್ನೇನು ಘಾತಕಿಯ ಮತ್ಕುಲಕರಿಷ್ಟೆ ನೀನತಿಕಷ್ಟೆ ಪೋಗು ದುಷ್ಟೆ॥
ಎನ್ನರಮನೆಯೊಳಿರದಿರೆಂದಾಗಳಾ ಜ್ವಾಲೆ।
ಯನ್ನೀಲಕೇತು ಧಟ್ಟಿಸಿ ಬೈದು ಬಳಿಕಶ್ವ।
ಮನ್ನರನೆಡೆಗೆ ಕಳುಪಿ ತಾನಾ ಕಿರೀಟಿಯಂ ಕಾಣಲ್ಕೆ ಪೊರಮಟ್ಟನು ॥ ೧೮ ॥

ಕೊಂಡು ಬರಿಸಿದನಖಿಳ ವಸ್ತುಗಳನಮಲ ಮಣಿ ।
ಮಂಡನಾಳಿಗಳಂ ವಿವಿಧ ದುಕೂಲಂಗಳಂ ।
ಹಿಂಡಾಕಳಂ ಮಹಿಷಿಗಳನುತ್ತಮಸ್ತ್ರೀಯರಂ ಗಜ ಹಯಾವಳಿಯನು॥
ಭಂಡಾರದರ್ಥಮಂ ಗುಡ ತೈಲ ಧಾನ್ಯಮಂ।
ಬಂಡಿಗಳ ಮೇಲೆ ತುಂಬಿಸಿ ಪಾರ್ಥನಂ ಬಂದು ।
ಕಂಡನಸಿತಧ್ವಜಂ ಬಳಿಕವನನರ್ಜುನಂ ಪ್ರೀತಿ ಮಿಗೆ ಮನ್ನಿಸಿದನು ॥ ೧೯ ॥

ವಾಜಿ ನಡೆದುದು ಬಳಿಕ ತೆಂಕಮೊಗಮಾಗಿ ಸೇ ।
ನಾ ಜಾಲಸಹಿತ ನೀಲಧ್ವಜಂ ಪೊರವೊಟ್ಟ ।
ನಾ ಜನಪನಂ ಕೂಡಿಕೊಂಡು ಮುಂದಕೆ ಸವ್ಯಸಾಚಿ ತೆರಳಿದನಿತ್ತಲು ॥
ತೇಜವಿಲ್ಲದೆ ಮನೆಯೊಳಿಂ ಪೆಣ್ಣೊಡಲ್ವೆಳಸು ।
ವೀ ಜೀವಮೇತಕೆನಗೆನುತೆ ನಿಜ ವಲ್ಲಭನ ।
ರಾಜ ಗೃಹಮಂ ಬಿಟ್ಟು ಪೋದಳಾ ಜ್ವಾಲೆಯುನ್ಮುಖನೆಂಬ ತಮ್ಮನೆಡೆಗೆ ॥೨೦॥

ಉನ್ಮುಖಂ ಕಂಡಿದಿರ್ಗೊಂಡಗ್ರಜಾತೆಯಂ ।
ಸನ್ಮಾನಿಸಿದನೇಕೆ ಬಂದೆಯೆನೆ ಫಲುಗುಣಂ ।
ಮನ್ಮನೋರಥಮೆಲ್ಲಮಂ ಕಿಡಿಸಿ ಮಕ್ಕಳಂ ಕೊಂದು ಪತಿಯಂ ಗೆಲ್ದನು ॥
ತನ್ಮರಣಕೊಂದು ದಾಯವನೆಸಗದಿರಲೆನ್ನ ।
ಜನ್ಮವೇತಕೆ ನಿನ್ನದೆಸೆಯಿಂದೆ ನರನ ಬಿಲ ।
ಸನ್ಮೌಳಿ ಮಸ್ತಕವನರಿಸದಿರೆನೆಂದೊಡಾ ಜ್ವಾಲೆಗವನಿಂತೆಂದನು ॥೨೧॥

ವಾಯುಕರ್ಜುನನ ತಲೆ ಬೀಳ್ವುದೆ ಕೃಷ್ಣನ ಸ ।
ಹಾಯಮಿರಲೆಲೆ ಮರುಳೆ ಹರಿಯ ಹಗೆಗೊಂಡು ಕೆಡು ।
ವಾಯಸಂ ತನಗೇಕೆ ರಾಘವಂ ಮಾಡಿದುಪಕೃತಿಯಂ ದಶಾನನಂಗೆ ॥
ದಾಯಮಂ ಪೇಳ್ದವನ ವಂಶಮಂ ಸವರಿಸಿದ ।
ಮಾಯಕಾತಿಯವೊಲೆನ್ನಾಲಯಕೆ ಬಂದೆನಗೆ ।
ಪಾಯಮಂ ತಾರದಿಲ್ಲಿಂದ ಪೋಗೆಂದವಳನುನ್ಮುಖಂ ಕೋಪಿಸಿದನು ॥೨೨॥

ಜ್ವಾಲೆ ಬಳಿಕನುಜನಂ ಬೈದು ಕೋಪದೊಳಾತ ।
ನಾಲಯದೊಳಿರದೆ ಪೊರಮಟ್ಟು ನಡೆತರೆ ಮುಂದೆ ।
ಲೀಲೆ ಮಿಗೆ ನಲನಲಿದು ಸುಳಿದಿಳಿದು ಬೆಳೆದಳಿದು ತಳೆದೆಳೆದು ಪೊಳೆದು ಸೆಳೆದು ॥
ಮೇಲೆಮೇಲೊದಗುವ ಘನಪ್ರವಾಹದ ಸುಕ ।
ಲ್ಲೋಲ ಮಾಲಾಕುಲದ ಬುದ್ಬುದದ ಜಲ ಜಂತು ।
ಜಾಲದ ಲಳಿಯ ಲುಳಿಯ ಲಹರಿಗಳ ವಿಸ್ತರದ ವರ ಗಂಗೆಯಂ ಕಂಡಳು ॥೨೩॥

ತೆಳುವುಡಿಯ ಮಳಲಿಡಿಯಲಿತ್ತಡಿಯ ತಳಗಡಿಯ ।
ಪೊಳೆ ನೆರೆಯಲುರೆ ಪೊರೆಯಲೊಳ್ದೊರೆಯ ಬೆಳ್ನೊರೆಯ ।
ತೊಳಪೆಳೆಯ ಮಿಾನ್ಪೊಳೆಯಲಿರದೆಳೆಯಲೆಡೆ ಸೆಳೆಯ ತುಂತುರಿನ ತನಿಗೆದರಿನ ॥
ಸುಳಿಸುಳಿಯನವ್ವಳಿಯ ಬೊಬ್ಬುಳಿಯ ಕಡಲುಳಿಯ ।
ಜಳಚರದ ತರತರದ ಶೀಕರದ ಭೀಕರದ ।
ತುಳ ಗಂಗೆ ಸುತರಂಗೆ ನೋಳ್ಪಂಗೆ ಸಲೆ ಕಂಗೆಸೆದಳಂದು ದಿವಿಜಸಿಂಧು ॥೨೪॥

ಊರ್ಮಿಗಡಿಯಾಗಿರ್ಪ ಗುಣ್ಪಿಂದೆ ತನ್ನೆಡೆಯೊ।
ಳಾರ್ಮುಳುಗಲವರಿಂದ್ರರಹರೆಂಬ ಪೆಂಪಿಂದೆ।
ಘೂರ್ಮಿಸುವ ಗಂಗಾಪ್ರವಾಹಮಂ ಕಂಡಳಾ ಜ್ವಾಲೆ ಬಳಿಕಲ್ಲಿ ನಿಂದು॥
ಧಾರ್ಮಿಕರಿವರೊಳುಂಟೆ ತನ್ನನೆಂತಾದೊಡಂ।
ನೀರ್ಮುಟ್ಟದಂತೊಯ್ಯನಾ ತಡಿಗೆ ದಾಂಟಿಸುವ।
ಕೂರ್ಮೆಯುಳ್ಳವರೆಂದೊಡಲ್ಲಿರ್ದ ನಾವಿಕರ್ ಕೇಳ್ದವಳ್ಗಿಂತೆಂದರು ॥ ೨೫॥

ಬಿಂದುಮಾತ್ರಂ ಮೇಲೆ ಬೀಳಲ್ಕೆ ವಿಪ್ರನಂ।
ಕೊಂದ ಪಾಪಂ ಪೋಪುದಿಲ್ಲ ಮಿಂದವನ ಗತಿ।
ಯಂದಮಂ ಬಣ್ಣಿಸುವೊಡಜನ ಪವಣಲ್ಲ ನೀನಿಲ್ಲಿಗೇನಂ ಪ್ರಾರ್ಥಿಸಿ॥
ಬಂದೆ ಗಂಗಾಂಬುವಂ ಮುಟ್ಟದಿರಬಹುವೆ ಪೇ।
ಳೆಂದೊಡಾ ಜ್ವಾಲೆ ನುಡಿದಳ್ ಜಾಹ್ನವಿಗೆ ದೋಷ।
ಮೊಂದಿಹುದು ನಿಮಗೊರೆವುದಿಲ್ಲವುವಳೆನಗೆ ಮೈದೋರಲುಸಿರುವೆನೆಂದಳು ॥೨೬॥

ವೈಜದಿಂದಜನ ಕರಪಾತ್ರದಗ್ರೋದಕಂ।
ವೈಜಯಂತೀಧರನ ಪಾದಾಂಬು ಶಿವನ ತಲೆ।
ಯ್ಯೆಜಡೆವೆಳಸಿಗೆರೆದ ಜೀವನಂ ತಾನಂತುಮಲ್ಲದತಿಪಾಪಂಗಳ॥
ಮೈಜೋದನುಗಿದು ಬಿಸುಡುವ ಗಂಗೆ ಬೆದರಿದಳ್।
ತ್ರೈಜಗದೊಳಪವಾದಕಂಜದವರುಂಟೆ ಕೇ।
ಳೈ ಜನಪ ಜಲವೆ ಜಾಹ್ನವಿ ಕೇಳ್ದು ಪೊರಮಟ್ಟಳವಳೆಂಬ ನುಡಿಗೆ ನಡುಗಿ ॥೨೭॥

ಅಂಬುರುಹ ರೋಲಂಬ ಮತ್ಸ್ಯ ಕಚ್ಛಪ ವಾರಿ।
ಕಂಬು ಶೀಕರ ಚಕ್ರವಾಕ ಶೈವಾಲ ಕಾ।
ದಂಬ ಗಂಭೀರ ಸೈಕತ ಮೃಣಾಳಂಗಳಿವು ತನಗವಯವಂಗಳಾಗೆ॥
ಇಂದಾದ ಸೌಂದರ್ಯಮಾ ನದಿಯ ನಡುವೆ ಪ್ರತಿ।
ಬಿಂಬಿಸಿದೊಲಿರೆ ದಿವ್ಯ ರೂಪನಳವಡಿಸಿ ಜಗ।
ದಂಬೆ ಜಾಹ್ನವಿ ಸಲಿಲ ಮಧ್ಯದಿಂದೆದ್ದು ಬಂದಾ ಜ್ವಾಲೆಯುಂ ಕೇಳ್ದಳು ॥ ೨೮ ॥

ದೋಷ ಹರೆ ತಾನೆಂದು ವೇದ ಶಾಸ್ತ್ರಂಗಳುರೆ।
ಘೋಷಿಪುವು ಮುಟ್ಟಲಾಗದು ತನ್ನನೆಂದು ನೀಂ।
ದೂಷಿಸುವ ಕಾರಣಮದಾವುದೌ ಜ್ವಾಲೆ ಪೇಳೆಂದು ಜಾಹ್ನವಿ ನುಡಿಯಲು॥
ದೂಷಣದ ಮಾತನಾಡುವಳಲ್ಲ ಲೋಕದ ಸು।
ಭಾಷಿತವನುಸಿರಬೇಹುದು ಪುತ್ರರಿಲ್ಲದಿಹ।
ಯೋಷೆಯಂಗಸ್ಪರ್ಶನಂ ಪಾಪಮೆಂಬರದಕಾಗಿ ಬೆದರಿದೆನೆಂದಳು ॥೨೯॥

ಎಂದೊಡೆ ಕೆರಳ್ದು ಭಾಗೀರಥಿ ಸಮಸ್ತ ನೃಪ।
ವೃಂದದೊಳ್ ತನ್ನ ಮಗನುದ್ದಾಮನಾಗಿರ್ಪ।
ನೆಂದುಮಳಿವವನಲ್ಲವಂ ಯದೃಚ್ಛಾ ಮರಣಂ ಭಾಗವತ ಮಸ್ತಕಮಣಿ॥
ವೃಂದಾರಕೋಪಮಂ ಸತ್ಯಸಂಧಂ ಭೀಷ್ಮ।
ನೆಂದು ಮೂಲೋಕದೊಳ್ ಪ್ರಖ್ಯಾತನಾಗಿಹಂ।
ಮಂದಮತಿ ನೀನೆನಗೆ ಸುತರಿಲ್ಲೆನಲ್ ಬಹುದೆ ಪೋಗೆಂದೊಡಿಂತೆಂದಳು ॥ ೩೦ ॥

ಉಂಟು ನೀನಾಡಿದಿನಿತೆಲ್ಲಮುಂ ತಥ್ಯವಹು।
ದುಂಟುಕೊಂದುಳಿಮುದಂ ಬಲ್ಲೆನಾನದರಿಂದೆ।
ವೆಂಟಣಿಸಿತಿನ್ನೆಗಂ ನೀನ್ನೇಳ್ಗೆ ಮೂಜಗದೊಳೀಗ ವಾಯಾದ್ಯರೊಳಗೆ॥
ಗೊಂಟಿಕ್ಕಿದಾಹವದೊಳರ್ಜುನಂ ತವ ಸೂನು।
ವಂ ಟಕ್ಕಿನಿಂ ಕೊಂದನಲ್ಲದಿದಿರ್ದೊಡೆ ಮತ್ತೆ।
ಕಂಟಕಮದೆತ್ತಣದು ಕೇಳ್ ತವಾಭ್ಯುದಯಕೆಂದಾಜ್ವಾಲೆ ಕಾಳ್ಗೆಡೆದಳು ॥ ೩೧ ॥

ಪಚ್ಚೆಲೆಯ ತರುವನೊಣಗಿದ ಪೊರೆಯ ಮರದ ಕಾ।
ಳ್ಗಿಚ್ಚು ಕೊಂಡುರಿವವೊಲ್ ಜ್ವಾಲೆಯ ಮುಳಿಸಿನೊಡನೆ।
ಪೆಚ್ಚಿತಮರಾಪಗೆಯ ಕೋಪಮೆತ್ತಿದ ಹಸ್ತದಿಂ ಭೀಷ್ಮನಂ ಭರದೊಳು॥
ಎಚ್ಚು ಕೊಂದರ್ಜುನನ ತಲೆಯನಾತನ ಸುತಂ।
ಕೊಚ್ಚಿ ಕೆಡಹಲಿ ತಿಂಗಳಾರಕಾಹವದೊಳೆಂ।
ದುಚ್ಚರಿಸಿ ಶಾಪಮಂ ಕೊಟ್ಟಡಗಿದಳ್ ಜಲದ ಮಧ್ಯದೊಳ್ ದಿವಿಜ ತಟಿನಿ ॥ ೩೨ ॥

ನಾರಿಯರ ಚಲಮಿಂತುಟೋ ಕೇಳ್ ಮಹೀಶ ಭಾ।
ಗೀರಥಿಗೆ ಕೋಪಮಂ ಬರಿಸಿ ಕೊಡಿಸಿದಳತಿ ಕ।
ಠೋರತರ ಶಾಪಮಂ ಜ್ವಾಲೆ ಬಳಿಕದು ಸಾಲದಾ ನರನ ತಲೆಯನರಿವ॥
ಕೂರಲಗಿನಸ್ತ್ರವಾದಪೆನೆಂದು ಸುರನದಿಯ।
ತೀರದೊಳ್ ವಹ್ನಿ ಪ್ರವೇಶಮಂ ಮಾಡಿ ಜಂ।
ಭಾರಿ ತನಯನ ಸೂನು ಬಭ್ರುವಾಹನನ ಮೂಡಿಗೆಯೊಳಂಬಾಗಿರ್ದಳು ॥ ೩೩ ॥

ಬಂದುದು ನರಂಗೆ ಪಾಯದೊಳೀಗ ಶಾಪವಿಾ।
ಮಂದಾಕಿನಿಯ ಮಾತು ತಾಗಿವಲ್ಲದೆ ಮಾಣ।
ದಿಂದು ಕುಲಮಳಿವುದೀತನ ಕೂಡೆ ಧರ್ಮಜಾದಿಗಳಸುವಿಡಿಯಲರಿಯರು॥
ಮುಂದೆ ಸುರಪುರದ ಲಕ್ಷ್ಮೀಕಾಂತನಾವ ತೆರ।
ದಿಂದೆ ಪರಿಹರಿಸುವನೊ ತನ್ನ ಶರಣಾಗತರ।
ನೊಂದುಪಾಯದೊಳುಳಿವದಿರನೆಂದು ಧೈರ್ಯಮಂ ತಾಳ್ದರಿಂದ್ರಾದಿ ಸುರರು ॥ ೩೪ ॥

ಪತ್ತನೆಯ ಸಂಧಿ

ಸೂಚನೆ ॥ ಹರಿ ಶಿರಿಯಮೇಲೆ ನಡೆಗಿ ಸನ್ಯಾಸಾಟನ್ ।
ಬರಿಯ ದೆಸೆಯುಂದ ಮುದ್ದಾಲಕನ ಕಥೆಗೇಳಾ ।
ತಿರದೆ ಹಂಸಧ್ವಜನ ಪಟ್ಟಣಕೆ ಬರಲವಂ ಕಾದಲ್ಕೆ ಫಲುಗುಣನುಬ್ಬುನಂ ।

ಆಲಿಸೆಲೆ ಜನಮೇಜಯಕ್ಷಿತಿಪ ಮುಂದಣ ಕ ।
ಥಾಲಾಪ ಕೌತುಕವನುಚಿತದಿಂ ಫಲ್ಗುಣಂ ।
ನೀಲಧ್ವಜನ ಕಂದ ಬಳಿಕಾತನಂ ಕೂಡಿಕೊಂಡಖಿಳ ಸೇನೆಸಹಿತ ।
ಮೇಲೆ ನಡೆದಂ ತಂತಮೊಗವಾಗಿ ಹಯದೊಡನೆ ।
ಕಾಲಿಡುವ ಮುಂದಿಗಿಂಬಿಲ್ಲ ನೆಲನಾಗಸಂ ।
ಸಾಲದೇಳುವ ಧೂಳಿಗೆಷ್ಟ್ರೆ ಕಠೋರ ವಾದ್ಯಧ್ವನಿಗೆ ನೆರೆಯದೆನಲು ॥೧॥

ಸಹದೇವನಾಗಿ ಸಮುದಿತ ನಕುಲನಾಗಿ ಸ ।
ನ್ನಿಹಿತಾರ್ಜುನನುಮಾಗಿ ವರ ವೃಕೋದರನಾಗಿ ।
ಸುಹೃದಿಳಾ ಧ್ವದ್ರಾಜನಾಗಿ ಶಶಿಕಾಂತ ಕುಲದಿಂದೆ ಪಾಂಡವನುಮಾಗಿ ।
ಅಹಿತರುಗಳಂ ಧಾರ್ತರಾಷ್ಟ್ರರಂ ಕೂಡಿಕೊಂ ।
ಡಿಹುದರಿಂದಚಲನಾಗಿಹನೆಂದು ಹರಿಯೊಡನೆ ।
ಬಹ ಪಾರ್ಥನಂ ಕರೆದು ನುಡಿದಲಿಪ ತೆರದಿಂದೆ ವಿಂಧ್ಯಾದ್ರಿ ಮುಂದೆಸೆದುದು ॥೨॥

ಎಸೆದುದಾ ಗಿರಿ ಗಗನ ಮಂಡಲವನಂಡಲೆದ ।
ಲಸದುನ್ನತದ ಶೃಂಗದುತ್ತರದ ಸತ್ತರದ ।
ಶಶಿಕಾಂತಮಯವಾದ ರಮಣೀಯ ಕಮನೀಯ ತಂದರದ ಸೌಂದರದೊಳು ।
ಮುಸುಕಿ ತಪ್ಪಲ ಮೇವ ಮಂಜುಗಳ ನಂಜುಗಳ ।
ದೆಸೆದುಗ್ರಾಹಿಗಳ ಪುತ್ತುಗಳ ಮುತ್ತುಗಳ ।
ಬೆಸರಾದ ಪೊರ್ದಿದ ಕಾಡುಗಳ ಬೀಡುಗಳ ಶಬರಿಯರ ಸಂಕುಲದೊಳು ॥೩॥

ಪಕ್ಷಿ ಮೃಗಜಾತಿಗಳು ಲೀಲೆ ಮಿಗೆ ರಮಿಸುತಿಹ ।
ಯಕ್ಷ ಕಿನ್ನರ ಕಿಂಪುರುಷ ಗಂಧರ್ವ ।
ರಕ್ಷೋಗಣಂಗಳಿಂದಲ್ಲಲ್ಲಿಗೆಸೆವ ಪುಣ್ಯಾಶ್ರಮದ ಮುನಿಗಳಿಂದೆ ।
ಋಕ್ಷ ವಾನರ ಕುಲದ ವಿವಿಧ ಚೇಷ್ಟೆಗಳಿಂದೆ ।
ವೃಕ್ಷ ಲತೆಗಳ ಕುಸುಮ ಫಲ ಸಮೃದ್ಧಿಗಳಿಂದ । ॥೪
ಪಕ್ಷಿಗಟರೀಂದ್ರಮೆಸೆವಿದರ್ಪದು ಪುಳಿಂದಿಯರ ತನುಗಂಧ ಬಂಧುರದೊಳು

ಅಧರಾಪೇಯುಂಟೆರೆ ಸದಾನವಂ ಸಿರಿಯುಂಟೆ ।
ದಾವಪ್ತದಂ ಕಲಾ ನಿಧಿಯುಂಟೆ ಮೃಗಧರಂ ।
ದಂಟೆ ಕುಜಯುತಂ ದ್ವಿಜನಂಟೆ ವಂಶ ಪರಿಶೋಭಿತಂ ಸ್ವರ್ಗದಂಟೆ ।
ದ ನುಡಿ ಸಂಧ್ಯಕಂ ರಾಜದಂಟೆ ಕರವೃತಂ ।
ದಿಯುಂಟೆ ಚಿತ್ರ ಪತ್ರಾನ್ವಿತಂ ದಿನಕರ ।
ದಿಸುಂಟೆ ಪುಂಡರೀಕೋದ್ಭಾಸಕರವಾಗಿ ತಚ್ಛೈಲಮೆಸೆದಿರ್ದುದು ॥ ೫ ॥

ನಾಗಧೂಪಮಾನಾಗಿ ಶಿವನು ಪರಿಗೆ ।
ನಾಗಿ ಪಾಲ್ಗಡಲ್ಗೆ ಶಿವ ನಿವಾಸಸ್ಥಾನ ।
ನಾಗಿ ದಿಗ್ಭಾಗಮೆಲ್ಲವ್ಯಾಪದೋದ್ಭಾಸವಾಗಿ ಸ್ಥಿರತ್ವದಲ್ಲಿ ।
ಗೌರಾನ್ವಿತವಾಗಿ ವೃಷಮಲ್ಲಿ ಬದ್ಧ ದರ ।
ಗಿ ಮಹದ್ಭುಮಲ್ಲಿ ಮಹಿಮೋ ವಿರಾಜಕರ ।
ನಾಗಿ ನೃಪಗೇಹಮಲ್ಲಿ ನಿಬಿದ್ರ ದಾಶ್ಚರ್ಯ ಸಾಂದ್ರಮಹೇಂದ್ರಮೆಸೆದು ॥೬॥

ಶೃಂಗಮಯಮಾದುದಿಲ್ಲ ಸಂಗಮಯಮಾಧಿಕ ವಸ ।
ಗಮಯಮನುಪಮ ಭುಜಂಗಮಯಮುನ್ನತ ಲ ।
ಗಮಯಮುಚಿತ ಸಾರಂಗಮಯಮಾದ್ಭುತದ ಸಿಂಗಮಯ ಶರಭಮಯವು ।
ಗಮಯಮವಿರಳ ವಿಹಂಗಮಯಮೆಸೆವ ಕು ।
ಗಮಯಮರಿಯರನಂಗಮಯ ಕೇಳಿಗಳ ।
ಗಮಯಮೆನಿಪ ಗಿರಿ ಭಂಗಮಯಮಲ್ಲದುತ್ತುಂಗಮಯ ವಾಗಿರ್ದುದು ॥೭॥

ಬಹು ಕಾಲಮೆನಗೆ ನೀರ್ಕೆಗೆರೆದ ಪುರುಷಾರ್ಥ ।
ಹ ವೃದ್ಧಿಂದುಗಾನೀಗ ಸುರಿದಪೆನೆಂದು ।
ಶಿ ನವರತ್ನಕಕಿರ್ದ್ರಮುಖವಾಗಿ ಸುರಿಸುವ ರಜದ ಸೋನೆಯೆನೆ ಪರಿಳಿದೆ ।
ಲಿಳ ತರು ಗುಲ್ಮಲತೆ ಮೃಗ ಪಕ್ಷಿ ಕ್ರಿಮಿ ಕೀಟ ।
ಹ ಮಣಿ ಮೊರಡಿ ಪಳ್ಳ ಕೊಳ್ಳ ಜರಿ ನರಿ ಜಲಗು ।
ನ ಗಹ್ವರದ ಪಿಂದ್ಯಾದ್ರಿಯಂ ಫಲುಗುಣನ ಸೇನೆ ತುಳಿದಿಳಿದುದು ॥೮॥

ಯರಿಯ ಸೇವಕರ ಬರವಂ ಕಾಣುತಾ ವಿಂಧ್ಯ ।
ದು ದುರ್ಮಾರ್ಗಮುಂ ಸನ್ಮಾರ್ಗವಾಯ್ತು ದು ।
ರ ಹೃದಯ ಘನಧ್ವಾಂತಕಾರವಮುಂ ಸುಪ್ರಕಾಶಿತವಾಯ್ತು ವಿಕೃತಿಯಡಗಿ ।
ತರ ಪ್ರಬಲ ದವಮುಕ್ತ ದಾಪಿತವಾಯ್ತು ।
ಮವಾಶಾ ಪರಿಜ್ಞಾನವಾಯ್ತು ರಡೆ ಗೊ ।
ವಾಯ್ತು ವಿಷ್ಣುಪದಮೆನೆ ನಡೆದುದಾ ಹಯಂ ದಂಪಡದ ಸೇನೆಸಹಿತ ॥೯॥

ಮಂಟಿ ಸಂದಣಿಸಿ ಬೆಂಕೊಂಡು ನಡೆತರೆ ಕುದುರೆ ।
ಮುಂದೆ ಬರೆವರೆ ಕಂಡುದೊಂದು ಯೋಜನದಗಲ ।
ದಿಂದೆಸೆವ ಶಿಲೆಯನದರೊಳ್ ಪೊರಳ್ದಪೆನೆಂಬ ತವಕದಿಂದತಿಭರದೊಳು ॥
ಬಂದಡದರಾ ಕಲ್ಲ ಮೇಲೆ ಹರಿ ಕಾಲಿಟ್ಟು ।
ದಂದು ಹರಿ ಮೆಟ್ಟಿದೊಡೆ ಪೆಣ್ಣಾದುದಂತೆ ಮೇ ।
ಣಿಂದಾಗದಿರ್ದಪುದೆ ಪೇಳೆಂಬಿನಂ ಮಹೀಪಾಲ ಕೇಳದ್ಭುತವನು ॥ ೧೦ ॥

ಕಾಲಿಡಲ್ಕಾ ಶಿಲೆಯೊಳಾ ತುರಂಗದ ಖುರಂ ।
ಕೀಲಿಸಿತು ಭಿನ್ನಿಸದೆ ಕೂಡೆ ಬೆಚ್ಚಂದದಿಂ ।
ಮೇಲೆ ನಡೆಗೆಟ್ಟು ನಿಂದುದು ದರಿದ್ರನ ಮನೋರಥದಂತೆ ನಿಜ ತನುವಿನ ॥
ಲೀಲೆಯಡಗಿರ್ದುದಾಕೃತಿಯ ಭಂಜಿಕೆಯೆನಲ್ ।
ಭೂಲೋಲ ಕೇಳೈಕ್ಯವಾಗಿರ್ದುದಾ ಕಲ್ಲೊ ।
ಳಾ ಲಲಿತ ವಾಜಿ ಪೂರ್ಣೇಂದು ಮಂಡಲದೊಳೊಪ್ಪುವ ಮೃಗಾಂಕದ ತೆರದೊಳು ॥ ೧೧ ॥

ಗಾಳಿಯಂ ಮಿಕ್ಕು ನಡೆವಾ ಹಯಂ ಕಾಲ್ಗಳಂ ।
ಕೀಳಲಾರದೆ ನಿಂದುದರೆಯೊಳೇನಚ್ಚರಿಯೊ ।
ಪೇಳಬೇಕೆಂದು ಚರರೈತಂದು ಪಾರ್ಥಂಗೆ ಕೈಮುಗಿದು ಬಿನ್ನೈಸಲು ॥
ಕೇಳಿ ವಿಸ್ಮಿತನಾಗಿ ಬಂದು ನೋಡಿದನಲ್ಲಿ ।
ಗಾಳನಟ್ಟಿದನಬ್ಬರಿಸಿ ಸೆಳೆಗಳಿಂದ ಪೊ ।
ಯ್ದೇಳಿಸಿದೊಡದು ವಜ್ರಲೇಪವಾದುದು ಸಿಕ್ಕಿತಾ ಕುದುರೆ ಕಲ್ಲೆಡೆಯೊಳು ॥ ೧೨ ॥

ಬಳಿಕ ಚಿಂತಿಸಿದನರ್ಜುನನಿದೇನಾದೊಡಂ ।
ಮುಳಿದ ಮುನಿಪನ ಶಾಪಮಾಗಬೇಕೀ ವನ ।
ಸ್ಥಳದೊಳಾಶ್ರಮಮುಂಟೆ ನೋಳ್ಪುದಗಲದೊಳೆಂದು ಚಾರರಂ ಕಳುಹಲವರು ॥
ತೊಳಲಿ ನಿಮಿಷದೊಳರಸಿ ಬಂದು ಬಿನ್ನೈಸಲ್ಕೆ ।
ಫಲುಗುಣಂ ಪ್ರದ್ಯುಮ್ನ ವೃಷಕೇತು ಸಾಲ್ವಪತಿ ।
ಕಲಿ ಯೌವನಾಶ್ವ ನೀಲಧ್ವಜರನ್ನೈವರಂ ಕೂಡಿಕೊಂಡೈತಂದನು ॥ ೧೩ ॥

ವೆಗ್ಗಳಿಸರಿನ ಚಂದ್ರ ಪವನ ಶಿಖಿ ಪರ್ಜನ್ಯ ।
ರೊಗ್ಗಿಹವು ವೈರಮಿಲ್ಲದೆ ನಿಖಿಳ ಮೃಗಪಕ್ಷಿ ।
ಮೊಗ್ಗಲರ್ ಕಾಯ್ಪಣ್ಗಳಿರ್ಗಳಿಂ ಬೀಯವೆಂದೆಂದುಮೆಲ್ಲಾ ತರುಗಳು ॥
ಸಗ್ಗದವರಂತೆ ಬೇಡಿದನೀವುವಾವಗಂ ॥
ಸುಗ್ಗಿಯಾಗಿಹುವಾರು ಋತುಗಳುಂ ಸಲೆ ಪೆಚ್ಚು ।
ತಗ್ಗಿ ಶೀತೋಷ್ಣ ಸುಖದುಃಖಂಗಳೊಗೆಯದಾಶ್ರಮವೊಂದು ಮುಂದೆಸೆದುದು ॥ ೧೪ ॥

ವೇದಶಾಸ್ತ್ರಾಗಮ ಸ್ಮೃತಿ ಪುರಾಣಾವಳಿಯ ।
ನೋದಿಸುವ ಕುಶ ಸಮಿತ್ಪುಷ್ಪ ಫಲ ಮೂಲ ಪ ।
ರ್ಣಾದಿಗಳನೊದವಿಸುವ ಜಪ ತಪಸ್ಸ್ನಾನಾಗ್ನಿಹೋತ್ರ ವಿಧಿ ವೇಳೆಗಳನು ॥
ಸಾಧಿಸುವ ರವಿ ನಮಸ್ಕಾರ ಹರಿ ಹರ ಸಮಾ ।
ರಾಧನೆಗಳಂ ಮಾಡುವತಿಥಿಗಳನಳ್ತಿಯಿಂ ।
ದಾದರಿಪ ಯೋಗಮಾರ್ಗದೊಳಿಸೆವ ಮುನಿಗಳಾಶ್ರಮದೆಡೆಯೊಳಿರುತಿರ್ದರು
॥ ೧೫ ॥

ಸುಡದಿರ್ದ ಪಾವಕನೊ ಬಿಸಿ ಮಾಣ್ದ ರವಿಯೊ ತಂ ।
ಪಿಡಿದಿರದ ಚಂದ್ರಮನೊ ವಿಷಕಂಠನಾಗದಿಹ ।
ಮೃಡನೊ ರಜಮಂ ಪೊರ್ದದಂಬುಜಾಸನನೊ ಫಣಿ ತಲ್ಪನಲ್ಲದ ವಿಷ್ಣುವೋ ॥
ಕಡುತೇಜದೊಬ್ಬುಳಿಯೊ ಶಾಂತಿಯ ನಿಜಾಕಾರ ।
ದೊಡಲೊ ಪೇಳೆಂಬ ಸೌಭರಿ ಮುನಿಪನಾಶ್ರಮದ ॥
ನಡುವೆ ಕುಳ್ಳಿರ್ದು ಸುಖಯೋಗದೊಳಿರಲ್ಕೆ ನಡೆತಂದರ್ಜುನಂ ಕಂಡನು ॥ ೧೬ ॥

ಬಂದು ಸಾಷ್ಟಾಂಗದಿಂದೆರಗಿ ಸೌಭರಿ ಮುನಿಯ ।
ಮುಂದೆ ಕೈಮುಗಿದು ನಿಲಲಾ ಪಾರ್ಥನಂ ಪ್ರೀತಿ ।
ಯಿಂದೆ ಸತ್ಕರಿಸಿ ಕುಶಲಂಗಳಂ ಕೇಳ್ದಲ್ಲಿಗೇಕೆ ಬರವಾಯಿತೆನಲು ॥
ಅಂದು ಕುಲಗೋತ್ರಮಂ ಕೊಂದ ಪಾಪಂ ಪೋಗ ।
ಲೆಂದಶ್ವಮೇಧಮಂ ತೊಡಗಿ ಯೆನ್ನಂ ಧರ್ಮ ।
ನಂದನಂ ಕಳುಹಿದಂ ಹಯ ರಕ್ಷೆಗದರೊಡನೆ ಬರೆ ಸಿಲ್ಕಿತದು ಶಿಲೆಯೊಳು ॥ ೧೭ ॥

ಎಲೆ ಮುನೀಶ್ವರ ತವಾನುಗ್ರಹದೊಳಲ್ಲದೀ ।
ಶಿಲೆಯೊಳೊಂದಿದ ಹಯಂ ಬಿಡುವಂದಮಂ ಕಾಣೆ ।
ನುಳುಹಬೇಕೆಂದೆರಗಲರ್ಜುನನ ಮೊಗ ನೋಡಿ ನಗುತೆ ಸೌಭರಿ ನುಡಿದನು ॥
ತಿಳುಹಿದಂ ಪಿಂತೆ ಭಾರತ ಯುದ್ಧ ಮಧ್ಯದೊಳ್ ।
ನಳಿನನಾಭಂ ನಿನಗೆ ಮತ್ತೆಯುಮಹಂಕಾರ । [॥ ೧೮ ॥
ಮಳಿದುದಿಲ್ಲಕಟ ಜಗದೊಳ್ ಕೊಲ್ವರಾರ್ ಕಾವರಾರ್ ಏಕೊಲ್ಲಡುಸಿರೆಂದನು

ಶ್ರೀ ಕೃಷ್ಣನಿರೆ ಮುಂದೆ ವಂಶಮಂ ಕೊಂದೆನೆಂ ।
ಬೀ ಕೃತ್ಯದಿಂ ಪಾತಕಂ ಬಹುದೆ ನಿಮ್ಮೊಳ್ ಸ ।
ದಾ ಕೃಪಾನಿಧಿಯ ಸಾನ್ನಿಧ್ಯಮಿರುತಿರಲಾಗಿ ವಾಜಿಮೇಧಂ ಬೇಹುದೆ ॥
ಆ ಕೃತಾಂತಕ ನರಿದುದಿಲ್ಲಲಾ ಲೋಕದೊಳ್ ।
ಪ್ರಾಕೃತರ ತೆರದಿಂದೆ ಹರಿ ಮನೆಯೊಳಿರೆ ಗರ್ದ ।
ಭಾಕೃತಿಯ ಹರಿಯೊಡನೆ ಬಂದೆ ಸುರ ಭೂಜಮಿರೆ ಶಾಲ್ಮಲಿಯನರಸುವಂತೆ॥ ೧೯ ॥

ಕೊಟ್ಟಿಗೆಯ ಕಾಮಧೇನುವನೊಲ್ಲದಳ್ತಿಯಿಂ |
ಕಟ್ಟರಣ್ಯದ ಪುಲಿಯನರಸಿ ಕರೆಯಲ್ಕೊದೆಯ |
ಕಟ್ಟುವೆಯಲಾ ತುರಗಮೇಮೆಧ್ಯೇಗೈವುದಾ ಹರಿಯ ಸಾನ್ನಿಧ್ಯಮಿರಲು ॥
ಹುಟ್ಟಿತಿಲ್ಲವೆ ನಿನಗರಿವು ಧರ್ಮಸೂನು ಮತಿ |
ಗೆಟ್ಟಿಹನೆ ಶಿವಶಿವ ವೃಥಾ ಪರಿಭ್ರಮವೆ ನಿಮ |
ಗೆಟ್ಟಿತೆಂದಮರೇಂದ್ರ ತನಯನಂ ಜರೆದು ಸೌಭರಿ ನುಡಿದೊಡಿಂತೆಂದನು ॥ ೨೦ ॥

ಹರಿಯನುಳಿದಾವು ಬದುಕುವರಲ್ಲ ಚಿತ್ತದೊಳ್ |
ಭರಿತನಾಗಿಹನಾವಗಂ ಧರ್ಮಸೂನು ಮರೆ |
ದಿರನಾ ಮುರಾರಿಯ ನಿರೂಪದಿಂ ತೊಡಗಿ ಮಾಡುವನೀ ಮಹಾಕ್ರತುವನು ॥
ತರಳತೆಯ ಮೆರೆವೆಗಿಂತರಿವನುಪದೇಶಿಪೊಡೆ |
ಗುರುಗಳಲ್ಲವೆ ನೀವು ಧನ್ಯರಾದಪೆವಿನ್ನು |
ಕರುಣದಿಂದೀ ಶಿಲೆಯೊಳೊಂದಿದ ತುರಂಗಮಂ ಬಿಡಿಸಿಕೊಡಬೇಕೆಂದನು ॥೨೧॥

ಇನ್ನು ಚಿಂತಿಸದೆ ಕೃಷ್ಣಸ್ಮರಣೆಯಂ ಮಾಡಿ |
ನಿನ್ನ ಹಸ್ತಸ್ಪರ್ಶನಂ ಗೆಯ್ದೊಡಾ ಕುದುರೆ |
ಮುನ್ನಿನಂತವನಿಯೊಳ್ ನಡೆದಪುದು ಪೋಗು ನೀನೆಂದು ಸೌಭರಿ ನುಡಿಯಲು ॥
ತನ್ನೊಳಗೆ ತಾನೆ ವಿಸ್ಮಿತನಾಗಿ ಪಾರ್ಥನದ |
ರುನ್ನತಿಯ ತುದಿ ಮೊದಲನರುಪೆನಲ್ ಜ್ಞಾನ ಸಂ |
ಪನ್ನ ತಾಪಸನರ್ಜುನಂಗೆ ವಿಸ್ತರಿಸಿದಂ ಮತ್ತೆ ಪೂರ್ವಾಪರವನು ॥ ೨೨ ॥

ಆಲಿಸರ್ಜುನ ಮುನ್ನ ವಿಪ್ರನುಂಟೋರ್ವನು |
ಪದ್ದಾಲಕಾಖ್ಯಂ ತಿಳಿದನಖಿಳಶಾಸ್ತ್ರಂಗಳಂ |
ಮೇಲೆ ವೈವಾಹದೊಳ್ ವಧುವಾದಳಾತಂಗೆ ಚಂಡಿಯೆಂಬಾಕೆ ಬಳಿಕ ॥
ಕಾಲಕಾಲದ ಜಪಾನುಷ್ಠಾನಪೂಜೆಗಳಿ |
ಗಾಲಸ್ಯಮಂ ಮಾಡದೆನ್ನ ಪರಿಚರ್ಯೆಗನು |
ಕೂಲೆಯಾಗಿರ್ದು ಮನೆವಾಳ್ತೆಯಂ ಸಾಗಿಪುದು ನೀನೆಂದೊಡಿಂತೆಂದಳು ॥೨೩॥

ಎಳ್ಳನಿತು ನಿನ್ನ ಮಾತಂ ಕೇಳ್ವಳೆಂದೆಣಿಕೆ |
ಗೊಳ್ಳದಿರ್ ಪರಿಚರ್ಯೆ ಮನೆವಾಳ್ತೆಯೆಂದೆಂಬ |
ತಳ್ಳಿಯವಳಲ್ಲ ನೀನೆಂದುದಂ ಮಾಡೆನೆಂದಾ ಚಂಡಿ ಚಂಡಿಪೋರೆ ॥
ಮುಳ್ಳಿಡಿದ ಮರವೇರಿದಂತಾದುದಿಹಪರಕಿ |
ದೊಳ್ಳಿತಾದಪುದೆ ಬಂದುದು ತಪೋಹಾನಿಯೆಂ |
ದಳ್ಳೆಯೊಳ್ ಕೋಲ್ಗೊಂಡ ತೆರದೊಳುದ್ದಾಲಕಂ ಚಿಂತಿಪಂ ಪ್ರತಿದಿನದೊಳು ॥೨೪॥

ಇಂತಿರುತಿರಲ್ಕೆ ಕೌಂಡಿನ್ಯನೆಂಬೊರ್ವ ಮುನಿ ।
ಪಂ ತನ್ನ ಮನೆಗೆ ಬರಲಾತನಂ ಸತ್ಕರಿಸಿ ।
ಚಿಂತೆವೆತ್ತಿರಲವನಿದೇನೆಂದು ಬೆಸಗೊಂಡೊಡವಳ ಪ್ರತಿಕೂಲತೆಯನು ॥
ಅಂತರಿಸದೆಲ್ಲಮಂ ಪೇಳ್ದೊಡವನಿದಕೆ ನೀಂ ।
ಮುಂತೆ ವಿಪರೀತಮಮಂ ಮಾಡಲಾದಪುದೆಂದು ।
ಸಂತಾಪಮಂ ಬಿಡಿಸಿ ಬೀಳ್ಕೊಂಡವಂ ತೀರ್ಥಯಾತ್ರೆಗೈದಿದನಿತ್ತಲು ॥ ೨೫ ॥

ಉದ್ದಾಲಕಂ ಬಳಿಕ ತನ್ನ ಮಂದಿರದೊಳಿರು ।
ತಿದ್ದ ಸಮಯಕೆ ಪಿತೃಶ್ರಾದ್ಧದಿವಸಂ ಬಂದೊ ।
ಡೆದ್ದು ಚಂಡಿಯೊಳೆಲಗೆ ನಾಳೆ ಪೈತೃಕಮದಂ ನಾಡಿದಲ್ಲದೆ ಮಾಡೆನು ॥
ಕದ್ದು ತಹೆನಧಮಧಾನ್ಯ ವ್ರೀಹಿ ಶಾಕಮಂ ।
ಪೊದ್ದಲೀಯೆಂ ಶುದ್ಧವಸ್ತುಗಳ ನೊಂದುಮಂ ।
ತದ್ದಿನಕೆ ಮರುದಿವಸದೊಳ್ ಪೇಳ್ದು ಬಹೆನಪಾತ್ರಂಗೆಂದೊಡಿಂತೆಂದಳು ॥ ೨೬ ॥

ನಾಳೆ ಮಾಡಿಸುವೆನಾಂ ಪೈತೃಕವನುತ್ತಮದ ।
ಶಾಲಿಧಾನ್ಯ ವ್ರೀಹಿ ಶಾಕಮಂ ಕೊಂಡು ಬಹೆ ।
ನಾಲಯವನತಿಶುದ್ಧವಾದ ವಸ್ತುಗಳಿನಲ್ಲದೆ ಕೂಡೆನಳ್ತಿಯಿಂದೆ ॥
ಪೇಳಿಸುವೆನಂದಿನ ದಿನದ ಮೊದಲ ರಾತ್ರಿಯೆ ವಿ ।
ಶಾಲಗುಣಸಂಪನ್ನ ವೇದಪಾರಂಗತ ಸು ।
ಶೀಲರಹ ಸತ್ಪಾತ್ರದವನಿಯಮರರ್ಗೆನಲ್ ಚಂಡಿಗವನಿಂತೆಂದನು ॥ ೨೭ ॥

ಆದೊಡೆ ಕುತುಪಕಾಲಮಂ ಬಿಡುವೆನರ್ಚನೆಯೊ ।
ಳಾದರಿಸೆನಾಂ ಬಂದ ವಿಪ್ರರಂ ಪಾಕದ ನ ।
ವೋದನ ಸುಪಾಯಸ ಗುಡಾಜ್ಯ ಮಧು ತೈಲ ಮೃದುಭಕ್ಷ್ಯ ಭೋಜ್ಯಾದಿಗಳನು॥
ಸ್ವಾದುಫಲ ಶರ್ಕರ ವಿನುತ ಶಾಕ ನಿರ್ಮಲ ಪ ।
ಯೋದಧಿಗಳಂ ಸಕುತ್ಸಿತಮಾಗದಂತೆ ಸಂ ।
ಪಾದಿಸಿ ಪಿತೃಶ್ರಾದ್ಧಮಂ ಮಾಡಿ ವಸ್ತ್ರದಕ್ಷಿಣೆಗಳಂ ಕೊಡೆನೆಂದನು ॥ ೨೮ ॥

ಎಂದೊಡೆ ಕುತುಪಕಾಲಮಂ ಮೀರಲೀಯೆನಾಂ ।
ಬಂದ ವಿಪ್ರರನಾದರಿಸಿ ಪೂಜೆಗೈಸದಿರೆ ।
ನಿಂದೊಲ್ಲೆನೆಂದೊಕ್ಕಣಿಸಿದಿನಿತನೆಲ್ಲಮಂ ಸಂಪಾದಿಸದೆ ಮಾಣೆನು ॥
ತಂದಮಲವಸ್ತ್ರ ತಾಂಬೂಲ ವರದಕ್ಷಿಣೆಗ ।
ಳಂದೆ ಸತ್ಕರಿಸಿ ಕಳುಹಿಸದೆ ಬಿಡೆನೆನುತೆ ನಲ ।
ವಿಂದೊದವಿಸಿದಳಖಿಲಸದ್ದ್ರವ್ಯಮಂ ಬಳಿಕ ಚಂಡಿ ಪಾಕಂಗೈದಳು ॥ ೨೯ ॥

ಕಂಡನೀತೆರನನುದ್ವಾಲಕಂ ಸಂತಸಂ।
ಗೊಂಡು ಮನದೊಳ್ ಪೊರಗೆ ತಾನೊಪ್ಪದವನಾಗಿ।
ಚಂಡಿ ಪೇಳಿದವೊಲಾ ಶ್ರಾದ್ಧಮಂ ಮಾಡಿ ಸಂಪ್ರೀತಿಯಿಂ ವಿಪರೀತದ ॥
ತೊಂಡುತೊಳಸಂ ಮರೆದು ಕರ್ಮಾಂಗವಾಗಿರ್ದ।
ಪಿಂಡಮಂ ತೆಗೆದು ಮಡುವಿನೊಳೆ ಹಾಯ್ಕೆಂದೊಡು।
ದ್ದಂಡದಿಂದೆತ್ತಿ ಬೀದಿಗೆ ಬಿಸುಡಲಾ ದ್ವಿಜಂ ರೋಷಭೀಷಣನಾದನು ॥ ೩೦ ॥

ಎಲೆಗೆ ನಿನ್ನೊಡನೆ ನಾನೇಂ ಹರಿಯಹೋರುವೆಂ।
ಛಲಿತನಕಲಿಸಿದೆ ನೀನರೆಯಾಗಿ ಹೋಗೆಂದು।
ಸಲೆ ಮುಳಿದು ಶಾಪವಂ ಕೊಟ್ಟು ಕಾರುಣ್ಯದಿಂದಾ ದ್ವಿಜಂ ಕೂಡೆ ತಿಳಿದು ॥
ಕೆಲವುಕಾಲಕೆ ನಿನ್ನೊಳಧ್ವರಹಯಂ ಬಂದು।
ನಿಲಲರ್ಜುನಂ ಬಿಡಿಸಿದೊಡೆ ಮೋಕ್ಷಮಹುದೆಂದು।
ತೊಲಗಿದಂ ಸಂನ್ಯಾಸಕವನತ್ತಲವನಿಯೊಳ್ ಕಲ್ಲಾದಳಿವಳಿತ್ತಲು ॥ ೩೧ ॥

ಮೋಕ್ಷಮಹುದಾಗಿ ಚಂಡಿಗೆ ಶಾಪವಿದಾಗಳುವ।
ಸಾಕ್ಷಿಗೈತಂದು ನಿಂದುದು ಹಯಂ ನೀಂ ಮುಟ್ಟ।
ಲೀಕ್ಷಣದೊಳೆದ್ದು ಪೋದಪುದು ಪೋಗಿನ್ನು ಮುಂದಣ ನೃಪರ್ ಬಲವಂತರು ॥
ರಾಕ್ಷಸಾರಿಯನೆ ಮರೆಯದಿರೆಂದು ಸೌಭರಿ ನಿ।
ರೀಕ್ಷಿಸಿ ಕೃಪಾವಲೋಕನದಿಂದೆ ವರಸಹ।
ಸ್ರಾಕ್ಷನ ಕುಮಾರನಂ ಕಳುಹಲಾನತನಾಗಿ ವಿನಯದಿಂ ಬೀಳ್ಕೊಂಡನು ॥ ೩೨ ॥

ತದನಂತರದೊಳರ್ಜುನಂ ಬಂದು ಕುದುರೆಯುಂ।
ಮುದದಿಂದೆ ಮುಟ್ಟಲದು ಬಿಟ್ಟು ನಡೆದುದು ಮುಂದ।
ಕೊದರಿಕೊಳುತೆದ್ದು ನರನಂ ಕಂಡು ಚಂಡಿ ತಪಕಾಗಿ ಕಳುಹಿಸಿಕೊಂಡಳು ॥
ಒದವಿದ ಸಮಸ್ತ ಜನವಾಗ ವಿಸ್ಮಿತವಾದು।
ದುದಿರಿತು ಕುಸುಮವೃಷ್ಟಿ ಬಳಿಕ ದಕ್ಷಿಣಕೆ ನಡೆ।
ದುದು ವಾಜಿ ಚಂಪಕಾಪುರಕಂದು ಹಿಂದೆ ಬಹ ಪಡೆಸಹಿತ ವಹಿಲದಿಂದ ॥ ೩೩ ॥

ಘನಘೋಷದಿಂದ ವಾಹಿನಿಗಳೈತರುತಿರಲ್।
ವನಧಿ ಮೇರೆಯನತಿಕ್ರಮಿಸಿ ಬಂದಪುದೆಂದು।
ಮುನಿದು ಭೂಮಂಡಲಮಿರದೆ ನಭಸ್ಥಳಕೆ ಪೋಪಂತೆ ದೂಳೇಳುತಿರಲು ॥
ಅನುಸಾಲ್ವ ಸಾತ್ಯಕಿ ಪ್ರದ್ಯುಮ್ನ ಯೌವನಾ।
ಶ್ವನರೇಶ ವೃಷಕೇತು ನೀಲಧ್ವಜರ ಸೈನ್ಯ।
ಮನುಪಮಿತವಾಗಿ ನಡೆದುದು ಚಂಪಕಾನಗರಿಗರ್ಜುನನ ಹಯದಕೂಡೆ ॥ ೩೪ ॥

ತವೆ ಸರ್ವಮಂಗಳಾಸ್ಪದಮಾದೊಡಂ ಪರಾ ।
ಭವಯುಕ್ತಮಾಗಿರ್ಪುದೆಂದು ಕೈಲಾಸಾಚ ।
ಲವನತುಳಲಕ್ಷ್ಮೀನಿಳಯಮಾದೊಡಂ ಭಂಗಸಹಿತಮಾಗಿರ್ಪುದೆಂದು ॥
ಅವಿರಳಪಯೋನಿಧಿಯನಟ್ಟಹಾಸಂ ಮಾಡು ।
ವವೊಲಿರ್ದುದಾಪುರಂ ಪ್ರಾಸಾದಕೋಟಿಗಳ ।
ಧವಳಿಮ ಸುಧಾಕೀರ್ಣ ರುಚಿಗಳಿಂ ಪೊರೆಗೆ ನೋಡುವ ಜನರ್ಗೆವೇಳ್ಪಿನಂ ॥ ೩೫ ॥

ಇದು ಪುರಸ್ತ್ರೀಯ ಮಣಿಕಾಂಚೀವಲಯಮೊ ಭೂ ।
ಸುದತಿಯ ಕೊರಳ ವಿರಾಜಿಪ ರತ್ನಮಾಲಿಕೆಯೊ ।
ತ್ರಿದಶಪತಿ ಗಿರಿಗಳಂ ಕಡಿವಂದು ತಗೆದಿಡುವೆನೆಂದು ತಿರುಪಿದ ಕುಲಿಶದಾ ।
ಪೊದರುವೆಳಗಿಳೆಗಿಳಿದು ವಜ್ರಮಯಮಾಗಿ ನಿಂ ।
ದುದೊ ವಿಮಲಕೀರ್ತಿಚಂದ್ರಿಕೆಯಂ ಪರಪುವ ನಗ ।
ರದ ರಾಜಮಂಡಲದ ಪರಿವೇಷಮೋ ಪೇಳೆನಲ್ ಕೋಟೆ ಕಣ್ಗೆಸೆದುದು ॥ ೩೬ ॥

ಆ ನಗರದರಸು ಹಂಸಧ್ವಜಂ ಕೇಳ್ದನೀ ।
ಸೇನೆಸಹಿತರ್ಜುನಂ ವರಮಖ ತುರಂಗ ರ ।
ಕ್ಷಾನಿಮಿತ್ತಂ ಬಂದು ಸೀಮೆಯಂ ಪೊಕ್ಕುದಂ ದೂತಮುಖದಿಂದೆ ಬಳಿಕ ॥
ಧ್ಯಾನಿಸಿದನೊಂದೆರಡುಗಳಿಗೆ ತನ್ನಾಪ್ತಪ್ರ ।
ಧಾನರೆಲ್ಲರನಾಗ ಕರೆಸಿಕೊಂಡವರೊಳ್ ನಿ ।
ಧಾನಿಸಿ ನುಡಿದನಂದು ಶ್ರದ್ಧಾಳು ಸುಮತಿ ಪ್ರಮತಿಯೆಂಬ ಮಂತ್ರಿಗಳ್ಗೆ ॥ ೩೭ ॥

ಈ ಧನಂಜಯನ ತುರಗವನೀಗ ಕಟ್ಟಿದೊಡೆ ।
ಮಾಧವಂ ತಾನೆ ಮೈದೋರುವನೆಮಗೆ ಕೃಷ್ಣ ।
ನೀಧರೆಯೊಳಿರುತಿರ್ದಮಿನ್ನೆಗಂ ಕಂಡುದಿಲ್ಲಚ್ಯುತನ ಮೂರುತಿಯನು ॥
ಬಾಧಿಸುವುದೀ ದೇಹಮಂ ನರೆತೆರೆಗಳಿನ್ನು ।
ಸಾಧಿಸುವುದೇನಸುರರಿಪು ಬಂದು ತನ್ನೊಳ್ವಿ ।
ರೋಧಿಸಿದೊಡಿನಿತರಿಂದಳಿದೊಡೇನುಳಿದೊಡೇನೆಂದನಾ ನೃಪತಿ ನಗುತೆ ॥ ೩೮ ॥

ಆ ನರಾಧಿಪತಿ ನಿಶ್ಚೈಸಿದಂ ಕದನಮಂ ।
ಭೂನಾಥ ಕೇಳವನ ಕಟ್ಟಳೆಯನೆಲ್ಲಮಂ ।
ತಾನಾಳ್ವ ದೇಶದೊಳ್ ತನ್ನನಗರದೊಳೇಕಪತ್ನೀವ್ರತದೊಳಿರದೊಡೆ ॥
ದಾನವಾರಿಯ ಪೂಜೆಗೈಯ್ಯದೊಡೆ ಸಂತತಂ ।
ದಾನಧರ್ಮಂಗಳಂ ಮಾಡದೊಡೆ ಗತಿಗೆಟ್ಟು ।
ಹೀನಜಾತಿಗಳೊಡನೆ ಕೂಡಿದೊಡೆ ಸ್ವೈರಿನಂ ಪರಿವಾರದೊಳ್ ಪ್ರಜೆಯೊಳು ॥ ೩೯ ॥

ಅಂತುಮದರಿಂದೆಲ್ಲರೇಕಪತ್ನೀವ್ರತರ ।
ನಂತಪೂಜಾರತರ್ ಸೌಭಾಗ್ಯಸಂಯುತರ್ ।
ಸಂತತಮಲಂಕಾರಮಂಡಿತರ್ ನೀತಿಶಾಸ್ತ್ರಸ್ಮೃತಿವಿಚಾರರತರು ॥
ಕಂತುಶರನಿರ್ಜಿತರ್ ಮದಲೋಭವರ್ಜಿತರ್ ।
ಸಂತೋಷಭಾಷಿತರ್ ಸದ್ಗುಣವಿಭೂಷಿತರ್ ।
ಚಿಂತಿತಫಲಾಗತರ್ ಸಕಲಭೋಗಾನ್ವಿತರ್ ಪರಿವಾರದೊಳ್ ಪ್ರಜೆಯೊಳು ॥ ೪೦ ॥

ಏಕಪತ್ನೀವ್ರತಂ ಪ್ರಾಯತಂ ಕೋಮಲಂ
ಮಾಕಾಂತ ಕಿಂಕರನಲಂಕಾರ ಪೂಜ್ಯಂ ಶು ।
ಭಾಕಾರನಾರೋಗ್ಯಪಟು ಕರಣನಿರ್ಮಲ ನಿಕ್ಕೈತವ ಬೀವಂತನು
ಭೀಕರ ಪರಾಕ್ರಮ ವಿಶಾರದಂ ಸಂಗರವಿ ।
ವೇಕಿಯೆಂಬಿನಿತುಗುಣಮೊರ್ವನೊಳಿರಲ್ಕವನ ।
ನೇ ಕರೆದು ಮನ್ನಿಸುವನಲ್ಲದರನುಳಿವನಂತೆಲ್ಲರೀತೆರದ ನರರು ॥ ೪೧

ಉಣಲುಡಲ್ ತೊಡಲೀಯಲಿರಲೆಯ್ದಲುಂಟಾಗಿ ।
ತಣಿದಿಹುದಲಂಕಾರಪೂಜ್ಯದಿಂ ವಸ್ತ್ರಭೂ ।
ಷಣ ಗಂಧ ಮಾಲ್ಯಾನುಲೇಪನಂಗಳ ಪರಿಮಳಂಗಳಿಂ ಸೊಗಸಿರ್ಪುದು
ಸೆಣಸುಗಳ ಬಿರುದುಗಳ ಪಚ್ಚೆರ್ದ ಮುಡುಹುಗಳ ।
ಹೊಣಕೆಗಳ ತಡಹುಗಳ ಕಲಿತನದ ಕಡುಹುಗಳ ।
ರಣದವಕದಿಂ ಕುದಿಯುತಿಹುದು ಹಂಸಧ್ವಜನ ಪರಿವಾರಮನುದಿನದೊಳು ॥ ೪೨ ॥

ಮಣಿಮಯ ವರೂಥಮೆಪ್ಪತ್ತೊಂದು ಸಾಸಿರಂ ।
ಣಗನೆಗೆಪ್ಪತ್ತೊಂದುಸಾಸಿರಗಜಂ ತುರಗ ।
ಮೆಣಿಸುವೊಡೆ ಲಕ್ಕಂ ಪದಾತಿ ಸಾಸಿರಮುಳಿಯೆ ಲಕ್ಷವೊರ್ವನ ಬಳಿಯೊಳು ॥
ಗಣಿತಕಿಹುದಿನಿತು ಬಲಮಿನಿತುಬಲದಿಂದ ವೆಂ ।
ಟಣಿಸಿರ್ಪ ದಳಪತಿಗಳೆಪ್ಪತ್ತುಮಂದಿ ಸಂ ।
ದಣಿಸಿ ಬರುತಿಹುದು ಹಂಸಧ್ವಜ ನೃಪಾಲಕಂ ಪೊರಮಟ್ಟುನಡೆವೆಡೆಯೊಳು ॥ ೪೩ ॥

ಆತಂಗೆ ಧನಬಲಂ ಚಂದ್ರಸೇನಂ ಚಂದ್ರ ।
ಕೇತು ವರಚಂದ್ರದೇವಂ ವಿಡೂರಥನತಿ ।
ಖ್ಯಾತನಹ ಧರ್ಮವಾಹಂ ನ್ಯಾಯವರ್ತಿಯೆಂಬಿವರನುಜರೇಳುಮಂದಿ ॥
ಜಾತರ್ ಸುದರ್ಶನ ಸುಧನ್ವ ಸುಮನಸ್ಸುರಥ ।
ರೀತೆರದ ನಾಲ್ವರಿವರೆಲ್ಲರ್ ಸಮರ್ಥರ್ ಮ ।
ಹಾತಿಬಲರಮಲಧರ್ಮಜ್ಞರಪ್ರತಿಮರ್ ಪರಾಕ್ರಮಯುತರ್ ವೀರರು ॥ ೪೪ ॥

ವರಶಂಖಲಿಖಿತರೆಂಬವರಣ್ಣತಮ್ಮಂದಿ
ರಿರಲವರೊಳಾ ಲಿಖಿತನಾಶ್ರಮಕೆ ಶಂಖನೈ ।
ತರುತೆ ಪೇಳದೆ ಬಿದ್ದ ಪಣ್ಣನಾಸ್ವಾದಿಸಲ್ ಕಿರಿದಿವಂ ದೋಷಿಯೆಂದು ॥
ಅರಮನೆಗೆ ತಂದೊಪ್ಪಿಸಲ್ಕಾ ನೃಪಂ ಕರವ ।
ನರಿಸಲ್ಕೆ ಮತ್ತೆ ಲಿಖಿತನ ತಪೋಬಲದಿಂದೆ ।
ಮರಳಿ ಕೈಯಂ ಪಡೆದನಾ ಶಂಖನವರಿರ್ವರುಂ ಪುರೋಹಿತರವಂಗೆ ॥ ೪೫ ॥

ಆ ಶಂಖಲಿಖಿತರೆಂದವೊಲಾತನಿರ್ದಪನಿ ।
ಳೀಶ ಕೇಳವನದಿನ್ನೊಂದುಃ ಕಟ್ಟಳೆಯುಂ ಹು ।
ತಾಶನಜ್ವಾಲೆಯಿಂ ಕಾಯ್ದುಕ್ಕು ವೆಣ್ಣೆಗೊಪ್ಪರಿಗೆಯೊಳ್ ತಾಂ ಸಮರಕೆ ॥
ಆಶುವಿಂ ಪೊರಮಡುವ ದುಂದುಭಿಯ ಸನ್ನೆಯ ಮ ।
ಹಾಶಬ್ದಮಂ ಕೇಳ್ದು ಹಿಂದುಳಿದ ಭಟನಂ ಪ್ರ ।
ವೇಶಮಂ ಮಾಡಿಸುವುದಲ್ಲದೊಡೆ ತನ್ನ ಭಾಷೆಗೆ ಭಂಗಮಪ್ಪುದೆಂದು ॥ ೪೬ ॥

ಬಳಿಕನಿಬರೆಲ್ಲರಂ ಕರೆಸಿ ಹಂಸಧ್ವಜಂ ।
ನೆಲವಿತ್ತು ಫಲುಗುಣನ ತುರಗಮಂ ಪಿಡಿತಂದು ।
ಪೊಳಲೊಳಗೆ ಕಟ್ಟಬೇಕೆಂದು ಸಾರಿಸಿ ಡಂಗುರಂಬೊಯ್ಸಿ ಪೊರಮಡುತಿರೆ ।
ಮೊಳಗಿದುವು ಮೇಲೆ ನಿಸ್ಸಾಳಂಗಳಾಹವಕೆ ।
ದಳದುಳಿಸಿತಾಗ ಸುಭಟಪ್ರತತಿ ಜೋಡಿಸಿತ ।
ಖಿಳ ಕರಿ ರಥಾಶ್ವಕುಲವೊದಗಿತು ಪದಾತಿ ಸನ್ನಾಹದಿಂದಾ ಕ್ಷಣದೊಳು ॥ ೪೭ ॥

ಸುರಪಸುತನೆಂಬ ವೈರಕೆ ಧನಂಜಯನ ಮೇ ।
ಲರದೆ ಮುಳಿದೆದ್ದುದೊ ಕುಲಾದ್ರಿಗಳ ಬಳಗಮೆನೆ ।
ಕರಿಘಟೆಗಳೈದಿದುವು ತನ್ನ ಮಗನಂ ಕೊಂದನೆಂದು ನರನೊಳ್ ಕನಲ್ದು ।
ತರಣಿ ತಾಳ್ದನೋ ನಿಜಾಕಾರಕೋಟಿಗಳನೆನೆ ।
ತೆರಳಿದುವು ಮಣಿಮಯವರೂಥಂಗಳೀದುದೋ ।
ಧರೆ ಮಂದಿ ಕುದುರೆಗಳನೆನೆ ನಡೆದುದಾಹವಕೆ ಪರಿವಾರಮಾನೃಪತಿಯ ॥ ೪೮ ॥

ಕಂಸಾರಿ ಬಾರದೆ ನರಂಗೆ ಸೋಲ್ವವನಲ್ಲ ।
ಹಂಸಧ್ವಜಂ ಧುರದೊಳಿನ್ನು ಕೃಷ್ಣನ ದರ್ಶ ।
ನಂ ಸುಲಭಮೆಲ್ಲರ್ಗೆ ಸಂದೇಹಮಿಲ್ಲ ದೇಹಮನಾಂತು ಜನಿಯಿಸಿರ್ದ ॥
ಸಂಸಾರಕಿದು ಸಫಲಮಹುದೆಂದು ಪರಿತೋಷ ।
ದಿಂ ಸಮರಕೈದುತಿರ್ದುದು ಸಕಲಪಟುಭಟರ ।
ದಂ ಸತಿಯರೀಕ್ಷಿಸಿದರುಪ್ಪರಿಗೆಗಳ ಮೇಲಿನಿಯರನಾದರಿಸಿ ಕಳುಹಿ ॥ ೪೯ ॥

ಅಳಿಲಾದ ನಿರಿಯ ಬಳಲಿದ ಮುಡಿಯ ಸೊಪ್ಪಾದ।
ತಿಳಕದ ಕೆದರ್ದ ಕಾಡಿಗೆಯ ಬೆವರಿದ ಮೈಯ।
ಪುಳಕದವಯವದ ಕೆಂಬಾಸುಳೇರುಗಳ ಪರೆದನುಲೇಪನದ ತೊಡಕಿದ॥
ಗಳದ ಹಾರದ ಕೆಂಪುಗದಡಿದಧರದ ನುಡಿಯ।
ಕಳವಳದ ಕಡೆಗಣ್ಣ ಕೊಂಬೊಗರ ಕದಪುಗಳ।
ಕಲೆಯ ಕೋಪಮಲೆಯುರಿನಿಯರ್ಕಳಂ ಕಳಿಪಿ ನೆರೆವಾಡವನಡರ್ದರಂದು ॥ ೫೦ ॥

ಇನ್ನುಮರ್ಜುನನ್ಕೃಷ್ಣರೊಡನೆ ಸಂಗರಕೆ ಸಂ।
ಪನ್ನಪಟುಭಟರೊದಗಿ ಗಾಯವಡೆಯದಮುನ್ನ।
ನಿನ್ನಧರಕೆಂತಾದುದಬರೆ ಕೃಷ ಕ್ಷತಂ ಪೇಳೆಂದಸಿಯಳೊರ್ವಳು॥
ಕನ್ನೆ ಮತ್ತೊರ್ವಳಂ ಕೇಳ್ದೊಡವಳೆಂದಳೆಲೆ।
ಪನ್ನಗಸುವೇಣಿ ಕೃಷ್ಣಾಂಕಮಿಲ್ಲದವದನ।
ಮುನ್ನಿಸರ್ ಬಿಲಕೆ ನೆರಿಯೆಂಬುದಂ ನೀನರಿಯದಕಟ ಮರುಳಾದೆಯೆಂದು ॥ ೫೧॥

ಒದಗದಿನ್ನುಂ ಮುರಾರಿಯ ಸಮರಮರ್ಜುನನ।
ಕದನಂ ಪ್ರವರ್ತಿಸದು ಪ್ರದ್ಯುಮ್ನನಾಹವಂ।
ಮೊದಲೆ ತರೆವೋರಿತಿಂದೂರೊಳೆಂದೊರ್ವಳೀ ಪೊಸವಾರ್ತೆಯಂ ಪೇಳಲು॥
ಚದುರೆ ಮತ್ತೊರ್ವಳಿದು ಜಗದೊಳಚ್ಚರಿಯೆ ಹರೆ।
ಯದರ ಕೈ ಮುಂಚುವುದು ವರಸಂಗರಂಜಿತವ।
ಹುದು ವರ್ತಮಾನದೊಳ್ ಜನಜನಿತಮಿಲ್ಲ ನೂತನದ ಮಾತೇನೆಂದಳು ॥ ೫೨ ॥

ಇಂದುಮಂಡಲದ ಸಿರಿಯಂ ಸೂರೆಯಾಡಿದರ್।
ಬಂದು ವಿಷಯದೊಳೂರುಗಳನಿರಿದರೊತ್ತಾಯ।
ದಿಂದ ದುರ್ಗಂಗಳಂ ಕೈಕೊಂಡರೊದಗಿದರ್ ಸೆಳೆನೂರೆಗಾತುರದೊಳು॥
ಮುಂದುವರಿದಂಕವೇರಿದರೀಗ ವರಸುಭಟ।
ರೆಂದು ಪೊಸವಾರ್ತೆಯಂ ಪ್ರೌಢೆಯೋರ್ವಳ್ ಪೇಳ್ದೊ।
ಡಂದು ಬಾಲೆಯರಾಕೆಯಂ ಜರೆದರರಸನಿಲ್ಲವೆ ಗೆಲ್ವೊಡೆಂದು ನಗುತೆ ॥೫೩॥

ವಿಮಲ ದಧಿ ಲಾಜ ದೂರ್ವಾಕ್ಷತೆಗಳಂ ತಳಿದು।
ಕ್ರಮದೊಳಾರತಿಗಳಂ ತಂದೆತ್ತಿ ಯಕ್ಷ ಕ।
ರ್ದಮ ವಿಲೇಪನ ಕುಸುಮ ತಾಂಬೂಲಮಂ ಕೊಟ್ಟು ಪರಸಿ ಸೇಸೆಗಳನಿಟ್ಟು॥
ರಮಣರಂ ತೆಗೆದು ಬಿಗಿಯಪ್ಪಿ ಶುಭವಾಕ್ಯದಿಂ।
ಸಮರಭೂಮಿಗೆ ಕಳುಹಿ ಸತಿಯರ್ ಸುರತ್ನಕು।
ಟ್ಟಿಮದ ಹರ್ಮ್ಯಂಗಳನಡರ್ದರ್ ದಿವಿಜಪುರದ ಲಕ್ಷ್ಮೀಶನಂ ನೋಡಲು ॥ ೫೪ ॥

ಹನ್ನೊಂದನೆಯ ಸಂಧಿ

ಸೂಚನೆ ॥ ಹಿಂದುಳಿದನಾಹವಕ್ಕಂದು ಹಂಸಧ್ವಜಂ ।
ನಂದನನನೆಣ್ಣೆ ಗಾಯ್ದುರ್ದ ಕೊಪ್ಪರಿಗೆಯೊಳ್ ।
ತಂದು ಕೆಡಹಿಸಲಚ್ಯುತಧ್ಯಾನದಿಂ ತಂಪುವಡೆದನವನಚ್ಚರಿಯೆನೆ ॥

ಭೂಹಿತಚರಿತ್ರ ಕೇಳುಳಿಯದೆ ಸಮಸ್ತಭಟ ।
ರಾಹವಕೆ ಪೊರಮಟ್ಟ ಬಳಿಕ ಹಂಸಧ್ವಜನ ।
ಮೋಹದ ಕುಮಾರಂ ಸುಧನ್ವನಾಯುತಮಾಗಿ ಬಂದು ನಿಜಮಾತೆಯಡಿಗೆ ॥
ಬಾಹುಯುಗಮಂ ನೀಡಿ ಸಾಷ್ಟಾಂಗಮೆರಗೆ ಸಿತ ।
ವಾಹನನ ಹರಿಯಂ ಪಿಡಿದು ಕಟ್ಟಿ ಕದನದೊಳ್ ।
ಸಾಹಸಂಮಾಳ್ಪೆನೆನ್ನಂ ಪರಿಸಿ ಕಳುಹೆಂದು ಕೈಮುಗಿದೊಡಿಂತೆಂದಳು ॥ ೧ ॥

ಕಂದ ಕೇಳ್ ಫಲುಗುಣಂ ಪಾಲಿಪಂ ನಾಲ್ಕಡಿಯ ।
ದೊಂದು ಹರಿಯಂ ನಿನಗದರ ಚಿಂತೆ ಬೇಡ ಸಾ ।
ನಂದದಿಂ ಪಾರ್ಥನಂ ರಕ್ಷಿಸುವ ಹರಿಯನೇ ಹಿಡಿವ ಬುದ್ಧಿಯನೆ ಮಾಡು ॥
ಹಿಂದೆ ನಾರದಮುನಿಯ ಮುಖದಿಂದೆ ಕೇಳ್ದೆಂ ಮು ।
ಕುಂದನ ವಿಶಾಲಲೀಲಾಮಾಲೆಯಂ ಕೃಷ್ಣ ।
ನಿಂದು ಮೈದೋರಿದೊಡೆ ಕಣ್ಣಾರೆ ಕಾಣಬಹುದೆಂದೊಡವನಿಂತೆಂದನು ॥ ೨ ॥

ತಾಯೆ ಚಿತ್ತೈಸಾದೊಡೀ ಭಾಷೆಯಂ ಕೃಷ್ಣ ।
ರಾಯನಂ ತನ್ನೆಡೆಗೆ ಬರಿಸಿಕೊಳ್ವುದಕೊಂದು ।
ಪಾಯಮಂ ಬಲ್ಲೆನಾಂ ಕಯ್ಯಂ ಪಿಡಿದೊಡೆ ಮೈ ತಾನೆ ಬಹುದಿಂದ್ರಜನನು ॥
ನೋಯಿಸಿದೊಡಗಧರಂ ಬಾರದಿರನಾನತರ ।
ಕಾಯಮಂ ಸೈರಿಸಂ ಬಳಿಕ ತೋರುವೆನಂಬು ।
ಜಾಯತಾಕ್ಷನ ಮುಂದೆ ತನ್ನ ಪೌರುಷವನೆನಲಾಕೆ ಮಗುಳಿಂತೆಂದಳು ॥ ೩ ॥

ಕರುವನೆಳಗಂದಿ ತಾನರಸಿಕೊಂಡೈತರ್ಪ ।
ತೆರದಿಂದೆ ಬಂದಪಂ ಮುರಹರಂ ಪಾರ್ಥನೆಡೆ ।
ಗರಿವೆನಿದು ನಿಶ್ಚಯಂ ಮಗನೆ ನೀನಾ ಹರಿಗೆ ವಿಮುಖನಾದೊಡೆ ತನ್ನನು ॥
ಜರಿವರಿಕ್ಕೆಲದ ಬಂಧುಗಳಿನ್ನು ಸಮರದೊಳ್ ।
ನೆರೆ ಕೃಷ್ಣನಂ ಗೆಲ್ವರುಂಟೆ ಸಾಕೆನ್ನೊಡಲ ।
ಮರುಕಮಂ ಬಿಟ್ಟೆನಪನಂ ಕಂಡ ಬಳಿಕ ಹಿಮ್ಮೆಟ್ಟದಿರ್ ಪೋಗೆಂದಳು ॥ ೪ ॥

ಎಂದೊಡೆಲೆ ತಾಯೆ ಕೇಳ್ ಚಕ್ರಿಗೆ ವಿಮುಖನಾಗಿ ।
ಬಂದೆನಾದೊಡೆ ನಿನ್ನ ಗರ್ಭದಿಂದುದಯಿಸಿದ ।
ನಂದನನೆ ಹಂಸಧ್ವಜನ ಕುಮಾರನೆ ಮೇಣು ಹರಿಕಿಂಕರನೆ ವೀರನೆ ॥
ಕೊಂದಪೆಂ ಪಾರ್ಥನ ಪತಾಕಿನಿಯುನವನದಟು ।
ನಂದಗೆಡಿಸುವೆನೆನ್ನ ವಿಕ್ರಮವನಚ್ಯುತನ ।
ಮುಂದೆ ತೋರಿಸುವೆನಿನಿತರಮೇಲೆ ಸೋಲ`ಗೆಲುವದು ಪುಣ್ಯವಶಮೆಂದನು ॥ ೫ ॥

ಅನಿತರೊಳ್ ಕುವಲೆಯೆಂಬುವಳೋರ್ವಳಾ ಸುಧ ।
ನ್ವನ ಸಹೋದರಿ ತಂದಳಾರತಿಯನನುಜ ಕೇ ।
ಳನುವರದೊಳಿಂದು ಶೌರಿಗೆ ವಿಮುಖನಾಗಿ ನೀಂ ಬಂದೆಯಾದೊಡೆ ಮಾವನ ॥
ಮನೆಯೊಳಾಂ ತಲೆಯೆತ್ತಿ ನಡೆವೆನೆಂತದರಿಂದೆ ।
ವನಜಾಕ್ಷನಂ ಮೆಚ್ಚಿಸಾಹವದೊಳಿಂದು ಚಂ ।
ದನದ ನುಣ್ಪಿಟ್ಟು ಕಪ್ಪುರವೀಳೆಯಂಗೊಟ್ಟು ಕಳುಹಿದಳ್ ಸೇಸೆದಳೆದು ॥ ೬ ॥

ಅರಸ ಕೇಳಾ ಸುಧನ್ವಂ ಬಳಿಕ ಜನನಿಸೋ ।
ದರಿಯರಂ ಬೀಳ್ಕೊಂಡು ಪೊರಮಟ್ಟು ತನ್ನ ಮಂ ।
ದಿರದ ಪೊರೆಗೈತರಲ್ಕದಿರಾಗಿ ಪೊಂದಟ್ಟೆಯೊಳ್ ಸಂಪಗೆಯ ಪೂವನು ॥
ಸರಸ ಪರಿಮಳಗಂಧ ಕರ್ಪೂರವೀಟಿಕೆಯ ।
ನಿರಿಸಿಕೊಂಡೊಲವಿಂದೆ ಬಂದಳಂಗಜನ ಜಯ ।
ಸಿರಿ ತಾನೆನಲ್ ಪ್ರಭಾವತಿಯೆನಿಪವನರಾಣಿ ಸುಶ್ರೇಣಿ ಸರ್ಪವೇಣಿ ॥ ೭ ॥

ಚಂದ್ರಮಂಡಲ ಸದೃಶ ವದನದೆಳನಗೆಯ ನವ ।
ಚಂದ್ರಿಕೆಯೆನಲ್ ಮೇಲುದಿನ ದುಕೂಲಂ ಮೆರೆಯೆ ।
ಚಂದ್ರತಿಲಕದ ರಾಗಮುಂ ಚಿತ್ತದನುರಾಗಮಂ ಸೂಚಿಪಂತೆ ಸೊಗಸೆ ॥
ಇಂದ್ರನೀಲದ ಮಣಿಯ ಮಿರುಗುವ ಲಲಿತಕಾಂತಿ ।
ಸಾಂದ್ರವಾದವೊಲೆಸೆವಳಕಪಾಶದಿಂದೆ ನಯ ।
ನೇಂದ್ರಿಯವನುರೆ ಕಟ್ಟಿ ಕೆಡಪದಿರಳೆಂಬಿನಂ ರಂಜಿಸಿದಳಾ ಮೃಗಾಕ್ಷಿ ॥ ೮ ॥

ಸ್ಫುರಿಸುವೊಳ್ದೊಡೆಯ ಬೆಡಗಿನ ನಡೆಯ ನಿರಿಯ ಸಿಂ ।
ಗರದುಡೆಯ ತೆಳ್ವಾದಸಿಯ ಪೊಡೆಯ ಚೆಲ್ವುದಳೆ ।
ದುರದೆಡೆಯ ನಿಂಬುಗೊಂಡಿಟ್ಟೆಡೆಯ ಬಲ್ಮೊಲೆಯ ಪೊಳೆವ ಕಣ್ಮಲರ ಕಡೆಯ ॥
ತ್ವರಿಪ ಭುಜವಲ್ಲರಿಯ ತೊಡವುಗಳ ಮೈಸಿರಿಯ ।
ಬಿರಿಮುಗುಳ ಕಬರಿಯ ಕಲೆಗಳಡಿದ ಸೌಂದರಿಯ ।
ದರಸಿ ನಿಜಪತಿಯ ಮುಂದಚ್ಚರಿಯ ಬಗೆಗೊಂಡಳಂದು ಬೇರೊಂದು ಪರಿಯ ॥೯॥

ಮುಡಿಯ ಪೊಸಮಲ್ಲಿಗೆಯ ಸೂಸುವೆಳನಗೆಯ ಸವಿ ।
ನುಡಿಯ ಬಾಯ್ದೆರೆಯ ಹೊಳೆಹೊಳೆವ ದಶನದ ಮಿಸುಪ ।
ಕಡೆಗಣ್ಣ ತೊಳಗುವ ನಖಾವಳಿಯ ಥಳಥಳಿಪ ಕಂಠಮಾಲೆಯ ಮುತ್ತಿನ ॥
ತೊಡವುಗಳ ಘನಸಾರದನುಲೇಪನದ ಸಣ್ಣ ।
ಮಡಿದುಕೂಲದ ಬೆಳ್ಪುಗಳ್ ಕೋಮಲಾಂಗದೊಳ್ ।
ಬಿಡವೆ ಪಸರಿಸೆ ಚಂದ್ರಕಾಂತದಿಂ ನಿರ್ಮಿಸಿದ ಪುತ್ತಳಿವೊಲವಳೆಸೆದಳು ॥ ೧೦ ॥

ಕರಯುಗದೊಳಾಂತ ಪೊಂದಟ್ಟೆಯನದರ ಮೇಲೆ ।
ಪರೆಪಿರ್ದ ಸಂಪಗೆಯ ಪೂಗಳಂ ತನ್ನ ಮು ।
ಯ್ಯೊರಗೆ ಸರಿಯಾದಪುವೆ ನೋಡೆಂದು ತೋರ್ಪಂತೆ ಕೊಂಡುಬಂದಿದಿರೆ ನಿಂದ ॥
ತರಳೆಯಂ ಕಡೆಗಣ್ಣೊಳೊಯ್ಯನೀಕ್ಷಿಸಿ ನಗುತೆ ।
ಸರಸ ಪರಿಮಳ ನವ್ಯ ಕುಸುಮಂಗಳಂ ಕೊಂಡು ।
ಭರದಿಂದೆ ಕೊಳುಗುಳಕೆ ಪೊರಮಡುವ ಗಮನದಿಂ ಕಾಂತೆಗವನಿಂತೆಂದನು ॥೧೧॥

ಕಾಂತೆ ಕೇಳಿಂದು ಸಮರದೊಳರ್ಜುನಂಗೆ ಮಾ ।
ರಾಂತವನ ಬಿಂಕಮಂ ಮುರಿವೆನಾ ಹರಿಬಕಸು ।
ರಾಂತಕಂ ಬಂದೊಡಾತನ ಮುಂದೆ ತೋರಿಸುವೆನೆನ್ನ ಭುಜವಿಕ್ರಮನು ॥
ನಾಂ ತಳೆವೆನಾರ್ಪಿಂದೆ ವಿಜಯಮಂ ಮೀರ್ದೊಡೆ ಭ ।
ವಾಂತರವನೈದಿ ಸನ್ಮುಕ್ತಿಯಂ ಪಡೆದಪೆಂ ।
ನೀಂ ತಳಮಳಿಸದಿರೆಂದಿನಿಯಳಂ ಸಂತೈಸಿ ಪೊರಮಡಲ್ ತಡೆದೆಂದಳು ॥ ೧೨ ॥

ಯುಕ್ತಮಲ್ಲಿದು ರಮಣ ನಿನಗೆ ಕೇಳ್ ಕಾದುವಾ ।
ಸಕ್ತಿಯಿಂ ಚಕ್ರಿಗಭಿಮುಖನಾದ ಬಳಿಕಲ್ಲಿ ।
ಮುಕ್ತಿಯಲ್ಲದೆ ಬೇರೆ ಜಯಮುಂಟೆ ಜನಿಸದು ವಿವೇಕಸಂತತಿ ನಿನ್ನೊಳು ॥
ವ್ಯಕ್ತದಿಂ ತನಗೊಂದಪತ್ಯಮುದಯಿಸದೊಡೆ ವಿ ।
ರಕ್ತಿಯಿಂ ಕೈವಲ್ಯಮಾದಪುದೆ ಸಮರಕು ।
ದ್ಯುಕ್ತನಪ್ಪಾತಂಗೆ ಸಂತಾನಮಿಲ್ಲದಿರಲಪ್ಪುದೇ ಹೇಳೆಂದಳು ॥ ೧೩ ॥

ಅದರಿಂದಮಾತ್ಮಜವಿವೇಕಮಿಲ್ಲದೊಡೆ ನನ ।
ಗಿದುವೆ ಜಲದೋದಯದ ಋತುಸಮಯಮೀ ಪದದೊ ।
ಳುದುಭವಿಸುವುದು ನಿನ್ನ ಭೂಮಿಯೊಳ್ ಬೀಜಮಂ ಬಿತ್ತಿದೊಡೆ ಬೆಳೆ ಬಾಳ್ಕೆಗೆ ।
ಕದನಕೈದುವವೇಳೆಯಲ್ಲೆನಲವಂ ಮುಂದೆ ।
ಬೆದೆಗಾಲಮುಂಟೆಂದೊಡವಳೆಣಿಸಿ ಮಳೆಗಳಂ ।
ತುದಿವಿಶಾಖೆಗೆ ಬಂದುದಿನ್ನು ಮೇಲಂಕುರಿಸಲರಿಯದೆನಲಿಂತೆಂದನು ॥೧೪॥

ರಮಣಿ ನೀನೆಂಬುದನುನಯಮಪ್ಪುದಾದೊಡಂ ।
ಸಮಯಮಲ್ಲಿದು ಮೊಳಗುತಿಪೆ ಭೇರಿ ಪೊರಮಟ್ಟು ।
ಸಮರಕಯ್ಯಂ ಪೋದನುಳಿದೆನಾದೊಡೆ ತಾತನಾಜ್ಞೆಗೊಳಗಾಗದಿರೆನು ॥
ಕ್ರಮವನರಿಯದಳೆ ನೀನೆನಗೆ ಸೈರಿಸಲಳವೆ ।
ಗಮನಕನುಕೂಲೆಯಾಗೆನುತ ಗಲ್ಲಂಬಿಡಿದು ।
ಕಮಲಾಕ್ಷಿಯಂ ಮುದ್ದುಗೈದು ಬೀಳ್ಕೊಳ್ವನಂ ಕಾತರಿಸಿ ಮೇಲ್ವಾಯ್ದಳು ॥೧೫॥

ಅಂಗಪಿಲ್ಲದನ ಸಮರಂಗಮಂ ಪುಗಲಂಜಿ ।
ತುಂಗವಿಕ್ರಮವಿಜಯಸಂಗರಕೆಳಸುವೆನೆಂ ।
ಬಂಗವಣೆಯಿಂತುಂಟೆಂದಂಗನೆ ಬಲಾತ್ಕಾರದಿಂ ಗುರುಕುಚದ್ವಯವನು ॥
ಸಂಗಡಿಸುವಂತಿರಾರ್ಪಿನಿಂ ಗಾಢತರದೊಳಾ ।
ಲಿಂಗನಂಗೈದು ಕುಡಿಗಂಗಳಿಂದವನ ಮೊಗ ।
ದಿಂಗಿತವನಾರೈವ ಶೃಂಗಾರಚೇಷ್ಟೆಯು ಬೆಡಂಗನದನೇವೇಳ್ವೆನು ॥ ೧೬ ॥

ಮಿಡಿದೊಡೊಡೆವಂತಮೃತರಸದಿಂದೆ ಮೆರೆವ ಪೊಂ ।
ಗೊಡವೊಲೆಯನವನ ವಕ್ಷಸ್ಥಳದೊಳಿಟ್ಟೊತ್ತಿ ।
ದೊಡೆ ಹಿಸಿವೊಳಗಣ ತನುಸುಧೆಯೊಸರ್ದುತೊಟ್ಟಿಡುವ ಬಿಂದುಗಳ ಸಾಲಿದೆನಲು ॥
ಕಡಿಕಿ ಪರಿದುಗುವ ಹಾರದ ಮುತ್ತುಗಳ ಮಣಿಗ ।
ಳೆಡೆವಿಡದೆ ಸೂಸುತಿರೆ ಸೊಕ್ಕುದೆಕ್ಕೆಯಳ್ ಸೊಗಸು ।
ವಡೆದಳಾಕಾಂತೆ ಪ್ರಿಯನಂಗದೊಳ್ ಮೋಹನೋತ್ಸಂಗದೊಳ್ ಬಗೆಗೊಳಿಸುತೆ
॥ ೧೭ ॥

ಪ್ರಿಯನ ತನುಚಂದನಮಹೀಜಮಂ ಸುತ್ತಿದ ಫ ।
ಣಿಯೊ ವಲ್ಲಭಾಂಗದಾಲಸ್ತಂಭಮಂ ತೊಡ ।
ರ್ದಯುಗಶರಕರಿಯ ಸುಂಡಿಲೊ ಕಾಂತಕಾಯಬಲಮಂ ಬಂಧಿಸಿದ ಮದನನ ॥
ಜಯಪಾಶವೋ ರಮಣ ದೇಹ ಕಲ್ಪದ್ರುಮಾ ।
ಶ್ರಯದ ಕೋಮಲಲತೆಯೊ ಪೊಸತಾದುದೆಂಬಂತೆ ।
ನಿಯನನಪ್ಪಿದ ಹರಿಣಲೋಚನೆಯ ನಳಿತೋಳ್ಗಳೆಸೆದುವತಿಗಾಢದಿಂದೆ ॥ ೧೮ ॥

ಕಣ್ಮಲರ್ ಕಾತರಿಸೆ ಮುಡಿ ಪೂಗಳಂ ಸೂಸೆ ।
ಮಣ್ಮೊಗಂ ಬೇರೊಂದು ಪಯಾಗೆ ನುಡಿ ದೈನ್ಯ ।
ಮುಣ್ಮೆ ಹೀನಸ್ವರದೊಳೆಸೆಯೆ ಕೈ ಕಲೆಗಳೊಳ್ ಸೋಂಕೆ ಮೈ ಪುಳಕದಿಂದೆ ॥
ಪೊಣ್ಮೆ ಮದನಾತುರಂ ತಲೆದೋರೆ ಮೇಲುಡಂ ।
ಬಿಣ್ಮೊಲೆಗಳೋಸರಿಸೆ ನಿರಿಯು ಬಿಗಿ ಪೈಸರಿಸೆ ।
ಪೆಣ್ಮಂಚಡಂಚೆದುಪ್ಪುಳ್ವಾಸಿಗೆಳೆದೊಯ್ದಳಿನಿಯನಂ ಬಲ್ಪಿನಿಂದೆ ॥ ೧೯ ॥

ಸತಿಗೆ ಷೋಡಶದ ಋತುಸಮಯಮೇಕಾದಶೀ ।
ವ್ರತಮಲಂಘ್ಯಶ್ರಾದ್ಧಮಿನಿತೊಂದುದಿನಮೆ ಸಂ ।
ಗತಮಾದೊಡೆಂತು ಕರ್ತವ್ಯಮೆನೆ ಪೈತೃಕದ ಶೇಷಾನ್ನಮಾಘ್ರಾಣಿಸೆ ॥
ಕೃತಭೋಜ್ಯಮಾದಪುದು ನಡುವಿರುಳಳಿದಾ ವ ।
ನಿತೆಯನೊಡಗೂಡಬಹುದದರಿಂದ ಧರ್ಮಪ ।
ದ್ಧತಿಯನೀಕ್ಷಿಸಲಿವಳನಿಂದು ಮಿರುವುದು ಮತವಲ್ಲೆಂದವಂ ತಿಳಿದನು ॥ ೨೦ ॥

ತಾತನಾಜ್ಞೆಯನುಳಿದು ಕೃಷ್ಣದರ್ಶನಕ್ಕೈದ ।
ದೀತರಳೆಗಿಂದು ಋತುದಾನಮಂ ಮಾಡಿದೊಡೆ ।
ಪಾತಕಂ ತನಗಿಲ್ಲಮೆಂದು ನಿಶ್ಚೈಸಿ ಬಳಿಕಾ ಸುಧನ್ವಂ ಮನದೊಳು ॥
ಭೀತಿಯಂ ತೊರೆದು ಕಾಂತೆಯ ಕೂಡೆ ರಮಿಸಿದಂ ।
ಪ್ರೀತಿಯಿಂದುಗುರೊತ್ತು ಸರಸ ಚುಂಬನ ಲಲ್ಲೆ ।
ವಾತುಗಳರವ ನೇಮುಗಲೆ ತಾಡನಪ್ರೌಢಿ ಬಂಧ ಸಮ್ಮೋಹನದೊಳು ॥ ೨೧ ॥

ನಾಣ್ಮೀಸಲಳಿದವಯವದ ಭೇದಮಂ ಮರೆದು ।
ಜಾಣ್ಮೆಗಳ ಬಂಧಂಗಳೊಳ್ ಬಳಸಿ ಸೊಗಯಿಸುವ ।
ಗೋಣ್ಮೊಳಗಿನಿಂಚರಂಗಳನೆಸಗಿ ಮೊನೆವಲ್ಲ ಕದಪಂಕನುಗುರೊತ್ತನು ॥
ಮಾಣ್ಮಾಣಿಸಲ್ ಕೈಗೊಳಿಸಿ ಲಲ್ಲೆಗೈದೋಲವ ।
ನಾಣ್ಮಂಗೆ ಕಾಣಿಸಿದಳವಳೊಡನೆ ಕೂರ್ಮೆಯಿಂ ।
ಮೇಣ್ಮಾನಿನಿಗೆ ಮದನಕಲೆಗಳಂ ತೋರಿಸಿದನವನಂದು ಸಮರತಿಯೊಳು ॥ ೨೨ ॥

ಒದವಿದ ಸೊಬಗಿನ ಶೃಂಗಾರದಾತುರದ ವೀ ।
ರದ ಲಲ್ಲೆವಾತಿನ ಕರುಣದ ನಗೆಮೊಗದ ಹಾ ।
ಸ್ಯದ ನಖಕ್ಷತದ ರೌದ್ರದ ಕಾತುರದ ಭಯದ ಬೆಮರೊಗೆದ ಭೀಭತ್ಸದ ॥
ಪುದಿದ ರೋಮಾಂಚದದ್ಭುತದ ಸೊಗಸಿನ ಮೋಹ ।
ನದ ಶಾಂತದೆಸೆವ ನವರಸದೇಳ್ಗೆಯಾದ ಸುರ ।
ತದ ನವರಸವನುರೆ ಸವಿದು ಸೊಕ್ಕಿ ಮರೆದರನ್ಯೋನ್ಯ ಭಾವವನವರ್ಗಳು ॥ ೨೩ ॥

ಕೂರುಗುರ್ಗಳ ಗೆರೆಯ ಸೂತ್ರಬಂಧದೊಳೆಸೆವ ।
ತೋರಮೊಲೆಗಳ ಕುಂಭಸಂಸ್ಥಾಪನಂಗೈದು ।
ಚಾರುತರ ಗಳರವದ ಮಂತ್ರದಿಂ ರೋಮಾಂಚನದ ಕುಶಾಗ್ರಂಗಳಿಂದೆ ॥
ವೀರರತಿ ಸಾಮ್ರಾಜ್ಯಪಟ್ಟದೊಳ್ ಬೆಮರ್ವನಿಯ ।
ವಾರಿಸೇಚನದಿಂದೆ ಕೃತಕೃತ್ಯನಾದಂತೆ ।
ರಾರಾಜಿಸಿದನವಂ ವೆಲ್ಲಾಸಿನೊಳ್ ಮೆರೆವ ಮಣಿಮಂಚದಾಸನದೊಳು ॥ ೨೪ ॥

ಪ್ರಕಟಿಸಿದ ಕಟ್ ತಳ್ಳುವಳ್ಳಿ ಬೆಂಡಾದ ಮೈ ।
ಸುಕಲೆಗಳನಾಂತ ಮೊಲೆ ಕದಡುಲೇಪದ ಬೆಮರ್ ।
ವಿಕಸಿತಸುಖದೊಳದ್ದು ಮನವೆದ್ದ ರೋಮಾಂಚಮುಸವಳಿದಕ್ಕೆ ಮುಸುಳ್ದ ॥
ಮಕರಪತ್ರದ ಕಡಪು ಮಾಣ್ದ ರವದೊಳ್ಗೊರಲ್ ।
ಮುಕುಳಿತವಿಲೋಚನಂ ನರುಸುಯ್ನಿಮಿರ್ದ ನಾ ।
ಸಿಕಮಳಿದ ತಿಲಕಂ ಪರೆದ ಕುರುಳ್ ಸೊಪ್ಪಾದಧರಮೊಪ್ಪಿತಾ ಕಾಂತೆಗೆ ॥ ೨೫ ॥

ಮನ್ವಾದಿಋಷಿಗಳಭಿಮತಮಿದೆಂದರಿದಾ ಸು ।
ಧನ್ವಂ ಋತುಸ್ನಾತೆಯಂ ವಿಾರದೊಡಗೂಡಿ ।
ತನ್ವಿಯಂ ಬೀಳ್ಕೊಂಡು ಸಮರಕನುವಾಗಲಿರಲತ್ತ ಕುರುಕುಲದ ನೃಪರ ॥
ಅನ್ವಯಕೆ ತೊಡವಾದ ನರನ ಹಯಮಂ ಕಟ್ಟು ।
ವನ್ವೇಷಣದೊಳಾಹವಕೆ ನಡೆಯುತತಿಬಲ ನ ।
ಮನ್ವಿತಕುಮಾರನಂ ಸೇನೆಯೊಳ್ ಕಾಣದೆ ಕೆರಳ್ದಂ ಮರಾಳಕೇತು ॥ ೨೬ ॥

ಪೊರೆಯೊಳಹ ಸಟವರಂ ನೋಡುತವರೊಳ್ ಸುಮತಿ ।
ಗರಸಂ ನಿರೂಪಿಸಲವಂ ಕಡುಗಡಿಕರಾದ ।
ಚರರನಟ್ಟಿದೊಡವರ್ ಬರೆಸೆಳೆದು ನಗುತಿಹ ಸುಧನ್ವನಂ ತುಡುಕಿ ಪಿಡಿದು ॥
ಕರಯುಗಳಮಂ ನೇಣ್ಗಳಿಂ ಬಿಗಿದು ತಂದರತಿ ।
ಭರದಿಂದೆ ರಾಯನಿದ್ದೆಡೆಗಾಗಿ ಪೌರಜನ ।
ಪುರಜನಂ ಬೆರಗಾಗೆ ಕದ್ದಾತನಂ ಕೊಂಡು ಬರ್ಪಂತೆ ನಿಷ್ಠುರದೊಳು ॥ ೨೭ ॥

ಕಟ್ಟುಸಹಿತಾ ಸುಧನ್ವಂ ತಾತನಡಿಗೆ ಪೊಡ ।
ಮಟ್ಟೊಡೆ ಕೆರಳ್ದಿಲವೊ ಮೂಢಾತ್ಮ ನೀನೆನ್ನ ।
ಕಟ್ಟಳೆಯನರಿದು ಕೃಷ್ಣನ ದೀಕ್ಷೆಯಂ ಮರೆದು ರಣದುತ್ಸವವನೆ ತೊರೆದು ॥
ಪಟ್ಟಣದೊಳೇಕೆ ತಳುಪಿದೆಯೆಂದು ಕುವರನಂ ।
ಧಟ್ಟಿಸಿ ಮರಾಳಧ್ವಜಂ ಕೇಳ್ದೊಡಡಿಗಿಟ್ಟು ।
ದಿಟ್ಟಿಯಿಂದಂಜುತೊಯ್ಯನೆ ಲಜ್ಜೆವೆರಸಿ ಬಿನ್ನೈಸಿದನವಂ ಪಿತಂಗೆ ॥ ೨೮ ॥

. ಸತಿ ಸಂತತಿಗೆ ಬಯಸಿ ದಿನಗಳೆದುದಿನ್ನಿಲ್ಲ ।
ಋತುಸಮಯವೆಂದೆನಗೆ ಪೇಳ್ಕೊಡಲ್ಲಿದ್ದೆನೆನೆ ।
ಕೃತಕಮಿದು ನೂಕೀತನಂ ಕೃಷ್ಣದರ್ಶನದ ಕಾಲವೊದಗಿರಲತ್ತಲು ॥
ಇತರಧರ್ಮದ ವೇಳೆ ಗಡ ತನಗೆ ಕರೆ ಪುರೋ ।
ಹಿತ ಶಂಖ ಲಿಖಿತರಂ ಬೆಸಗೊಳ್ವೆನಿದಕೆ ನಿ ।
ಷ್ಕೃತಿಯನೆನಲರಸಾಜ್ಞೆಯೊಳವರ ಪೊರೆಗೆ ಚರರೈತಂದದಂ ಪೇಳ್ದರು ॥ ೨೯ ॥

ಆ ಚರರ ನುಡಿಗೇಳ್ದು ಶಂಖಲಿಖಿತರ್ ಬಂದು ।
ವಾಚಿಸಿದರೆಲೆ ಹಂಸಕೇತು ನೀನೇನನಾ ।
ಲೋಚಿಸುವೆ ನಿನ್ನ ತನಯನ ಮೇಲಣಾಶೆಯಿಂ ಭಾಷೆದಪ್ಪಿದೆಯಾದೊಡೆ ॥
ಈ ಚಂಪಕಾಪುರದೊಳಿಹುದಿಲ್ಲ ನಾವು ಸ ॥
ತ್ಯಾಚರಣೆಗಾಗಿ ರುಕ್ಮಾಂಗದ ಹರಿಶ್ಚಂದ್ರ ।
ಭೂಚಕ್ರಪಾಲರಾತ್ಮಜರ ಮೊಗನೋಡಿದರೆ ಹೇಳೆಂದು ನುಡಿದರವರು ॥ ೨೦ ॥

ಬಳಿಕರಸನಾ ಸುಮತಿಯಂ ಕರೆದು ಪೇಳ್ದನೀ ।
ಖಳನಂ ಕಟಾಹ ಪೂರಿತ ತಪ್ತತೈಲದೊಳ್ ।
ಮುಳುಗಿಸೆನಲವನೊಡೆಯನಾಜ್ಞೆಯಿಂ ಮೀರದಾತನ ಕೈಗಳಂ ಕಟ್ಟಿಸಿ ॥
ತಳಪಳನೆ ಕುದಿವೆಣ್ಣೆಗೊಪ್ಪರಿಗೆ ಕಾಯ್ವಲ್ಲಿ ।
ಗೆಳತರಿಸಿ ಮತ್ತೆ ಪೊಕ್ಕು ಪೊಲುರಿವ ಪೆರ್ಗೂರ್ಗುಡು ।
ಗಳನಿಡಿಸಿ ಕಳಕಳಿಸುತಿಹ ಸುಧನ್ವಂಗೆ ಮರುಗುತೆ ಸಚಿವನಿಂತೆಂದನು ॥ ೨೧ ॥

ತಾತ ನಿನಗಿಂತಾಗಬಹುದೆ ಲೋಕೈಕ ವಿ ।
ಖ್ಯಾತನಭಿಮಾನಿ ಹರಿಸೇವಕಂ ಸುಂದರಂ ।
ಮಾತಾಪಿತೃಪ್ರಿಯಂ ಕೋವಿದಂ ಕೋಮಲಂ ಸುಖಿ ಸಕಲಸಜ್ಜನಸಖಂ ॥
ನೀತಿವಿದನಾಚಾರಸಂಪನ್ನನುತ್ತಮಂ ।
ದಾತನೆಂಬಿನಿಸು ಗುಣಮುಳ್ಳ ಕುವರಂ ನಿನ್ನ ।
ನೀತಪ್ತತೈಲದೊಳಗೆಂತಕಟ ಬೀಳಿಸುವೆನೆಂದೊಡವನಿಂತೆಂದನು ॥ ೨೨ ॥

ಅಂಜಬೇಡೆಲೆ ಸುಮತಿ ನೀನೀಗಳಿದಕೆ ಮನ ।
ಮಂ ಜರಿವಿಡುವನಲ್ಲ ತಾನಿನ್ನೆಗಂ ಧರ್ಮ ।
ಮಂ ಜರಿದು ನಡೆದುದಿಲ್ಲಾಹವದೊಳುತ್ತರೊಳ್ ಪೊಯ್ದಾಡಿ ಮಡಿವೊಡಳಿದು ॥
ಜಂಜಡದೊಳಳಿವುದೆಂಬೊಂದು ಭಯಮಿಹುದಾದೆ ।
ಡಂ ಜನಾರ್ದನನಂ ಶರಣ್ಬುಗುವೆನಳುಕದೆ ।
ನ್ನಂ ಜನಕನಾಜ್ಞೆದಪ್ಪದೆ ಹಾಯ್ಕೆನಲವಂ ತೆಗೆದೆತ್ತಿ ಬಿಸುಡಿಸಿದನು ॥ ೨೩ ॥

ಭೋ ಯೆಂದುದಖಿಳ ಪರಿವಾರ ಮಡಿಗಡಿಗೆ ಹಾ ।
ಹಾ ಯೆಂದು ಮರುಗಿದುದು ನೀನಿಂತಳಿವರೆ ತಾ ।
ತಾ ಯೆಂದು ಪೊರಳ್ದುದೊಡೆತನಕೆ ಬೇಸತ್ತು ಸತ್ತಾಯೆಂಬ ಸೈಗೆಡೆದುದು ॥
ವಾಯುಕಿಂತಕಟ ಸುಕುಮಾರನಂ ಕೊಂದನೀ ।
ರಾಯನರಿವಂ ನೆರೆ ಸುಡಲಿ ಶಂಖಲಿಖಿತರಂ ।
ಬೀಯಮೋಪಮರೇಕೆ ಜನಿಸಿದರೊ ಭೂಸುರರೊಳೆಂದು ಮೊರೆಯಿಡುತಿರ್ದುದು ॥ ೨೪ ॥

ಹಿಂದೆ ಪ್ರಹ್ಲಾದನಂ ಪಾಲಿಸಿದೆ ಗಡ ದ್ರುಪದ ।
ನಂದನೆಯ ಮಾನಮಂ ಕಾದೆ ಗಡ ಭಕ್ತರ್ಗೆ ।
ಬಂದೆಡರನಾವಗಂ ಪರಿಹರಿಪೆ ಗಡ ದೇವ ನಿನ್ನಂ ಪೆಸರ್ಗೊಂಡೊಡೆ ॥
ಇಂದು ಮೊರೆವೊಗುವೊಡಾರುಂ ಕಾಣೆನಕಟ ಗೋ ।
ವಿಂದ ನೀನಲ್ಲದೆ ವಿಚಾರಿಸುವರಿಲ್ಲ ಸಲ ।
ಹೆಂದವಂ ಚಿತ್ತದೊಳ್ ಕೃಷ್ಣನಂ ಧ್ಯಾನಿಸುತೆ ನಿರ್ಭಯದೊಳಿರುತಿರ್ದನು ॥ ೩೫ ॥

ಜಯಜಯ ಜನಾರ್ದನ ಮುಕುಂದ ಮುರಮರ್ದನ ವಿ ।
ಜಯಮಿತ್ರ ಗೋವಿಂದ ಪಕ್ಷಿವಾಹನ ಕಮಲ ।
ನಯನ ಪೀತಾಂಬರ ಘನಶ್ಯಾಮ ಹರಿ ಕೃಷ್ಣ ವೈಕುಂಠ ನಾರಾಯಣ ॥
ಕ್ಷಯರಹಿತ ರಾಮ ಲಕ್ಷ್ಮೀರಮಣ ನತಸುರಾ ।
ಲಯಧೇನು ಭಕ್ತವತ್ಸಲ ಕೃಪಾಕರ ಮಹಾ ।
ಭಯನಿವಾರಣ ನೃಸಿಂಹ ತ್ರಾಹಿಯೆನುತಿರ್ದನಾ ಸುಧನ್ವಂ ಮರೆಯದೆ ॥ ೩೬ ॥

ಅರಸ ಕೇಳಾಶ್ಚರ್ಯಮಂ ನೋಡಲೆವೆ ನೀವೊ ।
ಉರಿಗೊಂಡು ಕಡುಗಾಯ್ದು ತಳಪಳದೆ ಕುದಿದುಕ್ಕಿ ।
ಮೊರೆವುರುಕಟಾಹತೈಲಂ ಮೈಗೆ ಸೊಗೆಯಿಸುವ ಬಾವನ್ನದಣ್ಪಾಗಿರೆ ॥
ಕೊರಗದಾತನ ರೋಮ ಪಡಗದಂಗದ ಸೊಂಪು ।
ಕೊರಳ ತುಲಸಿಯ ದಂಡೆ ಬಾಡದು ಮುಡಿದ ಪೂಗ ।
ಳರೆಗಂದವರಳ್ದುದು ಸುಧನ್ವನ ಮುಖಾಂಬುಜಮಿನೋದಯದ ಕಮಲದಂತೆ ॥ ೩೭ ॥

ಕಂಡು ಬೆರಗಾದುವೆಲ್ಲಾ ಜನಂ ಸ್ತುತಿಸಿದರ್ ।
ಪುಂಡರೀಕಾಕ್ಷನಂ ಬಳಿಕ ಲಿಖಿತಂ ಖಾತಿ ।
ಗೊಂಡಿವಂ ಬಲ್ಲನಗ್ನಿಸ್ತಂಭಮಂ ನಾರಿಕೇಳಂಗಳಂ ತರಿಸೆನೆ ॥
ಕೊಂಡು ಬಂದೆಳನೀರ್ಗಳಂ ಸುರಿಯಲುರಿ ನಭೋ ।
ಮಂಡಲವನಪ್ಪಳಿಸೆ ಹೊಡೆದುವು ಪುರೋಹಿತರ ।
ಗಂಡಸ್ಥಳಂಗಳಂ ಸಿಡಿವೋಳ್ಗಳಾಗಳುಂ ನಗುತಿರ್ದನಾಹುವರನು ॥ ೩೮ ॥

ನಿಶ್ಚಲಹೃದಯನಾಗಿ ವಿಷ್ಣುನಾಮಂಗಳ ಪು ।
ನಶ್ಚರಣೆಯಿಂದವಂ ಸುಖದೊಳಿರುತಿರೆ ಕಂಡು ।
ಪಶ್ಚಾದ್ವಿವೇಕದಿಂದುರೆ ನೊಂದು ಹರಿಕಿಂಕರದ್ರೋಹಮಂ ಮಾಡಿದ ॥
ದುಶ್ಚರಿತಕಾವುದುಂ ನಿಷ್ಕೃತಿಗಳಿಲ್ಲೆಂಬ ।
ನಿಶ್ಚಯದೊಳಾಗ ಮರಣಾಂತವೇ ತನಗೆ ಪ್ರಾ ।
ಯಶ್ಚಿತ್ತಮೆಂದಾ ಕಟಾಹದೊಳ್ ಕುದಿವೆಣ್ಣೆಯೊಳ್ ಬಿದ್ದನಾ ಲಿಖಿತನು ॥ ೩೯ ॥

ಆ ತಪ್ತತೈಲದ ಕಟಾಹದೆಡೆ ಲಿಖಿತಂಗೆ ।
ಶೀತಳಸ್ಥಳಮಾದುದಾ ಸುಧನ್ವನ ಸಂಗ ।
ಮೇತರತಿಶಯವೊ ಹರಿಭಕ್ತರಂ ಸಾರ್ದಂಗೆ ತಾಪಮಿರ್ದಪುದೆ ಬಳಿಕ ॥
ಆತಗಳ್ ಕುದಿವೆಣ್ಣೆಯೊಳ್ ಸುಖದೊಳಿರೆ ಹಂಸ ।
ಕೇತು ವಿಸ್ಮಿತನಾಗಿ ಮಂತ್ರಿಗಳೊಡನೆ ಬಂದು ।
ಪ್ರೀತಿಯಿಂದವರೀರ್ವರಂ ತೆಗೆದು ತಕ್ಕೈಸಿದಂ ಸುತಪುರೋಹಿತರನು ॥ ೪೦ ॥

ಪನ್ನೀರಮಿಂದು ದಿವ್ಯಾಂಬರವನುಟ್ಟು ಬಾ ।
ವನ್ನದಿಗುರಂ ಗೆಲ್ದು ಕಮ್ಮಲರ್ಗಳಂ ಸೂಡಿ ।
ಸನ್ನುತ ಸುಯಕ್ತಕರ್ದಮವನನುಕರಿಸಿ ಕತ್ತುರಿತಿಲಕಪಿಟ್ಟು ಪಣೆಗೆ ॥
ರನ್ನದೊಡವುಗಳನಳವಡಿಸಿ ವೀಳೆಯಗೊಂಡು ।
ತನ್ನನುಳುಹಿದ ದೇವಪುರದ ಲಕ್ಷ್ಮೀಪತಿಯ ।
ನಿನ್ನು ಕಂಡಪೆನೆಂಬ ಹರ್ಷದಿಂ ಕಳೆಯೇರಿ ಮೆರೆದಂ ಸುಧನ್ವನಂದು ॥ ೪೧ ॥

ಹನ್ನೆರಡನೆಯ ಸಂಧಿ

ಸೂಚನೆ। ಅಪರಿಮಿತಸೈನ್ಯ ಸನ್ನಾಹದಿಂದರ್ಜುನನ।
ಚಪಲಹಯಮಂ ಮರಾಳಧ್ವಜಂ ಪಿಡಿಯಲ್ಕೆ।
ತಪನಸುತನಂದನ ಸುಧನ್ವರ್ಗೆ ಕಾಳಗಂ ಪ್ರೌಢದಾಡಂಬರದೊಳು।

ಇನ್ನು ಮೇಲಣ ಕಥೆಯನಾಲಿಸೆಲೆ ಭರತಕುಲ।
ರನ್ನ ಜನಮೇಜಯ ಸುಧನ್ವನ ಕಟಾಹದುರಿ।
ಯಂ ನಾರಸಿಂಹ ಜಪದಿಂ ಜಯಿಸೆ ಲಿಖಿತನೆಸಗಿದ ವೈಷ್ಣವದ್ರೋಹಕೆ॥
ತನ್ನರಿವನುರೆ ಜರೆದುಕೊಂಡಸುದೊರೆವೆನೆಂದು।
ನನ್ನಿಯಿಂದಾ ತೈಲದೊಳ್ ಬೀಳಲವರ್ಗಳಂ।
ಮನ್ನಿಸಿ ನೃಪಂ ತೆಗೆಸಲಾ ಪುರೋಹಿತನವನಿಪತಿಗೆ ಬಳಿಕಿಂತೆಂದನು ॥ ೧॥

ಭೂನಾಥ ಕೇಳಿನ್ನು ಸುತನ ದೆಸೆಯಿಂದೆ ನ।
ಮ್ಮಾನೆಲಂ ಪ್ರಜೆ ನಾಡು ಬೀಡೂರು ಪರಿವಾರ।
ಮಾನೆ ಕುದುರೆಗಳಿರ್ದ ಪಶು ಪಕ್ಷಿ ಮೃಗ ಕೀಟ ತರು ಗುಲ್ಮ ಲತೆಗಳೆಲ್ಲ॥
ಈ ನಿರುದ್ಧಕೆ ಧನ್ಯವಾದುವೇಂ ಕೃತಿಯೊ ನೀಂ।
ಭಾನುರಶ್ಮಿಗೆ ಕಂದರೆಯದ ಗೂಗೆಯವೊಲ।
ಜ್ಞಾನಿ ದ್ವಿಜಾಧಮಂ ತಾನಾದೆನೀ ದ್ರೋಹಕೆಂದು ಲಿಖಿತಂ ನುಡಿದನು ॥ ೨॥

ಬಳಿಕಾತನಂ ಸುಮ್ಮನಿರಿಸಿ ನುಡಿದಂ ಶಂಖ।
ನೆಲೆ ಮಹೀಪಾಲ ಹರಿಶರಣರ್ಗೆಡರ್ಗಳೆ।
ತೊತ್ತಳವು ಬೆಳುದಿಂಗಳ್ಗೆ ಬೆಮರುಂಟೆ ಬೇಸಗೆಯೊಳಿವನ ನಿಜಮಂ ಕಾಣದೆ॥
ಬಳಸಿದೆವು ಮೂರ್ಖತೆಯ ನರಿದು ಮರುಳಾದೆವಿ।
ನ್ನುಳಿವ ಮಾತುಗಳೇಕೆ ಸಾಕೀ ಸುಧನ್ವನಂ।
ಕಳುಹು ಕಾಳಗಕೆನಲ್ ಭೂಪನವನಂ ತೆಗೆದು ಬಿಗಿಯಪ್ಪಿದಂ ಮುದದೊಳು ॥ ೩॥

ತಂದೆಯ ಚರಣಕೆರಗಿ ಶಂಖಲಿಖಿತರ ಪದಕೆ।
ವಂದಿಸಿ ಹರಕೆಗೊಂಡು ಸಾರಥಿಯನಾದರಿಸಿ।
ಪೊಂದೇರನಳವಡಿಸಿ ತುರಗಂಗಳಂ ಪೂಡಿ ಸಿಂಧಮಂ ನಿಡಿದುಮಾಡಿ॥
ಗೊಂಡಣವ ಝಲ್ಲಿಗಳ ಕನಕಮಾಲೆಗಳ ಸ್ರ।
ಕ್ಚಂದನ ವಿಭೂಷಣಾವಳಿಗಳಂ ಸಿಂಗರಿಸಿ।
ಬಂದಡರ್ದಂ ಜಯರಥದೊಳಾ ಸುಧನ್ವಂ ತಿರಸ್ಕೃತಕುಸುಮಧನ್ವನು ॥ ೪॥

ಕೇಳ್ಗುಣಮಣಿಯೆ ಧರಣಿಪಾಗ್ರಣಿಯ ತನ್ನ ಮಗ |
ನೇಳ್ಗೆಯಂ ಕಂಡುಬ್ಬಿದಂ ಮರಾಳಧ್ವಜಂ |
ಸೂಳೈದುವಾಗ ತಂಬಟೆ ಭೇರಿ ನಿಸ್ಸಾಳ ಕಹಳಾದಿ ವಾದ್ಯಂಗಳು ||
ತೋಳ್ಗುಟ್ಟುತಾರ್ದು ಸುಮ್ಮಾನದಿಂ ಪಟುಭಟರ್ |
ಕೇಳ್ಗೊಂಡು ಕುದಿಯುತಿರ್ದರು ಸಾರ್ದಯೋಜನದೊ |
ಳಾಳ್ಗಜ ತುರಂಗ ರಥವಿಟ್ಟಣಿಸಿ ನಡೆದುದುತ್ಸಾಹದಿಂ ನರನ ಮೇಲೆ || ೫ ||

ಬೆರಬೆರಸುತೊತ್ತಿಡಿದು ಮುಂದೆ ಭರದಿಂದೆ ನಡೆ |
ವರಸರಸುಗಳ ಕಂಠಮಾಲೆಗಳ ತೋರಮು |
ತ್ತೊರಸೊರಸು ಮಿಗೆ ಪರಿದಪರ ಸೂಸುದಂಬುಲದ ಚೆನ್ನೆಲದ ಮೇಲೊಕ್ಕಿರೆ ||
ಪೊರೆದ ಸಂಧ್ಯಾರುಣದ ಗಗನಮಂಡಲದೊಳಂ |
ಕುರಿಸಿದುಡುಗಣದಂತೆ ರಂಜಿಸಿತು ದೆಸೆದೆಸೆಗೆ |
ಪರಿಮಳದೆಲರ್ ಪರಿದುದಗರುಚಂದನ ಯಕ್ಷಕರ್ದಮದ ಮೊಗವಾಸದ || ೬ ||

ಪಡೆಯೊಳನ್ಯೋನ್ಯ ಸಂಘರ್ಷಣದೊಳೊಗುವ ಪೊಂ |
ದೊಡವುಗಳ ರೇಣುಗಳೊ ಮೈಗಳಂ ಸೋಂಕಿ ಪುದಿ |
ವಡೆದ ಕುಂಕುಮ ಸುಗಂಧಾನುಲೇಪನದ ಚೂರ್ಣಂಗಳೋ ಪದಘಾತಿಗೆ ||
ಪೊಡವಿಯಿಂದಿರದೇಳ್ವರುಣರಜಂಗಳೊ ತಿಳಿದು |
ನುಡಿಯಲರಿದೆಂಬಿನಂ ಮೇರುವಿನ ಬಣ್ಣವಿಂ |
ಪಿಡಿದ ದಿವಿಜರ ಭೋಗಮಜನ ಗುಣಮೊಚ್ಚರಿಸೆ ಕೆಂಧೂಳಿ ಮುಸಗಿತಾಗ || ೭ ||

ಮೊಗಗೈಗಳಿಂ ತಮ್ಮೊಡಲ ನೀರನಾನೆಗಳ್ |
ತೆಗೆದು ಚೆಲ್ಲಲ್ ಪೊನಲ್ವರಿದ ಮಡುಗಳ ಕೆಸರೊ |
ಳೊಗೆದ ನೃಪಮಂಡಲದ ಕನಕಾಭರಣ ಕಿರಣ ತರುಣಾತಪದೊಳಲರ್ದ ||
ಮಿಗೆ ಸುಳಿವ ಚಾಮರಂಗಳ ರಾಜಹಂಸಾವ |
ಳಿಗಳ ಸಂಚಾರಮಂ ಕೆಳೆಗೊಂಡ ಬೆಳುದಾವ |
ರೆಗಳ ಹಂತಿಗಳಂತೆ ಪಡೆಯೊಳೆಸೆದುವು ತಳ್ತಿಡಿದ ಸತ್ತಿಗೆಯ ಸಾಲ್ಗಳು || ೮ ||

ಮುಂಕೊಂಬ ಮಂದಿ ಕುದುರೆಗೆ ಧರಾಮಂಡಲಂ |
ಸಂಕುಲದ ವಾದ್ಯಧ್ವನಿಗೆ ದಿಶಾಮಂಡಲಂ |
ಸಂಖ್ಯೆಯಿಲ್ಲದೆ ಸಿಂಧ ಸೀಗುರಿ ಪತಾಕೆಗೆ ನಭೋಮಂಡಲಂ ಬಿರಿದ ||
ಬಿಂಕದಿಂದಿರಿವ ಕಲಿತನಕೆ ರಣಮಂಡಲಂ |
ಸಂಕೋಚಮೆನೆ ಬಂದು ಪಿಡಿದು ಪಾರ್ಥನ ತುರಗ |
ಮಂ ಕಟ್ಟಿ ಬಳಸಿ ಪದ್ಮವ್ಯೂಹಮಾಗಿ ನಿಂದಾರ್ದುದಾ ಸೇನೆ ನಲಿದು || ೯ ||

ಸುತ್ತ ಪದ್ಮವ್ಯೂಹಮಂ ರಚಿಸಿ ನಡುವೆ ನರ ।
ನುತ್ತಮತುರಂಗಮಂ ಕಟ್ಟಿ ಕಾಳಗಕೆ ಭಟ ।
ರೊತ್ತಾಗಿ ನಿಂದರರಿವೀರರಂ ಬರಸೇಳೆನುತ್ತರಸನಾಜ್ಞೆಯಿಂದೆ ॥
ಇತ್ತ ಪಾರ್ಥಂಗೆ ಚರರೈತಂದು ನುಡಿದರೀ ।
ವೃತ್ತಾಂತಮಂ ಬಳಿಕ ಪ್ರದ್ಯುಮ್ನನಂ ಕರೆದು ।
ಮತ್ತೆ ಬಂದುದು ವಿಘ್ನಮಿದಕಿನ್ನುಪಾಯಮೇನೆಂದೊಡವನಿಂತೆಂದನು ॥ ೧೮ ॥

ನಿನ್ನಂ ಕಳುಹುವಂದು ಹಯದ ಮೇಲಾರೈಕೆ ।
ಗೆನ್ನನಟ್ಟಿದನಲಾ ಪಿತನಾತನಾಜ್ಞೆಯಂ ।
ಮನ್ನಿಸುವ ಕಾಲಮಲ್ಲವೆ ತನಗೆ ನೀನಿದಕ್ಕೆಣಿಕೆಗೊಳಬಹುವೆ ಬರಿದೆ ॥
ತನ್ನ ಭುಜಬಲದಿಂದೆ ಬಿಡಿಸಿ ತಂದಪೆನಶ್ವ।
ಮನ್ನೋಡು ಸಾಕೆನುತ ಪಾರ್ಥನಂ ಬೀಳ್ಕೊಂಡು ।
ಪನ್ನಗಾರಿಧ್ವಜನ ತನಯನೈದಿದನಹಿತಮೋಹರಕೆ ಸೇನೆಸಹಿತ ॥ ೧೧ ॥

ಲಟಕಟಿಸುತಾಗ ಸಾತ್ಯಕಿ ಸಾಂಬ ಕೃತವರ್ಮ ।
ಶಠ ನಿಶಠ ರಸಿರುದ್ಧ ಗದ ಮುಖ್ಯರಾದ ಪಟು !
ಭಟರಖಿಳ ಯಾದವ ಚತುರ್ಬಲಂ ಜೋಡಿಸಿತು ಸಮರಸನ್ನಾಹದಿಂದೆ ॥
ದಿಟಮಿಂದಜಾಂಡಘಟಮೊಡೆಯದಿರದೆಂಬಿನಂ ।
ಪಟಹ ಡಿಂಡಿಮ ಡಾಡೆ ಭೇರಿ ನಿಸ್ಸಾಳ ತಂ ।
ಬಟ ಮುರಜ ಡಕ್ಕೆ ಡಮರುಗ ಕೊಂಬು ಕಹಳೆಗಳ ಬಹುಳರವಮುಳ್ಳಿರಿದುದು ॥

ಮೊಗಸಿತರಿಬಲಪನನುಸಾಲ್ವಕನ ಸೇನೆಯೊ ।
ಮ್ಮೊಗದೊಳೊರೆಯುಗಿದ ಫಣಿಕುಲದಂತೆ ರಣದವಕ ।
ಮೊಗದೊಡಗಿತಂಬುಧಿಯ ತೆರೆಯಂತೆ ಯೌವನಾಶ್ವನ ಸೈನ್ಯಮೊಂದೆಸೆಯೊಳು ॥
ಯುಗದಂತ್ಯದಭ್ರದಂತೆದ್ದು ದುರವಣಿಸಿ ಸಂ ।
ಯುಗಕೆ ನೀಲಧ್ವಜನ ಸೈನಿಕಂ ಬಳಿಕ ಕರ ।
ಯುಗಳಂ ಮುಗಿದು ಕಿರೀಟಿಗೆ ವಿನಯದಿಂದ ಬಿನ್ನೈಸಿದಂ ಕರ್ಣಸೂನು ॥ ೧೩ ॥

ತಾತ ಚಿತ್ತೈಸು ಗೋಷ್ಪದಜಲಕೆ ಹರಿಗೋಲ ।
ದೇತಕೆ ವೃಥಾ ಕುದುರೆಮಂಡಿಯಂ ನೋಯಿಸದಿ ।
ರೀತಗಳನೆಲ್ಲರಂ ತೆಗೆಸೆನಗೆ ಸೆಲವಿಂದಿನಾಹವಂ ಪರಬಲವನು ॥
ಘಾತಿಸಿ ತುರಂಗಮಂ ತಾರದೊಡೆ ಬಳಿಕ ರವಿ ।
ಜಾತನ ಕುಮಾರಕನೆ ನೋಡು ಸಾಕೆನುತ ವೃಷ ।
ಕೇತು ಪಾರ್ಥನ ಬೆಸಂಬಡೆದು ರಥವೇರಿದಂ ಮೀರಿದ ಪರಾಕ್ರಮದೊಳು ॥೧೪॥

ತಾರಕಾಸುರನ ಪೆರ್ಬಡೆಗೆ ಮೈದೋರುವ ಕು ।
ಮಾರನಂ ತಾನಭ್ರಮಾರ್ಗದೊಳ್ ಸುಳಿವ ಮುಂ ।
ಗಾರಮಿಂಚಂ ತನ್ನ ಹೊಂದೇರ್ಗಿರಿಗೆರಗುವಶನಿಯುಂ ತನ್ನ ಘಾತಿ ॥
ಪೇರಡವಿಗೈದುವ ದವಾಗ್ನಿಯಂ ತನ್ನ ಪ್ರ ।
ಚಾರಂ ನೆಗಳ್ದ ನಡುವಗಲ ರವಿಯಂ ತನ್ನ ।
ವೀರಪ್ರತಾಪಂ ತಿರಸ್ಕರಿಸೆ ವೃಷಕೇತು ರಿಪುಸೈನ್ಯಮಂ ಪೊಕ್ಕನು ॥ ೧೫ ॥

ದೂರದೊಳ್ ಕಂಡಂ ಸುಧನ್ವನಾತನ ಬರವ ।
ನಾರಿವಂ ಪಾರ್ಥನಾದೊಡೆ ಕಪಿಧ್ವಜಮಿಹುದು ।
ದಾರವೃಷಭಾಂಕಿತದ ಕೇತುದಂಡದ ಸುಭಟನಾವನೋ ಪಾಂಡವರೊಳು ॥
ವೀರನಹನೆನುತ ಬಂದಿದಿರಾಗಿ ನಿಂದು ಪರಿ ।
ವಾರಮಂ ತೆಗೆಸಿ ಬಿಲ್ದಿರುವನೊದರಿಸುತೆ ಕೈ ।
ವಾರಿಸುತೆ ನಸುನಗುತೆ ಬಾಣಮಂ ತೂಗುತಿನಸುತಜನಂ ಬೆಸಗೊಂಡನು ॥ ೧೬ ॥

ಎಲವೊ ನೀನಾರ್ ನಿನ್ನ ಪೆಸರದೇನಾವರ್ಷಿ ।
ಕುಲದವಂ ನಿನ್ನ ಪಿತನಾವಾತನೆಂಬುದಂ ।
ತಿಳಿಪೆನಗೆ ತಾನೀಗ ವೀರಹಂಸಧ್ವಜನೃಪನ ಕುಮಾರಂ ತನ್ನನು ॥
ಇಳೆಯೊಳ್ ಸುಧನ್ವನೆಂಬರ್ ಮಧುಚ್ಛಂದಮುನಿ ।
ತಿಲಕನಿಂದಾಯ್ತೆಮ್ಮ ವಂಶಮೆನೆ ಕರ್ಣಜಂ ।
ಬಳಿಕ ನಸುನಗೆಯೊಳೆಡಗೈಯ್ಯ ಕೋದಂಡಮಂ ತಿರುಗಿಸುತ್ತಿಂತೆಂದನು ॥ ೧೭ ॥

ಗೂಢಮಾಗಿರ್ದಲರ ಪರಿಮಳಂ ಪ್ರಕಟಿಸದೆ ।
ರೂಢಿಸಿದ ವಂಶವಿಸ್ತಾರಮಂ ಪೌರುಷದ ।
ಮೋಡಿಯಿಂದರಿಯಬಾರದೆ ಸಮರಸಾಧನಮಿದರೊಳಹುದೆ ನಿನಗಾದೊಡೆ ।
ಮೂಢ ಕೇಳ್ ಕಶ್ಯಪನ ಕುಲವೆಮ್ಮದೆಂಬರಾ ।
ರೂಢನಾಗಿಹ ದಿನಮಣಿಯ ತನಯನಾಹವ ।
ಪ್ರೌಢಕರ್ಣನ ಸುತಂ ಪೆಸರೆನಗೆ ವೃಷಕೇತುವೆಂದೊಡವನಿಂತೆಂದನು ॥ ೧೮ ॥

ಕರ್ಣಸುತನಾದಡೊಳ್ಳಿತು ವೀರನಹುದು ನೀಂ ।
ನಿರ್ಣಯಿಸಬಲ್ಲೆ ರಣರಂಗಮಂ ಮೂಢರಾಂ ।
ವರ್ಣಕದ ಮಾತುಗಳನರಿಯೆವೆನುತೆಚ್ಚಂ ಸುಧನ್ವನೀತನ ಸರಿಸಕೆ ॥
ಸ್ವರ್ಣಪುಂಖದ ಕಣೆಗಳೈದಿದುವು ಮಿಂಚಿನ ಪೊ ।
ಗರ್ನಭೋಮಂಡಲವನಂಡಲೆಯಲಾಕ್ಷಣಂ ।
ದುರ್ನಿರೀಕ್ಷಣಮಾಗಲೆಡೆಯೊಳವನೆಲ್ಲವಂ ತರಿದಿವಂ ಕೋಲ್ಗರೆದನು ॥ ೧೯ ॥

ಬರಸಿಡಿಲ ಭರದಿಂದೆ ಮಿಂಚಿನ ಹೊಳಪಿನಿಂದೆ ।
ಬಿರುವೆಳೆಗಳೊತ್ತಿಂದೆ ಕರ್ಣಜಂ ಕಣೆಗಳಂ ।
ಕರೆಯುತಿರೆ ನಡುವೆ ಖಂಡಿಸಿದಂ ಸುಧನ್ವನಾತನ ಸರಳ್ಗಳನೆಡೆಯೊಳು ॥
ತರಿದಂ ವೃಷಧ್ವಜಂ ಬಳಿಕವನ ಕೋಲ್ಗಳಂ ।
ಬರಿಕೈದನಾ ಮರಾಳಧ್ವಜನ ಸುತನಿಂತು । ॥೨೦॥
ತೆರಹುಗುಡದೊರ್ವರೊರ್ವರಮೇಲೆ ಮುಳಿದು ಜರೆದೆಚ್ಚಾಡಿಪರ್ ಧುರದೊಳು॥

ಕ್ಷೋಣಿಗೆ ಸುಧನ್ವ ನಾನಿರೆ ನೀಂ ಸುಧನ್ವನೇ ।
ಮಾಣಿಸುವೆನೀ ಪೆಸರನೀಕ್ಷಣಮೊಳೆಂದು ಪೊಸ ।
ಸಾಣೆಯಲಗಿನ ಸರಳ್ಗಳನೆಚ್ಚು ಕರ್ಣಜಂ ಪೋರ್ಗಳನವನ ಮೈಯೊಳು ॥
ಕಾಣಿಸೆ ಕೆರಳ್ದಿಲವೊ ಮೇದಿನಿಗೆ ರಿಪುಪಂಚ ।
ಬಾಣ ವೃಷಕೇತು ತಾನಿರಲಾಗಿ ವೃಷಕೇತು ।
ಮೇಣಂತೆ ಹೇಳೆನುತಿವಂ ಕಣೆಗರೆದನವನ ತನುವನುಚ್ಚಳಿಸುವಂತೆ ॥ ೨೧ ॥

ಧುಗಿಧುಗಿಸೆ ಕೋಪಾಗ್ನಿ ಮೂಡಿಗೆಯ ಕೋಲ್ಗಳಂ ।
ತೆಗೆತೆಗೆದು ಕರ್ಣತನಯಂ ಸುಧನ್ವನ ರಥವ ।
ಬಗೆಬಗೆಯೊಳಮರ್ದಿಸೆವ ಛತ್ರ ಚಾಮರ ಸಿಂದ ಸೀಗುರಿ ಪತಾಕೆಗಳನು ॥
ಮೊಗವೊಗಿಸಿ ಮುಂಬರಿವ ಕುದುರೆ ಸಾರಥಿಗಳಂ ।
ಝುಗಝುಗಿಪ ಕವಚಮಂ ತನ್ನ ಕಣೆಯಂ ನಡುವೆ ।
ತೆಗೆತೆಗೆವ ಕೋಲ್ಗಳಂ ತರಿದವನ ಬಿಲ್ಲನಿಕ್ಕಡಿಗೈದು ಬೊಬ್ಬಿರಿದನು ॥ ೨೨ ॥

ತಂದರಾಗಳೆ ಸುಧನ್ವಂಗೆ ಮಣಿಮಯದ ಮ ।
ತ್ತೊಂದು ರಥಮಂ ಬಳಿಕ ಬಿಲ್ವಿಡಿದು ಜೇಗೈದು ।
ನಿಂದು ನಿಡುಗಣೆಗಳಂ ತೆಗೆದೆಚ್ಚು ಕರ್ಣಜನ ಕೈಮೆಗಿಂಮಿಗಿಲಾಗಲು ॥
ಸ್ಯಂದನ ತುರಂಗ ಸಾರಥಿಗಳಂ ಕವಚಮಂ ।
ಸಿಂಧ ಸೀಗುರಿ ಛತ್ರಚಾಮರ ಪತಾಕೆಗಳ ।
ನಂದು ಕತ್ತರಿಸಿ ವೃಷಕೇತುವಿನ ಕರವ ಕೋದಂಡಮಂ ಖಂಡಿಸಿದನು ॥ ೨೩ ॥

ವಿರಥನಾದೊಡೆ ಕರ್ಣಸೂನು ಕೈಗೆಡದೆ ಸಂ ।
ಗರದೊಳಸಿ ಮುದ್ಗರ ಮುಸುಂಡಿ ತೋಮರ ಖಡ ।
ಪರಶು ಗದೆ ಚಕ್ರ ಡೊಂಕಣಿ ಕುಂತ ಶೂಲ ಪಟ್ಟಸ ಭಿಂಡಿವಾಳ ಶಕ್ತಿ ॥
ಸುರಗಿ ಮೊದಲಾಗಿರ್ದ ಕೈದುಗಳ ಪರಿಪಿಡಿಯೊ ।
ಳುರವಣಿಸಿ ಪೊಯ್ದು ಸುದನ್ವನಂ ಮತ್ತವನ ।
ಪೊರೆಯ ಪರಿವಾರಮಂ ನಾನಾಪ್ರಹಾರದಿಂದೈದೆ ಘಾತಿಸುತಿರ್ದನು ॥೨೪॥

ಇತ್ತಲಿಂತಿರಲತ್ತಲವನ ಸಾರಥಿ ಬೇಗ ।
ಮತ್ತೊಂದು ರಥಮಂ ತರಲ್ಕದನಡರ್ದು ಮಸೆ ।
ವೆತ್ತ ಕೂರ್ಗಣೆಗಳಂ ಕರ್ಣಜಂ ತೆಗದೆಚ್ಚೊಡಾ ಸುಧನ್ವನ ಮೆಯ್ಯೊಳು ॥
ತೆತ್ತಿಸಿದುವಂಬೊಡಲೊಳಿಡಿದ ತನಿವೀರರಸ ।
ಮೊತ್ತರಿಸಿ ಮೇಲುಕ್ಕುವಂದದಿಂ ಬಸಿವ ಬಿಸಿ ।
ನೆತ್ತರೆಸೆದಿರೆ ಕೆರಳ್ದವನೆಚ್ಚೊಡಾ ಕೋಲ್ಗಳಂ ತರಿಯುತಿವನೆಚ್ಚನು ॥೨೫॥

ನಭಕುಪ್ಪರಿಸಿ ನೆಲಕೆ ಪಾಯ್ದಡಬಲಕೆ ಮುರಿದು ।
ರಭಸದಿಂದಾದರ್ದೂರ್ವರೊರ್ವರಂ ವಿಾದರ್ದದಗಿ ।
ವಿಭವದಿಂದಖಿಳ ಶಸ್ತ್ರಾಸ್ತ್ರದಿಂ ಸಮ ವಿಷಮ ಸೋಲು ಗೆಲುವುಗಳಿಲ್ಲದೆ ॥
ತ್ರಿಭುವನಕೆ ರಣರಂಗದೊಳ್ ಸುಭಟ ನರ್ತನವ ।
ನಭಿನಯಿಸುವಂತೆ ಲಾಘವ ದೃಷ್ಟಿ ಮುಷ್ಟಿಗಳೊ ।
ಳುಭಯವೀರರ್ ಖತಿಯೊಳೆಚ್ಚಾಡಿದರಾ ಕರ್ಣನಂದನ ಸುಧನ್ವರಂದು ॥೨೬॥

ಒತ್ತುವರಿಸುವರೆಚ್ಚ ಕಣೆಗಳಂ ಕಣೆಗಳಿಂ ।
ಕತ್ತರಿಸಿ ಮೆತ್ತುವರೊಡಲೊಳಂಬನಂಬನುರೆ ।
ಕಿತ್ತು ಬಿಸುಡುವರಸ್ತ್ರಗ್ಳಾರಿಯುಂ ವಾರಿಯುಂ ತೊಳೆದೊಡನೆ ಕವಳಗೊಂಡು ॥
ಮತ್ತೆ ಕೈಗೆಡದೆಚ್ಚು ಬೊಬ್ಬಿರಿವರೀತೆರದೊ ।
ಳಿತ್ತಂಡದಗ್ಗಳಿಕೆ ಸಮಮಾಗೆ ಖತಿಯೊಳೊಂ ।
ಬತ್ತುನಾರಾಚದಿಂದಾ ಸುಧನ್ವಂ ಕರ್ಣತಯನಂ ಘಾತಿಸಿದನು ॥೨೭॥

ರಾಯ ಕೇಳಾಗ ಪೂರಾಯ ಗಾಯದೊಳಸ್ರ ।
ತೋಯದಿಂದವಯವಂ ತೋಯಲಳವಳಿದು ರಾ ।
ಧೇಯಜಂ ಬಹಳಬಾಧೇಯನಾಗಲ್ಕವನ ಸಾರಥಿ ರಥವ ತಿರುಗಿಸೆ ।
ಜೇಯನೇರಿಸಿ ಬಿಲ್ಗಜೇಯ ಹರಿಸೂನು ಸಹ ।
ಸಾಯತಿಕೆಯಿಂದೆ ನಿಜಸಾಯಕವನುಗಿಯುತಡ ।
ಹಾಯಿದಂ ಕರೆಕೊಳ್ ಸಹಾಯಿಗಳನೆನುತ ಕಡುಗಲಿ ಸುಧನ್ವನ ಸರಿಸಕೆ ॥೨೮॥

ಅರಿದನಚ್ಯುತನಸುತನೆಂಬುದಂ ಟೆಕ್ಕೆಯದ ।
ಕುರುಪಿಂದೆ ನುಡಿದನವನಿಲ್ಲಿ ನಿನಗಬಲೆಯರ ।
ಮರೆಯಿಲ್ಲ ನಿನ್ನಿನುಗೆಗಳುಕ.ವರದಾರೆನುತ ಕಲಿಸುಧನ್ವಂ ಕಣೆಗಳ ॥
ಬಿರುವಳೆಗರೆಯಲೆಡೆಯೊಳರಿದೆಲವೊ ಸಂಗರದೊ ।
ಳುರುವ ಜಯವಧು ತನ್ನ ಭುಜದೊಳಿಹಳೆನುತೆ ಕೆಂ ।
ಗರಿಯ ಬಾಣಂಗಳಂ ಮುಸುಕಿದಂ ಪ್ರದ್ಯುಮ್ನನವನ ರಥವೆಣ್ದೆಸೆಯೊಳು ॥೨೯॥

ಅಸಮಸಾಯಕನೆಂದು ಬಣ್ಣಿಪರ್ ನಿನ್ನನಿಂ ।
ದಸಮಸಾಯಕ ನಾನೊ ನೀನೊ ನೋಡೆನುತ ಪೊಸ ।
ಮಸೆಯ ವಿಶಿಖಂಗಳಿಂ ಸುರಿದಂ ಸುಧನ್ವನಾತನ ಕಣೆಗಳಂ ಖಂಡಿಸಿ ॥
ವಸುಮತಿಗೆ ವೀರ ನೀನಸಮಸಾಯಕನಾದೊ ।
ಡುಸಿರೆನಗೆ ಸಮಸಾಯಕರದಾರ್ ತ್ರಿಲೋಕದೊಳ್ ।
ಪುಸಿಯಬೇಡೆನುತ ಕೂರಂಬುಗಳನಂಬರಕೆ ತುಂಬಿದಂ ತಂಬವಾರಿ ॥೩೦॥

ಬರಿಯ ಪೂಗೋಲಿಸುಗೆಯಿಲ್ಲದಾಹವದೊಳಂ ।
ಕಿರುದು ಶರಸಂಧಾನಮುಂಟಲಾ ನಿನಗೆಂದು ।
ಜರೆದೆಂಟು ಬಾಣದಿಂದೆಚ್ಚಂ ಸುಧನ್ವನಾತನ ಕೋಲ್ಗಳಂ ಸೈರಿಸಿ ॥
ಬಿರುಸರಳ ಸಾರದಿಂದವನ ಸರ್ವಾಂಗಮಂ ।
ತುರುಗಿದಂ ಕವಚ ಸೀಸಕ ಬಾಹುರಕ್ಷೆಗಳ್ ।
ಬಿರಿವಿನಂ ಕೆನ್ನೀರ್ಗಳೊರೆವಿನಂ ನೊಂದು ಮೈಮರೆವಿನಂ ಪ್ರದ್ಯುಮ್ನನು ॥೩೧॥

ಕೃಷ್ಣಸುತನೆಂದಿನ್ನೆಗಂ ಸೈರಿಸಿದೊಡೆ ನೀ ।
ನುಷ್ಣಮುಳ್ಳವನಾದೆ ತನ್ನ ಬಾಣಾವಳಿಯ ।
ತೃಷ್ಣೆಗರುಣಾಂಬುವಂ ನಿನ್ನೊಡಲೊಳೂಡಿಸದೆ ಬಿಡುವೆನೇ ಮೇಣಸುವನು ॥
ಮುಷ್ಣಮಂ ಮಾಡಿಸದೆ ಮಾಣ್ಬೆನೆ ಸಾಕಿನ್ನು ।
ಜಿಷ್ಣುವಂ ಕರೆಸು ತೊಲಗೆನುತೊಂದುಸರಳಿಂದ ।
ವೃಷ್ಣಿಕುಲತಿಲಕನ ಕುಮಾರಕನ ಧನುವನೇಳ್ತುಂಡಾಗಿ ಖಂಡಿಸಿದನು ॥೩೨॥

ಬಿಲ್ಮುರಿಯೆ ಕಾರ್ಷ್ಣಿ ಕಡುಗೋಪದಿಂದಾಕ್ಷಣಂ ।
ಪಲ್ಮೊರೆಯುತಸಿಫಲಗವಿಡಿದವನ ಮೇಲೆ ನಡೆ ।
ಯಲ್ಮುಂದಕಡಹಾಯ್ದನರಿಯಲಾ ರಿಪುರೌದ್ರಕರ್ಮ ಕೃತವರ್ಮಕನನು ॥
ಬಲ್ಮೆಯುಳ್ಳವನಹೆ ವೃಷಧ್ವಜ ಪ್ರದ್ಯುಮ್ನ ।
ರೊಲ್ಮಹಾವೀರರಿಲ್ಲವರೊಳ್ ಪೊಣರ್ದ ನೀಂ ।
ನಿಲ್ಮದೀಯಾಸ್ತ್ರವಿಸ್ತಾರಮಂ ನೋಡೆನುತ ತೆಗೆದೆಚ್ಚು ಬೊಬ್ಬಿರಿದನು ॥೩೩॥

ಲೇಸಾದುದಖಿಳ ಯಾದವರೊಳಗೆ ಕೃತವರ್ಮ ।
ನೇ ಸಮರ್ಥಂ ಕಾಣಬಹುದು ಕಾಳಗದೊಳೆನು ।
ತಾ ಸುಧನ್ವಂ ತೆಗೆದಿಸಲ್ಕವನ ಕಣೆಗಳಂ ಕಡಿದಿವಂ ಮುಗುಳೆಚ್ಚೊಡೆ ॥
ಆ ಸರಳ್ಗಳವನಂ ತರಿದು ಹತ್ತಂಬಿನಿಂ ।
ಗಾಸಿಮಾಡಿದೊಡಿವಂ ಪದಿನೈದು ಮಾರ್ಗಣದೊ ।
ಳೋಸರಿಸದವನ ಸರ್ವಾಂಗಮಂ ಕೀಲಿಸಿದನರುಣಜಲದೊರತೆ ಮಸಗೆ ॥೩೪॥

ಹಾರ್ದಿಕ್ಯನಿಸುಗೆಯಿಂದುರೆ ನೊಂದು ಕೋಪದಿಂ ।
ದಾರ್ದಾ ಸುಧನ್ವನಿಪ್ಪತ್ತುನಾಲ್ಕಂಬಿನಿಂ ।
ತೇರ್ದೆಗೆವ ಕುದುರೆಗಳ ಕಾಲ್ಗಳಂ ಗಾಲಿಗಳ ಕೀಲ್ಗಳಂ ಮೂಡಿಗೆಯನು ॥
ಪಿರ್ದಿಸುವ ಚಾಪಮಂ ಸಾರಥಿಯ ಕರಮಂ ಕ್ಷ ।
ಣಾರ್ಧದೊಳ್ ಕಡಿಯೆ ಕೃತವರ್ಮನಳವಳಿದು ಕೆಲ ।
ಸಾರ್ದೊಡಾ ಪದದೊಳನುಸಾಲ್ವಂದಿರಾದನತಿವೇಗದಿಂದಿವನ ರಥಕೆ ॥೩೫॥

ಸಾಲ್ವಾನುಜಂ ಕಣಾ ತಾನೆನ್ನೊಳಾಹವಕೆ ।
ಮೇಲ್ವಾಯ್ದೊಡನುಪಮ ಸುರೇಂದ್ರನ ಪರಾಕ್ರಮಕೆ ।
ಸೋಲ್ವೆನೇ ತನ್ನೊಳ್ ಪೊಣರ್ಚ ಸಾಯದೆ ಧರ್ಮರಾಜನವರಂ ಕಾಣ್ಬುದು ॥
ತೇಲ್ವುದು ರಣಾಗ್ರದಿಂದಲ್ಲದೊಡುಳುಹೆನೆನುತ ।
ಕೋಲ್ವಳೆಗರೆದನವಂ ಪ್ರಳಯಜೀಮೂತವಂ ।
ಪೋಲ್ವಿನಂ ಮುಸುಕಿತು ಸುಧನ್ವನ ವರೂಥಮಂ ಬಹುಲಶರಯೂಥಮಂದು ॥೩೬॥

ಬಲ್ಲೆನನುಸಾಲ್ವನೆಂಡಳವಿಯಂ ಬಿಟ್ಟೊಡಾಂ ।
ಬಿಲ್ಲಾಳೆ ಪೇಳ್ ಧರ್ಮರಾಜನವರಂ ಕಾಣ್ಬ ।
ನಲ್ಲ ಕಾಣಿಸುವೆನೀಗಳೆ ಧರ್ಮರಾಜನವರಂ ತರಹರಿಸು ನಿನ್ನನು ॥
ಎಲ್ಲಿ ತೋರಿಸು ವಜ್ರಿಗಸದಳದ ಬಲ್ಮೆಯಂ ।
ಕೊಲ್ಲಬೇಕಾದೊಡಿದ್ದಪೆನೆನುತ ಕೋಲ್ಗಳಂ ।
ಚೆಲ್ಲಿದಂ ಹಂಸಧ್ವಜನ ಸುತಂ ಕಾಶಿರಾಜನ ಸುತಂ ಗಾಸಿಯಾಗೆ ॥೩೭॥

ಫಡಫಡೆಲವೆಲವೊ ತೊಲತೊಲಗೆನುತೆ ರೋಷದಿಂ ।
ಪುಡಿಪುಡಿಸಿ ತೂರಿಡುವ ಕಾಯದಿಂದನುಸಾಲ್ವ ।
ನೊಡನೊಡನೆ ಪೊಳೆಪೊಳೆವ ಪೊಸಮಸೆಯ ನಿಡುನಿಡುಸರಳ್ಗಳಂ ತೆಗೆದಿಸುತಿರೆ ॥
ಎಡೆಯೆಡೆಯೊಳಡಿಗಡಿಗೆ ಹಂಸಧ್ವಜಾತ್ಮಜಂ ।
ಕಡಿಕಡಿದು ಮೀರಿದ ಪರಾಕ್ರಮದೊಳಸುರನಂ ।
ಬಿಡಬಿಡದೆ ಘಾತಿಸಿದನಿಪ್ಪತ್ತು ಬಾಣದಿಂ ಬಿಸಿಬಿಸಿಯ ನೆತ್ತರೊಸರೆ ॥೩೮॥

ಮತ್ತೆ ಕಿಡಿಯಿಡೆ ಕೋಪಮನುಸಾಲ್ವನಬ್ಧಿಯಂ ।
ತುತ್ತುಗೊಳ್ವರಿಗೆ ಸರಿಯಾದೊಂದು ಬಾಣಮಂ ।
ಕಿತ್ತು ಹೂಡಿದನಿದಂ ತರಹರಿಸಿಕೊಳ್ಳೆನುತ ತೆಗೆದೆಚ್ಚು ಬೊಬ್ಬಿರಿಯಲು ॥
ಕತ್ತರಿಸುವೆಡೆಗಣ್ಗಳಂ ಮೀರಿ ನಡುವೆದೆಯ ।
ನುತ್ತರಿಸಿ ಕೋಲತ್ತಲಡಗಿತವನಿಯೊಳಗ ।
ಪುತ್ತುವುಗುವಹಿಯಂತೆ ಬಳಿಕ ಮೈಮರೆದನಂ ಸುಧನ್ವನದನೇ ವೇಳ್ವೆನು ॥೩೯॥

ಎಲೆಲೆ ಕವಿಕವಿಯೆನುತವನ ಬಲಂ ಕಂಡು ಸಂ ।
ಕಲೆಗಡಿದ ಮುಗಿಲಂತಿವನ ಮೇಲೆ ಕೈದುಗಳ ।
ಮಳೆಗರೆಯುತಿಟ್ಟಣಿಸಿ ನೂಕಲಾಸಾಲ್ವನಂ ಕನಲ್ದು ಜಗದಳಿವಿದೆಂದು ॥
ಸುಳಿವ ಬಿರುಗಾಳಿಯಂ ಸೋಲಿಸುವ ನಿಡುಸರ ।
ಳ್ಗಳ ಗರಿಯ ಭರದನಿಲಘಾತದಿಂ ಬಯಲಾದು ।
ದಳವಿಯೆನಲಿಸುಗೆಯಂ ಕೈಕೊಂಡು ಸವರಿದಂ ಬಂದ ರಿಪುವೋಹರವನು ॥೪೦॥

ಕಂದೆರದು ಕಂಡಂ ಸುಧನ್ವಂ ಬಳಿಕ ಖಾತಿ ।
ಯಿಂದ ಕೋದಂಡಮಂ ಕೊಂಡೆಲವೊ ಕಲಿಯಾಗಿ ।
ನಿಂದಿದಂ ಸೈರಿಸಿದೆಯಾದೊಡಿನ್ನಿಸುವುದಿಲ್ಲಾವು ಹೋಗೆನುತೆ ಹೆದೆಗೆ ॥
ಒಂದು ಸರಳಂ ಪೂಡಿ ಕಪಿವರೆಗೆ ತೆಗೆದೊಚ್ಚೆ ।
ಡಂದು ಸಾಲ್ವಾನುಜನ ಪೇರುರವನುಚ್ಚಳಿಸೆ ।
ನೊಂದಿಳೆಗುರುಳ್ದನಾದುದು ಮೂರ್ಛೆಪೊಕ್ಕನುರವಣಿಸಿ ಪಾರ್ಥನ ಪಡೆಯನು ॥

ಪೂಣೆಹೊಕ್ಕವನಿಸುವ ಬಾಣಂಗಳರಿಭಟರ ।
ಗೋಣನರಿದುಚ್ಚಳಿಸೆ ಮಾಣದೆ ಗಗನಕೇಳ್ವ ।
ಶೋಣಿತದ ಧಾರೆಗಳ್ ಶೋಣಾಭ್ರದಂತಿರಲ್ ಪ್ರಾಣಿಗಳ ದೃಷ್ಟಿಗಳ್ಗೆ ॥
ಕಾಣಿಸಿದುವಾಲಿಸ್ಮೆ ಕ್ಷೋಣಿಪ ಸುಧನ್ವನ ।
ಕ್ಷೀಣವಿಕ್ರಮಶಿಖಿಯ ಚೂಣಿಯ ಮಹಾಜ್ವಾಲೆ ।
ಕೇಣಿಗೊಂಡರಿಬಲಶ್ರೇಣಿಯೆಂಬೊಂದಡವಿದಾಣಮಂ ಹೊಕ್ಕಂತಿರೆ ॥೪೨॥

ಸಂದಣಿಸಿ ದಂತಿಗಳ ಘಟೆಗಳೊತ್ತರಿಸಲ್ಕೆ ।
ಸಂದಣಿಸಿದಂ ಸರಳ ಸಾರದಿಂ ಕೆಡಹಿದಂ ।
ಕೊಂದನುರವಣಿಸಿ ಕಾಲಾಳ್ಗಳಂ ಮುಳಿದು ಬಳಿಕೊಂದನುಳಿಯದೆ ರಣದೊಳು ॥
ಬಂದ ವಾಜಿಗಳ ನಾನಳವಿಯೊಳ್ ಕಾಣೆನೆಂ ।
ಬಂದವಾಗಲ್ಕೆ ತಡೆಗಡಿದು ಮೆದೆಗೆಡಹಿದಂ ।
ಮುಂದಿಟ್ಟಣಿಸಿ ಬಿದ್ದುದಾಗ ರಥಿಕವ್ರಾತಮುಂ ದಿಟ್ಟನಿಸುಗೆಯಿಂದೆ ॥೪೩॥

ಕೆಡೆದೊಡಲ ಸೀಳಿಂದೆ ಕಡಿವಡೆದ ತೋಳಿಂದೆ ।
ತೊಡೆಮುಡದ ತುಂಡಿಂದೆ ನೆಣವಸೆಯ ಜೊಂಡಿಂದೆ ।
ಬಿಡುಮಿದುಳ ತುಂಡದಿಂ ತಂಡದಿಂ ರುಂಡದಿಂ ಮುಂಡದಿಂ ಖಂಡದಿಂದೆ ॥
ಅಡಗುಗಳ ತಿರುಳಿಂದೆ ನಿಡುನರದ ಕರುಳಿಂದೆ ।
ಕಡಲಿಡುವ ನೆತ್ತರಿಂದೆಡಪಿಡದೆ ಸತ್ತರಿಂ ।
ದಿಡಿದಿರ್ದುದಾ ರಣದಲೋರಣದ ಮಾರಣದ ಕಾರಣದ ಪೂರಣದೊಳು ॥೪೪॥

ಕಾಕ ಬಕ ಗೃಧ್ರ ಗೋಮಾಯು ಸಂತತಿಗಳಿಂ ।
ಡಾಕಿನಿ ಪಿಶಾಚ ವೇತಾಳ ಭೂತಂಗಳಿಂ ।
ಭೀಕರದೊಳಂಜಿಸಿದುವಾರ್ದು ರಿಂಗಣಗುಣಿವ ಕಲಿಗಳ ಕಪಾಲಂಗಳು ॥
ಲೋಕದನಖಿಳ ಪ್ರಾಣಿಗಳನುಂಡಜೀರ್ತಿಯಿಂ
ದೋಕರಿಸಿದನೊ ಕಾಲನೆಂಬಿನಂ ಕಣ್ಗೆಸೆದು ।
ದಾಕಳಂ ರೌಕುಳದ ಮಾಂಸ ಕರ್ದಮ ರುಧಿರ ನೆಣವಸೆ ಮಿದುಳ್ಗಳಿಂದೆ ॥೪೫॥

ನೋಡಿದಂ ಸಾತ್ಯಕಿ ಸುಧನ್ವನಾಟೋಪಮಂ ।
ಮಾಡಿದಂ ಬದ್ಧಭ್ರುಕುಟಿಯಿಂದೆ ಕೋಪಮಂ ।
ತೀಡಿದಂ ತಿರುವನೇರಿಸಿ ಮಿಡಿದು ಚಾಪಮಂ ತಾಗಿದನವನ ರಥವನು ॥
ಆಡಿದಂ ನಿಜನಾಮಧೇಯ ಪ್ರತಾಪಮಂ ।
ಪೂಡಿದಂ ತೆಗೆದಂಬನೆಚ್ಚಂ ಯಮೋಪಮಂ ।
ತೋಡಿದಂ ಮೂವತ್ತುಬಾಣದಿಂ ತಾಪಮಂಕುರಿಸುವಂತವನೊಡಲೊಳು ॥೪೬॥

ಗಾಯುವಡೆದೆಕ್ಕಲನ ತೆರದಿಂ ಕೆರಳ್ದು ಶೈ ।
ನೇಯನಂ ಮಗುಳೆ ಮೂವತ್ತೈದು ಕೋಲ್ಗಳಿಂ ।
ನೋಯಿಸಿದನಾ ಸುಧನ್ವಂ ಬಳಿಕ ಸಾತ್ಯಕಿ ಸಹಸ್ರಸಂಖ್ಯಾಕಮಾದ ।
ಸಾಯಕದೊಳಾತನ ವರೂಥ ಹಯ ಸಾರಥಿ ಯು ।
ಗಾಯತ ಧ್ವಜ ಛತ್ರ ಚಮರವಮಂ ತರಿದೊಡವ ।
ನೀ ಯಾದವನ ತೇರನುರೆ ಮುರಿಯಲಿರ್ವರುಂ ವಿರಥರಾದರ್ ಧುರದೊಳು ॥೪೭॥

ನಿಂದು ಕಾದಿದರೊಮ್ಮೆ ಕೈದುಕೈದುಗಳೊಳ್ಕೈ ।
ತಂದುಕಾದಿದರೊಮ್ಮೆ ಮತ್ತೆ ಪೊಸತೇರ್ಗಳಿಂ ।
ಬಂದು ಕಾದಿದರೊಮ್ಮೆ ಕೂಡೆ ತಮತಮಗೊದಗಿದೆಡಬಲದ ಪಡಿಬಲವನು ॥
ಕೊಂದು ಕಾದಿದರೊಮ್ಮೆ ಶರಶರದ ಹತಿಗಳಿಂ ।
ನೊಂದು ಕಾದಿದರೊಮ್ಮೆ ಚಳಚಳಿಕೆಯಿಂದ ಸಲೆ ।
ಸಂದು ಕಾದಿದರೊಮ್ಮೆ ಸಾತ್ಯಕಿಸುಧನ್ವರೋರೊರ್ವರ್ಗೆ ಸರಿಮಿಗಿಲೆನೆ ॥೪೮॥

ಬವರಮಿರ್ವರ್ಗೆ ಸರಿಯಾಗೆ ಕಡುಗೋಪದಿಂ ।
ದವಗಡಿಸಿದಂ ಸುಧನ್ವಂ ಬಳಿಕ ಸಾತ್ಯಕಿಯ ।
ಸವಗ ಸೀಸಕ ಬಾಣ ಬತ್ತಳಿಕೆ ಸಿಂಧ ಸೀಗುರಿ ಛತ್ರಚಾಮರವನು ॥
ಸವರಿ ಸಾರಥಿ ಹಯ ವರೂಥ ಯುಗಚಕ್ರಮಂ ।
ಕವಲಂಬುಗಳೊಳೆಚ್ಚು ಕತ್ತರಿಸಿ ಕರದ ಚಾ ।
ಪವನೈದು ಕಡಿಯಾಗಿ ಮಾಡಿ ಪೇರುರಕೆ ಮೊನೆಗಣೆಗಳಂ ಮೋಹಿಸಿದನು ॥೪೯॥

ಸತ್ಯಕಸುತಂಗೆ ಪರಿಭವವಾಗೆ ಭುಜಬಲದೊ ।
ಳತ್ಯಧಿಕಯುಳಿವನಾಶ್ವಾಸಿತಧ್ವಜಗದಾ ।
ದಿತ್ಯಭವಸೂನು ಶಠ ನಿಶಠ ಕೃತವರ್ಮ ಸಾಂಬಾನುಸಾಲ್ವಪ್ರಮುಖರು ॥
ಪ್ರತ್ಯೇಕವೀರರಿವರೆಲ್ಲರುಂ ಪಡೆಸಹಿತ ।
ಸತ್ವವಿಕ್ರಮ ಸುಧನ್ವನ ಸಮ್ಮುಖಕೆ ನಡೆವ ।
ಕೃತ್ಯಮಂ ಕಂಡರ್ಜುನಂ ಕೋಪದಿಂದ ಕಾಳಗಕೆ ತಾನನುವಾದನು ॥೫೦॥

ಮುಂಜೆರಗನಳವಡಿಸಿ ವೀರಪಳಿಯಂ ಬಿಗಿದು ।
ರಂಜಿಪ ತನುತ್ರ ಸೀಸಕವನಾಂತಮರಗಣ ।
ಕಂಜಳಿಯನೆತ್ತಿ ಪಳಪಿಗೆಯ ಹನುಮಂಗೆರಗಿ ಬಲವಂದು ಮಣಿರಥವನು ॥
ಮಂಜುಳಹಯಂಗಳಂ ಬೋಳೈಸಿ ಮಣಿದು ತೇ ।
ರಂ ಜಯನಿನಾದದಿಂದೇರಿದಂ ಸಮರಕೆ ಧ ।
ನಂಜಯಂ ಧ್ಯಾನಿಸುತ ಮನದೊಳಗೆ ದೇವಪುರನಿಲಯ ಲಕ್ಷ್ಮೀಪತಿಯನು ॥೫೧॥

ಹದಿಮೂರನೆಯ ಸಂಧಿ

ಸೂಚನೆ ॥ ಹಂಸಧ್ವಜನ ಸುತನ ಸಮರಮುಖದಾಗಿ ಬರೆ ।
ಕಂಸಾರಿ ಬಂದು ಸಾರಥಿಯಾಗಿ ನರನ ಶರ ।
ದಿಂ ಸುಧನ್ವನ ಶಿರವನರಿಸಿದಂ ಮೇಲೆ ಸುರಗಣಸ್ತೈದೆ ಕೊಂಡಾಡಲು ।

ಕೇಳೆಲೆ ನೃಪಾಲಕುಲಮೌಳಿ ಬಳಿಕರ್ಜುನಂ ।
ಕಾಳಗಕೆ ನಡೆವ ಭಟರಂ ನಿಲಿಸಿ ಮುಂದುವರಿ ।
ವಾಳಪಡೆಯುಂ ತೆಗೆಸಿ ಭರದಿಂದೆ ನೂಕಿದಂ ಕಲಿಸುಧನ್ವನ ಸರಿಸಕೆ ॥
ಗಾಳಿಯ ಜವಂ ಪೊಡೆವ ಸಿಡಿಲ ಗರ್ಜನೆ ರವಿಯ ।
ಮೇಳವುಂ ದಾವಾಗ್ನಿಯಾಟೋಪಮಂತಕನ ।
ಕೋಳಾಹಳಂ ಕೂಡಿಕೊಂಡೊಂದು ರೂಪಾದವೋಲ್ ಕಾಣಿಸುವ ರಥವನು ॥ ೧ ॥

ಕುದುರೆಗಳ ಖುರಪುಟಧ್ವನಿ ನಿಜವರೂಥ ಚ ।
ಕ್ರದ ರವಂ ದೇವದತ್ತದ ಘೋಷಮೆಸೆವ ಸಿಂ ।
ಧದ ತುದಿಯ ಕಪಿಯುಬ್ಬರಣೆ ಧನುರ್ಜ್ಯಾನಾದವೊಂದಾಗಿ ಭೀಕರದೊಳು ॥
ಪದಿನಾಲ್ಕು ಲೋಕಮಂ ಬೆದರಿಸಲ್ಕಿದು ನರನ ।
ಕವನದಾನವಮೆಂದು ತಿಳಿದಂಬುಜಾಸನಂ ॥
ಮೊದಲಾದ ನಿರ್ಜರರ್ ತಂತಮ್ಮ ವಾಹನವಿಮಾನದಿಂದೈತಂದರು ॥ ೨ ॥

ವಾನರಸಮುನ್ನತ ಧ್ವಜವರೂಥದೊಳ್ಳೈದು ।
ವಾ ನರ ಸಮುತ ಧರವನರಿದು ಕಾಳಗಕೆ ತಾ ॥
ನಾನರಸಮರ್ಥರೆಂದರ್ಜುನಂ ಬಹನೆಂದು ನಿಜಸಾರಥಿಗೆ ಸೂಚಿಸಿ ॥
ದಾನವರನಾನಿಮಿಷರೊಳ್ ನೀನೆ ಭಟನಹ ನಿ ।
ದಾನವನನೇಕಮುಖದಿಂ ಕೇಳ್ದು ಸಂಗ್ರಾಮ ।
ದಾನವನರಸಿ ಬಂದೆನೆಂದೆಚ್ಚನಾ ಸುಧನ್ವಂ ಪಾರ್ಥನಂ ಧುರದೊಳು ॥ ೩ ॥

ಕ್ರುದ್ಧನಾದಂ ಧನಂಜಯನಿದೇಕೆಮ್ಮೊಡನೆ ।
ಯುದ್ಧವನಪೇಕ್ಷಿಸುವೆ ಶಿವಶಿವಾ ನೀನಪ್ರ ।
ಬುದ್ಧನಲ್ಲವೆ ದೇವದೈತ್ಯಮಾನವರೊಳ್ ಮದೀಯ ವೈರದೊಳೆ ದಾಳ್ದ ॥
ಉದ್ಧತಪರಾಕ್ರಮಿಗಳೆಂಟೆ ಸಂಗರಕೆ ಸ ।
ನ್ನದ್ಧರಾದಿನಸುತ ದ್ರೋಣ ಭೀಷ್ಮಾದಿ ಪ್ರ ।
ಸಿದ್ಧಭಟರೇನಾದರರಿಯಲಾ ಮರುಳೆ ಹೋಗೆನುತೆಚ್ಚನಾ ಪಾರ್ಥನು ॥ ೪ ॥

ಸಾರಥಿಯ ಬಲ್ಪಿಂದೆ ಕೌರವಬಲದ ನಿಖಿಳ ।
ವೀರರಂ ಗೆಲ್ದಿಯಲ್ಲದೆ ನಿನ್ನನೀಧರೆಯೊ ।
ಳಾರರಿವರಕಟ ನೀಂ ಕೃಷ್ಣನಂ ಕರೆಸಿಕೊಂಡಳವಿಗುಡು ಬಳಿಕೆನ್ನೊಳು ॥
ಸಾರನ್ನೆಗಂ ಬರಿದೆ ಬಳಲಬೇಡೆಮ್ಮಲ್ಲಿ ।
ಹಾರೈಸದಿರ್ ಜಯವನೆನುತೆಚ್ಚೊಡರ್ಜುನನ ।
ತೇರಿರದೆ ತಿರ್ರನೆ ತಿಗುರಿಯಂತೆ ತಿರುಗಿತದನೇನೆಂಬೆನದ್ಭುತವನು ॥೫॥

ಪೂತುರೆ ಸುಧನ್ವ ಸತ್ವಾತಿಶಯದಿಂದೆ ವಿ ।
ಖ್ಯಾತನಹೆ ಮದ್ರಥವನೀ ತೆರದೊಳಿಸುವರಂ ।
ಪಾತಾಳ ಸುರನಿಲಯಭೂತಳದ ಪಟುಭಟವ್ರಾತದೊಳ್ ಕಾಣೆನಿನ್ನು ॥
ನೀ ತರಳನಕಟ ಬರಿದೇತಕಳಿದಪೆ ನಿನ್ನ ।
ತಾತನಂ ಬರಹೇಳು ಘಾತಿಸುವರಲ್ಲ ನಾ ।
ವಾ ತುರಂಗಮವ ಬಿಡು ಧಾತುಗೆಡಬೇಡೆನುತ್ತಾತನಂ ನರನೆಚ್ಚನು ॥ ೬ ॥

ಇನ್ನು ಹಯಮಂ ಬಿಡುವನಲ್ಲ ನಿನಗೆಮ್ಮ ತಾ ।
ತಂ ನಳಿನನಾಭನ ಸಹಾಯಮಿಲ್ಲದೆ ಬರಿದೆ ।
ತನ್ನನಳುಕಿಸಲಯೆ ಕಕ್ಕುಲಿತೆ ಬೇಡ ನಡೆ ಹಸ್ತಿನಾಪುರಕೆ ಮರಳಿ ॥
ನಿನ್ನುತತುರಂಗಮೇಧಾಧ್ವರಕೆ ದೀಕ್ಷೆಗೊಂ ।
ಬಂ ನರೇಂದ್ರಾಗ್ರಣಿ ಮರಾಳಧ್ವಜಂ ಬಳಿಕ ।
ನಿನ್ನ ವಿಕ್ರಮದಿಂದೆ ಜಯಿಸು ಭೂಮಂಡಲವನೆನುತವಂ ತೆಗೆದೆಚ್ಚನು ॥ ೭ ॥

ಈ ಚಾಪವಿಾ ಬಾಣವಿಾ ದಿವ್ಯರಥವಿಾ ವ ।
ನೇಚರಧ್ವಜವಿಾ ಮಹಾಶ್ವಂಗಳೀ ಸವ್ಯ ।
ಸಾಚಿತ್ವವಿಾ ದೇವದತ್ತಶಂಖಂ ತನಗಿದೇಕೆ ನಿನ್ನಂ ಜಯಿಸದೆ ॥
ಈ ಚತುರ್ದಶಜಗವನಣುವೆಂದರಿವೆನಕಟ ।
ಗೋಚರವೆ ನೀನೆನಗೆ ಫಡಯೆನುತೆ ತೆಗೆದು ನಾ ।
ರಾಚವೇಳ್ನೂರನೆಚ್ಚಂ ಸುಧನ್ವನಮೇಲೆ ಪಾರ್ಥನೆಣ್ದೆಸೆ ಕಂಪಿಸೆ ॥ ೮ ॥

ದಿವ್ಯಹಯ ರಥ ಚಾಪ ಶರ ಕೇತು ಕಂಬುಗಳ್ ।
ಸವ್ಯಸಾಚಿತ್ವಮಿವು ನಿನಗೊದಗಿದವು ರಣದೊ ।
ಳವ್ಯಯಂ ಸಾರಥ್ಯಮಂ ಮಾಡಲಿನ್ನು ಜಯವಹುದೆ ಹುಲುಸೂತನಿಂದೆ ॥
ಹವ್ಯವಾಹನಸಖಂ ತೊಲಗಿಸುವ ಬಹಳಮೇ ।
ಘ ವ್ಯೂಹಸಂಘಾತದೊಡ್ಡವಣೆ ಮುರಿವುದೆ ಕೃ ।
ತವ್ಯಜನವಾತದಿಂದೆಲೆ ಮರುಳೆ ಹೋಗೆನುತವಂ ಕಿರೀಟಿಯನೆಚ್ಚನು ॥ ೯ ॥

ಪಾಂಡವಂ ಬಳಿಕ ಬೇಸಗೆಯ ನಡುವಗಲ ಮಾ ।
ರ್ತಾತಂಡನಂತಿಹ ಕಲಿಸುಧನ್ವನಂ ಕಂಡು ಮಿಗೆ ।
ಖಾಂಡವದಹನಲಬ್ಧವಾಗಿ ಮೂಡಿಗೆಯೊಳಿರ್ದಾಗ್ನೇಯಮಾರ್ಗಣವನು ‖
ಗಾಂಡೀವಕಳವಡಿಸಿ ತೆಗೆವಿನಂ ಕರ್ಬೊಗೆಯ ।
ಜಾಂಡಮಂ ತೀವಿದುದು ಕಾದುವು ಕುಲಾದ್ರಿಗಳ್ ।
ಭಾಂಡಜಲದಂದದಿಂ ಕುದಿದುಕ್ಕಿದುದು ಕಡಲ್ ಪೇಳಲೇನದ್ಭುತವನು ‖ ೧೦ ‖

ಅವಗಂ ಪೀರ್ವೊಗೆದಾಸರ್ಗೊಂಡು ತೀರದ ಮ ।
ಹಾವಾರ್ಧಿಜಲವನೊಂದೇಸಾರಿ ಸುರಿಗೊಂಬ ।
ದಾವರದೊಳಿದ್ದ ವಡಬಾಗ್ನಿಯೋ ವಿಲಯರುದ್ರನ ಪಣೆಯ ಕಣ್ಗಿಚ್ಚಿದೋ ‖
ಭಾವಿಸುವೊಡರಿದೆಂಬೊಲಾದುದು ಧನಂಜಯನ ।
ಪಾವಕಾಸ್ತ್ರಂ ಬಳಿಕ ತೆಗೆದು ಬೊಬ್ಬಿರಿದು ಗಾಂ ।
ಡೀವದಿಂ ಪಾರಿಸಿದೊಡಾ ಸುಧನ್ವನ ಸರಿಸಕಡರಿತುರಿ ಕಡುಭರದೊಳು ‖ ೧೧ ‖

ತೆಕ್ಕೆವರೆದೇಳ್ವ ಕರ್ಬೊಗೆಯ ಹೊರಳಿಗಳ ದಶ ।
ದಿಕ್ಕುಗಳನವ್ವಳಿಪ ಕೇಸುರಿಯ ಚೂಣಿಗಳ ।
ಮಿಕ್ಕು ಸೂಸುವ ತೂರುಗಿಡಿಗಳಾ ಕೌರಿಡುವ ಪೋತ್ತುಗೆಗಳ ‖
ಕೊಕ್ಕರಿಸುತುಗುವ ತನಿಗೆಂಡದಿಂಡೆಗಳ ಸಲೆ ।
ಮುಕ್ಕುಳಿಸಿ ಮೊಗೆವ ಪೆರ್ಗಿಚ್ಚುಗಳ ವೆಂಕೆ ಮೇ ।
ಲಿಕ್ಕಿದುದು ಹಂಸಧ್ವಜನ ಸೇನೆ ಬೆಂದು ಬೇಗುದಿಗೊಂಡುದಾ ಕ್ಷಣದೊಳು ‖೧೨‖

ಕಾದವು ಭಟರ ಕೈದುಗಳ್ ಪಿಡಿಯಲರಿದೆನ ।
ಲ್ಕಾದವು ಶರಾಗ್ನಿಗಾಹುತಿ ಗಜಹಯಾದಿಗಳ್ ।
ಕಾದವು ಧನಂಜಯನ ಮುಂದೆಮ್ಮ ಬಲಗಳೆಂದಾ ಸುಧನ್ವಂ ಕೆರಳ್ದು ‖
ಕೋದಂಡಕತಿವೇಗದೊಳ್ ವಾರುಣಾಸ್ತ್ರಮಂ ।
ಕೋದಂಡಲೆವ ಶಿಖಿಜ್ವಾಲೆಯಂ ನಿಲಿಸಲದ ।
ಕೋದಂಡವೆನ್ನೊಳೆನುತಾರ್ದು ತೆಗೆದೆಚ್ಚನುರಿ ನಂದಿ ಜಲಮಯವಾಗಲು ‖೧೩‖

ನಾದವು ಸಮಸ್ತಬಲಮಖಿಳವಾದ್ಯಗಳ ನಿ ।
ನಾದವುಡುಗಿತು ನನೆದು ಗಜವಾಜಿ ನಿಕರಮೇ ।
ನಾದವುದಕದೊಳೆಂಬುದಂ ಕಾಣೆನಾ ಸುಧನ್ವನ ವಾರುಣಾಸ್ತ್ರದಿಂದೆ ‖
ತೋದಳವಳಿದರೆಲ್ಲ ರಂಬುಧಾರೆಗಳದೆಂ ।
ತೋ ದಳವನೊರಸಿದವರ್ಜುನಂ ಬೆರಗುವೆ ।
ತ್ತೋದಲಳವಡದ ವಟುವಂತಿರ್ದನಾಹವದೊಳರಸ ಕೇಳ್ ಕೌತುಕವನು ‖ ೧೪ ‖

ಬಳಿಕ ವಾಯುವ್ಯಾಸ್ತ್ರದಿಂದೆ ಶೋಷಿಸಿದನಾ ।
ಜಲವನರ್ಜುನ ನದ್ರಿಬಾಣಮಂ ಪೂಡಿದಂ।
ಕಲಿ ಸುಧನ್ವಂ ತೊಟ್ಟನೈಂದ್ರಶರಮಂ ಫಲುಗುಣಂ ತಿಮಿರನಾಯಕವನು ॥
ಸೆಳೆದಂ ಮರಾಳಧ್ವಜನ ಸುತಂ ತೆಗೆದನು ।
ಜ್ವಾಲರಷಿಕಳಂಬಮಂ ಭೀಭತ್ಸು ತುಡುಕಿದಂ ।
ಮುಳಿದವಂ ಗರಳವಿಶಿಖವನುಗಿದನಾನರಂ ಗಾರುಡಶಿಲೀಮುಖವನು ॥ ೧೫ ॥

ಈ ತೆರದೊಳಖಿಳ ದಿವ್ಯಾಸ್ತ್ರಂಗಳಿಸುಗೆಗಳ ।
ಚಾತುರ್ಯದಿಂದೊರ್ವರೊರ್ವರಂ ಗೆಲ್ವ ಸ ।
ತ್ವಾತಿಶಯದಿಂದೆ ಕಾದಿದರಾ ಸುಧನ್ವಾರ್ಜುನರ್ ಬಳಿಕ ರೋಷದಿಂದೆ ॥
ಭೀತಿಗೊಳೆ ಮೂಜಗಂ ತೆಗೆದು ಬ್ರಹ್ಮಾಸ್ತ್ರಮಂ ।
ಶ್ವೇತವಾಹನನಾರ್ದಿಸಲ್ಕ ಹಂಸಧ್ವಜನ ।
ಜಾತಂ ಪ್ರತೀಕಾರಕಾ ಪಿತಾಮಹಶರವನೆಚ್ಚೊಡನೆ ಬೊಬ್ಬಿರಿದನು ॥ ೧೬ ॥

ಆ ವರ ಬ್ರಹ್ಮಾಸ್ತ್ರಂಗಳೆರಡುಂ ಪೊಣರ್ದಡಗ ।
ಲಾ ವಿಜಯನೆಣಿಕೆಗೊಂಡೀತನಂ ಗೆಲ್ವ ಬಗೆ ।
ಯಾವುದೆಂದುಗಿದು ಹೂಡಿದನಕ್ಷಯಾಸ್ತ್ರಮಂ ಪನ್ನ ರಥಕವನ ಶೇರ್ಗೆ ॥
ತೀವಿದುವು ಬಾಣಂಗಳಾಕಾಶಮಂ ಕಾಣೆ ।
ನೀವಸುಧೆಯೆತ್ತಣದು ಶಶಿರವಿ ಕುಲಾದ್ರಿ ತಾ ।
ರಾವಳಿಗಳೇನಾದು ವೆಣ್ದೆಸೆಯ ನರಿವರಾರೆಂಬಿನಂ ಕೈಗೈದನು ॥ ೧೭ ॥

ಇಚ್ಚಾರಿಗೊಂಡು ನರನೆಚ್ಚ ಕೆಂಗರಿಗೋಲ ।
ಬಚ್ಚಳೆಯ ಪೊಸಮಸೆಯ ನಿಚ್ಚಳದ ನಿಡುಸರಳ್ ।
ಪೆಚ್ಚಿದವು ನಿಮಿಷದೊಳ್ ಮುಚ್ಚಿದವು ಗಗನಮಂ ಕೊಚ್ಚಿದವು ಪರಬಲವನು ॥
ಬಿಚ್ಚಿದವು ಕವಚಮಂ ಕಚ್ಚಿದವು ಖಂಡಮಂ ।
ಚುಚ್ಚಿದವು ಕೂಡೆ ಘಟ್ಟುಚ್ಚಿದವು ಸೀಳಾಗಿ ।
ಪಚ್ಚಿದವು ಮೆಯ್ಯೊಳಗೆ ಹೆಚ್ಚಿದವು ಹೊಗರಗಲು ಮುಚ್ಚಿದವು ನೆಣವಸೆಯನು ॥

ಗೌರಿಯರಸನ ಕೂಡೆ ಕಾದಿದ ಪರಾಕ್ರಮದ ।
ಸೌರಂಭಮಿಂತುಟೆ ನಿವಾತಕವಚರನಿರಿದ ।
ಗೌರವಮಿದೀಗಲೇ ಭೀಷ್ಮ ಕರ್ಣ ದ್ರೋಣ ಮಾದ್ರಪತಿ ಮೊದಲಾಗಿತ ॥
ಕೌರವಬಲದೊಳಖಿಳ ವೀರಭಟರಂ ಗೆಲ್ದ ।
ಪೌರುಷಮಿನಿತೆ ಸಾಕು ಬರಿದೆ ಬಳಲಿಸಬೇಡ ।
ಶೌರಿಯಂ ಕರೆಸೆನುತೆ ಕಣೆಗಳಂ ಕಡಿದೆಚ್ಚನಾ ಸುಧನ್ವಂ ನರನನು ॥ ೧೯ ॥

ಕೇಳವನಿಪಾಲಕ ಸುಧನ್ವನಿಸುವಿಸುಗೆಯಿಂ ।
ಪೇಳಲರಿಯೆಂ ತಿರುಗುತಿರ್ದುದು ವರೂಥಂ ಕು ।
ಲಾಲಚಕ್ರದ ವೊಲಸವಳಿದಂ ಕಪೀಶ್ವರಂ ಭ್ರಮಣೆಯಿಂ ಧ್ವಜದಮೇಲೆ ॥
ಕಾಲಾಟವಡಗಿದುವು ಕುದುರೆಗಳ್ ಸೂತನಂ ।
ಕಾಲನೊಯ್ದಂ ಧನಂಜಯನೊಡಲೊಳಂಬುಗಳ್ ।
ಕೀಲಿಸಿದುವಿಕ್ಕೆಲದ ಸೇನೆಯುಂ ಸವರಿದುವು ಹೊಗರುಗುವ ಹೊಸಗಣೆಗಳು ॥೨೦॥

ವ್ಯಥಿಸಿದಂ ಗಾಯದಿಂ ಸೂತನಳಿಯಲ್ಕೆ ಸಾ ।
ರಥಿತನವನುಂ ತಾನೆ ಮಾಡುತಿದಿರಾದನತಿ ।
ರಥರೊಳಗ್ಗಳೆಯನರ್ಜುನನಾ ಸುಧನ್ವಂಗೆ ಬಳಿಕೀತನಂ ಧುರದೊಳು ॥
ಮಥಿಸದಿರ್ದೊಡೆ ತನ್ನನೇಕೆ ಪಡೆದಳೊ ಬರಿದೆ ।
ಪೃಥೆ ನೆಲಕೆ ಪೊರೆಯಾಗಿ ಶಿವಶಿವಾ ಬಾದುದೇ ।
ಪೃಥಿವಿಪನ ಮುಖಕೆಡರಕಟಯೆನುತೆ ಮನದೊಳಗೆ ಕೃಷ್ಣನಂ ಧ್ಯಾನಿಸಿದನು ॥೨೧॥

ಅರಸ ಕೇಳರ್ಜುನಂ ಧ್ಯಾನಿಸಲ್ಕಾಗಳಿಭ ।
ಪುರದೊಳರಿದಂ ಮುರಧ್ವಂಸಿ ಹಂಸಧ್ವಜನ ।
ಧುರಮಂ ಸುಧನ್ವನ ಪರಾಕ್ರಮವನೆಚ್ಚರಿಸಿ ದರ್ಮತನಯಾದಿಗಳ್ಗೆ ॥
ತೆರಳದು ಕಿರೀಟಿಗಾಹವಮೆಂದು ವಹಿಲದಿಂ ।
ಗರುಡವಾಹನನಾಗಿ ಬಂದನಾ ಕ್ಷಣಕಲ್ಲಿ ।
ಗರವಿಂದನಾಥನಾನತರ ನೆನಹಿಗೆ ನಿತ್ಯನೆಂಬುದಂ ತೋರುವಂತೆ ॥ ೨೨ ॥

ಕಶ್ಯಪ ವಸಿಷ್ಠಾದಿ ಪರಮಋಷಿಮುಖ್ಯರಾ ।
ಲಸ್ಯಮಿಲ್ಲದೆ ಮಾಡುವ ಧ್ಯಾನಕೊಮ್ಮೆಯುಂ ।
ದೃಶ್ಯಮಿಲ್ಲದ ಚಿನ್ಮಯಾನಂದರೂಪನೀಕುಂತೀಕುಮಾರಕರ್ಗೆ ।
ವಶ್ಯನಾಗಿಹನೆಂತೊ ಶಿವಶಿವಾ ನೀಲಮೇ ।
ಘಶ್ಯಾಮಲನ ಲೀಲೆ ಪೊಸತೆಂದು ಸುರರುಲಿಯೆ ।
ಸ್ವಸ್ಯಾಲಕನ ರಥಾಗ್ರಕೆ ಸುಪರ್ಣಸ್ಕಂಧದಿಂದೆ ಮುರಹರನಿಳಿದನು ॥ ೨೩ ॥

ಮೊಳಗಿದುವು ನಿಸ್ಸಾಳಕೋಟಿಗಳ್ ಫಲುಗುಣನ ।
ದಳದೊಳಗೆ ತನತನಗೆರಗುತಿರ್ದುದುತ್ಸವದ ।
ಲಳಿ ಮಸಗಿ ಕಳಕಳದ ಬೊಬ್ಬೆಯಿಂ ಮಿಕ್ಕುದು ರಭಸಮಬ್ಧಿ ಘೋಷಣವನು ॥
ಬಳಿಕ ನಸುನಗುತೆ ಚರಣಕೆ ಮಣಿದ ಪಾರ್ಥನಂ ।
ಸೆಳೆದು ಬಿಗಿಯಪ್ಪಿ ಮೈದಡವಿ ಬೋಳೈಸಿ ರಥ ।
ದೊಳಗೆ ಕುಳ್ಳಿರ್ದು ನಲವಿಂದೆ ಮುರರಿಪು ಕುದುರೆಗಳ ವಾಘೆಯುಂ ಕೊಂಡನು ॥

ಇನಿತೆಲ್ಲಮಂ ನೋಡುತಿರ್ದಂ ಸುಧನ್ವನನು ।
ದಿನಮಂತರಂಗದೊಳ್ ಧ್ಯಾನಿಸುವ ನಿರ್ಮಲಾ ।
ತ್ಮನ ದಿವ್ಯಮೂರ್ತಿಯಂ ಪಾರ್ಥನ ರಥಾಗ್ರದೊಳ್ ಕಂಡು ಪುಳಕೋದ್ಗಮದೊಳು॥
ತನುವನೀಡಾಡಿ ಸಾಷ್ಟಾಂಗಪ್ರಣಾಮದಿಂ ।
ಮನದೊಳಗೆ ಹಿಗ್ಗಿ ತನ್ನಾಳ್ತನಕ್ಕೆ ಸಾಕಿನ್ನು ।
ನೆನೆದೆಣಿಕೆ ಕೈಸಾರ್ದುದೆಂದು ಕಣ್ದಣಿಯದಚ್ಯುತನಂ ನಿರೀಕ್ಷಿಸಿದನು ॥ ೨೫ ॥

ಅತಸೀಕುಸುಮಗಾತ್ರನಂ ಕಮಲನೇತ್ರನಂ ।
ಸ್ಮಿತ ರುಚಿರ ಶುಭ ರದನನಂ ಚಾರು ವದನನಂ ।
ಕೃತಮೃಗಮದೋಲ್ಲಸತ್ಸುಲಲಾಟನಂ ಮಣಿಕಿರೀಟನಂ ಕಂಬುಗಳದಾ ।
ಅತುಲ ತುಲಸೀಮಾಲನಂ ರಮಾಲೋಲನಂ ।
ಧೃತಕೌಸ್ತುಭೋದ್ಭಾಸನಂ ಪೀತವಾಸನಂ ।
ನುತಸಮಸ್ತಾಭರಣನಂ ಪುಣ್ಯಚರಣನಂ ಕಲಿಸುಧನ್ವಂ ಕಂಡನು ॥ ೨೬ ॥

ಜಯ ಚತುರ್ಮುಖಜನಕ ಜಯ ಚಾರುಚಾರಿತ್ರ ।
ಜಯ ಚಿದಾನಂದ ಜಯ ಚೀರಾಂಬರಜ್ಞೇಯ ।
ಜಯ ಜಯ ಚ್ಯುತಿದೂರ ಜಯ ಚೂಡಬರ್ಹಶೋಭಿತ ಚೇತನಸ್ವರೂಪ ॥
ಜಯ ಚೈದ್ಯಮಥನ ಜಯ ಚೋದಿತಾಖಿಳಲೋಕ ।
ಜಯ ಚೌರ್ಯಕೃತಲೀಲ ಜಯ ಚಂಡಶತಕಿರಣ ।
ಜಯ ಚಕ್ರಧರಯೆಂದು ಕೃಷ್ಣನಂ ಕಲಿಸುಧನ್ವಂ ಪೊಗಳ್ದಂ ಮನದೊಳು ॥೨೭॥

ಜೀಯ ಜಗದಂತರಾತ್ಮಕ ಸರ್ವಚೈತನ್ಯ ।
ಜೀಯ ಶುದ್ಧಾದ್ವಯ ನಿರಂಜನ ನಿರಾವರಣ ।
ಜೀಯ ನಿನ್ನೊಳಗೀ ಸಮಸ್ತಮಧ್ಯಸ್ತಮಾಗಿದೆ ನೀನೆ ಸತ್ಯರೂಪ ॥
ಜೀಯ ನಾರಾಯಣ ಮುಕುಂದ ಮಾಧವ ಕೃಷ್ಣ ।
ಜೀಯ ಚಕ್ರಿಯೆ ಪೀತವಾಸ ಲಕ್ಷ್ಮೀಲೋಲ ।
ಜೀಯ ಸರ್ವಸ್ವತಂತ್ರನೆ ಬಿಡಿಸು ಸಂಸಾರಪಾಶದಿಂದೆನ್ನನೆಂದು ॥ ೨೮ ॥

ಭಯಭರಿತಭಕ್ತಿಯಿಂ ಭಾವಿಸಿದನಾ ಜಗ !
ನ್ಮಯನಂ ಬಳಿಕ ದೇವ ಕೇಳ್ ನಿನ್ನ ಸರ್ವಜ್ಞ ।
ತೆಯನೆನಗೆ ತೋರಿಸಿದೆ ಲೇಸಾಯ್ತು ನಿನ್ನ ಕೃಪೆಯಿಲ್ಲದೊಡೆ ಪಾಂಡವರ್ಗೆ ॥
ಜಯಮೆತ್ತಣದು ಲೋಕದೊಳ್ ಸಾಕದಂತಿರಲಿ ।
ಬಯಲ ಭಂಜನೆ ಬೇಡ ಮಾಡಲೊಂದು ಪ್ರತಿ ।
ಜ್ಞೆಯನರ್ಜುನಂ ನಿನ್ನ ಮುಂದೆನ್ನಮೇಲೆನುತ್ತಾ ಸುಧನ್ವಂ ನುಡಿದನು ॥೨೯॥

ಅರ್ಜುನಂ ಕೇಳ್ದನೆಲೆ ಮರುಳೆ ನೋಡಾದೊಡಿ।
ನ್ನಾರ್ಜಿಸಿದ ಸುಕೃತಮೆಳ್ಳನಿತಿಲ್ಲದಿಹ ಪುಣ್ಯ।
ವರ್ಜಿತನ ಲೋಕಮಾಗಲಿ ತನಗೆ ನಿನ್ನ ತಲೆಯಂ ಮೂರುಬಾಣದಿಂದೆ॥
ನಿರ್ಜರರ್ ಮೆಚ್ಚಲರಿಯದೊಡೆಂದು ನುಡಿಯಲ್ಕೆ।
ದುರ್ಜಯನಿವಂ ನಿನಗೆ ಸಾಧ್ಯನಲ್ಲೆಂದು ಹರಿ।
ಗರ್ಜಿಸಿದನಾ ಪಾರ್ಥನಂ ಬಳಿಕ ಹಂಸಧ್ವಜನ ತನಯನಿಂತೆಂದನು ॥ ೩೦ ॥

ಗರ್ವದಿಂ ನುಡಿದೆಲಾ ಪಾರ್ಥ ಕೃಷ್ಣನ ಮುಂದೆ।
ಗೀರ್ವಾಣರೆಲ್ಲರುಂ ನೋಡುತಿರಲೀಗ ನೀಂ।
ಸರ್ವಶಕ್ತಿಯೊಳೆಸುವ ಮೂರುಬಾಣಂಗಳಂ ನಡುವೆ ಖಂಡಿಸದಿರ್ದೊಡೆ॥
ಉರ್ವಿಯೊಳ್ ಪಾತಕಿಗಳಾಗಿರ್ದವರ ಗತಿಗ।
ಡರ್ವೆನೆಂದಾ ಸುಧನ್ವಂ ಬಳಿಕ ಮೇದಿನಿಯ।
ದಿರ್ವಿನಂ ತೆಗೆದೆಚ್ಚನರ್ಜುನನ ತೇರೊಂದು ನಲ್ವಮಾತ್ರಂ ತೊಲಗಲು ॥ ೩೧

ತೇರ್ಮುಗುಳ್ದಳವಿಯಿಂ ತೊಲಗಿ ಬೆಂಡಾಗಿ ನಾ।
ನೂರ್ಮೊಳಂ ಪೋಗಲ್ಕೆ ತಲೆದೂಗಿ ಮುರಹರಂ।
ಕಾರ್ಮೊಳಗುವಂತಿರೆ ಸುಧನ್ವನಂ ಕೊಂಡಾಡಿ ನೋಡಿ ಪಾರ್ಥನ ಮೊಗವನು॥
ಘೂರ್ಮಿಸಿದನಂದಿನ ಜಯದ್ರಥನ ಕಥೆ ಬಂದು।
ದಾಮುರ್ಳಿದೊಡಂ ಮಣಿವನಲ್ಲ ಮೇಣಿವನೊಡನೆ।
ಮಾರ್ಮಲೆವರಿಲ್ಲ ನೀನೆನ್ನೊಳಾಲೋಚಿಸದೆ ನುಡಿದೆ ಭಾಷೆಯನೆಂದನು ॥೩೨॥

ಇವನೇಕಪತ್ನೀವ್ರತಸ್ಥನಾಗಿಹುದರಿಂ।
ತವೆ ತಾತನಾಜ್ಞೆಯಂ ಪಾಲಿಸುತೆ ಬಹುದರಿಂ।
ಕವಲಿಲ್ಲದೆಮ್ಮನರ್ಚಿಪ ಭಕ್ತನಹುದರಿಂದಜ ಭವ ಸುರೇಶ್ವರರ್ಗೆ ॥
ಬವರದೊಳ್ ಮಣಿವನಲ್ಲಿನ್ನಿವನ ಶೌರ್ಯಮುಂ।
ಜವಗೆಡಿಸಿ ನಮ್ಮನುರೆ ಬಳಲಿಸುವ ಧೈರ್ಯಮುಂ।
ಭುವನತ್ರಯವನಂಜಿಸುವ ವಿಪುಲವೀರ್ಯಮುಂ ನೋಡೆಂದು ಹರಿ ನುಡಿದನು ॥೩೩॥

ಅನಿತರೊಳ್ ಕಲಿಸುಧನ್ವಂ ಕೇಳ್ದು ನುಡಿದನೆಲೆ।
ವನಜಾಕ್ಷ ಬೆಟ್ಟುಮಂ ಕೊಡೆವಿಡಿದು ಪಟ್ಟಿಯಂ।
ನನೆಯಲೀಯದವೊಲೀ ಪಾರ್ಥನಂ ರಕ್ಷಿಸುವೆ ನೀಂ ಕೃಪೆಯೊಳಾವು ಬರಿದೆ ॥
ತೊನೆದೊಡೇನಹುದಿನ್ನು ರಣದೊಳೀ ದೇಹಮಂ।
ನಿನಗೊಪ್ಪಿಸದೆ ಬಿಡೆಂ ಸಾಕದಂತಿರಲೊಮ್ಮೆ।
ಮುನಿದು ನೋಡಳುಕಿದೊಡೆ ನಿನ್ನ ಕಿಂಕರನಲ್ಲೆನುತ ರಥವನೊಡೆಯೆಚ್ಚನು ॥೩೪॥

ಸುರ್ರನೆ ಸುಳಿದು ಸುತ್ತಿ ಚೆಂಡಾಗೆ ಕುದುರೆಗಳ್ ।
ಕಿರ್ರನೆ ಕಪೀಶ್ವರಂ ಪಲ್ಗಿರಿದು ಚೀರಲ್ಕೆ ।
ಕರ್ರನೆ ಕವಿಯೆ ಕಣ್ಗೆ ಕತ್ತಲೆ ಶಿರೋಭ್ರಮಣೆಯಿಂ ಕೃಷ್ಣ ಫಲುಗುಣರ್ಗೆ ॥
ಘರ್ರನೆ ಪೊರಳ್ದು ಗಾಲಿಗಳೇಳೆ ಧರಣಿಯಿಂ ।
ತಿರ್ರನೆ ತಿರುಗುವ ಸುಟ್ಟುರೆಗಾಳಿಯಂದದಿಂ ।
ಸರ್ರನೆ ಸರಿದುದು ಹಿಂದಕೆ ರಥಂ ಮತ್ತವನನಸುರಾರಿ ಬಣ್ಣಿಸಿದನು ॥ ೩೫॥

ಪೊಡವಿಪತಿ ಕೇಳ್ ಬಳಿಕ ಕಣ್ ಕೆಂಡದಂತಾಗೆ ।
ಕುಡಿಹುಬ್ಬು ಧೂಮಲತೆಯೆಂಬೋಲಿರೆ ಹುಂಕಾರ ।
ದೊಡನೆ ನಿಶ್ವಾಸಮಂ ಬಿಡುವ ನಾಸಾಪುಟಂ ಜ್ವಾಲೆಯಂದದೊಳೊಪ್ಪಿರೆ ॥
ಕಿಡಿಯಿಡುವ ಕೋಪಮಂ ತಾಳ್ದಂ ಧನಂಜಯಂ ।
ಕಡೆಗಾಲದಂದಿನ ಧನಂಜಯಂ ತಾನೆನಲ್ ।
ಪಡೆ ನಡುಗೆ ಜೊಬ್ಬಿರಿದು ಪೂಡಿದಂ ಬಾಣಮಂ ಸೆಳೆದು ನಿಜಕಾರ್ಮುಕವನು॥ ೩೬॥

ಖತಿಯಿಂದೆ ಫಲುಗುಣಂ ಪೂಡಿದ ಮಹಾಸ್ತ್ರಮಂ ।
ಶತಪತ್ರಲೋಚನಂ ಕಂಡದಕೆ ಮುನ್ನ ತಾ ।
ನತುಲಗೋವರ್ಧನವನಾಂತು ಗೋಕುಲವನೋವಿದ ಸುಕೃತಫಲವನಿತ್ತು ॥
ಅತಿಶಯದ ಶಕ್ತಿಯಂ ನೆಲೆಗೊಳಿಸಿ ಬೇಗದಿಂ ।
ಪ್ರತಿಭಟನ ಶಿರವನಿಳುಹಿನ್ನೆಂದು ಬೆಸೆಸಲು ।
ನ್ನತಪರಾಕ್ರಮಿ ಧನಂಜಯನಾರ್ದು ಕಪಿವರೆಗೆ ತೆಗೆದೆಚ್ಚನಾ ಶರವನು ॥ ೩೭ ॥

ಅಹಹ ಮುರಹರ ಪಾರ್ಥನಿಸುವ ಬಾಣಕೆ ನಿನ್ನ ।
ಬಹಳ ಸುಕೃತವನಿತ್ತೆ ಲೇಸಾದುದಿದನರಿಯ ।
ಬಹುದೆ ಸೋವಿಲ್ಲಲಾ ನಿನಗೆನುತ ತೀವ್ರದಿಂ ಕೊರಳ ಸರಿಸಕೆ ನಭದೊಳು ॥
ಬಹ ಸರಳನೆಚ್ಚು ನಿಮಿಷಾರ್ಧದೊಳ್ ಕಡಿದು ಗಹ ।
ಗಹಿಸುವ ಸುಧನ್ವನಂ ಕಂಡವನ ಸೈನ್ಯದೊಳ್ ।
ಕಹಳೆಗಳ್ ಸೂಳೈಸಿದವು ಮೆಚ್ಚಿದರ್ ದಿವಿಜರಚ್ಯುತಂ ಬೆರಗಾದನು ॥ ೩೮॥

ಮೂರುಬಾಣದೊಳಿವನ ತಲೆಯನರಿದಪೆನೆಂದು ।
ತೋರಿಯಾಡಿದೆನಾಂ ಪ್ರತಿಜ್ಞೆಯನದರೊಳೊಂದು ।
ವಿಾರಿಪೋದುದು ಕೋಲೆರಡರಿಂದೆ ರಿಪುಶಿರವನಿಳುಹಬೇಕೆನುತೆ ನರನು ॥
ಏರಿಸಿದ ನಂಬಂ ಶರಾಸನಕೆ ಬಳಿಕದಕೆ ।
ಹೇರಿದಂ ಹರಿ ತನ್ನ ಕೃಷ್ಣಾವತಾರದೊಳ್ ।
ವಿಾರಿ ಧರೆಯಂ ಪೊರೆದ ಪುಣ್ಯಮಂ ಮೇಲೆ ಫಲುಗುಣನೆಚ್ಚನಾ ಕಣೆಯನು ॥೩೯॥

ಆಗಳತಿ ರೋಷದಿಂದಾಲಿಗಳ್ ಕೆಂಪಡರ।
ಲೀಗಳರ್ಜುನನ ಬಾಣಕೆ ನಿನ್ನ ಪುಣ್ಯಮಂ।
ನೀಗಿದೆಯಲಾ ದೇವ ನೋಡು ಬಹು ದಿವ್ಯಾಸ್ತ್ರಮಂ ಕತ್ತರಿಸದಿರ್ದೊಡೆ॥
ಭೋಗದೊಳರುಂಧತಿಯು ಕೂಡಿದ ವಸಿಷ್ಠನಂ।
ಪೋಗಿ ಕೊಂದವನ ದುರ್ಗತಿಗೆ ತಾಂ ಸಿಲುಕುವೆನೆನು।
ತಾಗಸದೊಳರ್ಕನಂತೈತಪ್ಪ ಸರಳಂ ಸುಧನ್ವನಿಕ್ಕಡಿಗೈದನು ॥ ೪೦ ॥

ಕೂಡೆ ಮೊಳಗಿದುವು ನಿಸ್ಸಾಳಂಗಳ್ಕೈದೆ ಕೊಂ।
ಡಾಡಿದರ್ ಸುರರಭ್ರದೊಳ್ ಬಳಿಕ ಕೃಷ್ಣನಂ।
ನೋಡಿ ನುಡಿದಂ ಪಾರ್ಥನೆಂಡಂಬು ಮುರಿದುದಿನ್ನೊಂದರೊಳಿವನ ಶಿರವನು॥
ರೂಢಿಯಿಂದರಿಯದೊಡೆ ಹರಿಹರ ವಿಭೇದಮಂ।
ಮಾಡಿ ನಿಂದಿಸಿದವನ ಗತಿಯಾಗಲೆನಗೆನುತೆ।
ಪೂಡಿದಂ ಮತ್ತೆ ಕೋದಂಡದೊಳ್ ಬಾಣಮಂ ನೃಪತಿ ಕೇಳದ್ಭುತವನು ॥೪೧॥

ಆ ಹೂಡಿದರ್ಜುನನ ಮಾರ್ಗಣದ ಮೊದಲೊಳಾ।
ವಾಹನಂಗೈದು ಕಮಲಜನಂ ನಿಲಿಸಿ ವೃಷಭ।
ವಾಹನನ ಕೋಲ್ಬುಡಿಗೆ ತಂದಿರಿಸಿ ಸಾಯಕದ ನಡುವೆ ತಾನೇ ವ್ಯಾಪಿಸಿ॥
ಕಾಹುಗಳನಾರೆ ಬಲಿದು ರಾಮಾವತಾರದೊಳ್।
ದೇಹಮುಳ್ಳನಿತುದಿನ ಮಾರ್ಜಿಸಿದ ಪುಣ್ಯಮಂ।
ರೂಹುಗಾಣಿಸಿ ಕೊಟ್ಟು ಶಕ್ತಿಯಂ ನೆಲೆಗೊಳಿಸಿ ಮುರಹರಂ ತೋಳ್ಪೊಯ್ದನು॥

ಕೋಟಿಸಿಡಿಲೊಮ್ಮೆ ಗರ್ಜಿಸುವೊಲೂದಿದನಾ ನಿ।
ಶಾಟದಲ್ಲಣನತುಳಪಾಂಚಜನ್ಯವನಾ ಕಿ।
ರೀಟಿ ಪಿಡಿದಂ ದೇವದತ್ತಮಂ ಸಪ್ತಾಬ್ಧಿರಭಸವೊಬ್ಬುಳಿಸುವಂತೆ॥
ಮಾಟಾಡಿಸಿತು ಭೂಮಿಯಂ ಮೇರುಶೈಲಮಂ।
ದೂಟಾಡಿಸಿತು ರಾಶಿ ತಾರಾ ಗ್ರಹಂಗಳಂ।
ತಾಟಾಡಿಸಿತು ಹನುಮನಬ್ಬರಣೆ ಲಗ್ಗೆವರೆ ಮೊಳಗಿದುವು ನಿಜಬಲದೊಳು ॥೪೨॥

ಕಂಡ ನೀತೆರನಂ ಸುಧನ್ವನಿಂತೆಂದನೆಲೆ।
ಪುಂಡರೀಕಾಕ್ಷ ನಿನ್ನಯ ಪುಣ್ಯಮಂ ಸೂರೆ।
ಗೊಂಡವಂ ತಾನೋ ಧನಂಜಯನೊ ಪುಸಿಯದುಸಿರೆನಗೆ ಸಾಕನ್ನು ಬರಿದೆ॥
ಕೊಂಡಾಡಬೇಡ ಬಿಡಿಸಂಬನದನೆಡೆಯೊಳಾಂ।
ಖಂಡಿಸದೊಡೆನ್ನಣುಗನೆಂಬಳೇ ಮಾತೆ ಸತಿ।
ಗಂಡನೆಂದೆಣಿಸುವಳೆ ಸುತನೆ ತಾತಂಗೆ ತಾಂ ಕೇಳ್ ಪ್ರತಿಜ್ಞೆಯನೆಂದನು॥೪೪॥

ಭೂಸುರರ್ ಬಂದು ಕಾಶಿಯೊಳೆಸೆವ ಮಣಿಕರ್ಣಿ ।
ಕಾಸಲಿಲದೊಳ್ ಮಿಂದು ಶಾಸ್ತ್ರವಿಧಿಯಿಂದಮುಪ ।
ವಾಸಮಂ ಮಾಡಿ ಶಿವರಾತ್ರಿಯೋಳ್ ವಿರಚಿಸಿದ ವಿಶ್ವೇಶಪೂಜೆಗಳನು ॥
ಹೇಸದೆಡಗಾಲಿಂದೆ ನೂಕಿದನ ದೋಷಮೆನ ।
ಗೀಸಾಯಕವನೆಡೆಯೊಳರಿಯದಿರಲಾಗಲೆಂ ।
ದಾ ಸುಧನ್ವಂ ತನ್ನ ಭುಜಬಲದೊಳಾರ್ದು ನಿಜಧನುವನೊದರಿಸುತಿರ್ದನು ॥೪೫॥

ಅನಿತರೊಳ್ ತ್ರೈಮೂರ್ತಿಗಳ ದಿವ್ಯಶಕ್ತಿಯಿಂ ।
ವಿನುತ ರಾಮಾವತಾರದ ಪುಣ್ಯಶಕ್ತಿಯಿಂ ।
ದನುಪಮ ಧನುರ್ವೇದದುರುಮಂತ್ರಶಕ್ತಿಯಿಂ ತೀವಿದ ಮಹಾಶರವನು ॥
ತನಗೆ ಭುಜಬಲದೊಳುಂಟಾದ ನಿಜಶಕ್ತಿಯಿಂ ।
ಕನಲಿ ಕಿವಿವರೆಗೆ ತೆಗೆದಾರ್ದು ಫಲುಗುಣನೆಚ್ಚ ।
ನೆನಿತು ಸತ್ವಾಧಿಕನೊ ಕಲಿಸುಧನ್ವಂ ಧರೆಯೊಳೇನೆಂಬೆನದ್ಭುತವನು ॥ ೪೬ ॥

ಹೆದರಿತುಭಯದ ಸೇನೆ ಕೆದರಿತು ಸುರಕ್ಷೋಮ ।
ಮೊದರಿತಿನಮಂಡಲಂ ಬೆದರಿತು ಜಗತ್ರಯಂ ।
ಬಿದರಿತು ಕುಲಾದ್ರಿಚಯ ಮುದುರಿತುಡುಸಂದೋಹಮುದಿರಿತಿಳೆ ತತ್ಕ್ಷಣದೊಳು ॥
ಕದಡಿತು ಮಹಾರ್ಣವಂ ಕದಲಿದಂ ಕಚ್ಛಪಂ ।
ಪುದುಗಿತೆಣ್ದೆಸೆಯಾನೆ ಹುದುಗಿದಂ ಭೋಗಿಪಂ ।
ಗದಗದಿಸಿತಾ ಸಾಯಕದ ಬಿಸಿಗೆ ಬ್ರಹ್ಮಾಂಡಮದನೇನ ಬಣ್ಣಿಸುವೆನು ॥ ೪೭ ॥

ಬೆಚ್ಚಿದನೆ ಬೆದರಿದನೆ ಚಿತ್ತದೊಳ್ ಕಲಿತನದ ।
ಕೆಚ್ಚು ಕೊರಗಿತೆ ಬಹ ಮಹಾಶರವನಾಗಳಾ ।
ರ್ದೆಚ್ಚಂ ಸುಧನ್ವನಿಕ್ಕಡಿಯಾದುದಂಬು ಬಿದ್ದುದು ಹಿಂದಣರ್ಧಮಿಳೆಗೆ ॥
ಉಚ್ಚಳಿಸಿ ಬಂದು ಕೋಲ್ಮುದಿಯವನ ಕಂಠಮಂ ।
ಕೊಚ್ಚಿ ಹಾಯ್ದತ್ತಳಲ್ದುದು ಮೇದಿನಿಯೊಳಾಗ ।
ಳಚ್ಯುತ ಮುರಾರಿ ಕೇಶವ ರಾಮ ಯೆನುತಿರ್ದುದಾ ತಲೆ ಚಿಗಿದು ನಭದೊಳು ॥ ೪೮ ॥

ಕಂದು ಕುಂದಿಲ್ಲದ ಸುವೃತ್ತದಿಂದೆಸೆವ ತನ ।
ಗೊಂದುಬಾರಿಯುಮಿನ್ನು ಪರಪೀಡೆ ಲೇಸಲ್ಲ ।
ವೆಂದು ನಿಜವೈರಮಂ ಬಿಟ್ಟು ಕಮಲಂಗಳಂ ಸಂತೈಸೆ ಗಗನದಿಂದೆ ॥
ಬಂದವನೊ ಸಂಪೂರ್ಣಕಲೆಗಳಿಂದಾ ರಾಜಿ ।
ಪಿಂದುವೆನೆ ಕೃಷ್ಣನ ಪದಾಂಭೋಜ ಯುಗಳಕ್ಕೆ ।
ತಂದು ಬಿದ್ದುದು ಸುಧನ್ವನ ಶಿರಂ ಹರಿಯ ನಾಮಾವಳಿಯನುಚ್ಚರಿಸುತೆ ॥ ೪೯ ॥

ತಪ್ಪಿದನಲಾ ಚಕ್ರಿ ಹಾಯೆಂದು ಸುರರುಲಿಯ ।
ಲುಪ್ಪರಿಸಿ ತಲೆ ಚಿಗಿಯಲವನಟ್ಟೆ ತೋಳ್ಗಳಂ ।
ಚಪ್ಪರಿಸಿಕೊಂಡೆದ್ದು ಬಂದು ರಣರಂಗದೊಳ್ ತಿರುತಿರುಗಿ ಚಾರಿವರಿದು ॥
ಅಪ್ಪಳಿಸಿ ಹೊಯ್ದೆಳೆದು ಸದೆದಿಟ್ಟೊರಸಿ ಮೆಟ್ಟಿ ।
ಸೊಪ್ಪಿಸಿ ಪೊರಳ್ದರೆದು ತೆವರಿ ಪರಿದರೆಯಟ್ಟಿ ।
ಚಿಪ್ಪು ಚೀರಾಗಿಸಿತು ಸಕಲಪರಿವಾರಮಂ ಮುರಹರಂ ಬೆರಗಾಗಲು ॥ ೫೦ ॥

ಹೊಳೆವ ಕುಂಡಲದ ಕದಪಿನ ಮುರಿದೆಸೆವ ಮೀಸೆ ।
ಗಳ ನಗೆಮೊಗದ ರದನಪಙ್ಕ್ತಿಗಳ ಬಿಟ್ಟ ಕಂ ।
ಗಳ ಬಿಗಿದ ಹುಬ್ಬುಗಳ ಪೆರೆನೊಸಲ ತಿಲಕದ ನವಿರ ಹಿಣಿಲ ಕಾಂತಿಯಿಂದೆ ॥
ಕಳಕಳಿಪ ತನಿವೀರರಸದುರುಳಿಯಂತೆ ತೊಳ ।
ತೊಳಗುವ ಸುಧನ್ವನ ಶಿರವನೆರಡು ಕೈಗಳಿಂ ।
ನಳಿನದಳಲೋಚನಂ ಪಿಡಿದೆತ್ತಿಕೊಂಡು ನೋಡಿದನವನದೇಂ ಸುಕೃತಿಯೊ ॥೫೧॥

ಕೈದಳದೊಳೆಸೆವ ತಲೆಯಂ ನಾಸಿಕಾಗ್ರದೆಡೆ ।
ಗೊಯ್ದು ಮುರಮಥನನಾಘ್ರಾಣಿಸಿದನಾತನೇ ।
ಗೈದನೆಂಬುದನಚ್ಯುತನೆ ಬಲ್ಲನಾಗಳಾ ಮೊಗದಿಂದೆ ತನ್ನ ಮೊಗಕೆ ॥
ಐದಿತವನಾತ್ಮವತಿತೇಜದಿಂ ಬಳಿಕಮರ ।
ರೈದೆ ಬಣ್ಣಿಸಿದರಾ ಶಿರವನಸುರಾಂತಕಂ ।
ಮೈದುನಂಗುರೆ ತೋರಿ ಹಂಸಧ್ವಜನ ಮುಂದಕಿಡಲಟ್ಟೆ ಬಿದ್ದುದಿಳೆಗೆ ॥ ೫೨ ॥

ಭೂಪಾಲ ಕೇಳ್ ನೋಡುತಿರ್ದಂ ಸುಧನ್ವನಾ ।
ಚೋಪಮಂ ತಲೆ ಪಾರ್ಥನಸ್ತ್ರದಿಂ ಪರಿಯೆ ಸಂ
ತಾಪದಿಂ ಮರುಗುತಿಳೆಯೊಳ್ ಪೊರಳ್ವನಮಾಶಿರಂ ತನ್ನ ಬಳಿಗೆ ಬರಲು ।
ಹಾ ಪುತ್ರಯೆನುತೆತ್ತಿಕೊಂಡು ಮುಂಡಾಡಿ ಪಣೆ ।
ಗಾಪಣೆಯನೊಂದಿಸಿ ಪೊಸೆದು ಚೀರ್ದು ಬಹಳ ಪ್ರ ।
ಲಾಪದಿನಳಲ್ದಂ ಮರಾಳಧ್ವಜಂ ಪೊರೆಯ ಕಲ್ಮರಂ ಕರಗುವಂತೆ ॥ ೫೩ ॥

ಬೀಳ್ವೆನೋ ಶೈಲಾಗ್ರದಿಂದೆ ಕರ್ಮಡುವಿನೊಳ
ಗಾಳ್ವೆನೋ ನಿನ್ನ ನಿಟ್ಟಿಪ ತನ್ನ ಕಂಗಳಂ ।
ಕೀಳ್ವೆನೋ ಪರಸಿ ಪಡೆದೊಡಲನುರೆ ಸೀಳ್ವೆನೋ ನಿನ್ನ ನುಡಿಗಳನೆಂದಿಗೆ ॥
ಕೇಳ್ವೆನೋ ಜನ್ಮ ಜನ್ಮಾಂತರದೊಳಾದೊಡಂ ।
ಪೇಳ್ವೆನೋ ನಿನಗೆ ಬೆಸನಂ ಮಗನೆ ಶೋಕಮಂ ।
ತಾಳ್ವೆನೋ ತಾನೆನ್ನೊಳುಸಿರಲಾಗದೆ ಮೌನಮೇಕಕಟ ನಿನಗೆಂದನು ॥ ೫೪

ಕೊಳುಗುಳಕೆ ನಡೆತಂದೆ ಬಿಲ್ವಿಡಿಯುತ್ತೈತಂದೆ ।
ಫಲುಗುಣನೊಡನೆ ಹೋರಿ ಜಯಿಸಬೇಡವೆ ಹೋರಿ ।
ಕಲಿತನವೊಳುಕ್ಕಂದದಾತ ನೀನೇಕಂದವಳಿದೆ ರಣದೊಳಗೆ ಕಂದ ॥
ನಿಲಯಕೆಂತಾಂ ಪುಗುವೆನುಳಿದು ನಿನ್ನಂ ಮಗುವೆ ।
ಸಲಹು ಬಾ ನಮ್ಮಯ್ಯ ಮಾತಾಡು ದಮ್ಮಯ್ಯ ।
ಬಳಲಿಸದಿರ್ಕೆ ತಮ್ಮನೊಮ್ಮೆ ನೊಡ್ಕೈ ತಮ್ಮಯೆಂದಳಲೊಳವನಾಳ್ದನು ॥ ೫೫ ॥

ಮೋಹಮುಳ್ಳೊಡೆ ತಪ್ತತೈಲಪೂರಿತ ಘನಕ ।
ಟಾಹದೊಳ್ ಕೆಡಪಿಸುವನೇ ತಂದೆ ತನಯನಂ ।
ದಾಹಿರಂಗದ ಶೋಕವೆಂದು ಜರೆಯುವೆ ಲೋಕವಾಗ ಹಲುಬಲ್ ತನ್ನನು ॥
ದ್ರೋಹಮಂ ಮಾಡಿದೆಂ ನಿನಗೆನ್ನ ಮೇಲೆ ಮುಳಿ ।
ದಾಹವದೊಳಿದ್ದೆ ಸುಧನ್ವ ಕಾರ್ಯ್ಮಣ್ಯೆಯೊಳ್ ।
ದೇಹಮಂ ಕಾದ ಕೃಷ್ಣಂ ಕಾದಲಹಿತನೇಕಾವನೈ ನಿನಗೆಂದನು ॥ ೫೬ ॥

ಅಣ್ಣದೇವಂ ಕದನಮಂ ಜಯಿಸಿ ಬಹನೆಂದು ।
ಬಣ್ಣದ ಸೊಡರ್ಗಳಂ ಕೈಗೈಸುವನುಜೆಯಂ ।
ಪುಣ್ಣಿಮೆಯ ಶಶಿಯಂದದಾಸ್ಯದೆಳನಗೆಯೊಳ್ಶೈತಹ ನಿನ್ನ ವಲ್ಲಭೆಯನು ॥
ಹಣ್ಣಿದುತ್ಸಾಹಮಂ ಕೇಳ್ದು ತನ್ನೊಡಲೊಳಗೆ ।
ತಣ್ಣನಂ ತಳ್ತು ಬಹ ನಿನ್ನ ನಿಜಮಾತೆಯುಂ ।
ಕಣ್ಣಾರೆ ಕಾಣ್ಬೆನೆಂತಕಟ ವಿಪರೀತಮಾದೊಡೆ ತನಯ ಹೇಳೆಂದನು ॥ ೫೭ ॥

ತಾತನಲ್ಲವೆ ನಿನಗೆ ತಾನೆನ್ನೊಳಿಂತಕಟ ।
ಮಾತಾಡದಿಹರೆ ನಿನ್ನಂ ಪಡೆದಳಂ ವೀರ।
ಮಾತೆಯೆಂಬರ್ ಕಟ್ಟು ನರನ ಹಯಮಂ ಕಾದು ನಡೆ ಕೃಷ್ಣಫಲುಗುಣರೊಳು ॥
ಏತಕೆ ಬರಿದೆ ಸುಮ್ಮನಿಹೆ ಕಂಠಮಾಲೆಯೊಳ್ ।
ಜಾತಿನಾಯಕರತ್ನಮಂ ತೆಗೆದು ಬಿಸುಟಂತೆ ।
ಧಾತುಗೆಟ್ಟಿದೆ ತಮ್ಮ ಬಲಮೆಂದು ಹಲುಬಿದಂ ಧರೆಯೊಳ್ ಪೊರಳ್ದು ಮರುಗಿ ॥ ೫೮ ॥

ಲಂಬಿಸಿದನತಿಶೋಕ ಭಾರದಿಂ ಮೊಗಮಿಟ್ಟು ।
ಚುಂಬಿಸಿದನಡಿಗಡಿಗೆ ನಾನಾಪ್ರಕಾರದಿಂ ।
ಪಂಬಲಿಸಿ ಸುತನ ಗುಣಶೀಲಂಗಳಂ ನನೆದು ಹಳವಳಿಸಿದಂ ಪೆರ್ಚಿದ ॥
ಕಂಬನಿಯು ಕಡಲೊಳಗೆ ಡಾವರಿಪ ವಡಬಶಿಖಿ ।
ಯೆಂಬಿನಂ ಕಾಣಿಸುವಳಲ್ಗಿಚ್ಚುಗವನೊಡಲ ।
ನಿಂಬುಗೊಟ್ಟಂ ಮರುಗುತಿರ್ದುದು ಸಮಸ್ತಪರಿವಾರನಾತನ ಸುತ್ತಲು ॥೫೯॥

ಕಾಳಗಕೆ ಮುಂಕೊಂಡು ನಡೆವರಾರಿನ್ನು ತಮ |
ಗೂಳಿಗವನಿತ್ತು ಬೆಸಸುವರುಂಟೆ ನೀನೆ ಕ |
ಟ್ಟಾಳೆಂಬರೀಗಳಿಂತಳಿದಪರೆ ದಾತಾರ ವೀರ ಸುಕುಮಾರ ಧೀರ |
ಕಾಳಾದುದಕಟ ಚಂಪಕನಗರದರಸುಗಳ |
ಬಾಳುವೆ ಮಹಾದೇವ ಹಾಯೆಂದೆರಡು ಪಡೆ |
ಗೋಳಿಟ್ಟುದಾನೆ ಕುದುರೆಗಳೊರೆವ ಕಂಬನಿ ಬಳ್ಗಿವಿಗಳಿಂ ಜೋಲ್ದುವು ‖೨೦‖

ಬಳಿಕಾ ಸುಧನ್ವನ ಸಹೋದರಂ ಸುರಥಂ ಬ |
ಹಳಶೋಕಭಾರಮಂ ತಳೆದಿರ್ದಪಂ ಕೂಡೆ |
ತಿಳಿದು ಕಡುಗೋಪದಿಂ ಬಿಸುಸುಯ್ದು ನುಡಿದನೆಲೆ ತಾತ ಕೇಳೀತನಿಂದು ‖
ನಳಿನನಾಭನ ಮುಂದೆ ಭಾಷೆಯಂ ಪೂರೈಸಿ |
ಕೊಳುಗುಳದೊಳಳಿದನಿದಕಿನ್ನು ದುಃಖಿಸಲೇತ |
ಕಳಲದಿರ್ ಧುರದೊಳೆನ್ನಾಟೋಪಮಂ ನೋಡೆನಲ್ಕರಸನಿಂತೆಂದನು ‖೨೧‖

ಉಂಟು ಕೃಷ್ಣನ ಮುಂದೆ ಭಾಷೆಯಂ ಪೂರೈಸಿ |
ಟೆಂಟಣಿಸದೊಡಲಂ ತೊರೆದು ಮುಕ್ತಿರಾಜ್ಯಮಂ |
ಪೆಂಟಣಿಸಿಕೊಂಡಂ ಸುಧನ್ವನಿಂತಿದಕಾಗಿ ಧೃತಿಗೆಟ್ಟಳಲ್ದುದಿಲ್ಲ ‖
ಕಂಠಮಂ ಕತ್ತರಿಸಲಾ ಶಿರಂ ತನ್ನೆಡೆಗೆ |
ಬಂಟುಗೆಡದೈದಿದೊಡೆ ತೆಗೆದೆತ್ತಿಕೊಂಡು ವೈ |
ಕುಂಠನೀಕ್ಷಿಸಿ ಮತ್ತೆ ಬಿಸುಟನೆಂಬುದಕೆ ಮರುಗುವೆನೆಂದೊಡಿತೆಂದನು ‖೨೨‖

ತಾತ ಚಿತ್ತೈಸಿದರೊಳೇನಹುದು ತಿರುಗಿ ಬಿಸು |
ಡೀತಲೆಯನುಸುರಾಂತಕನ ಚರಣದೆಡೆಗೆ ಸಹ |
ಜಾತನಂ ಕೊಂದಾತನಂ ಕೊರ್ವೆನೆಂದು ಸುರಥಂ ರಥಕಡರ್ದಬಳಿಕ ‖
ಖಾತಿಯಿಂದಾ ಶಿರವನಾ ಮರಾಳಧ್ವಜಂ |
ಪೀತಾಂಬರನ ಪೊರೆಗೆ ಹಾಯ್ಕಲಾ ಪುರಹರಂ |
ಪ್ರೀತಿಯಿಂ ತೆಗೆದು ನಭಕಿಡಲದಂ ರುಂಡಮಾಲೆಯೊಳಾಂತನಲ್ಲಿ ಶಿವನು ‖೨೩‖

ಅಡಗಿತಾ ಶಿರಮಲ್ಲಿ ಹಂಸಧ್ವಜಂ ತನ್ನ |
ಪಡೆಸಹಿತ ನಿಂದನಾಹವಕೆ ಸನ್ನಾಹದಿಂ |
ದೊಡವುಟ್ಟಿದಂ ಮಡಿದಳಲ್ದೆ ಸುರಥಂ ರಥಕಡರ್ದು ನಿಜಕಾರ್ಮುಕವನು ‖
ಮಿಡಿದು ಕೃಷ್ಣಾರ್ಜುನರ ಸರಿಸಕೈತರಲವನ |
ಕಡುಶೌರ್ಯಮಂ ಕಂಡು ಶಂಕೆಯಿಂ ದೇವಪುರ |
ದೊಡೆಯ ಲಕ್ಷ್ಮೀವರಂ ಮಾಡಿದಂ ತನ್ನ ಮೈದುನನೊಳಾಲೋಚನೆಯನು ‖೨೪‖

ಹದಿನಾಲ್ಕನೆಯ ಸಂಧಿ

ಸೂಚನೆ ॥ ಚಂಡಸುರಥನ ಶಿರವನಸುರಹರನಾಜ್ಞೆಯಿಂ ।
ಕೊಂಡು ಗರುಡಂ ಪ್ರಯಾಗವನೈದಲೀಶ್ವರಂ ।
ಕಂಡು ವೃಷರಾಜನಂ ಕಳುಹಿ ತರಿಸಿದನದಂ ರುಂಡಮಾಲೆಯ ತೊಡವಿಗೆ ॥

ಕೇಳ್ಮೈ ನೃಪಾಲಕ ಸುಧನ್ವನಗ್ಗಳಿಕೆಯಂ ।
ಪೇಳ್ದಪೆಂ ನಿನಗಾಲಿಪುದು ಸುರಥನಂಕಮಂ ।
ತಾಳ್ದನತಿರೋಷಮಂ ರಥವೇರಿ ವಿನುತಕೋದಂಡಮಂ ಜೇಗೈಯ್ಯುತೆ ॥
ಬಾಳ್ದಪನೆ ಫಲುಗುಣಂ ಮೇಣಿಳಾಮಂಡಲವ ।
ನಾಳ್ದಪನೆ ಧರ್ಮಜಂ ಕಾಣಬಹುದಿಂದೆನ್ನ ।
ತೋಳ್ತೀಂಟೆಯಂ ಕಳೆವೆನೆನುತೆ ಕೃಷ್ಣಾರ್ಜುನರ ಸರಿಸಕೈತರುತಿರ್ದನು ॥ ೧ ॥

ಸುರಥನೈತಹ ರಣೋತ್ಸಾಹಮಂ ಕಂಡು ಹರಿ ।
ನರನೊಳಾಲೋಚಿಸಿ ನುಡಿದನಿವಂ ಧರೆಯೊಳಾ ।
ಚರಿಸದಿಹ ಪುಣ್ಯಕರ್ಮಂಗಳೊಂದಿಲ್ಲಿವಂ ಮರೆದಾದೊಡಂ ಮಾಡಿದ ॥
ದುರಿತಲವಮಂ ಕಾಣೆನಾರ್ ಜಯಿಪರೀತನಂ ।
ಸರಿಸದೊಳ್ ನಿಂದೆಡೆ ಬಹುದು ನಮಗೀಗ ।
ಪರಿಭವಂ ಪ್ರದ್ಯುಮ್ನ ಮೊದಲಾದ ಪಟುಭಟರ್ ಕಾದಲಿವನೊಡನೆಂದನು ॥ ೨ ॥

ರಾಜೀವನೇತ್ರನಿಂತೆನುತುಮಂಧಕವೃಷ್ಣಿ ।
ಭೋಜರೆನಿಪಖಿಳ ಯಾದವಕುಲದ ಪಟುಭಟ ಸ ।
ಮಾಜಮಂ ಪ್ರದ್ಯುಮ್ನನೊಡನೆ ಸುರಥನ ರಥಕ್ಕೆಣೆಯೊಡ್ಡಿ ನರನ ರಥದ ॥
ವಾಜಿಗಳ ವಾಘೆಯಂ ತಿರುಹಿ ಹಿಂದಕೆ ಮೂರು ।
ಯೋಜನದೊಳಿಟ್ಟಣಿಸಿ ನಿಂದು ಗರ್ಜಿಸುವ ಸೇ ।
ನಾಜಲಧಿಮಧ್ಯದೊಳ್ ಬಂದು ನಿಂದರನೆಲೆಯ ಸುಯಿದಾನಮಂ ಬಲಿದನು ॥೩॥

ಇತ್ತಲಾಹವಕೆ ಮುಂಕೊಂಡು ಬಹ ಸುರಥನಂ ।
ತೆತ್ತಿಸಿದನಂಬಿನಿಂ ಪ್ರದ್ಯುಮ್ನನಾತನಂ ।
ಮೆತ್ತಿಸಿದನವಂ ಬಾಣದಿಂ ಪಾರ್ಥನೆತ್ತ ಜಾರಿದನೀಗ ಶೌರಿಸಹಿತ ॥
ಮತ್ತಗಜದಗ್ಗಳಿಕೆ ಮಕ್ಷಿಕದೊಳಹುದು ಗಡ ।
ಮುತ್ತಿದುವು ಕರಿ ತುರಗ ರಥ ಪದಾತಿಗಳಿಲ್ಲಿ ।
ಹೊತ್ತುಗಳೆವೊಡೆ ಸುಧನ್ವನ ಹರಿಬವಲ್ಲೆನುತೆ ತೆಗೆದೆಚ್ಚನಾ ಭಟರನು ॥೪॥

ತವಕದಿಂ ಪ್ರದ್ಯುಮ್ನನಂ ಗೆಲ್ದು ಸಾತ್ಯಕಿಯ ।
ನವಗೆಡಿಸಿ ಕೃತವರ್ಮ ಸಾಂಬಾನುಸಾಲ್ವರಂ ।
ಜವಗೆಡಿಸಿ ಕಲಿಯೌವನಾಶ್ವನಂ ಸದೆದು ನೀಲಧ್ವಜನನುರೆಘಾತಿಸಿ ॥
ರವಿಸುತನ ಸೂನುವಂ ಪರಿಭವಿಸಿ ನಿಖಿಳ ಯಾ ।
ದವ ಸುಭಟರಂ ಜಯಿಸಿ ಚತುರಂಗಸೈನ್ಯಮಂ ।
ಸವರಿ ಸಮರಥ ಮಹಾರಥರನೊಂದೇ ರಥದೊಳಾ ಸುರಥನೊಡೆದುಳಿದನು ॥೫॥

ಸೊಕ್ಕಾನೆ ಪೊಕ್ಕು ಕಾಸಾರಮಂ ಕಲಕುವಂ ।
ತಕ್ಕಜದೊಳೌಕ್ಕಲಕ್ಕಿದನಖಿಳಸೈನ್ಯಮಂ ।
ಮಿಕ್ಕು ನೊಂದಕ್ಕಲಂ ಬೀದಿವರಿದಟ್ಟುವಂತೋಡಿಸಿದನತಿಬಲರನು ॥
ಕಕ್ಕಸದೊಳೆಕ್ಕತುಳಕೈತಂದ ವೀರರಂ ।
ಮುಕ್ಕುರುಕಿ ತೆಕ್ಕೆಗೆಡಿಸಿದನಾ ರಣಾಗ್ರದೊಳ್ ।
ಪೆಕ್ಕಳಿಸಿದುಕ್ಕಂದದದಟಿಂದೆ ಸುರಥನರಸಿದನಚ್ಯುತಾರ್ಜುನರನು ॥ ೬ ॥

ಘೋರಸಂಸಾರದೊಳ್ ಮುಸುಕುವ ಮರವೆಯಂ ನಿ।
ವಾರಿಸಿ ಮಹಾಯೋಗಿ ಜೀವಪರಮಾತ್ಮರ ವಿ ।
ಚಾರಿಸುವ ತೆರದಿಂದೆ ರಿಪುವೋಹರದೊಳೆತ್ತಿ ಕವಿವ ಭಟರಂ ಗಣಿಸದೆ ॥
ವೀರಸುರಥಂ ಕೃಷ್ಣಫಲ್ಗುಣರನರಸಿದನು ।
ದಾರ ವಿಕ್ರಮ ಪರಿಜ್ಞಾನದಿಂದಡಬಲನ ।
ನಾರಯ್ಯದೇಕಾಗ್ರಚಿತ್ತದಿಂ ವಸುಮತೀಕಾಂತ ಕೇಳದ್ಭುತವನು ॥ ೭ ॥

ಅದ್ಭುತ ಪರಾಕ್ರಮದೊಳಾ ನಿಖಿಳಸೇನೆಗೆ ಮ ।
ಹದ್ಭಯವ ಬೀರುತೈತಹ ಸುರಥನಂ ಕಾಣು ।
ತುದ್ಭವಿಸಿತರ್ಜುನಂಗತಿರೋಷಮೆಂದನಸುರಾಂತಕನೊಳಿವನ ಜಯಕೆ ॥
ತ್ವದ್ಭಾವದೊಳ್ ತೋರಿದೆಣಿಕೆಯೇನೆಲೆ ದೇವ ।
ಮದ್ಭುಜದೊಳೀ ಚಾಪಮಿರ್ದುಮಾವವ ನಸ್ತ್ರ ।
ವಿದ್ಭವನಕಮುಮ ನೋಡುವೆನೆನುತೆ ಬಿಲ್ದಿರುವನೊದರಿ ನರನಿದಿರಾದನು ॥೮॥

ಎಲವೊ ಸೋದರನಳಿದಳಲ್ಗಾಗಿ ನಮ್ಮೊಡನೆ ।
ಕಲಹಕ್ಕೈದುವ ನಿನ್ನನಿಸುವುದನುಚಿತಮೆಂದು ।
ತೊಲಗಿದೊಡೆ ನೀನರಿದುದಿಲ್ಲಲಾ ತಲೆ ಬಲ್ಲಿತೆಂದು ಕಲ್ಲಂ ಪಾಯ್ವೆಲಾ ॥
ಕಲಿಯಾಗಿ ಸಮರದೊಳ್ ಕಾದಿದೊಡೆ ನಿನಗಿಲ್ಲ ।
ಗೆಲವಹುದೆ ಮರುಳಾಗಬೇಡ ಹಯುವಂ ಬಿಟ್ಟು ।
ನೆಲದರೆಯ ಧರ್ಮಸುತನಂ ಕಂಡು ಬದುಕುವುದು ಲೇಸೆಂದು ನರನೆಚ್ಚನು ॥೯॥

ಗಣ್ಯವೇ ಮತ್ಸಹಭವಂಗೆ ನೀಂ ಹರಿ ಹರ ಹಿ ।
ರಣ್ಯಗರ್ಭಾದಿಗಳ್ ಮುಳಿದೊಡಳಿದಪನೆ ಕಾ ।
ರುಣ್ಯದಿಂ ನಿನ್ನನುದ್ಧರಿಸಲೆಂದಚ್ಯುತಂ ಕೊಟ್ಟ ತನ್ನವತಾರದ ॥
ಪುಣ್ಯದಿಂ ಮಡಿದು ಮುಕ್ತಿಗೆ ಸಂದನಿದಕೆ ನೈ ।
ರ್ವಿಣ್ಣ್ಯ ಮೆಮಗಿಲ್ಲ ನಾವಿನ್ನು ಹಯಮಂ ಬಿಡಲ ।
ರಣ್ಯವಾಸಿಗಳಲ್ಲ ನೋಡೆಮ್ಮ ಸಾಹಸವನೆನುತೆಚ್ಚನಾ ಸುರಥನು ॥ ೧೦ ॥

ಇಸಲುಚ್ಚಳಿಸಿ ಪಾಯ್ವ ಸುರಥನಂಬಿನ ಗರಿಯ ।
ಬಿಸಿಯ ಗಾಳಿಯ ಬೀಳ್ಗೆಯಿಂದುರಿದು ಭುಗಿಲೆಂದು ।
ಪಸಗಿದತಿಶಯದ ರೋಷಜ್ವಾಲೆಯಿಂ ಧನಂಜಯನಾದನೀ ನರನೆನೆ ।
ದೆಸೆಯಾವುದಿಳೆಯಾವುದಿನಬಿಂಬವಾವುದಾ ।
ಗಸವಾವುದೆಂಬಿನಂ ಪೊಸವೊಸೆಯ ವಿಶಿಖಮಂ ।
ಮುಸುಕಿದಂ ಸಾರಥಿ ಧ್ವಜ ಹಯಗಳಡಗೆಡೆದು ಸುರಥಂ ವಿರಥನಾಗಲು ॥೧೧॥

ಕೂಡೆ ಮತ್ತೊಂದು ಪೊಸರಥವನಳವಡಿಸಿಕೊಂ ।
ಡೀಡಿರಿದನಂಬಿನಿಂ ಪಾರ್ಥನ ವರೂಥಮಂ ।
ಕೂಡೆ ಹಿಂಭಾಗಕ್ಕೈನೂರ ಬಿಲ್ಲಂತರಕೆ ಪೋದುದದು ಸಂಗರದೊಳು ।
ಮಾಡಿದಂ ಕೃಷ್ಣನ ಶರೀರದೊಳ್ ಗಾಯಮಂ ।
ತೋಡಿದಂ ಕುದುರೆಗಳ ಡಲ್ಗಳಂ ನರನಂ ವಿ ।
ಭಾಡಿಸಿದನಾ ಸುರಥನೊಂದು ಶಪಥದೊಳಿಸುವುದಿದರೊಳೇನಹುದೆಂದನು ॥೧೨॥

ಶಪಥವೇನಿದಕಿನ್ನು ನಿನ್ನನಾಂ ಕೊಲ್ಲದೊಡೆ ।
ವಿಪುಲಪಾತಕರಾಶಿ ತನಗೆ ಸಂಘಟಿಸದಿ ।
ರ್ದಪುದೆ ಪೇಳೆನುತ ತೆಗೆದೆಚ್ಚೋಡಾ ಬಾಣಮಂ ಸುರಥಂ ನಡುವೆ ಖಂಡಿಸಿ ।
ಅಪಹಾಸದಿಂದಿಳೆಗೆ ನಿನ್ನನೀ ರಥದಿಂದೆ ।
ನಿಪತನಂಗೆಯ್ಯದೊಡೆ ತನಗೆ ಪರಲೋಕದೊಳ್ ।
ವಿಪರೀತಗತಿಯಾಗದಿರ್ದಪುದೆ ಪೇಳೆಂದು ತೆಗೆದೆಚ್ಚು ಬೊಬ್ಬಿರಿದನು ॥ ೧೩ ॥

ಸುರಥನಿಸುಗೆಯೊಳರ್ಜುನಂ ನೊಂದು ಮುಂಗಾಣ ।
ದಿರೆ ಮುರಾಂತಕನಿವನ ತೋಳ್ಗಳಂ ಬೇಗ ಕ ।
ತ್ತರಿಸು ದಿವ್ಯಾಸ್ತ್ರಮಂ ಪೂಡೆಂದು ತಾಂ ಪಾಂಚಜನ್ಯಮಂ ಪೂರೈಸಲು ॥
ನರನಾ ನುಡಿಗೆ ಮುನ್ನಮೆಚ್ಚು ಕೆಡಪಿದನಾತ ।
ನುರುಭುಜವನೈವೆಡೆಯ ಭುಜಗೇಂದ್ರನಂದದಿಂ ।
ಧರೆಯೊಳ್ ಪೊರಳ್ದುರುಳ್ದುದು ಪೊಯ್ದುದುರೆ ಕೊಂದುದಾಕ್ಷಣಂ ಪರಬಲವನು
॥ ೧೪ ॥

ಒತ್ತೋಳನುತ್ತರಿಸಲೊತ್ತೋಳ ಸತ್ವದಿಂ |
ಮುತ್ತಾತನುರವಣಿಸಿ ಮತ್ತದಂತಿಯ ತೆರದಿ |
ನೊತ್ತಿ ಭರದಿಂ ಪಾರ್ಥನೊತ್ತಿಗೈತರೆ ಕಂಡು ಹರಿ ವಿಜಯನಂ ಜರೆಯಲು ||
ತತ್ತಳಂಗೊಳದೆಚ್ಚು ತತ್ತಳವಿಗೆಯ್ದುನವ |
ನತ್ತರಂ ಧ್ವಜವನರಿಯೆ ನೆತ್ತರಾಗಸಕೆ ಚಿ |
ಮ್ಮಿತ್ತು ರಣದೋಕುಳಿಯ ಮಿತ್ತುವಿನ ಜೀರ್ಕೊಳವಿಯುಗಳ್ವ ಕೆನ್ನೀರೆಂಬೊಲು ||೧೫||

ತೋಳ್ಗಳೆರಡುಂ ಕತ್ತರಿಸಿ ಬೀಳೆ ಮತ್ತೆ ನ |
ಟ್ಟಾಳ್ಗಳ ಶಿರೋಮಣಿ ಸುರಥನಾ ಕಿರೀಟಿಯಂ |
ಕಾಲ್ಗಳಿಂದೊದೆವೆನು ಕೆಡಹುವೆನೆಂದು ಭರದಿಂದೆ ಬೊಬ್ಬಿರಿಯುತ್ತೈತರಲ್ಕೆ |
ಕೋಲ್ಗಳಿಂ ತೊಡೆಗಳಂ ಕತ್ತರಿಸೆ ನಾಂದಿವು ವು |
ಧೂಳ್ಗಳರುಣಾಂಬುವಿಂದೆದೆಯೊಳ್ ತೆವಳ್ದಡಿಯ |
ಪೊಳ್ಗಂಡುಗಲಿ ಧನಂಜಯನ ಸಮ್ಮುಖಕೆ ಮೇಲ್ವಾಯ್ದನವನೇವೇಳ್ವೆನು ||೧೬||

ಆಗ ಮುರಹರನಾಜ್ಞೆಯಿಂದೆಚ್ಚು ಫಲುಗುಣಂ |
ಬೇಗ ಸುರಥನ ಶಿರವನರಿಯಲಾ ತಲೆ ಬಂದು |
ತಾಗಿತತಿಭರದಿಂ ನರನ ವಕ್ಷವಂ ಕಡಹಿತಾ ವರೂಥಾಗ್ರದಿಂದೆ ||
ನೀಗಿದಂ ವರವೆಯಿಂದರಿವಂ ಧನಂಜಯಂ |
ಮೇಗೆ ಕೃಷ್ಣನ ಚರಣಕೈತಂದು ಬಿದ್ದು ಹರಿ |
ರಾಘವ ಜನಾರ್ದನ ಮುಕುಂದ ಯೆನುತಿರ್ದುದಾ ಶಿರಮತಿವಿಕಾಸದಿಂದೆ ||೧೭||

ಶ್ರೀಕರಾಂಬುಜಯುಗ್ಮದಿಂದೆತ್ತಿಕೊಂಡು ಕಮ |
ಲಾಕಾಂತನಾ ಶಿರವನೀಕ್ಷಿಸಿ ಕರುಣದಿಂದೆ |
ಮಾಕಾಶದೆಡೆಯೊಳಿಹ ಗರುಡನಂ ಕರೆದಿತ್ತು ಜವದಿಂ ಪ್ರಯಾಗಕೈದಿ ||
ಈ ಕಪಾಲವನಲ್ಲಿ ಹಾಯ್ಕೆಂದು ಬೆಸಸಲದ |
ನಾ ಖಗೇಶ್ವರನೊಯ್ಯುತಿರೆ ಗಗನಪಥದೊಳ್ ಪಿ |
ನಾಕಿ ಕಂಡಳ್ತಿಯಿಂದಾ ತಲೆಗೆ ಕಳುಹಿದಂ ಭೃಂಗೀಶನಂ ಮುದದೊಳು ೧೮

ಎಲ್ಲಿಗೊಯ್ದಪನೀ ಸುರಥನ ತಲೆಯಂ ಗರುಡ |
ನಿಲ್ಲಿಹುದು ರುಂಡಮಾಲೆಯೊಳಿವನ ಸೋದರನ |
ಸಲ್ಲಲಿತ ಶಿರಮಿದರ ಸಂಗಡಕೆ ಕೊಂಡು ಬಾರೆಂದು ಮದನಾರಿ ಬೆಸಸೆ ||
ನಿಲ್ಲದೈತಂದು ಭೃಂಗೀಶ್ವರಂ ಬೇಡೆ ಖಗ |
ವಲ್ಲಭಂ ಪತಿನಿರೂಪವನೊಮ್ಮೆಯುಂ ವಿಚಾರ್ವ |
ನಲ್ಲೆಂದತಿಕ್ರಮಿಸಿ ನಡೆಯಲಾ ಪಕ್ಷಘಾತದೊಳಾತನಳವಳಿದನು ||೧೯||

ಗರುಡನ ಗರಿಯ ಗಾಳಿಯೊಳ್ ಸಿಕ್ಕಿ ಬೆಂಡಾಗಿ ।
ತಿರುಗಿ ಬಂದಭವಂಗೆ ಭೃಂಗಿಪಂ ಬಿನ್ನೈಸು ।
ತಿರೆ ಕೇಳ್ದು ಗಿರಿಜೆ ನಸುನಗುತೆ ಹರಿವಾಹನನ ಬಲ್ಮೆಯಂ ನೆರೆ ಪೊಗಳ್ದು ॥
ಪಿರಿದಾತನಂ ಜರೆಯೆ ತಲೆವಾಗಿ ಲಜ್ಜಿಸಲ್ ।
ಪುರಹರಂ ಕೃಪೆಯೊಳವನಂ ಮತ್ತೆ ಸಂತೈಸಿ ।
ಕರೆದು ವೃಷರಾಜಂಗೆ ಬೆಸಸೆ ಬೆಂಬತ್ತಿದಂ ಪಕ್ಷೀಂದ್ರನಂ ನಭದೊಳು ॥೨೦॥

ಬೇಗದಿಂದೈದಿ ನಂದೀಶ್ವರಂ ಗರುಡನಂ ।
ಪೋಗದಿರ್ ತಲೆಯನಾಭರಣಕ್ಕೆ ತಾರೆಂದು ।
ನಾಗಭೂಷಣನಟ್ಟಿದಂ ತನ್ನ ನೀಯದೊಡೆ ನಿನಗೆ ಬಹುದುಪಹತಿಯೆನೆ ॥
ಆಗಲದಕೇನಸುರಮರ್ದನನ ಬೆಸದಿಂ ಪ್ರ ।
ಯಾಗದೊಳ್ ಬಿಡುವೆನೀ ಶಿರಮಂ ಬರಿದೆ ಗಾಸಿ ।
ಯಾಗದಿರ್ ತಿರುಗು ನೀನೆಂದು ವಿನತಾಸುತಂ ಸೈವರಿದನಾಗಸದೊಳು ॥೨೧॥

ತ್ರಿಭುವನವನಲ್ಲಾಡಿಸುವ ಗರಿಯ ಗಾಳಿಗಳ ।
ರಭಸದಿಂದೈದುವ ಸುಪರ್ಣನಂ ಹಿಂದಣ ವೃ ।
ಷಭನ ಮುಖದುಚ್ಛ್ವಾಸನಿಶ್ವಾಸಮಾರುತಂ ತಡೆದತ್ತಲತ್ತಲೆಳೆಯೆ ॥
ನಭದೊಳೊಯ್ಯೊಯ್ಯನಾಯಾಸದಿಂ ಪೋಗಿ ದು ।
ರ್ಲಭವೆನಿಸುವಮಲಪ್ರಯಾಗದೊಳ್ ಕಲಿವೋಗರೊ ।
ಳೆಸೆಶೋಭಿಸುವ ಸುರಥಶಿರವನಾ ಗೋಪತಿಗೆ ಕುಡದೆ ಬಿಸುಟಂ ಗರುಡನು ॥೨೨॥

ಆ ಗರುಡನಾ ಶಿರವನಾಪ್ರಯಾಗದ ಜಲದೊ ।
ಳಾ ಗಗನದಿಂದೆ ಬಿಸುಟಾ ಕೃಷ್ಣನಿದ್ದ ಬಳಿ ।
ಗಾಗಿ ತಿರುಗಿದನಾಗಳಾ ತಲೆಯನಲ್ಲಿಂದಮಾ ವೃಷಭನೆತ್ತಿಕೊಂಡು ॥
ಆ ಗಿರೀಶನ ರಾಜಿಪಾ ಸಭೆಗೆ ತಂದು ಕುಡ ।
ಲಾ ಗೋಪತಿಯ ಮೆಚ್ಚುತಾ ರುಂಡಮಾಲೆಗವ ।
ನಾ ಗೌರಿ ಕೊಂಡಾಡಲಾನಂದದಿಂದೆ ನಲಿದಾ ಶಂಕರಂ ತಾಳ್ದನು ॥೨೩॥

ಇತ್ತಲರ್ಜುನಕೃಷ್ಣರಿಂದೆ ಸುರಥಂ ಮಡಿದ ।
ವೃತ್ತಾಂತಮಂ ಕಂಡು ಹಂಸಧ್ವಜಂ ತನ್ನ ।
ಚಿತ್ತದೊಳ್ ಕಡುನೊಂದಳಲ್ದು ಮಿಗೆ ಮರಣಮಂ ನಿಶ್ಚೈಸಿ ರೋಷದಿಂದೆ ॥
ತತ್ತರಣದೊಳ್ ಕಾದಿ ಮುರಹರಂ ಮೆಚ್ಚಲಾ ।
ನುತ್ತಮದ ಗತಿವಡೆವೆನೆಂದು ರಥವೇರಿ ಬಾ ।
ಗೊತ್ತಿ ನಿಜಚಾಪಮಂ ಜೇಗೈದು ಪಡೆಸಹಿತ ಫಲುಗುಣಂಗಿದಿರಾದನು ॥೨೪॥

ಮುಳಿದು ಹಂಸಧ್ವಜಂ ಕಾಳೆಗಕೆ ನಿಲಲಾಗ ।
ನಳಿನಭವನಳ್ಕಿದಂ ಲೋಕಸೃಷ್ಟಿಗೆ ಮೃತ್ಯು ।
ಬಳಲಬೇಕೆಂದು ರವಿಮಂಡಲಂ ನಡುಗಿತೊಡನೈದುವ ಭಟರ ರಭಸಕೆ ॥
ಹಳಿಯಮಿಂದಹುದೆಂದು ಕಂಪಿಸಿತು ಧರೆ ಸಗ್ಗ ।
ವೊಳಲೊಳಗೆ ತೆರಪಿಲ್ಲವೆಂದು ಗಜಬಜಿಸಿ ಸುರ ।
ಕುಲವೈದೆ ಕಂಗೆಟ್ಟುದಸುರಾರಿ ಚಿಂತಿಸಿದನರಸ ಕೇಳದ್ಭುತವನು ॥೨೫॥

ಹಂಸಧ್ವಜಂ ಕಾದಲೆಂತಹುದೊ ಎನುತಮಾ ।
ಕಂಸಾಂತಕಂ ನಿದಾನಿಸಿಕೊಂಡು ಶಕ್ರಸುತ ।
ನಂ ಸೈರಿಸೆನುತೆ ಕುದುರೆಗಳ ವಾಘೆಯನಿಲಿಸಿ ಜಗುಳ್ದ ಪೀತಾಂಬರವನು
ಅಂಸದೊಳ್ ಸಾರ್ಚುತೆ ವರೂಥಮನಿಳಿದು ಸಿಂಹ ।
ಮಂ ಸೋಲಿಸುವ ಗತಿಯೊಳೈತಂದನಾಗತ ।
ನ್ನಂ ಸೇವಿಪರ್ಗೆ ಸೇವಕನೆಂಬುದಂ ತೋರುತಾತನ ಸಮಿಪಕಾಗಿ ॥೨೬॥

ಮಿಸುಪ ಮುಕುಟದ ನೊಸಲ ತಿಲಕದಿಂದಲಕದಿಂ ।
ದೆಸಳುಗಂಗಳ ತೊಳಪ ಕದಪಿನಿಂ ಪವಪಿನಿಂ ।
ಪಸರಿಸುವ ನಸುನಗೆಯ ವದನದಿಂ ರದನದಿಂ ಪೊಳೆವ ಚುಬುಕಾಗ್ರದಿಂದೆ ॥
ತ್ರಿಸರಕೌಸ್ತುಭ ಸುಕೇಯೂರದಿಂ ಹಾರದಿಂ ।
ದೊಸೆದುಟ್ಟ ಪೊಂಬಟ್ಟೆ ಯುಡುಗೆಯಿಂ ತುಡುಗೆಯಿಂ ।
ದೆಸೆವ ನೀಲೋತ್ಪಲಶ್ಯಾಮಲಂ ಕೋಮಲಂ ಬರುತಿರ್ದನವನಿದಿರೊಳು ॥೨೭॥

ರಥದಿಂದಮಿಳಿದು ತನಗಿದಿರಾಗಿ ಬಹ ದನುಜ ।
ಮಥನನಂ ಕಾಣುತೆ ಮರಾಳಧ್ವಜಂ ಮನೋ ।
ವ್ಯಥೆಯೆಲ್ಲಮಂ ಮರೆದು ಹರ್ಷದಿಂ ಪಿಡಿದ ಶರಧನುಗಳಂ ಕೆಲಕೆ ಸಾರ್ಚಿ ॥
ಪೃಥಿವಿಗೆ ವರೂಥದಿಂ ಧುಮ್ಮಿಕ್ಕಿ ಹರಿಯ ಮುಂ ।
ಪಥದೊಳಡಗೆಡೆಯುತೆಲೆ ದೇವ ಬಿಜಯಂಗೈದ ।
ಕಥನವನೆನಗೆ ನಿರೂಪಿಸಬೇಹುದೆಂದಾತನೆದ್ದು ಕೈಗಳ ಮುಗಿದನು ॥೨೮॥

ಆ ಮಹೀಪತಿಯ ನುಡಿಗಸುರಾರಿ ನಗುತೆ ಸಂ ।
ಗ್ರಾಮದೊಳ್ ಪಾರ್ಥನಂ ಗೆಲ್ವೆನೆಂಬೀ ಕ್ಷಾತ್ರ ।
ತಾಮಸಮಿದೇಕೆ ವಿಜಯಂಗಾವು ಮಾಡುವ ಸಹಾಯಮಂ ಕಂಡು ಕಂಡು
ನೀ ಮಕ್ಕಳಂ ಬರಿದೆ ಕೊಲಿಸಿ ಕೆಡಿಸಿದೆ ಸಾಕು ।
ದಾ ಮಿತ್ರಭಾವದಿಂದೆಮ್ಮನಾಲಂಗಿಸು ನೃ ।
ಥಾ ಮನೋವ್ಯಥೆ ಬೇಡ ತುರಗಮಂ ಬಿಡು ಯಜ್ಞಕನುಕೂಲನಾಗೆಂದನು ॥೨೯॥

ಕ್ಷತ್ರಿಯಂ ಬಿರುದಿನ ಹಯಂ ಬರಲ್ಕಟ್ಟದೆ ಧ।
ರಿತ್ರಿಯನದೆಂತಾಳ್ದಪಂ ಬಳಿಕ ಗೆಲ್ದೊಡಂ।
ಶತ್ರುವಿಂದಳಿದೊಡಂ ಕೇಡಾವುದಾತಂಗೆ ಸಾಕದಂತಿರಲಿ ನಿಮ್ಮ॥
ಮಿತ್ರಭಾವದೊಳೊಪ್ಪಿದೊಡೆ ಮೇಲೆ ತನಗಿನ್ನು।
ಪುತ್ರಶೋಕಾದಿಗಳ ದುಃಖಂಗಳಿರ್ದಪುವೆ।
ಚಿತ್ರಮಿದು ಜಾಹ್ನವಿಯೊಳಾಳ್ವಂಗೆ ದಾಹಮೆತ್ತಣದೆನಗೆ ಬೆಸಸೆಂದನು ॥೨೦॥

ಆದೊಡೆಲೆ ನೃಪ ಸಖ್ಯದಿಂದೆಮ್ಮನೀಗ ನೀ।
ನಾದರಿಸಿ ಪಾರ್ಥನಂ ಕಂಡು ಧರ್ಮಜನ ಹಯ।
ಮೇಧಕೆ ಸಹಾಯಮಾಗಿಹುದೆಂದು ಕೃಷ್ಣನವನಂ ತೆಗೆದು ತಕ್ಕೈಸಲು॥
ಕಾದಿ ಮಡಿದಾತ್ಮಜರ ಶೋಕಮಂ ಮರೆದು ಮಧು।
ಸೂದನಂಗೆರಗಿದೊಡೆ ಮಗುಳಪ್ಪಿ ಸಂತೈಸು।
ತಾ ದಯಾಂಬುಧಿ ವಿಜಯನಂ ಕರೆದು ಮೈತ್ರಿಯಿಂದಾತನಂ ಕೂಡಿಸಿದನು ॥೨೧॥

ಅರಸ ಕೇಳ್ ಬಳಿಕುಳಿದ ಸೇನೆಯಂ ಸುತ ಸಹೋ।
ದರ ಬಂಧು ವರ್ಗಮಂ ಸಚಿವ ಸಾಮಂತರಂ।
ಗುರುಪುರೋಹಿತರಂ ಚಮೂಪರಂ ಚತುರಂಗದಗ್ಗಳೆಯ ಪಟುಭಟರನು॥
ಕರೆದು ಹರಿಪಾರ್ಥರಂ ಕಾಣಿಸಿ ನಗರದಿಂದೆ।
ತರಿಸಿದಂ ವಿವಿಧಭಂಡಾರದರ್ಥಂಗಳಂ।
ಪರಿಪರಿಯ ವಸ್ತುಗಳನಿಭ ಹಯ ವರೂಥಮಂ ಗೋ ಮಹಿಷಿ ಯುವತಿಯರನು॥

ಕಡೆಯುಮಾತೇನವಂ ಸಪ್ತಪ್ರಕೃತಿಗಳಂ।
ತಡೆಯದೆಲ್ಲವನಿವರ್ಗೊಪ್ಪಿಸಿದನಾ ನಗರ।
ದೆಡೆಯೊಳೈದಿರುಳಿರ್ದು ಹಂಸಧ್ವಜಂ ಸಹಿತ ಪಾರ್ಥನಂ ತುರುಗದೊಡನೆ॥
ಪಡೆಯ ಸನ್ನಾಹದಿಂ ಕಳುಹಿ ಮುಂದಕೆ ಹಯಂ।
ನಡೆಯಲಲ್ಲಿಯ ವಸ್ತುಗಳ್ವೆರಸಿ ದೇವಪುರ।
ದೊಡೆಯ ಲಕ್ಷ್ಮೀವರಂ ಗಜನಗರಿಗೈತಂದು ಭೂಪಾಲನಂ ಕಂಡನು ॥೨೨॥

ಹದಿನೈದನೆಯ ಸಂಧಿ.

ಸೂಚನೆ ॥ ತಣ್ಣ ದಿರನನ್ವಯದ ಪಾರ್ಥನ ತುರಂಗಮದು ।
ಪೆಣ್ಣುದುರೆಯಾಗಿ ಪೆರ್ಬುಲಿಯಾಗಿ ಪಳಿಯಂತೆ ।
ಕಣ್ಗೊಳಿಸುವಮರಾಶ್ವಮಾಗಿ ಯಾಶ್ಚರ್ಯದಿಂ ಸ್ತ್ರೀರಾಜ್ಯಮಂ ಪೊಕ್ಕುದು ॥

ವಿಸ್ತರಿಪೆನಿನ್ನು ಮೇಲ್ಗತೆಯನಾಲಿಸು ನೃಪರ ।
ಮಸ್ತಕದ ಮೌಳಿ ಜನಮೇಜಯ ಧರಾನಾಥ ।
ಹಸ್ತಿನಾಪುರಕೆ ಬಂದಸುರಾರಿ ಹಂಸಧ್ವಜನ ದೇಶದಿಂದೆ ತಂದ ॥
ವಸ್ತುಗಳನವನಿಪತಿಗೊಪ್ಪಿಸಿದನಲ್ಲಿಯ ಸ ।
ಮಸ್ತವೃತ್ತಾಂತಮಂ ವಿವರಿಸಿದನಿತ್ತ ಸುಭ ।
ಟಸ್ತೋಮಸಹಿತಜರ್ಜುನಂ ಬಡಗಮುಂತಾಗಿ ತಿರುಗಿದಂ ತುರಗದೊಡನೆ ॥ ೧ ॥

ಅಲ್ಲಿಂದ ಮುಂದೆ ನಡೆದುದು ಗ್ರೀಷ್ಮಕಾಲದೊಳ್ ।
ಸಲ್ಲಲಿತವಾಜಿ ಪಾರಿಪ್ಲವಕೆ ಭೂತಲದೊ ।
ಳೆಲ್ಲಿಯುಂ ಕೆರೆತೊರೆಗಳೊರತೆ ಬತ್ತುವು ನೀರ್ನೆಳಲ್ಗನರಸಿ ಪಾಂಥರು ॥
ಘಲ್ಲಿಸುವ ಬೇಸಗೆಯ ಬಿಸಿಲಿಂದೆ ಮೂಜಗಂ ।
ತಲ್ಲಣಿಸಿತಿಳೆಯ ಕಾಹಿಳಿದು ಪಾತಾಳದಹಿ ।
ವಲ್ಲಭನ ಪಡೆವಣಿಯ ರುಚಿಗಳಾತಪದಂತೆ ಕಾಣಿಸದೆ ಮಾಣವೆನಲು ॥ ೨ ॥

ಒಂದುಕಡೆಯೊಳ್ ಸೋವಲೊಂದುಕಡೆಯೊಳ್ ತಮಕೆ ।
ನಿಂದು ಮರೆಯಾಗಿಪ್ಪುದಿನ್ನಿದಂ ಕರಗಿಸುವೆ ।
ನೆಂದು ಕನಕಾಚಲವನುರಿಪುವನೊ ತರಣಿ ಕಿರಣದೊಳೆನೆ ಬಿಸಲ್ಗರೆಯಲು ॥
ಬೆಂದು ಬೆಂಡಾಗಿ ಕುಲಶೈಲಂಗಳಾಸರಿಂ ।
ಕಂದರದ ಮೊಗದಿಂದೆ ಬಿಡುವ ಬಿಸುಸುಯ್ಯೆಲರ್ ।
ಬಂದಪುದೆನಲ್ಕೆ ಝುಳದಿಂ ಬಿಡದೆ ಬೀಸುತಿರ್ದುದು ಗಾಳಿ ಬೇಸಗೆಯೊಳು ॥ ೩ ॥

ಅವನಿಯೊಳ್ ಸಕಲ ಭೂಭೃತ್ಕುಲದ ಸೀಮೆಗಳ ।
ನವಗಡಿಸಿ ಪೊಕ್ಕು ನಿಖಿಳಪ್ರಾಣಿಗಳ್ಗೆ ತಾ ।
ಪವನೊದವಿಸುವ ದುರ್ಧರ ಗ್ರೀಷ್ಮರಾಜನ ನೆಗಳ್ದ ಚತುರಂಗಮೆನಲು ॥
ರವಿಯ ಕಡುಗಾಯ್ಪುಗಳ್ ತೇರ್ಕೈಸಲೊತ್ತರಿಸಿ ।
ಕವಿದುವು ಬಿಲ್ಗುದುರೆಗಳ್ ಕಾಯ್ದರಿಯ ಕರಿಗ ।
ಳವಧಿಯಿಲ್ಲದೆ ಮುಸುಕಿದುವು ಬಹಳ ತರುಗಳಿತ ದಳದಳಾಳಿಗಳಿಡಿದುವು ॥ ೪ ॥

ಅರವಟ್ಟಿಗೆಯೊಳಿರ್ದು ನೀರೆರೆವ ತರಳೆಯರ ।
ಬರಿವೇಟಕೆಳಸಿ ತಪಿಸುವ ಪಥಿಕರಂ ಒಯ್ಯ ।
ಲ್ದೊರೆಗಾಸೆಯಿಂ ಪರಿದು ಬಳಲುವ ಮೃಗಗಳಂ ಕರುಪಾಡದೊಳ್ ದಳದೊಳು ॥
ಉರುವ ಕಾಂತೆಯರ ಕೂಟದ ಸೊಕ್ಕುದಕ್ಕೆಯೊಳ್ ।
ಮಿರುಗುವಧರಾಮೃತವನೀಂಟಿ ಸೊಗಸುವ ಸುಖಿಗ ।
ಳುರೆ ಜರೆವ ತನಿವೇಸಗೆಯ ದಿನದೊಳಧ್ವರಾಶ್ವದ ಕೂಡೆ ಪಡೆ ನಡೆದುದು ॥ ೫ ॥

ಅನುಸಾಲ್ವ ಪ್ರದ್ಯುಮ್ನ ವೃಷಕೇತು ಯೌವನಾ ।
ಶ್ವನ ತನಯ ನೀಲಧ್ವಜರ್ ನಸಂಗಿವರ್ರೈವ ।
ರನುವರ್ತಿಗಳ್ ಬಳಿಕ ಹಂಸಧ್ವಜನ ಸಖ್ಯವಾದುದದಕಿಮ್ಮಡಿಯೆನೆ ॥
ತನತನಗೆ ಮುಂಕೊಂಡು ನಡೆದುದಾ ತುರಗದೊಡ ।
ನನಿಬರ ಚತುರ್ಬಲಂ ಬಹಳ ಗಿರಿ ಪುರ ದೇಶ ।
ವನ ಪಳ್ಳ ಕೊಳ್ಳಂಗಳಂ ತುಳಿದು ಕಣದ ಘಟ್ಟಣೆಯಂತೆ ಸಮಮಾಗಲು ॥ ೬ ॥

ಹಯಮುತ್ತರಾಭಿಮುಖವಾಗಿ ಪಾರಿಪ್ಲವ ಧ ।
ರೆಯೊಳೈದಿ ಪೆಣ್ಗುದುರೆಯಾಗಿ ಪುಲಿಯಾಗಿ ವಿ ।
ಸ್ಮಯದಿಂದೆ ಪಾರ್ಥನಂ ಬೆದರಿಸಿ ಮುರಾರಿಯ ಮಹಿಮೆಯಿಂದೆ ಮುನ್ನಿನಂತೆ ॥
ನಿಯಮಿತಮಖಾಶ್ವಮಾದತ್ತೆನಲ್ಕಾಗ ಸಂ ।
ಶಯದಿಂದೆ ಜನಮೇಜಯಂ ಮುನಿಪ ತಿಳಿಪು ನಿ ।
ಶ್ಚಯವನೀ ತುರಗಪಿಂತಾದ ಕಥನವನಿಂದು ಬೆಸಗೊಂಡೊಡಿಂತೆಂದನು ॥ ೭ ॥

ಧರಣಿಪತಿ ಕೇಳಾದೊಡಿನ್ನು ಪೂರ್ವದೊಳಿಂದು ।
ಧರನಂ ಮನೋಭಾವದಿಂದರ್ಚಿಸುವೆನೆಂದು ।
ಗಿರಿತನುಜೆ ತಪಕೆ ಪುಣ್ಯಾರಣ್ಯಮಾವುದೆಂದರಸಿಕೊಂಡೈತರಲ್ಕೆ ॥
ಪರಿಶೋಭಿಸಿತು ಮುಂದೆ ಹಂಸ ಕಾರಂಡ ಮಧು ।
ಕರ ಕೋಕ ಮಧುರ ಮೃದುತರ ಕಲಮದೋತ್ಕರ ।
ಸ್ವರ ಕಮಲ ಕುವಲಯ ವಿರಾಜಿತಶ್ರೀಕರಂ ಪದ್ಮಾಕರಂ ಚೆಲ್ವೆನೆ ॥ ೮ ॥

ಲಸದಮಲರತ್ನ ಸೋಪಾನದಿಂ ಮೀನದಿಂ ।
ಬಿಸವನಾಸ್ವಾದಿಸುವ ಚಕ್ರದಿಂ ನಕ್ರದಿಂ ।
ದೆಸೆದೆಸೆಗೆ ಬೀರ್ವ ತನಿಗಂಪಿನಿಂ ತಂಪಿನಿಂ ತೊಳಪ ಹಿಮಕರಕಾಂತದ ॥
ಪೊಸಸಣ್ಣಿಗೆವೊಲಡಿದ ಪುಳಿನದಿಂ ನಳಿನದಿಂ ।
ದೊಸೆದು ಬಿನದಿಪ ಹಂಸಕೇಳಿಯಿಂದೋಳಿಯಿಂ ।
ದೆಸೆವ ನೀರ್ವಕ್ಕಿಗಳ ಸಂಗದಿಂ ಭೃಂಗದಿಂದಾಕೊಳಂ ಕಣ್ಗೆಸೆದುದು ॥ ೯ ॥

ತಳದೆಳೊಪ್ಪುವ ಪಸುರೆಸಳ ರೋಚಿಯಿಂ ನಡುವೆ ।
ತೊಳಪ ಕೆಂದಳದ ದೀಧಿತಿಯಿಂದೆ ಮೇಲೆ ಕಂ ।
ಗೊಳಿಪ ಹೊಂಗೇಸರದ ಕಾಂತಿಯಿಂದೆರಗುವ ಸಿತಾಳಿಯ ಮರೀಚಿಯಿಂದೆ ॥
ಹೊಳೆಹೊಳೆವ ಕೋಕನದ ಪಂಜ್ಕ್ತಿಗಳ ಬಣ್ಣಮು ।
ಜ್ವಲದಿಂದ್ರಚಾಪದಾಕಾರಮಂ ಸಂತತಂ ।
ಪಳಿವಂತೆ ಕೊಳದೊಳಾರಾಜಿಸಿತು ತುಹಿನ ಗಿರಿ ರಾಜ ನಂದನೆಯ ಕಣ್ಗೆ ॥೧೦॥

ನಿರುತಂ ಕುಮುದಶೋಭಿ ನೈರುತ್ಯದಂತೆ ವಾ ।
ನರಸೈನ್ಯದಂತೆ ಕಮಲೋದರೋದ್ಭಾಸಿ ಭಾ ।
ಸುರ ಶುಕ್ಲಪಕ್ಷದಂತಹಿತಲ್ಪದಂತೆ ಕಪಿಸೇವಿತಂ ಗಗನದಂತೆ ॥
ಧರಣಿಪಾಲಯದಂತೆ ಸುಮನೋಹರಂ ನಿಶಾ ।
ಚರವಂಶದಂತೆ ಮಾಲಾಕಾರಜನದಂತೆ ।
ಹರಿಜನ್ಮಭೂಮಿ ಗೋಕುಲದಂತೆ ವನದಂತೆ ತತ್ಸರಂ ಕಂಗೊಳಿಸಿತು ॥೧೧॥

ವನಮಾಲಿಯಂದದಿಂ ಪದ್ಮಿ ಪದ್ಮಿಯವೋಲ್ ಭು ।
ವನಕುಕ್ಷಿ ಭುವನಕುಕ್ಷಿಯ ತೆರದೆ ಹಂಸಲೋ ।
ಚನಶೋಭಿ ಹಂಸಲೋಚನಶೋಭಿಯಂತೆ ವರಚಕ್ರಿ ವರಚಕ್ರಿಯವೋಲು ॥
ಅನಿಮಿಷಾಶ್ರಯಮೂರ್ತಿಯನಿಮಿಷಾಶ್ರಯಮೂರ್ತಿ ।
ಯೆನೆ ಕುವಲಯಾಧಾರಿ ಕುವಲಯಾಧಾರವೋಲ್ ।
ವನಮಾಲಿಯೆನಿಸಿ ರಂಜಿಸುವ ಕಾಸಾರಮಂ ಸರ್ವಮಂಗಳೆ ಕಂಡಳು ॥೧೨॥

ಅಳಿಯ ವರ್ಗವನಾದರಿಸುತೆ ಮಿತ್ರಸ್ನೇಹ ।
ದೊಳೆ ಸಂದು ಸುತರಂಗಲೀಲೆಯಿಂ ಲಾಲಿಸುತೆ ।
ಕುಲಸದಭ್ಯುದಯಮಂ ನೆಲೆಗೆಯ್ದು ಕಾಂತನುಕೂಲರಮಣೀಯಮಾಗಿ ॥
ಲಲಿತ ಲಕ್ಷ್ಮೀನಿವಾಸ ಸ್ಥಾನಮೆನಿಸಿ ಮಂ ।
ಗಳವಿಭವಕೆಡೆಗೊಟ್ಟು ಸಕಲಸೌಭಾಗ್ಯಮಂ ।
ತಳೆದ ಸಾಂಸಾರಿಕನ ತೆರದಿಂಡೆ ವಿಮಲಪದ್ಮಾಕರಂ ಕಣ್ಗೆಸೆದುದು ॥೧೩॥

ಕಳಹಂಸಮಾಕೀರ್ಣಮಾಗಿರ್ದು ಕಾಳೆಗದ ।
ಕಳನಲ್ಲ ವಿಷಭರಿತಮಾಗಿರ್ದು ಸರ್ಪಸಂ ।
ಕುಳಮಲ್ಲ ಕುಮುದಯುತಮಾಗಿರ್ದು ಖಳರಂತರಂಗದಾಳಾಪಮಲ್ಲ ॥
ಅಳಿದುಳಿದು ಭಂಗಮಯಮಾಗಿರ್ದು ಮುರಿದ ನೃಪ ।
ದಳಮಲ್ಲ ಬಹುವಿಚಾರಸ್ಥಾನಮಾಗಿರ್ದು ।
ತಿಳಿಯಲ್ಕುಪದ್ರವಸ್ಥಳಮಲ್ಲಮೆನಿಸಿರ್ದುದಾ ವಿಮಲಸರಸಿ ಕಣ್ಗೆ ॥೧೪॥

ಆ ಸರಸ್ತಟದಲ್ಲಿ ಕಲ್ಪಿಸಿದಳಾಶ್ರಮ ನಿ ।
ವಾಸಮಂ ಭಕ್ತಿಯಿಂ ಭಜಿಸಿದಳ್ನಗೇಂದ್ರಜೆ ಸು ।
ಧಾಸೂತಿಮೌಳಿಯುಂ ಮೆಚ್ಚಿದಂ ಶಂಭು ವರಮಂ ಕೊಟ್ಟನಿಲ್ಲಿ ನಿನ್ನ ॥
ಮೀಸಲ ತಪಕ್ಕೆಡರ್ ಬಾರದಿರಲೆಂದು ಬಳಿ ।
ಕೋಸರಿಸದಲ್ಲಿ ಚಿರಕಾಲಮಿರುತಿರ್ದಳು ।
ಲ್ಲಾಸದಿಂ ಧೂರ್ಜಟಿಯ ರಾಣಿ ಯೋಗಿನಿಯೊ ತಾನೆಂಬ ತೆರದಿಂ ಬನದೊಳು ॥೧೫॥

ಇಂದುಮೌಳಿಯ ಪದಧ್ಯಾನಮಂ ಮಾಡುವಾ ।
ನಂದಮಿನ್ನೆತಿರತಶಯವೋ ಶಿವನರೆಮೈಯೊ ।
ಳೊಂದಿರ್ದಸೌಖ್ಯಮಂ ಮರೆದು ಪಾರ್ವತಿ ತಪಸ್ವಿನಿಯಾಗಿ ತಿಳಿಗೊಳದೊಳು ॥
ಮಿಂದನುದಿನಂ ಜಪ ತಪೋನಿಯಮ ಯೋಗಂಗ ।
ಳಿಂದೆ ಭಜಿಸಿದಳಂತರಾತ್ಮನಂ ಸಕಲಸುರ ।
ವೃಂದವಂದಿತ ಪಾದಪದ್ಮನಂ ಸುಜ್ಞಾನಸದ್ಮನಂ ಕಾನನದೊಳು ॥೧೬॥

ಬೀಸದು ಬಿರುಸುಗಾಳಿ ಬಿಸಿಯ ಬಿಸಿಲವನಿಯಂ ।
ಕಾಸದು ದವಾಗ್ನಿ ಫಲ್ಗುಳೊಳೊಂದನಾದೊಡಂ ।
ಬೇಸದು ಮುಗಿಲ್ಗಳತಿಭರದಿಂ ಸಿಡಿಲ್ಮಿಂಚುಗಳ್ ಕೂಡೆ ಪೆರ್ಮಳೆಯನು ॥
ಸೂಸದು ತಳೆದ ಪೂತಳಿರ್ಗಳಿಂಪಿನ ಸೊಂಪು ।
ಮಾಸದು ತರುಗಳಲ್ಲಿ ಪರ್ಣಾಯುಗ್ಗಳಂ ಬೀಯ ।
ಲೀಸದು ಸಮಸ್ತಋತುಸಮಯಂಗಳಚಲೇಂದ್ರ ತನುಜೆ ತಪಮಿರೆ ಬನದೊಳು ॥

ಅಂಚೆಗಳುಡುಗವು ಮಳೆಗಾಲದೊಳ್ ಕೋಗಿಲೆಗ ।
ಳಿಂಚರವನುಳಿದಿರವು ಮಾಗಿಯೊಳ್ ಬೇಸಗೆಯೊ ।
ಳುಂ ಚಿಗುರಿದೆಳವುಲ್ ಮೃಗಂಗಳ್ಗೆ ಬೀಯದಗಲದು ಚಕ್ರಮಿಥನಮಿರುಳು ॥
ಹೊಂಚದು ಪಗಲ್ ಗೂಗೆ ಸಂಪಗೆಯ ಲರ್ಗಳಂ ।
ಚಂಚರೀಕಂಗಳಡರದೆ ಮಾಣವೆಸೆವಕಮ ।
ಲಂ ಚಂದ್ರನುದಯಕುತ್ಪಲಮಿನಕಿರಣಕೆ ಬಾಡದು ಬನದೊಳುಮೆ ಯಿರಲ್ಕೆ ॥೧೮॥

ಕಾಡಾನೆಗಳ್ ಕೇಸರಿಗಳ ಮರಿಗಳ್ಗೆ ಮೊಲೆ ।
ಯೂಡುವುವು ಪುಲ್ಲೆಗಳ್ ಪೆರ್ಬುಲಿಗಳೊಳ್ ಸರಸ ।
ವಾಡುವುವು ಪಾವು ಮುಂಗುಲಿಗಳೊಡಗೂಡುವುವು ಮೂಷಕಂ ಮೇಲೆ ಬಿದ್ದು ॥
ಕಾಡುವುವು ಮಾರ್ಜಾಲಮಂ ಮೊಲಂ ತೋಳನಂ ।
ಬೇಡುವುವು ಮೇವುಗಳನೊಂದುಬಳಿಯೊಳ್ ಗೂಡು ।
ಮಾಡುವುವು ಪದ್ದು ಕಾಗೆಗಳೆಂತೊ ಸಾತ್ವಿಕಮಪರ್ಣೆಯ ತಪೋವನದೊಳು ॥೧೯॥

ಪರಿಚರ್ಯೆಯಂ ಮಾಡುವುವು ಕೋಡಗಂಗಳಿ ।
ರ್ದರಗಿಳಿಗಳಾಡುವುವು ಕೂಡೆ ಸರಸೋಕ್ತಿಯಂ ।
ಬರಿಕೈಗಳಂ ನೀಡಿ ಪಣ್ಗಾಯಲರ್ಗಳಂ ದಂತಿಗಳ್ ಕುಡುತಿರ್ಪುವು ॥
ಪಿರಿದು ಬಯಸಿದ ವಸ್ತುಗಳನಿತ್ತಪುವು ಕಲ್ಪ ।
ತರುಗಳೆಡೆಯಾಟದಾನರ್ಗಳಂ ಕಳೆದಪುವು ।
ಪರಿಮಳದಲರ್ಗಳಗಜೆಯ ತಪೋವನದೊಳಾವಾಸಮಾಗಿರ್ಪವರ್ಗೆ ॥೨೦॥

ಅಷ್ಟಯೋಗಿನಿಯರಣಿಮಾದಿಗಳ್ ವಿನುತ ಚೌ ।
ಷಷ್ಟಿಕಲೆಗಳ್ ಸಪ್ತಮಾತೃಗಳ್ ಜಗದೊಳು ।
ತ್ಕೃಷ್ಟನದಿಗಳ್ ದಿವಾರಾತ್ರಿಗಳ್ ತಿಥಿತಾರಕಾಪ್ಸರೋವಿಸರಂಗಳು ॥
ತುಷ್ಟಿ ದಯೆ ಪುಷ್ಟಿ ಧೃತಿ ಮತಿ ಶಾಂತಿ ದಾಂತಿ ಕೃತಿ ।
ನಿಷ್ಠೆ ನುತಿಗಳ್ ಸಕಲವರಮಂತ್ರಶಕ್ತಿಗಳ್ ।
ಸೃಷ್ಟಿಯ ಸಮಸ್ತಾಭಿಮಾನದೇವತೆಯಿರಿರ್ದರು ದೇವಿಯಂ ಸೇವಿಸಿ ॥೨೧॥

ಆ ವನದೊಳೆಸಗಿದಳ್ ಪಾವನಚರಿತ್ರನ ಕೃ ।
ಪಾವನಧಿಯ ವಿಶ್ವಸಂಭಾವನನ ಭಕ್ತಸಂ ।
ಜೀವನನ ತ್ರಿಜಗಮಂ ಕಾವನ ಸುಮಾಭಿತವನೀವನ ಹಿಮಾಂಶುಧರನ ॥
ದೇವ ನರ ನಾಗ ದೈತ್ಯಾವನತ ಪಾದರಾ ।
ಜೀವನ ಭವಾಂಭೋಧಿನಾವನ ದುರಿತ ವಿಪಿನ ।
ದಾವನ ಕಲಿತ ವಿಷಗ್ರೀವನ ಶಿವನ ಮಹಾದೇವನ ಭಜನೆಯನಗಜೆ ॥೨೨॥

ನಿಜನಿರ್ಮಲಿತರೂಪನಂ ಪೂರ್ವಪೂರ್ವನಂ ।
ಗಜ ದಾನವ ಧ್ವಂಸಿಯಂ ಕಾಲಕಾಲನಂ ।
ರಜನೀಶ ಕೋಟೀರನಂ ಭಕ್ತಭಕ್ತನಂ ಬಹಳ ತೇಜೋಮಯನನು ॥
ಅಜಿನಾಂಬರನನಖಿಳದಿಕ್ಪಾಲ ಪಾಲನಂ ।
ಭುಜಗ ಧರನಂ ಸಖೀಕೃತ ರಾಜ ರಾಜನಂ।
ಸುಜನರಕ್ಷಾ ಶೀಲನಂ ದೇವದೇವನಂ ಭಜಿಸಿದಳಗಜೆ ಬನದೊಳು ॥೨೩॥

ಅಗುರು ಚಂದನ ಸುಗಂಧಾಕ್ಷತೆಯ ಪರಿಮಳದ ।
ಬಗೆಬಗೆಯ ಬಿರಿಮುಗಳ ಮಂಜರಿಯ ಗುಗ್ಗುಳದ ।
ಪೊಗೆಯ ಧೂಪದ ಬಹಳವರ್ತಿಗಳ ಕರ್ಪೂರ ನೀರಾಜನದ ಕಂಪಿನ ॥
ಬಗುಮಿಗೆಯ ವಿವಿಧೋಪಹಾರದ ಸುವಾಸಿತದ ।
ಮೊಗವಾಸದಮಲ ತಾಂಬೂಲದ ಪರಿಕ್ರಮದ ।
ಸೊಗಸಿನ ಕೃತೋಪಚಾರಂಗಳಿಂದರ್ಚಿಸಿದಳಭವನಂ ಕಾತ್ಯಾಯಿನಿ ॥೨೪॥

ಮೋಕ್ಷದಾಯಕಿ ಸಕಲಮಂತ್ರನಾಯಕಿ ಮಾಯೆ ।
ಸಾಕ್ಷಾಜ್ಜಗನ್ಮಾತೆ ನಿಜಶಕ್ತಿ ತಾನೆಂಬ ।
ದಾಕ್ಷಾಯಣಿಗೆ ತಪಮಿದೇಕೆಂದು ಪಂಕಜಭವಾದಿ ನಿರ್ಜರಮುಖ್ಯರು ॥
ಆಕ್ಷೇಪಿಸಲ್ಕೆ ವಿಪಿನದೊಳಿಂತು ಬಿಡದೆ ಭಾ ।
ಳಾಕ್ಷನಂ ಧ್ಯಾನಿಸುತೆ ಗಿರಿಜೆಯಿರ್ಪಿರಲೋರ್ವ ।
ರಾಕ್ಷಸಂ ಕಾಂತಾರಮಂ ತಿರುಗುತ್ತೈತಂದು ಕಂಡನಾ ಪಾರ್ವತಿಯನು ॥೨೫॥

ಹೈಮವತಿಯಂ ಕಾಣುತಭಿವಂದಿಸದೆ ಖಳಂ ।
ಕೈಮಾಡುವಂಗಜನ ಪೂಗೋಲ ಗಾಯದಿಂ ।
ಮೈಮರೆದು ಕಾತರಿಸಿ ಬಂದುಗೆಟ್ಟೆದೆಯಾರಿ ಬೇಟದ ಕಟಕಿಗಳಿಂದೆ ॥
ಐಮೊಗನ ರಾಣಿಯಂ ನುಡಿಸಿದೊಡೆ ಭೂಪ ಕೇ ।
ಳ್ಮೈ ಮುಳಿದು ನೋಡಿದಳ್ ಭುವನಮಾತೆಯ ಖತಿಯು ।
ವೈಮನಸ್ಯದೊಳುಳಿವರಾರಸುರನುರಿದು ಪೋದಂ ಕೂಡೆ ಬೂದಿಯಾಗಿ ॥೨೬॥

ಬೆಂದುಪೋದಂ ದಾನವಂ ಬಳಿಕ ದೇವಿ ಖತಿ ।
ಯಿಂದ ನುಡಿದಳ್ ಶಾಪರೂಪದಿಂದೀ ವನ ।
ಕ್ಕಿಂದು ಮೊದಲಾಗಿ ಪುರುಷಪ್ರಾಣಿಗಳೊಳ್ ಪೊಕ್ಕೊಡಾಗಲೇ ಸ್ತ್ರೀತ್ವಮವಕೆ ॥
ಬಂದು ಸಮನಿಸಲಿ ತನ್ನಾಜ್ಞೆ ತಪ್ಪದೆ ನಡೆಯ ।
ಲೆಂದು ಸಕಲ ಸ್ಥಾವರಾಧಿದೇವತೆಯರೊಡ ।
ನಂದು ಸಾರಿದಳಲ್ಲಿ ಚಿರಕಾಲಮಿರ್ದು ಪೂರೈಸಿದಳ್ ಕಲ್ಪಿತವನು ॥೨೭॥

ತನ್ನನರ್ಚಿಸಿದರ್ಗಭೀಷ್ಟಮಂ ಕುಡುವ ಸಂ ।
ಪನ್ನೆ ವರಗೌರಿ ತಪದಿಂದೊಲಿಸಲೀಶಂ ಪ್ರ ।
ಸನ್ನನಾದಂ ಕೆಲವುಕಾಲದಿಂ ಮೇಲೆ ಬಿಜಯಂಗೈದಳುತ್ಸವದೊಳು ॥
ಉನ್ನತದ ಕೈಲಾಸಗಿರಿ ಶಿಖರಕಂದುಮೊದ ।
ಲಿನ್ನುಮಾ ವನಕೆ ಪೊಕ್ಕೊಡೆ ಗಂಡು ಪೆಣ್ಣಹುದು ।
ಪನ್ನಗ ಮೃಗಾದಿ ಪಶು ಪಕ್ಷಿಗಳ್ ಮುಂತಾದ ಜಂತುಜಾಲಂಗಳೆಲ್ಲ ॥೨೮॥

ರಾಜೇಂದ್ರ ಕೇಳಾಗಳಾ ವನಕೆ ಪೊಕ್ಕಲ್ಲಿ ।
ರಾಜಿಸುವ ತಿಳಿಗೊಳದ ನೀರ್ಗುಡಿದು ಫಲುಗುಣನ ।
ವಾಜಿ ಪೊರಮಟ್ಟು ಬಂದಾಗಳದು ಪೆಣ್ಕುದುರೆಯಾಗಿರ್ದುದೇವೇಳ್ವೆನು ॥
ಸೋಜಿಗಮಿದೆಂದು ಸೈವೆರಗಾಗುತಿರ್ದುದೆ ।
ಲ್ಲಾ ಜನಂ ಪಾಂಡವಂ ಕಂಡು ಶಿವಶಿವ ಪೊಸತ ।
ಲಾ ಜಗದೊಳೀಕಥನಮೆಂದು ವಿಸ್ಮಿತನಾಗಿ ಕೃಷ್ಣನಂ ಧ್ಯಾನಿಸಿದನು ॥೨೯॥

ಎಣಿಕೆಗೊಳುತಿರ್ದನಾ ಪಾರ್ಥನಂದಿತ್ತ ಹಿಂ ।
ದಣ ಕೃತಯುಗದ ಮೊದಲ ಕಾಲದೊಳ್ ಸಕಲ ಧಾ ।
ರಿಣಿಯ ತೀರ್ಥಂಗಳಂ ಬಳಸಿ ಬರುತಕೃತವ್ರಣಾಖ್ಯ ಭೂಸುರನೋರ್ವನು ॥
ಪ್ರಣುತ ಸಲಿಲ ಸ್ನಾನಕೊಂದು ಸರಕಿಳಿದು ವಾ ।
ರುಣಮಂತ್ರಮಂ ವಾರಿಯೊಳ್ ಜಪಿಸುತಿರ್ದನಾ ।
ಕ್ಷಣದೊಳವನಂಘ್ರಿಯಂ ಬಂದು ಪಿಡಿದುದು ನೆಗಳ್ ಬಿಗಿದು ದಂತಂಗಳಿಂದೆ॥೨೦॥

ತನ್ನ ಕಾಲ್ವಿಡಿದು ನಡುನೀರ್ಗೆಳೆವಜಂತುವಿದು ।
ಪನ್ನಗನೋ ಮೇಣಸುರವಾಯೆಯೋ ಜಲದೊಳು ।
ತ್ಪನ್ನಮತ್ಸ್ಯವೊ ಮಹಾಗ್ರಾಹವೋ ಶಿವಶಿವಾ ದುಸ್ಸ್ವಭಾವಿತವಾಯ್ತಲಾ ॥
ಇನ್ನಿದಕುಪಾಯಮೇನೆಂದು ಚಿಂತಿಸಿ ವಿಪ್ರ ।
ನುನ್ನತ ತಪೋಬಲದೊಳಂಘ್ರಿಯಂ ಬಿದಿರಲ್ಕೆ ।
ಭಿನ್ನಿಸದೆ ಬಿಗಿದಿರ್ದ ಬಲ್ಮೆಗಳ ದಂತಂಗಳುಡಿದುವದನೇನೆಂಬೆನು ॥೨೧॥

ಮಡುವಿನೊಳು ಮಡವಿಡಿದ ನೆಗಳಂ ಬಲಾತ್ಕರಿಸಿ ।
ಬಿಡಿಸಿಕೊಂಡೊಡವುರಿದು ತಡಿಗಡರಿ ಕೋಪದಿಂ ।
ನುಡಿದನುದಕಸ್ಥಮಾಗಿರ್ದ ದೇವತೆಗಳ್ಗೆ ದುಷ್ಟಭಾವದ ಜಲವಿದು ।
ಕಡುಭಯಂಕರದಿಂದೆನಗೆ ತೋರಿತವರಿಂದ ।
ಪೊಡವಿಗತಿಭೀತಿಯಂ ಮಾಡುವಂತಿಲ್ಲ ನೀ ।
ರ್ಗುಡಿದ ಜೀವಿಗಳಿನ್ನು ಪುಲಿಯಾಗಲಿಂದುವೊದಲೆಂದು ಮುನಿ ಶಾಪಿಸಿದನು ॥

ಎಂದಾದುದಕೃತವ್ರಣನ ಶಾಪವಾ ಸರಿಸಿ ।
ಗಂದುಮೊದಲಾಗಿ ಭೀಕರವೆನಿಸುತಿರ್ಪುದಿಳೆ ।
ಗೊಂದುಜೀವಿಗಳುಮುದಕಮನೊಲ್ಲವದರೊಳುಗ್ರವ್ಯಾಘ್ರಮಪ್ಪಭಯಕೆ ॥
ಅಂದು ಪೆರ್ಗ್ಗದುರೆ ಯಾಗಿರ್ದ ವಿಜಯನ ವಾಜಿ ।
ಬಂದು ಕೊಳನಂ ಪೊಕ್ಕು ನೀರ್ಗುಡಿದು ಪುಲಿಯಾಗಿ ।
ಮುಂದುಗೆಡಿಸಿತು ಮತ್ತೆ ಫಲುಗುಣಂ ಕಂಡು ವಿಸ್ಮಿತನಾಗಿ ಚಿಂತಿಸಿದನು ॥೨೩॥

ನೃಪನ ಹಯ ಪೋದವಿನ್ನೆಂತಕುದೊ ನಾಂಜಗದೊ ।
ಳಪಹಾಸಕೆಡೆಯಾದುದಾರ ಶಾಪದ ಫಲವೊ ।
ವಿಪರೀತಮಿದು ಶಿವಶಿವಾಯೆನುತ ನಡುನಡುಗಿ ಪಾರ್ಥನತಿಭೀತಿಯಿಂದೆ ॥
ಕಪಟದೊಳ್ ಪಿಂತೆ ದುರ್ಯೋಧನಾದಿಗಳೆಸಗಿ ।
ದುಪಹತಿಗಳಂ ತೆಗೆಸಿ ತಲೆಗಾಯ್ದ ಲೈ ಕೃಷ್ಣ ।
ಕೃಪೆಮಾಡಬೇಕುದೆನಗೆಂದು ಮುರವೈರಿಯಂ ನೆನೆದು ಚಿಂತಿಸುತಿರ್ದನು ॥೨೪॥

ಭಯನಿವಾರಣ ಸಕಲಸೃಷ್ಟಿಕಾರಣ ಜಗ ।
ನ್ಮಯ ಜನಾರ್ದನ ದುಷ್ಟದೈತ್ಯಮರ್ದನ ನತಾ ।
ಶ್ರಯ ಧರಾಧರ ಕಮಲಸಂಭವೋದರ ಘನಶ್ಯಾಮ ಯದುಕುಲಲಲಾಮ ॥
ಲಯವಿವರ್ಜಿತ ಪುಣ್ಯನಾಮ ನಿರ್ಜಿತದುರಿತ ।
ಚಯ ವಿರಾಜಿತ ಸರ್ವಲೋಕ ಪೂಜಿತಪದ ।
ದ್ವಯ ಕೃಪಾಕರ ಕೃಷ್ಣ ಬಿಡಿಸು ಭೀಕರವನೆಂದರ್ಜುನಂ ಘೋಷಿಸಿದನು ॥ ೩೫ ॥

ಪುಷ್ಕರ ಗದಾ ಶಂಖ ಚಕ್ರ ಶೋಭಿತ ಕರಚ ।
ತುಷ್ಕದಿಂ ಶ್ರೀವತ್ಸ ಕೌಸ್ತುಭಾಭರಣದಿ ।
ನಿಷ್ಕಳಂಕೇಂದುಮಂಡಲ ಸದೃಶ ವದನದಿಂ ನವಪೀತವಾಸದಿಂದೆ ॥
ಪುಷ್ಕಲಶ್ಯಾಮ ಕೋಮಲ ರಾಮಣೀಯಕ ವ ।
ಪುಷ್ಕಾಂತಿಯಿಂದೆಸೆವ ನಿನ್ನ ರೂಪೆರ್ದೆಯೊಳಿರೆ ।
ದುಷ್ಕಂಟಕದ ಭೀತಿಯೆಮಗದೇಕೆಲೆ ದೇವ ಸಲಹೆಂದನಾ ಪಾರ್ಥನು ॥ ೩೬ ॥

ನಿನ್ನೊಂದು ಹೆಸರ ಪೋಲ್ವೆಯೊಳಂದಜಾಮಿಳಂ ।
ತನ್ನ ಪಾತಕಕೋಟಿಯಂ ಪರಿಹರಿಸಿಕೊಂಡ ।
ನಿನ್ನ ನೀನೆಂದು ನಂಬಿರ್ದ ನಿಜಶರಣರ್ಗೆ ಭಯಮುಂಟೆ ಮೂಜಗದೊಳು ॥
ಎನ್ನ ಭೀತಿಯನೀಗ ಬಿಡಿಸುವೊಡೆ ಕೃಪೆಯೊಳ್ ಪ್ರ ।
ಸನ್ನನಾಗಚ್ಯುತ ಮುಕುಂದ ಕೇಶವ ಕೃಷ್ಣ ।
ಪನ್ನಗಾರಿಧ್ವಜನೆ ಯೆನುತೆ ನರಹರಿಯ ನಾಮಂಗಳಂ ವಾಚಿಸಿದನು ॥ ೩೭ ॥

ಅದ್ಭುತವ್ಯಾಘ್ರವಾದಶ್ವಮಂ ಕಾಣುತೆ ಮ ।
ಹದ್ಭಯದೊಳಸುರಾರಿಯಂ ಪಾರ್ಥನಿಂತಿಂತು ।
ಸದ್ಭಾವದಿಂ ಪ್ರಾರ್ಥಿಪನ್ನಗಂ ದೈವವಶದಿಂ ತನ್ನ ತಾನೆ ಬಳಿಕ ॥
ಉದ್ಭವಿಸಿತಾ ಹಯಕೆ ಮುನ್ನಿನಾಕಾರಮಾ ।
ಪದ್ಭೀತಿ ಪಾಂಡವರ್ಗೆತ್ತಣದು ಮುರರಿಪು ಸು ।
ಹೃದ್ಭಂಗಮಂ ಸೈರಿಸುವನಲ್ಲೆನುತ್ತೆ ಕಟಕದ ವಂದಿ ಕೊಂಡಾಡಲು ॥ ೩೮ ॥

ಆಟವಿಕನೊಂದೊಂದು ಬಹುರೂಪಮಂ ತಾಳ್ದು ।
ನಾಟಕವನಾಡಿ ಮುನ್ನಿನ ತನ್ನ ರೂಪದಿಂ ।
ನೋಟಕರ ಕಣ್ಗೆ ಕಾಣಿಸುವಂತೆ ಪೆಣ್ಗುದುರೆಯಾಗಿ ಪುಲಿಯಾಗಿ ಮತ್ತೆ ॥
ಘೋಟಕೋತ್ತಮಮಾದುದೆಂದಿನಂದದೊಳಾ ನಿ ।
ಶಾಟದಲ್ಲಣನಂ ಪೊಗಳ್ದುದೆಲ್ಲಾ ಜನಂ ।
ಕೋಟಿಸಂಖ್ಯೆಯೊಳೊದರಿದುವು ನಿಖಿಲವಾದ್ಯಂಗಳುತ್ಸವದೆ ಪಾಳೆಯದೊಳು ॥ ೩೯ ॥

ಸೇವ್ಯವಾಗಿರ್ದುದೆಂದಿನವೋಲ್ ತುರಂಗಂ ಮ ।
ಹಾ ವ್ಯಾಘ್ರರೂಪಡಗಿತಸುರಾರಿ ಭಕ್ತ ರ ।
ಕ್ಷಾ ವ್ಯಸನಿಯೆಂಬುದಂ ಕಾಣಿಸಿದನಡಿಗೆ ಕಟಕದ ಸಮಸ್ತ ಜನರು ॥
ಈ ವ್ಯಾಳರಾಜ ಶಾಯಿಗೆ ಬಂದಬಂದನಾ ।
ನಾ ವ್ಯಥೆಯನಪಹರಿಸಿ ಪಾಂಡುಸುತರಂ ಪೊರೆವು ।
ದೇ ವ್ಯವಹರಣೆಯೆಂದು ಕೃಷ್ಣನಂ ಕೊಂಡಾಡಲುಬ್ಬೇರಿದಂ ಪಾರ್ಥನು ॥ ೪೦ ॥

ಬಳಿಕ ಪಾರಿಪ್ಲವ ಧರಿತ್ರಿಯಿಂದಾ ಹಯಂ ।
ತೆಳರ್ದುದತಿವೇಗದಿಂ ಬಹಳ ದೇಶಂಗಳಂ ।
ಕಳೆಕಳೆದು ಬರಿಯ ವನಿತಾಮಯದ ರಾಜ್ಯದೊಳಸೀಮೆಗುತ್ಸಾಹದಿಂದೆ ॥
ಫಲುಗುಣನ ಸೇನೆ ನಡೆದುದು ಕೂಡೆ ಭಾರದಿಂ ।
ದಿಳೆ ಮುಂದಕೊರ್ಗುಡಿಸಿ ಮುಗ್ಗಲೊಂದೆಸೆಯೆೞೆ ।
ಬ್ಬುಳಿಸಿದುವು ಮಂದಿ ಕುದುರೆಗಳೆಂಬ ತೆರದಿಂದೆ ಸಂದಣಿಸಿತೇವೇಳ್ವೆನು ॥ ೪೧ ॥

ರಾಯ ಕೇಳಾರಾಜ್ಯದೊಳ್ ಬರಿಯ ನಾರಿಯರ್ ।
ಪ್ರಾಯತೆಯರಾಗಿ ಮಧುಪಾನಮತ್ತೆಯರಾಗಿ ।
ಕಾಯಜ ಕಲಾಕೋವಿದೆಯರಾಗಿ ರೂಪ ಲಾವಣ್ಯ ವಿಲಸಿತೆಯರಾಗಿ ॥
ಗೇಯ ನರ್ತನ ವೇಣು ವೀಣಾ ವಿನೋದ ರಮ ।
ಣೀಯಭೋಗಾಸಕ್ತೆಯರಾಗಿ ಮತ್ತದರೊಳಾ ।
ಸ್ತ್ರೀಯರೋರ್ವಳರಸಾಗಿರಲ್ಕವಳ ಕೆಳಗಾಗಿ ಬದುಕುವರ್ ಭಾಗ್ಯದಿಂದೆ ॥ ೪೨ ॥

ಅಲ್ಲಿಗೈದಿದ ಪುರುಷರೋರ್ವರುಂ ಜೀವಿಸುವು ।
ದಿಲ್ಲ ಬಂದಾತನಂ ಕಂಡು ಲಲಿತಾಂಗಿಯರ್ ।
ಚೆಲ್ಲೆಗಂಗಳ ನೋಟಮಂ ಬೀರಿ ಸವಿವೇಟಮಂ ತೋರಿ ಮಿಗೆ ಸೊಗಸುವ ।
ಸೆಳ್ಳುಗುರ್ಗಳನೂರಿ ಮೆಲ್ಲಮೆಲ್ಲನೆ ಕೀರಿ ।
ಲಲ್ಲೆಗೈಯುತೆ ಮೀರಿ ಬಲ್ಮೊಲೆಗಳಂ ಪೇರಿ ।
ಫುಲ್ಲಶರಕೇಳಿಯೊಳ್ ಮದವೇರಿಸುವರವರ್ ಮರುಳಹವೊಲರಿವು ಜಾರಿ ॥ ೪೩ ॥

ಸಮರತಿಯೊಳೊಮ್ಮೆ ಬೆರಸಿದ ಬಳಿಕ ವಿಷಯದಾ ।
ಭ್ರಮೆಯಿಂದೆ ಮಗ್ನರಾಗಿಹರಾ ಪುರುಷರಲ್ಲಿ ।
ರಮಿಸುವರವರ ಕೂಡೆ ನಾನಾಪ್ರಕಾರದಿಂದಾ ಪಂಕರುಹಮುಖಿಯರು ॥
ಕ್ರಮದೊಳೀ ತೆರದೆ ಸುಖಿಸುವರೊಂದು ತಿಂಗಳು ।
ತ್ತಮಸುಗಂಧಾನುಲೇಪನದಿಂದೆ ಮೊಗವಾಸ ।
ದಮಲತಾಂಬೂಲದಿಂ ಮಧುರ ಮಧುಪಾನದಿಂದೆಸೆವ ಸಂಯೋಗದಿಂದೆ ॥ ೪೪ ॥

ವಿಧವಿಧಮೊಳೆಸೆವ ಕುಸುಮೋತ್ಕರದ ಪರಿಮಳದ ।
ಮಧುರಾಸವಕೆ ತಮ್ಮ ಮುಖವಾಸದೊಳ್ಗಂಪಿ ।
ನಧರದಿನದಂ ಬೆರಸುವಂತೆ ಮೊಗಮಿಟ್ಟು ಪೊಂಬಟ್ಟಲೊಳ್ ಸವಿದು ಮಿಕ್ಕ ॥
ಮಧುವಂ ಮದಿರನೇತ್ರದಿಂ ನೋಡಿ ನಸುನಗೆಯ ।
ಸುಧೆಯನೊಯ್ಯನೆ ಸೂಸಿ ಸರಸದಿಂದಾಪರಿಸಿ ।
ವಿಧುಬಿಂಬವದನೆಯರ್ ಕೊಟ್ಟರೀಂಟುವ ಸೊಗಸಿಗೆಳಸದವರಾರಿಳೆಯೊಳು ॥೪೫॥

ಪೊಂಬಟ್ಟಲೊಳ್ ತೀವಿದಾಸವದ ರುಚಿಗಿರ್ವ ।
ರುಂ ಬಿಡದೆ ಮೊಗಮಿಟ್ಟಿರಲ್ಕದರೊಳೆಸೆವ ಪಡಿ ।
ಬಿಂಬದಾನನದ ಭಾವಂಗಳಂ ಕಾಣುತನ್ಯೋನ್ಯಸಂಪ್ರೀತಿಯಿಂದೆ ॥
ತುಂಬಿರ್ದ ಚಷಕಮಧು ತೀರಲ್ಕೆ ಬಯಲಪ್ಪು ।
ದೆಂಬ ಶಂಕೆಯೊಳೊಯ್ಯನೊಯ್ಯನಾಸ್ವಾದಿಸಿ ವಿ ।
ಳಂಬಮಂ ಮಾಡುವರದೆಂತೊ ಪುರುಷಸ್ತ್ರೀಯರೊಂದಾಗಿ ಸವಿವ ಸೊಗಸು ॥೪೬॥

ಕಪಿಸುವರ್ ಮೋಹನವನೆಸೆವ ರತಿಕೇಳಿಯೊಳ್ ।
ಸವಿಸುವರ್ ಚೆಂದುಟಿಯ ತನಿರಸವನಾಸರಂ ।
ತವಿಸುವರ್ ಬಲ್ಮೊಲೆಯೊಳೊತ್ತಿ ಬಿಗಿಯಪ್ಪಿ ದನಿಗೈವ ಪಾರಿವದಂತಿರೆ ॥
ರವಿಸುವರ್ ಕಂಠದೊಳ್ ಬಂಧಗಳ ಬಗೆಯನನು ।
ಭವಿಸುವರ್ ಕೂಲದೊಳ್ ಮನಮುಳುಗಿ ಸೌಖ್ಯದಿಂ ।
ದ್ರವಿಸುವರ್ ಕಾಮಕಲೆಯರಿದಂಗನೆಯರಲ್ಲಿ ದೊರೆಕೊಂಡ ಪುರುಷರೊಡನೆ ॥೪೭॥

ಮರಣಮಹುದೆಂದರಿದು ನಡುವೆ ಮುರಿದೊಲ್ಲದನ ।
ಚರಣಕೆರಗುವರೊಡಂಬಡಿಸುವರ್ ದೈನ್ಯದಿಂ ।
ಕರುಣಭಾವಂಗಳಂ ತೋರುವರ್ ಮೀರಿದೊಡೆ ಚೀರುವರ್ ಘಾತಿಸುವರು ॥
ಅರುಣಾಧರದ ಚುಂಬನವನಿತ್ತು ಕರಜಪ್ರ ।
ಕರಣದಿಂ ಕಲೆಗಳಂ ತುಡುಕಿ ಸೊಗಸಂ ಬಿಡದು ।
ಹರಣಮಳಿವಲ್ಲಿಪರಿಯಂತರಂ ಬಿಡರವನನಲ್ಲಿಯ ವಿಷಾಂಗನೆಯರು ॥೪೮

ಅಚ್ಚಸಂಪಗೆಯಲರ್ಗೆರಗಿದಾರಡಿಯಂತೆ ।
ಮೆಚ್ಚಿ ಮಡಿವಂ ಮಾಸಮಾತ್ರ ಮಾಗಲ್ಕವಂ ।
ಕಿಚ್ಚಿನೊಳ್ ಪುಗುವಳವಳಲ್ಲದೊಡೆ ಗರ್ಭಮಂ ಧರಿಸಿ ಪೆಣ್ಣಂ ಪಡೆವಳು ।
ಪೆಚ್ಚಿರ್ಪರಂತಲ್ಲ ನಾರಿಯರ ಬಳಿಕ ಬಂ ।
ದಚ್ಚರಿಯನರ್ಜುನಂ ಕೇಳ್ದಾಗ ತನ್ನ ಪಡೆ ।
ಗೆಚ್ಚರಿಕೆಯಾಗಿರ್ಪುದೆಂದೊರೆದು ಕೂಡೆ ಪಾಳೆಯದೊಳಗೆ ಸಾರಿಸಿದನು ॥೪೯॥

ವಿಷಕನ್ನಿಕೆಯರಿವರ್ ಕಂಡಮಾತ್ರದೊಳಾಕ ।
ರುಷಣಮಂ ಮಾಡುವರ್ ಬೆರಸಿದೊಡೆ ಪುರುಷನಾ ।
ಯುಷವನಪಹರಿಪರಿದು ನಿಶ್ಚಯಂ ನೀವಿಲ್ಲಿ ಮರೆದಾದೊಡಂ ಮನದೊಳು ॥
ವಿಷಯಕೆಳಸದೆ ಬುದ್ಧಿವಂತರಾಗಿಹುದೆಂದು ।
ವೃಷಕೇತು ಮೊದಲಾದ ವೀರರ್ಗೆ ಪೇಳುತನಿ ।
ಋಷನಗರದೊಡೆಯ ಲಕ್ಷ್ಮೀಪತಿಯ ಮೈದುನಂ ಕಟಕದೊಳ್ ಸಾರಿಸಿದನು ॥ ೫೦ ॥

ಹದಿನಾರನೆಯ ಸಂಧಿ

ಸೂಚನೆ॥ ಸ್ತ್ರೀರಾಜ್ಯದೊಳ್ ಪ್ರಮೀಳೆಯನೊಡಂಬಡಿಸಿ ವಿ।
ಸ್ತಾರವಾಗಿರ್ದ ಬಹುದೇಶಂಗಳಂ ಕೊಳಲ।
ಘೋರಭೀಷಣದೈತ್ಯನಂ ಮುರಿದು ಫಲುಗುಣಂ ಮಣಿಪುರಕೆ ನಡೆತಂದನು॥

ಕೇಳವನಿಪಾಲಕುಲತಿಲಕ ತುರಗದ ಕೂಡೆ।
ಪಾಳಯಂ ತೆರಳಿ ಬಂದಲ್ಲಿ ಬಿಟ್ಟರ್ಜುನಂ।
ಪೇಳಿದಂತಿರುತಿರ್ದುದನ್ನೆಗಂ ಕುದುರೆ ತನ್ನಿಚ್ಛೆಯಿಂದೈದೆ ಕಂಡು॥
ಭಾಳಪಟ್ಟದ ಲೇಖನವನೋದಿಕೊಂಡು ನೀ।
ರಾಳಕೆಯರಾಗ ನಡೆತಂದು ಕೈಮುಗಿದು ಪ್ರ।
ಮೀಳೆಯೆಂಬರಸಾಗಿಹ ಸ್ತ್ರೀಶಿರೋಮಣಿಗೆ ಸಂಭ್ರಮದೊಳಿಂತೆಂದರು ॥೧॥

ಶಶಿಕುಲೋದ್ಭವ ಯುಧಿಷ್ಠಿರನ ಪನ ಕುದುರೆ ಗಡ।
ವಸುಧೆಯೊಳಿದಂ ಬಲ್ಲಿದರ್ ಕಟ್ಟಬೇಕು ಗಡ।
ದೆಸೆಯೊಳಿದಕರ್ಜುನನ ಕಾಹಿನಾರೈಕೆ ಗಡ ಪಿಡಿದೊಡೆ ಬಿಡಿಸುವರ್ಗಡ॥
ಪೊಸತಲಾ ನಮಗೆಂದು ನಾರಿಯರ್ ಬಿನ್ನೈಸೆ।
ನಸುನಗುತೆ ಲಾಯದೊಳ್ ಕಟ್ಟಿಸಿದಳಾ ಹಯವ।
ನೆಸೆವ ಭದ್ರಾಸನವನಿಳಿದು ಸಂಗ್ರಾಮಕ್ಕೆ ಪೊರಮಟ್ಟಳಾ ಪ್ರಮೀಳೆ ॥೨॥

ಕಣ್ಣ ಹೊಳಪಿನ ಚಪಲೆಯರ ಕುದುರೆ ಲಕ್ಷದಿಂ।
ತಿಣ್ಣಮೊಲೆಯಲಸಗಮನೆಯರಾನೆ ಲಕ್ಷದಿಂ।
ಹುಣ್ಣಿಮೆಯ ಶಶಿಯಂತೆಸೆವ ಬಟ್ಟಮೊಗದ ನೀರೆಯರ ರಥ ಲಕ್ಷದಿಂದೆ॥
ಸಣ್ಣನಡುವಿನ ಸೊಕ್ಕುಜೌವನದ ಪೊಸಮಿಸುನಿ।
ವಣ್ಣದಂಗದ ಬಾಲೆಯರ ಮೂರುಲಕ್ಷದಿಂ।
ಪೆಣ್ಣ ದಳವೈದೆ ಜೋಡಿಸಿತು ಪಾರ್ಥನ ಸಮರಕಾ ಪ್ರಮೀಳೆಯ ಸುತ್ತಲು ॥೩॥

ತೆಗೆದುಟ್ಟ ಚಲ್ಲಣದ ಬಿಗಿದ ಮೊಲೆಗಟ್ಟುಗಳ।
ಪೊಗರುಗುವ ವೇಣಿಗಳ ಮೃಗಮದದ ಬೊಟ್ಟುಗಳ।
ತಿಗುರಿದನುಲೇಪನದ ಮಗಮಗಿಪ ಕಂಪುಗಳ ಝುಗಝುಗಿಸುವಾಭರಣದ।
ನಗೆಮೊಗದ ಮಿಂಚುಗಳ ದೃಗುಯುಗದ ಕಾಂತಿಗಳ।
ಮಿಗೆತೊಳಗುವಂಘ್ರಿಗಳ ಸೊಗಯಿಸುವ ಬಾಹುಗಳ।
ಬಗೆಬಗೆಯ ಕೈದುಗಳ ವಿಗಡೆಯರ್ ನೆರೆದು ಕಾಳಗಕೆ ಮುಂಕೊಳುತಿರ್ದರು॥೪॥

ಮಂದಗತಿಯಿಂದೆ ನಳಿತೋಳಿಂದೆ ಕುಂಭಕುಚ ।
ದಿಂದೆ ಜವ್ವನದ ಮದದಿಂದೆ ಭದ್ರಾಕಾರ ।
ದಿಂದೆಸೆವ ಕನಕಮಣಿಬಂಧ ನಿಗಳಂಗಳಿಂ ಭೃಂಗಾಳಕಂಗಳಿಂದೆ ॥
ಸಿಂದೂರಮಂಡಮಾರಾಜಿಸುವ ಸೀಮಂತ ।
ದಿಂದೆ ಮಂಜುಳಕಿಂಕಿಣಿಗಳ ಕಾಂಚೀದಾಮ ।
ದಿಂದೆಸೆವ ಪೆಣ್ಗಳಾನೆಗಳ ಮೇಲ್ಕೈತಂದರವದಾಯತಂಗಳಿಂದ ॥ ೫ ॥

ಸ್ಫುರದುತ್ಕಟಾಕ್ಷದಿಂ ಲಲಿತೋರುಯುಗದಿಂದೆ ।
ಗುರುಪಯೋಧರವಿಜಿತ ಚಕ್ರಶೋಭಿತದಿಂದೆ ।
ಪರಿಲುಳಿತ ಚಾಪಲತೆಯಿಂ ಪ್ರಣಯ ಕಲಹದೊಳಗಲ್ದಿನಿಯರಂ ಜಯಿಸುವ ॥
ವರಮನೋರಥದೊಳೈದುವ ಕಾಮಿನಿಯರೀಗ ।
ನರನ ಸಂಗರಕೆ ಪೊಂದೇರ್ಗಳನಡರ್ದು ಬರು ।
ತಿರೆ ಚಿತ್ರಮೆಂದು ಸಲೆ ನೋಡುತಿರ್ದರು ಸಕಲಪರಿವಾರದೊಳ್ ವೀರರು ॥ ೬ ॥

ಚಂಚಲಾಕ್ಷಿಯರ ತಳತಳಿಪ ಕಡೆಗಣ್ಣ ಕುಡಿ ।
ಮಿಂಚವರಡರ್ದ ತೇಜಿಗಳ ದೂವಾಳಿಯಿಂ ।
ಮುಂಚಿದುವು ನಳಿತೋಳ್ಗಳಿಂ ಜಡಿದು ಝಳಪಿಸುವ ಕೈದುಗಳ ದೀಧಿತಿಗಳು ॥
ಹೊಂಚಿದುವು ವಜ್ರಮಣಿಭೂಷಣದ ಕಾಂತಿಯಿಂ ।
ಪಂಚಬಾಣ ಪ್ರಯೋಗದೊಳನೇಕಾಸ್ತ್ರ ಪ್ರ ।
ಪಂಚವಡಗಿತ್ತೆಸೆವ ಸಿಂಗಾಡಿಗಳನವರ ಪುರ್ಬಿನ ಗಾಡಿಗಳ್ ಮಿಕ್ಕುವು ॥ ೭ ॥

ಲೀಲೆ ಮಿಗೆ ಪೆಣ್ದಳಂ ಬಂದು ವಿಜಯನ ಪಡೆಯ ।
ಮೇಲೆ ಬಿದ್ದುದು ಕರಿ ತುರಗ ರಥ ಪದಾತಿಗಳ ।
ಸಾಲೆಸೆಯೆ ಸಂದಣಿಸಿ ನಾನಾಪ್ರಕಾರದಿಂ ಕೈದುಗಳ ಮಳೆಗರೆಯುತೆ ॥
ಬಾಲಾರ್ಕಬಿಂಬಮುಂ ಶಶಿಮಂಡಲಮುಮೇಕ ।
ಕಾಲದೊಳ್ ಮೂಡಿ ಬರ್ಪಂತೆ ಪೊಂದೇರ್ಗಳೊಳ್ ಪ್ರ ।
ಮೀಳೆ ಮುಖಕಾಂತಿ ಕಳಕಳಿಸೆ ನಡೆತರುತಿರ್ದಳರಸುಮೋಹರದ ನಡುವೆ ॥ ೮ ॥

ಬಳಿಕಾ ಪ್ರಮೀಳೆ ಪಾರ್ಥನ ಮೋಹರಕೆ ತನ್ನ ।
ದಳಸಹಿತ ನಡೆತಂದು ಕಂಡಳುನ್ನತ ಕಪಿಯ ।
ಪಳವಿಗೆಯ ಮಣಿರಥದೊಳೊಪ್ಪುವ ಕಿರೀಟಿಯಂ ನಗುತೆ ಮಾತಾಡಿಸಿದಳು ॥
ಫಲುಗುಣಂ ನೀನೆ ನಿನ್ನಶ್ವಮಂ ತಡೆದೆನಾಂ ।
ಚಲವೊ ವಿನಯವೊ ಬಿಡಿಸಿಕೊಳ್ವ ಬಗೆಯಾವುದಿ ।
ನ್ನಳವಿಯೊಳ್ ಕಾಣಬಹುದೆನುತೆ ಬಿತ್ತಿಗೆದು ಜೇಗೆಯ್ಯೆ ನರನಿಂತೆಂದನು ॥ ೯ ॥

ನಾರಿಯೊಳ್ ಕಾಳಗವೆ ತನಗಕಟ ಕಡುಗಿ ಮದ
ನಾರಿಯೊಳ್ ಕಾದಿದುಗ್ಗಡದ ನಿಜಕಾರ್ಮುಕದ ।
ನಾರಿಯೊಳ್ ಕಣೆಯಂ ತುಡುವೆನೆಂತೊ ಶಿವಶಿವಾ ಪರ‍್ಯಂಕಮಂ ಸಾರ್ದೊಡೆ ॥
ನೀರಜಶರಾಹವದೊಳೊದಗುವೊಡೆ ಕಡುಚದುರೆ ।
ನೀ ರಣದೊಳಾಳ್ತನವನೆನ್ನೊಡನೆ ತೋರಿದೊಡೆ ।
ನೀರಸವೆನಿಸದೆ ಪೇಳೆಂದು ಕುಂತೀಸುತಂ ನುಡಿದೊಡವಳಿಂತೆಂದಳು ॥ ೧೦ ॥

ಪರಿಯಂಕಮಂ ಸಾರ್ದೊಡಂಗಜಾಹವದೊಳಗ ।
ಪರಿಮಿತಸುಖಾವಹದ ಸುರತ ತಂತ್ರದ ಕಲೆಯ ।
ಪರಿವಿಡಿಗಳಂ ತೋರಿಸುವೆನೀಗಳೆನ್ನಂ ವರಿಸುವುದಲ್ಲದೊಡೆ ನಿನ್ನ ॥
ತುರಗಮಂ ಬಿಡುವುದಿಲ್ಲದಟಿಂದೆ ಕಾದುವಾ ।
ತುರವುಳ್ಳೊಡಿದಿರಾಗಿ ನೋಡು ಸಾಕೆನ್ನೊಳೆನು ।
ತುರವಣಿಸುತವಳೆಚ್ಚೊಡರ್ಜುನಂ ಸೈರಿಸುತ್ತೆಳನಗೆಯೊಳಿಂತೆಂದನು ॥ ೧೧ ॥

ವಿಷಯೋಪಭೋಗಮಂ ಬಯಸಿ ನಿನಗಾನೊಲಿಯೆ ।
ವಿಷಯೋಗವಾಗದಿರ್ದಪುದೆ ಪೇಳ್ ಪುರುಷರೀ ।
ವಿಷಯೋದ್ಭವ ಸ್ತ್ರೀಯರಂ ಬೆರಸಿ ಬಾಳ್ದಪರೆ ಸಾಕದಂತಿರಲಿ ನಿನಗೆ ॥
ರುಷಭಾಯಿತದೊಳಾಂತ ಘಟರೊಳ್ ಪಳಂಚುವ ಪ ॥
ರುಷಭಾಷಿತವನಬಲೆ ನಿನ್ನೊಳಾಡುವುದು ಪಾ ।
ರುಷಭಾವಮಲ್ಲ ಬಿಡು ವಾಜಿಯಂ ಪೆಣ್ಗೊಲೆಗಳುಕುವೆನೆಂದಂ ಪಾರ್ಥನು
॥ ೧೨ ॥

ಕಾದಲಂಬಿಂದೆ ಕೊಂದಪೆನೀಗಳಲ್ಲದೊಡೆ ॥
ಕಾದಲಂ ಶೀನಾಗೆ ಸುರತಮೋಹಕೆ ಪ ।
ಕ್ಕಾದಲಂಪಿನ ಸೌಖ್ಯಮಂ ತಳೆದ ಬಳಿಕಹುದು ಮೃತಿ ತಪ್ಪದೆಂತುಮಳಿವು ॥
ಸಾದರದೊಳೆನ್ನೊಡನೆ ರಮಿಸುವುದು ನಿನಗೆ ಸೊಗ ।
ಸಾದರದನನುಕರಿಸು ಮೇಣ್ ಕಲಹಕೃತವೆ ಲೇ ।
ಸಾದರದಟಂ ತೋರಿಸೆಂದಾ ಪ್ರಮಿಳೆ ಪಾರ್ಥನ ಮೇಲೆ ಕಣೆಗರೆದಳು ॥೧೩॥

ಹಿಂದೆ ಶೂರ್ಪಣಖೆ ಲಕ್ಷ್ಮಣನನಂಡಲೆದು ಪಡೆ ।
ದಂದಮಂ ನೆನೆದಿವಳನೀಕ್ಷಣವೆ ಭಂಗಿಸುವೆ ।
ನೆಂದು ಸಮ್ಮೋಹನಾಸ್ತ್ರವನುಗಿದು ಗಾಂಡೀವದೊಳ್ ಪೂಡಿ ಪಾರ್ಥನಿಸಲು ॥
ಮಂದಸ್ಮಿತದೊಳದಂ ಕಡಿದು ಬಿಲ್ದಿರುವನೆ ।
ಚ್ಚಿಂದುಮುಖಿ ಶಕ್ರಸುತನಂ ನೋಯಿಸಲ್ಕೆ ಮು ।
ತ್ತೊಂದುಹೆದೆಯಂ ಚಾಪಕೇರಿಸಿ ನರಂ ಪೂಡಿದಂ ದಿವ್ಯಮಾರ್ಗಣವನು ॥ ೧೪ ॥

ಆ ಸಮಯದೊಳ್ ನುಡಿದುದಶರೀರವಾಕ್ಯಮಾ ।
ಕಾಶದೊಳ್ ಬೇಡಬೇಡೆಲೆ ಪಾರ್ಥ ಹೆಂಗೊಲೆಗೆ ।
ಹೇಸದೆ ಮಹಾಸ್ತ್ರಮಂ ತುಡುವೆ ನೀಂ ಮುಳಿದಯುತವರ್ಷಮಿನ್ನಿವಳಕೂಡೆ ॥
ಬೇಸರದೆ ಕಾದಿದೊಡೆ ತೀರಲರಿಯದು ಮನದ ।
ವಾಸಿಯಂ ಬಿಟ್ಟು ವರಿಸೀಕೆಯಂ ಸತಿಯಾಗೆ ।
ಲೇಸಹುದು ಮುಂದೆ ನಿನಗೆಂದು ನಿಡುಸರದಿಂದೆ ಸಕಲಜನಮುಂ ಕೇಳ್ವೊಲು ॥ ೧೫ ॥

ಆಲಿಸಿದನಶರೀರವಾಣಿಯಂ ಪೊಡಿರ್ದ ।
ಕೋಲನೊಯ್ಯನೆ ಶರಾಸನದಿಂದಪಿಳಿಪಿದಂ ।
ಮೇಲಣ ವಿಚಾರಮಂ ಚಿತ್ತದೊಳ್ ತಿಳಿದನಾಳೋಚಿಸಿದನಾಪ್ತರೊಡನೆ ॥
ಆ ಲಲನೆಯಂ ತನ್ನೆಡೆಗೆ ಬರಿಸಿಕೊಂಡು ತ ।
ತ್ಕಾಲೋಚಿತದೊಳೊಡಂಬಡಿಸಿ ಕೈವಿಡಿದನನು ।
ಕೂಲೆಯಾಗಿರೆ ಬಳಿಕ ನಸುನಗುತೆ ವಿನಯದಿಂ ಕಲಿಪಾರ್ಥನಿಂತೆಂದನು ॥೧೬॥

ಕಣ್ಣಳವಿದಲ್ಲಬಲೆ ಕೇಳಃ ದೀಕ್ಷೆಗೊಂಡಿರ್ದ ।
ನಣ್ಣದೇವಂ ತಾನುಮನ್ನೆಗಂ ವ್ರತಿಯಾಗಿ ।
ಪೆಣ್ಣೊಳ್ ಬೆರೆಯೆನೆಂದು ಪೊರಮಟ್ಟೆನಶ್ವರಕ್ಷೆಗೆ ಮುಂದೆ ಗಜಪುರದೊಳು ॥
ಪಣ್ಣುವಧ್ವರಕೆ ನೀಂ ಬಂದು ಕನ್ನೈದಿಲೆಯ ।
ಬಣ್ಣದ ಮುರಾರಿಯಂ ಕಂಡು ವಿಷವಧುತನದ ।
ತಿಣ್ಣಮಂ ಕಳೆದೆನ್ನೊಳೊಡಗೂಡು ಸೌಖ್ಯಮಹುದಲ್ಲಗ್ಗೈತಹುದೆಂದನು ॥ ೧೭ ॥

ಎನಲಾ ಪ್ರಮೀಳೆ ಪಾರ್ಥನ ಮಾತಿಗೊಪ್ಪಿ ಕರ ।
ವನಜಮಂ ನೀಡಿ ನಂಬುಗೆಗೊಂಡು ಕುದುರೆಯಂ ।
ಮನೆಯಿಂ ತರಿಸಿಕೊಟ್ಟುತನ್ನಾಲಯದೊಳಿರ್ದ ವಿವಿಧರತ್ನಾವಳಿಗಳನು ॥
ಜನಪದದೊಳಿರ್ದ ವಸ್ತುಗಳೆಲ್ಲಮಂ ಕೊಂಡು ।
ವನಿತೆಯರ ಮೋಹರಂಬೆರಸಿ ಪೊರಮಟ್ಟು ಯಮ ।
ತನಯನಂ ಕಾಣ್ಬ ಕಡುತವಕದಿಂ ಬಂದಳಿಭನಗರಿಗತಿಸಂಭ್ರಮದೊಳು ॥ ೧೮ ॥

ಗಜನಗರಿಗಾಕೆಯಂ ಕಳುಹಿ ಕುದುರೆಯ ಕೂಡೆ ।
ವಿಜಯನೈತರೆ ಮುಂದೆ ದೇಶಂಗಳಜಮನುಜ ।
ಗಜ ಗೋಶ್ವ ಮಹಿಷಾದಿ ನಿಕರಂಗಳಿಂದೆ ಪೂರಿತವಾಗಿ ಕಂಗೊಳಿಸಲು ॥
ಕುಜಕುಜಂಗಳ ಪೊದರೊಳತಿ ಸೂಕ್ಷ್ಮಜೀವರಂ ।
ಬುಜಮಿತ್ರನುದಯಕುದ್ಭವಿಸಿ ಮಧ್ಯಾಹ್ನದೊಳ್ ।
ನಿಜದ ಜೌವನದಿಂದೆ ಬಾಳ್ದಸ್ತಮಯಕಳಿಯುತಿರೆ ಕಂಡು ಬೆರಗಾದನು ॥ ೧೯ ॥

ಮತ್ತೆ ಮುಂದೈದುವ ತುರಂಗಮದ ಕೂಡೆ ನಡೆ ।
ಯುತ್ತೆ ಬರಿದೋಗಲುಡಿಗೆಂಬವರ ವಕ್ರಾಂಗಿಗಳ ।
ನೇತ್ತೋಳವರನೊಂದು ಕಾಲವರನೊಂದು ಕಣ್ಣವರ ಮೂರಡಿಗಳವರ ॥
ಉತ್ತುಂಗ ನಾಸಿಕದವರ ಮೂರು ಕಣ್ಣವರ ।
ನೆತ್ತಿಗೋಡೆರಡುಳ್ಳವರನೊಂದು ಕೋಡುವರ ।
ಕತ್ತೆಮೊಗದವರ ಕುದುರೆಮೊಗದವರ ದೇಶಂಗಳಂ ಕಂಡನಾ ಕಲಿಪಾರ್ಥನು
॥ ೨೦ ॥

ಅಲ್ಲಿಗಲ್ಲಿಗೆ ತುರಂಗದ ಕೂಡೆ ಕೌಂತೇಯ ।
ನಿಲ್ಲದಿಪ್ಪ ಚಿತ್ರಮಂ ನೋಡುತ್ತೈತರಲ್ ।
ಮೆಲ್ಲಮೆಲ್ಲನೆ ಹಯಂ ಪೋಯ್ತು ಭೀಷಣನೆಂಬಸುರನ ಪುರಕದರೊಳವನ ॥
ಸೊಲ್ಲುಸೊಲ್ಲಿಗೆ ಮಿಗೆ ಹಸಾದವೆನುತವನಿಯೊಳ್ ।
ಸಲ್ಲಸಲ್ಲದ ಕೃತ್ಯಮೆಲ್ಲಮಂ ನೆರೆ ಮಾಡ ।
ಬಲ್ಲ ಬಲ್ಲದ ರಕ್ಕಸರ್ ಮೂರುಕೋಟಿ ತಳ್ತಿರ್ದರತಿಭಯಂಕರದೊಳು ॥ ೨೧ ॥

ರಕ್ಕಸರನಿಬರೆಲ್ಲರುಂ ದೀರ್ಘದೇಹಿಗಳ್ ।
ವೆಕ್ಕಸದ ಕೋಪಿಗಳ್ ಮೇಲೆ ಪುರುಷಾದಕರ್ ।
ಕಕ್ಕಸದ ಮುಸುಡವರ್ ಬಹಳಮಾಯಾವಿಗಳ್ ನಿರ್ದಯರ್ ಕೊರೆಗಡಿಕರು ॥
ಹೊಕ್ಕ ಸಮರಕ್ಕೆ ಹಿಮ್ಮೆಟ್ಟರುನ್ಮತ್ತರೆನೆ ।
ಮಿಕ್ಕಸವಳವನದೇವೇಳ್ವೆನರ್ಜುನನ ಹಯ ।
ಮೆಕ್ಕರಸದೊಳ್ ಬಾದುದಲ್ಲಿಗವನೀಶ ಕೇಳಿನ್ನು ಮಹಾದ್ಭುತವನು ॥ ೨೨ ॥

ಆಹಾರಕಡವಿಯುಂ ತೊಳಲಿ ಬರುತಿರ್ದ ಮೇ ।
ದೋಹೋತನೆಂಬವಂ ದಾನವೇಂದ್ರಂಗೆ ಪೌ ।
ರೋಹಿತ್ಯಮಂ ಮಾಡುವಂ ಬ್ರಹ್ಮರಾಕ್ಷಸಂ ಕಂಡು ಪಾರ್ಥನ ಹಯುವನು ॥
ಊಹಿಸಿದನಿದು ಯಜ್ಞತುರಗಮಿದಾ ದಳಮಿದರ ।
ಕಾಹಿನದು ಮೇಣಿದಕೆ ಕರ್ತೃನರನೆಂದರಿದು ।
ಬಾಹುವಂ ಚಪ್ಪರಿಸಿಕೊಂಡುತ್ಸವದೊಳಸುರನೋಲಗಕೆ ಪರಿತಂದನು ॥ ೨೩ ॥

ನರವಿನುಪವೀತದಿಂ ಕಣ್ಣಾಲಿಗಳೊಳ್ ಕೋದ ।
ಕೊರಳ ತಾವಡದಿಂದೆ ನರರ ತಲೆಗಳ ಜಪದ ।
ಸರದಿಂದೆ ಪಂದೊವಲ ಧೋತ್ರದಿಂದೊಟ್ಟೆಯೆಲುಗಳ ಕುಂಡಲಂಗಳಿಂದೆ ॥
ಕರಿಶಿರದ ಡೊಗೆಯ ಸಲಿಲದ ಕಮಂಡುಲದಿಂದೆ ।
ಯುರುಗಜದ ಬೆನ್ನಸ್ಥಿಯಪ್ಪಿಯಿಂ ಸಲೆ ಭಯಂ ।
ಕರರೂಪನಾದ ಮೇದೋಹೋತನೈತಂದೊಡಿದಿರೆದ್ದನಸುರೇಂದ್ರನು ॥ ೨೪ ॥

ಏನು ಬಿಜಯಂಗೈದಿರೆನಲಟ್ಟಹಾಸದಿಂ ।
ದಾನವಂಗೆಂದನೇತಕೆ ಸುಮ್ಮನಿರ್ದಪೆ ನಿ ।
ಧಾನಪನೆಡಹಿ ಕಂಡವೋಲಾಯ್ತು ನಿಮ್ಮಯ್ಯ ಬಕನಂ ಕೊಂದ ಭೀಮನೆಂಬ ॥
ಮಾನವನ ತಮ್ಮನರ್ಜುನನೀಗ ಬಂದನದೆ ।
ಕೋ ನಿನ್ನ ಪೊಲಸೀಮೆಗಾತನಂ ಪಿಡಿತಂದು ।
ನೀನುರುವ ನರಮೇಧಮಂ ಮಾಡೆನಲ್ಕವಂಗಸುರೇಂದ್ರನಿಂತೆಂದನು ॥ ೨೫ ॥

ಮತ್ತಾತನಂ ಕೊಂದವನ ತಮ್ಮನಂ ಪಿಡಿದು ।
ಮತ್ತಾತನಂ ಸದೆವೆನವನ ಹರಿಬಕೆ ಬಂದ ।
ಮತ್ತಾತನಂ ಸೀಳ್ವೆನಂತಿರಲಿ ನೀನೆನ್ನೊಳೆಂದ ಯಜ್ಞದ ಪಶುವಿಗೆ ॥
ಸತ್ತಾತನಾದಪನೆ ಪೇಳ್ ಸಾಕು ನಿನ್ನಿಂದೆ ।
ಸತ್ತಾತನಾದಪನವಂ ನಿನ್ನ ನುಡಿಗೆ ಬೇ ।
ಸತ್ತಾತನಾದಪನೆ ನಾನಕಟ ನೋಡೆನುತೆ ಭೀಷಣಂ ಗರ್ಜಿಸಿದನು ॥ ೨೬ ॥

ರಾಕ್ಷಸೋತ್ತಮರೋಳಾರ್ ಪಿಂತೆ ನರಮೇಧಮಖ ।
ದೀಕ್ಷೆಯಂ ಕೈಕೊಂಡರಿದಕೆ ಋತ್ವಿಜರಾರ ।
ಪೇಕ್ಷಿತವದೇನಾರ್ಗೆ ಸಂತುಷ್ಟಿ ಪೇಳೆಂದು ಭೀಷಣಂ ಬೆಸಗೊಳಲ್ಕೆ ॥
ರೂಕ್ಷವದನವನವಂ ತೆರೆದಟ್ಟಹಾಸದಿಂ ।
ದಾಕ್ಷೇಪಿಸುತೆ ನುಡಿದನೆಲೆ ಮರುಳೆ ರಾವಣಂ ।
ಸಾಕ್ಷಿಯಲ್ಲವೆ ತತ್ಕ್ರತುವನೆಸಗಿ ಮೂಜಗವನ್ನೈದೆ ಗೆಲ್ದುದಕೆಂದನು ॥ ೨೭ ॥

ಸುರೆ ನೆತ್ತರಿಂದೆ ಚಾತುರ್ಮಾಸ್ಯಮಂ ಕಳೆದ ।
ಹಿರಿಯರಿದೆ ಮಾಸೋಪವಾಸಿಗಳ ತಲೆಮಿದುಳ ।
ನುರುತರಶ್ರಾವಣಕೊಡಗಿಪರಿದ್ದೆ ಯತಿಮಾಂಸಮಂ ಭಾದ್ರಪದಕೆ ಬಿಡದೆ ॥
ದೊರಯಿಸುವರಿದೆ ವರಾಶ್ವಿಜಕೆ ಜಡೆಮುಡಿಯುವರ ।
ಕರುಳನಾರ್ಜಿಸುವರಿದೆ ಕಾರ್ತಿಕಕ್ಕೆಳವೆಣ್ಣ ।
ಳುರದ ಗುಂಡಿಗೆಯುನರಸುವ ಮಹಾವ್ರತಿಗಳಿದೆ ಬೊಮ್ಮರಕ್ಕಸರೆಂದನು ॥ ೨೮ ॥

ಇನ್ನುಮಿವರಲ್ಲದೆ ಮಹಾಬ್ರಹ್ಮರಾಕ್ಷಸರ್ ।
ಮುನ್ನಿನ ಯುಗಂಗಳವರಿರ್ದಪರ್ ಪಿರಿಯರ್ ಸ ।
ಮುನ್ನತ ವಟದ್ರುಮ ನಿವಾಸಿಗಳನೇಕ ಪುರುಷಾದಕರ್ ದುರ್ದರ್ಶರು ॥
ನಿನ್ನ ನರಮೇಧಕಾರ್ತ್ವಿಜ್ಯಮಂ ಮಾಳ್ಪರಿದ ।
ಕೆನ್ನನಾಚಾರ್ಯನಾಗಿಯೆ ವರಿಸು ತದ್ಯಾಗ ।
ಮಂ ನೆಗಳ್ಚಸುರರ್ಗೆ ತುಷ್ಟಿಯಪ್ಪುದು ಜಯಂ ನಿನಗೆ ಸಮನಿಪುದೆಂದನು ॥ ೨೯ ॥

ದಾಸವರ ದಂಪತಿಸಹಸ್ರಮಂ ಪ್ರತಿದಿನಂ ।
ಮಾನವರ ಮಾಂಸಭೋಜನದಿಂದೆ ತಣಿಸಬೇ ॥
ಕಾನವರನುಪಚರಿಪೆನಧ್ವರವನೆಸಗು ನೀಂ ಮಂಟಪವನಿಲ್ಲಿ ರಚಿಸು ॥
ಸೇನೆಸಹಿತಾ ಪಾರ್ಥನಂ ಪಿಡಿದು ತಂದೊಡೆ ಸ ।
ಮಾನಮಿಲ್ಲಸುರರೊಳ್ ನಿನಗೆ ನಡೆದಪುದು ಮಖ ।
ಮೇನೆಂಬೆನಿದರುತ್ಸವವನೆನೆ ಪುರೋಹಿತಂಗಾ ದೈತ್ಯನಿಂತೆಂದೆನು ॥ ೩೮ ॥

ಪೊಕ್ಕು ಪಡೆಯೊಳ್ ವಿಜಯನಂ ಪಿಡಿದು ನರಮೇಧ ।
ಕಿಕ್ಕುವೆಂ ಬೇಗ ಕಟ್ಟಿಸು ಮಂಟಪವನೆಂದು ।
ಹೆಕ್ಕಳದೊಳಾತನಂ ಬೀಳ್ಕೊಂಡು ಭೀಷಣಂ ಮುಳಿದೆದ್ದು ನಡೆಯುತಿರಲು ॥
ಮುಕ್ಕೋಟಿರಕ್ಕಸರ್ ಪೊರಮಟ್ಟರವನ ಕೂ ।
ಡಕ್ಕರಿಂ ಜಗವನೊಂದೇಬಾರಿ ಕೊಳ್ವ ತವ ।
ಕಕ್ಕೆ ಬಹುರೂಪಮಂ ತಾಳ್ದನೋ ಕಾಲಭೈರವನೆಂಬ ತೆರನಾಗಲು ॥ ೩೧ ॥

ಭೀಷಣನೊಡನೆ ಮೂರುಕೋಟಿ ದೈತೇಯರತಿ ।
ರೋಷದಿಂದೈದುತಿರ್ದರು ಕಾಳಗಕೆ ಘೋರ ।
ವೇಷದ ಮಹಾರಾಕ್ಷಸಿಯರಂ ದೊಡಲ್ಗಳಂ ರುಧಿರಮಾಸಂಗಳಿಂದೆ ॥
ಪೋಷಿಸುವ ತವಕದಿಂ ಪೊರಮಟ್ಟು ಬಂದು ಸಂ ।
ತೋಷದಿಂ ಬೆಟ್ಟದುಡಿಗಳನಡರಿ ಕಂಡರು ।
ಘೋಷದಿಂದಬ್ಧಿಯಂ ಜರೆವಂತೆ ನಡೆದು ಬಹ ಪಾರ್ಥನ ಪತಾಕಿನಿಯನು
॥ ೩೨ ॥

ಆ ರಾಕ್ಷಸಿಯರೊಳೊರ್ವಳ್ ಧನಂಜಯನ ಪೊಂ।
ದೇರ ಪಳವಿಗೆದುದಿಯ ಹನುಮಂತನಂ ಕಂಡು ।
ದೂರಕೋಡಿದಳಂದು ಲಂಕಿಣಿಯನೊದೆದ ಕೋಡಗಮೆಂದು ಮತ್ತೊರ್ವಳು॥
ಊರು ಸುಡುವುದೆಂದು ತನ್ನ ಸದನದ ಸರಕ ।
ನಾರೈವುದಕ್ಕೆ ಪೋದಳ್ ದನುಜೆ ಮತ್ತೊರ್ವ ।
ಳೋರಂತೆಣಿಸಿಕೊಂಡಳೀ ಕಪಿ ನೆಳಲ್ಗೆ ಸೈರಿಸದೆಂದು ಸೈವರಿದಳು ॥ ೩೩ ॥

ಆಗಸಕೆ ಚಿಗಿದು ರವಿಯಂ ತುಡಿಕಿ ಧೀಂಕಿಟ್ಟು ।
ಸಾಗರಕೆ ಸೀತೆಯಂ ಕಂಡು ಬನಮಂ ಕಿಳ್ತು ।
ತಾಗಿದ ನಿಶಾಟರಂ ಸದೆದು ಲಂಕೆಯನುರುಪಿ ದಶವದನನಂ ಭಂಗಿಸಿ ॥
ಪೋಗಿ ಪಾತಾಳದಸುರರನೊಕ್ಕಲಿಕ್ಕಿ ಪಿರಿ ।
ದಾಗಿ ಬೆಟ್ಟಂಗಳಂ ಪೊತ್ತು ಮಿಾರಿದ ಕಪಿಯ ।
ನೀಗ ನಿಟ್ಟಿಸಿ ಬೆದರಿದಿರ್ದಪೆನದೆಂತುಟೆಂದೊರ್ವರಕ್ಕಸಿ ನುಡಿದಳು ॥ ೩೪ ॥

ಬೆದರದಿರಿ ಬರಿದೆ ನೀವೀ ಕೋತಿಯಂ ತನ್ನ ।
ತುದಿವೊಲೆಗಳಿಂದಪ್ಪಳಿಸಿ ನರನ ಸೈನ್ಯಮಂ ।
ನದೆದು ಕೆಡಪುವೆನೆಂದು ಯೋಜನಸ್ತನಿಯೆಂಬ ರಕ್ಕಸಿ ನುಡಿಯೆ ಲಾಲಿಸಿ ॥
ಗದಗದಿಸಬೇಡ ಪೇರೊಡಲೊಳಡಸುವೆನಿನಿತು ।
ಸದರಮಂ ನೋಡುತಿರಿ ಸಾಕೆಂದು ರೋಷದಿಂ ।
ದೊದರಿದಳ್ಮತ್ತೊರ್ವಳಸುರಿ ಲಂಬೋದರಿ ನಿಶಾಚರಿ ಮಹಾಭಯಕರಿ ॥೨೫॥

ಬಳಿಕುಳಿದ ರಕ್ಕಸಿಯರೆಲ್ಲರುಂ ಫಲುಗುಣನ ।
ದಳಮಂ ಪೊಡೆದು ನುಂಗಲೆಂದು ಬಾಯ್ದೆರೆದು ಕಿಡಿ ।
ಗಳನುಗುಳುತಾರ್ಭಟಿಸುತೈದಿದರ್ ಕೂಡೆ ಲಂಬೋದರಿ ನರನ ಪಡೆಯನು ॥
ಸೆಳೆದಣಲ್ಗಡಸಿಕೊಳುತಿರ್ದಳೊಡನೊಡನೆ ದಾಂ ।
ದಳಕದರ್ದೀಳ್ವ ನಿಡುವೊಲೆಗಳಿಂ ಬಲವನ ।
ಪ್ಪಳಿಸಿದಳ್ ತಿರುಗಿ ಬೀಸುತ್ತೆ ಯೋಜನಸ್ತನಿ ಕನಲ್ದಾ ಕ್ಷಣದೊಳು ॥ ೨೬

ಅಸುರಕೋಟಿತ್ರಯದೊಡನೆ ಬಂದು ಭೀಷಣಂ ।
ಮುಸುಕಿದಂ ಕೈದುಗಳ ಮಳೆಗಳಂ ಕರೆಯುತ್ತೆ ।
ಮಸಗಿದುರಿ ಪೊಗೆ ಸಿಡಿಲ್ಮಿಂಚು ಕತ್ತಲೆ ಗಾಳಿ ಮುಗಿಲೊಡ್ಡು ದೂಳ್ಗಳಿಂದೆ ॥
ದೆಸೆಗೆಡಿಸುತಹಿ ಸಿಂಹ ಶರಭ ಗಜ ಭೇರುಂಡ ।
ಪಸಿದ ಪುಲಿ ಪಂದಿ ವೃಕ ವೃಷಭಂಗಳಾಗಿ ಗ ।
ರ್ಜಿಸುತುಗ್ರಭೂತಂಗಳಾಗಿ ಬಾಯ್ದೆರೆದಬ್ಬರಿಸುತೆ ಪಾರ್ಥನ ಪಡೆಯನು ॥೨೭॥

ಮಸಗಿದಂ ಬಳಿಕ ರಣಭೀಷಣಂ ಭೀಷಣಂ ।
ವಸುಮತಿಗೆ ಕಾಲಾಂತಕೋಪಮಂ ಕೋಪಮಂ ।
ಪಸರಿಸಿದನರಿದಂ ನಿದಾನವಂ ದಾನವಂ ಫಲುಗುಣನ ಮುಂದೆ ನಿಂದು ॥
ಒಸೆದೆನ್ನನೈದೆ ಪೆತ್ತಾತನಂ ತಾತನಂ ।
ಕುಸುರಿದರಿದನಿಲಜನ ತಮ್ಮನೇ ತಮ್ಮನೇ ।
ಳಿಸುತೆ ಬಹೆ ನಿನ್ನೆ ಹದನಾವುದೈ ನಾವು ದೈತ್ಯರ್ ಕ್ಕೊಲ್ಲದಿರೆವೆಂದನು ॥ ೨೮ ॥

ಈಗಳದರಿಂದೆ ನಿನ್ನಂ ಪಿಡಿದು ನರಮೇಧ ।
ಯಾಗಕ್ಕೆ ಪಶುಮಾಳ್ಪೆನೆಂದು ಫಲುಗುಣನ ರಥ ।
ಕಾಗಿ ಭೀಷಣನರಗಲರ್ಜುನಂ ನಗುತೆ ರಕ್ಷೋಘ್ನ ಬಾಣವನೆ ಪೂಡಿ ॥
ವೇಗದಿಂದಿಸಲಸುರನಳವಳಿದನವನ ಪಡೆ ।
ಸಾಗಿದುದು ಬಿರುಗಾಳಿ ಬೀಸಿದೊಡೆ ಬಿಣ್ಪುಡಿದ ।
ಮೇಘಸಂಕುಲಮಿರದೆ ಪರಿವಂತೆ ಶರಘಾತಿಗೊಗ್ಗೊಡೆದು ಕಂಡಕಡೆಗೆ ॥ ೨೯ ॥

ಮಡಿದವರ್ ಕೆಲರಂಗಭಂಗದಿಂ ಕೈಕಾಲ್ಗ ।
ಳುಡಿದವರ್ ಕೆಲರೆಚ್ಚ ಕೂರ್ಗಣೆಗಳವಯುವದೊ ।
ಳಿಡಿದವರ್ ಕೆಲರೇರ್ಗಳಿಂದೆ ವೇದನೆಗಳಂ ಸೈರಿಸದೆ ಗಳದಸುವನು ॥
ಪಿಡಿದವರ್ ಕೆಲರಲ್ಲಿ ಗಿಡುಮರವನೆಡೆಗೊಂಡು ।
ಸಿಡಿದವರ್ ಕೆಲರೋಡಿ ಬದುಕಿವೆವು ತಾವೆಂದು ।
ನುಡಿದವರ್ ಕೆಲರಾದರರ್ಜುನನಿಸುಗೆಯಿಂದವಾಕ್ಷಣಂ ರಾಕ್ಷಸರೊಳು ॥ ೪೦ ॥

ಓಡಿಸಿ ಬಲೌಘಮಂ ಬೀಸಿ ಬಿರುಮೊಲೆಗಳಂ ।
ತಾಡಿಸುವ ಯೋಜನಸ್ತನಿಯನುರೆ ಬಾಯ್ದೆರೆದು ।
ನಾಡೆ ಪಡೆಯುಂ ತುತ್ತುಗೊಂಬ ಲಂಬೋದರಿಯನುಳಿದಸುರಿಯರ ಕೃತ್ಯವ ॥
ನೋಡಿ ವಿಸ್ಮಿತನಾಗಿ ಪೂರ್ವಮಂ ನೆನೆದು ಕೊಂ ।
ಡಾಡಿ ನಸುನಗುತೆ ದೆಸೆದೆಸೆಗೆ ವಾಲಾಗ್ರಮಂ ।
ನೀಡಿ ತೆಗೆತೆಗೆದಿಳೆಯೊಳಪ್ಪಳಿಸಿ ಕೊಂದನವರೆಲ್ಲರಂ ಕಲಿಹನುಮನು ॥ ೪೧ ॥

ನರನ ಶರಜಾಲದಿಂ ಕಡಿವಡೆದು ವೀರವಾ ।
ನರನ ಲಾಂಗೂಲದಿಂ ಬಡಿವಡೆದು ರಕ್ಕಸರ ।
ನೆರವಿ ಹೇರಾಳದಿಂ ಪುಡಿವಡೆದು ಬಯಲಾಗೆ ಭೀಷಣಂ ಭೀತಿಗೊಂಡು ॥
ವಿರಚಿಸಿದನೊಂದುಪಾಯಾಂತರವನಲ್ಲಿ ಮೈ ।
ಗರೆದನಾಗಳೆ ಮಾಯದಿಂದೆ ಮುನಿಯಾದನದು ।
ಸುರನದಿಯ ತೀರಮಾದುದು ಕಣ್ಗೆ ಕಾಣಿಸಿತು ಪುಣ್ಯಾಶ್ರಮಂ ಪೊಸತೆನೆ ॥ ೪೨ ॥

ಎಲ್ಲಿ ನೋಡಿದೊಡೆ ಗಂಗಾಪ್ರವಾಹದ ಸಲಿಲ ।
ವೆಲ್ಲಿ ನೋಡಿದೊಡೆ ಪುಣ್ಯಾಶ್ರಮಕುಟೀರಂಗ ।
ಳೆಲ್ಲಿ ನೋಡಿದೊಡೆ ನಿಬಿಡದ್ರುಮಚ್ಛಾಯೆಗಳ್ ಕುಸುಮಫಲಮೂಲಂಗಳು ॥
ಎಲ್ಲಿ ನೋಡಿದೊಡೆ ಶುಕ ಪಿಕ ಮಯೂರ ಧ್ವನಿಗ ।
ಳೆಲ್ಲಿ ನೋಡಿದೊಡೆ ಸಾತ್ವಿಕಮಾದ ಮೃಗನಿಕರ ।
ಮೆಲ್ಲಿ ನೋಡಿದೊಡೆ ಸಂಚರಿಪ ತಾಪಸವಟುಗಳಸೆದವರರ್ಜುನನ ಕಣ್ಗೆ ॥ ೪೩ ॥

ಆ ದಿವ್ಯಋಷಿಗಳಾಶ್ರಮದಿಂದಮೊರ್ವಮುನಿ ।
ಸಾದರದೊಳೈತಂದು ಫಲುಗುಣನ ಮುಂದೆ ನಿಂ ।
ದೀದನುಜರಂ ಕೊಂದಡೇನಹುದು ಪರಹಿಂಸೆ ಲೇಸಲ್ಲ ಬಲ್ಲವರ್ಗೆ ॥
ಮಾಧವ ಮಹೇಶ್ವರಾರಾಧನತಪೋ ಜಪ ಸ ।
ಮಾಧಿಗಳನುತ್ತಮ ಸ್ವಾಧ್ಯಾಯಗತಿಗಳಂ ।
ಸಾಧಿಸುವೊಡಿದು ಪುಣ್ಯನದಿ ಗಂಗೆ ಶುದ್ಧಪ್ರದೇಶಮಿದು ನಿನಗೆಂದನು ॥ ೪೪ ॥

ಬೆರಗಾದನರ್ಜುನಂ ದಾನವನ ಕೃತಕಮಂ ।
ದರಿದು ಮುನಿಯಾಗಿರ್ದವನ ತುಡುಕಲಾ ಮಾಯೆ ।
ಬರೆತು ಮುನ್ನಿನ ರಾಕ್ಷಸಾಕೃತಿಗೆ ನಿಲಲಾಗಿ ಪಿಡಿದಾಕ್ರಮಿಸಿ ಮನೆಯೊಳು ॥
ತುರುಗಿರ್ದ ಸಕಲಭೂಷಣ ವಿವಿಧಮಣಿಗಳಂ ।
ತರತರದ ವಸ್ತುಗಳನುತ್ತಮಗಜಂಗಳಂ ।
ಮಿರುಪ ಹಯ ರತ್ನಂಗಳಂ ಕೊಂಡು ದೈತ್ಯರಂ ದೆಸೆಗೆಡಿಸಿದಂ ಪಾರ್ಥನು ॥೪೫॥

ಕೋಳೊಡವೆ ಮುಂತಾಗಿ ತಿರುಗಿದಂ ಫಲುಗುಣಂ ।
ಮೇಲೆ ನಡೆದುದು ಕುದುರೆ ತೆಂಕದೆಸೆಗೊಡನೆ ಕೆಂ ।
ಧೂಳಿಡುತೆ ಬಹ ಬಹಳಬಲಸಹಿತ ಮಣಿನಗರವೆಂಬ ಪಟ್ಟಣದ ಬಳಿಗೆ ॥
ಪೇಳಲೇನರ್ಜುನಸುತಂ ಬಭ್ರುವಾಹನಂ
ಪಾಲಿಸುವನಾ ಪೊಳಲನೀ ನರಂ ಬಂದುದಂ ।
ಕೇಳಲೇಗೈದಪನೊ ದೇವಪುರನಿಲಯ ಲಕ್ಷ್ಮೀಪತಿಯ ಮೈದುನಂಗೆ ॥೪೬॥

ಹದಿನೇಳನೆಯ ಸಂಧಿ

ಸೂಚನೆ ಏನಯದಿಂವ್ಯೈ ತಂದು ಕಾಣಿಕೆ ಬಭ್ರುವಾ ।
ಹನನಂ ಜರೆದು ನರಂ ನೂಕಿದೊಡೆ ಬಳಿಕವಂ ।
ಕನಲಿ ಪಾರ್ಥನ ಚಾತುರಂಗದೊಳ್ ಕಾದರ್ಕೆ ಪೇನನಹಿತಿವಿರಾವದನು ।

ಭೂಭುಜಲಲಾಮ ಕೇಳಿಂದ್ರತನಯನ ತುರಗ ।
ಮಾಭೀಷಣನ ಸೀಮೆಯಂ ಕಳೆದು ಬರೆ ಮುಂದೆ ।
ಶೋಭಿಸಿತು ವರ್ಷಾಗಮಂ ಧರೆಯ ಬೇಸಗೆಯ ಬೇಸರಂ ತವೆ ತವಿಸುತೆ ।
ಲಾಭಿಸುವ ಚಾತಕಪ್ರೀತಿಯಂ ಕಂಡನೂ ।
ಯಾಧರವನಂಡೆಗಳ್ ತಾಳಲಾರದೆ ಘನ ।
ಕ್ಷೋಭನಿಂದೋಡಿದುವು ಪರರ ಸಿರಿಯಂ ಸೈರಿಸರು ವಿಜಾತಿಯ ಜನರೆನೆ ।೧।

ಎದ್ದುವು ಮುಗಿಲ್ಗಳೆಣ್ದೆಸೆಗಳೊಳ್ ತರತರದೊ
ಳಿದ್ದುವು ಗಿರಿಗಳಂತೆ ಮಿಂಚಿದುವು ದಿಗ್ವಧುಗ ।
ಳುದ್ದಂಡದಿಂದೆ ಪರ್ಜನ್ಯನಂ ಸೆಣಸಿ ನೋಡುವಚಲಾಪಾಂಗದಂತೆ ॥
ಸದ್ದಾತ್ಯವಾಗಿ ತನ್ನವೋಲಿರದ ಲೋಭಿಯಂ ।
ಗದ್ದಿಸುವ ತೆರದಿಂದೆ ಮೊಳಗಿದುವು ಧರಣಿಯೊಳ್ ।
ಬಿದ್ದ ಮುಂಬನಿಯ ಕಂಪಿಗೆ ಸೊಗಸಲಾನೆಗಳ್ ಕೃಷಿಕತತಿ ನಲಿಯುಲೊಡನೆ ॥೨॥

ವರ ನೀಲಕಂಠ ನೃತ್ಯದಿನನಂಧಕಾಸುರ ನ ।
ಮರ ಧರಣಿಯಂ ಕುವಲಯಾನಂದಕರದ ಘನ ।
ಪರಿಶೋಭೆಯಿಂದೆ ಚಂದ್ರೋದಯವನಾಲೋಕ ಚಂಚಲೋದ್ಭಾಸದಿಂದೆ ॥
ತರುಣಿಯ ಕಟಾಕ್ಷಮಂ ರಾಜಹಂಸಪ್ರಭಾ ।
ಹರಣದಿಂ ಪರಶುರಾಮಪ್ರತಾಪವನಧಿಕ ।
ತರವಾಹಿನೀಘೋಷದಿಂದೆ ನೃಪಯಾತ್ರೆಯಂ ಪೋಲ್ತು ಕಾರೆಸೆದಿರ್ದುದು ॥೩॥

ಜಾತ ನವ ಶಾಡ್ವಲದ ಸೊಂಪಿಡಿದೆಸೆವ ನೆಲದ ।
ಪೂತೆಸೆವ ಜಾಜಿಗಳ ವರಕುಟಜ ರಾಜಿಗಳ ।
ಕೇತಕಿಯ ಧೂಳಿಗಳ ಕೆದರುತಿಹ ಗಾಳಿಗಳ ಲಸದಿಂದ್ರಗೋಪಚಯದ ॥
ಕಾತೆಳೆಯ ಮಾವುಗಳ ಬನಬನದ ಠಾವುಗಳ ।
ನೂತನ ಸುವಾರಿಗಳ ನಡೆಗುಡದ ದಾರಿಗಳ ।
ಭೂತಳದ ಸಿರಿ ಮೆರೆಯೆ ಮುಗಿಲ್ಕೈದೆ ಮಳೆಗರೆಯೆ ವರ್ಷರ್ತು ಚೆಲ್ವಾದುದು ॥೪॥

ತುಂಗ ನವರತ್ನಮಯ ಸುಪ್ರಭಾಸುರ ಕಾಮರ್ಗ |
ರಂಗಳಿಂ ಸುರಚಾಪಮಾರ್ಗಂಗಳಂ ಪಿಡಿದ ಪಾ |
ದ್ಯಂಗಳ ಗಭೀರ ಧ್ವನಿ ಘೋಷಂಗಳಿಂದೆ ಘನಘೋಷಂಗಳಂ ಮಿಗಿಲ್ದ |
ಸಂಗತ ಪ್ರಪಾಲ ಪಾಟಿಗಳಿಂ ಪಾಟಿಗ |
ಳಂಗಳ್ಗೆ ಪೀಠಪಾಂಡವ ಕೃಷ್ಣಪಾಗರಂ |
ರಂಗೊಳಿಪ ಕಾರ್ಗಾಲದಂತೆಸೆದು ಪಾಟ ಮಣಿಪುರಕಾಗಿ ನಡೆತಂದುದು | ೫ |

ಕ್ಷೋಣಿಯೊಳಿಂದ್ರ ಕೇತನದನನ ಕಣ್ಗೆ ಮಣಿಪುರಂ |
ಕಾಣಿಸಿತು ಕನಕರಚಿತದ ಕೋಂಟೆ ಕೊತ್ತಳದ |
ಮಾಣಿಕದ ಮಚ್ಚ್ಸ್ವದಸ್ವ ಗೋಪುರದಿಕ್ಕದ ಮನೆಗಳುಪ್ಪರಿಗೆ ಸಾಲ್ಗಳ |
ಶೋಣಪ್ರಭಾರ ತೋರಣದ ಸಂಸದದ ಕ |
ಟ್ಟಾಣ ಮುತ್ತುಗಳ ಲೋವೆಗಳ ಗೋಪುರದ ದ |
ನ್ನಾಣದ ಮಚ್ಚ್ಪತ್ರದ ಕುಸುರಿದೆಸಕದಿಂ ಮೆರೆವ ಬಾಗಿಲ್ಗಳಿಂದೆ | ೬ |

ಪಗಲ ದೆಸೆಗಳುತಿ ಪರಿದಿರ್ದ ದೆಲ್ವಂಗಳಿ |
ನಗರಮಂ ಪೊಕ್ಕು ಪೆಂಬಿಸಿಸಿ ಮಾಮರ್ಲೆತಿರಲ್ |
ಮಿಗೆ ಮೋಹರಿಸಿ ಬಂದು ಮತ್ತಗೆಯುನಿಕ್ಕಿ ಕೊಂಡಿರ್ದವಿಹಿಲ್ಗಳಂತೆ |
ಗಗನವನಡರ್ದ ಸೌಧಂಗಳ ಮರೀಚಿಯಿಂ |
ಪೊಗರುಗುವ ಪೊಚ್ಚಪೊಸಪೊನ್ನ ಕೋಂಟೆಗಳ ಠಾಂ |
ಠಗಿಸ್ಪೆದೆ ಮುಸುಕಿಕೊಂಡಿದೆವಿರ್ದುವರ್ಜುನನ ಕಣ್ಗೆ ಕೌತುಕವಹಗಳು | ೭ |

ಮೇರುಗಿರಿಯಂ ಜರೆವ ಕಾಂಚನದ ಗೋಪುರಂ |
ತೋರಮೊರೆ ರಾಜಮಾರ್ಗಂ ದಾಡುಂತೆ ನೃಪಾ |
ಗಾರಂ ಮಯಾರಂಬಾಯಂ ಚಿತ್ರಶಾಲೆಗಳ್ ಚಲಿಸುವಳಕಾವಳಗಳು |
ತೋರಣಂ ಮಣಿಹಾರಮೆಸೆವ ಕೋಟಾವಲಯ |
ಮಾರಾಜಿಪಂಬರಂ ಪರಿಪೆ ಮೇಲಿರೆ ಗೃಹಮ |
ದಾರೆಯೊಳ ದರಹಾಸವಾಗಿರಾ ನಗರಿ ಚೆಲ್ವಿನ ನಾರಿಯಂತಿರ್ದುದು | ೮ |

ಕೋಟೆಗಾವಲ ಧುರ ವಿವಿಧಾಯುಧಂಗಳ ಕ |
ವಾಟರಕ್ಷೆಯ ಬಲದ ಸನ್ನಾಹಸಾಧನದ |
ಕಟಕದತಿಭೀಕರದ ದುರ್ಗದಭಿಮಾನದೇವತೆ ಸಕಲಭೂವಲಯಕೆ |
ಮಿಗಿಲೆನಿಸುವಾತನೀ ಪುರರಾಜ್ಯನೊರ್ವನೆ ನ |
ಪಾಟಕಿಯೊಳಿಂದು ದಿರಲೆತ್ತ ತೋರಿಸುವಂತೆ |
ನೋಟಕರ ಕಣ್ಗೆ ಕಾಣಿಸಿದುವೆತ್ತೆಸೆಯ ಧೆಂಕಣಿಯ ಪಳಿಪಿಗಾಲ್ಗಳ್ | ೯ |

ತಂಡತಂಡದೊಳಾ ಪೊಳಲ ಪುಗುವ ಪೊರಮಡುವ।
ಶುಂಡಾಲ ವಾಜಿಗಳ ಪುರಜನದ ಪರಿಜನದ।
ಮಂಡಲಾಧಿಪರೆನಿಪ ಹಂಸಧ್ವಜಾದಿ ಭೂಭುಜರನುದಿನಂ ತಪ್ಪದೆ॥
ಕೊಂಡುಬಂದೀವ ಕಟ್ಟಳೆಯ ಕಪ್ಪದ ಪೊನ್ನ।
ಬಂಡಿಗಳ ಸಾಸಿರದ ಸಂದಣಿಯ ಕಾಣುತಂ।
ಕಂಡು ಮರಳುವ ಮನ್ನೆಯರ ಮಹಾವಿಭವಂಗಳೆಸೆದುವಾ ಪುರದ ಪೊರೆಗೆ ॥೧೦॥

ನೆಟ್ಟನೆ ಹಯಂ ಪೋಗಿ ವಹಿಲದಿಂ ಪೊಕ್ಕುದಾ।
ಪಟ್ಟಣವನದರೊಡನೆ ನಡೆತಂದು ಪಾಳೆಯಂ।
ಬಿಟ್ಟುದು ಪುರೋದ್ಯಾನವೀಥಿಗಳೊಳರ್ಜುನಂ ನಗರಮಂ ನೋಡಿ ನಗುತೆ॥
ಕಟ್ಟೆಸಕದಿಂದೆ ಕಂಗೊಳಿಸುತಿದೆ ಪೊಸಲಿದಂ।
ಮುಟ್ಟಿ ಪಾಲಿಪ ವೀರನಾರವಂ ಕುದುರೆಯಂ।
ಕಟ್ಟುವನೆ ಪೇಳೆಂದು ಹಂಸಧ್ವಜಕ್ಷಿತಿಪನಂ ಕೇಳ್ದೊಡಿಂತೆಂದನು ॥೧೧॥

ನೀನರಿದುದಿಲ್ಲಲಾ ಪಾರ್ಥ ಮಣಿಪುರವೆಂಬ।
ರೀನಗರಮಂ ಬಭ್ರುವಾಹನಂ ಪ್ರಖ್ಯಾತ।
ಭೂನಾಥನಿಲ್ಲಿಗರಸವನಿಪರೊಳಗ್ಗಳೆಯನಿವನ ಸಿದ್ಧಾಯಕಾಗಿ॥
ಏನೆಂಬೆನೊಂದು ಸಾಸಿರ ಬಂಡಿ ಕನಕಮಂ।
ನ್ಯೂನಮಿಲ್ಲದೆ ತೆತ್ತು ಬಹೆವು ನಾವೆಲ್ಲರುಂ।
ಹೀನಮಾದೆಡೆ ದಂಡಿಸುವನೆಂಬ ಭೀತಿಯಿಂ ಪ್ರತಿದಿನದೊಳಂ ತಪ್ಪದೆ ॥೧೨॥

ಈತಂಗೆ ಸಚಿವಂ ಸುಬುದ್ಧಿಯೆಂಬವನೋರ್ವ।
ನಾತನೇ ಪಾಲಿಸುವನಿವನ ಭೂತಳಮಂ ನಿ।
ಜಾತಿಶಯ ಧರ್ಮದಿಂದೆಳ್ಳನಿತು ದೋಷಮಿಲ್ಲದೆ ಸಾವಧಾನನಾಗಿ॥
ನೀತಿಪಥಮಂ ಬಿಡದೆ ವಿವಿಧವರ್ಣಾಶ್ರಮದ।
ಜಾತಿಭೇದವನರಿದು ಸಂತತಂ ಪ್ರಜೆಗಳಂ।
ಪ್ರೀತಿಯಿಂ ಪೊರೆದು ಪರಿಜನಕೆ ಪಡುಳಿಗನಾಗಿ ಭೂಪನಂ ಪೋಷಿಸುವನು ॥೧೩॥

ಒಂದು ಕೊಡಕೆಯ ಕಪ್ಪಿನಿಂದೆಸೆವ ತೇಜಿಗಳ್।
ಕುಂದೇಂದುಧವಳಾಂಗವಾನೆಗಳ್ ಮಣಿಮಯದ।
ಪೊಂದೇರ್ಗಳಿನಿತೆಂದರಿಯರಿವನ ಕರಣಿಕರ್ ಮಿಕ್ಕ ರಥ ಕರಿ ಘಟೆಗಳ॥
ಮಂದಿ ಕುದುರೆಯ ಪವಣನರಿವರಾರ್ ಭೂಪಾಲ।
ವೃಂದದೊಳ್ ಪಡಿಯುಂಟೆ ಬಭ್ರುವಾಹಂಗೆ ಕಡು।
ಪೊಂದಿದತಿಶಯವೀರನೀ ತುರಗಮಂ ಕಟ್ಟಿದಿರ್ದಪನೆ ಪೇಳೆಂದನು ॥೧೪॥

ಈ ಪುರದೊಳಿರ್ಪ ಮಾನವರೆಲ್ಲರುಂ ರಮಾ |
ಶ್ರೀಪತಿಯ ಭಜನೆಯಲ್ಲದೆ ಪೆರತರಿಯರತಿದ |
ಯಾಪರರ್ ವೇದಾರ್ಥಕೋವಿದರ್ ಸತ್ಯವ್ರತಾಚಾರಸಂಪನ್ನರು ||
ಕೋಪವರ್ಜಿತರಹಿಂಸಾಮತಿಗಳಾತ್ಮಸ್ವ |
ರೂಪಜ್ಞರತಿಬುಧರ್ ದಾನಿಗಳ್ ಶುಚಿಗಳ್ ಪ್ರ |
ತಾಪಿಗಳ್ ವೀರರ್ಕಳತಿನಿಪುಣರನಸೂಯರಸ್ತ್ರಶಸ್ತ್ರಪ್ರೌಢರು ||೧೫||

ಯೋಗಿಜನದಂತೆ ಮುಕ್ತ್ಯಾಕಾರದಿಂ ಪೂಜ್ಯ |
ಮಾಗಿಹುದು ಪಾತಾಳನಿಳಯದಂತಾವಗಂ |
ಭೋಗಿಪವಿಲಾಸಮಂ ತಳೆದಿಹುದು ಸಂತತಂ ಗಾಂಧರ್ವಶಾಸ್ತ್ರದಂತೆ ||
ರಾಗಾನುಬಂಧ ಮೋಹನ ಮಧುರತಾಲಂಬ |
ಮಾಗಿಹುದು ಪಾರ್ಥ ಕೇಳೀಪುರದ ಸಕಲ ನಾ |
ರೀಗಣಂ ಮೋಹಂತುಮಲ್ಲದೆ ಪತಿವ್ರತಾಶೀಲಮಂ ತಾಳ್ದಿಸೆವುದು ||೧೬||

ಇಲ್ಲಿ ಪುರುಷಸ್ತ್ರೀಯರೊರ್ವರುಂ ಪಾತಕಿಗ |
ಳಲ್ಲದಿಹ ಕಾರಣಂ ಸಾನ್ನಿಧ್ಯದಿಂ ರಮಾ |
ವಲ್ಲಭಂ ಪೊರೆವನೀ ನಗರಮಂ ತನಗಿದೆರಡನೆಯ ವೈಕುಂಠಮೆಂದು ||
ನಿಲ್ಲದೆ ತುರಂಗಮಂ ಪೋಗಿ ಪೊಕ್ಕುದು ಬಿಡಿಸ |
ಬಲ್ಲರಂ ಕಾಣೆನಾಂ ಫಲುಗುಣ ಮುರಾಂತಕನ |
ಮೆಲ್ಲಡಿಯ ಕರುಣಮೆಂತಿಹುದೆಂದರಿಯೆನೆಂದನಾ ಹಂಸಕೇತು ನೃಪನು ||೧೭||

ಭೂರಿಶೀಲ ಕೇಳ್ ಮರಾಳಧ್ವಜನ ಮಾತನಿಂ |
ತಾಲಿಸುವ ಪಾರ್ಥನ ಕಿರೀಟಾಗ್ರದೊಳ್ ಬಂದು |
ಕಾಲಹರಿ ನಿಂದಿರ್ದುದೊಂದು ಪರ್ದೇನೆಂದೆನುತ್ಪಾತದದ್ಭುತವನು ||
ನೀಲಧ್ವಜಾದಿ ನೃಪರೆಲ್ಲರುಂ ತಮತಮಗೆ |
ಮೇಲಣಪಜಯಸೂಚನೆಯಲಾ ನರಂಗಕಟ |
ಕಾಲಗತಿಯೆಂತಿಹುದೊ ಶಿವಶಿವಾಯೆನುತೆ ಮನವಳುಕಿ ಚಿಂತಿಸುತಿರ್ದರು ||೧೮||

ಇತ್ತಲೀ ತೆರದೊಳಿರುತಿರಲತ್ತಲಾ ಪುರದೊ |
ಳುತ್ತಮಹಯಾಗಮವನೊಡನೆ ಬಂದಿಕ ನೃಪನ |
ವೃತ್ತಾಂತಮಂ ಬಭ್ರುವಾಹನಂ ಕೇಳ್ದು ಭಟರಂ ಕಳುಹಿ ತೊಳತೊಳಗುವ ||
ಮುತ್ತುಗಳ ಮಾಲೆಯಿಂ ಕನಕದಾಭರಣದಿಂ |
ಬಿತ್ತರದ ಗಂಧಮಾಲ್ಯಾಕ್ಷತೆಗಳಿಂ ಪೂಜೆ |
ವೆತ್ತಸೆವ ತುರಗಮಂ ತರಿಸಿ ಕಟ್ಟಿದನೋದಿಕೊಂಡು ಪಟ್ಟದ ಲಿಪಿಯನು ||೧೯||

ಅರಸ ಕೇಳಾದುದನಿತರೊಳಸ್ತಮಯ ಸಮಯ ।
ಮರವಿಂದದಲರ್ಗಳೊಳ್ ಸೆರೆಯಾದುವಾರಡಿಗ ।
ಳಿರದೆ ಸರಿದುವು ಬಿಸಿಲ ಬೀಡುಗಳ್ ಗೂಡುಗೊಂಡುವು ಕೂಡೆ ಪಕ್ಷಿಜಾತಿ ॥
ಪಿರಿದೆನಿಪ ಕತ್ತಲೆಯ ರಾಶಿಯಂ ಪೊತ್ತಿಕೊಂ ।
ಡುರಿವ ಬೆಂಕಿಯ ಕಡೆಯೊಳುಳಿದ ಕೆಂಗೆಂಡಮೆನೆ ।
ತರಣಿಮಂಡಲಮೆಸೆದುದಪರದಿಗ್ಭಾಗದೊಳ್ ಕೊರಗಿದುವು ಕೋಕಂಗಳು ॥೨೦॥

ವಿಳಸಿತಾಂಬರ ಮಣಿ ವಿಭೂಷಣವನುಳಿದು ಮಂ ।
ಗಳರಾಗಮಂ ತಾಳ್ದು ತಾರಾಭರಣವನಾಂ ।
ತಳೊ ನಂಜೆವೆಣ್ಣೆಂಬ ತೆರದಿಂದೆ ಕೆಂಪಿಡಿದುಡುಗಳೆಸೆದುವಾಗಸದೊಳು ॥
ನಳಿನಾಳಿ ನಾಳನಳಿಕುಲಕಿರಲಿ ಸರಸ ಪರಿ ।
ಮಳಸಾರ ಮಧುವೆಂದು ಬಾಗಿಲ್ಗಳಂ ಪೂಡಿ ।
ಕೊಳುತಿರ್ಪವೆಂಬಂತೆ ಮುಗಿದುತಿರ್ದುವು ಕೂಡೆ ತೀವಿದುವು ಕತ್ತಲೆಗಳು ॥೨೧॥

ಏನೆಂಜೆನರ್ಜುನನ ಕಟಕಮಿರ್ದುದು ಮಹಾಂ ।
ಭೋನಿಧಿಯ ಮಸಕದಿಂ ಪೊಳಲು ಪೊರವಳಯದು ।
ದ್ಯಾನವೀಧಿಗಳೊಳತ್ತಲ್ ಬಭ್ರುವಾಹನಂ ನಗರದೊಳೆಣಿಕೆಗೊಳ್ಳದೆ ॥
ತಾನಮಲ ಸಂಧ್ಯಾವಿಧಿಗಳನಾಚರಿಸಿ ಸು ।
ಮ್ಮಾನದಿಂ ಪತ್ತುಸಾಸಿರ ಕಂಭದೆಸಕದಾ ।
ಸ್ಥಾನಮಂಟಪಕೆ ಬಂದೋಲಗಂಗೊಟ್ಟನತಿಸಂಭ್ರಮದೊಳಂದಿನಿರುಳು ॥೨೨॥

ಪಳುಕುಗಳ ನೆಲಗಟ್ಟು ಮರಕತಂಗಳ ಜಗಲಿ ।
ಪೊಳೆವ ನೀಲದ ಭಿತ್ತಿ ಬಜ್ಜರದ ಕಂಭಮುರೆ ।
ತೊಳಪ ವೈಡೂರಿಯದ ಮದನಕೈ ಮಿರುಪ ಗೋಮೇಧಿಕದ ಬೋದಿಗೆಗಳು ॥
ಸಲೆ ಪುಷ್ಯರಾಗದ ತೊಲೆಗಳೆಸೆವಮಾಣಿಕಂ ।
ಗಳ ಲೋವೆ ಮುತ್ತುಗಳ ಸೂಸಕಂ ಮಿಸುಪಾ ಪ ।
ವಳದ ಪುತ್ತಳಿ ಪೊನ್ನ ಪೊದಕೆ ರಂಜಿಸಿತು ಚಾವಡಿಯ ಚೌರಸದೆಡೆಯೊಳು ॥೨೩॥

ಸಜ್ಜುಕಂ ಮುಡಿವ ತಿಲಕಮನಿಡುವ ಮೊಗಮುರಿವ ।
ಕಜ್ಜಳಂಬರೆವ ಕನ್ನಡಿಯ ನಿಟ್ಟಿಪ ಪಾಡು ।
ವುಜ್ಜುಗದ ನರ್ತನದ ಕೋಪುಗಳ ವೀಣಾದಿವಾದ್ಯಮುಂ ಬಿತ್ತರಿಸುವ ॥
ಕಜ್ಜದ ಪಲವುಕಲೆಗಳಂ ತೋರುವಭಿನವದ ।
ಸಜ್ಜೀವಮಾಗಿರ್ದ ಪುತ್ತಳಿಗಳವಯವದ ।
ಪಜ್ಜಳಿಪ ನವರತ್ನಭೂಷಣದ ಕಾಂತಿಗಳ್ ಕಣ್ಗೆಸೆದುವಾ ಸಭೆಯೊಳು ॥೨೪॥

ಅಂಚೆಗಳ್ ಕೊಳರ್ವಕ್ಕಿಗಳ್ ಜೊನ್ನವಕ್ಕಿಗಳ್ ।
ಪಿಂಚೆಗಳ್ ಗಿಳಿಗಳೆಣೆವಕ್ಕಿಗಳ್ ಪರಮೆಗಳ್ ।
ಕೊಂಚೆಗಳ್ ಕೋಗಿಲೆಗಳಲ್ಲಲ್ಲಿಗೊಪ್ಪಿದುವು ಸಜ್ಜೀವಭಾವದಿಂದೆ ॥
ಪಂಚಾನನಾದಿ ಮೃಗತತಿ ಗಜಹಯಾವಳಿ ವಿ ।
ರಿಂಚಿಸೃಷ್ಟಿಯೊಳುಳ್ಳ ಮೂಜಗದ ನಾನಾಪ್ರ ।
ಪಂಚುಗಳ ಚಿತ್ರಪತ್ರಂಗಳೆಸೆದಿರ್ದುವಾ ಸಭೆಯೊಳ್ ಮನೋಹರಮೆನೆ ॥೨೫॥

ನೀಲಮಣಿಕಾಂತಿಗಳ ಕತ್ತಲೆಯ ಮುತ್ತುಗಳ ।
ಡಾಳಗಳ ಕೌಮುದಿಯ ಮಾಣಿಕದ ರಶ್ಮಿಗಳ ।
ಬಾಲಾತಪದ ಮಿದ್ರುಮಚ್ಛವಿಯ ಸಂಜೆಗೆಂಪಿನ ಪಗಲಿರುಳ್ಗಳಲ್ಲಿ ॥
ತೇಲದಿಹುವಲ್ಲದೆ ದಿವಾರಾತ್ರಿಯುಂಟೆಂಬ ।
ಕಾಲಭೇದವನರಿಯದಾ ಮಹಾಸಭೆ ಸುರಪ ।
ನೋಲಗದ ಮಂಟಪದ ಸೌಭಾಗ್ಯಕೆಂಟುಮಡಿಯಾಗಿರ್ದುದಚ್ಚರಿಯೆನೆ ॥೨೬॥

ಕಸ್ತುರಿ ಜವಾಜಿಗಳ ಸಾರಣೆಯ ಕುಂಕುಮ ಪ ।
ರಿಸ್ತರಣದಗುರು ಚಂದನ ಧೂಪ ವಾಸಿತದ ।
ವಿಸ್ತರದ ಕರ್ಪೂರತೈಲದಿಂದಲ್ಲಲ್ಲಿಗುರಿವ ಬೊಂಬಾಳಂಗಳ ॥
ಶಸ್ತರತ್ನ ಪ್ರದೀಪ ಜ್ವಾಲೆಗಳ ಸಭೆ ಸ ।
ಮಸ್ತ ಸೌಭಾಗ್ಯದಿಂದೊಪ್ಪುತಿರಲಾಗ ಭೂ ।
ಪಸ್ತೋಮಸಹಿತ ಬಂದಾ ಬಭ್ರುವಾಹನಂ ಕುಳ್ಳಿರ್ದನೋಲಗದೊಳು ॥ ೨೭ ॥

ಓಲಗಕೆ ಬಂದ ನೃಪಕೋಟಿ ಕೋಟೀರ ಪ್ರ ।
ಭಾಲಹರಿ ಹರಿದು ಮುಸುಕಿತು ತತ್ಸಭಾಮಣಿ ।
ಜ್ವಾಲೆಗಳ ನಿಕರಮಂ ಕರಮಂ ಮುಗಿವ ಭಟರ ಸಂಘಸಂಘರ್ಷಣದೊಳು ॥
ತೇಲಿ ಕಡಿಕಿದ ಕಂಠಮಾಲೆಗಳ ಗಳಿತಮು ।
ಕ್ತಾಳಿಗಳಗಲಕೆ ಪರಿದೆಸೆವ ಮುತ್ತಿನ ರಂಗೆ ।
ವಾಲಿಗಳನಿಕ್ಕಿದರು ದರ್ಶನೋತ್ಸವಕೆಂಬ ತೆರನಾದುದಾ ಸ್ಥಳದೊಳು ॥ ೨೮ ॥

ವಿಭ್ರಾಜಿಸುವ ರಾಜಮಂಡಲದಿರವನೆ ಕಂ ।
ಡಭ್ರದಲ್ಲಿಯ ರಾಜಮಂಡಲಂ ತನಗಿನ್ನು ।
ವಿಭ್ರಮದ ವೃತ್ತಮೇಕೆಂದು ಲಜ್ಜಿಸಿ ನೀಳ್ದಚ ತೆರದಿಂದೆ ಕಂಗೊಳಿಸುವ ॥
ಶುಭ್ರಚಾಮರಮಂ ನಿಮಿರ್ದು ಚಿಮ್ಮಿಸಿದರ್ ।
ಲಭ್ರಮರಕುಂತಲದ ಕಮಲದಳನೇತ್ರೆಯರ್ ।
ಬಭ್ರುವಾಹನ ಮಹೀಪಾಲಕನ ಕೆಲಬಲದೊಳಂದಿನಿರುಳೋಲಗದೊಳು ॥ ೨೯ ॥

ಬಳಿಕಾ ಮಹಾಸ್ಥಾನದೊಳ್ ಬಭ್ರುವಾಹನಂ ।
ನಲವಿಂದೆ ಕುಳ್ಳಿರ್ದು ನಗುತೆ ಪರಮಂಡಲ ।
ಸ್ಥಳದಿಂದೆ ಬಂದ ರಾಯರ ಯಜ್ಞತುರಗಮಂ ಕಟ್ಟಿಕೊಂಡೆವು ಮನೆಯೊಳು ॥
ಕೊಳುಗುಳಕೆ ಮಿಡುಕುವರ್ ನಾಳೆ ನಾವಿನ್ನು ಹಿಂ ।
ದುಳಿಯದಾರದು ಕದನಕನುವಾಗಿರಲಿ ಪಾಯ ।
ದಳವೆಂದು ನುಡಿದಂ ಸುಬುದ್ಧಿ ಮೊದಲಾಗಿಹ ಶಿರಃಪ್ರಧಾನಿಗಳ ಕೂಡೆ ॥ ೩೦ ॥

ಇಂತಿಲ್ಲಿ ನಡೆದಖಿಲವೃತ್ತಾಂತಮಂ ಕೇಳ್ದ ।
ಳಂತಃಪುರದೊಳರ್ಜುನನ ಗುಣಾವಳಿಗಳಂ ।
ಸಂತತಂ ನೆನೆದು ಚಿಂತಿಪ ಬಭ್ರುವಾಹನನ ನಿಜಮಾತೆ ಚಿತ್ರಾಂಗದೆ ॥
ಸಂತೋಷಮಂ ತಾಳ್ದು ತನಯನೋಲಗಕೆ ಭರ ।
ದಿಂ ತಳರ್ದಿದಿರೇಳ್ವ ಕುವರನಂ ತೆಗೆದಪ್ಪಿ ।
ಕುಂತೀಸುತನ ವಾಜಿಯಂ ಕಟ್ಟಿದೈ ಮಗನೆ ಲೇಸುಮಾಡಿದೆ ಯೆಂದಳು ॥ ೩೧ ॥

ಕ್ಷುದ್ರಬುದ್ಧಿಯನೆಲ್ಲಿ ಕಲಿತೆ ನೀನೀಪರಿ ಗು ।
ರುದ್ರೋಹಕೆಂತು ತೊಡರ್ದುದು ನಿನ್ನ ಮನಮಕಟ ।
ಮದ್ರಮಣನಾಗಮಂ ನಿನಗೆ ಪಿರಿಕಿತಮಾದುವಾತನುದರದೊಳೆ ಜನಿಸಿ ॥
ಉದ್ರೇಕದಿಂದೆ ಕಟ್ಟಿದೆಯಲಾ ತುರಗಮಂ ।
ಭದ್ರಮಾದುದು ರಾಜಕಾರ್ಯಮಿಂದಮೃತಕೆ ಸ ।
ಮುದ್ರಮಂ ಮಥಿಸೆ ವಿಷಮುದಿಸಿದವೊಲಾಯ್ತು ನಿನ್ನುದ್ಭವಂ ತನಗೆಂದಳು ॥೩೨॥

ಮಾತೆಯ ನುಡಿಗೆ ನಡುನಡುಗಿ ಬಭ್ರುವಾಹನಂ ।
ಭೀತಿಯಿಂದಡಿಗೆರಗಿ ಕ್ಷತ್ರಿಯರ ಪಂತದಿಂ ।
ದಾತನ ತುರಗಮಂ ಕಟ್ಟಿದೆಂ ನಿಮ್ಮ ಚಿತ್ತಕೆ ಬಾರದಿರ್ದ ಬಳಿಕ ॥
ನೀತಿಯಾದಪುದೆ ತನಗಿನ್ನು ನಿಮ್ಮಡಿಗೆ ಸಂ ।
ಪ್ರೀತಿಯೆಂತಾದಪುದದಂ ಬೆಸಸಿದೊಡೆ ಮಾಳ್ಪೆ ।
ನೇತಕಾತುರವೆಂದು ಕೈಮುಗಿದೊಡಾಗ ಚಿತ್ರಾಂಗದೆ ನಿರೂಪಿಸಿದಳು ॥ ೩೩ ॥

ಮಗನೆ ಕೇಳೆನ್ನನೆಂದರ್ಜುನಂ ಬಿಟ್ಟು ನಿಜ ।
ನಗರಿಗೈದಿದನಂದು ಮೊದಲಾಗಿ ತಾನವನ ।
ನಗಲ್ದ ಸಂತಾಪದಿಂ ತಪಿಸುತಿರ್ದೆಂ ಪುಣ್ಯವಶದಿಂದೆ ಬಂದನಿಂದು ॥
ಬಗೆಯದಿರ್ದಪೆನೆಂತು ಕಾಂತನಂ ನೀನಿಂದು ।
ಮೊಗದೋರಿ ನಿನ್ನ ಸರ್ವಸ್ವಮಂ ತಾತನಂ ।
ಘ್ರಿಗೆ ಸಮರ್ಪಿಸಿದೊಡಾಂ ಮಾಡಿದ ತಪೋನಿಷ್ಠೆ ಸಫಲಮಾದಪುದೆಂದಳು ॥೩೪॥

ಕಂದ ನೀನಿಂದು ನಿನ್ನಖಿಳ ಪ್ರಕೃತಿಗಳಂ ।
ತಂದೆಗೊಪ್ಪಿಸಿ ಯುಧಿಷ್ಠಿರನೃಪನ ವೈರಿಗಳ ।
ಮುಂದೆ ತೋರಿಸು ನಿನ್ನ ಶೌರ್ಯಮಂ ತನುಧನಪ್ರಾಣಂಗಳವರದಾಗೆ ॥
ನಿಂದೆಗೊಳಗಾಗದಿರ್ ದುಷ್ಟಸಂತಾನವಂ।
ತೊಂದಿಸದಿರಗತಿಯಂ ತನ್ನ ಪಾತಿವ್ರತ್ಯ।
ಕೆಂದು ಸೂನುಗೆ ಬುದ್ಧಿಗಲಿಸಿ ಪಾರ್ಥನ ಬರವಿಗುಬ್ಬಿದಳ್ ಚಿತ್ರಾಂಗದೆ ॥ ೬೫ ॥

ಜನನಿಯಂ ಮನೆಗೆ ಮನ್ನಿಸಿ ಕಳುಹಿ ಬಭ್ರುವಾ ।
ಹನನಾ ಸುಬುದ್ಧಿಯಂ ನೋಡಿ ಪಿತನಂ ಕಾಣ್ಬು ।
ದನುಚಿತವೊ ಮೇಣುಚಿತಮಾದಪುದೊ ಪೇಳಿದರ ನಿಶ್ಚಯವನೀಗಳೆನಲು ॥
ನಿನಗೆಣಿಕೆ ಬೇಡ ಮೊದಲರಿಯದಾದೆವು ಧರ್ಮ ।
ತನಯಂಗೆ ನಿಮ್ಮಯ್ಯನನುಜನಾತನ ರಕ್ಷೆ ।
ವಿನುತಹಯಕದನಿನ್ನು ಕಲಿತನದೆ ಕಟ್ಟುವುದು ನೀತಿಪಥಮಲ್ಲೆಂದನು ॥ ೩೬ ॥

ಇನ್ನು ಕಟ್ಟಿಸು ಗುಡಿಗಳಂ ಬೇಗ ಪಟ್ಟಣಕೆ ।
ನಿನ್ನಖಿಳ ರಾಜ್ಯಪದವಿಯನೊಪ್ಪಿಸಯ್ಯಂಗೆ ।
ಮನ್ನೆಯರ್ ಚಾತುರಂಗದ ಸೇನೆ ನಾಗರಿಕಜನಮಲಂಕರಿಸಿಕೊಳಲಿ ॥
ಕನ್ನೆಯರ್ ಲಾಜ ದಧಿ ದೂರ್ವಾಕ್ಷತೆಗಳಿಂದೆ ।
ಕನ್ನಡಿ ಕಳಸವಿಡಿದು ಬರಲಿ ಸಂದರ್ಶನಕೆ ।
ಸನ್ನುತ ಸುವಸ್ತುಗಳನೆಲ್ಲಮಂ ತೆಗೆಸು ತಡವೇಕೆಂದನಾ ಸುಬುದ್ಧಿ ॥ ೩೭ ॥

ವರಸುಬುದ್ಧಿಯ ಬುದ್ಧಿಯಂ ಕೇಳ್ದನಾ ಪಾರ್ಥ।
ದೊರೆದೊರೆಗಳೆಲ್ಲರಂ ಕಳುಪಿದಂ ಮನೆಗಳ್ಗೆ ।
ಪುರದೊಳಗೆ ಡಂಗುರಂಬೊಯ್ಸಿದಂ ಕೋಶದ ಸುವಸ್ತುಗಳನು ॥
ತರಿಸಿದಂ ಕನಕಪೂರಿತ ಶಕಟನಿಕರಮಂ ।
ತರುಣಿ ಗೋಮಹಿಷಿ ಮದ ಕುಂಜರ ಕುಲಾಶ್ವಮಣಿ ।
ವಿರಚಿತ ರಥಂಗಳಂ ರಜತ ಕಾಂಚನ ಮಯದ ಪಲವು ಕೊಪ್ಪರಿಗೆಗಳನು ॥ ೩೮ ॥

ನವ್ಯಚಿತ್ರಾಂಬರಾಭರಣಂಗಳಂ ವಿವಿಧ ।
ದಿವ್ಯರತ್ನಂಗಳಂ ಪರಿಪರಿಯ ಪರಿಮಳ ।
ದ್ರವ್ಯಂಗಳಂ ಕನಕ ಖಟ್ವ ನುತಹಂಸತೂಲದ ಮೃದುಲ ತಲ್ಪಗಳನು॥
ಸುವ್ಯಜನ ಚಾಮರ ಸಿತಾತಪತ್ರಂಗಳಂ ।
ಸವ್ಯಸಾಚಿಗುಸಿ ಕಾಣಿಕೆಗೆ ತರುವುದೆಂದು ಕ ।
ರ್ತವ್ಯದಿಂ ಜೋಡಿಸಿದನಾ ಬಭ್ರುವಾಹನಂದಿರುಳಖಿಳ ವಸ್ತುಗಳನು ॥ ೩೯ ॥

ಸ್ವರಗೈದುದನಿತರೊಳ್ ಚರಣಾಯುಧಂ ಜಾರೆ ।
ಯರ ಮನಂ ಬೆಚ್ಚಿದುದು ಮೂಡದೆಸೆ ಬೆಳತುದು ಪ ।
ಸರಿದುದು ತಂಗಾಳಿ ಖಗನಿಕರಮುಲಿದೆದ್ದುವರಳಿದುವು ತಾವರೆಗಳು॥
ಮೊರೆದುದಾರಡಿ ನೆರೆದುವೆಣೆವಕ್ಕಿ ತಾರೆಗಳ್ ।
ಪರಿದುವಿಡಿದಿರ್ದ ಕತ್ತಲೆ ತೊಲಗಿತುತ್ಪಲಂ ।
ಕೊರಗಿದುದು ಜನದ ಕಣ್ಣೆವೆದೆರೆದುದೊದರಿದುವು ದೇಗುಲದ ವಾದ್ಯಂಗಳು ॥

ಅರಳ್ದ ಶೋಣಾಂಬುಜಚ್ಛಾಯೆಗಳಪರ್ದುವೆನೆ ।
ಭರದಿಂದೆ ಕತ್ತಲೆಯ ಮೇಲೆ ಬಹ ರವಿಯ ರಥ ।
ತುರಗ ಖುರಪುಟದಿಂದ ಮೇಲ್ವ ಕೆಂದೂಳ್ಗಳೆನೆ ಪ್ರಾಚೀ ನಿತಂಬವತಿಗೆ ॥
ಸರಸದಿಂ ತರಣಿಯೊಳ್ ನೆರೆವ ಸಮಯದೊಳಾದ।
ಕರರುಹಕ್ಷತದ ಕಿಸುಬಾಸುಳ್ಗಳೆನೆ ಸವಿ ।
ಸ್ತರದ ಸಂಧ್ಯಾರಾಗವೈದೆ ರಂಜಿಸುತಿರ್ದುದಂದು ಮೂಡಣದೆಸೆಯೊಳು ॥೪೧॥

ಜಿತತಮಂ ಭುವನಮಧ್ಯಪ್ರಕಾಶಂ ವಿರಾ ।
ಜಿತ ವರಾಹ ಶ್ರೀಧರಂ ಪಂಚಮುಖಮೂರ್ತಿ ।
ನುತಕಾಶ್ಯಪಂ ರಾಜತೇಜೋಹರಂ ದೂಷಣಾರಿ ಗೋಕುಲಜಾತನು ॥
ಅತಿಕಾಂತಿ ಶೋಭಿತ ದಿಗಂಬರಂ ಕಲಿತಾಪ ।
ಹೃತಕುವಲಯಂ ಚಕ್ರಿಯವತಾರದಶಕದು ।
ನ್ನತಿಗಳಂ ತಳೆದೆಸೆವ ದಿನಪನುದಯಂಗೈದನಂದು ಪೂರ್ವಾಚಲದೊಳು ॥ ೪೨ ॥

ಒಂದು ಮಾರ್ಗದೊಳೆ ನಡೆಯದೆ ಸದಾ ದ್ವಿಜನಿಕರ ।
ದಂದಮಂ ಕಿಡಿಸಿ ಗುರುಬುಧ ಮಂಗಳೋನ್ನತಿಗೆ ।
ಕುಂದನಿತ್ತುದರಿಂದ ಸಾರಥಿ ಹೆಳವನಾದನಾತ್ಮಜಂ ಲೋಕವರಿಯೆ ॥
ಮಂದನಾದಂ ನಿನ್ನ ಪತಿಗೆಂದು ಪದ್ಮಿನಿಯ ।
ಮುಂದೆ ನಗುವಸಿತೋತ್ಪಲಂಗಳಿನನುದಯದೊಳ್ ।
ಕಂದಿದುವು ಪರನಿಂದೆಗೈದರ್ಗೆ ಪರಿಭವಂ ಕಯ್ಯೊಡನೆ ತೋರದಿಹುದೆ ॥ ೪೩ ॥

ಆದಿತ್ಯನುದಯದೊಳ್ ಫಲುಗುಣನ ಸೂನು ಸಂ ।
ಧ್ಯಾದಿಗಳನಾಚರಿಸಿ ವಸ್ತುಗಳನೈದೆ ಸಂ ।
ಪಾದಿಸಿ ಕಿರೀಟಿಯಂ ಕಾಣಲನುವಾದರ್ಜುನನಿತ್ತಪಾಳೆಯದೊಳು ॥
ಸಾಧಿಸಿ ಸಕಲ ನಿತ್ಯಕೃತ್ಯಮಂ ಮಾಡಿ ಮಧು ।
ಸೂದನನ ಚರಣಮಂ ನೆನೆದು ವೃಷಕೇತು ಮೊದ ।
ಲಾದ ವೀರರ್ಕಳಂ ಕರೆಸಿದಂ ಹಯಮಂ ಬಿಡಿಸಿಕೊಂಬ ತವಕದಿಂದೆ ॥ ೪೪॥

ಅನುಸಾಲ್ವಕನ ಸೇನೆ ಯಾದವರ ಚತುರಂಗ ।
ಮಿನಸುತನ ಸೂನುವಿನ ಮೋಹರಂ ಯೌವನಾ ।
ಶ್ವನ ಪಾಯದಳ ಮತುಲಹಂಸಕೇತುವಿನ ಪಡೆ ನೀಲಧ್ವಜನ ವಾಹಿನಿ ॥
ದನುಜಾರಿ ನಂದನನ ನೇಮದಿಂ ಸಂಗ್ರಾಮ ।
ಕನುವಾಗಿ ಪೊರಮಟ್ಟುದಾಗ ಸನ್ನಾಹದಿಂ ।
ಘನವಾದ್ಯ ರಭಸದಿಂದರ್ಜುನಂ ಬಂದುನಿಂದಂ ಮುಂದೆ ದೊರೆಗಳೊಡನೆ ॥೪೫॥

ಆ ಸಮಯದೊಳ್ ಬಭ್ರುವಾಹನಂ ಪೊರಮಟ್ಟ ।
ನಾ ಸುಬುದ್ಧಿ ಪ್ರಮುಖ ಮಂತ್ರಿಗಳ ಗಡಣದಿಂ ।
ದಾಸಕಲ ವಸ್ತುಸಹಿತಾ ಕುದುರೆಯಂ ಕೊಂಡು ನಿಖಿಳ ಚತುರಂಗದೊಡನೆ ॥
ಭಾಸುರದ ಕಳಸ ಕನ್ನಡಿವಿಡಿದು ನಡೆತಹ ವಿ ।
ಲಾಸಿನಿಯರೊಗ್ಗಿನಿಂ ಸಂದಣಿಯ ಪುರಜನದ ।
ಭೂಸುರಸ್ತೋಮದಿಂ ಗುಡಿತೋರಣಾವಳಿಯ ಸಿಂಗರದ ಪದಪಿನಿಂದೆ ॥೪೬॥

ಎಲ್ಲ ಕೌಂತೇಯನಿರ್ದಪನಲ್ಲಿಗಾಗಿ ನಿಂ ।
ದಲ್ಲಿನಿಲ್ಲದೆ ಸಂಭ್ರಮದೊಳೆ ನಡೆತಂದು ಮೈ ।
ಘುಲ್ಲವಿಸೆ ಹರ್ಷದಿಂ ಪಾರ್ಥನಂ ಕಂಡು ನಿಜಮೌಳಿಯಂ ತೆಗೆದು ನರನ ॥
ಮೆಲ್ಲಡಿಗನರ್ಘ್ಯ ರತ್ನಂಗಳಂ ಸುರಿದು ಕರ ।
ಪಲ್ಲವದ್ವಿತಯಮಂ ಮುಗಿದು ಭಯಭಕ್ತಿಯಿಂ ।
ಚೆಲ್ಲದನೊಡಲನಿಳೆಯೊಳಾ ಬಭ್ರುವಾಹನಂ ನೀಡಿ ಸಾಷ್ಟಾಂಗದಿಂದೆ ॥ ೪೭ ॥

ಅರಸ ಕೇಳಾ ಬಭ್ರುವಾಹನನೊಡನೆ ಬಂದ ।
ಪರಿವಾರಮಾ ಪುರಜನಂಗಳಾ ಕಾಮಿನಿಯ ।
ರರಳ ಮಳೆ ಮುಕ್ತಾಫಲಂಗಳಂ ಸುರಿದರರ್ಜುನನ ಮಸ್ತಕದಮೇಲೆ ॥
ವರಸುಬುದ್ಧಿ ಪ್ರಮುಖ ಮಂತ್ರಿಗಳ್ ಬಂದರೊ ।
ತ್ತರಿಸಿ ಕಾಣಿಕೆಗೊಂಡು ಬಳಿಕ ವಿಸ್ಮಿತನಾಗಿ ।
ನರನೆಲೆ ನೃಪಾಲ ನೀನಾರೆನಲ್ಕವನೆದ್ದು ಕೈಮುಗಿಯುತಿಂತೆಂದನು ॥ ೪೮ ॥

ತಾತ ಚಿತ್ತೈಸು ನಿನ್ನಾತ್ಮಜಂ ತಾನೆನ್ನ ।
ಮಾತೆ ಚಿತ್ರಾಂಗದೆ ಸಲಹಿದವಳುಲೂಪಿ ಸಂ ।
ಪ್ರೀತಿಯಿಂದಿವರಾದರರರಸಿಯರ್ ನೀನಂದು ತೀರ್ಥಯಾತ್ರೆಗೆ ಬಂದಿರೆ ॥
ಜಾತನಾದೆಂ ಬಭ್ರುವಾಹನಂ ತಾನೀಗ ।
ಛೀತುರಗಮಂ ಪಿಡಿದು ಕಟ್ಟಿ ತಪ್ಪಿದೆ ಗುಣಾ ।
ತೀತಮಂ ಕ್ಷಮಿಸೆಂದು ಮಗುಳೆರಗಿದಂ ಪಾರ್ಥನಡಿಗವಂ ಭೀತಿಯಿಂದೆ ॥ ೪೯ ॥

ಮಗುಳೆ ಮಗುಳಡಿಗೆರಗಿ ಭಯ ಭರಿತಭಕ್ತಿಯಿಂ ।
ಮಿಗೆ ಬೇಡಿಕೊಳುತೆ ಕಾಲ್ಪಿಡಿದಿರ್ಪ ತನಯನಂ ।
ಮೊಗನೋಡಿ ಮಾತಾಡಿಸದೆ ಬೆರಗುವಡೆದಂತೆ ಕೆತ್ತುಗೊಂಡಿಹ ವಿಜಯನ ॥
ಬಗೆಯನೀಕ್ಷಿಸಿ ಹಂಸಕೇತು ನೀಲಧ್ವಜರಾ ।
ದಿಗಳೆಲ್ಲರುಂ ಸವಿಸ್ಮಯರಾಗಿ ಚಿಂತಿಸಿ ಕ ।
ರ್ಗ ದರತಿ ಕರುಣರಸಭಾವದಿಂದೇನೆಂಬೆನಪಕೃತದ ಸೂಚಕವನು ॥ ೫೦ ॥

ಪ್ರದ್ಯುಮ್ನ ಹಂಸಧ್ವಜಾದಿಗಳ್ ಬಳಿಕಿದೇ ।
ನುದ್ಯೋಗವಿಲೆ ಪಾರ್ಥ ನಿನ್ನ ತನುಭವನೀತ ।
ನುದ್ಯತ್ಪರಾಕ್ರಮಿ ಮಹಾವೈಭವಶ್ಲಾಘ್ಯನಭಿಮಾನಿ ಮಾನ್ಯನಿಳೆಗೆ ॥
ಖದ್ಯೋತಸನ್ನಿಭಂ ನಿನ್ನ ಹೋಲುವೆಯನಿರ ।
ವದ್ಯರೂಪಂ ಪದಾವನತನಾಗಿರ್ಪವಂ ।
ಹೃದ್ಯನಿವನಂ ಪರಿಗ್ರಹಿಸಿ ಮನ್ನಿಸದೇಕೆ ಸುಮ್ಮನಿರ್ದಪೆಯೆಂದರು ॥ ೫೧ ॥

ಭೂಪ ಕೇಳಿವರಿಂತೆನಲ್ಕೆ ಬಳಿಕರ್ಜುನಂ ।
ಕೋಪದಿಂದವನ ನಿಟ್ಟಿಸುತೆಂದನಾಗ ತಲೆ ।
ಪೋಪುದಕೆ ತನ್ನ ಕಾಲ್ಪೊಣೆಯೆಂಬ ಧರೆಯ ನಾಣ್ಣುಡಿ ತಪ್ಪದಾದುದೆನಲು ॥
ಆ ಪುತ್ರನಹ ಬಭ್ರುವಾಹನನನೊದೆದೆಲವೊ ।
ನೀ ಪಂದೆ ಲೋಕದೊಳ್ ತನಗೆ ಸಂಭವಿಸಿದವ ।
ನೀಪರಿಯೊಳಂಜುವನೆ ವೊದಲಶ್ವಮಂ ಕಟ್ಟಿ ಮತ್ತೆಬಿಡುವನೆ ಕಾದದೆ ॥ ೫೨ ॥

ಚಿತ್ರಾಂಗದೆಗೆ ವೈಶ್ಯನಿಂದೆ ಸಂಭವಿಸಿರ್ದ ।
ಪುತ್ರನಲ್ಲದೆ ತನಗೆ ಜನಿಸಿದೊಡೆ ಬಿಡುವೆಯಾ ।
ಕ್ಷತ್ರಿಯರ ಮತಮಂ ಸುಭದ್ರೆಗೆನ್ನಿಂ ಜನಿಸಿದಭಿಮನ್ಯು ತಾನೋರ್ವನೆ ॥
ಶತ್ರುಗಳ ವಿಗಡಚಕ್ರವ್ಯೂಹದಲ್ಲಿಗೆ ದ ।
ರಿತ್ರೀಶನಂ ಮೀರಿ ನಡೆದು ಸಂಗ್ರಾಮದೊಳ ।
ಮಿತ್ರಭಟರಂ ಗೆಲ್ದಳಿದನಾತನಲ್ಲದಾತ್ಮಜರುಂಟೆ ತನಗೆಂದನು ॥ ೫೩ ॥

ಜಂಬುಕಂ ಜನಿಸುವುದೆ ಸಿಂಗದುದರದೊಳಕಟ ।
ಹೆಂಬೇಡಿ ನೀನೆಲವೊ ಕುಲಗೇಡಿ ತನ್ನ ಬಸಿ ।
ರಿಂ ಬಂದವನೆ ಖೂಳ ಕುದುರೆಯಂ ಕಾದದೇತಕೆ ತಂದೆ ಪಂದೆ ನಿನಗೆ ॥
ಡೊಂಬಿನ ಚತುರ್ಬಲಮಿದೇಕೆ ಭೂಪಾಲರಾ ।
ಡಂಬರದ ಛತ್ರಚಮರಂಗಳೇತಕೆ ಬಯಲ ।
ಡಂಬಕದ ಕೈದುಗಳಿವೇಕೆ ಸುಡು ಬಿಡು ಜೀವದಾಸೆಯಂ ಪೋಗೆಂದನು ॥ ೫೪ ॥

ಅಹಹ ! ನರ್ತಕಿಯಲಾ ಗಂಧರ್ವನಾಯಕನ ।
ದುಹಿತೃವಲ್ಲಾ ನಿನ್ನ ಮಾತೆ ಚಿತ್ರಾಂಗದೆಯೆ ।
ವಿಹಿತಮಲ್ಲಿದು ನಿನಗೆ ಭೂಮಿಪರ ವೇಷಮಂ ತಳೆದ ನಾಟಕದ ರಚನೆ ॥
ಬಹಳ ಪೌರುಷಮಾದುದಿಂದು ಹಯಮಂ ತಡೆದ ।
ರಹಣಿ ರಾಯರವುಂದೆ ಹೋಗೆಂದು ದುಷ್ಕೃತಿಯ ।
ಕುಹಕದಿಂ ಬೈದು ಭಂಗಿಸಿ ಜರೆದನಾತ್ಮಜನನರ್ಜುನಂ ಕೋಪದಿಂದೆ ॥ ೫೫ ॥

ಬಿರುನುಡಿಗಳಿಂ ತನ್ನ ಮೊಗನೋಡದರ್ಜುನಂ ।
ಜರೆದೊಡಾತನ ಬಗೆಯನಾ ಸುಬುದ್ಧಿಗೆ ತೋರು ।
ತುರೆ ಕನಲ್ದುರದೆದ್ದು ಪಳಿದೆಲಾ ಮಾತೆಯಂ ನನಗೆ ಸೀವರಿಸಿದೆಯಲಾ ॥
ಅರಿಯಬಹುದಿನ್ನು ಕೇಳ್ ನಿನ್ನ ತಲೆಗೆಡಹದೊಡೆ ।
ಕುರುಹಿಟ್ಟು ನೀನಾಡಿದಿನಿತೆಲ್ಲಮುಂ ದಿಟಂ ।
ಮರೆಯದಿರ್ ಸಾಕೆಂದು ತಿರುಗಿದಂ ಬಭ್ರುವಾಹನನಂದು ಕುದುರೆಸಹಿತ ॥ ೫೬ ॥

ತೆಗೆಸಿದಂ ತಂದಖಿಳವಸ್ತುವಂ ಕುದುರೆಯಂ ।
ಬಿಗಿಸಿದಂ ಲಾಯದೊಳ್ ಪುರಜನಸ್ತ್ರೀಯರಂ ।
ಪುಗಿಸಿದಂ ಪಟ್ಟಣಕೆ ಕರೆಸಿದಂ ಸಚಿವರಂ ಸೇನಾಧಿನಾಯಕರನು ॥
ಜಗಿಸಿದಂ ಚತುರಂಗಮಂ ನೆರಹಿ ಧಾತ್ರಿಯಂ ।
ಮಿಗಿಸಿದಂ ವಾದ್ಯರವದಿಂದೆ ಘೋಷಮಂ ।
ಮುಗಿಸಿದಂ ತಾವರೆಯನಾ ಬಭ್ರುವಾಹನಂ ದೂಳ್ಗಳಿನನಂ ಮುಸುಕಲು ॥ ೫೭ ॥

ಕೇಳೆಲೆ ನೃಪಾಲಕುಲತಿಲಕ ಮುಂದದ್ಭುತ ಕ ।
ಥಾಳಾಪಮಂ ಬಳಿಕ ಪೂಡಿದುದು ಕರ್ಕಶದ ।
ಕಾಳಗಂ ಸವ್ಯಸಾಚಿಗೆ ಬಭ್ರುವಾಹನನ ಕೂಡೆ ಮಹದಾಹವದೊಳು ॥
ಹೇಳಲೇನೆಂದು ಸುರಪಂಗೆ ಪಾರ್ಥನೊಳಾದ ।
ಕೋಳಾಹಳದ ಕದನದಂತೆ ಮುನ್ನಧ್ವರದ ।
ಬೇಳಂಬದಿಂದೆ ರಾಮಂಗೆ ಕುಶಲವರೊಡನೆ ಬಂದ ಸಂಗ್ರಾಮದಂತೆ ॥ ೫೮ ॥

ಆಲಿಸಿದನಲ್ಲಿ ಪರಿಯಂತ ಜನಮೇಜಯಂ ।
ಮೇಲಣ ಕಥೆಯನೊಲ್ದು ಬೆಸಗೊಂಡನೆಲೆ ಮುನಿಪ ।
ಹೋಲಿಸಿ ನುಡಿದೆ ಸುರಪಫಲುಗುಣರ ಸಮರಮಂ ಕೇಳ್ದೆನದನಾಂ ನಿನ್ನೊಳು ॥
ಹೇಳಬೇಹುದು ರಾಘವಂಗೆ ಸುತನೊಡನಾದ ।
ಕಾಳಗದ ಸಂಗತಿಯನೆನಗೆಂದೆನಲ್ಕೆ ಭೂ ।
ಪಾಲಂಗೆ ವಿರಚಿಸಿದನೀ ತೆರದೊಳಾ ತಪೋನಿಧಿ ಬಳಿಕ ಸಂತಸದೊಳು ॥ ೫೯ ॥

ಪ್ರೇಮದಿಂದ್ಯೆದೆ ವಿಸ್ತರಿಸಿದಂ ನೃಪಕುಲೋ ।
ದ್ದಾಮ ಜನಮೇಜಯಂ ಬೆಸಗೊಳಲ್ ಜೈಮಿನಿ ಮ ।
ಹಾಮುನೀಂದ್ರಂ ಕೂರ್ತು ಕೇಳ್ವರ್ಗೆ ರೋಮಾಂಚನಂ ಪೊಣ್ಮೆ ಹರುಷಮುಣ್ಮೆ ॥
ರಾಮಾವತಾರದೊಳ್ ದೇವಪುರನಿಲಯು ಲ ।
ಕ್ಷ್ಮೀಮನೋವಲ್ಲಭಂ ತನ್ನ ಸುತರೊಡನೆ ಸಂ ।
ಗ್ರಾಮದೊಳ್ ಕಾದಿದ ಕಥಾಮೃತವನದರ ಕಾರಣಸಹಿತ ತುದಿವೊದಲೆಗ ॥೬೦॥

ಹದಿನೆಂಟನೆಯ ಸಂಧಿ

ಸೂಚನೆ ॥ ಸಾಮ್ರಾಜ್ಯಮಂ ತಾಳ್ದಿಸವ ರಾಘವೇಂದ್ರನಿಂ ।
ದಾಮ್ರಪ್ರವಾಳದಂತಿರೆ ವಿರಾಜಿಸುತಿರ್ಪ ।
ತಾಮ್ರಾಧರೆಯುರ ಸೀಮಂತಮಣಿ ಸೀತಾರಮಣಿ ಗರ್ಭಮಂ ತಾಳ್ದಳು ॥

ಭೂಪಾಲ ಕೇಳಾದೊಡಿನ್ನು ಪೂರ್ವದೊಳವನಿ ।
ಜಾಪತಿಯು ಕುಶಲವರ ಸಂಗರದ ಕೌತುಕವ।
ನಾಪನಿತನೊರೆವೆನಿಕ್ಷ್ವಾಕು ಮೊದಲಾದ ರವಿಕುಲದ ನೃಪರೇಳ್ಗೆಗಳನು ॥
ವ್ಯಾಪಿಸಿದ ಸಂಪದಕೆ ನೆಲೆವನೆಯೆನಿಪ್ಪಯೋ।
ಧ್ಯಾಪುರದೊಳವತರಿಸಿದಂ ಮಹಾವಿಷ್ಣು ಸುತ।
ರೂಪದಿಂ ರಾಮಾಭಿಧಾನದೊಳ್ ಪುತ್ರಕಾಮೇಷ್ಟಿಯಿಂ ದಶರಥಂಗೆ ॥ ೧ ॥

ತೊಳೆದು ಜನನಿಯು ಜಠರಮಂ ಜನಿಸಿ ಭವನದೊಳ್ ।
ಬಳೆದು ಲಕ್ಷ್ಮಣ ಭರತ ಶತ್ರುಘ್ನರೊಡಗೂಡಿ ।
ತಳೆದು ಕೌಶಿಕನ ಮಖಮಂ ಕಾದು ತಾಟಕಿಯನೊರಸಿ ಮುನಿಸತಿಯಘವನು ॥
ಕಳೆದು ಮಿಥಿಲೆಗೆ ಪೋಗಿ ಭಾರ್ಗವನ ಗರ್ವಮಂ ।
ಸೆಳೆದು ಹರಚಾಪಮಂ ಮುರಿದೊಲಿಸಿ ಸೀತೆಯಂ।
ತಳೆದುತ್ಸವದೊಳಯೋಧ್ಯಾಪುರಿಗೆ ದಶರಥನೊಡನೆ ರಾಘವಂ ಬಂದನು ॥ ೨॥

ವರ್ಧಿಪ ಕುಮಾರಂಗೆ ಭೂಮೀಶ್ವರಂ ಬಳಿಕ।
ಮೂರ್ಧಾಭಿಷೇಚನಂ ಮಾಡಲನುಗೈಯೆ ನೃಪ ।
ನರ್ಧಾಂಗಿ ತಡೆಯೆ ಪೊರಮಟ್ಟು ಬನಕೈದೆ ನರಪತಿ ಪುತ್ರಶೋಕದಿಂದೆ ॥
ಸ್ವರ್ಧಾಮಕಡರೆ ಕೇಳುತೆ ಭರತನಂ ಕಳುಹಿ ।
ದುರ್ಧರದರಣ್ಯಪ್ರವೇಶಮಂ ಮಾಡಿದಂ।
ಸ್ಪರ್ಧಿಸುವ ದನುಜರಂ ಮುರಿದು ಮುನಿಗಳನೋವಿ ಸತಿಸಹಿತ ಕಾಕುತ್ಸ್ಥನು॥೩॥

ದಂಡಕಾರಣ್ಯದೊಳಿರಲ್ಕೆ ಶೂರ್ಪಣಖೆ ಬಂ ।
ದಂಡಲೆಯಲಾಕೆಯಂ ಭಂಗಿಸಿ ಖರಾದ್ಯರಂ ।
ಖಂಡಿಸಿ ಕನಕಮೃಗ ವ್ಯಾಜ್ಯದಿಂದೈದೆ ಲಕ್ಷ್ಮಣನಗ್ಗಲೆ ಕಪಟದಿಂದೆ॥
ಕೊಂಡೊಯ್ಯೆ ರಾವಣಂ ಸೀತೆಯಂ ಕಾಣದುರೆ ।
ಬೆಂಡಾಗಿ ವಿರಹದಿಂ ಬಿದ್ದಿಹ ಜಟಾಯುವಂ ।
ಕಂಡು ಪೊಲಬಂ ಕೇಳ್ದು ಸೌಮಿತ್ರಿಸಹಿತ ನಡೆದಂ ಮುಂದೆ ರಘುನಾಥನು ॥ ೪ ॥

ಪಥದೊಳ್ ಕಬಂಧನಂ ಕೊಂದು ಶಬರಿಯ ಮನೋ।
ರಥಮಂ ನೆಗಿಸಿ ಕರುಣದಿಂದಾಂಜನೇಯನಂ।
ಪ್ರಥಮದೊಳ್ ಕಂಡು ಸುಗ್ರೀವಂಗೆ ಕೈಗೊಟ್ಟು ವಾಲಿಯಂ ಬಾಣದಿಂದೆ॥
ಮಥಿಸಿ ರಾವಣನ ಮೇಲಣ ರಾಜಕಾರಿಯದ।
ಕಥನಕಾಳೋಚಿಸಿ ಕಡಿಕಪಿಗಳಂ ನೆರಪಿ।
ಪೃಥಿವಿಜೆಯನರಸಲ್ಕೆ ವೀರಹನುಮಂತನಂ ಕಳುಹಿದಂ ಕಾಕುತ್ಸ್ಥನು ॥ ೫ ॥

ಧೀಂಕಿಟ್ಟು ಶರಧಿಯಂ ದಾಂಟಿ ಮೇದಿನಿಯ ಸುತೆ।
ಗಂಕಿತದ ಮುದ್ರಿಕೆಯನಿತ್ತು ಬೀಳ್ಕೊಂಡು ನಿ।
ಶ್ಯಂಕೆಯೊಳಶೋಕವನಮಂ ಕಿತ್ತು ದನುಜರಂ ಸದೆದಕ್ಷನಂ ಮರ್ದಿಸಿ॥
ಅಂಕದೊಳ್ ಬಳಿಕಿಂದ್ರಜಿತುವಿನ ಬ್ರಹ್ಮಾಸ್ತ್ರ।
ದಂಕೆಯೊಳ್ ನಿಂದು ವಾಲಧಿಗಿಕ್ಕಿದುರಿಯಿಂದೆ।
ಲಂಕೆಯಂ ಸುಟ್ಟು ಬಂದೊಸಗೆವೇಳ್ದನಿಲಜನನಸುರಾರಿ ಮನ್ನಿಸಿದನು ॥ ೬ ॥

ಗಣನೆಯಿಲ್ಲದ ಕಪಿಗಳಂ ಕೂಡಿಕೊಂಡು ತೆಂ।
ಕಣಕಡಲ ತೀರದೊಳ್ ಬಿಟ್ಟು ಬಂದೊಡೆ ವಿಭೀ।
ಷಣನಂ ಪರಿಗ್ರಹಿಸಿ ಲಂಕಾಧಿಪತ್ಯಮಂ ಕೊಟ್ಟು ಜಲಧಿಯನೆ ಕಟ್ಟಿ॥
ರಣದೊಳಸುರರ ಕುಲದ ಹೆಸರುಳಿಯದಂತೆ ರಾ।
ವಣ ಕುಂಭಕರ್ಣ ಮೊದಲಾದ ರಕ್ಕಸರನುರೆ।
ಹಣಿದವಾಡಿದನುರವಣಿಸಿ ಧೂಳಿಗೋಟೆಯಂ ಕೊಂಡನಾ ರಘುವೀರನು ॥ ೭ ॥

ರಾವಣನ ಪದಮಂ ವಿಭೀಷಣಂಗೊಲಿದಿತ್ತು।
ದೇವರ್ಕಳಂ ಪೊರೆದು ಸೆರೆಯಿರ್ದ ಸೀತೆಯಂ।
ಪಾವಕನ ಮುಖದಿಂ ಪರಿಗ್ರಹಿಸಿ ಮೂಜಗಂ ಮೆಚ್ಚೆ ವಿಜಯೋತ್ಸವದೊಳು॥
ಭೂವರಂ ಸೌಮಿತ್ರಿ ದಶಮುಖಾವರಜ ಸು।
ಗ್ರೀವಾದಿಗಳ ಗಡಣದಿಂದಯೋಧ್ಯಾಪುರಿಗೆ।
ದೂವಾಳಿಸಿದನಮಲ ಮಣಿಪುಷ್ಪಕದ ಮೇಲೆ ಭರತನಂ ಪಾಲಿಸಲ್ಕೆ ॥ ೮ ॥

ವರಪುಷ್ಪಕವನಿಳಿದು ಭರತಶತ್ರುಘ್ನರಂ।
ಕರುಣದಿಂ ತೆಗೆದಪ್ಪಿ ಕೌಶಿಕವಸಿಷ್ಠಾದಿ।
ಗುರುಗಳಂ ಸತ್ಕರಿಸಿ ಕೈಕೆಮೊದಲಾಗಿರ್ದ ಮಾತೃಜನಕ್ಕೆರದೆ ನಮಿಸಿ॥
ಅರಮನೆಯ ಸತಿಯರಂ ಸಚಿವರಂ ಪ್ರಜೆಗಳಂ।
ಪರಿಜನಪ್ರಕೃತಿಗಳನಿರದೆ ಕಾಣಿಸಿಕೊಂಡು।
ಬರವನೇ ಹಾರೈಸಿ ಕೃಶೆಯಾದ ಕೌಸಲೆಗೆ ರಾಮನಭಿವಂದಿಸಿದನು ॥ ೯ ॥

ಕಯ್ದುಳದೊಳೊಯ್ಯನೊಯ್ಯನೆ ಘನಸ್ನೇಹದಿಂ ।
ಮೆಯ್ದಡವಿ ತನಯನಂ ತಕ್ಕೈಸಿ ಮುಂಡಾಡಿ ।
ಕಯ್ದುಗಳ ಗಾಯಮಂ ಕಂಡು ಕರಗುತೆ ಮಗನೆ ನಿನ್ನ ಕೋಮಲತನುವನು ॥
ಪೊಯ್ದಪರದಾರಕಟ ಬೆಂದುದೆನ್ನೊಡಲೆಂದು ।
ಸುಯ್ದು ಮುಗ್ಧಭಾವದಿಂ ತನ್ನ ಸವತಿಯಂ ।
ಬಯ್ದು ಮರುಗುವ ಮಾತೆಯಂ ನೋಡಿ ನಗುತೆ ಸಂತೈಸಿದಂ ರಾವಣಾರಿ॥೧೦॥

ಮೇಲೆ ತಾಳ್ದಂ ಶುಭಮುಹೂರ್ತದೊಳ್ ವಾರಿನಿಧಿ ।
ವೇಲೆಯಾದವನಿಯಂ ಪಟ್ಟಾಭಿಷೇಚನದ ।
ಕಾಲದೊಳ್ ಕಂಡರು ಸಮಸ್ತಮುನಿ ಗೀರ್ವಾಣ ವಾನರ ದನುಜ ಮನುಜರು ॥
ಮೂಲೋಕಮ್ಮೆದೆ ಕೊಂಡಾಡೆ ಒಳಿಕುರ್ಪಿಯಂ।
ಪಾಲಿಸುತಿರ್ದನೊಂಬತ್ತು ಸಾಸಿರವರ್ಷ ।
ಮೋಲೈಸಿದುದು ರಾಘವೇಂದ್ರನಂ ನಿಖಿಳ ಭೂಪತಿಚಯಂ ಪ್ರೀತಿಯಿಂದೆ ॥ ೧೧ ॥

ಯೂಪಮಯವಾಯ್ತು ಧರೆಯೆಲ್ಲಮುಂ ವರಜಾತ ।
ರೂಪಮಯವಾಯ್ತು ಮನೆಯೆಲ್ಲಮುಂ ಶುಕಪಿಕಾ ।
ಲಾಪಮಯವಾಯ್ತು ವನಮೆಲ್ಲಮುಂ ವರ್ಧಿಪ ಪ್ರಜೆಗಳಿಂ ಸಂಚರಿಸುವ ॥
ಗೋಪಮಯವಾಯ್ತು ಗಿರಿಯೆಲ್ಲಮುಂ ರತ್ನಪ್ರ ।
ದೀಪಮಯವಾಯ್ತು ತಮಮೆಲ್ಲಮುಂ ರಘುಜಪ್ರ ।
ತಾಪಮಯವಾಯ್ತು ಮೂಜಗಮೆಲ್ಲಮಂ ದಾಶರಥಿ ರಾಜ್ಯಮಂ ಪಾಲಿಸೆ ॥ ೧೨ ॥

ಪಣ್ಕಾಯಿ ಪೂ ತಳಿರ್ ಬೀತ ತರುಲತೆಯಿಲ್ಲ ।
ತಣ್ಗೊಳಂ ಕರೆಕಾಲ್ವೆಗಳ್ಗೆ ದಿಳೆಯಿಲ್ಲ ।
ಪೆಣ್ಗಂಡುಗಳೊಳೊರ್ವರುಂ ನಿಜಾಚಾರ ವಿರಹಿತರಾಗಿ ನಡೆವರಿಲ್ಲ ॥
ಬಿಣ್ಗೆಚ್ಚಲಿಕ್ಕಿ ಕೊಡವಾಲ್ಗರೆಯದಾವಿಲ್ಲ ।
ನುಣ್ಗಾಡಿವೆತ್ತಿರದ ಪಶುಪಕ್ಷಿ ಮೃಗವಿಲ್ಲ ।
ಕಣ್ಗೊಳಿಪ ರಾಮರಾಜ್ಯದೊಳಕಾಲ ಮರಣಮಿಲ್ಲಖಿಳಜೀವಿಗಳ್ಗೆ ॥ ೧೩ ॥

ಕಾಳಿಂದಿ ಸುರನದಿಗೆ ಕೃಷ್ಣನಮೃತಾಬ್ಧಿಗಳ ।
ಕಾಳಿ ವಾಣಿಗೆ ಕಳಂಕಿಂದುಮಂಡಲಕೆ ಪರ॥
ಕಾಳಿ ಕಾಪಾಲಿಗೆ ಮದಂ ದೇವಗಜಕೆ ನಂಜಹಿಪತಿಗೆ ತೊಡವಾಗಿರೆ ॥
ಕಾಳಿಮದ ಕೂಟಮೆನಗಿಲ್ಲೆಂಬ ಮುಳಿಸಿನಿಂ ।
ಕಾಳಿಸಲಮಳಕೀರ್ತಿಕಾಂತೆ ಪೊರಮಟ್ಟಳೋ ।
ಕಾಳಿಯಂ ತಿರುಗುವಳೆನಲ್ಕೆ ರಾಮನ ಯಶೋವಿಸ್ತರವನೇ ವೊಗಳ್ವೆನು ॥ ೧೪ ॥

ಸರ್ವಸಂಪತ್ಸಮೃದ್ಧಿಗಳಿಂ ಸ್ವಧರ್ಮದಿಂ।
ನಿರ್ವಿಘ್ನವಾಗಿ ಸಕಲಪ್ರಕೃತಿ ಜಾತಿ ಚಾ।
ತುರ್ವರ್ಣ್ಯವಮಂ ಬಿಡದೆ ಪೊರೆವಲ್ಲಿ ನೀತಿಶಾಸ್ತ್ರಂಗಳ್ಗೆ ಪಳಿವೊರಿಸದೆ॥
ಉರ್ವಿಯಂ ನವಸಹಸ್ರಾಬ್ದಮುರೆ ಪಾಲಿಸಿದ।
ನುರ್ವಸಂತಾನಮಂ ಕಾಣದಿಕ್ಷ್ವಾಕುಕುಲ।
ನಿರ್ವಾಹಮಂ ನೆನೆದು ರಘುವರಂ ನುಡಿದನೇಕಾಂತದಿಂ ಜಾನಕಿಯೊಳು ॥ ೧೫॥

ಕಾಂತೆ ಕೇಳಿಕ್ಷ್ವಾಕುವಂಶಮೆನ್ನಲ್ಲಿ ಬಂ।
ದಾಂತುದಿಲ್ಲೆಂದೆ ಸಂತತಿ ನಡೆಯದಿರ್ದೊಡೆ ಕು।
ಲಾಂತಕಂ ತಾನಾದಪೆಂ ಸಾಕದಂತಿರಲಿ ಮನುಜರ್ಗೆ ಸಂಸಾರದ॥
ಭ್ರಾಂತಿಯಂ ಬಿಡಿಸುವೊಡಪತ್ಯದೇಳ್ಗೆಗಳೆ ವಿ।
ಶ್ರಾಂತಿಯಲ್ಲದೆ ಪೆರತದೇನುಂಟು ಮುಂದೆ ಪು।
ತ್ರಾಂತರವನೈದದಿರ್ದಪೆನೆಂತೊ ಪೇಳೆಂದು ದಾಶರಥಿ ಬಿಸುಸುಯ್ದನು ॥ ೧೬॥

ಸಂತಾನಮಂದಾರದೊಳ್ ಪಡೆದತುಳವಿಭವ।
ಮಂ ತಳೆದು ನಂದನೋತ್ಸವದಮೃತಪಾನದ।
ತ್ಯಂತಸೌಖ್ಯವನೈದಿ ದೇವೇಂದ್ರನಂತೆ ಸುಮ್ಮಾನವಾಗಿರದೆ ಬರಿದೆ॥
ಸಂತತಂ ಜಾತರೂಪವನೆ ಕಾಣದೆ ತಾಪ।
ದಿಂ ತೊಳಲಿ ಬಳಲುವ ದರಿದ್ರನಂದದೊಳೈದೆ।
ಚಿಂತಿಸುವ ಸಂಸಾರಮೇಕೆ ಮಾನವಜನ್ಮಕೆಂದು ರಘುಪತಿ ನುಡಿದನು ॥ ೧೭ ॥

ನೀರಿರ್ದ ಕಾಸಾರಕರವಿಂದಮಿಲ್ಲದೊಡೆ।
ತಾರಕೆಗಳಿರ್ದ ಗಗನಕೆ ಚಂದ್ರನಿಲ್ಲದೊಡೆ।
ಚಾರುಯೌವನಮಿರ್ದ ಪೆಣ್ಗೆ ನಿಯನಿಲ್ಲದೊಡೆ ಸನ್ನುತಪ್ರಜೆಗಳಿರ್ದ ॥
ಧಾರಿಣಿಗೆ ಧರ್ಮದರಸಿಲ್ಲದೊಡೆ ಸಿರಿಯಿರ್ದ।
ದಾರವಂಶಕೆ ಕುವರನಿಲ್ಲದೊಡೆ ಮೆರೆದಪುದೆ।
ನಾರಿ ಪೇಳೆನೆ ಲಜ್ಜೆಯಿಂದೆ ತಲೆವಾಗಿ ನಿಜಪತಿಗೆ ಜಾನಕಿ ನುಡಿದಳು ॥ ೧೮ ॥

ಕಾಂತ ನೀಂ ಪೇಳ್ದೊಡೇಂ ಪುತ್ರವತಿಯಹುದು ಜ।
ನ್ಮಾಂತರದ ಪುಣ್ಯಮೈಸಲೆ ಪೆಣ್ಗೆ ಮಾನ್ನತಾಂ।
ನೋಂತುದಲ್ಲದೆ ಬಂದಪುದೆ ಬರಿದೆ ಬಯಸಿದೊಡೆ ಸುಕುಮಾರನಂ ಪೊಡೆಯೊಳು॥
ಅಂತೊಳಗೆ ಪುದಗಿರ್ದ ಪರಿಮಳದೊಳೊಪ್ಪುವ ಲ।
ತಾಂತಕುಟ್ಮಲದಂತೆ ವರ ಗರ್ಭಲಾಂಛನದ।
ಕಾಂತಿಯಂ ತಳೆವುದಂಗನೆಯರೆಲ್ಲರ್ಗೆ ದೊರವುದೆ ಮೇದಿನಿಯೊಳೆಂದಳು ॥ ೧೯ ॥

ಕಂದನಾಡುವ ಬಾಲಲೀಲೆಯುಂ ನೋಡಿ ತೊದ।
ಲೊಂದಿದಿನವಾತನುರೆ ಕೇಳ್ದು ಮುದ್ದಿನ ಮುದ್ದೆ ।
ಯುಂದದಂಗವನೆತ್ತಿಕೊಂಡು ನಳಿತೋಳ್ಗಳಿಂದಪ್ಪಿ ಕೆಂಗುರುಳ್ಗಳೊಲೆವ ॥
ಮುಂದಲೆಯ ಕಂಪನಾಘ್ರಾಣಿಸಿ ತೊರೆವ ಜೊಲ್ಲ ।
ಚೆಂದುಟಿಯ ಬಾಯ್ದೆರೆಯನೈದೆ ಚುಂಬಿಸಿ ಸೊಗಸು ।
ಗುಂದದಾಯೆಂದು ಪಂಚೇಂದ್ರಿಯಪ್ರೀತಿಯಂ ಪಡೆವರಿನ್ನಾವ ಕೃತರೊ ॥೨೦॥

ತೇಲ್ದೋಸರಿಸಿ ಮೇಲುದಂ ಸೆಳೆವ ಕಮಲಮಂ।
ಪೋಲ್ದ ಕಣ್ಗೊನೆಯಿಂದೆ ತಾಯ ಮೊಗಮಂ ನೋಳ್ಪ ।
ಕಾಲ್ದುದಿಗಳಂ ಬಿದಿರಿ ತಡವರಿಸಿ ಕೈಯ್ಯಿಡುವ ಬಾಲಂಗೆ ಮೋಹದಿಂದೆ ॥
ಜೋಲ್ದೊಲೆವ ಹಾರಮಂ ತೆಗೆದು ಮುಯ್ಪಿಗೆ ಸಾರ್ಚ
ಪಾಲ್ದೊರೆವ ಮೊಲೆಗೂಡಿ ಕೂಡೆ ತೊಟ್ಟಿಲೊಳಿಟ್ಟು ।
ಸಾಲ್ದ ಸೈಪಿಂದೆ ಜೋಗುಳವಾಡಿ ತೂಗುವಳದೇಂ ಸುಕೃತಿಯೋ ಧರೆಯೊಳು
॥೨೧॥

ಇಂತು ಸುತರಿಲ್ಲದಾಸರೊಳವರ್ಗಳಿರ್ವರುಂ ।
ಚಿಂತಿಸುವ ಸಮಯಕೆ ವಸಿಷ್ಠಮುನಿಪತಿ ಬಂದು ।
ಸಂತಾನದಭ್ಯುದಯವಾದಪುದು ಮುಂದೆ ನಿಮಗೆಂದು ಸಂಪ್ರೀತಿಯಿಂದೆ ॥
ಸಂತೈಸೆ ಬಳಿಕ ರಘುಕುಲ ಸಾರ್ವಭೌಮನ ।
ತ್ಯಂತಕರ್ಷಿತನಾಗಿರಲ್ಕೆ ತಲೆದೋರಿತು ವ ।
ಸಂತಕಾಲಂ ವಿರಾಜಿತ ರಸಾಲಂ ವಿರಹಿ ಹೃದಯಶೂಲಂ ತಾನೆನೆ ॥೨೨॥

ಅರಸಂಚೆ ಸರಸಿಯುಂ ಕಲಪಿಕಂ ತಳಿತ ಮಾ ।
ಮರನಂ ಚಕೋರತತಿ ಚಂದ್ರಿಕೆಯನಳಿಕುಲಂ ।
ಬಿರಿಮುಗಳ ಸರಗಿಳಿ ಬನಂಗಳಂ ವಿರಹಿಗಳ್ ಕೂರ್ಪರಂ ಸಾರ್ದಸೆಯಲು ॥
ಧರೆಯೊಳೆಳಗಾಳಿಯುಂ ಸೀತಳದ ವಾರಿಯುಂ ।
ತರುಗಳ ನೆಳಲ್ಗಳಂ ಸೇರತೊಡಗಿತು ಜನಂ ।
ಪರಿವೃತ ವಸಂತಕಾಲದೊಳಿಂತಿರಲ್ ಬಳಿಕ ಸೀತೆ ಋತುಮತಿಯಾದಳು ॥೨೩॥

ಮಲ್ಲಿಕಾಸ್ಮಿತರುಚಿರೆ ಕುಂದಕುಟ್ಮಲರದನೆ ।
ಪಲ್ಲವಾಧರೆ ಭೃಂಗಕುಂತಳೆ ಕುಸುಮಗಂಧಿ ।
ಸಲ್ಲಲಿತಕೋಕಿಲಾಲಾಪೆ ಚಂಪಕವರ್ಣೆ ಮೃದುಮಧುರ ಕೀರವಾಣಿ ॥
ಪುಲ್ಲಲೋಚನೆ ಚಾರು ಚಂದ್ರಬಿಂಬಾನನೆ ಲ ।
ಸಲ್ಲತಾಗಾತ್ರಿ ಜಾನಕಿ ವಿರಾಜಿಸಿದಳ್ ಸ ।
ಮುಲ್ಲಾಸದಿಂ ಪುಷ್ಪವತಿಯಾಗಿ ವಿಕಸಿತ ವಸಂತಲಕ್ಷ್ಮಿಯ ತೆರದೊಳು ॥೨೪॥

ಪೊಡವಿ ಮೂಡಿದ ಮೊಗಂ ಸೊಗಡುಗಂಪೊಗೆದ ಮೈ ।
ತೊಡವುಗಳ ತೊಡಕಿಲ್ಲದವಯವಂ ಪೂಗಳಂ ।
ಮುಡಿಯದ ಬಳಲ್ಬುರುಬು ನಿಚ್ಚಳದ ಕಣ್ಮಲರ್ ತೊಳಪ ಪಣೆ ಮಿರುಪ ಕದಪು ॥
ಕಡುಬಿಣ್ಪಿಡಿದ ಕುಚಂ ಮಾಧವೀಲತೆಯ ಸೆಳೆ ।
ಪಿಡಿದಕ್ಕೈ ನಿರಿಯುಳಿದ ನಸುಮಾಸಿದಂಬರಂ ।
ಕುಡಿವರಿವ ಲಜ್ಜೆ ಸಿಂಗರಕೆ ಮಿಗಿಲಾಯ್ತವನಿಸುತೆಗೆ ಋತುಮತಿಯಾಗಲು ॥೨೫॥

ಸಮುಚಿತ ಸ್ತ್ರೀಧರ್ಮದಿಂದೆ ನಾಲ್ಕನೆಯದಿನ ।
ದಮಲ ಮಜ್ಜನದಲಂಕಾರದೊಳೆಸೆದಳಂದು ।
ನಿಮಿಷದೊಳ್ ತ್ರಿಜಗಮಂ ಗೆಲ್ವೆನೆಂದಂಗಜಂ ಮಸೆದಡಾಯುಧವೊ ಮೇಣು ॥
ಕ್ರಮದಿಂದೆ ಮನ್ಮಥಂ ಕಲುಷಮಂ ಶೋಧಿಸಿದ ।
ರಮಣೀಯ ಸೌಂದರ್ಯಸಾರವೋ ಸ್ಮರನ ಸಿರಿ ।
ಪಮಾಯಶ್ಶ್ರೀಯ ಸಾಕಾರವೋ ಪೇಳೆನಲ್ ಸೀತೆ ರಾಘವನ ಕಣ್ಗೆ ॥೨೬॥

ಸ್ಫುರದುತ್ಕಟಾಕ್ಷ ಚಂಚಲದಿಂದೆ ಚಾರು ಪೀ ।
ವರಪಯೋಧರದಿಂದೆ ಪರಿವೃತ ಸುಮೇಖಲಾ ।
ತರಳ ಸತ್ಕಲ ಕಿಂಕಿಣೀ ಘನಸ್ವನದಿಂದೆಸೆವ ಕಂಕಣಂಗಳಿಂದೆ ।
ಸರಸತರ ಲಾವಣ್ಯಪೂರ ಪ್ರವಾಹದಿಂ ।
ಭರಿತ ಕಬರೀಬರ್ಹ ಲೀಲೆಯಿಂ ಮಳೆಗಾಲ ।
ದಿರವನೆಚ್ಚರಿಪರಸಿಯಂ ಕಂಡು ರಾಮನ ಮನಶ್ಚಾತಕಂ ನಲಿದುದು ॥೨೭॥

ಮಂದಗಮನೆಯ ಮಂದಹಾಸದ ವಿಲಾಸಮಂ ।
ಕುಂದರದನೆಯ ಕುಂದವವಯವದ ಸೌಂದರ್ಯ ।
ದಂದಮಂ ವಕ್ರಕುಂತಳೆಯ ವಕ್ರಾವಲೋಕನದ ಭಾವದ ಬಗೆಯನು ॥
ಚಂದನ ಸುಗಂಧಿನಿಯ ಚಂದ್ರಾನದೆಸಕಮಂ ।
ಬಂದುಗೆದುಟಿಯಳ ಬಂಧುರದ ಸಿಂಗರವನೇ ।
ನೆಂದು ಬಣ್ಣಿಸಬಹುದು ರಾಮಣೀಯಕವಾದ ರಾಮನ ಮಡದಿಯಿರವನು ॥೨೮॥

ನೊಸಲೊಳಾ ರಾಜಿಸುವ ತಿಲಕದಿಂದಲಕದಿಂ ।
ಮಿಸುಪ ಮೈ ನಸುಪೊರ್ಪ ವಸನದಿಂ ದಶನದಿಂ ।
ಪಸರಿಪೆಳನಗೆಯ ತೆಳ್ಗದಪಿನಿಂ ಪದಪಿನಿಂದಮರ್ದ ಪೊಂದುಡುಗೆಯಿಂದ ॥
ಅಸಿವೆರಲ್ಗಳೊಳೊಪ್ಪುವುಗುರ್ಗಳಿಂ ತಿಗುರ್ಗಳಿಂ ।
ಪೊಸತೆನಿಪ ಕುಂಕುಮದ ಕಂಪಿನಿಂದಿಂಪಿನಿಂ ।
ತ್ರಿಸರದೊಳ್ ಮೆರೆವ ಗುರುಕುಚದಿಂದೆ ಕಾಂತೆ ಕಣ್ಗೆಸೆದಿರ್ದಳು ॥೨೯॥

ಪಜ್ಜಳಿಪ ರತ್ನಪ್ರದೀಪಂಗಳಿಂದೆ ಪೊಸ ।
ಬಜ್ಜರದ ಮಣಿಮಂಚದಿಂದಂಚೆದುಪ್ಪಳಿನ ।
ಸಜ್ಜುಕವಲರ್ಗಳಿಂದೆಸೆವ ಮೇಲ್ವಾಸಿನಿಂ ರಾಜೋಪಭೋಗ್ಯಮಾದ ॥
ಸಜ್ಜವನೆಯೊಳ್ ವಿರಾಜಿಪ ಕಾಂತನೆಡೆಗೆ ನಸು ।
ಲಜ್ಜೆ ಮಂದಸ್ಮಿತಂ ಕಿರುಬೆಮರ್ ಕಾತರಂ ।
ಪಜ್ಜೆದೋರಲ್ ಮೊಗದೊಳ್ಕೈತಂದು ಸಾರ್ದಳೊಯ್ಯನೆ ಮತ್ತಗಜಗಾಮಿನಿ॥೨೦॥

ಸಾಗರದ ನಡುವೆ ಫಣಿತಲ್ಪದೊಳ್ ಸಿರಿಯೊಡನೆ ।
ಭೋಗಿಸುವ ತೆರದಿಂ ಮಿಥಿಳೇಂದ್ರಸುತೆಯು ಸಂ ।
ಭೋಗದಿಂ ರಘುಕುಲ ಲಲಾಮನೆಸೆದಂ ಮನುಜಲೀಲೆಗಿದು ಸಾರ್ಥಮೆನಲು ॥
ರಾಗರಸದಿಂಜಿ ಪುಳಕಂ ಪೊಣ್ಮೆ ನಲಿದು ಮದ ।
ನಾಗಮಪ್ರೌಢಿಯಿಂ ಸಕಲ ರತಿಕಲೆಗಳಿಂ ।
ಪಾಗಲ್ ಪರಸ್ಪರವಿಚಾರಮಂ ಮರೆದೈಕ್ಯಭಾವದಿಂ ಸೊಗಸುಗೊಳಿಸಿ ॥೨೧॥

ಬೆಂಗೊಡದೆ ಮೋಸವೋಗದೆ ತವಕಮುಡುಗಿ ಪೆರ ।
ಪಿಂಗದೆ ಘಾತಿಗಳುಕದೆ ಕೈಮರೆಯದೆ ಚದು ।
ರಿಂಗದೆ ನೆಗಳ್ದ ಪುಳಕಂ ಬಿಡದೆ ತಳ್ತಳ್ಕರಡಗದಲಸಿಕೆದೋರದೆ ॥
ಅಂಗಜಶ್ರಮವ ನಿಟ್ಟಿಸದೆ ಸಲೆ ರಂಜಿಸುವ ।
ಸಂಗರ ಸದಾಳಾಪದಿಂದೆಸದರೊಂದಿನಿಸು ।
ಭಂಗಮಿಲ್ಲದೆ ವೀರಭಟರೊದಗುವಂತೆ ಸಮರತಿಯೊಳಾ ದಂಪತಿಗಳು ॥೨೨॥

ಇಂತೆಸೆವ ಸಮರತಿಯ ಸೊಬಗಿನಿಂದವರೀರ್ವ ।
ರುಂ ತೊಳಗುತಿರೆ ಬಳಿಕ ವರವಿಷ್ಣುನಕ್ಷತ್ರ ।
ದಂತದೊಳ್ ವೈದೇಹಿಗಾಯ್ತು ಗರ್ಭಾದಾನ ಮದರ ಫಲಮಂ ನೋಡಲು ॥
ಎಂತಾದೊಡಂ ತನ್ನ ಕಾಂತನನಗಲ್ದ ಸೀ ।
ಮಂತಿನಿ ಪರಸ್ಥಳದೊಳಣುಗರಂ ಪಡೆದಪಳ್ ।
ದಂ ತಿಳಿಯದುತ್ಸವದೊಳಿರ್ದಳಾಕಾಂತೆ ಬಸಿರಾದ ಲಾಂಛನವನಾಂತು ॥೨೩॥

ಸಣ್ಣನಡು ಬಳೆಯೆ ತ್ರಿವಳಿಗಳಡಗೆ ತೆಳ್ವಾಸೆ ।
ನುಣ್ಣಗೆ ಪೊಗರ್ವಡೆಯೆ ಚೂಚಕದ ಕಪ್ಪುಣ್ಮೆ ।
ತಿಣ್ಣಮೊಲೆ ಬಿಣ್ಪಡರೆ ಕಾಲ್ಮಂದಗತಿಗಲಸೆ ನಗೆಮೊಗಂ ಬೆಳ್ಪುದೋರೆ ॥
ಕಣ್ಣೆವೆಯ ಪುರ್ಬಿನ ನವಿರ್ಮಿಂಚುದಳೆಯೆ ತನು ।
ತಣ್ಣಸದೊಳೆಸೆಯೆ ಪೊಸಗಾಡಿವೆತ್ತಿರ್ದಳೇ ।
ವಣ್ಣಿಸುವೆನುಲ್ಲಸತ್ಕಾಂಚನಲತಾಂಗಿ ಸುತ ಲಾಂಛನದ ಗರ್ಭದಿಂದೆ ॥೨೪॥

ಬೆಳ್ದಾವರೆಯೊಳೆರಗಿದಳಿಕುಲಂ ಗಗನಾಗ್ರ ।
ದೊಳ್ದಿನದಿನಕೆ ಬೆಳೆವ ಚಂದ್ರಕಲೆ ಕನಕಾದ್ರಿ ।
ಯೊಳ್ದಿಟ್ಟಿಗೊಳಿಸುವ ಸಿತಾಂಬುಜಂ ರಾರಾಜಿಸುವ ತೆರದೊಳಾ ಕಾಂತೆಯ ॥
ಒಳ್ದೆಳೆದ ಚೆಲ್ವಿನಾನನದೊಳುರೆ ಮಿರುಗುವ ಕು ।
ರುಳ್ದೊಂಗಲಸಿನಡುವಿನೊಳ್ ಪೊಳೆವ ಗರ್ಭಂ ನೆ ।
ಗಳ್ದಕುಚದೊಳ್ ಮಿಸುಪ ಚೂಚಕದ ಕಪ್ಪು ಚೆಲ್ವಿಂದೆ ಕಣ್ಗೆಸೆದಿರ್ದುದು ॥೩೫॥

ಚಂದ್ರಮುಖಿಯಾದ ವೈದೇಹಿಯ ಜಠರಮೆಂಬ ।
ಚಂದ್ರಕಾಂತದ ಮಣಿಯ ಮಧ್ಯದೊಳ್ ತವೆ ರಾಮ ।
ಚಂದ್ರನೆಂಬಖಿಳ ಲೋಕಾನಂದಕರವಾದ ಸಂಪೂರ್ಣ ಕಲೆಗಳುಳ್ಳ ॥
ಚಂದ್ರನ ವಿರಾಜಿಪ ಪ್ರತಿಬಿಂಬಮಾಗಿರ್ದ ।
ಚಂದ್ರನೆನೆ ಶಿಶು ಗರ್ಭದೊಳ್ ತೊಳಗೆ ಕೂಡಿರ್ದ ।
ಚಂದ್ರಿಕೆಪೊಲಂಗರುಚಿ ಬೆಳ್ಪಡರಲೊಳ್ಪಿನಿಂದೊಪ್ಪಿರ್ದಳುತ್ಪಲಾಕ್ಷಿ ॥೩೬॥

ಕಾಂಚನಲತಾ ಕೋಮಲಾಂಗಿ ಗರ್ಭಿಣಿಯಾದ ।
ಲಾಂಛನವನಿನಕುಲಾಧೀಶ್ವರಂ ಕಂಡು ರೋ ।
ಮಾಂಚನದ ಹರ್ಷದಿಂ ನಾಲ್ಕನೆಯ ತಿಂಗಳೊಳ್ ವಿಭವದಿಂ ಭೂಸುರರ್ಗೆ ॥
ವಾಂಛಿತವನಿತ್ತು ಪುಂಸವನ ಸೀಮಂತಮಂ ।
ತಾಂ ಚಾರು ಲೋಚನೆಗೆ ವಿಸ್ತರಿಸಿದಂ ಚಿತ್ತ ।
ಚಾಂಚಲ್ಯಮಿಲ್ಲದೆ ವಸಿಷ್ಠ ವಿಶ್ವಾಮಿತ್ರರುಕ್ತದಿಂ ಮಾಡಿಸಲ್ಕೆ ॥೩೭॥

ಯೋಜನತ್ರಯದಗಲದುತ್ಸವದ ಶಾಲೆಯಂ ।
ರಾಜಿಸಲ್ ಕೈಗೈಸಿ ಬಳಿಕಲ್ಲಿ ನೆರೆದ ನಾ ।
ನಾಜನಕೆ ದಿವಿಜರ್ಗೆ ಸುಗ್ರೀವ ಮೊದಲಾದ ಕಪಿಗಳ್ಗೆ ಭೂಸುರರ್ಗೆ ॥
ರಾಜವರ್ಗಕೆ ವಿಭೀಷಣಮುಖ್ಯದೈತ್ಯರ್ಗೆ ।
ಭೋಜನ ಸುಗಂಧ ತಾಂಬೂಲ ಪುಷ್ಪಾಕ್ಷತೆಯ ।
ಪೂಜೆ ವಸ್ತ್ರಾಭರಣದುಡುಗೊರೆಗಳಂ ಕೊಟ್ಟು ರಾಘವಂ ಮನ್ನಿಸಿದನು ॥೩೮॥

ಉತ್ಸವಕೆ ಬಂದನಿಬರೆಲ್ಲರಂ ಶರಣಜನ ।
ವತ್ಸಲಂ ಸತ್ಕರಿಸಿ ಬೀಳ್ಕೊಟ್ಟು ರಾಜಸಂ ।
ಪತ್ಸುಖದೊಳಿರ್ಪನಿತರೊಳ್ ಬಳಿಕ ಸೀತೆ ನಿಜಕಾಂತನೇಕಾಂತಕೈದಿ ॥
ಕುತ್ಸಿತಂ ಪೊರ್ದದಾಶ್ರಮದ ಋಷಿಪತ್ನಿಯರ ।
ಸತ್ಸಂಗದೊಳ್ ತನ್ನ ಬೇಸರಂ ತವಿಸುವೆ ನಿ ।
ದುತ್ಸಕಂ ತನಗದರಿನಿನ್ನೊಮ್ಮೆ ಬನಕೆ ತನ್ನಂ ಕಳುಹಬೇಕೆಂದಳು ॥೩೯॥

ಆ ಕ್ಷಿತಿಜೆ ಬಯಕೆಯಂ ಬಿನ್ನೈಸೆ ಕೇಳ್ದು ನಗು ।
ತಾಕ್ಷೇಪದಿಂದೆ ಕಳುಹುವನಾಗಿ ಸಂತೈಸಿ ।
ರಾಕ್ಷಸಾಂತಕ ನಿರಲ್ಕೊಂದಿರುಳ್ ಕನಸುಗಂಡೇಳುತೆ ವಸಿಷ್ಠನೊಡನೆ ॥
ಈ ಕ್ಷೋಣಿಸುತೆ ಗಂಗೆಯಂ ಕಳೆದು ಕಾಡೊಳ್ ಮ ।
ಹಾ ಕ್ಷೀಣೆಯಾಗಿ ದೇಸಿಗರಂತೆ ದೆಸೆದೆಸೆಯ ।
ನೀಕ್ಷಿಸುತೆ ಮರುಗುತಳುತಿರ್ದುದಂ ಕಂಡೆನಿದು ಲೇಸಹುದೆ ಪೇಳೆಂದನು ॥೪೦॥

ಎನೆ ಕನಸಿದೊಳ್ಳಿತಲ್ಲೆಂದದಕೆ ಶಾಂತಿಯಂ ।
ಮುನಿವರ ವಸಿಷ್ಠಂ ನೆಗಳ್ಚಿದಂ ಬಳಿಕ ಮನ ।
ದನುತಾಪದಿಂ ಪ್ರಜೆಯ ನಾರೈವುದಂ ಮರೆದೆರಡು ಮೂರುದಿವಸಮಿರ್ದು ॥
ಜನಮಲಪಿದಪುದೆಂದು ರಾತ್ರಿಯೊಳ್ ಪೊರಮುಟ್ಟು ।
ದಿನಪ ಕುಲತಿಲಕನೇಕಾಂತದೊಳ್ ನಗರ ಶೋ ।
ಧನೆಯ ಚಾರರೊಳೊರ್ವನಂ ಕರೆಸಿ ಕೇಳ್ದನಿಂತೆಂದು ವಿನಯೋಕ್ತಿಯಿಂದೆ ॥೪೧॥

ನಿಂದಿಸರಲೇ ಪ್ರಜೆಗಳಿನ್ನೆಗಂ ತನ್ನ ಗುಣ ।
ಕೊಂದಿಸರಲೇ ಪಳಿವನಮಲತರ ಕೀರ್ತಿಯಂ ।
ಕಂಡಿಸರಲೇ ದೂಸರಿಂದೆ ಭುಜವಿಜಯ ಪ್ರತಾಪ ತೇಜವನಿಳೆಯೊಳು ॥
ನಂದಿಸರಲೇ ಜರೆದು ನಿಜವಂಶದೇಳ್ಗೆಯಂ ।
ಕುಂದಿಸರಲೇ ಜೋಡಿಗಳೆದು ವಹಮಾನದೊಳ್ ।
ಸಂಧಿಸರಲೇ ಕೊಂಕುಕೊರತೆಗಳನೆಂದವನಸುರಾರಿ ಬೆಸಗೊಂಡನು ॥೪೨॥

ದೇವ ನಿನ್ನಂ ಪೆಸರಿಸಿದನೀಶನಾದಪಂ ।
ಸೇವಿಸಿದವಂ ಚತುರ್ಮುಖನಾಗಲುಳ್ಳವಂ ।
ಕಾವುದೆಂದೈದೆ ಮರೆಹೊಕ್ಕವಂ ಜಗದೊಳಾಚಂದ್ರಾರ್ಕಮಾಗಿ ಬಾಳ್ವಂ ॥
ಶ್ರೀವಿಭವದಿಂ ಶಕ್ರಪದಪಿಯಂ ಜರೆದಪಂ ।
ಭೂವಲಯದೊಳ್ ನಿಂದಿಸುವರುಂಟೆ ತರಣಿಯಂ ।
ಕಾವಳಂ ಮುಸುಕಿರ್ದೊಡೇನಪ್ಪುದೆಂದಪಂ ಬಿನ್ನೈಸಿ ಕೈಮುಗಿದನು ॥೪೩॥

ಏನಾದೊಡಂ ಕಟಕಿಯಾಗಿರ್ಪುದೀಮಾತು ।
ಭಾನುವಂ ಕಾವಳಂ ಮುಸುಕಲೇನೆನಲೆನ್ನ ।
ದೀನವಾದರಸುತನಕಾವುದೂಣೆಯುವೆಂಬರೆಂದು ರಘುಪತಿ ಕೇಳಲು ॥
ನೀನೆ ಪಾವನರೂಪನೆಂಬುದಂ ಮುನಿಯವದು ।
ತಾನೆ ತೋರಿಸಳೆ ಲೋಕದ ಜನಕೆ ಜಗದೊಳ ।
ಜ್ಞಾನಿಗಳ್ ನುಡಿದ ನಿಂದೆಯನುಸಿರಲಮ್ಮೆನೆಂದವನೆರಗಿದಂ ಪದದೊಳು ॥೪೪॥

ಏಕಂಜಬೇಡಿನ್ನು ಮಾಜದಿರ್ ತನ್ನಾಣೆ ।
ಹೇಳೆಂದು ರಘುಕುಲಲಲಾಮನೊತ್ತಾಯದಿಂ ।
ಕೇಳಲವನೆಂದನವಧರಿಸೊರ್ವ ಮಡಿವಾಳ ಮಲಿನಮಂ ತೊಳೆವನಾಗಿ ॥
ಕಾಳುಗಡದಂ ಜೀಯ ಸದ್ಗುಣಚರಿತ್ರನಾ ।
ಮಾಳಿಯಿಂ ಜಗಮಂ ಪುನೀತಮಂ ಮಾಳ್ಪನಿ ।
ನ್ನೇಳಿಗೆಯನವನೆತ್ತ ಬಲ್ಲನೆನಲೇನೆಂದನೆನಲಾತನಿಂತೆಂದನು ॥೪೫॥

ಪೆಂಡತಿ ತವರ್ಮನೆಗೆ ಮುಳಿದು ಪೇಳದೆ ಪೋದ ।
ಚಂಡಿತನಕವಳ ತಾಯ್ತಂದೆಗಳ್ ಕಳುಹಲಂ ।
ದಂಡಲೆದೊಡಿನ್ನೊಲ್ಲೆನಗಲಿರ್ದ ಮಡದಿಯಂ ಮತ್ತೆ ರಘುನಾಥನಂತೆ ।
ಕೊಂಡಾಳುವವನಲ್ಲ ತಾನೆಂದು ರಜಕನು ।
ದ್ದಂಡದೊಳ್ ನುಡಿಯೆ ಕಿವಿಮುಚ್ಚಿಕೊಳುತೆಯ್ದಿದೆನ ।
ಖಂಡಿತದ ಮಂತ್ರಪೂತದ ಹವಿಯನರಿದೆಂಜಲಿಪುದೆ ವಾಯಸಮೆಂದನು ॥೪೬॥

ಎಂದು ಬಿನ್ನೈಸೆ ಕೇಳ್ದಾತನಂ ಕಳುಹಿ ರಘು ।
ನಂದನಂ ಬಂಧನಕ್ಕೊಳಗಾದ ಮತ್ತಗಜ ।
ದಂದದಿಂ ನಿಜಶಿರವನೊಲೆದು ಮೂಗಿನ ಮೇಲೆ ಬೆರಳಿಟ್ಟು ಮೌನದಿಂದೆ ॥
ನಿಂದು ಸೈವೆರಗಾಗಿ ನೆನೆ ನೆನೆದು ಚಿತ್ತದೊಳ್ ।
ನೊಂದು ಬಿಸುಸುಯ್ದು ಕಡುವಳಿದು ಕಾತರಿಸಿ ಕಳೆ ।
ಗುಂದಿ ದುಮ್ಮಾನದಿಂ ಪೊಕ್ಕನಂತಃಪುರಕೆ ಪುತ್ತವುಗುವಹಿಪನಂತೆ ॥೪೭॥

ಓಲಗಂಗುಡದೆ ಬಾಗಿಲ್ಗೆ ಬಂದಖಿಳ ಭೂ ।
ಪಾಲರಂ ಕಳಿಸಿ ಕಾಣಿಸಿಕೊಳದೊಳಗೆ ಬಂ ।
ತಾಲತಾಂಗಿಯ ಕೇಳಿಗೆಡೆಗೊಟ್ಟು ರಾಜೇಂದ್ರನಿರೆ ಕೇಳ್ದು ಭೀತಿಯಿಂದೆ ॥
ಆ ಲಕ್ಷ್ಮಣಾದಿಗಳ್ ಪೊಕ್ಕರಂತಃಪುರವ ।
ನಾಲಿಂಗಿಸಿದ ಜಾಡ್ಯದಿಂದೆ ಜಡಿದವಯವದ ।
ನೀಲಾಂಗನಂ ಕಂಡು ಕಾಲ್ಗೆರಗಿ ನುಡಿಸಲಮ್ಮದೆ ಸುಮ್ಮನಿರುತಿರ್ದರು ॥೪೮॥

ಎದ್ದು ಕುಳ್ಳಿರ್ದು ಕರುಣಾಳುಗಳ ಬಲ್ಲಹಂ ।
ಮುದ್ದುಸೈದನುಜರಂ ಕರೆದಿಳೆಯೊಳೆಂದೆನಗೆ ।
ಪೊದ್ದಿದಪವಾದಮಂ ನೀವರಿದುದಿಲ್ಲಕಟ ಸಾಕಿನ್ನು ನೆರವಿಗಳೊಳು ॥
ಕದ್ದ ಕಳ್ಳನವೋಲಾಡಿಸಿಕೊಳಲಾರೆನೊಡ ।
ಲಿದ್ದಲ್ಲಿ ನಿಂದೆಗೊಳಗಾಗಿ ಬದುಕುವನಲ್ಲ ।
ತಿದ್ದಿ ತೀರದ ವಿಲಗಕಂಜುವೆಂ ಸೀತೆಯಂ ಬಿಟ್ಟಲ್ಲದಿರೆನೆಂದನು ॥೪೯॥

ಇವಳಯೋನಿಜೆ ರೂಪ ಗುಣ ಶೀಲಸಂಪನ್ನೆ ।
ಭುವನಪಾವನೆ ಪುಣ್ಯಚರಿತೆ ಮಂಗಳ ಮಹಸೋ ।
ವೆ ಪತಿವ್ರತೆಯೆಂಬುದಂ ಬಲ್ಲೆನಾದೊಡಂ ನಿಂದೆಗೊಳಗಾದಬಳಿಕ ॥
ಅವನಿಸುತೆಯುಂ ತವಗೆ ಬಿಡುವುದೇ ನಿಶ್ಚಯಂ ।
ರವಿಕುಲದ ರಾಯರಪಕೀರ್ತಿಯಂ ತಾಳ್ದಪರೆ ।
ಕುವರನಾಗಿರ್ದ ತನ್ನಂ ತಾತನುಳಿದುದಿಲ್ಲವೆ ಸತ್ಯಭಾಷೆಗಾಗಿ ॥೫೦॥

ಕಲಿಯುಗದ ವಿಪ್ರರಾಚಾರಮಂ ಬಿಡುವಂತೆ ।
ಹಲವುಮಾತೇನಿನ್ನು ಸೀತೆಯಂ ಬಿಟ್ಟೆನೆನೆ ।
ಬಲುಗರಮಿದೆತ್ತಣದೊ ಕಾರುಣ್ಯನಿಧಿಗೆನುತೆ ನಡನಡುಗಿ ಭೀತಿಯಿಂದೆ ॥
ನೆಲೆಗೊಂಡ ವೇದಮಂ ಧರೆಯ ಪಾಷಂಡಿಗಳ್ ।
ಸಲೆ ನಿಂದಿಸಿದೊಡದಂ ಮಾಣ್ದಪರೆ ದ್ವಿಜರಕಟ ।
ಕುಲವರ್ಧಿನಿಯನೆಂತು ಬಿಡುವೆ ನೀಂ ಪೇಳೆಂದರನುಜಾತರಗ್ರಜಂಗೆ ॥೫೧॥

ಭಯಶೋಕದಿಂದೆ ಗದ್ಗದಿತ ಕಂಠದೊಳಶ್ರು ।
ನಯನದೊಳ್ ತುಳುಕೆ ಭರತಂ ಕರೆವ ಕಪಿಲೆಯಂ ।
ನಯವಿದರ್ ಪೊಡೆವಡವಿಗಟ್ಟುವರೆ ಪಾವಕನೊಳರಸಿಯಂ ಪುಗಿಸಿದಂದು ॥
ಪ್ರಿಯೆ ನಿನಗೆ ಪರಿಶುದ್ಧೆ ಕುಲಕೆ ಮಂಗಳೆ ಸುತೋ ।
ದಯಕೆ ನಿರ್ಮಲೆ ತನಗೆ ಗಾಗುಡುವ ಸೊಸೆಯೆಂದು ।
ಬಯಸಿದೊಡೆ ಬಂದಯ್ಯನಾಡನೆ ಸುರಾಸುರರ ಮುಂದೆ ಕಪಿಕಟಕವರಿಯೆ॥೫೨॥

ಅದನೆಲ್ಲಮಂ ಮರೆದು ಹುಲುಮನುಜ ರಜಕನಾ ।
ಡಿದ ದೂಸರಂ ನೆನೆದು ಕುಲಪತ್ನಿಯಂ ಬಿಡುವ ।
ಹದನಾವುದಕಟ ಗುರುಲಘುವಿನಂತರವನೆಣಿಸದೆ ಬರಿದೆ ಮೂಢರಂತೆ ॥
ಎದೆಗೆಟ್ಟು ದೇವಿಯಂ ದೋಷಿಯೆಂಬರೆ ಜೀಯ ।
ಪದುಳವಿಹುದೆಂದು ವಿನಯದೆ ಳಗ್ರಜಾತನಂ ।
ಕದುಬಿ ನುಡಿದಂ ಭರತನಾತನಂ ನೋಡುತೊಯ್ಯನೆ ಭೂಪನಿಂತೆಂದನು ॥೫೩॥

ತಮ್ಮ ನೀನಾಡಿದಂತವನಿಸುತೆ ನಿರಜೆಯಹು ।
ದುಮ್ಮಳಿಸಬೇಡ ಸೈರಿಸಲಾರೆ ನೀದೂಸ ।
ರಂ ಮಹಿಯೊಳುಳಿವರೆ ಪೃಥು ಪುರೂರವ ಹರಿಶ್ಚಂದ್ರಾದಿ ನರಪತಿಗಳು ॥
ನಮ್ಮನಪಕೀರ್ತಿಗೊಳಗಾಗಲೇತಕೆ ಮಮತೆ ।
ಯುಂಮಹಾಯೋಗಿ ಬಿಡುವಂತಿವಳನುಳಿವೆನೆನೆ ।
ಹಮ್ಮೈಸಿ ಲಕ್ಷ್ಮಣಂ ಕಂಪಿಸುತೆ ಕಿವಿಮುಚ್ಚುತಗ್ರಜಂಗಿಂತೆಂದನು ॥೫೪॥

ಕಾಯಸುಖಕೋಸುಗಂ ಕೃತಧರ್ಮಮಂ ಬಿಡುವೊ ।
ಲಾಯತಾಕ್ಷಿಯ ಭಾವಶುದ್ಧಿಯಂ ತಿಳಿದಿರ್ದು ।
ವಾಯುದಪವಾದಕಿಂತರಸಿಯಂ ತೊರೆಯಬೇಕೆಂಬರೇ ಕರುಣಮಿಲ್ಲದೆ ॥
ಜೀಯ ! ತುಂಬಿದಬಸುರ್ ಬೆಸಲಾದ ದೇವಿಯಂ ।
ಪ್ರೀಯದಿಂದಾರೈದು ಸಲಹಬೇಕೆಂದು ರಘು ।
ರಾಯಂಗೆ ಲಕ್ಷ್ಮಣಂ ಬಿನ್ನೈಸೆ ಮೇಲ್ವಾಯ್ದು ಶತ್ರುಘ್ನನಿಂತೆಂದನು ॥೫೫॥

ಬಿಡುವರೆಂತಿಕ್ಷ್ವಾಕು ವಂಶದವರರಸಿಯಂ ।
ನುಡಿವರೆಂತಿಳೆಯೊಳಾರಾದೊಡಂ ದೂಸರಂ ।
ಪಡೆವರೆಂತಮಲ ಸತ್ಕೀರ್ತಿಯಂ ಬುದ್ಧಿವೇಳ್ವುದಕೊಡೆಯರಿಲ್ಲವಾಗಿ ॥
ಕಡಿವರೆಂತೇಳ್ಗೆಯಂ ಪೆಣ್ಣಳಲ್ವೆಂಕಿಯಿಂ ।
ಸುಡುವರೆಂತನ್ವಯದ ಬಾಳ್ಕೆಯನಿದಕ್ಕೆ ಕಿವಿ।
ಗುಡುವರೆಂತೀಗಳೆನ್ನೊಡಹುಟ್ಟಿದವರೆನುತ ಶತ್ರುಘ್ನನುರಿದೆದ್ದನು ॥ ೫೬ ॥

ಅಗನ ಕೇಳನುಜರಾಡಿದ ನುಡಿಗೆ ತಲೆವಾಗಿ ।
ತರಣಿಕುಲ ತಿಲಕನೊಯ್ಯನೆ ದೈನ್ಯಭಾವದಿಂ ।
ತರಹರಿಸಬಾರದಪವಾದ ಹೃಛ್ಛೂಲಮಂ ತನಗೆ ಜಾನಕಿಯನುಳಿದು ॥
ಪೆರೆಯುರ್ಚಿದುರಗನಂತಿರ್ದಪೆಂ ಸಾಕು ನಿಮ ।
ಗೊರೆದೊಡೇನಹುದೆಂದು ಬೇಸರಿಂಮನೆಗಳ್ಗೆ ।
ಭರತ ಶತ್ರುಘ್ನರಂ ಕಳುಹುತೇಕಾಂತದೊಳ್ ಸೌಮಿತ್ರಿಗಿಂತೆಂದನು ॥ ೫೭ ॥

ತಮ್ಮ ಬಾ ನೀನಿಂದುವರೆಗೆ ನಾನೆಂದವಾ ।
ತಮ್ಮಿರಿದವನಲ್ಲ ಕೆಲಬಲವನಾರಯ್ಯು ।
ತಮ್ಮರುಗದಿರು ತನ್ನ ಕೊರಳಿಗಿದೆ ಖಡ್ಗಮಲ್ಲಪೊಡೀಗ ಜಾನಕಿಯನು ॥
ಉಮ್ಮಳಿಸದೊಯ್ದು ಗಂಗೆಯ ತಡಿಯರಣ್ಯದೊಳ್ ।
ಸುಮ್ಮನೆ ಕಳುಹಿ ಬರ್ಪುದವಳೆನ್ನೊಳಾಡಿರ್ಪ ।
ಳೊಮ್ಮೆ ಕಾನನಕೈದಬೇಕೆಂದು ಬಯಕೆಯಿಂದದೆ ನೆಪಂ ನಿನಗೆಂದನು ॥ ೫೮ ॥

ಎನೆ ರಾಘವೇಂದ್ರ ನಿನ್ನಾಜ್ಞೆಯಂ ಮೀರಲ್ಕೆ ।
ತನಗೆ ರೌರವಮಪ್ಪುದೆಂದುದಂ ಮಾಡಲ್ಕೆ ।
ಜನನಿಯಂ ಕೊಂದುಗ್ರಗತಿಯಪ್ಪುದೇಗೈವೆನೆಂದು ಕಡುಶೋಕದಿಂದೆ ॥
ತನು ಝೊಂಪಿಸಲ್ಕೆ ಸೆರೆಬಿಗಿದು ಕಂಬನಿಯಿಂದೆ ।
ನನೆದಳಲ್ದೊರೆಯೊಳಾಳ್ವನುಜಂ ಘೂರ್ಮಿಸುತೆ ।
ನಿನಗೆ ದೋಷಮೆ ತಾನಿರಲ್ಕೆ ನಡೆ ಕಳುಹೆಂದರಸನೇಂ ದಯೆದೊರೆದನೊ ॥೫೯॥

ಅಣ್ಣದೇವನೊಳಿಡಿದ ವಾತ್ಸಲ್ಯಮೆಂಬ ಬ ।
ಲ್ಗಣ್ಣಿಯೊಳ್ ಕಟ್ಟುವಡೆದಲ್ಲೆನಲರಿಯದೆ ನಿ ।
ರ್ವಿಣ್ಣಭಾವವೊಳಂದು ಲಕ್ಷ್ಮಣಂ ತುರಗಳ್ ಸಾರಥಿಕೇತನಂಗಳಿಂದೆ ॥
ಹಣ್ಣಿದ ವರೂಥವಂ ತರಿಸಿ ಪೊರರಿಸಿ ನೆಲ ।
ವೆಣ್ಣಮಗಳಿರುತಿರ್ದ ರಾಜಮಂದಿರಕ್ಕೈದಿ ।
ಕಣ್ಣೊಳೀಕ್ಷಿಸದೆ ತಲೆವಾಗಿ ದೂರದೊಳೆ ನಿಂದಾ ಸೀತೆಗಿಂತೆಂದನು ॥ ೬೦ ॥

ತಾಯೆ ನೀನೇತಕೆಳಿಸಿದೆ ನಿನ್ನನೀಗ ರಘು ।
ರಾಯಂ ತಪೋವನಕೆ ಕಳುಹಿ ಬರಹೇಳಿದಂ ।
ಪ್ರಿಯಮುಳ್ಳೊಡೆ ರಥಂ ಪಣ್ಣಿ ಬಂದಿದೆಕೊ ಬಿಜಯಂಗೈವುದೆಂದು ಮರುಗಿ ॥
ಛಾಯೆಗಾಣಿಸಿ ಸುಮಿತ್ರಾತ್ಮಜಂ ನುಡಿದಭಿ ।
ಪ್ರಾಯಮಂ ತಿಳಿಯದತಿ ಸಂಭ್ರಮಾನ್ವಿತೆಯಾದ ॥
ಳಾಯತಾಂಬಕಿ ತನ್ನಭೀಷ್ಟಮಂ ಸಲಿಸುವಂ ಕಾಂತನೆಂಬುತ್ಸವದೊಳು ॥ ೬೧ ॥

ಅಂಬುಜಾನನೆ ಬಳಿಕ ಪಯಣಮಂ ನಿಶ್ಚೈಸಿ ।
ನಂಬಿದರಭೀಷ್ಟಮಂ ಸಲಿಸುವ ಕೃಪಾಳು ತಾ ।
ನೆಂಬುದಂ ಕಾಣಿಸಿದನಿಂದೆನ್ನ ಕಾಂತನೆನಗೆಂದು ಕಾಸಲೆಗೆ ಪೇಳ್ದು ॥
ಮುಂಬರಿದೊಡಂಬಡಿಸಿ ಬಲವಂದು ಕಾಲ್ಗೆರಗಿ ।
ತುಂಬಿದ ಪರಕೆವೆತ್ತು ಕೈಕೆಯಾದೇವಿಗೆ ಶಿ ।
ರಂಬಾಗಿ ವರಸುಮಿತ್ರೆಗೆ ನಮಿಸಿ ಸಖಿಯರಂ ಸಂತೈಸಿ ಬೀಳ್ಕೊಂಡಳು ॥ ೬೨ ॥

ಮಿಗೆ ತಪೋವನದ ಋಷಿಗಳ್ಗೆ ಮುನಿಪತ್ನಿಯ ।
ರ್ಗಗುರು ಚಂದನ ಕುಂಕುಮಾನುಲೇಪನಗಳಂ ।
ಬಗೆಬಗೆಯ ದಿವ್ಯಾಂಬರಗಳಂ ವಿವಿಧ ಮಣಿಭೂಷಣಸುವಸ್ತುಗಳನು ॥
ತೆಗೆದು ಕಟ್ಟಿಸಿ ರಥದೊಳಿಂಬಿಟ್ಟು ರಾಮನಂ ।
ಘ್ರಿಗಳ ಜೆಂಬೊನ್ನ ಪಾವುಗೆಗಳಂ ತರಿಸಿಕೊಂ ।
ಡೊಗುಮಿಗೆಯ ಹರುಷದೊಳಡರ್ದಳಂಗನೆ ಮಣಿವರೂಥಮಂ ನಿಜಮಿದೆಂದು ॥ ೬೩ ॥

ಅಗ್ರಜಂ ತರಿಸೆಂದು ತನ್ನೊಳಾಡಿದ ಕಜ್ಜ ।
ದುಗ್ರಮಂ ಬನಕೆ ಪೋದಪೆನೆಂಬದೇವಿಯ ಸ ।
ಮಗ್ರಸಂತೋಷಮಂ ಕಂಡು ಸೌಮಿತ್ರಿ ಮನದೊಳ್ ಮರುಗಿ ಕಂಬನಿಯನು ॥
ನಿಗ್ರಹಿಸಿಕೊಂಡು ಸಾರಥಿಗೆ ಸೂಚನೆಗೈದು ।
ವ್ಯಗ್ರದಿಂದ್ಯೈದಿಸಿದನಾರಥವನಾಗ ದೇ ।
ವಗ್ರಾಮ ನಿಲಯ ಲಕ್ಷ್ಮೀಶನುಂಗುಟದೊಳೊಗೆದಮಲಜಾಹ್ನವಿಯ ತಡಿಗೆ ॥ ೬೪ ॥

ಹತ್ತೊಂಭತ್ತನೆಯ ಸಂಧಿ

ಸೂಚನೆ ॥ ರಮಣಂ ತೊರೆದನೆಂಬುದಂ ಕೇಳ್ದು ಶೋಕದಿಂ ।
ಭ್ರಮಿಸುತಡವಿಯೊಳಿರಲ್ ಕಂಡು ವಾಲ್ಮೀಕಿಯಾ ।
ಶ್ರಮಕೊಯ್ಯೊಡಲ್ಲಿ ಮಿಥಿಳೇಂದ್ರಸುತೆ ತನಯರಂ ಪಡೆದು ಪದುಳದೊಳಿರ್ದಳು ॥

ಅರಸ ಕೇಳ್ ಸೌಮಿತ್ರಿ ವೈದೇಹಿಯಂ ಕೊಂಡು ।
ತೆರಳುವ ರಥಾಗ್ರದೊಳ್ ಚಲಿಸುವ ಪತಾಕೆ ರಘು ।
ವರನಂಗನೆಯನುಳಿದನಕಟಯೆಂದಡಿಗಡಿಗೆ ತಲೆಗೊಡುಹುವಂತಿರಲ್ಕೆ ॥
ಪರಮದಾರುಣವಾಯ್ತಿದೆಂದಯೋಧ್ಯಾಪುರದ ।
ನೆರವಿಯ ಜನಂ ಗುಜುಗುಜಿಸಿ ಮನದೆ ಕರಗಿ ಕಾ ।
ತರಿಸುತಿರೆ ಪರಿಸಿದಂ ಕಲ್ಬಟ್ಟೆಗೊಂಡನಿಲವೇಗದಿಂದಾ ರಥವನು ॥ ೧ ॥

ಧುರದೊಳಾಂತರನಿರಿದು ಮೆರೆಯಲೇರುವ ರಥಂ ।
ತರಳೆಯಂ ಕಾನನಕೆ ಕಳುಹಲಡರ್ವಂತಾಯ್ತು ।
ಧರೆಯೊಳಾರ್ತರನ್ಮೈದೆ ರಕ್ಷಿಸುವ ಬುದ್ಧಿ ಕೋಮಲೆಯ ಕೊಲೆಗೆಲಸಕಾಯ್ತು ॥
ಕರುಣಮಿಲ್ಲದೆ ಹೊರೆವ ಹರಣಂ ಸುಡಲಿ ನಿ ।
ಷ್ಠುರವೊಳೆಂತೀಕೃತ್ಯಮೆಸಗುವನೊ ರಾಘವೇ ।
ಶ್ವರನೆಂತಿದಕ್ಕೆ ಬೆಸಸಿದನೊ ತನಗೆನುತೆ ಸೌಮಿತ್ರಿ ಮರುಗುತ ನಡೆದನು ॥ ೨ ॥

ಒಳ್ಳೊರಲ್ದುದು ಮುಂದೆ ಮಾರ್ಗವಂ ದಾಂಟಿದುವು ।
ಕುಳ್ಳಿರ್ದ ಮೃಗಮೆದ್ದು ಬಲದ ಕಣ್ಣದಿರೆ ಕಂ ।
ದಳ್ಳೆದೆಯುಲವನಿಸುತೆ ನೋಡು ಲಕ್ಷ್ಮಣ ದುರ್ನಿಮಿತ್ತಂಗಳಂ ಪಥದೊಳು ॥
ಡಿಳ್ಳಮಾದಪುದೀಗಳೆನ್ನ ಮನಮಿದಕೆ ಮುಂ ।
ದೊಳ್ಳಿತಾಗಲಿ ರಾಮನಾಯುಷ್ಯಕೈಶ್ವರ್ಯ ।
ಕುಳ್ಳ ಭುಜಬಲಕಸುರರಂಗೆಲ್ದ ರಾಘವಂ ನಮ್ಮಂ ಸಲಹಲೆಂದಳು ॥ ೩ ॥

ಅನ್ನೆಗಂ ಜಾನಕಿಯ ಕಣ್ಗೆ ತೋರಿತು ಮುಂದೆ ।
ಸನ್ನುತ ರಘೂದ್ವಹನ ಕೀರ್ತಿಯೆನೆ ಮೂವಟ್ಟೆ ।
ಯನ್ನಡೆದು ಮುಕ್ಕಣ್ಣನಂ ಸಾರ್ದು ಮೂಜಗದ ಪಾಪಮಂ ಮುರಿದು ಮುಕ್ಕಿ ॥
ಮುನ್ನೀರು ಮಂತಾಗಿ ಮೂದೇವರೊಳಗಾದ ।
ಮುನ್ನುಳ್ಳ ಮೂವತ್ತು ಮೂಕೋಟಿ ವಿಬುಧರಂ ।
ತನ್ನೊಳ್ ಮುಳುಗಿದರಣಕಿಪ ಪೆಂಪೊಡವಿ ಪರಿವ ಬೆಳ್ಪೊನಲ್ ದಿವಿಜ ನದಿಯು ॥ ೪ ॥

ತೆರತೆರದ ಕಲ್ಲೋಲ ಮಾಲೆಗಳ ಲೀಲೆಗಳ ।
ಬೆರೆಬೆರೆವ ರಾಜಹಂಸಾಳಿಗಳ ಕೇಳಿಗಳ ।
ಪರಿಪರಿಯ ನೀರ್ವನಿಗಳಾಕರದ ಶೀಕರದ ನೊರೆಯ ಬೊಬ್ಬುಳಿಯ ಸುಳಿಯ ॥
ಮೊರೆಮೊರೆದು ಘೂರ್ಮಿಸುವ ಪರಿವುಗಳ ಮುರಿವುಗಳ ।
ತಿರುತಿರುಗಿ ಸುಳಿವ ಜಲಜಂತುಗಳ ಗೊಂತುಗಳ ।
ನೆರೆನೆರೆದು ಮುನಿಜನಂ ಸೇವಿಸುವ ಭಾವಿಸುವ ಗಂಗೆಗವನಿಜೆ ಬಂದಳು ॥ ೫ ॥

ತೆಂಗೆಳಗಪುಂಗು ಪನಸಂ ದ್ರಾಕ್ಷೆ ಜಂಬು ನಾ ।
ರಂಗ ಜಂಬೀರ ಖರ್ಜೂರ ಕಿತ್ತಳೆ ಮಾತು ।
ಳಂಗ ತಿಂತ್ರಿಣಿ ಚೂತ ನೆಲ್ಲಿ ಬಿಲ್ವ ಕಪಿತ್ಥಮೆಂಬ ನಾನಾ ತರುಗಳು ॥
ತೊಂಗುವ ಫಲಾವಳಿಯ ಭಾರಂಗಳಾಪಗಂ ।
ಪಿಂಗವಿಪನಿಳೆಗಿಳುಪಬೇಕೆಂದು ಬಾಗಿದೊಂ ।
ದಂಗಮನೆ ಕಣ್ಗೆಸೆದುವಿಕ್ಕೆಲವೊಳಾ ಜಾಹ್ನವಿಯ ತಡಿಯ ಬನವೆಡೆಯೊಳು ॥೬॥

ಇಳಿದು ರಥದಿಂದೆ ಮಂದಾಕಿನಿಗೆ ಪೊದಮುಟ್ಟು ।
ಬಳಿಕ ನಾವಿಕರೊಡನೆ ನಾವದೊಳ್ ಗಂಗೆಯಂ ।
ಕಳೆದು ನಿರ್ಮಲ ತೀರ್ಥದೊಳ್ ಮಿಂದು ಸೌಮಿತ್ರಿ ಮತ್ತೆ ಭೂಜಾತೆ ಸಹಿತ ॥
ಒಳಗೊಳಗೆ ಮರುಗಿ ಬಿಸುಸುಯ್ದು ಚಿಂತಿಸುತೆ ಮುಂ ।
ದಳೆದುಗ್ರ ಮೃಗಪಕ್ಷಿ ಗಣದಿಂದೆ ಘೂರ್ಮಿಸುವ ।
ಹಳುವಮಂ ಪೊಕ್ಕನಡಿಯಿಡುವೊಡಸದಳಮೆಂಬ ಕರ್ಕಶದ ಮಾರ್ಗದಿಂದೆ ॥ ೭ ॥

ಶಕುನಿ ಚೀತ್ಕಾರ ಘೋಷಣಮಯಂ ತೃಣಮಯಂ ।
ವಿಕಿರದುಪಲಾಳಿ ಕರ್ಕಶಮಯಂ ಶಶಮಯಂ ।
ಪ್ರಕಟ ಕಂಟಕ ಕೀರ್ಣ ತರುಮಯಂ ರುರುಮಯಂ ವಿವಿಧೋಗ್ರಜಂತುಮಯವು ॥
ನಕುಲ ಮೂಷಕ ಸರೀಸೃಪ ಮಯಂ ದ್ವಿಪಮಯಂ ।
ಸಕಲ ಭೂವಿಷಮ ಸಂಕುಲಮಯಂ ಬಿಲಮಯಂ ।
ವೃಕ ಸೂಕರ ವ್ಯಾಘ್ರ ಚಯಮಯಂ ಭಯಮಯಂ ತಾನೆನಿಸಿ ಕಾಡಿರ್ದುದು॥೮॥

ಇರುಳಂತೆ ಪಗಲಂತೆ ಮುಖದಂತೆ ದಿವದಂತೆ ।
ಪರ ಪಯೋನಿಧಿಯಂತೆ ಕೈಲಾಸಗಿರಿಯಂತೆ ।
ನಿರುತಮಂ ಸೋಮಾರ್ಕ ಶಿಖಿ ಸಹಸ್ರಾಕ್ಷ ಹರಿನುತಶಿವಾವಾಸಮಾಗಿ ॥
ದುರದಂತೆ ಕೊಳದಂತೆ ಕಡಲಂತೆ ನಭದಂತೆ ।
ತರ ಪುಂಡರೀಕ ವಿದ್ರುಮ ಋಕ್ಷಮಯದೊಳಿಡಿ ।
ದಿರುತಿರ್ದುದಾ ಮಹಾಟವಿ ಜಾನಕಿಯ ಕಣ್ಗೆ ಘೋರತರಮಾಗಿ ಮುಂದೆ ॥೯॥

ಅಟವಿಯ ಮಹಾಘೋರ ಗಹ್ವರಂ ಮುಂದೆ ದು ।
ರ್ಘಟವಾಗೆ ನಡುನಡುಗಿ ಭೀತಿಯಿಂ ಸೀತೆ ಸಂ ।
ಕಟದಿಂ ರಾಮನಾಮಂಗಳಂ ಜಪಿಸುತೆಲೆ ಸೌಮಿತ್ರಿ ಕಾನನಮಿದು ॥
ಅಟನಕಸದಳಮಪ್ಪುದಿಲ್ಲಿ ಪುಣ್ಯಾಶ್ರಮದ ।
ಜಟಿಗಳಂ ವಲ್ಕಲವನುಟ್ಟ ಮುನಿವದುಗಳಂ ।
ವಟುಗಳಂ ಶ್ರುತಿಘೋಷ ಹೋಮಧೂಮಂಗಳಂ ಕಾಣೆನೆಂದಳವಳಿದಳು ॥೧೦॥

ಎಲ್ಲಿ ಮುನಿಪೋತ್ತಮರ ಪಾವನದ ವನದೆಡೆಗ ।
ಳೆಲ್ಲಿ ಸಿದ್ಧಾಶ್ರಮಂಗಳ ಮಂಗಳಸ್ಥಳಗ ।
ಳೆಲ್ಲಿ ಸುಹವಿಗಳ ಕಂಪೊಗೆದ ಪೊಗೆದಳೆವಗ್ನಿಹೋತ್ರದ ಕುಟೀರಂಗಳು ॥
ಎಲ್ಲಿ ಪರಿಚಿತವಾದ ವಾದ ವೇದ ಧ್ವನಿಗ ।
ಳಲ್ಲಿಗೊಯ್ಯದೆ ದಾರುದಾರುಣದ ಕಟ್ಟಡವಿ ।
ಗಿಲ್ಲಿಗೇಕೈತಂದೆ ತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯ್ದಳು ॥ ೧೧ ॥

ಪಾವನಕೆ ಪಾವನಂ ಮಂಗಳಕೆ ಮಂಗಳಮ ।
ದಾವನಚರಿತ್ರ ನಾಮಂಗಳಾ ರಾಘವನೆ ।
ಜೀವೇಶನಾಗಿರಲ್ಕಾತನಂಘ್ರಿಯ ನಗಲ್ದೀಗ ನಾಂ ಬಂದಬಳಿಕ ॥
ಈವನದೊಳಿನ್ನು ಪುಣ್ಯಾಶ್ರಮಂ ಗೋಚರಿಪು ।
ದೇ ವನಜದರಳನುಳಿದಾಂಡಿಗೆ ಬೊಬ್ಬುಳಿಯ ।
ಪೂನಿನೊಳ್ ಮಧುವುಂಟೆ ಸೌಮಿತ್ರಿ ಹೇಳೆಂದು ಸೀತೆ ಪೊದಕುಳಿಗೊಂಡಳು॥೧೨॥

ನರನಾಥ ಕೇಳವನಿಸುತೆ ನುಡಿದವಾತಿಗು ।
ತ್ತರವನಾಡದೆ ಮನದೊಳುರೆ ನೊಂದು ರಾಘವೇ ।
ಶ್ವರನೆಂದ ಕಷ್ಟಮಂ ಪೇಳ್ದಪೆನೊ ಮೇಣುಸಿರದಿರ್ದಪೆನೊ ನಿಷ್ಠುರದೊಳು ॥
ತರಣಿಕುಲಸಾರ್ವಭೌಮನ ರಾಣಿಯಂ ಬನದೊ ।
ಳಿರಿಸಿ ಪೋದಪೆನೆಂತೊ ಪೋಗದಿರ್ದೊಡೆ ಸಹೋ ।
ದರನದೇನೆಂದಪನೊ ಹಾಯೆಂದು ಲಕ್ಷ್ಮಣಂ ಬೆಂದು ಬೇಗುದಿಗೊಂಡನು ॥೧೩॥

ಉಕ್ಕಿದುವು ಕಂಬನಿಗಳಧರೋಷ್ಠಮದಿರಿತಲ ।
ಗಿಕ್ಕಿ ತಿರುಪಿದವೊಲಾನ್ತೊಡಲೊಳೆಡೆವರಿಯದುಸಿ ।
ರೊಕ್ಕುದುರೆ ಕಂಪಿಸಿದುದವಯವಂ ಕರಗಿತೆರ್ದೆ ಸ್ಥೈರಣೆ ಸಮತೆಗೆಟ್ಟುದು ॥
ಸಿಕ್ಕಿದುವು ಕಂಠದೊಳ್ ಮಾತುಗಳ್ ಸೆರೆಬಿಗಿದು ।
ಮಿಕ್ಕು ಮೀರುವ ಶೋಕದಿಂದೆ ಬೆಂಡಾಗಿ ಕಡು ।
ಗಕ್ಕಸದ ಕೆಲಸಮನುಸಿರಲರಿಯದವನೊಯ್ಯನವನಿಸುತೆಗಿಂತೆಂದನು ॥ ೧೪ ॥

ದೇವಿ ನಿನಗಿನ್ನೆಗಂ ಪೇಳ್ದುದಿಲ್ಲಪವಾದ ।
ಮಾವರಿಸಿ ನಿನ್ನನೊಲ್ಲದೆ ರಘುಕುಲೋದ್ವಹಂ ।
ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿ ಬಾಯೆಂದೆನಗೆ ನೇಮಿಸಿದೊಡೆ ॥
ಆ ವಿಭುವಿನಾಜ್ಞೆಯಂ ಮಿರಲರಿಯದೆ ನಿಮ್ಮ ।
ನೀ ವಿಪಿನಕೊಡಗೊಂಡು ಬಂದೆನಿನ್ನೊಯ್ಯೊಯ್ಯ ॥
ನಾವಲ್ಲಗಾದೊಡಂ ಪೋಗೆಂದು ಲಕ್ಷ್ಮಣಂ ಬಾಷ್ಪಲೋಚನನಾದನು ॥ ೧೫ ॥

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ।
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ ।
ಧರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡುನಡುಗುತೆ ॥
ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ ।
ಮರುಗಿ ಕಣ್ಣೀರ್ದಳೆದು ಪತ್ರದೊಳ್ ಕೊಡೆವಿಡಿದು ।
ಸೆರಗಿಂದೆ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋದಿಸಿದನು ॥ ೧೬ ॥

ಒಯ್ಯನರೆಗಳಿಗೆಯೊಳ್ ಕಣ್ದೆರದು ದೈನ್ಯದಿಂ ।
ಸುಯ್ಯಲರನುರೆ ಸೂಸಿ ಸೌಮಿತ್ರಿಯಂ ನೋಡಿ ।
ಕೊಯ್ಯಲೊಲ್ಲದೆ ಕೊರಳನಿಂತು ತನ್ನಂ ಬಿಡಲ್ ಮಾಡಿದಪರಾಧಮುಂಟೆ ॥
ಕಯ್ಯಾರೆ ಖಡ್ಗಮಂ ಕೊಟ್ಟು ತನ್ನರಸಿಯಂ ।
ಹೊಯ್ಯೆಂದು ಪೇಳದಡವಿಗೆ ಕಳುಹಿ ಬಾಯೆಂದ ॥
ನಯ್ಯಯ್ಯೊ ರಾಘವಂ ಕಾರುಣ್ಯನಿಧಿ ಯೆಂದಳಲ್ದಳಂಭೋಜನೇತ್ರೆ ॥ ೧೭ ॥

ಬಿಟ್ಟನೆ ರಘುಶ್ರೇಷ್ಠನೆನ್ನ ನಕಟಕಟ ತಾ ।
ಮುಟ್ಟನೆ ನೆಗಳ್ದ ಬಾಳ್ಕೆಗೆ ಸಂಚಕಾರಮಂ ।
ಕೊಟ್ಟನೆ ಸುಮಿತ್ರಾತನುಜ ಕಟ್ಟರಣ್ಯದೊಳ್ ಕಳುಹಿ ಬಾಯೆಂದು ನಿನಗೆ ॥
ಕೊಟ್ಟನೆ ನಿರೂಪವಂ ತಾನೆನ್ನ ಕಣ್ಕಟ್ಟೆ ।
ಗೆಟ್ಟನೆ ಮನೋವಲ್ಲಭನನಗಲ್ದಡವಿಯೊಳ್ ।
ನೆಟ್ಟನೆ ಪಿಶಾಚದವೊಲೆಂತಿಹೆನೊ ಕೆಟ್ಟೆನಲ್ಲಾ ಯೆಂದೊರಲ್ದಳಬಲೆ ॥ ೧೮ ॥

ಎಂದು ಕೌಶಿಕಮುನಿಪನೊಡನೆ ಮಿಥಿಲಾಪುರಕೆ ।
ಬಂದು ಹರಧನುವ ಮುರಿದೆನ್ನಂ ಮದುವೆಯಾದ ।
ನಂದುಮೊದಲಾಗಿ ರಮಿಸಿದನೆನ್ನೊಳಾನಗಲ್ದೊಡೆ ತಾಂ ನವೆದನಲ್ಲದೆ ॥
ಒಂದಿದನೆ ಸೌಖ್ಯಮಂ ರಾಮನೆನಗಾಗಿ ಕಪಿ ।
ವೃಂದವಂ ನೆರಪಿ ಕಡಲಂ ಕಟ್ಟಿ ದೈತ್ಯರಂ ।
ಕೊಂದಗ್ನಿಮುಖದೊಳ್ ಪರೀಕ್ಷಿಸಿದ ನೆನ್ನೊಳಪರಾಧಮಂ ಕಾಣಿಸಿದನೇ ॥ ೧೯ ॥

ಕಲ್ಮುಳ್ಳಿಡಿದಕಾಡೊಳಂದೆನ್ನನುಪಚರಿಸಿ ।
ಪಲ್ಮೊರೆದು ಗರ್ಜಿಪ ವಿರಾಧನಂ ಮರ್ದಿಸಿದೆ।
ಬಲ್ಮೆಯಿಂ ನಾಂ ಕಳುಹಿದೊಡೆ ಜನಸ್ಥಾನದಿಂ ಹೋದೆ ರಾಘವನ ಬಳಿಗೆ ॥
ನಲ್ಮೆಯಿಂ ಮರೆದಪನೆ ಸೌಮಿತ್ರಿ ನೀನೆಲ್ಲ।
ರೊಲ್ಮೆಯೈದುನನೆ ತನಗೆ ಕಾನನದೊಳೆನ್ನನಿಲ।
ಸಲ್ಮನಂ ಬಂದಪುದೆ ತಂದೆ ನಿನಗೆಂದು ಕಂಬನಿಮಿಡಿದಳಂಬುಜಾಕ್ಷಿ ॥ ೨೦ ॥

ತೊಳಪ ನಾಸಿಕದ ನುಣ್ಗದಪುಗಳ ಪೊಳೆವ ಕಂ ।
ಗಳ ತುರುಗಿದೆವೆಯ ನಿಡುಪುರ್ಬುಗಳ ಪೆರೆನೊಸಲ ।
ಥಳಥಳಿಪ ಮಕುಟದ ಕಿವಿಯ ಮಕರಕುಂಡಲದ ಕೋಮಲಿತ ಚುಬುಕಾಗ್ರದ ॥
ಲಲಿತಾರುಣಾಧರದ ಮಿರುಗುವ ರದನಪಂಙ್ಕ್ತಿ ।
ಗಳ ಸೂಸುವೆಳೆನಗೆಯ ಮೋಹನದ ಚೆಲ್ವಿನೊ ।
ಬ್ಬುಳಿಯೆನಿಪ ರಾಘವನ ಸಿರಿಮೊಗವನೆಂತು ನೋಡದೆ ಮಾಣ್ಬೆನಕಟೆಂದಳು ॥೨೧॥

ರಾಮನಂ ಭುವನಾಭಿರಾಮನಂ ಗುಣರತ್ನ ।
ಧಾಮನಂ ರಘುಕುಲೋದ್ದಾಮನಂ ರೂಪಜಿತ ।
ಕಾಮನಂ ಸತ್ಕೀರ್ತಿಕಾಮನಂ ಶರಣಜನವಾರ್ಧಿಯಂ ಮಿಗೆ ಪೆರ್ಚಿಪ ॥
ಸೋಮನಂ ಸೌಭಾಗ್ಯಸೋಮನಂ ಕುವಲಯ ।
ಶ್ಯಾಮನಂ ನಿಜತನುಶ್ಯಾಮನಂ ಘನಪುಣ್ಯ ।
ನಾಮನಂ ಸಂತತಂ ನಾ ಮನಂದಣಿಯೆ ರಮಿಸದೆ ಬಾಳ್ವೆನೆಂತೆಂದಳು ॥ ೨೨ ॥

ರಾಯಕೇಳಿಂತಿಂತು ರಾಘವೇಶ್ವರನ ರಮ ।
ಣೀಯ ಗುಣಮಾಲೆಯಂ ನೆನೆನೆನೆದು ಹಂಬಲಿಸು .
ತಾಯತಾಂಬಕಿ ಮತ್ತೆ ಮೈಮರೆಯುತೆಚ್ಚರುತೆ ಪಾವಗಿದ ಪಸುಳೆವೊಲಿರೆ ॥
ತಾಯೆ ನಿನ್ನಂಬಿಟ್ಟು ಪೋಗಲಾರೆಂ ಪೋಗ ।
ದೀಯವಸ್ಥೆಯೊಳಿರ್ದೊಡಣ್ಣ ನೇಗೈದಪನೊ ।
ಹಾಯೆಂದು ಲಕ್ಷ್ಮಣಂ ಶೋಕಗದ್ಗದನಾಗೆ ಸೀತೆ ಮಗುಳಿಂತೆಂದಳು ॥ ೨೩ ॥

ತಂದೆ ಲಕ್ಷ್ಮಣ ನಿನ್ನೊಳೆಂದೊಡಿನ್ನೇನಹುದು ।
ಹಿಂದಣ ಜನಸ್ಥಾನದಂದದೊಳ್ಪೋಗು ನೀಂ ।
ಕೊಂದುಕೊಂಬೊಡೆ ತನ್ನ ಬೆಂದೊಡಲೊಳಿದೆ ಬಸಿರ ದಂದುಗಂ ಕಾನನದೊಳು ॥
ಬಂದುದಂ ಕಾಣ್ಬೆ ನಾನಿಂದು ಕೌಸಲೆಯಡಿಗೆ ।
ವಂದಿಸಿದೆನಪರಾಧವೊಂದುಮಿಲ್ಲದೆ ತನ್ನ ।
ಕಂದನನ್ನಂ ತೊರೆದುದಂ ದೇವಿಗೊರೆವುದೆನುತಂದಳಲ್ದಳ್ ಮೃಗಾಕ್ಷಿ ॥೨೪॥

ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ ।
ಕಾಕುತ್ಥ್ಸನಿಲ್ಲಿ ತಳುಪಿದೊಡೆ ನೆರವುಂಟು ತನ ।
ಗೀಕಾಡೊಳುಗ್ರಜಂತುಗಳಲ್ಲ ರಘುನಾಥನೇಕಾಕಿಯಾಗಿರ್ಪನು ॥
ಲೋಕಪರಸೇಗೈದೊಡಂ ತನ್ನ ಕಿಂಕರರ್ ।
ಬೇಕುಬೇಡೆಂದು ಪೇಳರೆ ಭರತ ಶತ್ರುಘ್ನ ।
ರೀಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ ॥ ೨೫ ॥

ಅರಿದೋರ್ಡೇಗೈವರಿದು ತನ್ನ ಮರುಳಾಟ ।
ಮಾ ರಾವಣನ ತಮ್ಮನೈಸಲೆ ವಿಭೀಷಣಂ ।
ಭೀರುಗಳನರಿದಪನೆ ಸೋದರರಾಗುರೆ ಮುಳಿದ ಸುಗ್ರೀವನೆಂಬವಂಗೆ ॥
ಕಾರುಣ್ಯಮಿರ್ದಪುದೆ ಮತ್ತುಳಿದ ಮಂತ್ರಿಗಳ ।
ದಾರುಂಟು ಪೇಳುವರ್ ದೇವಂಗೆ ನೀನೊಪ್ಪಿ ।
ಘೋರಾಟವಿಗೆ ಕೊಂಡುಬಂದೆ ಕಳಪುವೊಡಿನ್ನೊರಲ್ದೊಡೇನಹುದೆಂದಳು ॥೨೬॥

ಕಡೆಗೆ ಕರುಣಾಳು ರಾಘವನಲ್ಲ ತಪ್ಪಿಲ್ಲ ।
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ ।
ದೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲರಲ್ಬೇಡ ನೀನು ॥
ನಡೆ ಪೋಗು ನಿಲ್ಲದಿರ್ ನಿನಗೆ ಮಾರ್ಗದೊಳಾಗ ।
ಲಡಿಗಡಿಗೆ ಸುಖಮೆಂದು ಸೀತೆ ಕಂಬನಿಗಳಂ ।
ಮಿಡಿದಾರ್ತೆಯಾಗಿರಲ್ ಸೌಮಿತ್ರಿ ನುಡಿದನಾ ವಿಪಿನದಭಿಮಾನಿಗಳ್ಗೆ ॥೨೭॥

ಎಲೆ ವನಸ್ಥಳಗಳಿರ ವೃಕ್ಷಂಗಳಿರ ಮೃಗಂ ।
ಗಳಿರ ಕ್ರಿಮಿಕೀಟಂಗಳಿರ ಪಕ್ಷಿಗಳಿರ ಲತೆ ।
ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳಿರ ದೆಸೆಗಳಿರ ಕಾವುದು ॥
ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ ।
ಸಲಹಿಕೊಳ್ವುದು ತನ್ನ ಮಾತೆಯಂ ಜಾನಕಿಯ ।
ನೆಲೆತಾಯೆ ಭೂದೇವಿ ನಿನ್ನ ಮಗಳಿಹಳೆಂದು ಸೌಮಿತ್ರಿ ಕೈಮುಗಿದನು ॥೨೮॥

ಮಾಳ್ಕೆಯಿನ್ನಾವುದಿಬ್ಬಗಿಯಾಗಿ ತನ್ನೊಡಲ ।
ಸೀಳ್ಕೆಡಹಬೇಡವೆ ಧರಿತ್ರಿಯೊಳ್ ನಿಷ್ಠುರದ ।
ದಾಳ್ಕೆಯಂ ಸುಡಲೆನುತೆ ದೇವಿಯಂ ಒಲವಂದು ಲಕ್ಷ್ಮಣಂ ನಮಿಸಿ ಬಳಿಕ ॥
ಬೀಳ್ಕೊಂಡು ನಡೆಯಲ್ಕೆ ಹಿಂದುಹಿಂದಕೆ ಮನಂ ।
ನೀಳ್ಕುಳಿಗೊಳಲ್ಕೆಂದುಮಗಲದಣ್ಣನ ಕಡೆಗೆ ।
ದೂಳ್ಕಾಯದೊಳ್ ಪತ್ತಿ ಪೊರಳ್ವ ಸೀತೆಯ ಕಡೆಗೆ ತೂಗುಯ್ಯಾಲೆವೋಲಾದನು॥೨೯॥

ನಡೆಗೊಳಲ್ ಕಂಡು ಬಾಯಾರ್ವರ್ಗಳಂ ಚೀರ್ವರ್ಗಳಂ॥
ಕಡಲಿಡುವ ಕಂಬನಿಯೊಳಾಳ್ವಳಂ ಬೀಳ್ವಳಂ ।
ಪುಡಿಯೊಳ್ ಪೊರಳ್ದು ಬಸವಳಿವಳಂ ಸುಳಿವಳಂ ಭರತಾವರಜನಗಲ್ದು ॥
ಅಡಿಗಡಿಗೆ ತಿರುತಿರುಗಿ ನೋಡುವಂ ಬಾಡುವಂ ।
ಬಿಡದೆ ಬಿಸುಸುಯ್ದು ಬೆಂಡಾದಪಂ ಪೋದಪಂ।
ಪೊಡೆಮರ್ಳ್ವಂ ನಿಲ್ವನಳಲುವಂ ಬಳಲುವಂ ಬಟ್ಟೆಯೊಳ್ ದಿಟ್ಟಿಗೆಟ್ಟು ॥೨೦॥

ತಾಯುನೆಳೆಗರು ಬಿಟ್ಟುವಂತೊಯ್ಯನೊಯ್ಯನ ।
ತ್ಯಾಯಾಸದಿಂದಗಲ್ದಮರನದಿಯಂ ದಾಂಟಿ ।
ರಾಮಕೇಳ್ ದುಃಖಾರ್ತನಾಗಿ ಸೌಮಿತ್ರಿ ಸಾಗಿದನತ್ತಲಿವಳಿತ್ತಲು ॥
ಬಾಯಾರಿ ಕಂಗೆಟ್ಟು ಲಕ್ಷ್ಮಣನ ತಲೆ ಮರಸ ।
ಲಾಯೆಂದೊರಲ್ದು ಭಯಶೋಕದಿಂದಸವಳಿದು ।
ಕಾಯಮಂ ಮರೆದವನಿಗೊರಗಿದಳ್ ಬೇರ್ಗೆಯ್ದುಬಿಸುಟೆಳೆಯ ಬಳ್ಳಿಯಂತೆ ॥೨೧॥

ಅರಸ ಕೇಳಲ್ಲಿರ್ದ ಪಕ್ಷಿ ಮೃಗ ಜಂತುಗಳ್ ।
ಧರಣಿಸುತೆಯಂ ಬಳಸಿ ನಿಂದು ಮೈಯುಡಗಿ ಜೋ ।
ಲ್ದಿರದೆ ಕಂಬನಿಗರೆದು ನಿಜವೈರವಂ ಮರೆದು ಪುಲ್ಮೇವುಗಳನೆ ತೊರೆದು ॥
ಕೊರಗುತಿರ್ದುವು ಕೂಡೆ ವೃಕ್ಷಲತೆಗಳ್ ಬಾಡಿ ।
ಸೊರಗುತಿರ್ದುವು ಶೋಕಭಾರದಿಂ ಕಲ್ಗಳುಂ ।
ಕರಗುತಿರ್ದುವು ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ ॥೨೨॥

ಮೊರೆಯಲೊಲ್ಲವು ತುಂಬಿ ಕುಣಿಯಲೊಲ್ಲವು ನವಿಲ್ ।
ಬೆರೆಯಲೊಲ್ಲವು ಕೋಕಿ ನಡೆಯಲೊಲ್ಲವು ಹಂಸೆ ।
ಕರೆಯಲೊಲ್ಲವು ಪಿಕಂ ನುಡಿಯಲೊಲ್ಲವು ಶುಕಂ ನಲಿಯಲೊಲ್ಲವು ಚಕೋರಿ ॥
ನೆರೆಯಲೊಲ್ಲವು ಹರಿಣಿಯೊರೆಯಲೊಲ್ಲವು ಕರಿಣಿ ।
ಪೊರೆಯಲೊಲ್ಲವು ಚಮರಿ ಮೊರೆಯಲೊಲ್ಲವು ಸಿಂಗ ।
ಮರರೆ ಜಾನಕಿಯ ಶೋಕಂ ತಮ್ಮದೆಂದಾಕೆಯಂಗಮಂ ನೋಡಿನೋಡಿ ॥೨೩॥

ಬೀಸಿದುವು ಬಾಲದೊಳ್ ಚಮರಿಗಳ್ ಚಮರಮಂ ।
ಪಾಸಿದುವು ಕರಿಗಳೆಳೆದಳಿರ ಮೃದುತಲ್ಪಮಂ ।
ಸೂಸಿದುವು ಸಾರಸಂಗಳ್ ತಮ್ಮ ಗರಿಗಳಂ ತೋದು ತಂದಂಬುಗಳನು ॥
ಆ ಸಿರಿಮೊಗಕ್ಕೆ ಬಿಸಿಲಾಗದಂತಾಗಸದೊ ।
ಳೋಸರಿಸದಂಚೆಗಳೆರಂಕೆಯುನಗಲ್ಚಿನೆಳ ।
ಲಾಸೆಗೈದುವು ರಾಘವನ ರಾಣಿ ದುಃಖಸಂತಪ್ತೆಯಾಗಿರುತಿರಲ್ಕೆ ॥೨೪॥

ಸುರನದಿಯ ತೆರೆತೆರೆಯ ನಡುನಡುವೆ ಬಿದ್ದೆದ್ದು ।
ಬರಲಾರದಿದಿರ್ದೊಡಂ ಮತ್ತೆ ಗಂಗೆಯೊಳಲ ।
ರ್ದರವಿಂದಗಂಧದತಿ ಭಾರವಂ ಪೊರಲಾರದಿದಿರ್ದೊಡಂ ಧರಣಿಸುತೆಯ ॥
ಪರಿತಾಪಮಂ ತವಿಸದಿರದಾರದೆಂದು ತರ ।
ಹರದೊಳೊಯ್ಯೊಯ್ಯನೈತಂದು ಬೀಸಿತು ಸುಖ ।
ಸ್ಪರುಶವಾತಂ ಜಗದೊಳುಪಕಾರಿಯಾದವಂ ತನ್ನ ನೋವಂ ನೋಳ್ಪನೆ ॥೩೫॥

ಪೃಥಿವಿಯಾತ್ಮಜೆ ಬಳಿಕ ಚೇತರಿಸಿ ತನಗಿನ್ನು ।
ಪಥಮಾವುದೆಂದು ದೆಸೆದೆಸೆಗಳಂ ನೋಡಿ ಸಲೆ ।
ಶಿಥಿಲಮಾದವಯುವದ ಧೂಳಿಡಿದ ಮೈಯ್ಯ ಬಿಡುಮುಡಿಯ ವಿಕೃತಿಯನೆಣಿಸದೆ ॥
ಮಿಥಿಲೇಂದ್ರವಂಶದೊಳ್ ಜನಿಸಿ ರಘುಕುಲದ ದಶ ।
ರಥನೃಪನ ಸೊಸೆಯಾಗಿ ತನಗೆ ಕಟ್ಟಡವಿಯೊಳ್ ।
ವ್ಯಥಿಸುವಂತಾಯ್ತುಕಟ ವಿಧಿಯೆಂದು ಹಲುಬಿದಳ್ ಕಲ್ಮರಂ ಕರಗುವಂತೆ ॥೩೬॥

ಕೇಣಮಂ ಬಿಡದಾತ್ಮಘಾತಕದೊಳೀ ಕ್ಷಣಂ ।
ಪ್ರಾಣಮಂ ತೊರೆದಪೆನೆ ಬಂದಪುದು ಗರ್ಭದಿಂ ।
ಭ್ರೂಣಹತ್ಯಾದೋಷಮೇಗೈವೆನಾಗೋರೆವೆನೆಂದೊಯ್ಯನೆದ್ದು ಬಳಿಕ ॥
ಏಣಾಕ್ಷಿ ನಡೆದಳಡವಿಯೊಳುಪಲ ಕಂಟಕ ।
ಶ್ರೇಣಿಗಳ್ ಸೊಂಕಿ ಮೆಲ್ಲಡಿಗಳಿಂ ಒಸಿವ ನವ ।
ಶೋಣಿತಂ ನೆಲದೊಳ್ ಪೊನಲ್ವರಿಯಲರನ ಕೇಳ್ ಪೆಣ್ಬೊಡಲ್ವಿಡಿಯಬಹುದೆ ॥

ಅನ್ನೆಗಂ ಮಖಕೆ ಯೂಪವನರಸುತಾ ಬನಕೆ ।
ಸನ್ನುತ ತಪೋಧನಂ ವಾಲ್ಮೀಕಿ ಮುನಿವರಂ ।
ತನ್ನ ಶಿಷ್ಯರ್ವೆರಸಿ ನಡೆತಂದು ಕಾಡೊಳೊರ್ವಳೆ ಪುಗಲ್ದೆಸೆಗಾಣದೆ ॥
ಬನ್ನದಿಂ ಬಗೆಗೆಟ್ಟು ಪಾಡಳಿದು ಗ್ರೀಷ್ಮ ಋತು ।
ವಿನ್ನವೆದ ಕಾಂತಾರದಧಿದೇವಿ ತಾನೆನಲ್ ।
ಸನ್ನಗದ್ಗದಕಂಠಿಯಾಗಿ ರೋದಿಸುತಿರ್ದ ವೈದೇಹಿಯಂ ಕಂಡನು ॥೩೮॥

ಆರಿವಳಿದೇತಕಿರ್ದಪಳೀ ವನಾಂತರದೊ ।
ಳಾರೈವೆನಿದನೆಂದು ನಡೆತಂದು ಕರುಣದಿಂ ।
ದಾರುಷಿ ನುಡಿಸಿದನೆಲೆ ತಾಯೆ ನೀನಾವಳೌ ಕಂಡ ಕುರುಪಾಗಿರ್ಪುದು ॥
ಘೋರತರ ಗಹನಕೊರ್ವಳೆ ಬಂದೆಯೆಂತಕಟ ।
ಭೀರು ಹೇಳಾ ಹೆದರಬೇಡ ವಾಲ್ಮೀಕಿ ನಾಂ ।
ಭೂರಿಶೋಕಾರ್ತರಾಗಿರ್ದರಂ ಕಂಡು ಸುಮ್ಮನೆ ಪೋಪನಲ್ಲೆಂದನು ॥೩೯॥

ಹರುಷವೊತ್ತರಿಸಿದುದು ಶೋಕವಿಮ್ಮಡಿಸಿದುದು ।
ಬೆರಸಿದುದು ಲಜ್ಜೆ ಭೂಮಿಜೆಗಂದು ಗದ್ಗದ ।
ಸ್ವರದಿಂದೆ ಸೀತೆ ತಾಂ ಲೋಕಾಪವಾದಕಪರಾಧಿಯಲ್ಲದ ತನ್ನನು ॥
ತರಣಿಕುಲಸಂಭವಂ ಬಿಟ್ಟನೆಂದೀವನದೊ ।
ಳರಸಿ ಪೋದಂ ಸುಮಿತ್ರಾತ್ಮಜಂ ಜೀವಮಂ ।
ಪೊರೆಯುವೇಳ್ಪುದೆ ಗರ್ಭವೊಡಲೊಳಿಹುದೇಗೈವೆನೆಂದೆರಗಿದಳ್ ಮುನಿಪದದೊಳು

ದೇವಿ ಬಿಡು ಶೋಕಮಂ ಪುತ್ರಯುಗಮಂ ಪಡೆವೆ ।
ಭಾವಿಸದಿರಿನ್ನು ಸಂದೇಹಮಂ ಜನಕಂಗೆ ।
ನಾವನ್ಯರಲ್ಲ ನಮ್ಮಾಶ್ರಮಕೆ ಬಂದು ನೀಂ ಸುಖದೊಳಿರ್ದೊಡೆ ನಿನ್ನನು ॥
ಆವಾವ ಬಯಕೆಯುಂಟೆಲ್ಲಮಂ ಸಲಿಸಿ ತಾ ।
ನೋವಿಕೊಂಡಿರ್ಪೆನಂಜದಿರೆಂದು ಸಂತೈಸಿ ।
ರಾವಣಾರಿಯ ರಾಣಿಯಂ ನಿಜತಪೋವನಕೆ ವಾಲ್ಮೀಕಿ ಕರೆತಂದನು ॥೪೧॥

ಚಿತ್ರಮಯವಾಗಿ ಕಟ್ಟಿತು ಪರ್ಣಶಾಲೆ ಶತ ।
ಪತ್ರಲೋಚನೆಗೆ ಬಳಿಕಲ್ಲಿ ಋಷಿಪತ್ನಿಯರ ।
ಮಿತ್ರತ್ವಮಂ ತಳೆದು ವಾಲ್ಮೀಕಿಮುನಿಪನಾರೈಕೆಯಿಂ ಸೀತೆ ತನ್ನ ॥
ಪುತ್ರೋದಯದ ಕಾಲಮಂ ನೋಡುತಿರ್ದಳ್ ಧ ।
ರಿತ್ರಿಯೊಳ್ ದೃಢಪತಿವ್ರತೆಯರ್ಗೆ ನಿರ್ಮಲ ಚ ।
ರಿತ್ರಮೆಂತಾದೊಡಂ ವಿಪರೀತವಾದಪುದೆ ಭೂಪಾಲ ಕೇಳೆಂದನು ॥೪೨॥

ಜಾತಿವೈರಂಗಳಿಲ್ಲದ ಪಕ್ಷಿಮೃಗದ ಸಂ ।
ಘಾತದಿಂ ಋತುಭೇದಮಿಲ್ಲದ ಲತಾದ್ರುಮ ।
ವ್ರಾತದಿಂ ಪಗಲಿರುಳು ಶಂಕೆಯಿಲ್ಲದ ಪೂಗೊಳಂಗಳ ವಿಕಾಸದಿಂದೆ ॥
ಶೀತೋಷ್ಣದಾಸರಿಲ್ಲದ ಸುಸ್ಥಳಂಗಳಿಂ ॥
ಪ್ರೀತಿವಿರಹಿತ ದುಃಖಸುಖದ ಜಂಜಡಮಿಲ್ಲ ।
ದಾ ತಪೋವನದೊಳಗೆ ಋಷಿವಧುಗಳೊಡನೆ ವೈದೇಹಿ ಪದುಳದೊಳಿರ್ದಳು ॥೪೩॥

ಮುನಿವಟುಗಳೆಡೆಯಾಡಿ ಪರಿಚರ್ಯೆಯಂ ಮಾಳ್ಪ ।
ರಿನಿದಾದವಸ್ತುವಂ ಋಷಿವಧುಗಳಿತ್ತಪರ್ ।
ತನತನಗೆ ಸತ್ಕರಿಸುವರ್ ತಾಪಸೋತ್ತಮರ್ ವಾಲ್ಮೀಕಿ ಸಾದರದೊಳು ॥
ದಿನದಿನಕೆ ಬೇಕಾದ ಬಯಕೆಯಂ ಸಲಿಸುವಂ ।
ಬನದೊಳಿಂತಿರುತಿರ್ದಳವನಿಸುತೆ ರಾಘವೇಂ ।
ದ್ರನ ಚರಣಕಮಲಮಂ ಧ್ಯಾನಿಸುತೆ ಮರೆದಖಿಲ ರಾಜವಿಭವ ಶ್ರೀಯನು ॥೪೪॥

ಅವನಿಜೆಯ ಗರ್ಭಕ್ಕೆ ತುಂಬಿದುದು ನವಮಾಸ।
ದವಧಿ ಬಳಿಕೊಂದಿರುಳ ಶುಭಲಗ್ನದೊಳ್ ಪಡೆದ।
ಳವಳಿಮಕ್ಕಳನುಪಚರಿಸೆ ವಿದಗ್ಧಾಂಗನೆಯರಾ ಸೂತಿಕಾಗೃಹದೊಳು॥
ತವಕದಿಂದೈತಂದು ಮುನಿವಟುಗಳುಸಿರಲು।
ತ್ಸವದಿಂದೆ ವಾಲ್ಮೀಕಿಮುನಿ ಬಂದು ನೋಡಿ ಕುಶ।
ಲವದಿಂದೆ ಸೇಚನಂಗೈದು ಕುಶಲವರೆಂದು ಪೆಸರಿಟ್ಟನರ್ಭಕರ್ಗೆ ॥೪೫॥

ದೆಸೆಗಳ್ ಪ್ರಸನ್ನತೆಯೊಳೆಸೆದ ವಾಗಸದೊಳುಡು।
ವಿಸರಂಗಳೊಪ್ಪಿದುವು ಪೊಸಗಂಪಿಡಿದು ಗಾಳಿ।
ಪಸರಿಸಿತು ತವೆ ಸುಪ್ರದಕ್ಷಿಣದೊಳುರಿದುವಗ್ನಿ ಜ್ವಾಲೆ ಕಡಲುಕ್ಕಿತು॥
ವಸುಧೆ ನಲಿದುದು ತಿಳಿದು ಪರಿದುವು ನದಿಗಳಂದು।
ಶಶಿರವಿಗಳುದಯಿಸಿದರೇಕಕಾಲದೊಳೆನಲ್।
ಶಿಶುಗಳಾಶ್ರಮದ ಮುನಿಗಳ ಕಣ್ಗೆ ಕಾಣಿಸಿದರೊಸಗೆ ಮೂಜಗಕಾದುದು ॥೪೬॥

ಬಾಲದೊಡಿಗೆಗಳೆಲ್ಲಮಂ ತುಡಿಸಿ ನೋಡುವಂ।
ಬಾಲಲೀಲೆಗಳನಾಡಿಸಿ ಮುದ್ದುಮಾಡುವಂ।
ಬಾಲಕರ್ಗಿನಿದಾದ ವಸ್ತುವಂ ಕೊಡುವಂ ತನ್ನ ತೊಡೆಮಡಿಲೊಳಿಟ್ಟು॥
ಲಾಲಿಸುವನಾವಗಂ ಜಪ ಸಮಾಧಿ ತಪಗಳ।
ಕಾಲಮಂ ಬಗೆಯದೆ ಮುನೀಶ್ವರಂ ಕುಶಲವರ।
ಮೇಲಣಕ್ಕರೊಳಿರ್ದನಾಶ್ರಮದೊಳುತ್ಸವಂ ಪೆರ್ಚಿದುದು ದಿನದಿನದೊಳು ॥೪೭॥

ದಶರಥ ನೃಪಾಲ ಸುತರಮನೆಯ ಬೆಳವಿಗೆಯು।
ಶಿಶುಗಳ್ಗೆ ಕಾಂತಾರವಾಸದೊಳ್ ನವೆವ ಕ।
ರ್ಕಶಮಿದೆತ್ತಣದೆಂದು ಮಿಥಿಲೇಂದ್ರ ಸಂಭೂತೆ ಚಿತ್ತದೊಳ್ ಮರುಗದಂತೆ॥
ವಿಶದಮಾನಸನಾಗಿ ವಾಲ್ಮೀಕಿಮುನಿವರಂ।
ಕುಶಲವರನೋವಿದಂ ವಿವಿಧವೈಭವದಿಂದೆ।
ಶಶಧರನ ಕಳೆಯು ತೆರದೊಳಾರಾಘವಾತ್ಮಜರ್ ದಿನದಿನಕೆ ವರ್ಧಿಸಿದರು ॥೪೮॥

ಚೆಲ್ವೆರಡುರೂಪಾಯ್ತೊ ವಿಮಲತೆ ಕವಲ್ತುದೋ।
ಗೆಲ್ವದೆಸೆ ಗೆಳೆಗೊಂಡದರ್ಪಭುದೊ ಕೀರ್ತಿಯ ಮ।
ಡಲ್ವಸುಧೆಯೊಳ್ ದ್ವಿಧಾಕೃತಿಯಾಯ್ತೊ ಸಂತಸದ ಬೆಳಸಿನ ಬೆಳೆದ ಪಸುಗೆಯೊ॥
ಸಲ್ವಕುಲದೇಳ್ಗೆಯ ಸಸಿಸು ಕೋಡೊ ಮೋಹನದ।
ಬಲ್ವೊನಲ ಸವಡಿಯೋ ಸೊಗಸಿನವಳಿಯ ಫಲವೊ। ॥೪೯॥
ಸೊಲ್ವೊಡಿದು ಪೊಸತೆನಲ್ ಕುಶಲವರ್ ಕುಶಲದಿಂ ಕಣ್ಗೆಸೆವರಾಶ್ರಮದೊಳು

ತೊಟ್ಟಿಲೊಳ್ ನಲಿವ ನೆವಮಿಲ್ಲದೆ ನಗುವ ಬಾಯ್ಗೆ ।
ಜೆಟ್ಟಿಕ್ಕಿ ಪೀರ್ವ ಪಸಿದೊಡೆ ಚೀರ್ವ ಮೊಲೆಯುಂಬ ।
ಪಟ್ಟಿರಿಸೆ ಪೊರಳ್ವಂದೆಗಾಲಿಡುವ ಮೊಳೆವಲ್ಲ ಜೊಲ್ಲುಗೆ ತೊದಳಿಸಿ ನುಡಿವ ॥
ದಟ್ಟಡಿಯಿಡುವ ನಿಲ್ವ ತೊಡರ್ವ ಬೇಡುವ ಪರಿವ ।
ಬಟ್ಟೆಯೊಳೊರಗುವ ಕಾಡುವ ಕುಣಿವ ಲೀಲೆಯಂ ।
ನೆಟ್ಟನೆ ಕುಮಾರಕರ್ ತೋರಿದರ್ ಜಾನಕಿಗೆ ವಾಲ್ಮೀಕಿಮುನಿವರಂಗೆ ॥೫೦॥

ಬಿಡದೆ ಪಾಲ್ಪೀರ್ವುದಂ ಕಳಿಯಲೋಂಗೆ ಮಕ್ಕ ।
ಳೊಡನೆ ಧೂಳಾಟ ಮೊದಲಾದ ಲೀಲೆಗಳ ಪರಿ ।
ವಿಡಿಯಿಂದೆಸೆವ ಕುಮಾರರ್ಗೆ ಮುನಿಪತಿ ಚೌಲಕರ್ಮಂಗಳಂ ಮಾಡಿಸಿ ॥
ತೊಡಗಿಸಿದನಕ್ಷರಾಭ್ಯಾಸಮಂ ಬಳಿಕ ನಡೆ ।
ನುಡಿಯ ಜಾಣ್ಮೆಯ ಕಲೆಯ ರಾಜಲಕ್ಷಣದ ಚೆ ।
ಲ್ವಿಡಿದ ಲಲಿತಾಂಗದಿಂ ಕುಶಲವರ್ ಕುಶಲ ವರ್ಧನರಾಗಿ ರಂಜಿಸಿದರು ॥೫೧॥

ಶ್ರೀಮಾಧವನ ಮನೋಹರದ ಸೌಂದರ್ಯಮಂ ।
ಕಾಮನ ಜನಕನ ಕಮನೀಯ ಲಾವಣ್ಯಮಂ ।
ರಾಮಚಂದ್ರನ ರಾಮಣೀಯಕದ ರೂಪಮಂ ತಾಳ್ದೊಗೆದ ಸುಕುಮಾರರ ॥
ಕೋಮಲಾಂಗದ ಸೊಬಗನಭಿವರ್ಣಿಸುವರುಂಟೆ ।
ಭೂಮಿಯೊಳ್ ಚೆಲ್ವಿಗೆ ವಸಂತನಂ ಮದನನಂ ।
ಸೋಮನಂ ಪಡಿಯಿಡಲ್ ಪುನರುಕ್ತಮಪ್ಪುದೆನೆ ಕುಶಲವರ್ ಕಣ್ಗೆಸೆದರು ॥೫೨॥

ದ್ವಾದಶಾಬ್ದದ ಮೇಲೆ ಮುನಿಪಂ ಕುಮಾರರ್ಗೆ ।
ವೇದೋಕ್ತದಿಂದಮುಪನಯನಂಗಳಂ ಮಾಡಿ ।
ಭೂದೇವನಿಕರಕೆ ವಸಿಷ್ಠನೊಳ್ ವರಕಾಮಧೇನುವಂ ಬೇಡಿ ತಂದು ॥
ಆದರಿಸೆ ಭೋಜನ ಸುಗಂಧಾಕ್ಷತೆಗಳಿಂದ ।
ಮಾದುದತಿವಿಭವದಿಂದುತ್ಸವಂ ಬಳಿಕ ತರು ।
ಣಾದಿತ್ಯಸನ್ನಿಭರ್ ತೊಳಗಿದರ್ ಜಾನಕಿಯ ಚಿತ್ತಕಾನಂದಮಾಗೆ ॥೫೩॥

ಸರ್ವಕರ್ಮದ ವಿಧಿಯನಖಿಳ ನಿಗಮದ ಕಡೆಯ ।
ನುರ್ವ ಶಾಸ್ತ್ರದ ಬಗೆಯನುದಿತಧರ್ಮದ ನೆಲೆಯ ।
ನುರ್ವೀಶ ನೀತಿಗಳ ನಿಶ್ಚಯುವನೈದೆ ಸಾಂಗೋಪಾಂಗವಾಗಿ ಬರಿಸಿ ॥
ತರ್ವಾಯೊಳಾ ಕುಮಾರರ್ಗೆ ಮುನಿನಾಥಂ ಧ ।
ನುರ್ವೇದಮಂ ಶಿಕ್ಷೆಗೈದು ರಾಮಾಯಣವ ।
ನಿರ್ವರುಂ ಪಾಡುವಂತೋದಿಸಿದನತಿಮಧುರಭಾವದಿಂ ತುದಿ ಮೊದಲ್ಗೆ ॥೫೪॥

ಸೀತೆ ನಲಿವಂತೆ ವಾಲ್ಮೀಕಿ ಮೆಚ್ಚುವ ತೆರದೊ।
ಳಾತಪೋವನದ ಮುನಿಗಣಮೈದೆ ಕೊಂಡಾಡ।
ಲಾ ತರುಣರೀರ್ವರುಂ ಮಧುರವೀಣೆಗಳ ಮೇಳಾಪದಾಲಾಪಂಗಳ॥
ಗೀತದೊಳ್ ಸಂಕೀರ್ಣ ಶುದ್ಧ ಸಾಳಗದಿಂ ರ।
ಸಾತಿಶಯಮನೆ ಪಾಡುವರ್ ದೇವನಗರೀ ನಿ।
ಕೇತನ ಶ್ರೀಪತಿಯ ಚಾರಿತ್ರಮಪ್ಪ ರಾಮಾಯಣವನನುದಿನದೊಳು ॥೫೫॥

ಇಪ್ಪತ್ತನೆಯ ಸಂಧಿ

ಸೂಚನೆ ॥ ರಘುವರನ ತುರಗಮೇಧಾಧ್ವರದ ಕುದುರೆಯನ ।
ಲಘು ಪರಾಕ್ರಮಿ ಲವಂ ತರಳತನದಿಂ ಕಟ್ಟಿ ।
ಲಘುಟಿತಮೆನಿಸಿತು ಶತ್ರುಘ್ನಲಕ್ಷ್ಮಣರ ತಳತಂತ್ರಕ್ಕೆ ಬಡಿಸಿ ಕೊಳಲು ॥

ಹಿಮಕರಕುಲೇಂದ್ರ ಕೇಳ್ ವಾಲ್ಮೀಕಿ ಮುನಿಪನಾ ।
ಶ್ರಮದೊಳ್ ಸಮಸ್ತಕಲೆಗಳನರಿದು ಕಾಕ ಪ ।
ಕ್ಷಮನಾಂತು ಜಾನಕಿಯ ಶುಶ್ರೂಷೆಯೊಳ್ ಸಂದು ಋಷಿಯ ಚಿತ್ತಕ್ಕೆ ಬಂದು ॥
ಯಮಳರಿರೆ ಕಂಡು ಸಂಪ್ರೀತಿಯಿಂ ತಾಪಸೋ ।
ತ್ತಮನಿತ್ತನಿಷು ಚಾಪ ಚರ್ಮ ಖಡ್ಗಂಗಳಂ ।
ರಮಣೀಯ ಕವಚ ಕುಂಡಲ ಕಿರೀಟಂಗಳಂ ತನ್ನಯ ತಪೋಬಲದೊಳು ॥೧॥

ಅವರ್ಗಳಂತಿರಲಯೋಧ್ಯಾಪುರದೊಳಿತ್ತ ರಾ ।
ಘವನಖಿಳ ಧರಣಿಯಂ ಪಾಲಿಸುತ ಸೌಖ್ಯಾನು ।
ಭವದೊಳೊಂದಿಸದೆ ರಾವಣವಧೆಯೊಳಂದು ಬಂದಾ ಬ್ರಹ್ಮಹತಿ ತನ್ನನು ॥
ಅವಗಡಿಸಲದಕೆ ನಿಷ್ಕೃತಿ ಯಾವುದೆಂದು ಸಾ ।
ರುವ ನಿಗಮದರ್ಥಮಂ ತಿಳಿದು ಹಯಮೇಧಮಂ ।
ತವೆ ನೆಗಳ್ಚುವನಾಗಿ ನಿಶ್ಚೈಸಿ ಕರೆಸಿದಂ ವರವಸಿಷ್ಠಾದಿಗಳನು ॥೨॥

ವಾಮದೇವಾತ್ರಿ ಗಾಲವ ಗುರು ವಸಿಷ್ಠ ವಿ ।
ಶ್ವಾಮಿತ್ರರಂ ಕರೆಸಿ ಹಯಮೇಧಲಕ್ಷಣವ ।
ನಾ ಮುನಿಗಳಂ ಕೇಳ್ದನುಜ್ಞೆಗೊಳಲವರಿದಕೆ ನಿಜಪತ್ನಿವೇಳ್ಪುದೆನಲು ॥
ಹೇಮ ನಿರ್ಮಿತವಾದ ಜಾನಕಿಯನಿರಿಸಿಕೊಂ ।
ಡೀ ಮಹಾಯಜ್ಞಮಂ ನಡೆಸುವೆಂ ತಾನೆಂದು ।
ರಾಮಚಂದ್ರಂ ನಿಖಿಳಋಷಿಗಳನೊಡಂಬಡಿಸಿ ಶಾಲೆಯಂ ಮಾಡಿಸಿದನು ॥೩॥

ಬಳಿಕ ವೇದೋಕ್ತ ಪ್ರಕಾರದಿಂ ದೀಕ್ಷೆಯಂ ।
ತಳೆದು ರಘುನಾಥಂ ತುರಂಗಮಂ ಪೂಜೆಗೈ ।
ದಿಳೆಯೊಳ್ ಚರಿಸಲದರ ಪಣೆಗೆ ತನ್ನಗ್ಗಳಿಕೆಯಂ ಬರೆದ ಪತ್ರಿಕೆಯನು ॥
ಅಳವಡಿಸಿ ಕೂಡೆ ಮೂರಕ್ಷೌಹಿಣೀಮೂಲ ।
ಬಲಸಹಿತ ವೀರಶತ್ರುಘ್ನನಂ ಕಾವಲ್ಗೆ ।
ಕಳುಹಿಬಿಡಲಾ ಹಯಂ ತಿರುಗುತಿರ್ದುದು ಧರೆಯಮೇಲಖಿಳ ದೆಸೆದೆಸೆಯೊಳು ॥೪॥

ಬಲ್ಗಯ್ಯ ನೃಪರಂಜಿ ತಡೆಯದೆ ರಘೂದ್ವಹನ।
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ।
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು॥
ಪುಲ್ಗಳ ಪಸುರ್ಗಳಸಿ ಪೊಕ್ಕೊಡಾ ತೋಟಗಾ।
ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆ ಮಿಗೆ।
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರ ಲವನು ॥೫॥

ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ।
ಕೊತ್ತಳಮಳಿದುದು ವಾಲ್ಮೀಕಿಮುನಿನಾಥ ನೇ।
ಪೊತ್ತು ಮಾರ್ನೈವುವೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ॥
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ।
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ।
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು ॥೬॥

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ।
ನೊರ್ವನೇ ವೀರನಾತನ ಯಜ್ಞತುರಗಮಿದು।
ನಿರ್ವಹಿಸಲಾರ್ಪರಾರಾದೊಡಂ ತಡೆಯುಲೆಂದಿರ್ದ ಲೇಖನವನೋದಿ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥ ೭ ॥

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ॥ ೮ ॥

ಕಾದಿರೆಗಾವಲ ಸುಭಟರನಿತರೊಳೊದಗಿ ಬಂದು।
ಕದಳೀದ್ರುಮಕೆ ಕಟ್ಟಿದ ತುರಂಗಮಂ ಕಂಡು।
ಸದಮಲ ಬ್ರಹ್ಮಚಾರಿಗಳನಾರ್ಭಟಿಸಿ ವಾಜಿಯನೇಕೆ ಬಿಗಿದಿರೆನಲು॥
ಬೆದರಿ ನಾವಲ್ಲವಂ ಬೇಡಬೇಡೆನೆ ಬಂಧಿ।
ಸಿದನೆಂದು ಲವನಂ ಕರಾಗ್ರದಿಂ ತೋರಿಸಿದ।
ರದಟರೀತಂ ತರಳ ನರಿಯದೆಸೆಗಿದನೆಂದು ಬಿಡಹೇಳಿ ಗರ್ಜಿಸಿದರು

ವಿಕ್ರಮವಿದೇಕೆ ಬಿಡೆನಶ್ವಮಂ ಮೋಣ್ಬಿಡಲು ।
ಪಕ್ರಮಿಸಿದವರ್ಗಳ ಕರಮನರಿವೆನಲವರ ॥
ತಿಕ್ರಮಿಸಿ ವಾಜಿಯಂ ಬಿಡುವೊಡ್ಯೈತರಲವರ ಕೈಗಳಂ ಕೋಪದಿಂ ॥
ವಕ್ರವಿಲ್ಲದೆ ಕೋಲ್ಗಳಿಂದೆಚ್ಚು ಕಡಿದೊಡನೆ ।
ಶಕ್ರನದ್ರಿಯ ಮೇಲೆ ಮಳೆಗರೆವೊಲಾ ಸೈನ್ಯ ।
ಚಕ್ರಮಂ ಮುಸುಕಿದಂ ವೀರ ಲವನಾಕ್ಷಣದೊಳೇನೆಂದೆನದ್ಭುತವನು ॥ ೧೦ ॥

ಬಾಲಕನ ಮೇಲೆ ಕವಿದುದು ಬಳಿಕ ಮುಳಿದು ಹಯ ।
ಪಾಲಕಬಲಂ ಕರಿ ತುರಗ ರಥ ಪದಾತಿಗಳ ।
ಜಾಲಕವನೋರ್ವನೆನ್ನದೆ ಬಾಣ ಪರಶು ತೋಮರ ಶಕ್ತಿ ಸುರಗಿಗಳೊಳು ॥
ಕಾಲಕಖಿಳ ಪ್ರಾಣಿಗಳನ್ನೈದೆ ಸಂಹರಿಪ ।
ಶೂಲಕರನೆನಲವಂ ಕೋಲುತಿರ್ದನನಿಬರಂ ।
ಕೋಲ ಕಡುವಳೆಗರೆದು ಮುನಿಪನಿತ್ತಕ್ಷಯ ನಿಷಂಗಮೆಸೆದಿರೆ ಬೊನ್ನೊಳು ॥೧೧॥

ಸಂಖ್ಯೆಯಿಲ್ಲದೆ ಮೇಲೆ ಬೀಳ್ವಕೈದುಗಳೆಲ್ಲ ।
ಮಂ ಖಂಡಿಸುತ್ತೊಡನೆ ಮುತ್ತಿದರಿ ಚತುರಂಗ ।
ಮಂ ಖಾತಿಯಿಂದೆ ಸಂಹರಿಸುತೊಂದೊಂದು ರಿಪುದಾಣಕ್ಕೈದಂಬುಗಳನು ॥
ಪುಂಖಾನುಪುಂಖದಿಂದಿಸುವ ಬಾಲಕನಿಸುಗೆ।
ಯಿಂ ಖಿಲಪ್ರಾಯಮಾಗಿರ್ದ ನಿಜಬಲಜಾಲ ।
ಮಂ ಖರಾಂತಕನನುಜನೀಕ್ಷಿಸಿ ಕನಲ್ದೇರಿದಂ ಮಹಾಮಣಿರಥವನು ॥ ೧೨ ॥

ದುರಿತ ಗಣಮಿರ್ದಪುದೆ ಗೌತಮಿಯೊಳಾಳ್ದಂಗೆ ।
ಪರಮಯೋಗಿಗೆ ಭವದ ಬಂಧನಂ ಬಂದಪುದೆ ।
ಪರಸೈನ್ಯದುರುಬೆ ರಘುಕುಲಜರ್ಗೆ ತೋರುವುದೆ ಪೇಳವನಿಪಾಲತಿಲಕ ॥
ತರಳನಾದೊಡೆ ಲವಂ ಬೆದರುವನೆ ನಿಮಿಷದೊಳ್ ।
ಪರಿಗಡಿದನನಿತು ಚತುರಂಗಮಂ ಶತ್ರುಘ್ನ ।
ನುರವಣಿಸೆ ತಡೆದನೆರಗುವ ಸಿಡಿಲ ಗರ್ಜನೆಗೆ ಮಲೆವ ಮರಿಸಿಂಗದಂತೆ ॥ ೧೩ ॥

ಒತ್ತಿಬಹ ಶತ್ರುಘ್ನನುರುಬೆಗೆ ಲವಂ ತನ್ನ।
ತತ್ತದೊಳ್ ಮಹೇಶಮಂತ್ರಮಂ ಸ್ಮರಿಸುತ್ತೆ ।
ಮತ್ತೆ ನಿರ್ಭಯನಾಗಿ ಮಾರಾಂತನಾತನೆಲನೇವೊ ನೀಂ ಪಸುಳೆ ನಿನಗೆ ।
ತೆತ್ತಿಗರದಾರಕಟ ಸಾಯದಿರ್ ಪೋಗೆನುತೆ ।
ಹತ್ತುಶರದಿಂದೆಚ್ಚೊಡವನ ಬಾಣಂಗಳಂ ।
ಕತ್ತರಿಸಿ ಕೂಡೆ ಭರತಾನುಜನ ಕಾರ್ಮುಕದ ಹೆದೆಯನಿಕ್ಕಡಿಗೆಯ್ದನು ॥ ೧೪॥

ತರಳನ ಪರಾಕ್ರಮಕೆ ಮೆಚ್ಚಿದಂ ಮತ್ತೊಂದು ।
ತಿರುವನಳವಡಿಸಿದಂ ಕಾರ್ಮುಕಕೆ ಶತ್ರುಘ್ನ ।
ನಿರದೆ ಕಣ್ಮೂರರಿಂ ಬಾಲಕನ ಪಣೆಯನೀಕ್ಷಿಸಿಡೆ ನಗುತೆ ಪರಿಮಳಿಸುತೆ ॥
ವಿರಹಿಗಳನಂಜಿಸುವ ಪೂಗೋಲ್ಗಳ್ ಪೊಲಾಯ್ತು ನಿ ।
ನ್ನುರವಣೆಯ ಬಾಣಂಗಳೆನುತ ಭರತಾನುಜನ ।
ತುರಗ ಸಾರಥಿ ವರೂಥ ಧ್ವಜ ಶರಾಸನಂಗಳನವಂ ತಡೆಗಡಿದನು ॥ ೧೫ ॥

ಕೋಪದಿಂ ಪೊಸರಥಕಡರ್ದು ಶತ್ರುಘ್ನನುರು ।
ಚಾಪಮಂ ಕೊಂಡು ದಿವ್ಯಾಸ್ತ್ರದಿಂದೆಸುತ ಬರ ।
ಲಾಪಥದೊಳೆಣಿಕೆಗೆಯ್ದಣ್ಣನಂ ಮಾತೆಯಂ ನೆನೆದು ಮನದೊಳು ಮರುಗುತ ॥
ಆ ಪಸುಳೆ ಮತ್ತೆ ಕಡುಧೈರ್ಯಮಂ ತವೆ ತಾಳ್ದಿ ।
ನೋಪಮದೊಳೆಯ್ದುವ ಪಗೆಯ ಶರವನೆಡೆಯೊಳ್ ಪ್ರ ।
ತಾಪದಿಂ ಕತ್ತರಿಸಿ ಕೆಡಹಲ್ಕೆ ಬಯಲಾಯ್ತು ಕೂಟಸಾಕ್ಷಿಯ ಸಿರಿಯೊಲು ॥೧೬॥

ವಿಸ್ಮಯಾನ್ವಿತನಾದನಂದು ಶತ್ರುಘ್ನ ನಾ ।
ಕಸ್ಮಿಕದ ಪಸುಳೆಯ ಪರಾಕ್ರಮಕೆ ಬಳಿಕ ವಿಲ ।
ಯಸ್ಮರಾಂತಕನ ಪಣೆಗಣ್ಣಿಂದ ಪೊರಮಡುವ ದಳ್ಳುರಿಯತೆರದೊಳೆಸೆವ ॥
ರಶ್ಮಿಗಳನುಗುಳ್ವಮೋಘದ ಬಾಣಮಂ ಪೂಡು ।
ತಸ್ಮದಿಷುಘಾತಮಂ ನೋಡೆನುತಿರಲ್ಕೆ ಮಂ ।
ದತಸ್ಮಿತದೊಳಾಸರಳನೆಚ್ಚು ಲವನೆಡೆಯೊಳಿಕ್ಕಡಿಗೆಯ್ದನೇವೇಳ್ವೆನು ॥೧೭॥

ಅರಸ ಕೇಳಾಶರದೊಳರ್ಧಮವನಿಗೆ ಕೆಡೆದು ।
ದಿರದೆ ಮೇಲ್ವಾಯ್ದುರ್ಧಮಾ ಲವನ ಕಾರ್ಮುಕವ ।
ನರಿದುಕೊಂಡೆರ್ದೆಯನುಚ್ಚಳಿಸೆ ಮೈಮರೆದೊರಗಿದಂ ಪಸುಳೆ ಮೂರ್ಛೆಯಿಂದೆ ॥
ಹರುಷದಿಂದಾರ್ದುದುಳಿದರಿಬಲಂ ನಡೆತಂದು ।
ಕರುಣದಿಂ ತರಳನಂ ನೋಡಿ ರಾಮಾಕೃತಿವೊ ।
ಲರೆ ಮೋಹದಿಂ ತನ್ನ ರಥದ ಮೇಲಿರಿಸಿಕೊಂಡೈದಿದಂ ಶತ್ರುಘ್ನನು ॥ ೧೮ ॥

ಕದಳಿಯೊಳ್ ಕಟ್ಟಿರ್ದ ಕುದುರೆಯಂ ಬಿಡಿಸಿ ನಗ ।
ರದ ಕಡೆಗೆ ಪಡೆವೆರಸಿ ತಿರುಗಿದಂ ಶತ್ರುಘ್ನ ।
ನುದಧಿಘೋಷದೊಳಿತ್ತಲೋಡಿದರ್ ತಾಪಸವಟುಗಳವನಿಸುತೆಯ ಪೊರೆಗೆ ॥
ಕದನದೊಳ್ ನಡೆದ ವೃತ್ತಾಂತಮಂ ಪೇಳಲ್ಕೆ ।
ರುದಿತದಿಂ ಕೈವೆರಳ್ಗಳನೊತ್ತಿಕೊಳುತ ನಿಜ ।
ಸದನಮಂ ಪೊರಮಟ್ಟು ಹಲುಬಿದಳ್ ಸುತನ ಗುಣಶೀಲರೂಪಗಳನೆಣಿಸಿ ॥೧೯॥

ಒದರಿದುವು ಕಂಬನಿಗಳಂಗಲತೆ ಕಂಪಿಸಿತು।
ಪೊಸೆದಳೊಡಲಂ ಕೂಡೆ ಕೂಡೆ ಸುತಮೋಹದಿಂ।
ದಸವಳಿದು ಕಂದನೆಲ್ಲಿರ್ದಪಂ ಕಾದಿದನೆ ಪಗೆಯ ಕೈಗೊಳಗಾದನೇ॥
ಪಸುಳೆಗೇನಾಯ್ತೊ ಮಗನೆಂತು ನೊಂದನೊ ತರಳ।
ನಸುವಿಡಿದಿಹನೊ ಬಾಲಕನ ಮುದ್ದುಮೊಗಮೆನ್ನ।
ದೆಸೆಗೆ ಸೈರಿಸದೊ ಜೀವಿಸಿ ಕೆಟ್ಟೆನೆಂದು ಹಲುಬಿದಳಂಬುಜಾಕ್ಷಿ ಮರುಗಿ ॥೨೧॥

ಅನ್ನೆಗಂ ಬಂದನಗ್ಗದ ಸಮಿತ್ಪುಷ್ಪಂಗ।
ಳನ್ನೆತ್ತಿಯೊಳ್ ಪೊತ್ತುಕೊಂಡು ಕುಶನಳುತಿರ್ಪ।
ತನ್ನ ತಾಯಂ ಕಂಡಿದೇನದ್ಭುತಪ್ರಳಾಪಂ ನಿನಗೆ ಪೇಳೆನಲ್ಕೆ॥
ಬನ್ನಮಂ ಕೇಳ್ ಮಗನೆ ಹಯಮೊಂದು ಬರಲದಂ।
ನಿನ್ನ ತಮ್ಮಂ ಕಟ್ಟಲರಸುಗಳ್ ಪಿಡಿದುಯ್ದು।
ರಿನ್ನೇವೆನೆಂದು ಜಾನಕಿ ನುಡಿಯೆ ರೋಷದಿಂದಾ ಕುವರನಿಂತೆಂದನು ॥ ೨೧ ॥

ಶೋಕಮೇಕಿದಕೆ ಹರಣವನೊಯ್ದೊಡಂತಕನ।
ಲೋಕವಂ ಸುಡುವೆನಲ್ಲಹುದೆಂದೊಡಜ ಹರಿ ಪಿ॥
ನಾಕಿಗಳನುರುಪುವೆಂ ಮಿಕ್ಕರಸುಗಿರಸುಗಳ ಪಾಡಾವುದೀಗ ತನಗೆ॥
ಆ ಕವಚ ಖಡ್ಗ ಧನು ಶರ ಮಕುಟಂಗಳಂ॥
ತಾ ಕಳವಳಿಸದಿರೆಂದವನಿಜೆಗೆ ನುಡಿದೊಡವ।
ಳಾಕುಶಂಗೊಳಗಣಿಂದಂಗಿಯಂ ತಂದಳವಡಿಸಿ ಪರಸಿ ಬೀಳ್ಕೊಟ್ಟಳು ॥ ೨೨ ॥

ರಾಯ ಕೇಳ್ ಕುಶನ ವಿಕ್ರಮವನಭಿವರ್ಣಿಸಲ।
ಜಾಯುವುಳ್ಳನ್ನೆಗಂ ತನಗೆ ತೀರದು ಬಳಿಕ।
ತಾಯಂಘ್ರಿಗೆರಗಿ ಬೀಳ್ಕೊಂಡು ತಾರಕನ ಪೆರ್ಬಡೆಗೆ ಗುಹನೆಯ್ದುವಂತೆ॥
ವಾಯುವೇಗದೊಳೊದಗಿ ವೀರಭರತಾನುಜನ।
ಪಾಯದಳವಂ ಪೋಗಬೇಡ ಬೇಡೆನುತ ಸಲೆ।
ಸಾಯಕದ ಮಳೆಗಳಂ ಕರೆಯಲ್ಕೆ ತಿರುಗಿದುದು ಮತ್ತೆ ಶತ್ರುಘ್ನ ಸೇನೆ ॥ ೨೩ ॥

ಪದ್ದೆರಗಿದುವು ಭಟರ ಮಂಡೆಗಳ ಮೇಲುಡಿದು।
ಬಿದ್ದುವು ಚಲಧ್ವಜಪತಾಕೆಗಳ್ ಕೂಡೆ ದೂ।
ಳೆದ್ದು ಬಿರುಗಾಳಿ ಬೀಸಿದುದು ಕಂಬನಿ ಕರೆದುವಂದಾನೆಕುದುರೆಗಳ್ಗೆ॥
ಪೊದ್ದಿದುತ್ಪಾತಭಯಕಾ ಬಲಂ ಗಜಬಜಿಸು।
ತಿದ್ದುದೀಚೆಯೊಳೀ ಕುಶಂ ಪೋಗದಿರಿ ನಿಲ್ಲಿ।
ಕದ್ದೈದುವರೆ ತುರಗಸಹಿತ ಲವನಂ ಬಿಟ್ಟು ನಡೆಯಿ ನೀವೆನುತೆಚ್ಚನು ॥ ೨೪ ॥

ಆ ಬಾಲಕನ ಬಾಣಘಾತದಿಂದಳವಳಿದು ।
ದೀಬಲದ ಮಂದಿ ಮತ್ತೀಗಳವನೊರ್ವನಿದೆ ।
ಕೋ ಬಂದನೆಂದಿಸುವ ಬೆಸೆಗಳ್ಗೆ ದೆಸೆಗೆಟ್ಟು ಸೇನೆ ಗಜಬಜಿಸೆ ಕಂಡು ॥
ಶಾಬಮೃಗಮಂಜಿಪುದು ಗಡ ಪುಲಿಯನೆನುತಾ ಮ ।
ಹಾಬಾಹು ಶತ್ರುಘ್ನನಾಗ ನಿಜದಳಪತಿಯ ।
ನೇ ಬೇಗ ಕಳುಹಿದೊಡವಂ ಸಕಲಸೇನೆಸಹಿತೈದಿದಂ ಕುಶನಮೇಲೆ ॥ ೨೫ ॥

ಬಳಿಕ ಶತೃಘ್ನನ ನಿರೂಪದಿಂ ತಿರುಗಿದಂ ।
ದಳಪತಿ ಸಮಸ್ತಬಲಸಹಿತಾ ಕುಮಾರನಂ ।
ಬಳಸಿದಂ ತಮತಮಗೆ ವಿವಿಧಾಯುಧಂಗಳಂ ಜಾಳಿಸುತೆ ವಹಿಲದಿಂದೆ ॥
ಅಳವಿಯೊಳ್ ತೀವಿದುವು ಕುದುರೆ ತೇರಾನೆಯಾಳ್ ।
ಕೊಳುಗುಳದೊಳನಿತುಮಂ ಸವರಿ ಸೇನಾನಿಯಂ ।
ಕಳುಹಿದಂ ಜವಪೊಳಲ್ಗವನ ಸಾರಥಿರಥಾಶ್ವಂವೆರಸಿ ವೀರಕುಶನು ॥ ೨೬ ॥

ಆ ದಳಪತಿಯ ತಮ್ಮನೊರ್ವ ನಗನೆಂಬವಂ ।
ಕಾದಿ ಮಡಿದಣ್ಣನಂ ಕಾಣುತ್ತ ಖತಿಯಿಂ ಮ ।
ಹಾದಂತಿಯಂ ಕುಶನ ಮೇಲೆಯಂಕುಶದಿಂದಿರಿದು ನೂಕಿದಂ ಕುಶನದ ॥
ಜೋದಗಾಳಗದಿಂದೆ ಬಳಿಕೆರಡುಸೀಳಾಗಿ ॥
ಮೇದಿನಿಗೆ ಬೀಳ್ವಂತಿಥವ ನೆಚ್ಚವನ ಧನು ।
ಶ್ಛೇದಮಂ ಮಾಡಲಾತಂ ವಲಗೆ ಕಡುಗಮಂ ಕೊಂಡವಂಗಿದಿರಾದನು ॥ ೨೭ ॥

ಕಿತ್ತಡಾಯುಧದೊಳೈದುವನ ಘನ ಹಸ್ತಮಂ ।
ಕತ್ತರಿಸಲೆಡಗೈಯೊಳೊಂದು ಗದೆಯುಂ ಕೊಂಡು ।
ಮತ್ತೆ ಮೇಲ್ವಾಯ್ದೊಡಾ ಕರಮಂ ಕಡಿಯೆ ಬಾಹುಗಳಿಂದೆ ಪೊಯ್ವೆನೆಂದು ॥
ಒತ್ತಿ ನಡೆತರಲೆರಡು ತೋಳ್ಗಳಂ ಕೂರ್ಗಣೆಯೊ ।
ಳುತ್ತರಿಸೆ ಕಾಲ್ಗಳಿಂದೊದೆದು ಕೆಡಪುವ ಭರದೊ ।
ಳೆತ್ತಲಾ ತೊಡೆಗಳನವಂ ಬೇಗದಿಂವೆಯ್ದು ಕುಶನೆಚ್ಚು ತುಂಡಿಸಿದನು ॥ ೨೮ ॥

ಬಾಹುಯುಗಮೂರುದ್ವಯುಂ ಪೋದ ಕಾಯದಿಂ ।
ಸಾಹಸಂಗೈದವಂ ಮೇಲ್ವಾಯ್ದು ಚಂದ್ರಂಗೆ ।
ರಾಹುವಂಗೈಸುವಂತುರವಣಿಸೆ ಕುಶನಳುಕದೆಚ್ಚವನ ತಲೆಯನರಿಯೆ ॥
ಮಾಹೇಶ್ವರಾಭರಣದೊಳ್ ಮೆರೆದುದಾ ಶಿರಂ ।
ಕಾಹುರದ ಕುವರನದಟಂ ಕಂಡು ಖಾತಿಯಿಂ ।
ದಾಹವಕೆ ಬಿಲ್ದುಡುಕಿ ತರಳನಂ ಕೆಣಕಿದಂ ಬಂದು ಕಲಿ ಶತ್ರುಘ್ನನು ॥ ೨೯ ॥

ಕಡುಮುಳಿದು ಶತ್ರುಘ್ನನೊಂಬತ್ತುಬಾಣದಿಂ ।
ಬಿಡದೆಚ್ಚೊಡಾ ಕುಶಂ ಕೋಪದಿಂದವನ ತೇ ।
ರ್ವಡಿಯಾಗೆ ಸಾರಥಿರಥಾಶ್ವಂಗಳೆಡೆಗೆಡೆಯ ಬಿಲ್ಲುಡಿಯೆ ಪೇರುರದೊಳು ॥
ನಿಡುಸರಲ್ಕೀಲಿಸಲ್ ಕರೆದನಂಬುಗಳನೊಡ ।
ನೊಡನೆ ಕೂರ್ಗಣೆಗಳಾರಂ ಮತ್ತೆ ವಕ್ಷದೊಳ್ ।
ತುಡಿಸಿದಂ ಕುಶನದರ ಘಾತಿಗೆ ವರೂಥದಿಂ ಭರತಾನುಜಂ ಬಿದ್ದನು ॥ ೩೦ ॥

ಗಿರಿತಟದೊಳೊಂದೊಂದರೊಳ್ ಪೆಣಗಿ ಸೋಲ್ತ ಮದ ।
ಕರಿ ಧರೆಗುರುಳ್ವಂತೆ ಪೊರಾಯ ಗಾಯದಿಂ ।
ದಿರದೆ ಶತ್ರುಘ್ನಂ ಮಹೀತಳಕೆ ರಥದಿಂದೆ ಬೀಳ್ವನಿತರೊಳ್ ಪಡೆಯೊಳು ॥
ದೊರೆದೊರೆಗಳೆಲ್ಲರುಂ ಕೈಕೊಂಡು ಕಾದಿ ಸಂ ।
ಗರದೊಳ್ ಪತಿತರಾದರಾ ಕುಶನ ಬಾಣದಿಂ ।
ಪಿರಿದು ಕನ್ಯಾವಿಕ್ರಯಂಗೈದು ಜೀವಿಸುವ ಮಾನವನ ಪಿತೃಗಳಂತೆ ॥ ೩೧ ॥

ಬಹುದುರಿತಮಂ ಸ್ವಧರ್ಮದೊಳೊಗಸುವಂತೆ ಕುಶ ।
ನಹಿತರಂ ತನ್ನ ಭುಜಬಲದಿಂದೆ ಸವರಿದಂ ।
ಮಹದಾಹವದ ಮೂರ್ಛೆ ತಿಳಿದನಿತರೊಳ್ ಕಂಡನಣ್ಣನಂ ಬಳಿಕ ಲವನು ॥
ಸಹಜಾತರಿರ್ವರುಂ ಕೂಡಿದರ್ ಪವನ ಹುತ ।
ವಹರಂತೆ ಮತ್ತೆ ಹಯಮಂ ಕಟ್ಟಿಕೊಂಡು ವಿ ।
ಗ್ರಹಕೆ ನಿಲಲರಸನಲ್ಲಿಗೆ ದೂತರಂ ಕಳುಹಿದರ್ ಬಲದೊಳುಳಿದಭಟರು ॥ ೩೨ ॥

ಚರು ಪುರೋಡಾಶ ತಂಡುಲ ತಿಲ ವ್ರೀಹಿ ಘೃತ ॥
ದುರು ಹವಿರ್ಧೂಮದಿಂದರುಣಲೋಚನನಾಗಿ ।
ಪರಿಮೇಖಲಾಶೃಂಗ ಮೃಗಚರ್ಮಧರನಾಗಿ ನವನೀತಲಿಪ್ತನಾಗಿ ॥
ಪರಮ ಮುನಿಗಳ್ವೆರಸಿ ಕನಕ ಜಾನಕಿಸಹಿತ ।
ಭರತಲಕ್ಷ್ಮಣರೊಡನೆ ಕೃತಯಜ್ಞಶಾಲೆಯೊಳ್ ।
ವರದೀಕ್ಷೆಯಿಂದೆ ಕುಳ್ಳಿರ್ದೆಸೆವ ರಾಮನಂ ಕಂಡು ಚರರಿಂತೆಂದರು ॥ ೩೩ ॥

ಅವಧರಿಸು ಜೀಯ ನಿನ್ನಧ್ವರದ ಚಾರು ಹಯ ।
ಮವನಿಯೊಳವಿಘ್ನದಿಂ ತಿರುಗಿ ಬಂದುದು ಬಳಿಕ ।
ಲವನೆಂಬ ಬಾಲಕಂ ಕಟ್ಟಿದಂ ಕಡುಗಿದೊಡೆ ಬಲಮೆಲ್ಲಮಂ ಕೊಂದನು ॥
ಬವರದೊಳ್ ಶತ್ರುಘ್ನನಾತನಂ ಪಿಡಿದು ತರ ।
ಲವನ ಬಳಿವಿಡಿದೊರ್ವನೆಯ್ತಂದು ನಿನ್ನನುಜ ।
ನವಗಡಿಸೆ ಕೆಡೆಯೆಚ್ಚು ಬೀಳ್ಚಿದಂ ಪೇಳಲಂಜುವೆವೆಂದು ಕೈಮುಗಿದರು ॥ ೩೪ ॥

ಕೇಳುತೆ ಕನಲ್ದಿಲವೊ ಶತ್ರುಘ್ನನಂ ಜಯಿಸು ।
ವಾಳುಂಟೆ ಲೋಕದೊಳ್ ಪೋಗಿವರ್ ಮರುಳರೆಂ ।
ದಾಳವಾಡಲ್ ಜೀಯ ನಿಮ್ಮಡಿಗಳಾಣೆ ಪುಸಿಯಲ್ಲೆಂದು ಮತ್ತೆ ಚರರು ॥
ಪೇಳಲ್ಕೆ ದೆರಗಾಗಿ ಮರುಗಿ ಲವಣಾಸುರಂ ।
ಕಾಳಗದೊಳೀತನಿಂದಳಿದನಾ ಬಾಲಕರ ।
ತೋಳ ಬಲ್ಪೆಂತೊ ಲಕ್ಷ್ಮಣ ಸೇನೆಸಹಿತ ನಡೆಯೆಂದು ರಘುಪತಿ ನುಡಿದನು ॥೩೫॥

ಬಳಿಕ ರಾಘವನಂಘ್ರಿಗೆರಗಿ ಕಳುಹಿಸಿಕೊಂಡು ।
ತುಳತಂತ್ರಸನ್ನಾಹದಿಂ ಕಾಲಜಿತುವೆಂಬ ।
ದಳಪತಿಸಹಿತ ಸುಮಿತ್ರಾತ್ಮಜಂ ನಗರಮಂ ಪೊರಮಟ್ಟು ನಡೆವ ಧರಕೆ ॥
ಇಳೆ ಸವೆದುದೇಳ್ವ ಕೆಂದೂಳ್ಗಳಿಂದಂಬರ ।
ಸ್ಥಳಮೈದುತಿರಲ್ ಪತಾಕಾ ಧ್ವಜಂಗಳ್ಗೆ ದಿ ।
ಗ್ವಳಯಮಿಂಬಿಲ್ಲ ಘೀಳಿಡುವ ವಾದ್ಯಧ್ವನಿಗೆ ಪೊಸತಿದೆಂಬಂತಾಗಲು ॥ ೩೬ ॥

ಪೊಡವಿಯಗಲದೊಳೆಯ್ದುವಾನೆಗಳ ಸೇನೆಗಳ ।
ಕಡುಗಿ ಮುಂಬರಿವ ರಥರಾಜಿಗಳ ತೇಜಿಗಳ ।
ಬಿಡದೆ ಗಗನದೊಳಿಡಿದ ಸತ್ತಿಗೆಯ ಮುತ್ತಿಗೆಯ ಢಾಳಿಸುವ ಚಮರಂಗಳ ॥
ನಿಡುಪತಾಕೆಯ ವಿವಿಧ ಧಾತುಗಳ ಕೇತುಗಳ ।
ಜಡಿವ ಕೈದುಗಳ ಪೊಸರೋಚಿಗಳ ವೀಚಿಗಳ ।
ಪೊಡೆವ ತಂಬಟ ಪಟಹ ಭೇರಿಗಳ ಭೂರಿಗಳ ಪದಪಿಂದೆ ಪಡೆ ನಡೆದುದು ॥ ೩೭ ॥

ಪ್ರಾಣಮಿಲ್ಲದೆ ಚೇತರಿಸಿಕೊಳಲ್ ತನುವಿನೊಳ್ ।
ತ್ರಾಣಮಿಲ್ಲದೆ ನೊಂದು ಗಾಯದಿಂ ಮರವೆಯಂ ।
ಕೇಣಿಗೊಂಡೊರಗಿ ಶತ್ರುಘ್ನನಳಿದುಳಿದ ಬಲದೊಡನೆ ರಾಹುಗ್ರಸ್ತದ ॥
ಏಣಧರನಂತಿರಲ್ ಪಡೆಸಹಿತ ಲಕ್ಷ್ಮಣಂ ।
ಕ್ಷೋಣಿಪತಿ ಕೇಳ್ ಬಂದು ಕಂಡು ಸೈತಿಟ್ಟಿನ್ನು ।
ಕಾಣಬಹುದೆನುತೆ ಕೈವೀಸಿದಂ ಕಾಲಜಿತು ಮುಖ್ಯಸೇನಾನಿಗಳ್ಗೆ ॥ ೩೮ ॥

ಕಂಡರೀಚೆಯೊಳರಿಬಲವ್ಯೂಹಮಂ ಬರಲಿ ।
ಖಂಡಿಸುವೆನೆಂದೊರ್ವರೊರ್ವರೊಳ್ ಮಾತಾಡಿ ।
ಕೊಂಡರವರೊಳ್ ತನ್ನ ಬಿಲ್ಮುರಿದುದಾಹವದೊಳಂದು ಲವನಗ್ರಜಂಗೆ ॥
ಚಂಡಮುನಿಪತಿ ಮಾಡಿದುಪದೇಶದಿಂದೆ ಕೋ ।
ದಂಡಮಂ ಪಡೆವೆನೀಕ್ಷಣದೊಳೆಂದೊರೆದು ರವಿ ।
ಮಂಡಲವನೀಕ್ಷಿಸುತೆ ತರಣಿಯಂ ಪ್ರಾರ್ಥಿಸಿದನನುಪಮ ಸ್ತುತಿಗಳಿಂದೆ ॥ ೩೯ ॥

ಮಿತ್ರಾಯ ಸೂರ್ಯಾಯ ಹಂಸಾಯ ಪೂಷ್ಣೇ ಸ।
ವಿತ್ರೇ ಜಗಚ್ಚಕ್ಷುಷೇ ಚಂಡಘೃಣಯೇ ಪ।
ವಿತ್ರಾಯ ಪಿಂಗಾಯ ಪುರುಷಾಯ ಭಾನುವೇ ಜ್ಯೋತಿಷೇ ಭಾಸ್ಕರಾಯ॥
ಸತ್ರೈಕರೂಪಾಯ ವಿಮಲಾಯ ವಿಶ್ವರ।
ಕ್ಷಿತ್ರೇ ಸಹಸ್ರಕಿರಣಾಯ ರವಯೇ ಮಂದ।
ಪಿತ್ರೇ ದಿವಾಕರಾಯ ಬ್ರಹ್ಮ ವಿಷ್ಣು ರುದ್ರಾತ್ಮನೇ ತುಭ್ಯಂ ನಮಃ ॥ ೪೦ ॥

ಜಗಕೆ ನೀನೊಂದು ಕಣ್ಣಾಗಿರ್ಪೆ ಮೇಣೆರಡು।
ಬಗೆಯ ಪಥದೊಳ್ ನಡೆವೆ ತಿಳಿಯಲ್ಕೆ ಮೂರು ಮೂ।
ರ್ತಿಗಳನೊಳಗೊಂಡಿರ್ಪೆ ಸಲೆ ಸಂದ ನಾಲ್ಕುವೇದಂಗಳೊಡಲಾಗಿ ತೋರ್ಪೆ॥
ಅಗಲದೈದಂಗದೊಳ್ ಕಾಣಿಸುವೆ ಪರಿಪರಿಯೊ।
ಳೊಗೆದಾರು ಋತುಗಳೊಳ್ ವರ್ತಿಸುವೆ ಸಂತತಂ।
ಗಗನಕೇಳಶ್ವಮಂ ಕೊಂಡೇಳ್ವೆ ದೇವ ಬಿಲ್ಗೊಟ್ಟುಳುಹಬೇಕೆಂದನು ॥ ೪೧ ॥

ಪತ್ತು ದೆಸೆಯಂ ಬೆಳಗಿಸುವೆ ಪನ್ನೆರಡು ರಾಶಿ।
ಗೊತ್ತಾಸೆಯಾಗಿರ್ಪೆ ಶತಪತ್ರಮಿತ್ರನಹೆ।
ಮತ್ತೆ ಸಾಸಿರಕಿರಣದಿಂದೆಸೆವೆ ಲಕ್ಷಯೋಜನದಳತೆಯೊಳ್ ತೊಳಗುವೆ॥
ಬಿತ್ತರದನಂತದೊಳ್ ಸಂಚರಿಪೆ ದೇವ ನಿ।
ನ್ನುತ್ತಮ ಗುಣಾವಳಿಯನೆಣಿಸಲೆನ್ನಳವೆ ಬಿ।
ಲ್ಲಿತ್ತುಳುಹಬೇಕೆಂದು ದಿನಮಣಿಯನಾ ಲವಂ ನುತಿಸಿದಂ ಭಕ್ತಿಯಿಂದೆ ॥ ೪೨ ॥

ಅವನೀಶ ಕೇಳ್ ಬಳಿಕ ಲವನ ವಿಮಲಸ್ತುತಿಗೆ।
ರವಿ ಮೆಚ್ಚಿ ಕೊಟ್ಟನಾತನ ಕೈಗೆ ದಿವ್ಯಚಾ।
ಪವನದಂ ಕೊಂಡಗ್ರಜಂಗೆ ತೋರಿಸಿ ಮುನಿಪ ವಾಲ್ಮೀಕಿ ಬಾಳುಗೆನುತೆ॥
ಪವಣನಾರೈದು ಬಿಲ್ದಿರುವನೊದರಿಸಿದನು।
ತ್ಸವದಿಂದೆ ಕುಶನುಗ್ರಕೋದಂಡಮಂ ಪಿಡಿದ।
ನವರೀರ್ವರುಂ ಮತ್ತೆ ಪವನ ಪಾವಕರಂತೆ ಪೊಕ್ಕರರಿಬಲವನುರುಬಿ ॥ ೪೩ ॥

ನೂರಾಳಿಗೊಂದು ಹಯಮಿರುತಿರ್ಪುದಾ ಹಯಂ।
ನೂರಕಿರುತಿಹುದು ಮೇಣೊಂದು ರಥ ಮಾರಥಂ।
ನೂರಕಿಭವೊಂದಿರ್ಪುದಿಂತಿಭ ಸಹಸ್ರಮಿರೆ ಭ್ರಮಿಯೆಂದೆನಿಸಿಕೊಳ್ವುದು॥
ಮೀರಿ ಯೋಜನದಗಲದೊಳ್ ಭ್ರಮಿಗಳೀರೈದು।
ನೂರಿಟ್ಟಣಿಸಿ ನಡೆದು ಬಂದೊಡಾ ಸೇನೆಯಂ।
ತಾರು ತಟ್ಟಾಗಿ ಕೆಡಹಿದರೊಂದುನಿಮಿಷದೊಳ್ ಕುಶ ಲವರದೇವೇಳ್ವೆನು ॥ ೪೪ ॥

ಹೊಣೆವೊಕ್ಕಿಸುತ ಬಾಲಕರ್ೖದೆ ಲಕ್ಷ್ಮಣಂ।
ಕಾಣುತಿದಿರಾದಂ ಕುಶಂಗಖಿಳವಾಹಿನೀ ।
ಶ್ರೇಣಿಸಹಿತುರುಬಿದಂ ಕಾಲಜಿತುವಾ ಲವನ ಮೇಲೆ ವಡಬಾಗ್ನಿಯೆಡೆಗೆ ॥
ಮಾಣದೆರಗುವ ಕಡಲಜಲದಂತೆ ಕವಿದುದು ಕೃ ।
ಪಾಣ ತೋಮರ ಪರಶು ಕುಂತ ಮುದ್ಗರ ಚಕ್ರ ।
ಬಾಣ ಶಕ್ತಿಗಳ ಘೋರಪ್ರಹಾರಂಗಳಿಂದಾ ಸಕಲಸೇನೆ ಮುಳಿದು ॥ ೪೫ ॥

ಏಸು ಭಟರಂಬುಗಳನಿಸುವರ್ೖಸಂಬುಗಳ ।
ನಾಸುಭಟರಂಗದೊಳ್ ಕಾಣಿಸಿದನಾ ಬಲದೊ ।
ಳೇಸು ಕೈದುಗಳೊಳೊದಗಿದರ್ೖಸು ಕೈದುಗಳನೆಲ್ಲಮಂ ತಡೆಗಡಿದನು ॥
ಏಸಾನೆಕುದುರೆಗಳ್ ಕವಿದುವ್ೖಸಂ ಸೀಳ್ದ ।
ನೇಸು ತೇರುರವಣಿಸಿತ್ೖಸುರಥಮಮಂ ಮುರಿದ ।
ನೇಸುಮಂದಿಗಳುರುಬಿತ್ೖಸುಮಮಂ ಕೊಂದ ನಿನ್ನೇಸು ಸಾಹಸಿಯೊ ಲವನು ॥೪೬॥

ಜಾನಕಿಯ ಸುತನ ಬಾಣಾವಳಿಯ ಹಾವಳಿಯು ।
ನೇನೆಂಬೆನಹಿತರಂ ಕವರಿದುವು ಸವರಿದುವು ।
ಬಾನೆಡೆಯೊಳಿಟ್ಟಣಿಸಿ ಹರಿದುವು ತರಿದುವು ಕೊಂದುವರಿದುವು ಪರಿದುವು ॥
ಆನೆ ಕುದುರೆಗಳನುರೆ ಸೀಳಿದುವು ತೂಳಿದುವು ।
ನಾನಾ ಪ್ರಕಾರದಿಂ ಕೆಡಹಿದುವು ಕೊಡಹಿದುವು ।
ಸೇನೆಗಳೊಡಲ್ಗಳಂ ಪಚ್ಚಿದುವು ಕೊಚ್ಚಿದುವು ತಲೆಗಳಂ ತತ್ಕ್ಷಣದೊಳು ॥ ೪೭॥

ಭೂರಿಬಾಣದೊಳಹಿತಸೇನೆಯೊಳ್ ಮುಳಿದು ಚ ।
ತ್ವಾರಿಂಶದನುಪಮ ಭ್ರಮಿಗಳಂ ತಡೆಗಡಿದು ।
ವೀರ ಲವನಲ್ಲಿ ಕುಶನಂ ಕಾಣದೆಡಬಲದೊಳರಸೆ ರುಧಿರಾಕ್ಷನೆಂಬ ॥
ಶೂರಾಸುರಂ ಲವಣ ದಾನವನ ಮಾತುಲಂ ।
ಶ್ರೀರಾಮ ಚರಣ ಶರಣಾಗತಂ ಸೀತಾಕು ।
ಮಾರಕನ ಕರದ ಕೋದಂಡಮಂ ತುಡುಕಿದಂ ಮೇಲ್ವಾಯ್ದು ರೋಷದಿಂದೆ ॥೪೮॥

ಕರದ ಬಿಲ್ಲಂ ಕಿತ್ತುಕೊಂಡೋಡುವ ಸುರನಂ ।
ಭರದಿಂದೆ ಬೆಂಬತ್ತಿ ಪೋಗದಿರ್ ಪೋಗದಿರ್ ।
ತಿರುಗೆನುತ ವಾಲ್ಮೀಕಿಮುನಿಪನಿತ್ತಗ್ನಿ ಮಂತ್ರಧ್ಯಾನಮಂ ಮಾಡಲು
ದೊರೆಕೊಂಡುದೊಂದು ಚಕ್ರಂ ಬಳಿಕ ಲವನದಂ ।
ಧರಿಸಿ ಚಕ್ರಾಯುಧಂ ತಾನೆನಲ್ ಕಂಗೊಳಿಸು ।
ತುರವಣಿಸಿ ರುಧಿರಾಕ್ಷನಂ ಗಗನದೊಳ್ ಪಿಡಿಯೆ ಕಂಡವನ ಪಡೆ ಕವಿದುದು ॥ ೪೯॥

ಮತ್ತುರುಬಿದನಿತು ಬಲಮಂ ಕರದ ಚಕ್ರದಿಂ ।
ತತ್ತರವರಿದು ರಾಕ್ಷಸೇಂದ್ರನಂ ಬಿಡದೆ ಲವ ।
ನೋತ್ಸಾಯಮಂ ಮಾಡುತಿರೆ ಕಂಡು ದಶರಥ ನೃಪತಿಯ ಮಂತ್ರಿಯ ತನುಜರು ॥
ಹತ್ತುಮಂದಿ ಪ್ರಸಿದ್ಧಪ್ರಧಾನಿಗಳಾಗ ।
ಹತ್ತುಹತ್ತಂಬುಗಳನೋರೊರ್ವರೆಚ್ಚು ಕಡಿ ।
ಹತ್ತು ಹತ್ತಾಗೆ ಬಾಲಕನ ಪಾರುಂಬಳಿಯನಾಕ್ಷಣಂ ಖಂಡಿಸಿದರು ॥ ೫೦ ॥

ಕರದ ಚಕ್ರಂ ಪೋಗೆ ಪರಿಘಮಂ ಕೊಂಡು ಲವ ।
ನುರವಣಿಸಿ ಹೊಯ್ದನಿಬರಂ ಕೆಡಹೆ ಮತ್ತೆ ಬಂ ।
ಧುರು ಗದಾದಂಡಮಂ ಕೊಂಡು ರುಧಿರಾಕ್ಷನೀತನ ಪಣೆಯನಪ್ಪಳಿಸಲು ॥
ಇರದೆ ಮೂರ್ಛಿತನಾಗಿ ಬಾಲಕಂ ಕೂಡೆ ಚೇ ।
ತರಿಸಿಕೊಂಡೆದ್ದು ಕುಂತದೊಳಾ ಮಹಾಸುರನ ।
ಶಿರವನರಿದಾದಿತ್ಯನಿತ್ತ ನಿಜಚಾಪಮಂ ತೆಗೆದುಕೊಂಡಂ ಧುರದೊಳು ॥ ೫೧ ॥

ಬಿಡದೆ ರುಧಿರಾಕ್ಷ ರಾಕ್ಷಸನಂ ರಣಾಗ್ರದೊಳ್ ।
ಕೆಡಹಿ ನಿಜಚಾಪ ಚಾಪಲಹಸ್ತನಾಗಿ ಲವ ।
ನಡಸಿದರಿಚತುರ ಚತುರಂಗಮಂ ಸಂಹರಿಸತೊಡಗಿದಂ ಮತ್ತೆ ಮುಳಿದು ॥
ತೊಡವುಗಳ ಕಾಯಕಾಯತವಾದ ಜೋಡುಗಳ್ ।
ಕಡಿಯೆ ಕುಣಪಕ್ಕೆ ಪಕ್ಕೆಗಳಾಗೆ ಪಟುಭಟರ್ ।
ಪೊಡೆಗೆಡೆದರಾಗ ರಾಗದೊಳಮರನಾರಿಯರ್ ತಕ್ಕೈಸಲಂಬರದೊಳು ॥ ೫೨ ॥

ಪಡೆ ಮಡಿಯುತಿರ್ದುದು ಲವಾಸ್ತ್ರದಿಂದಿತ್ತ ಕುಶ ।
ನೊಡನೆ ಸೌಮಿತ್ರಿಗಾದುದು ಯುದ್ಧಮಾಗ ಕಿವಿ ।
ಗಡಿಗೆ ತೆಗೆದೆಚ್ಚನೈದಂಬುಗಳನಿದಿರಾಗಿ ಭೂಮಿಜೆಯ ಸುತನ ಮೇಲೆ ।
ಕಡುಗಿ ಖಾತಿಯೊಳೀತನೊಂದು ಸರಳಂ ಪೂಡಿ ।
ಬಿಡಲೂರ್ಮಿಳಾವಲ್ಲಭನ ತೇರೆರಡು ಗಳಿಗೆ ।
ಬಿಡದೆ ತಿರುಗಿತು ಬವಣಿಗೊಂಡು ರಥವಾಜಿಗಳ್ ಪೊಡೆಗೆಡೆದುವೇನೆಂಬೆನು ॥ ೫೩ ॥

ಮೆಚ್ಚಿದಂ ಬಾಲಕನ ವಿಕ್ರಮಕೆ ಲಕ್ಷ್ಮಣಂ ।
ಪೆಚ್ಚಿದತಿರೋಷದಿಂ ಮತ್ತೊಂದು ರಥಕಡ ।
ರ್ದೆಚ್ಚನೆರಡಂಬಿನಿಂದೀತನ ಕಿರೀಟಮಂ ಕವಚಮಂ ಮೂರರಿಂದೆ ॥
ಕೊಚ್ಚಿ ಕೆಡಹಿದನಾಗ ಜಾನಕಿಯ ಸೂನು ಪೆರೆ ।
ಯುಚ್ಚಿದಹಿಪತಿಯಂತೆ ಶೌರ್ಯವಿಮ್ಮಡಿಸೆ ನಗು ।
ತುಚ್ಚರಿಸಿದಂ ವಿನಯಪೂರ್ವಕದೊಳರಸ ಕೇಳಾ ರಾಘವಾನುಜಂಗೆ ॥ ೫೪ ॥

ಧುರದೊಳ್ ಕಿರೀಟ ಕವಚದ ಪೊರೆಯಿದೇಕೆಂದು ।
ಪರಿಹರಿಸಿದುಪಕಾರಕಪಕಾರಮಂ ಮಾಡೆ ।
ನುರುಸೈನ್ಯಭಾರಮಂ ನಿನಗೆ ಬಿಡಿಸುವೆನೀಗ ನೋಡಾದೊಡೆನುತೆ ಕುಶನು ॥
ವರವಹ್ನಿಸೂಕ್ತದೊಳಥರ್ವಮಂತ್ರದ ಪುನ ।
ಶ್ಚರಣೆಯಿಂದನಲಾಸ್ತ್ರಮಂ ಪೂಡಿ ತೆಗೆದಿಸ ।
ಲ್ಕುರಿದುದು ಚತುರ್ಬಲವಕಾಲದೊಳ್ ಪುರಹರಂ ಪಣೆಗಣ್ದೆರೆದನೆನಲ್ಕೆ ॥ ೫೫ ॥

ಬಲಮೆಲ್ಲಮಂ ಸುಡುವ ಪಾವಕ ಜ್ವಾಲೆಯಂ ।
ಕಲಿಲಕ್ಷ್ಮಣಂ ಕಂಡು ವರುಣಾಸ್ತ್ರದಿಂದದಂ ।
ನಿಲಿಸಲ್ಕೆ ಬಾಲಕಂ ಮತ್ತೆ ನಸುನಗುತೆ ವಾಯವ್ಯಮಾರ್ಗಣವನೆಸಲು ॥
ಕುಲಶೈಲಮಂ ಕಿತ್ತು ಬಿಸುಡುವಂದದ ಗಾಳಿ ।
ಸಲೆ ಬಡಿದು ಪಡೆಗಳಂ ಕೆಡಹುತಿರೆ ನಡೆತಂದು ।
ಸೆಲವುಗೊಂಡೂರ್ಮಿಳಾಕಾಂತನಂ ಪೆರಗಿಕ್ಕಿ ಕಾಲಜಿತುವಿದಿರಾದನು ॥ ೫೬ ॥

ಭುಜಬಲಕೆ ಪಾಡಲ್ಲ ತರಳನೆಂದುಳುಹಿದೊಡೆ ।
ವಿಜಯನಾದಪೆ ಬೇಡ ಹೋಗೆಲವೊ ಕಾರುಣ್ಯ ॥
ರುಜುವಲ್ಲ ತಾನೆನುತ ಕಾಲಜಿತುವೆಚ್ಚೊಡಾತನ ಬಾಣಮಂ ಖಂಡಿಸಿ ॥
ಅಜಗಳಸ್ತನದಂತೆಸೆವ ನಿನ್ನ ಪೌರುಷಂ ।
ನಿಜವಾದೊಡಾಂ ಸೈರಿಸುವೆನಲ್ಲದಿದಿರ್ದೊಡಾ ।
ರಜದಿಂದೆ ಪುಸಿವೇಳ್ದ ನಾಲಗೆಯನರಿವೆನೆಂದಾಕುಶಂ ಕೋಲ್ಗರೆದನು ॥೫೭॥

ಎಸುಗೆಯೆಂತುಟೊ ಕುಶನ ಕಣೆ ರಣದೊಳಾದುರ್ಜನ ।
ರ್ಜಿಸುವ ನಾಲಗೆಯ ನರಿದುದು ಬಳಿಕ ಮೌನದಿಂ ।
ಮಸಗಿ ರೋಷದೊಳುಬ್ಬಿ ಕಾಲಜಿತುವೆಚ್ಚೊಡಾ ಜಾನಕಿಯ ಸೂನು ನಗುತೆ ।
ನಿಶಿತಾಸ್ತ್ರದಿಂದೆ ಕೈಕಾಲ್ ತಲೆಗಳಂ ಕೂಡೆ ।
ಕುಸುರಿದರಿಯಲ್ ಕಂಡು ಖತಿಯಿಂದೆ ಲಕ್ಷ್ಮಣಂ ।
ಮುಸುಕಿದಿಂ ಕೋಲ್ಗಳಂ ಬಾಲಕನಮೇರೆ ಮೂಲೋಕದಾಲೋಕಮುಡಗೆ ॥೫೮॥

ವೀರಲಕ್ಷ್ಮಣನಿಸುವ ಕೂರಂಬನೆಲ್ಲಮಂ ।
ವಾರುವಂ ನಾಲ್ಕುಮಂ ತೇರಂ ಸುಕೇತುವಂ ।
ನಾರಿಯಂ ಚಾಪ ತೂಣೀರಂಗಳಂ ಕೆಲದ ಚಾರರಂ ಸಾರಥಿಯನು ॥
ಚಾರು ಕವಚವನೆಚ್ಚು ಧಾರಿಣಿಗೆ ಕೆಡಹಲ್ಕೆ ।
ಶೋರಗದೆಗೊಂಡೂರ್ಮಿಳಾರಮಣ ನೈತರಲ್ ।
ಧೀರನಹ ಸೀತಾಕುಮಾರಕಂ ಸಾಯಕದ ಸಾರದಿಂ ಪುಡಿಗೈದನು ॥ ೫೯

ಚರ್ಮಖಡ್ಗಂಗಳಿಂ ವಿವಿಧಾಯುಧಂಗಳಿಂ ।
ದೂರ್ಮಿಳಾಕಾಂತನೊದಗಿದೊಡನಿತನೆಲ್ಲಮಂ ।
ನಿರ್ಮಲಾಸ್ತ್ರಂಗಳಿಂ ಕತ್ತರಿಸಿ ವಾಲ್ಮೀಕಿ ಮುನಿವರಂ ತನಗೆ ಕೊಟ್ಟ ॥
ಮರ್ಮಭೇದಿಗಳಾದುವೈದಂಬುಗಳ ನಿಸಲ್ ।
ಸ್ವರ್ಮಣಿ ಧರಾತಳಕೆ ನಭದಿಂದುರುಳ್ವಂತೆ ।
ಪೆರ್ಮರವೆಗೊಂಡು ಬೀಳ್ವನಿತರೊಳ್ ತೋಳ್ವೊಯ್ದು ಕುಶನಾರ್ದು ಬೊಬ್ಬಿರಿದನು ॥

ಆ ಘೋರತರದ ಸಂಗ್ರಾಮದೊಳ್ ತಾನೆಚ್ಚ ।
ಮೋಘಮಾಗಿರ್ದ ಮುನಿ ಕೊಟ್ಟ ದಿವ್ಯಾಸ್ತ್ರದ ಮ ।
ಹಾಘಾತಿಯಿಂದೆ ಕಡುನೊಂದು ಮೂರ್ಛಿತನಾಗಿ ಬದ್ದು ಭೂಳತದಮೇಲೆ ॥
ರಾಘವಾನುಜನಿರೆ ಕುಶಂ ಬಳಿಕ ನಿಜಹಸ್ತ ।
ಲಾಘವದೊಳಲ್ಲಿರ್ದರಂ ಸದೆದು ಲವನಂ ಬ ।
ಲೌಘವೊತ್ತಾಯದಿಂ ಮುತ್ತಿಕೊಂಡಿರ್ದ ಕೋಲಾಹಲವನಾಲಿಸಿದನು ॥ ೬೧ ॥

ಶರ ಚಾಪ ಚರ್ಮ ಖಡ್ಗಂಗಳಂ ಕೊಂಡು ಕುಶ ।
ನಿರದೆ ಲವನಿದ್ದೆಡೆಗೆ ಚಿಗಿದನಲ್ಲಿಂ ಖಗೇ ।
ಶ್ವರನಂತೆರಗಿದನದನೇವೇಳ್ವೆ ನಳಿದುಳಿದ ರಿಪುವಾಹಿನೀ ಧೃಮಿಗಳು ॥
ಪರೆದುವೆಣ್ದೆಸೆಗಳ್ಗೆ ಸೀತಾಕುಮಾರಕರ್ ।
ತಿರುಗಿದರ್ ತುರಗಮಿಹ ಬನಕಾಗಿ ದೇವಪುರ ।
ದರಸ ಲಕ್ಷ್ಮೀಶ ರಾಘವನಲ್ಲಿಗೈದಿದರ್ ದೂತರತಿವೇಗದಿಂದೆ ॥ ೬೨ ॥

ಇಪ್ಪತ್ತೊಂದನೆಯ ಸಂಧಿ

ಸೂಚನೆ ॥ ತನಯುರೊಳ್ ಕಾದಿ ಮೂರ್ಛಿತನಾದ ರಾಮನಂ।
ಮುನಿವುಳಿ ವಾಲ್ಮೀಕಿ ಬಂದು ಸಂತೈಸಲ್ಕೆ।
ವಿನುತಾಶ್ವ ಮೇಧಮಂ ಪೂರೈಸಿ ಸೀತೆಸಹಿತವನಿಯಂ ಪಾಲಿಸಿದನು ॥

ಅರಸ ಕೇಳ್ ಜಾಹ್ನವಿಯ ತೀರದೊಳ್ ದೀಕ್ಷೆಗೊಂ।
ಡಿರುತಿರ್ದ ರಾಘವಂ ಚಿತ್ತದನುತಾಪದಿಂ।
ಭರತನಂ ಕರೆದು ಶತ್ರುಘ್ನನೇಗೈದನೆಂಬುದನುಸಿರ್ವರಾರುಮೆನಗೆ॥
ತರಳರಂ ಪಿಡಿವಪನೊ ಕೊಂದಪನೊ ಲಕ್ಷ್ಮಣಂ।
ಧುರದೊಳ್ ಬಳಲ್ದಪನೊ ಗೆಲ್ದಪನೊ ಸೋಲ್ದಪನೊ।
ತುರಗಮಂ ಬಿಡಿಸಿ ತಂದಪನೊ ನಾನರಿಯೆನೆಂದಸುರಾರಿ ಚಿಂತಿಸಿದನು ॥ ೧ ॥

ಕನಸಿನೊಳ್ ಸೋಲ್ದುದಿಲ್ಲಾರ್ಗೆಯುಂ ಲಕ್ಷ್ಮಣಂ।
ವನಚಾರಿ ಬಾಲಕರ ಪಾಡಾವುದೀಗ ಮುಳಿ।
ದನುವರದೊಳಿರ್ವರಂ ಘಾತಿಸದೆ ಸಮ್ಮೋಹನಾಸ್ತ್ರದೊಳ್ ಮರವೆಗೊಳಿಸಿ॥
ತನಗೆ ತಂದೊಪ್ಪಿಸುವ ತೆರದೊಳತಿಬೇಗ ಚರರ।
ನನುಜನೆಡೆಗಟ್ಟೆಂದು ರಾಘವಂ ಭರತನೊಡ
ನೆನಲವಂ ದೂತರಂ ಕಳುಹಲವರರಿದು ಬಂದವನಿಪತಿಗಿಂತೆಂದರು ॥ ೨ ॥

ದೇವ ಬಿಡು ದೀಕ್ಷೆಯಂ ಕಾದು ನಡೆ ಕುಶನೊಳ್ ಮ।
ಹಾವೀರನಾತನಾ ಲವನಿಂದೆ ಬಲ್ಲಿದಂ।
ಜೀವಸಂದೇಹಮಾಗಿರ್ಪುದೈ ಶತ್ರುಘ್ನ ಲಕ್ಷ್ಮಣರ್ಗ ಖಿಳಸೇನೆ॥
ಭಾವಿಸೆ ತವಾಕೃತಿಯ ಬಾಲಕರ ದೆಸೆಯಿಂದೆ॥
ಗೋವರ್ಧನಂಗೆ ವೊಲೆಗೊಟ್ಟ ಪೂತನಿವೊಲಾ।
ಯ್ತೀವೆಳ್ವೆಪೆಂದು ದೂತರ್ ನುಡಿಯೆ ರಾಘವಂ ಕೇಳಿ ಮೂರ್ಛಿತನಾದನು ॥ ೩ ॥

ಬಳಿಕ ಶೈತ್ಯೋಪಚಾರಂಗಳಿಂ ಭರತನಿನ।
ಕುಲಸಾರ್ವಭೌಮನಂ ಸಂತೈಸುತಿರೆ ಮೂರ್ಛೆ।
ತಿಳಿದೆದ್ದು ಲಕ್ಷ್ಮಣನದಾವಡೆಯೊಳೆನ್ನ ಸೊಲ್ಲಲಿಸುವನದಾವೆಡೆಯೊಳು॥
ಹಳುವಿನೊಳ್ ತನಗಾಗಿ ನವೆದನುಜನಾವೆಡೆಯೊ।
ಳಳಿದನೇ ಸೌಮಿತ್ರಿ ಹಾ ತಮ್ಮ ಹಾ ಯೆನುತೆ।
ಹಳವಳಿಸಿ ಬಿಸುಸುಯ್ದುಳಲ್ದು ಮರುಗಿದನಂದು ರಾಘವಂ ಶೋಕದಿಂದೆ ॥ ೪ ॥

ಜಾನಕಿಯನಂದು ಪೊರಮಡಿಸಿದನ್ಯಾಯದಿಂ ।
ಭಾನುಕುಲ ಸಂಭವಂಗಾದವಿಂತೀತೆರದ ।
ಹಾನಿಯಿದು ಸೌಮಿತ್ರಿ ಶತ್ರುಘ್ನರಂ ಜಯಿಸುವಗ್ಗಳೆಯರಾರ್ ಜಗದೊಳು ॥
ಕಾನನದ ಮುನಿಸುತರ್ಗದಚತ್ತಣದು ರಾಮು ।
ಸೂನುಗಳ್ ತಪ್ಪದಾಕೃತಿಗಳಂ ನೋಡಲನು ।
ಮಾನಮೇಕೆಂದು ಮೊರೆಯಿಟ್ಟುದೆಲ್ಲಾ ಜನಂ ರಾಘವಂ ಕೇಳುವಂತೆ ॥ ೫ ॥

ಸೀತಾವದನಚಿಹ್ನಮೆನ್ನಂಗದಾಕಾರ ।
ಮಾ ತಾಪಸಾರ್ಭಕರೊಳಿರ್ದಪುದು ಗಡ ಪಡೆದ ।
ಮಾತೆಯೆಲ್ಲಿರ್ದಪಳೊ ಕುದುರೆಯಂ ಕಟ್ಟುವದಟೆತ್ತಣದಿವರ್ಗೆಂಬುದ ॥
ದೂತರಂ ಕರೆ ಕೇಳ್ವೆವಿನ್ನೊಮ್ಮೆ ಶಿಶುಗಳಂ ।
ಘಾತಿಸದೆ ದಯೆಗೈದು ತಾನೇರ್ವಡೆದೆನೊ ಮೇ ।
ಣಾತರಳರತಿಬಲರೋ ಸೌಮಿತ್ರಿ ಬಿದ್ದನೇಕೆಂದು ರಘುಪತಿ ಸುಯ್ದನು ॥ ೬ ॥

ಇಂತಿಂತಳಲ್ದಾಗ ಬಿಸುಸುಯ್ದೊಡನೆ ರಾಘ ।
ವಂ ತನ್ನ ಸಹಜರ ಗುಣಂಗಳಂ ನೆನೆನೆನೆದು ।
ಚಿಂತಿಸುತಿರೆ ಮತ್ತೆ ಕುಶನ ಶರಘಾತಿಯಿಂದುರೆ ನೊಂದು ಭೀತಿಗೊಂಡು ॥
ಸಂತಪ್ತರಾಗಿ ಪರಿತಂದು ಲಕ್ಷ್ಮಣನೊಡಲೊ ।
ಳಂತರಿಸಲರಿಯುದಸು ಮಡಿದುದು ಸಕಲಸೈನ್ಯ ।
ಮೆಂತಿಹನೊ ಶತ್ರುಘ್ನನೇಕೆ ದೀಕ್ಷೆಯಿದೆಂದು ಚರರೈದೆ ವೊರೆಯಿಟ್ಟರು ॥ ೭ ॥

ಮೊರೆವೇಳ್ದ ದೂತರಂ ಗರ್ಜಿಸುತೆ ರಾಘವಂ ।
ಗೆರಗಿ ಕೈಮುಗಿದು ಭಯವಿಹ್ವಲರ್ ಚಾರರಿವ ।
ರರಿದಪರೆ ಸೌಮಿತ್ರಿ ಶತ್ರುಘ್ನರಾಹವಶ್ರಮದಿಂದೆ ತನು ಮನವನು ॥
ಮರೆದರಲ್ಲದೆ ಮರಣವೆತ್ತಣದು ಸಾಕಿನ್ನು ।
ಬರಿದೆ ಚಿಂತಿಸಬೇಡ ನಾಂ ಪೋಗಿ ಬಾಲಕರ ।
ಮರುಕಮಂ ಬಿಡಿಸಿ ತಹೆನಶ್ವಮಂ ಕಳುಹೆನ್ನನೆಂದು ಭರತಂ ನುಡಿದನು ॥ ೮ ॥

ಬಳಿಕ ಜಾಂಬವ ಸುಷೇಣಾಂಗದ ಹನೂಮಂತ ।
ನಳ ನೀಲ ಕುಮುದ ಶತಬಲಿ ಗವಯರೆಂಬ ಕಪಿ ।
ಗಳ ಪಡೆಯನೆಲ್ಲಮಂ ಬಲದೊಳುಳಿದಖಿಳ ಚತುರಂಗಮಂ ಕೂಡಿಕೊಟ್ಟು ॥
ಕಳುಹಲನಕುಲ ಸಾರ್ವಭೌಮನಂ ಬೀಳ್ಕೊಂಡು ।
ತಳೆದು ಸುರನದಿಯ ತೀರದೊಳಾಂಜನೇಯನಂ ।
ಕೊಳಗುಳದ ವೃತ್ತಾಂತಮಂ ಕಂಡು ಬಂದೊರೆವುದೆಂದು ಭರತಂ ಪೇಳ್ದನು ॥ ೯ ॥

ಧೀಂಕಿಟ್ಟನಲ್ಲಿಂದೆ ಕಲಿಹನುಮ ನಾರಣದೊ।
ಳಂಕಿತದ ಕುಶನ ಬಾಣಂಗಳಿಂ ಮಡಿದ ಬಲ।
ಸಂಕುಲವನಿಕ್ಷ್ವಾಕುನಂದನಂ ನಿನ್ನ ಸುತೆ ಸೀತೆಯುಂ ಬಿಟ್ಟನೆಂದು॥
ಕೊಂಕದಿರು ಸೈರಿಸುವುದೆಂದೈದೆ ಭೂದೇವಿ।
ಯಂ ಕೋಪಮಂ ಮಾಣಿಸಲ್ ಬೇಡಿಕೊಳ್ವ ತರ।
ದಿಂ ಕೆಡೆದು ಮೈಮರೆದು ಮಲಗಿರ್ದ ಸೌಮಿತ್ರಿ ಶತ್ರುಘ್ನರಂ ಕಂಡನು॥ ೧೦॥

ಕಂಡು ಕಪಿವೀರನವರೀರ್ವರಂ ತೆಗೆದೆತ್ತಿ।
ಕೊಂಡು ಭರತನ ಪೊರೆಗೆ ತರಲವಂ ಬಳಿಕ ಮಣಿ।
ಮಂಡಿತ ವರೂಥದೊಳವರ್ಗಳಂ ಪಟ್ಟಿರಿಸಿ ಹಯಮಂ ಕದಳಿಗೆ ಕಟ್ಟಿ॥
ಚಂಡ ಶರ ಚಾಪ ಪಾಣಿಗಳಾಗಿ ತೊಳಗುವು।
ದ್ದಂಡ ಕುಶ ಲವರಿರ್ವರಿರ್ಪುದಂ ಕೇಳ್ದು ಕೋ।
ದಂಡಮಂ ಜೇಗೈದು ಪಡೆವೆರಸಿ ನೂಕಿದಂ ಮುಳಿದು ಬಾಲಕರ ಮೇಲೆ॥ ೧೧॥

ಅಣ್ಣತಮ್ಮಂದಿರೀರ್ವರು ಮರಿಚತುರ್ಬಲಂ।
ಪಣ್ಣಿ ಬಗೆ ಕಂಡು ಬಿಲ್ಗೊಂಡೆದ್ದು ಕೋಪದಿಂ।
ದಣ್ಣಿಕಲ್ಲಾಡಿದರ್ ಪಟುಭಟರ ತಲೆಗಳಂ ಬಾಣಪ್ರಯೋಗದಿಂದೆ॥
ಬಣ್ಣಿಸಲ್ ಪವಣೆ ಯೋಜನದಗಲಮೆಲ್ಲಿಯುಂ।
ಕಣ್ಣೆವೆಯುಲುಗುವನಿತರೊಳ್ ಸರಲ್ಮಯವಾಗೆ।
ಚಣ್ಣರಂಗದ ಮೇಲೆ ಮೆಚ್ಚಿ ಪೂಮಳೆಗಳಂ ಕರೆದಮರರ್ ಪೊಗಳ್ದು। ॥ ೧೨॥

ಚಾಪ ಟಂಕಾರಂ ಜಗತ್ತ್ರಯದೊಳೆಲ್ಲಿಯುಂ।
ವ್ಯಾಪಿಸಲ್ ಕಿವುಡಾದುವಷ್ಟದಿಗ್ದಂತಿಗ।
ಳ್ ಭೂಪಯೋಧೆಗಳೊಡೆವೆರಸಿದುವು ಕುಲಾದ್ರಿಗಳ್ ಜರಿದು ಮಹಿ ಕಂಪಿಸಿದನು॥
ತಾಪದಿಂ ಪೊಡೆಮರಳ್ದಂ ಕೂರ್ಮನಾ ರವಿಯು।
ರೂಪಡಗಿತೆನುವ ಬಾಣಾಂಧಕಾರದೊಳಂದು।
ದೀಪಮಿಲ್ಲದ ಮನೆವೋಲಾದುದು ರಣಾಂಗಣಂ ಕಾದುವರದೆಂತೊ ಭಟರು ॥೧೩॥

ಕೋಲ್ಗರೆಯಲಾನೆಗಳ ಸುಂಡಿಲ್ಗಳುಂ ಹಯದ।
ಕಾಲ್ಗಳುಂ ರಾವುತರ ಜೋದರ ಶಿರಂಗಳುಂ।
ಮೇಲ್ಗೈಯ ರಥಿಕರ ಧನುರ್ದಂಡಮಂ ಕೈದುವಿಡಿದ ಪಾಣಿಗಳುಮಿಳೆಗೆ॥
ಸಾಲ್ಗೊಂಡುರುಳ್ದುವೊದಗಿದ ಕಪಿಗಳಂಗದೊಳ್।
ಕೀಲ್ಗಳಂ ಬಲಿದಂತೆ ನಾಂಟಿದುವು ಪರಬಲಂ।
ಸೋಲ್ಗುಮಲ್ಲದೆ ಕುಶ ಲವರ ಮುಂದೆ ಗೆಲ್ವ ಭಟರಂ ಕಾಣೆನಾಹವದೊಳು॥ ೧೪॥

ಸೇನೆಯಂ ನಿಮಿಷದೊಳ್ ತಡೆಗಡಿಯೆ ಕಂಡು ಪವ।
ಮಾನಜಂ ನಡೆತಂದು ಬಾಲಕರ ವಿಗ್ರಹಂ।
ಭಾನುಕುಲತಿಲಕನಾಕೃತಿವೊಲಿದೆ ನೋಡೆಂದು·ಭರತಂಗೆ ತೋರಿಸಲ್ಕೆ॥
ಸಾನುರಾಗದೊಳತುಲ ಚಾಪಮಂ ಪಿಡಿದು ರಾ।
ಮಾನುಜಂ ಕುಶನ ಸನ್ಮುಖಕ್ಕೈದಿ ನುಡಿಸಿದಂ।
ಸೂನುಗಳ ಮೊಗಂ ನಿರೀಕ್ಷಿಸಿ ಘನಸ್ನೇಹದಿಂದೆ ಪುಳಕಂ ಪೊಣ್ಮಲು ॥ ೧೫ ॥

ವತ್ಸ ನೀನಾರವಂ ನಿನಗೀತನೇನಹಂ।
ಮತ್ಸಹೋದರರನುರೆ ಘಾತಿಸಿದಿರೆಮ್ಮೆಯ ಮ।
ಹತ್ಸೈನ್ಯಮಂ ಕೊಂದಿರಿನ್ನಾದೊಡಂ ಕುದುರೆಯಂ ಬಿಟ್ಟು ಪೋಗಿ ಬರಿದೆ॥
ಮತ್ಸರಿಸಬೇಡ ನಿಮ್ಮಂ ಪಡೆದ ತಾಯ ಬಳಿ।
ಗುತ್ಸವದೊಳೈದಿ ಸುಖಮಿಹುದೆಂದು ಭರತನೆನ।
ಲುತ್ಸಕದೊಳಾ ಕುಶಂ ನಸುನಗುತೆ ನುಡಿದನಿಂತಾ ರಾಘವಾನುಜಂಗೆ ॥ ೧೬ ॥

ಕಟ್ಟಿದ ತುರಂಗಮಂ ಬಿಡುವನಲ್ಲೀತನೊಡ।
ಹುಟ್ಟಿದಂ ತನಗೆ ವಾಲ್ಮೀಕಿಮುನಿವರನವರ್।
ನೆಟ್ಟನೆ ರಣಾಗ್ರದೊಳ್ ನಿನ್ನನುಂ ನಿನ್ನನುಜರಂತೆ ಘಾತಿಸಿದ ಬಳಿಕ॥
ಮುಟ್ಟಿದುತ್ಸವದಿಂದ ತಾಯ ಬಳಿಗೈದಿ ಪೊಡ।
ಮಟ್ಟಲ್ಲಿ ಸುಖದೊಳಿರ್ದಪೆವೆಂದು ಕಣೆಗಳಂ।
ತೊಟ್ಟು ತಾನೀಗ ಕುಶನರಿದುಕೊಳ್ಳೆನುತೆಚ್ಚನಾ ಭರತನಂ ಧುರದೊಳು ॥ ೧೭ ॥

ಭರತನಂ ಗಣಿಸದಿನುತಿರೆ ಕಂಡು ಮತ್ತೆ ಕರಿ।
ತುರಗ ರಥ ಪಾಯದಳ ಮೊತ್ತಿದುದು ಕೂಡೆ ವಾ।
ನರ ಸಿಂಗಳೀಕ ಮುಸು ಕರಡಿಯ ಬಲಂ ಮುತ್ತಿದುದು ಬಳಿಕ ನಸುಗುತೆ ಕುಶನು॥
ಕರೆದು ಕುದುರೆಯ ಬಳಿಗೆ ತಮ್ಮನಂ ಕಳುಹಿ ಬ।
ಲ್ಪಿರುವಿಂದುಗಳ್ಬಿಡಂ ಕಣೆಗಳಂ ವೈರಿ ಮೋ।
ಹರದ ತಲೆವಣಿಗಳಂ ಪಗೆಗಳೆರ್ದೆವಣಿಗಳಂ ರವಿಗೆಣೆಗಳಂ ಕ್ಷಣದೊಳು ॥ ೧೮ ॥

ಹತ್ತು ಭರತನ ಮೇಲೆ ನಳನ ಮೇಲೆಂಟು ಮೂ।
ವತ್ತು ಹನುಮನಮೇಲೆ ಜಾಂಬವನಮೇಲೆ ನಾ।
ಲ್ವತ್ತಂಗದನಮೇಲೆ ತೊಂಬತ್ತು ನೀಲ ಕುಮುದರ ಮೇಲೆ ನೂರುನೂರು॥
ಉತ್ತುಂಗ ಗವಯ ಶತಬಲಿ ಸುಷೇಣರಮೇಲೆ।
ಹತ್ತುಹತ್ತಂಬೊಡಲ್ಬುಗಲೆಚ್ಚನನಿಬರಂ।
ಮತ್ತೆ ಘಾತಿಸಿ ಕೂಡೆ ರಾಮಾನುಜನ ಮೇಲೆ ಕೂರ್ಗಣೆಗಳಂ ಕರೆದನು ॥ ೧೯ ॥

ಎಲ್ಲಿ ಕುಶನೆಂಬು ಸೋಂಕಿದುವಲ್ಲಿ ಮೂರ್ಛೆ ವ್ಯಾತಿ।
ಯಲ್ಲದುಳಿವಿಲ್ಲ ಪಡೆಯೆಲ್ಲಮಂ ತಲ್ಲಣಿಸಿ।
ಚೆಲ್ಲಿದುದು ದೆಸೆದೆಸೆಗೆ ಬಲ್ಲದ ಕಪೀಶ್ವರರ್ ಕೈಗೆಟ್ಟು ಮೈಮರೆದರು ॥
ನಿಲ್ಲದೋಡಿತು ದೊದ್ದೆ ಘಲ್ಲಣಿಯನಾಂತು ನಿಂ।
ದಲ್ಲಿ ಸಾರಥಿ ಕುದುರೆಗಳ್ ಮಡಿದು ತೇರ್ಮುರಿದು।
ಬಿಲ್ಲುಡಿದು ಭರತನಂಗೋಪಾಂಗದಲ್ಲಿ ನಾಂಟಿದುವು ಪೊಸ ಮಸೆಗಣೆಗಳು ॥೨೦॥

ಜಗದೊಳ್ ಕುಶಾಸ್ತ್ರ ನಿಕರಕ್ಕೆ ಮೈಗೊಟ್ಟವಂ।
ಮಿಗೆ ಪತಿತನಾಗದಿರ್ದಪನೆ ಪೇಳೆಂಬಿನಂ।
ವಿಗತ ಚೇತನನಾಗಿ ಭರತಂ ಮಹೀತಳಕ್ಕೆ ಬಿದ್ದು ಮೂರ್ಛೆಯೊಳಿರಲ್ಕೆ ॥
ವಿಗಡ ಹನುಮಂ ಕಂಡು ಕಿತ್ತು ಪೆರ್ದಟ್ಟವಂ।
ನೆಗಪಿ ತಂದರ್ಭಕನ ಮೇಲಿಡಲ್ಕಣುವೆಂದು।
ಬಗೆಯದೆ ವಿಭಾಡಿಸಿದನಾತನಂ ಕಣೆಯೆಚ್ಚು ನಗುತೆ ಜಾನಕಿಯ ಸೂನು ॥ ೨೧॥

ಕಡೆಯ ಮಾತೇನಖಿಳ ಸೇನೆಯಂ ಭರತನಂ।
ಕೆಡಹಿ ಕುಶನಲ್ಲಿಂದೆ ತುರಗಮಿರ್ದೆಡೆಗೆ ಬಂ।
ದೊಡಹುಟ್ಟಿದಂ ವೆರಸಿ ನಿಲ್ವಿನಂ ದೂತರೀತೆರನಂ ರಘೂದ್ವಹಂಗೆ ॥
ಕಡುವೇಗದಿಂದೆ ಪೋಗಿ ಬಿನ್ನೈಸೆ ಕೇಳ್ದಳ।
ಲ್ವಿಡಿದು ಪರಿತಾಪದಿಂದುರೆನೊಂದು ವಿಸ್ಮಯಂ।
ಬಡುತೆದ್ದು ಸುಗ್ರೀವ ವರವಿಭೀಷಣರೆಡಬಲದೊಳೈದೆ ಪೊರಮಟ್ಟನು ॥೨೨॥

ಬಂದಂ ರಥಾರೂಢನಾಗಿ ರಣರಂಗದೊಳ್।
ನಿಂದು ಮೈಮರೆದೊರಗಿದನುಜರಂ ಮಡಿದ ಬಲ।
ವೃಂದಮಂ ಕುದುರೆಯಂ ಕಟ್ಟಿಕೊಂಡಿದಿರಾಗಿ ಬಿಲ್ವಿಡಿದು ಕಾಳೆಗಕ್ಕೆ॥
ನಿಂದಿರ್ದ ಯಮಳರಂ ಕಂಡು ಬೆರಗಾಗಿ ರಘು।
ನಂದನಂ ವಿನಯದಿಂ ತಾನೆ ಬೆಸಗೊಂಡನಿಂ।
ತೆಂದು ಘನ ಗಂಭೀರವಾಕ್ಯದಿಂದತಿಮನೋಹರವಾದ ಸುಸ್ವರದೊಳು ॥ ೨೩ ॥

ಎಲೆ ಪಸುಳೆಗಳಿರ ನಿಮಗೀ ಧನುರ್ವೇದಮಂ।
ಕಲಿಸಿದವನಾವನಾವುದು ನಿವಾಸಸ್ಥಳಂ।
ಸಲಹಿದವನಾವನಾವಂ ತಂದೆ ತಾಯಾವಳಶ್ವಮಂ ಕಟ್ಟುವಿನಿತು ॥
ಚಲಮಿದೇತಕೆ ನಮ್ಮ ಸೇನೆಯಂ ಜಯಿಸುವೀ।
ಬಲಮೇತರಿಂದಾದುದೆಂದು ನಯದಿಂದೆ ರಘು।
ಕುಲ ಲಲಾಮಂ ಕೇಳ್ದೊಡಾಕುಶಂ ನಸುನಗುತೆ ಮಾರುತ್ತರಂಗೊಟ್ಟನು ॥ ೨೪ ॥

ರಾಜೇಂದ್ರ ನೀನೆಮ್ಮೊಳಾಹವಕೆ ಬಿಲ್ಗೊಂಡು ।
ವಾಜಿಯಂ ಬಿಡಿಸಿಕೊಳ್ಳಲ್ಲದೊಡೆ ಮರುಳಪ್ಪ॥
ಯೋಜಕದ ಮಾತಿದೇತಕೆ ನಿರುಪಮ ಕ್ಷಾತ್ರಪೌರುಷವನುಳಿದು ಬರಿದೆ ॥
ಸೋಜಿಗದೊಳೆಮ್ಮ ಜನನಸ್ಥಿತಿಗಳಂ ಕೇಳ್ದು ।
ಡೀಜಗಂ ಮೆಚ್ಚದೆಚ್ಚಾಡಿ ನೋಡೆನುತೆ ಕುಶ ।
ನಾಜಲಜ ಮಿತ್ರಕುಲ ತಿಲಕನಂ ಬಗೆಯದೆ ನುಡಿದೊಡಾತನಿಂತೆಂದನು ॥ ೨೫ ॥

ಶಿಶುಗಳಾಗಿಹ ನಿಮ್ಮೊಳೆನಗೆ ಕಾಳಗವೆ ಪರ।
ವಶರಾಗಿ ಬಿದ್ದನುಜರಂ ಕಂಡು ಖತಿಯೊಳಾಂ।
ವಿಶಿಖಮಂ ತೊಡುವೆನೆಂದೊಡೆ ಮನವೊಡಂಬಡದು ನಿಮ್ಮ ಜನನಸ್ಥಿತಿಗಳ॥
ವಿಶದ ವಿಸ್ತರವ ನೊರೆದೊಡೆ ನೋಡಿಕೊಳ್ವೆನೆನೆ।
ಕುಶನೆಂದನಿಂತು ಲೋಕಾನಂದಕರವಾದ।
ನಿಶಿತವಾಕ್ಯಂಗಳಂ ಜನಮೇಜಯ ಕ್ಷಿತಿಪ ಕೇಳಾ ರಘೂದ್ವಹಂಗೆ ॥ ೨೬ ॥

ಈ ತಪೋವನದೊಳೆಮ್ಮಿರ್ವರನವಳಿಯಾಗಿ।
ಸೀತೆಯೊರ್ವಳೆ ಪಡೆದಳನುದಿನದೊಳಾರೈದು।
ಜಾತೋಪನಯನಾದಿ ಕರ್ಮಂಗಳಂ ಮಾಡಿ ನಿಗಮಾಗಮ ಸ್ಮೃತಿಗಳ॥
ವ್ರಾತಮಂ ಬರಿಸಿ ಕಾರ್ಮುಕವೇದಮಂ ಕಲಿಸಿ।
ನೀತಿಗಳನರುಹಿ ರಾಮಾಯಣವನೋದಿಸಿ ಮ।
ಹಾತಿಬಲರೆನಿಸಿದಂ ವಾಲ್ಮೀಕಿ ಮುನಿಪನೆಂದೊರೆದು ಮಗುಳಿಂತೆಂದನು ॥ ೨೭ ॥

ರಾಮಚಾರಿತ್ರ ಪಠನಾಭ್ಯಾಸ ಯೋಗದಿಂ।
ಕ್ಷೇಮಂ ಸುಪುಷ್ಟಿ ನಿಶ್ಚಲಮತಿ ನಿರಾಲಸ್ಯ ।
ಮೀಮಹಾಸೈನ್ಯಮಂ ಗೆಲ್ವದಟು ತಮಗಾದುದೆಂದು ಕುಶನುಸಿರೆ ಕೇಳ್ದು ॥
ಪ್ರೇಮದಿಂ ತನ್ನ ಸುತರೆಂದರಿದು ಸೀತೆಯಂ।
ಬೀಮಾತು ಕಿವಿದಾಗಿದೊಡೆ ಬಿದ್ದು ಮೂರ್ಛೆವೆ।
ತ್ತಾ ಮಹೀಶಂ ಕೂಡೆ ಚೇತನಂ ಬಡೆದು ಸುಗ್ರೀವನೊಡನಿಂತೆಂದನು ॥ ೨೮ ॥

ಕಪಿರಾಜ ಕೇಳ್ಕೆ ಕುಮಾರಕರ ನುಡಿಗಳಂ।
ನಿಪುಣರಿವರಾವ ಪುರುಷಂಗೆ ಸಂಭವಿಸಿದರ್।
ವಿಪಿನಚಾರಿಗಳ ನಿನ್ನೊಮ್ಮೆ ನೀಂ ಬೆಸಗೊಳೆನೆ ನಸುನಗುತೆ ಸುಗ್ರೀವನು॥
ತಪನಕುಲ ಜಾತರ್ ಪುರಾಣ ಪುರುಷೋತ್ತಮನ।
ವಿಪುಲ ಸಂತತಿಗಳಿವರೀಕ್ಷಿಪೊಡೆ ದೇವ ನಿ।
ನ್ನಪ ರೂಪಮಾಗಿರ್ಪುದಲ್ಲದೊಡವರ್ಗಿನಿತು ಸತ್ವಮೆತ್ತಣದೆಂದನು ॥ ೨೯ ॥

ಸುಗ್ರೀವ ರಾಘವರ್ ಮಾತಾಡುವನಿತರೊಳ್ ।
ನಿಗ್ರಹಿಸಿಕೊಂಡಿರ್ದ ಕುದುರೆಯಂ ಬಿಡುವೊಡ ।
ಭ್ಯಗ್ರಮುಳ್ಳವನಾಗಿ ನೀಲನೈತರೆ ಕುಶಂ ಕೋಪದಿಂದಾ ಕಪಿಗಳ ॥
ಅಗ್ರಣಿಯನೆಚ್ಚು ಕೆಡಪಿದೊಡವನ ರುಧಿರದಿಂ ।
ದುಗ್ರರೂಪದೊಳೆದ್ದುವಾ ನೀಲಕೋಟಿಗಳ್ ।
ವಿಗ್ರಹಕ್ಕೆ ಕಡುವಮುಳಿದು ಮರಗೊಂಬೆಬೆಟ್ಟ ಕಲ್ಗುಂಡುಗೊಂಡೆಲ್ಲೆಡೆಯೊಳು ॥ ೩೦ ॥

ನೀಲ ವಾನರಸೈನ್ಯದೊತ್ತಾಯವಂ ಕಂಡು ।
ಮೇಲೆಸೆವ ರವಿಯನಾರಾಧಿಸಿ ಕುಶಂ ಮಹಾ ।
ಸ್ಥೂಲಕಾಯದ ಕಪಿಗಳಂ ಗೆಲಲ್ಕೊಂದುವರೆ ಯೋಜನದಳತೆಯಗಲದ ॥
ಕೋಲಗಾಯದ ನೆತ್ತರೊಸರಲೀಯದವೋಲು ।
ಬಾಲಕಂ ತುಡುವೊಡಳವಡುವ ತೆರನಾದ ರಿಪು ।
ಜಾಲಕಸದಳಮಾದ ಪೂಡಲ ಕ್ಷಯವಾದ ಬಾಣಂಗಳಂ ಪಡೆದನು ॥ ೩೧ ॥

ಆ ಮಹಾಬಾಣಂಗಳಂ ಪೂಡಿ ತೆಗೆದೆಚ್ಚು ।
ಭೀಮ ವಿಕ್ರಮ ಕುಶಂ ಕೆಡಹಿದನಸಿತ ಕಪಿ ।
ಸ್ತೋಮಮಂ ಬಳಿಕುರುಳ್ಚಿದನಾದಿ ನೀಲನಂ ಸುಗ್ರೀವ ಮುಖ್ಯರಾದ ॥
ಕಾಮರೂಪದ ಸಕಲ ವಾನರ ಚಮೂಪರಂ ।
ಭೂಮಿಯೊಳ್ ಮೂರ್ಛೆಗೆಯ್ದೊರಗಿಸಿ ವಿಭೀಷಣನ ।
ಸಾಮರ್ಥ್ಯಮಂ ನಿಲಿಸಿ ಮತ್ತವನ ಬಲವಂ ಪೊರಳ್ಚಿದಂ ಸಂಗರದೊಳು ॥ ೩೨ ॥

ನರ ವಾಜಿ ದಂತಿ ಮುಸು ಕರಡಿ ಸಿಂಗಳಿಕ ವಾ ।
ನರ ದಾನವರೊಳಿಡಿದ ಸೇನೆಯೊಳ್ ನೋಡಲೊ ।
ರ್ವರುಮಿಲ್ಲದೆಲ್ಲರುಂ ಬಿದ್ದು ತಾನೇಕಾಕಿಯಪ್ಪುದುಂ ಖಾತಿಗೊಂಡು ॥
ಸರಳನರ್ಭಕರ ಮೇಲೆಚ್ಚಂ ರಘೂದ್ವಹಂ ।
ಧರೆಯೊಳೀ ಕ್ಷತ್ರಿಯರ ಮನವಾಸಿಗಳದೆಂತೊ ।
ತರಹರಿಸಬಾರದಿಹ ರಾಮಬಾಣಂಗಳೈದಿದುವು ಕಾಲಾಗ್ನಿಯಂತೆ ॥ ೩೩ ॥

ಬಚ್ಚೆವೋಗದ ರಾಮಬಾಣಂಗಳಂ ನಡುವೆ ।
ನುಚ್ಚುನೂರಾಗೆ ಕತ್ತರಿಸಿ ರಘುನಾಥನಂ ।
ಮುಚ್ಚಿದರ್ ಕಣೆಗಳಿಂ ಮತ್ತೆ ಕಾಕುತ್ಥ್ಸಂ ಕೆರಳ್ದು ಕುಶ ಲವರ ಮೇಲೆ ॥
ಎಚ್ಚೊಡಾ ಕೋಲ್ಗಳಂ ಬಾಲಕರ್ ಮಧ್ಯದೊಳ್ ।
ಕೊಚ್ಚಿ ರಾವಣ ರಿಪುವಿನಂಗಮಂ ನೋಯಿಸಿದ ।
ರಚ್ಚರಿಯ ಕಾಳೆಗಂ ತಂದೆಮಕ್ಕಳ್ಗೆ ನಡೆದುದು ಸುರರ್ ಬೆರಗಾಗಲು ॥ ೩೪ ॥

ಕಕ್ಕಸದೊಳಂದು ರಾವಣ ಕುಂಭಕರ್ಣಾದಿ।
ರಕ್ಕಸರ ತಲೆಗಳನರಿದು ತಿರುಗಿಬಹ ಕಣೆಗ।
ಳಿಕ್ಕಡಿಗಳಾಗಿ ಬಿದ್ದುವು ಧರೆಗೆ ಕೂಡೆ ದಾಲಕರಿಸುಗೆ ತನ್ನಿಸುಗೆಗೆ॥
ಮಿಕ್ಕು ಬರೆ ಜೆರಗಾಗಿ ರಾಘವಂ ಸುಮ್ಮನಿರೆ।
ಪೊಕ್ಕವಂಬುಗಳೊಡಲೊಳಾತ್ಮಜರ ಮೇಲೆ ತನ।
ಗಕ್ಕರುಂಟಿಲ್ಲೆಂಬುದಂ ನೋಳ್ಪವೆಂಬವೊಲ್ ಭೂಪ ಕೇಳ್ ಕೌತುಕವನು ॥ ೩೫ ॥

ಪಲ್ಲವಿತ ನವ ಚೂತತರು ಬೇಸಗೆಯ ಝಳಕೆ।
ನಿಲ್ಲದಸವಳಿದು ಜೋಲ್ವಂತೆ ಕೋಮಲಕಾಯ।
ದೆಲ್ಲೆಡೆಯೊಳಂ ನಾಂಟಿದಂಬುಗಳ ರುಧಿರ ಪ್ರವಾಹದಿಂದುರೆ ಬಳಲ್ದು ॥
ಮೆಲ್ಲನೆ ವರೂಥದೊಳ್ ಸಾರಥಿವೆರಸಿ ಧರಾ।
ವಲ್ಲಭಂ ಮೈಮರೆದು ಪವಡಿಸಿದನನಿಮಿಷರ್।
ಚೆಲ್ಲಿದರ್ ಪೂಮಳೆಗಳಂ ಮೊಳಗಿದುವು ದೇವ ದುಂದುಭಿಗಳಂಬರದೊಳು ॥ ೩೬ ॥

ಆ ಕುಮಾರರ್ ಬಳಿಕ ಶರಹತಿಗೆ ಮೈಮರೆದ।
ಕಾಕುತ್ಥ್ಸನಲ್ಲಿಗೈತಂದು ರಾಜೇಂದ್ರನ ಶು।
ಭಾಕಾರಮಂ ನೋಡಿ ಸಿರಿಮೊಗದ ಮಣಿ ಕುಡಲಂಗಳಂ ಕಂಬುಗಳದ॥
ಏಕಾವಳಿಯ ಹಾರಮಂ ತೆಗೆದುಕೊಂಡೂರ್ಮಿ।
ಳಾಕಾಂತ ಭರತ ಶತ್ರುಘ್ನರ ವಿಭೂಷಣಾ।
ನೀಕಮಂ ಕಳೆದೊಂದು ವಸನದೊಳ್ ಕಟ್ಟಿ ಕುಶನೊಡನೆ ಲವನಿಂತೆಂದನು॥ ೩೭ ॥

ಅಗ್ರಭವ ಕೇಳಿವರೊಳೊಂದು ರಥಮಂ ಪತ್ತಿ।
ವಿಗ್ರಹದೊಳೆಚ್ಚರಾಗಿರ್ದ ವೀರರ್ಕಳ ಕ।
ಚ ಗ್ರಹಣಮಂ ಮಾಡಿಕೊಂಡು ಬಹೆನೆನುತೆ ಲಕ್ಷ್ಮಣನ ಪೊಂದೇರ್ಗಡರ್ದು॥
ವ್ಯಗ್ರದಿಂ ಲವನೈತರಲ್ ಕುಶನ ಶರಹತಿಯ।
ನಿಗ್ರಹಕ್ಕೊಳಗಾಗಿ ಮೂರ್ಛೆಯಿಲ್ಲದೆ ಕಪಿಗ।
ಳಗ್ರಣಿಗಳುಳಿದಿರ್ದರಿರ್ವರದರೊಳ್ ಜಾಂಬವನೊಳೆಂದನಾ ಹನುಮನು ॥೩೮॥

ಕಂಡಿರೇ ಜಾಂಬವರೆ ರಾಮಾದಿ ವೀರರಂ।
ದಿಂಡುಗೆಡಹಿದಬಳಿಕ ರಣದೊಳುಸಿರಿರ್ದರಂ।
ಮಂಡೆವಿಡಿದೆಳೆದುಯ್ವೆನೆಂದು ಸೀತಾಸುತಂ ಬಂದಪಂ ನಾವಿವನೊಳು॥
ದಂಡಿಗಾರೆವು ನಮ್ಮನೀ ಬಾಲಕಂಪಿಡಿದು।
ಕೊಂಡು ಪೋಗಲಿ ಜಾನಕಿಯ ಪೊರೆಗೆ ದೇವಿ ಕೃಪೆ।
ಯಿಂ ಡಿಂಗರಿಗರೆಂದು ಪಾಲಿಸಲಿ ಮೇಣುಳಿಯಲೆಂದನಾ ಹನುಮಂತನು ॥ ೩೯ ॥

ಕೆಡದಿರ್ದರೆಲ್ಲರಂ ನೋಡಿ ರಣರಂಗದೊಳ್ ।
ಮಿಡುಕಿ ಮಾತಾಡುವಿವರಂ ಕಂಡು ಲೀಲೆಯಿಂ ।
ಪಿಡಿದು ಲವನೆಳೆತಂದು ಕೌತುಕದ ಕಪಿಗಳೆಂದಣ್ಣಂಗೆ ತೋರಿಸಲ್ಕೆ ॥
ಕಡು ಮೆಚ್ಚಿ ತಮ್ಮನಂ ಕುಶನಪ್ಪಿದಂ ಬಳಿಕ।
ಪಡೆದ ತಾಯಂ ಕಾಣಲಾ ಪ್ಲವಗ ಪತಿಗಳಂ।
ಬಿಡದನಿಬರಾ ಭರಣಮನಿತುಮಂ ಕೊಂಡಿರ್ವರುಂ ಬಂದರಾಶ್ರಮಕ್ಕೆ ॥ ४೦ ॥

ಏನಾದರೋ ತನಯರೆಂದು ಚಿಂತಿಸುತಿರ್ಪ ।
ಜಾನಕಿಗೆ ರಾಮಾದಿಗಳ ಭೂಷಣಂಗಳಂ ।
ಕಾನನದ ಬೇಂಟೆಯೊಳ್ ಸಿಕ್ಕಿ ಸೀಕರಿಗೊಂಬ ಮೃಗಪೋತಕಂಗಳಂತೆ ॥
ಮೌನದಿಂ ಮೈಯುಡುಗಿ ನೊಂದೆಳೆತಟಕೆ ಬಿದ್ದ ।
ವಾಸರಶ್ರೇಷ್ಠರಂ ತಂದಿತ್ತು ಚರಣದೊಳ್ ।
ಸೂನುಗಳ್ ಪೊಡಮಡಲ್ಕಾ ಸೀತೆ ನಡುನಡುಗಿ ನಂದನರ್ಗಿಂತೆಂದಳು ॥ ४೧ ॥

ಆರುಮರಿಯದವೊಲೀ ಕಾನನದೊಳಿರ್ದನಾಂ ।
ಧಾರಿಣೀಶರ ಭೂಷಣಂಗಳೇತಕೆ ನಮಗೆ ।
ವೀರ ಕಪಿವರರಿವರ್ ಜಗದೊಳಭಿಮಾನಿಗಳ್ ಭಂಗಮೇಕಿಂತಿವರ್ಗೆ ॥
ಘೋರಕರ್ಮಂಗಳಂ ಮಾಡಿದಿರಿ ಮಕ್ಕಳಿರ ।
ದಾರಿತಪ್ಪಿದಿರಿನ್ನು ವಾಲ್ಮೀಕಿಮುನಿವರಂ ।
ಬಾರದಿರನೀಗಳೆ ರಣದೊಳಿವರನಿರಿಸಿ ಬಹುದೆಂದಳವನಿಜೆ ಲವಂಗೆ ॥ ४೨ ॥

ವೈದೇಹಿ ನುಡಿದುದಂ ಕೈಕೊಂಡು ಲವನವರ ।
ನುಯ್ದು ರಣರಂಗದೊಳ್ ಮಗುಳಿರಿಸಿ ಬಂದ ನಿರ ।
ದ್ವೈದೆ ನಾರದನಿಂದ ಕೇಳ್ದು ವಾಲ್ಮೀಕಿಮುನಿ ಪಾತಾಳಲೋಕದಿಂದೆ ॥
ಮೈದೋರಲಾಶ್ರಮದ್ವಾರದೊಳ್ ಕಂಡು ಮೇ ।
ಲ್ವಾಯ್ದುಕ್ಕುವಾನಂದರಸದಿಂದೆ ವಂದನಂ ।
ಗೈದಳವನಿಜೆ ಮಣಿದರೆಲ್ಲರುಂ ಜಾನಕಿಯ ಸುತರೆರಗಿದರ್ ಪದದೊಳು ॥ ४३ ॥

ಶರ ವೇದಮೂರ್ತಿಗಳ ತೆರದಿಂದ ರಾಜಿಸುವ ।
ತರಳರಂ ಮಣಿದೆತ್ತಿ ಮಕ್ಕಳಿರ ನಿಮಗೆ ರಘು ।
ವರನ ಸೇನೆಯೊಳಾಯ್ತುಗಡ ಕಲಹಮೇಕೆ ತೊಡಗಿತು ತೋಟಿ ನಿಮ್ಮಕೂಡೆ ॥
ಧುರಕೆ ಬಂದೆಚ್ಚಾಡಿ ಬಿದ್ದರಾರ್ ಮೆಯ್ಯೊ ।
ಳರಿಗಳಂಬಿನ ಗಾಯ ಮಲ್ಲದೆತ್ತಣ ಬಲೋ ।
ತ್ಕರದೇಳ್ಗೆ ಪೇಳ್ವುದೆನೆ ವಾಲ್ಮೀಕಿಮುನಿಪುಂಗವಂಗೆ ಕುಶನಿಂತೆಂದನು ॥ ४४ ॥

ತಂದೆ ನೀವಿರಲೆಮಗೆ ಸುಕ್ಷೇಮಕರಮಪ್ಪು ।
ದೆಂದೆಂಮಬಿದು ನಿಜಂ ನಿಮ್ಮಡಿಗಳುಪದೇಶ।
ದಿಂದರಿಗಳಂ ಗೆಲ್ದೆವೀನಿಮ್ಮ ಪುಣ್ಯಾಶ್ರಮದೊಳಾಯ್ತು ಭೂತ ಹಿಂಸೆ॥
ಬಂದುದೊಂದಶ್ವಮದನೀ ಲವಂ ಕಟ್ಟಿದಂ ।
ಮುಂದಿ ಕವಿದುದು ಮೇಲೆ ಶತ್ರುಘ್ನನುರುಬಿದಂ।
ಸಂಧಿಸಿದೆ ನಾಂ ಬಳಿಕ ಸೌಮಿತ್ರಿ ಭರತ ರಾಮಾದಿಗಳ್ ನಡೆತಂದರು ॥ ೪೫ ॥

ಕಡೆಯ ಮಾತೇನಿನ್ನು ದೊರೆದೊರೆಗಳೆಲ್ಲರಂ ।
ಪಡೆಯೊಳ್ ನಿಶಾಟ ಕಪಿ ನರ ಚಾತುರಂಗಮಂ ।
ಕೆಡಹಿದೆವೆನಲ್ ಕುಶನ ನುಡಿಗೆ ಸೈವೆರಗಾಗಿ ವಾಲ್ಮೀಕಿಮುನಿ ಮನದೊಳು ॥
ಕಡುನೊಂದನಕಟಕಟ ತಪ್ಪಾದುದೆನುತೆ ನಡು ।
ನಡುಗುತಿಹ ಸೀತೆಯಂ ಸಂತೈಸಿ ವಹಿಲದಿಂ ।
ನಡೆತಂದನೊಡನಿರ್ದ ತಾಪಸ ವಿತತಿ ಸಹಿತ ಸಂಗ್ರಾಮ ಭೂಮಿಗಾಗಿ ॥ ೪೬ ॥

ಶರಧಿಯಂ ಕಟ್ಟುವಂದಾ ರಾಘವೇಶ್ವರಂ ।
ಧರೆಯೊಳಿಟ್ಟಣಿಸಿರ್ದ ಬೆಟ್ಟಂಗಳೆಲ್ಲಮಂ ।
ತರಿಸಿದಂ ಭೂಮಿಗಾಧಾರಮಿಲ್ಲದೆ ಪೋಪುದೆಂದವನ ತನುಜಾತರು ॥
ಗಿರಿಗಳಂ ಪ್ರತಿಯಾಗಿ ತಂದಿಳೆಯಮೇಲಿನ್ನು ।
ಪರಪಿದರೊ ಪೇಳೆನಲ್ ಪೊಡೆಗೆಡೆದು ಬಿದ್ದಿರ್ದ ।
ಕರಿಘಟೆಗಳಟ್ಟೆಗಳ್ ಕಾಣಿಸಿದುವಾ ರಣದೊಳಾ ತಪೋನಿಧಿಯ ಕಣ್ಗೆ ॥ ೪೭ ॥

ತಟ್ಟುಗೆಡದಿಹ ವಾಜಿ ವಾರಣ ವರೂಥದಿಂ ।
ದಿಟ್ಟಣಿಸಿ ಬಿದ್ದ ರಾಕ್ಷಸ ಮನುಜ ಕಪಿಗಳಿಂ ।
ದಿಟ್ಟಡಿದಗಲಕೆ ಚೆಲ್ಲಿದ ಛತ್ರ ಚಾಮರ ಪತಾಕೆಗಳ ಮೆದೆಗಳಿಂದೆ ॥
ಒಟ್ಟೊಟ್ಟಿಲಾಗಿ ನೂಸಿದ ಪಲವು ಕೈದುಗಳ ।
ಜೆಟ್ಟಂಗಳಿಂ ಮಿದುಳ್ನೆಣ ವಸೆ ಕರುಳ್ಗಳಿಂ ।
ಕಟ್ಟುಗ್ರವಾದ ರಣರಂಗದೊಳ್ ವಾಲ್ಮೀಕಿಮುನಿ ರಾಮನಂ ಕಂಡನು ॥ ೪೮ ॥

ಅಂದು ಪುರಹೂತವೈರಿಯ ಸರ್ಪಶರದಿಂದೆ ।
ಪೊಂದಿದ ಸಮಸ್ತ ಬಲ ಸಹಿತ ಬಿದ್ದೆಚ್ಚರಳಿ ।
ದಂದದಿಂ ನಸು ಮುಸುಳ್ದಾನನದ ನಿಶೆಯ ತಾವರೆವೊಲಾಗಿಹ ಕಣ್ಗಳ॥
ಕಂದಿದವಯವದ ಕಾಂತಿಗಳ ಕರ ಪಂಕರುಹ ।
ದಿಂದೆ ಕೆಲಕೋಸರಿಸೆ ಬಿದ್ದ ಬಿಲ್ಗಂಬುಗಳ ।
ನೊಂದ ಗಾಯದ ನೆತ್ತರೊರತೆಗಳ ರಾಮನಂ ಕಂಡು ಮುನಿ ಬೆರಗಾದನು ॥೪೯॥

ಈಕ್ಷಿಸಿ ಕಮಂಡಲೋದಕದಿಂದೆ ಮುನಿವರಂ ।
ಪ್ರೋಕ್ಷಿಸಿದೊಡುರಗ ತಲ್ಪದೊಳುಪ್ಪಡಿಸುವ ।
ಬ್ರಾಹ್ಮಣನೀತಂ ತಪ್ಪದೆಂಬಂತೆ ಕಣ್ದೆರದು ವಾಲ್ಮೀಕಿಗಭಿನಮಿಸಲು ॥
ಸಾಕ್ಷಾಜ್ಜಗನ್ನಾಥ ಸರ್ವಕಾರಣ ಸಕಲ।
ರಾಕ್ಷಸಾಂತಕ ಭಕ್ತವತ್ಸಲ ಕೃಪಾಳು ನಿರ।
ಪೇಕ್ಷ ರಾಘವ ರಾಮ ಚಿತ್ತಾವಧಾನಮೆಂದಾ ಮುನಿ ಪೊಗಳುತಿರ್ದನು ॥ ೫೦ ॥

ಬಳಿಕ ರಾಘವನ ಸಿರಿಮುಡಿಗೆ ನಭದಿಂದೆ ಪೂ ।
ಮಳೆ ಕರೆದುದುತ್ಸವದೊಳಮರ ದುಂದುಭಿಗಳುರೆ ।
ಮೊಳಗಿದವು ಋಷಿಮಂತ್ರಪೂತ ಜಲದಿಂದ ಭರತಾದಿಗಳ್ ಜೀವಿಸಿದರು ॥
ತಳೆದರನಿಮಿಷರಮೃತಮಂ.ಬಿದ್ದ ಪಡೆಯ ಮೇ ।
ಲುಳಿಯದೆ ಸಮಸ್ತಸೈನಿಕಮೆದ್ದುದಾಗ ಪೆರೆ ।
ಗಳೆದ ಫಣಿ ಕುಲದಂತೆ ನಲಿದು ಚತುರ್ಬಲಂ ಪೇಳಲೇನಚ್ಚರಿಯನು ॥ ೫೧ ॥

ಬರಿಸಿದಂ ನೆನೆದು ಸುರಧೇನುವಂ ವಾಲ್ಮೀಕಿ ।
ಪರಮ ಸಂಪ್ರೀತಿಯಿಂ ಬೇಡಿದ ಪದಾರ್ಥಮಂ।
ತರಿಸಿದಂ ದುಗ್ಧಾಭಿಷೇಕಮಂ ಮಾಡಿಸಿದನಾ ರಾಘವೇಶ್ವರಂಗೆ॥
ಭರತಾದಿಗಳ್ವೆರಸಿ ಕುಳ್ಳಿರ್ದ ಬಳಿಕ ಪತಿ।
ಕರಿಸಿ ಕಾಕುತ್ಸ್ಥನಂ ಕೊಂಡಾಡಿ ನೇವಾದಿಂ।
ಕರಿಸಿ ಕುಶಲವರಂ ಪದಾಬ್ಜದೊಳ್ ಕೆಡಹಿ ಮುನಿವರನೊಯ್ಯನಿಂತೆಂದನು॥ ೫೨ ॥

ರಾಜೇಂದ್ರ ಕೋಪಮಂ ಮಾಡದಿರ್ ನಿನ್ನಂ ಕೃ।
ಪಾಜಲಧಿಯೆಂದು ಮರೆವೊಕ್ಕರಂ ಕಾವನೆಂ।
ದೀಜಗಂ ಬಣ್ಣಿಪುದು ನಿನ್ನ ತನುಸಂಭವರ್ ಜಾನಕಿಯ ಮಕ್ಕಳಿವರು॥
ಓಜೆತಪ್ಪಿದರಾಶ್ರಮದೊಳಿದ್ದುದಿಲ್ಲ ಮುಖ ।
ಯಾಜನಕೆ ವರುಣಂ ಕರೆಸಲಾಗಿ ಪೋದೆನೀ ।
ವ್ಯಾಜಮಂ ತಾನರಿಯೆನಪರಾಧಮೇನಿತುಳ್ಳೊಡಂ ಸೈರಿಸುವುದೆಂದನು ॥ ೫೩ ॥

ಜಾತಂ ವಿನೀತನಾಗಲಿ ಧೂರ್ತನಾಗಿರಲಿ।
ತಾತಂಗೆ ವಿರಹಿತವೆ ನೋಡದಿರ್ ಬಾಲಕರ ।
ತೀತಮಂ ಕ್ಷಮಿಸೆಂದು ವಾಲ್ಮೀಕಿ ನುಡಿಯೆ ರಾಘವ ನೂರ್ಮಿಳಾಪತಿಯನು॥
ಸೀತೆ ಸುತರಂ ಪಡೆದಳೆಂತೆನೆ ತವಾಜ್ಞೆಯಿಂ।
ಶ್ವೇತನದಿಯಂ ದಾಂಟಿ ಪೂರ್ಣಗರ್ಭಿಣಿಯಾದ ।
ಭೂ ತನುಜೆಯಂ ಕಾನನದೊಳಿರಿಸಿ ಬಂದೆನಲ್ಲದೆ ಮುಂದರಿಯೆನೆಂದನು ॥ ೫೪ ॥

ಇಂತೆಂದು ಲಕ್ಷ್ಮಣಂ ನುಡಿಯೆ ವಾಲ್ಮೀಕಿ ಸಮ।
ನಂತರದೊಳೇಕಾಕಿಯಾಗಿ ಜಾನಕಿ ವಿರಹ।
ಸಂತಾಪದಿಂದಡವಿಯೊಳ್ ತೊಳಲುತಿರ್ದುದಂ ಕಂಡು ತನ್ನಾಶ್ರಮಕ್ಕೆ ॥
ಸಂತೈಸಿ ಕೂಡೆ ಕೊಂಡೊಯ್ದುದಂ ಬಳಿಕಲ್ಲಿ।
ಸಂತತಿಗಳಾದುದಂ ತಾನವರ್ಗಿಲ್ಲಿ ಪ।
ರ‍್ಯಂತರಂ ಮಾಡಿಸಿದ ಕೃತ್ಯಂಗಳೆಲ್ಲಮಂ ಪೇಳ್ದಂ ರಘೂದ್ವಹಂಗೆ ॥ ೩೫ ॥

ಬಳಿಕ ವಾಲ್ಮೀಕಿ ನಿಜಶಿಷ್ಯರಂ ಸದನಕ್ಕೆ ।
ಕಳುಹಿ ತರಿಸಿದನಮಲ ವಲ್ಲಕಿಗಳಂ ತನ್ನ ।
ಬಳಿಯೊಳಭ್ಯಾಸಮಂ ಮಾಡಿಸಿದ ರಾಮಚಾರಿತ್ರಮಂ ತುದಿವೊದಲ್ಗೆ ॥
ಲಲಿತ ಸಾಳಂಗ ಸಾವೇರಿ ಗುಜ್ಜರಿ ಗೌಳ।
ಪಳಮಂಜರಿಗಳೆಂಬ ವಿವಿಧ ರಾಗಂಗಳಂ।
ಬಳಸಿ ಪಾಡಿಸಿದ ನೆರಡನೆಯ ತುಂಬುರು ನಾರದರ ತೆರದಿ ಕುಶ ಲವರನು ॥ ೩೬ ॥

ವೀಣೆಯಂ ಕೈಗಿತ್ತು ಬಾಲಕರ ವದನದೊಳ್।
ವಾಣಿ ತಾಂ ನೆಲಸಿದಳೊ ಗಾನದೇವತೆಯ ಮೈ।
ಗಾಣಿಕೆಯೊ ಮೋಹನದ ತನಿರಸವೊ ಸೊಗಯಿಸುವ ಕರ್ಣಾಮೃತವೋ ಪೇಳೆನೆ॥
ಜಾಣುಣ್ಮೆ ಜೋಕೆಯಿಂ ಜತಿ ರೀತಿ ತಾಳ ಪ್ರ।
ಮಾಣ ಕಂಪಿತ ಮೂರ್ಛೆ ರಸ ಪಾಡು ಬೆಡಗು ಬಿ।
ನ್ನಾಣ ಲಯ ಮಾಹತ ಪ್ರತ್ಯಾಹತ ವ್ಯಾಪ್ತಿಯರಿದು ಕೇಳಿಸಿದರವರು ॥ ೩೭ ॥

ಸ್ಥಾಯಿ ಸಂಚಾರಿಗಳ ಸರಿಗಮ ಪಧನಿಯ ಸರ।
ದಾಯತದ ಶುದ್ಧ ಸಂಕೀರ್ಣ ಸಾಳಗದ ಪೂ।
ರಾಯತ ಸುತಾನಂಗಳಂ ತಾರ ಮಧ್ಯ ಮಂದ್ರಗಳಿಂದೆ ಸೊಗಸುಗೊಳಿಸಿ॥
ಗೇಯ ರಸಮೊಸರೆ ಪಾಡಿದರವರ್ ವಿನುತ ರಾ।
ಮಾಯಣದ ಸುಶ್ಲೋಕಮಾಲೆಯಂ ಕೇಳ್ದು ರಘು।
ರಾಯನುರೆ ಮೆಚ್ಚಿಕೊಂಡಾಡಿ ನಸುನಗೆಯಿಂದೆ ಸೌಮಿತ್ರಿಗಿಂತೆಂದನು ॥ ೩೮ ॥

ಭಾವಿಸೆಲೆ ಸೌಮಿತ್ರಿ ಬಾಲಕರ್ ಸುಲಲಿತ ವ।
ಚೋ ವಿಲಾಸಂಗಳಿಂ ಸ್ವರದಿಂದೆ ರೂಪಿಂದೆ।
ಲಾವಣ್ಯದಿಂದೆ ಗತಿಯಿಂದೆ ಚೇಷ್ಟೆಗಳಿಂದೆ ಸೀತೆಯಂ ನೆನೆಯಿಸುವರು॥
ದೇವಿಯಗಲ್ದ ವಿರಹಾಗ್ನಿ ಸುತ ದರ್ಶನದ।
ಜೀವನದೊಳುರೆ ನಂದಿತಾದುದಿನಕುಲದೇಳ್ಗೆ।
ಭೂವಲಯದೊಳ್ ತನ್ನ ಬಾಣಮಂ ಬಂಜೆಗೈದಪರೆ ಪೊವಬಿಗರೆಂದನು ॥ ೩೯ ॥

ರಾಯನಾಡಿದ ನುಡಿಗೆ ನಸುನಗುತೆ ಲಕ್ಷ್ಮಣಂ ।
ಜೀಯ ನಿನ್ನಂಬುಗಳ್ ಮೋಘಮಾದಪುವೆ ಪರ ।
ಸಾಯಕದೊಳೀತಗಳ್ ನಿನ್ನಸುತರದರಿಂದೆ ನೆಲೆಗೊಂಡುದಾತ್ಮ ಶಕ್ತಿ ॥
ಈ ಯುವಳರಂ ಪರಿಗ್ರಹಿಸೆಂದೊಡಾ ಕೌಸ ।
ಲೇಯನತಿ ಧನ್ಯರಾವೆಂದು ವಾಲ್ಮೀಕಿಯಂ ।
ಪ್ರೀಯೋಕ್ತಿಯಿಂದೆ ಕೊಂಡಾಡಿ ಸುಕುಮಾರರಂ ಕರೆದಾಗಳಿಂತೆಂದನು ॥ ೬೦ ॥

ಆರ ತನುಜಾತರೆಲೆ ಮಕ್ಕಳಿರ ನಿಮಗಿನಿತು ।
ವೀರತ್ವಮೆತ್ತಣದು ಪೇಳ್ವುದೆಂದಾತ್ಮಜರ ।
ನಾರಾಘವಂ ಕೇಳ್ದೊಡವರಾವು ಜಾನಕಿಯ ಗರ್ಭಸಂಭವರೆಮ್ಮನು ॥
ಆರೈದು ವಾಲ್ಮೀಕಿಮುನಿ ಸಲಹಿ ಸಕಲವಿ ।
ದ್ಯಾರಾಜಿಯಂ ಕಲಿಸಿದಂ ದೇವ ನಿನ್ನ ಪವ ।
ವಾರಿಜಕೆ ದ್ರೋಹಮಂ ಮಾಡಿದೆವು ಸೈರಿಸುವುದೆಂದೆರಗಿದರ್ ಪದದೊಳು ॥೬೧॥

ತನಯರಂ ತೆಗೆದೊಡನೆ ಮುಂಡಾಡಿ ಬಿಗಿಯಪ್ಪಿ ।
ಘನತರಸ್ನೇಹದಿಂ ಶಿರವನಾಘ್ರಾಣಿಸಿ ವ ।
ದನವ ನೊಡನೊಡನೆ ಚುಂಬಿಸಿ ಮತ್ತೆಮತ್ತೆ ವಾಲ್ಮೀಕಿಯಂ ಮಿಗೆ ಪೊಗಳುತೆ॥
ಅನುಜರಿಂದೊಡಗೂಡಿ ರಘುವರಂ ಸಂತೋಷ ।
ವನಧಿಯೊಳ್ ಮುಳುಗಿದಂ ಸುಕುಮಾರರಂ ಕೊಂಡು ।
ಕೊನರಿತು ಸಮಸ್ತ ಪರಿವಾರಮುತ್ಸವದಿಂದೆ ಮೊಳಗಿದುವು ವಾದ್ಯಂಗಳಂ ॥೬೨॥

ಬಳಿಕ ವಾಲ್ಮೀಕಿಯಂ ಸತ್ಕರಿಸಿ ಸೀತೆ ಭೂ ।
ತಳವರಿಯೆ ಪರಿಶುದ್ಧೆ ಲೋಕಾಪವಾದಕ್ಕೆ ।
ಕಳೆದೆನೆಂತಾದೊಡಂ ಪುತ್ರರಂ ಪಡೆದಳಿನ್ನರವರಿಸದೆನ್ನ ಬಳಿಗೆ॥
ಕಳುಹೆಂದು ಬೀಳ್ಕೊಂಡು ಸುತ ಸಹೋದರರೊಡನೆ ।
ದಳಸಹಿತ ಹಯವರಂ ವೆರಸಿ ನಿಜಪುರಕೆ ಬಂ ।
ದುಳಿದಿರ್ದ ಯಜ್ಞಮಂ ನಡೆಸಿದಂ ಮೂಜಗಂ ಪೊಗಳಲ್ಕೆ ರಘುನಾಥನು ॥ ೬೩ ॥

ಇತ್ತ ನಿಜತನುಜರಂ ಕಳುಹಿ ವಾಲ್ಮೀಕಿಮುನಿ ।
ಪೋತ್ತಮಂ ಬರಲಾಶ್ರಮ ದ್ವಾರದೊಳ್ ಕಂಡು ।
ಚಿತ್ತದೊಳ್ ಮರುಗುತೇನಾದರೆಲೆ ತಾತ ಕುಶ ಲವರೊಡಲ್ವಿಡಿವೆನೆಂತೊ ॥
ಪೆತ್ತಂದು ಮೊದಲಾಗಿ ಪತಿವಿರಹಮಂ ಮರೆದು ।
ಪೊತ್ತಿರ್ದೆನೀದೇಹಮಂ ತನ್ನ ಸುತರನಾ ।
ರ್ಗಿತ್ತು ನೀನ್ನೈತಂದೆ ತಂದೆ ಹೇಳೆಂದು ಜಾನಕಿ ಬಿದ್ದಳಂಘ್ರಿಗಳ್ಗೆ ॥ ೬೪ ॥

ಮಣಿದೆತ್ತಿ ಸೀತೆಯಂ ಸಂತೈಸಿ ಮಗಳೆ ನಿ।
ನ್ನಣುಗರಂ ತಮ್ಮ ತಾತಂ ಕೂಡಿ ಕೊಂಡೊಯ್ದ।
ನೆಣಿಕೆಬೇಡಿದಕಿನ್ನು ನಿನ್ನುಮಂ ಕಾಂತನಲ್ಲಿಗೆ ಕಳುಹಿ ಬರ್ಪೆನೆಂದು॥
ಗುಣದಿಂದೊಡಂಬಡಿಸಿ ವಾಲ್ಮೀಕಿ ಮುನಿವರಂ।
ಮಣಿರಥವನೇರಿಸಿ ಸಮಸ್ತ ವೈಭವದಿಂ ಧ।
ರಣಿಜೆಯಂ ತಂದಯೋಧ್ಯಾಪುರದೊಳಿರಿಸಿ ರಘುನಾಥನಂ ಕಾಣಿಸಿದನು ॥೬೫॥

ಮೇಲೆ ಜಾನಕಿ ಸಹಿತ ರಾಘವಂ ಸಾಮ್ರಾಜ್ಯ।
ಲೋಲನಾಗಿರ್ದನೆಲೆ ಜನಮೇಜಯಾವನೀ।
ಪಾಲ ಕೇಳ್ದೆ ಕುಶಲವ ರೊಡನಾ ರಾಮಂಗೆ ಬಂದ ಕದನದ ಕಥೆಯನು॥
ಮೂಲೋಕಕಿದು ಪುಣ್ಯವತಿರಮ್ಯಮಾಗಿರ್ಪು।
ದಾಲಿಪರ್ಗಾಯುರಾರೋಗ್ಯವೈಶ್ವರ್ಯಂ ವಿ।
ಶಾಲ ಮತಿ ಸತ್ಕೀರ್ತಿ ವಿಮಲಸಂತತಿ ಸುಗತಿ ದೊರೆಕೊಂಬುದಿಹಪರದೊಳು ॥೬೬॥

ಅರಸ ನೀಂ ಬೆಸಗೊಳಲ್ ಪೇಳ್ದೆನಾಂ ಕುಶ ರಾಘ।
ವರ ಯುದ್ಧಮಂ ಸುರಪ ಫಲುಗುಣನ ಕಾಳಗವ।
ನೊರೆಯಲೇಕಿನ್ನು ಕೇಳ್ದರಿವಲೈ ಬಭ್ರುವಾಹನ ಪಾರ್ಥರಾಹವವನು॥
ವಿರಚಿಸುವೆನೊಲಿದಾಲಿಸೆಂದು ಜೈಮಿನಿ ಮುನೀ।
ಶ್ವರನಿಂದು ಕುಲತಿಲಕ ಜನಮೇಜಯಂಗೆ ವಿ।
ಸ್ತರಿಸಿದಂ ದೇವಪುರ ನಿಲಯ ಲಕ್ಷ್ಮೀಶನಂ ಚಿತ್ತದೊಳ್ ಧ್ಯಾನಿಸುತ್ತೆ ॥೬೭॥

ಇಪ್ಪತ್ತೆರಡನೆಯ ಸಂಧಿ

ಸೂಚನೆ । ಸತ್ವದಿಂದೊದಗಿದರ್ ತಮತಮಗೆ ಭುಜ ಸಾಹ ।
ಸತ್ವದಿಂ ಪ್ರದ್ಯುಮ್ನ ಮೊದಲಾದ ಪಟುಭಟರ್ ।
ಸತ್ವರದೊಳೆಚ್ಚಾಡಿದರ್ ಬಭ್ರುವಾಹನ ಧನಂಜಯರ್ ಸಂಗರದೊಳು ।

ಅರಸ ಕೇಳರ್ಜುನಂ ಬೈದು ನೂಕಿದ ಬಳಿಕ ।
ತರಿಸಿದ ಸುವಸ್ತುಗಳ ನಧ್ವರದ ತುರಗಮಂ ।
ತಿರುಗಿ ನಿಜನಗರಿಗೆ ಕಳುಹಿ ಬಭ್ರುವಾಹನಂ ಸಮರಕನುವಾಗಿ ನಿಲಲು ॥
ಧರಣಿಮಂಡಲಮಂ ಚತುರ್ಬಲಂ ಗೀರ್ವಾಣ ।
ಸರಣಿ ಮಂಡಲಮಂ ಧ್ವಜ ಛತ್ರ ಚಾಮರಂ ।
ತರಣಿಮಂಡಲಮಂ ಚಮೂ ಪದ ಹತೋದ್ಧೂತ ರೇಣುವ್ರಜಂ ಮುಸುಕಿತು ॥೧॥

ಅರ್ಬುದಗಜಂ ಪತ್ತುಕೋಟಿ ಸುವರೂಥಮೆರೆ ।
ದರ್ಬುದ ತುರಂಗಮಂ ಕೂಡಿತು ಪದಾತಿ ಮೂ ।
ರರ್ಬುದಂ ಜೋಡಿಸಿದ ರಾಹವಪ್ರೌಢರ್ ಸುಬುದ್ಧಿಮೊದಲಾದ ಭಟರು ॥
ಸರ್ಬಸನ್ನಾಹದಿಂದೊತ್ತರಿಸಿದೆತ್ತಣ ಚ ।
ತುರ್ಬಲವೊ ಕಮಲಜನ ಸೃಷ್ಟಿಯೊಳದೃಷ್ಟಮೆನೆ ।
ಪರ್ಬಿದುದು ನೆಲದಗಲಕಾ ಬಭ್ರುವಾಹನಂ ತರಿಸಿದಂ ಮಣಿರಥವನು ॥ ೨ ॥

ಚಿತ್ರಶೋಭಿತಮಾದ ಮಣಿಮಯ ವರೂಥಮಂ ।
ಚಿತ್ರಾಂಗದೆಯ ತನೂಭವ ನಡರ್ದಂ ಕೂಡೆ ।
ಚಿತ್ರವಾದುದು ಸಮರ ಮೊರಡುಘಟ್ಟಿನ ಜೋಣಿ ಸಂದಣಿಸಿತುರವಣಿಯೊಳು ॥
ಮಿತ್ರಮಂಡಲವನೊಡೆದೈದುವತಿಭರದಿಂದೆ ।
ಮಿತ್ರಭಟರಂ ತಾಗಿದರ್ ಕಡುಗಲಿಗಳಾಗ ।
ಮಿತ್ರಭಾವದ ನೇಹದಿಂದೆ ಮರುಗದೆ ಮಾಣವಂಭೋರುಹಂಗಳೆನಲು ॥ ೩ ॥

ತೇರ ವಂಗಡದ ಜರ್ಜರಾರವಂ ಗಜದ ಘಂ ।
ಟಾರವಂ ಹಯದ ಹೇಷಾರವಂ ನಡೆವ ಸೇ ।
ನಾರವರ ಭೇರಿಯ ಮಹಾರವಂ ಬಹಳ ಕಹಳಾರವಂ ಸಂಗಡಿಸಿದ ॥
ಜ್ಯಾರವಂ ಭಟರ ಬಾಹಾರವಂ ದಳದ ಬಂ ।
ಭಾರವಂ ರಣ ಕಿಲಕಿಲಾ ರವಂ ಪಟಹ ಢ ।
ಕ್ಕಾರವಂ ಪುದಿದ ನಾನಾ ರವಂ ಕಿವಿಗತಿ ಕಠೋರವಂ ತೀವಿತಂದು ॥ ೪ ॥

ಸಿಂಧ ಸೀಗುರಿ ಛತ್ರಚಾಮರ ಪತಾಕೆಗಳ್ ।
ಸಂದಣಿಸಿ ಗಗನಮಂ ಮುಸುಗಲ್ಕೆ ತವೆ ಮೂಡಿ ।
ದಂಧಕಾರಂಗಳಂ ಕಿಡಿಸಿದುವು ರತ್ನಾಭರಣಕಾಂತಿಗಳ್ ಭೂಪರ ॥
ಕೆಂದೂಳಡರ್ದು ನಭಮಂ ಮುಸುಕಿತಾಗ ಸುರ ।
ಸಿಂಧುಪ್ರವಾಹ ಮುತ್ತುಂಗ ಶೋಣಾಚಲದ ।
ಬಂಧುರ ತಟಪ್ರದೇಶದೊಳೊಪ್ಪುವೊಜ್ಜರದ ನದಿಯೆಂಬ ತೆರನಾಗಲು ॥ ೫ ॥

ಚೂಣಿಯೊಳ್ ಬೆರಸಿ ಪೊಯ್ದಾಡಿದರ್ ತಮತಮಗೆ ।
ಬಾಣ ತೋಮರ ಪರಶು ಚಕ್ರವಸಿ ಮುದ್ಗರ ಕೃ ।
ಪಾಣ ಡೊಂಕಣಿ ಕುಂತ ಸುರಗಿ ಸೆಲ್ಲೆಹ ಶಕ್ತಿ ಮೊದಲಾದ ಕೈದುಗಳೊಳು ॥
ಕೇಣಮಿಲ್ಲದೆ ಚಾರಿ ಚಳಕ ಚಾಳೆಯ ಚದುರ್ ।
ಪಾಣಿಲಾಘವ ಪಂಥ ಪಾಡುಗಳನರಿದು ಬಿ ।
ನ್ನಾಣದಿಂ ಗಾಯಗಾಣಿಸಿದರತಿಬಲರಲ್ಲಿ ನಾನಾ ಪ್ರಹಾರದಿಂದ ॥ ೬ ॥

ತೂಳಿಸಿದರಾನೆಯಂ ಜೋದರುರವಣಿಸಿ ದೂ ।
ವಾಳಿಸಿದರುಬ್ಬೆದ್ದು ರಾವುತರ್ ತೇಜಿಯಂ ।
ಕೇಳಿಸಿದರಾಹವದ ನಾಟ್ಯಮಂ ರಣರಂಗದೊಳ್ ಚಟುಲ ಪಟುರಥಿಕರು ॥
ಏಳಿಸಿದರಾಳ್ತನದ ಪಂತಮಂ ಕಾಲವರ್ ।
ಬೀಳಿಸಿದ ರಹಿತರಂ ಪೊಯ್ದಾಡಿ ತಲೆಯಂ ನಿ ।
ವಾಳಿಸಿದ ರಾಳ್ದಂಗೆ ಕೈದುಗಳ ಹೋರಟೆಯು ಖಣಿ ಕಟಿಲ ರಭಸದಿಂದೆ ॥ ೭ ॥

ಕಾರ್ಮುಗಿಲ ಸಿಡಿಲ ರವದಂದವಾಗಿರೆ ಕರೆದ ।
ಕಾರ್ಮುಕಧ್ವನಿ ಮಿಂಚಿನಂತೆ ಪೊಳೆಪೊಳೆವ ಪೊಂ ।
ದೇರ್ಮೊರೆಯೆ ಶರವರ್ಷಮಂ ಕರೆಯುತರ್ಜುನನ ಸಮ್ಮುಖಕೆ ಬಂದು ನಿಂದ ॥
ಮಾರ್ಮಲೆಯಬಾರದಯ್ಯನೊಳೆಂದು ಕಂಡು ನಾಂ ।
ಕೂರ್ಮೆಯಿಂದೆರಗಿದೊಡೆ ಜರೆದೆಲಾ ರಣದೊಳಿ ।
ನ್ನಾರ್ಮೊಗೆದೊಡಂ ಜೈಸದೊಡೆ ನಿನ್ನಸುತನಲ್ಲೆನುತೆ ಪಾರ್ಥ ತೆಗೆದೆಚ್ಚನು ॥೮॥

ಪಾರ್ಥಿವರ ಪಂಥಮಲ್ಲೆಂದು ಪೇಳಲ್ಕೆ ಪುರು ।
ಷಾರ್ಥಮಂ ಮಾಳ್ಪೆಲಾ ನಿನ್ನ ಪೌರುಷವ ನಪ ।
ಕೀರ್ತಿಗಂಜುವನಲ್ಲ ಪಿತನಂ ಪಚಾರಿಸುವೆ ಮತ್ತೆ ಕಾಳಗಕೆ ಬಂದು ॥
ಧೂರ್ತನಹೆ ನೀನೆನುತೆ ನಸುನಗೆಯೊಳಧಿರಾಗಿ ।
ಸುಕುಮಾರನಂ ಘಾತಿಸಿದನೊಂಬತ್ತು ।
ಕಾರ್ತಸ್ವರಾಂಕಿತ ಸುಪುಂಖದಿಂದೆಸೆವ ಬಾಣಗಳಿಂದನುಸಾಲ್ವನು ॥ ೯ ॥

ಕೈತವದಿಸುಗೆಯೊ ನಿಜ ಸಾಹಸಮಿನಿತೊ ನಿನ್ನ।
ವೈತಲೆಗಲಸಿ ಬಂದುದಾಹವಕೆ ಪೊಸತೆನುತ।
ಕೈತವಕದಿಂದೆಚ್ಚ ನನುಸಾಲ್ವನಂ ನೂರುಬಾಣದಿಂ ಪಾರ್ಥಸೂನು॥
ಐತರಲವಂ ಮಧ್ಯಮಾರ್ಗದೊಳ್ ತಡೆಗಡಿದು।
ದೈತೇಯರಾಜಂ ಕನಲ್ದಾಗ ಬರಸಿಡಿಲ।
ಹೊಯ್ತೆಗಿಮ್ಮಡಿಯಾಗಿ ಕಣೆಗಳಂ ಕವಿಸಿದಂ ಬಭ್ರುವಾಹನನ ಮೇಲೆ ॥ ೧೦ ॥

ಉಬ್ಬಿದುದು ವೈರೋಷದಿಂದೆ ಗಂಟಿಕ್ಕಿದುವು।
ಹುಬ್ಬುಗಳ್ ಬಭ್ರುವಾಹಂಗೆ ತೆಗೆತೆಗೆದಿಸುತೆ।
ಬೊಬ್ಬಿರಿದನನುಸಾಲ್ವನಂ ಮುಸುಕಿದುವು ಕೋಟಿಸಂಖ್ಯೆಯ ಪೊಗರ್ಗಣೆಗಳು॥
ಅಬ್ಬರಿಸಿ ದೈತ್ಯನದಕಿಮ್ಮಡಿಸಿ ಕೋಲ್ಗರೆದ।
ನೊಬ್ಬೊಬ್ಬರಂ ಜಯಿಸುವಾತುರದೊಳೆಚ್ಚಾಡ।
ಲಬ್ಬರಂಗದೊಳಿಡಿದುವಂಬುಗಳ್ ಬಂದುವರುಣಾಂಬುಗಳ್ ಸಂಗರದೊಳು॥೧೧॥

ಬಾಣದೊಳ್ ಬಣಿತೆಯೊಳ್ ಬಿಲ್ಗಾರತನದ ಬಿ।
ನ್ನಾಣದೊಳ್ ಬಿಂಕದೊಳ್ ತಾಳಿಕೆಯೊಳುರುತರ।
ತ್ರಾಣದೊಳ್ ಜಯದೊಳ್ ಚಮತ್ಕೃತಿಯೊಳದಟಿನೊಳ್ ವೀರದೊಳ್ ಭಾರಣೆ [ಯೊಳು॥
ಪಾಣಿಲಾಘವದೊಳ್ ಪರಾಕ್ರಮದ ಪಂತದೊಳ್।
ಕಾಣೆ ನವರಿರ್ವರ್ಗೆ ಸುಮರಾದ ಕಲಿಗಳಂ।
ಕ್ಷೋಣಿಯೊಳೆನಲ್ ಬಭ್ರುವಾಹಾನುಸಾಲ್ವರೆಚ್ಚಾಡಿದರ್ ಕೊಳುಗುಳದೊಳು ॥೧೨॥

ಕಾಳಗಂ ಸಮಮಾಗಿ ಬರೆ ಕೆರಳ್ದನುಸಾಲ್ವ।
ನೇಳಂಬಿನಿಂ ಪಾರ್ಥಸುತನ ಬತ್ತಳಿಕೆಯಂ।
ಕೋಲೆಂಟರಿಂದೆ ಟೆಕ್ಕೆಯವ ನೀರೇಳು ಮಾರ್ಗಣದಿಂದ ಕಾರ್ಮುಕವನು॥
ಬೀಳಲಿಕ್ಕಡಿಯಾಗಿ ಕತ್ತರಿಸಿ ಕವಚಮಂ।
ಸೀಳಿದಂ ಕೈಯೊಡನೆ ಸಾಸಿರ ಸರಲ್ಗಳಿಂ।
ಪೂಳಿದಂ ಸಾರಥಿ ವರೂಥ ವಾಜಿಗಳಂ ಶಿಲೀಮುಖ ವ್ರಾತದಿಂದೆ ॥ ೧೩ ॥

ಕ್ಷಣದೊಳಾಗಲೆ ಬಭ್ರುವಾಹನಂ ಮತ್ತೊಂದು।
ಮಣಿವರೂಥವ ನಡರ್ದಿಸುತಿರ್ದ ಸಿತ್ತಲುರ।
ವಣಿಸುವನುಸಾಲ್ವಂ ವಿರಥನಾಗಿ ಕೊಂಡನುರುಗದೆಯ ನೀ ಪಾರ್ಥಸುತನ॥
ರಣ ಚಮತ್ಕಾರ ಮೆಂತುಟೊ ತನ್ನ ಮೇಲಕಿ।
ಟ್ಟಣಿಸಿ ಬಹ ದಾನವನನೆಚ್ಚೊಡುಚ್ಚಳಿಸಿ ಕೂ।
ರ್ಗಣೆಗಳಡಗಿದುವಿಯೊಳಸುರೇಂದ್ರನಸದಳಿದು ವಸುಧೆಯಂ ಪಸೆಗೆಯ್ದನು ॥೧೪॥

ಅನುಸಾಲ್ವನಳವಳಿಯೆ ಚಾಪವಮಂ ಜೇಗೈದು।
ದನುಜಾರಿತನಯ ನಿದಿರಾಗಿ ನಿಲ್ಲೆಲವೊ ತ।
ನ್ನನೆ ಮೊದಲೆ ವಂದಿಸದೆ ಪಾರ್ಥನಂ ಕಂಡು ಕೆಡಿಸಿದೆ ರಾಜಕಾರಿಯಾವನು ॥
ತನುವನುರೆ ನೋಯಿಸೆಂ ಮೈದುನನಲಾ ಸರಸ।
ಕನುವರದೊಳೆಚ್ಚಾಡಿ ನೋಡುವೆಂ ಕಂಗೆಡದಿ।
ರೆನುತೆ ನಾಲ್ಕೈದು ಬಾಣಂಗಳಂ ಬೀರಿದಂ ಬಭ್ರುವಾಹನನ ಮೇಲೆ ॥ ೧೬ ॥

ಸರಸ ಭಾವದೊಳೆ ಭಾವಿಸೆ ಭಾವನವರಿಗಿದು।
ವಿರಸವಾಗದೆ ಮಾಣದೀಗ ಸಂಗ್ರಾಮದೊಳ್।
ಸರಸ ಕಾರ್ಮುಕಮಿಲ್ಲ ಸರಸ ಶಿಂಜಿನಿಯಿಲ್ಲ ಸರಸ ಬಾಣಂಗಳಿಲ್ಲ ॥
ಸರಸ ಯುವತಿಯ ಕಟಾಕ್ಷದ ನೆಮ್ಮುಗೆಗಳಿಲ್ಲ।
ಪರುಷವಾಗದೆ ನೋಡು ರಣವೆನುತ ಪತ್ತು ಸಾ।
ಸಿರ ಕೋಲ್ಗಳಂ ಮುಸುಕಿ ಹರಿ ತನಯನಂ ದಿಟದನಂಗನೆನಿಸಿದ ನಾರ್ಜುನಿ॥೧೬॥

ಮುಸುಕಿದ ಸರಳ್ಗಳಂ ಕುಸುರಿದರಿದಂ ಕೂಡೆ।
ದೆಸೆಗಳೇನಾದುವಾಗಸಮೆತ್ತಲಡಗಿದುದು।
ವಸುಮತಿಯದೆಲ್ಲಿಹುದು ಶಶಿರವಿಗಳೆಡೆಯಾಟದೆಸಕಂಗಳಾವೆಡೆಯೊಳು॥
ಅಸುರರೊಳ್ ನಿರ್ಜರ ಪ್ರಸರದೊಳ್ ಮನುಜರೊಳ್।
ಪೆಸರುಳ್ಳವರ ಸಮರದಿಸುಗೆಯೊಳ್ ಕಾಣೆನಿದು।
ಪೊಸತೆಂಬ ತೆರನಾಗೆ ವಿಶಿಖಮಂ ಕೆದರಿದಂ ಬಿಸರುಲಹಾಕ್ಷನ ತನಯನು ॥ ೧೭ ॥

ಕರ್ಕಶದೊಳೆಸುವ ಕೃಷ್ಣಾತ್ಮಜನ ಬಾಣಸಂ।
ಪರ್ಕದಿಂದಾದ ಕತ್ತಲೆಯಂ ಕೆಡಿಸಿದುವವು।
ರರ್ಕಳಹುದೆನೆ ಸವ್ಯಸಾಚಿಯ ತನುಜನ ಪೊಸಮಸೆಯ ವಿಶಿಖಪ್ರಭೆಗಳು॥
ಅರ್ಕರಶ್ಮಿಗಳಂಧಕಾರಂಗಳಡಿಗಡಿಗೆ।
ತರ್ಕಮಂ ಮಾಳ್ಪಂತೆ ಕಂಗೊಳಿಸಲಾಗ ವೀ।
ರರ್ಕಳೆಚ್ಚಾಡಿದರ್ ಬಭ್ರುವಾಹನ ರುಕ್ಮಿಣೀಸುತರ್ ಸಂಗರದೊಳು ॥ ೧೮ ॥

ಅಚ್ಚರಿಯನಿನ್ನು ಜನಮೇಜಯ ನರೇಂದ್ರ ಕೇ।
ಳಚ್ಯುತನ ಸುತನ ಬಾಣಂಗಳಂ ನಡುವೆ ಮುರಿ।
ಯೆಚ್ಚನಾತನ ಮಣಿ ವರೂಥ ಧೈತ್ರವ ನಂಬಿನಂಬುಧಿಯ ವೀಚಿಯಿಂದೆ ॥
ಮುಚ್ಚಿದನೊಡನೆ ಮದನನಂಗದೊಳ್ ಕಣೆಗಳಂ।
ಪೊಚ್ಚಿದಂ ಕೆಲಬಲದೊಳಿಡಿದ ರಿಪುಸೇನೆಯಂ।
ಕೊಚ್ಚಿದಂ ಕೊಂದನಗಣಿತಬಲವನಾ ಬಭ್ರುವಾಹನಂ ಕೊಳುಗುಳದೊಳು॥ ೧೯ ॥

ಕಂಡುರೆ ಕನಲ್ದಾತನಿಸುವಿಸುವ ಕೋಲ್ಗಳಂ।
ಖಂಡಿಸುತೆ ಮಿಡುಕದಂತವನ ತೇರೊಡನೊಡನೆ।
ಚಂಡ ಶರಜಾಲಮಂ ಸೈಗರೆಯುತುಚ್ಚಳಿಸಿ ಮತ್ತೆ ರಿಪುಬಲದ ಮೇಲೆ॥
ಹಿಂಡುಗಣೆಯಂ ಕವಿಸಿ ಮಂದಿಯಂ ಕೊಲುತಿರ್ದ।
ನಂಡಲೆದು ಮೂಜಗವನ್ನೈದೆ ಕುಸುಮಾಸ್ತ್ರದಿಂ।
ದಿಂಡುರುಳ್ಚುವ ಶಂಬರಾರಿಗಿದಿರಾರೆನಲ್ ಪುಂಡರೀಕಾಕ್ಷಸೂನು ॥ ೨೦ ॥

ಕಡಿಯೆ ರಾವುತರ ತಲೆ ನೆಲಕುದುರೆ ಕುದುರೆಗಳ್।
ಮಡಿಯೆ ಜೋದರ್ ಕೆಡೆಯಲಾನೆಗಳ್ ನೆಗಳ್ದರ್ ರಣ।
ದೆಡೆಯೊಳ್ ಪೊರಳೆ ಶಿರಂ ಪರಿಯಲ್ಕೆ ಸಾರಥಿಯ ರಥಿಯ ತನು ಸೀಳ್ಗಳಾಗೆ॥
ಕಡುಪಂತ ಕಾಲಾಳ್ಗಳೊಡಲಳಿಯೆ ಲಳಿಯೆದ್ದು।
ಪಡೆಯನುರೆ ಕೊಂದುವು ಶರಧಿ ಭವನ ಭವವ ಪೊಗ
ರಿಡಿದಂಬುಗಳ್ ಪ್ರಳಯ ಶತಕೋಟಿ ಶತಕೋಟಿಯಂ ಪೊಲ್ತು ಸಂಗರದೊಳು ॥

ಧರಣಿತಳದಂತೆ ನವಖಂಡ ಮಯಮಾಗಿ ಯಮ।
ಪುರದಂತೆ ಬಹು ನರಕಪಾಲಮಯಮಾಗಿ ಸಾ।
ಗರದಂತೆ ಭೂರಿಜೀವನ ಭಂಗ ಮಯಮಾಗಿ ಸಂಸಾರಚಕ್ರದಂತೆ॥
ಭರಿತ ಪಾತಕ ಬಂಧ ಮಯಮಾಗಿ ಕೈಲಾಸ।
ಗಿರಿಯಂತೆ ಶಿವಗಣ ವಿಲಾಸ ಮಯಮಾಗಿ ವಿ।
ಸ್ತರದ ನೈಮಿಶದಂತೆ ಪ್ರಾವೃತ ವಿರಕ್ತ ಮಯಮಾಗಿ ರಣಮೆಸೆದಿರ್ದುದು ॥೨೨॥

ಫೇಣಮಯಂ ಪಿಾರಿ ಮೆದೆಗೆಡೆದಿರ್ದ ವಾಜಿ ವಾ।
ರಣಮಯಂ ಬಿಡದೆ ಕುಣಿದಾಡುವಟ್ಟೆಗಳ ರಿಂ।
ಗಣಮಯಂ ನಿಡುಗುರುಳ್ ಖಂಡ ಮಿದುಳಡಗು ಸುಂಟಿಗೆ ಮಜ್ಜೆ ಮಾಂಸಗಳ ॥
ನೆಣಮಯಂ ಪರಿವ ನೆತ್ತರ ಬಸೆಯ ಜಿಗಿಯ ದಾ।
ರುಣ ಮಯಂ ಯಕ್ಷರಾಕ್ಷಸ ಭೂತಭೇತಾಳ।
ಗಣಮಯಂ ಸಲೆ ಭಯಂಕರಮಾದುದಂದು ರಣರಂಗಮಾ ಪ್ರದ್ಯುಮ್ನನ ॥೨೩॥

ಅರಿದ ಸುಂಡಿಲ ಕಹಳೆವಿಡಿದೂದಿದವು ಕೆಲವು।
ಕರಿಯ ರದನಂಗಳ್ಗೆ ತಲೆಯೋಡ ಸೊರೆಗಟ್ಟಿ।
ನರದ ತಂತ್ರಿಯ ಪೂಡಿ ದಂಡಿಗೆವಿಡಿದು ಪಾಡಿದುವು ಕೆಲವು ತುರಗಂಗಳ॥
ಖರಮಂ ಪಿಡಿದು ತಾಳವಿಕ್ಕಿದುವು ಕೆಲವು ಕುಂ।
ಜರಶಿರದ ಮುರಜಂಗಳಂ ಬಾರಿಸಿದುವು ಕೆಲ।
ವಿರದೆ ಕುಣಿದಾಡಿದುವು ಮರುಳ್ಗಳಾ ರಣರಂಗದೊಳ್ ನಾಟ್ಯರಚನೆ ಮೆರೆಯೆ ॥೨೪॥

ಹರಿಸುತಂ ತನ್ನ ಮೋಹರವನಿಂತೈದೆ ಸಂ।
ಹರಿಸುತಂತಕನೊಲಿರೆ ಕಾಣುತೆ ವರೂಥಮಂ।
ಹರಿಸುತಂತಾ ಬಭ್ರುವಾಹನಂ ಖಾತಿಯಂ ಕೈಕೊಂಡು ಕಣೆಗರೆಯುತೆ ॥
ಪರದಳವನೊಳಪೊಕ್ಕು ಸುಭಟರಂ ಸದೆದು ಸೊ ।
ಪ್ಪರೆದಳವಳಿಸಲಾಗ ಭೀತಿಯಿಂ ದೆಸೆವೆಸೆಗೆ ।
ಪರೆದಳವಡಿಸಿದರ್ ಪಲಾಯನವನತಿಬಲರ್ ಪಾರ್ಥನ ಪತಾಕಿನಿಯೊಳು ॥೨೫॥

ಕೆಡೆದ ಕರಿಗಳ ಬೆಟ್ಟವಳಿಯ ಗುಂಡುಗಳೊಳಗೆ ।
ಮಡಿದ ಕುದುರೆಗಳ ಪೊಡೆಗಲ್ಲ ಪೊರಳಿಗಳೊಳಗೆ।
ಕಡಿದ ಕೈಕಾಲ ನರರಟ್ಟೆಗಳ ತುಂಡುಗಳ ಮರಮಟ್ಟೆಗಳ ನೆಳೆಯುತ॥
ಒಡೆದ ತಲೆಯೋಡ ದೋಣಿಗಳಿಂದೆ ತಡಿಗೈದು ।
ತಿಡಿದ ಸೆಣವಸೆ ಮಿದುಳ್ಗಳ ಕರ್ದಮಂಗಳಿಂ ।
ಬಿಡದೆ ರುಧಿರ ಪ್ರವಾಹಂ ಪರಿದು ಸವರಿದಂ ಪಾರ್ಥಜಂ ಪರಬಲವನು ॥೨೬॥

ಶಕ್ರತನಯನ ಸಂಭವಂ ಬಳಿಕ ರೋಷದಿಂ ।
ಚಕ್ರಾಯುಧನ ಸುತನ ಸೂತನಂ ಕುದುರೆಯಂ।
ನಕ್ರಧ್ವಜವ ನತುಲ ಚಾಪಮಂ ಕತ್ತರಿಸಿ ವಿರಥನಂ ಮಾಡೆ ಕೂಡೆ ॥
ವಿಕ್ರಮದೊಳಾಗ ಮತ್ತೊಂದು ಮಣಿರಥದಿಂದು ।
ಪಕ್ರಮಿಸಿದಂ ಕಾಳಗಕೆ ಕೃಷ್ಣನಂದನನ ।
ತಿಕ್ರಮಿಸಿ ಮಗುಳಾ ವರೂಥಮಂ ತಡೆಗಡಿದನಾಪಾರ್ಥಿ ಕೊಳುಗುಳದೊಳು ॥

ಪೊಸರಥವನಳವಡಿಸಿ ತಂದು ಹರಿಸೂನು ಬಂ ।
ಧಿಸುವನಾ ತೇರನೊಡನೊಡನೆ ಪಾರ್ಥನ ಸುತಂ ।
ಕುಸುರಿದರಿವಂ ಧುರದೊಳಿಂತು ಬಯಲಾದುದು ವರೂಥಮೆಪ್ಪತ್ತುಬಳಿಕ ॥
ಅಸವಳಿದನಾ ಬಭ್ರುವಾಹನನ ಬಾಣದಿಂ ।
ದಸುರಾರಿ ನಂದನಂ ಕೂಡೆ ಸಂತೈಸಿಕೊಂ ।
ಡಸಮ ಬಲನೊಳ್ ಪಳಂಚಿದನಾಗಳಿರ್ವರ್ಗೆ ಮಸೆದುದಂಕಂ ಖತಿಯೊಳು ॥೨೮॥

ಎದ್ದು ನಭದೊಳ್ ಪಳಂಚುವರೊಮ್ಮೆ ಭೂತಳದೊ ।
ಳಿದ್ದು ಕೆಣಗುವರೊಮ್ಮೆ ಬಳಸಿ ಮಂಡಲದಿಂದೆ ।
ಹೊದ್ದಿ ಹೋರುವರೊಮ್ಮೆ ತರುಳುಮಗುಳಾಗಿ ತಾಗುವರೊಮ್ಮೆ ಸರಿಬರಿಯೊಳು॥
ತಿದ್ದಿ ತುಡುಕುವರೊಮ್ಮೆ ಬಾಣಾಂಬುಧಿಯ ತೆರೆಯೊ ।
ಳದ್ದಿ ಪೊಣರುವರೊಮ್ಮೆ ಮೂರ್ಛೆಯಿಂ ಮೈಮರೆದು ।
ಬಿದ್ದು ಚೇತರಿಸಿ ಕಾದುವರೊಮ್ಮೆ ಕೃಷ್ಣಪಾರ್ಥರ ತನಯರಾಹವದೊಳು ॥೨೯॥

ಕೃತಚಾಪ ಚಾಪಲರ್ ಶಸ್ತ್ರಾಸ್ತ್ರ ನಿಪುಣರು।
ನ್ನತ ಸತ್ವಸತ್ವರರ್ ದುಸ್ಸಹರಜೇಯರ ।
ಪ್ರತಿಸಮರ ಸಮರಥರ್ ಸಾಹಸಿಗಳಿರ್ವರುಂ ಗಗನ ಗಮನದ ವೀರರು॥
ಧೃತಮಾನ ಮಾನಸರ್ ಕುಪಿತ ಮುಖಕರ್ಕಶರ್।
ವಿತತ ರಣ ತರಣಕರ್ ಚಂಡಭುಜ ಬಲಯುತರ್।
ನುತ ಕಾರ್ಷ್ಣಿಕಾರ್ಷ್ಣಿಗಳ್ ಕಡುಪಿಂದೆ ಕಾದಿದರ್ ಬೇಸರದೆ ಸಂಗರಡೊಳು ॥೨೦॥

ಏಳುವರ್ ಬೀಳುವರ್ ಮೂದಲೆಯ ನುಡಿಗಳಂ।
ಪೇಳುವರ್ ಕೇಳುವರ್ ನಾಂಟಿದ ಶರಂಗಳಂ।
ಕೀಳುವರ್ ತಾಳುವರ್ ಗಾಯವಂ ವಿಕ್ರಮಾಗ್ನಿಗೆ ಪಗೆಯೊಡಲ ಹವಿಯನು।
ಜೇಳುವರ್ ದಾಳುವರ್ ವೀರಸಿರಿಯಂ ತಳೆದು ।
ಸೀಳುವರ್ ತೂಳುವರ್ ಕಣೆಯಿಂದರುಣ ಜಲದೊ।
ಳಾಳುವರ್ ಪೂಳುವರ್ ಕೋಲ್ಗಳಿಂದಹಿತರಂ ಪ್ರದ್ಯುಮ್ನ ಪಾರ್ಥಸುತರು॥೨೧॥

ಇಂತೊರ್ವರೊರ್ವರ್ಗೆ ಸೋಲದೆ ಸುಪರ್ಣ ಹನು
ಮಂತರ ಕದನದಂತೆ ಧರೆಯೊಳ್ ಪೊಣರ್ದು ಮೇ ।
ಣಂತರಿಕ್ಷವನಡರ್ದರೆ ಪೆಣಗಿದರ್ ಬಳಿಕ ರೌಕ್ಮಿಣೇಯನ ಚಾಪದ ॥
ತಂತುವಂ ಕತ್ತರಿಸಲಾರ್ಜುನಿಯು ಮೇಲೆ ಗದೆ ।
ಯಂ ತೆಗೆದಿಡಲ್ಕವನದಂ ನಡುವೆ ಕಡಿಗೈಯ್ಯ।
ಲೆಂತೊದಗಿದನೊ ಮತ್ತೆ ಬಿಲ್ವಿಡಿದು ಹರಿಸೂನು ಪಾರ್ಥಿಯಂ ತೆಗೆದೆಚ್ಚನು॥೨೨॥

ಪೊಡವಿಗಧಿನಾಥ ಕೇಳ್ ಬಳಿಕಿರ್ವರುಂ ಗಗನ।
ಕಡರಿ ನಿಜಸತ್ವದಿಂದನ್ಯೋನ್ಯಮಾರ್ದಿಸಲ್ ।
ಸಿಡಿಲ ರಭಸದೊಳಂಬುಗಳ್ ಗಲುಭೆಯ ವೀರರ್ ಕ್ರೋಶಮಾತ್ರಕಾಗಿ ॥
ಸಿಡಿದಂತರಿಕ್ಷದಿಂ ಧಾರಿಣೀತಳಕೆ ಪೊಡೆ ।
ಗೆಡೆದರಾಕ್ಷಣದೊಳ್ ಪುರಂದರನ ವಜ್ರದಿಂ।
ಕಡಿವಡೆದು ಮೇದಿನಿಗೆ ಬೀಳ್ವ ಕುಲಗಿರಿಗಳಂತೊಬ್ಬೊಬ್ಬರೊಂದುಕಡೆಗೆ ॥೨೩॥

ಸಾಹಸಮಿದೆಂತೊ ಭೂತಳಕೆ ಬೀಳುತೆ ಬಭ್ರು ।
ವಾಹನಂ ತರಹರಿಸುತೆಚ್ಚರಿಕೆಗುಂದದೆ ಮ।
ಹಾಹವಕೆ ಬೇರೊಂದು ಮಣಿವರೂಥವನಡರ್ದಾಗ ತನ್ನಭಿಮುಖದೊಳು ॥
ಆ ಹರಿಕುಮಾರನಂ ಕಾಣದೆ ದನಂಜಯನ ।
ಮೋಹರವನೈದಿದಂ ಪಸಿದ ಪೆರ್ಬುಲಿ ಮೃಗಸ।
ಮೂಹಮಂ ಪುಗುವಂತೆ ಕಾಡಾನೆ ಕದಳಿಗಳ ತರುಗಳಂ ತುಡುಕುವಂತೆ ॥೨೪॥

ಕವಿದರಾಂತರ್ ನಿಂದರುರುಬಿದರ್ ತರುಬಿದರ್ ।
ತಿವಿದರೆಚ್ಚರ್ಪೊಯ್ದರೊತ್ತಿದರ್ ಮುತ್ತಿದರ್ ।
ವಿವಿಧಾಯುಧಂಗಳಂ ಬೀರಿದರ್ ಪಾರಿದರ್ ವಿಗ್ರಹಾವೇಶದಿಂದ ॥
ತವೆ ತಾಗಿದರ್ ತಡೆವರಡರಿದರ್ ತೊಡರಿದರ್ ।
ತವಕದಿಂ ತಮತಮಗೆ ಕಾದಿದರ್ ಮೋದಿದರ್ ।
ಬವರದೊಳ್ ಪಾರ್ಥಿಯಂ ಬಳಸಿದರ್ ಸೆಳಸಿದರ್ ನರನ ಸೇನೆಯ ಸುಭಟರು
॥೩೫॥

ಒತ್ತರಿಸಿ ಫಲುಗುಣನ ಸೂನುವಂ ಭಾನುವಂ ।
ಮುತ್ತಿದುವು ಚಾತುರಂಗಾಳಿಯುಂ ಧೂಳಿಯುಂ ।
ಬಿತ್ತರದ ಮಣಿಪುರ ಸ್ವಾಮಿಯಂ ಭೂಮಿಯಂ ಸಲೆ ಮುಸುಕಿತಾ ಕ್ಷಣದೊಳು ॥
ಮೊತ್ತದ ಶರಾವಳಿಯ ಸೋನೆಯುಂ ಸೇನೆಯುಂ ।
ಮತ್ತೆ ಚಿತ್ರಾಂಗದೆಯ ಜಾತನಂ ಧಾತನಂ ।
ಹತ್ತಿ ಹರಿದುದು ಬಲಮಶೇಷಮುಂ ಘೋಷಮುಂ ಘೋರತರ ಸಂಗರದೊಳು
॥೩೬॥

ರಿಪುಬಲದ ಮುತ್ತಿಗೆಯ ಕೋಲಾಹಲಂಗಳಂ ।
ವಿಪುಲ ಶಸ್ತ್ರಾಸ್ತ್ರ ಪ್ರಯೋಗಂಗಳುರುಬೆಯಂ ।
ಸಪದಿ ಪ್ರಹಾರದಾಯುಧ ಸಮೂಹಂಗಳಂ ಕಂಡು ಫಲುಗುಣನ ಸೂನು ।
ಕುಪಿತ ಬದ್ಧ ಭ್ರುಕುಟಿ ಮುಖನಾಗಿ ವಹಿಲದಿಂ ।
ದ್ವಿಪ ಹಯ ವರೂಥ ಪತ್ತಿಗಳೆನಿತು ಕವಿದುವವ ನಿ ।
ತಪರಿಮಿತ ಬಾಣಮಂ ಸುರಿದನರಿದಂ ಪೊರೆದನಂತಕ ಪುರದ ಸಿರಿಯನು ॥೩೭॥

ಅರಸ ಕೇಳಾಶ್ಚರ್ಯಮಂ ಬಳಿಕ ಪಾರ್ಥಜನ ।
ಶರವರ್ಷದೊಳ್ ನನೆಯದವರಿಲ್ಲ ಪಾಂಡವನ ।
ಪರಿವಾರದೊಳ್ ಕರಿ ತುರಗ ರಥದ ಪಾಳೆಯದೊಳಿರ್ದ ಜನಜಂಗುಳಿಯೊಳು ॥
ಅರರೆ ಬಿಲ್ಗಾರತನದೇಳ್ಗೆಯೆಂತುಟೊ ಜಗ ।
ದ್ಭರಿತನಾಗಿಹ ವಿಷ್ಣುಮಾಯಾ ಪ್ರಭಾವದಂ ।
ತಿರೆ ಬಭ್ರುವಾಹನನ ಬಾಣಂಗಳೆಲ್ಲರಂ ಮುಸುಕಿ ಮೋಹಿಸುತಿರ್ದುವು ॥ ೩೮ ॥

ರಂಭಾದಿಗಳ ಕುಚದ ಕುಂಕುಮದೊಳಾಳ್ದ ಹಾ ।
ರಂ ಭಾರಿಯಂಕದೊಳ್ ಮಡಿದ ವೀರಾಂಗ ಸರಿ ।
ರಂಭಾತಿಶಯದ ಸಮ್ಮರ್ದನದೊಳಾತನಂ ಪರಿದು ಸೂಸುವ ತೆರೆದೊಳು ॥
ಕುಂಭಿಕುಂಭದ ಸುಮುಕ್ತಾಫಲಂಗಳ್ ಶಾತ ।
ಕುಂಭ ಚಿತ್ರಿತ ಮಾರ್ಗಣದ ರುಚಿಗಳೊಡನೆ ರಣ ।
ಕುಂಭನಿಗೆ ಬೀಳುತಿರ್ದುವು ಬಭ್ರುವಾಹನನ ತೀವ್ರತರದಿಸುಗೆಯಿಂದೆ ॥ ೩೯ ॥

ಮುರಿದುನಗಣಿತ ರಥದ ರಾಜಿಗಳ್ ತೇಜಿಗಳ್ ।
ತೊರೆದುವಸುವಂ ಮಡಿದುವಾನೆಗಳ್ ಸೇನೆಗಳ್ ।
ಕುರಿದರಿವೊಲಾದರರಿವೀರರೊಳ್ ಧೀರರೊಳ್ ಪಾರ್ಥ ನಂದನನ ಮುಂದೆ ॥
ಇರಿದು ಮೆರೆಯಲ್ಕಾಣೆನೊರ್ವರಂ ಸರ್ವರುಂ ।
ನೆರೆ ಗೆಲ್ದತುಳ ಮಾರ್ಗಣದಿಂದೆ ರಣದಿಂದೆ ।
ಹೆರದೆಗೆದು ಕಂಡಕಡೆಗೋಡಿದರ್ ನೋಡಿದರ್ ಜೀವದುಳಿವಂ ಸುಭಟರು ॥೪೦॥

ತಾಗಿ ದಂದುಗಗೊಂಡ ನನುಸಾಲ್ವನಂಗೈಸಿ ।
ಬೀಗಿದಂ ಕರ್ಣಜಂ ಹಂಸಧ್ವಜಂ ಕೆಣಕಿ ।
ನೀಗಿದಂ ಮಾನಮಂ ಯೌವನಾಶ್ವಂ ತಡೆದು ಸೋಲ್ದಂ ಸುವೇಗನಾಂತು ॥
ಸಾಗಿದಂ ಧುರದಿಂದೆ ಸಿತಕೇತು ಸೆಣಸಿ ತಲೆ ।
ದೂಗಿದಂ ಪರಿಭವಕ್ಕನಿರುದ್ಧ ನಿರದಿಳೆಗೆ ।
ಬಾಗಿದಂ ಮೈಮರೆದು ಕೃತವರ್ಮ ಸಾತ್ಯಕಿ ಗಳಿದಿರಾಗಿ ದೆಸೆಗೆಟ್ಟರು ॥ ೪೧ ॥

ಏನೆಂಬೆನಾರಣ ವಸಂತದೊಳ್ ನೆರೆದ ಜಯ ।
ಮಾನಿನಿ ವಿಮುಖಮಾದ ವಿರಹದಿಂ ತಪಿಸುವ ಭ ।
ಟಾನೀಕಮಂ ಬೆದರಿಸದೆ ಮಾಣದೆಂಬಿನಂ ಪಾರ್ಥಿಯ ಶಿಲೀಮುಖಾಳಿ ॥
ದಾನ ಮಾತಂಗ ಘಟೆಗೆರೆಗಿದುದು ಸ್ಯಂದನ ವಿ ।
ತಾನವಂ ಡೋರುಗಳೆದು ಗರಿಯ ಗಾಳಿಯಿಂ ।
ದಾನೆಡೆಗೆ ಶೀಡಿದುದು ಶತಪತ್ರದಳದ ಮೇಲ್ಬೈದಿ ವಿಸಟಂ ಬರಿದುದು ॥ ೪೨ ॥

ಜೋದ ರಾವುತ ರಥಿಕರಳಿದಾನೆ ಕುದುರೆ ತೇರ್ ।
ಪೋದುವೆಣ್ದೆಸೆಗೆ ತಮ್ಮಿಚ್ಛೆಯಿಂ ಪಟ್ಟಣದ ।
ಬೀದಿಗರ್ ಕೂಡಿದರ್ ರಾಯದೊಳ್ ಸೂರೆಗೊಂಡರ್ ಭೂಷಣಾದಿಗಳನು ॥
ಕಾದುವ ಕಲಿಗಳಿಲ್ಲ ಪಡೆಯೊಳ್ ಪಲಾಯನವ ।
ನಾದರಿಸಿದರ್ ಭಟರ್ ಪ್ರದ್ಯುಮ್ನ ಮೊದಲಾದ ।
ರಾದಿಯೊಳ್ ಬಿದ್ದು ಮೋಹಿತರಾದರಾ ಬಭ್ರುವಾಹನನ ಕೋಲ್ಗಳಿಂದ ॥ ೪೩ ॥

ಪಡೆ ಪಡಪುಗೆಟ್ಟು ದೆಸೆದೆಸೆಗೋಡುತಿರ್ಪುದಂ ।
ತಡೆತಡೆದು ಕಡುಗಲಿಗಳಡಗೆಡಹುತಿರ್ಪುದಂ ।
ಬೊಡೆಹೊಡೆದು ಪುರಕಾನೆ ಕುದುರೆಯಂ ಕೂಡಿಕೊಳುತಿರ್ಪುದಂ ದೊರೆದೊರೆಗಳು॥
ನಿಡುನಿಡುಸರಳ್ ನಾಂಟಿ ಮೂರ್ಛೆವಡೆದಿರ್ಪುದಂ ।
ನಡುನಡುಗುತತಿಬಲರ್ ಕೈ ಮರೆಯುತಿರ್ಪುದಂ ।
ಬಿಡಬಿಡದೆ ಫಲುಗುಣಂ ನೋಡಿ ಖತಿಯಿಂದೆ ಘುಡಿಘುಡಿಸಿ ಕಿಡಿಕಿಡಿಯಾದನು
॥ ೪೪ ॥

ಗಾಂಡೀವಮಂ ತುಡುಕಿ ಟಂಕಾರಮಂಬುಜ ಭ।
ವಾಂಡಮಂ ತುಂಬದಿರನೆಂಬಿನಂ ಜೇಗೈದು।
ತಾಂಡವದ ಮೃಡನ ಸಾರೂಪ್ಯಮಂ ಕೈಕೊಂಡು ರೋಷತಾಮ್ರಾಕ್ಷನಾಗಿ॥
ಪಾಂಡವಂ ಮಣಿರಥದೊಳೆಸೆವ ನಡುವಗಲ ಮಾ।
ರ್ತಾಂಡನಂತುಜ್ವಲಿಸುತೈದಿದಂ ಕಾಳಗಕೆ।
ಖಾಂಡವದಹನದಂದು ತನ್ನ ಮೇಲಮರಪತಿ ಮುಳಿದು ಕದನಕೆ ಬಹವೊಲು ॥ ೪೫ ॥

ಆ ನರಂ ಕೋಪಮಂ ತಾಳ್ದು ನಿಜಚಾಪಮಂ।
ಜ್ಯಾ ನಾದಮಂ ಮಾಡೆ ಹಂಸಧ್ವಜಂ ಕೂಡೆ।
ಸೇನೆ ಸಹಿತುರುಬಿದಂ ಪಾರ್ಥಿಯಂ ತುರುಬಿದಂ ಕೂರ್ಗಣೆಗಳಂ ಕರೆಯುತೆ॥
ಬಾನೆಡೆಯೊಳೆತ್ತಲುಂ ದೆಸೆದೆಸೆಯ ಸುತ್ತಲುಮ।
ನೂನ ಶರಜಾಲಮಯಮಾಗಿರ್ದುದಾ ಸಮಯ।
ಮೇನೆಂಬೆನಚ್ಚರಿಯ ಕಾಳಗದ ಹೊಸಪರಿಯು ನತಿಭಯಂಕರಮಾಗಲು ॥ ೪೬ ॥

ಬಳಿಕ ಹಂಸಧ್ವಜಂಗಾ ಬಭ್ರುವಾಹನಂ।
ಗಳವಿಯೊಳ್ ಕಾಳೆಗಂ ಪೂಣ್ದುದು ಕಠೋರಮೆನೆ।
ದಳಕೆ ದಳಮಗ್ಗಳಿಕೆಗಗ್ಗಳಿಕೆ ಧೃತಿಗೆ ಧೃತಿ ಕೊಲೆಗೆ ಕೊಲೆ ಕೋಲ್ಗೆ ಕೋಲು॥
ಮುಳಿಸಿಂಗೆ ಮುಳಿಸು ಗಾಯಕೆ ಗಾಯ ಮದಟಿಗದ।
ಟಳವಡಿಕೆಗಳವಡಿಕೆ ಸಮಮಾಗೆ ದೇವಪುರ।
ನಿಳಯ ಲಕ್ಷ್ಮೀವರನ ಮೈದುನಂ ತಲೆದೂಗೆ ಮೆಚ್ಚಿ ಸುರರುಲಿಯೆ ಮೇಗೆ ॥ ೪೭ ॥

ಇಪ್ಪತ್ತುಮೂರನೆಯ ಸಂಧಿ

ಸೂಚನೆ ॥ ಆಹವ ಸಮರ್ಥ ಕರ್ಣಜನಂ ಕೆಡಹಿ ಬಭ್ರು।
ವಾಹನಂ ಸುರನದಿಯ ಶಾಪದಿಂದರಿಯಲ್ಕೆ।
ರಾಹು ತುಡುಕಿರ್ದಮೃತಕರ ಬಿಂಬದಂತಿರ್ದುದರ್ಜುನನ ತಲೆ ರಣದೊಳು ॥

ಜನಪ ಕೇಳರ್ಜುನನ ಸೈನ್ಯದೊಳ್ ಬಭ್ರುವಾ।
ಹನನಖಿಳವೀರರಂ ಕೆಡಹಿ ಹಂಸಧ್ವಜನೊ।
ಡನೆ ರಣದೊಳೆಚ್ಚಾಡಿ ಸ್ಯಂದನ ಸಹಸ್ರಮಂ ತಡೆಗಡಿದವನ ಪಡೆಯೊಳು ॥
ತನಿಗಲಿಗಳಾರುಸಾವಿರಮಂ ಪೊರಳ್ಚಿ ವಾ।
ಹಿನಿಯನೈದಕ್ಷೋಹಿಣಿಯನೊಕ್ಕಲಿಕ್ಕಿ ಮೇ।
ದಿನಿಗವಂ ಮೈಮರೆದು ಬೀಳ್ವಂತೆ ಸೆಕ್ಕಿದಂ ಕಾಯದೊಳ್ ಸಾಯಕವನು॥ ೧ ॥

ಅಸದಳದೊಳವನ ಸುತರಿರ್ವರುಂ ಮಡಿದ ಬಳಿ।
ಕಸುರಾರಿ ತನ್ನೊಳಾಡಿದ ಬಲ್ಮೆಯಂ ನೆನೆದು।
ದೆಸೆಗೆಟ್ಟು ಬಿದ್ದನಕಟೆಂದು ಹಂಸಧ್ವಜಂಗರ್ಜುನಂ ಮರುಗುತಿರಲು ॥
ಮುಸುಕಿದಂ ಪಡೆಸಹಿತ ಬಂದು ಪಾರ್ಥಿಯ ರಥವ।
ನಸಮ ಭುಜಬಲ ಸುವೇಗಂ ಬಳಿಕ ಸಂಗರಂ।
ಪೊಸತಾದುದಿರ್ವರ್ಗೆ ಕೊಂದನರ್ಜುನಿ ಮತ್ತೆ ವೀರರಿರ್ಭಾಸಿರವನು ॥ ೨ ॥

ಸಾಹಸದೊಳಿರ್ವರುಂ ಸರಿಯೆನೆ ಸುವೇಗಂ ಮ।
ಹಾಹವದೊಳೆಚ್ಚಾಡಿ ವಿರಥನಾಗಿಯೆ ಬಭ್ರು।
ವಾಹನನ ಬಾಣದಿಂದುರೆ ನೊಂದು ಬಿದ್ದನವನಿಗೆ ಬಳಿಕ ಪಾರ್ಥ ನರನ ॥
ಮೋಹರವನೈದಿದಂ ಪ್ರಳಯಭೈರವನ ಕೋ।
ಲಾಹಲಮಿದೆಂಬಂತೆ ಕೊಂದನೆಲ್ಲಾ ಬಲವ।
ದೇಹದೊಳೆಸೆವ ಜೀವ ಪರಮರವೊಲುಳಿದಿರ್ದರಾವೃಷಧ್ವಜ ಪಾರ್ಥರು ॥ ೩ ॥

ರಣದೊಳಂತವರಿರ್ದರತ್ತ ಮುನ್ನೊಂದು ಕಾ।
ರಣಕೆ ಗುರು ಶಾಪಮಂ ಕುಡಲದಂ ಬಿಡಿಸಿ ಫಲು।
ಗುಣನಮಲ ತೀರ್ಥಯಾತ್ರಾಪ್ರಸಂಗದೊಳಂದು ತಾಂ ಪರಿಗ್ರಹಿಸಿ ನೆರೆದ ॥
ಫಣಿರಾಜನಂದನೆಯುಲೂಪಿ ಪಾತಾಳದಿಂದೆ।
ಮಣಿಪುರಕೆ ಬಂದು ಮೂರ್ಛಿತರಾಗಿ ಸಮರ ಧಾ।
ರಿಣಿಯೊಳಿಹ ದೊರೆಗಳಂ ತರಿಸಿ ಮಂತ್ರೌಷಧಿಗಳಿಂದೆ ಪಾಲಿಸುತಿರ್ದಳು ॥ ೪ ॥

ನೃಪ ಕೇಳುಲೂಪಿ ಚಿತ್ರಾಂಗದೆಗೆ ಪೇಳ್ದಸುರ ।
ರಿಪುಸುತಂ ತನ್ನತನಯುಂಬೆರಸಿ ಪಾರ್ಥಜನ ।
ವಿಪುಲಾಸ್ತ್ರದಿಂದೆ ಮೂರ್ಛಿತನಾಗಿ ರಣದೊಳಿರಲಿರ್ವರಂ ತರಿಸಿಕೊಂಡು ॥
ಅಪಗತ ಶ್ರಮರಪ್ಪತೆರದಿಂದೆ ಮಂದಿರದೊ ।
ಳುಪಚರಿಸಿ ಮಣಿ ಮಂತ್ರ ಮೂಲಿಕಾತತಿಗಳಿಂ ।
ತಪಿಸದಂತಾರೈಯುತಿರ್ದಳರ್ಜುನನಿತ್ತ ವೃಷಕೇತುಗಿಂತೆಂದನು ॥ ೫ ॥

ಮಗನೆ ಮಡಿದುದು ಸೈನ್ಯಮನುಸಾಲ್ವಮುಖರಾದ ।
ವಿಗಡರೇರ್ವಡೆದು ಸೈಗೆಡದರಿಳೆಯೊಳ' ತಮ್ಮ ।
ನಗರಿಗನಿರುದ್ಧಪ್ರದ್ಯುಮ್ನರಂ ಕೊಂಡೊಯ್ದರಹಿತರಿವನಂ ಜಯಿಸುವ ॥
ಬಗೆಗಾಣೆನಾದೊಡಂ ನಿಲ್ವೆನಾನಿಲ್ಲ ಕಾ ।
ಳಗಕೆ ನೀನಿರದೆ ಹಸ್ತಿನಪುರಿಗೆ ಪೋಗಿ ಪೇ ।
ಳಗಧರ ಯುಧಿಷ್ಠಿರರ್ಗೀ ಸ್ಥಿತಿಯನೆಂಬಿನಂ ತೋರ್ದುವುತ್ಪಾತಂಗಳು ॥ ೬ ॥

ಪದುರ್ಕುಳ್ಳಿರ್ದುದರ್ಜುನನ ಮಕುಟಾಗ್ರದೊಳ ।
ಡದುರ್ಗೂಡಿಕ್ಕಿದುವು ರಥದೊಳ' ಕಪೋತಂಗ ।
ಳಿದುರ್ದು ತನುಚ್ಛಾಯೆ ತಲೆಯಿಲ್ಲದಿನಿತುಮಂ ಕಂಡು ಬೆರಗಾಗಿ ನರನು ॥
ಪೊರ್ದದಿರದಪಜಯಂ ತನಗಿನ್ನು ಧರ್ಮಜಂ ।
ನಿರ್ದೈವನಹನಲಾ ಶಿವ ಮಹಾದೇವ ಮುರ ।
ಮರ್ದನ ತುರಗಮೇಧವನೆಂತು ಮಾಡಿದಪನೊ ಕರ್ಣಸುತ ಹೇಳೆಂದನು ॥ ೭ ॥

ವಾಜಿ ಸಹಿತಾಂ ಪೋಗಿ ಸಕಲ ಪರಿಕರದಿಂದೆ ।
ತೇಜದಿಂದೊಪ್ಪುವಗ್ನಿಗಳಿಂದೆ ಭೂಸುರ ಸ ।
ಮಾಜದಿಂದಖಿಳ ಋತ್ವಿಕ್ಕುಗಳ ಬಹುವಿಧದ ಮಂತ್ರಘೋಷಂಗಳಿಂದೆ ॥
ರಾಜಿಸುವ ನುತ ಯಜ್ಞಶಾಲೆಯೊಳ್ ಭೂವರಂ ।
ಯಾಜಮಾನ್ಯದೊಳೆಸೆವ ಸಿರಿಯಂ ವೃಕೋದರ ಸ ।
ರೋಜಾಂಬಕಾದಿ ಬಾಂಧವರೊಳಾವೃತನಾಗಿರಲ್ ಕಾಣೆನಕಟೆಂದನು ॥ ೮ ॥

ಪೇಳಲೇನಹುದಿನ್ನು ಬಭ್ರುವಾಹನನೊಡನೆ ।
ಕಾಳೆಗಂಗುಡುವೆನಾಂ ಕುಲಕೆ ನೀಂ ಮಗನೊರ್ವ ।
ಬಾಳುವೆ ಗೆಡಿಸಬೇಡ ಗಜಪುರಕೆ ಪೋಗಿ ಮುರಹರ ಧರ್ಮನಂದನರ್ಗೆ ॥
ಕಾಳಾದ ರಾಜಕಾರ್ಯಸ್ಥಿತಿಯ ನೆಚ್ಚರಿಸು ।
ಕೇಳೆನ್ನ ಮಾತನೆಂದರ್ಜುನಂ ನುಡಿಯಲ್ಕೆ ।
ತಾಳದೆ ವೃಷಧ್ವಜಂ ಕೋಪದಿಂ ಪಾರ್ಥಂಗೆ ಕೈಮುಗಿಯುತಿಂತೆಂದನು ॥ ೯ ॥

ಒಳ್ಳಿತಿದು ತಾತ ನಿನ್ನಂ ಬಿಟ್ಟು ನಾಂಪೋಗ ।
ಉಳ್ಳವನೆ ಗಜನಗರಿಗಕಟ ರಣದೊಳ್ ಜೀವ ।
ಗಳ್ಳನಾದೊಡೆ ಮತ್ಪಿತಾಮಹಂ ಬೀಳದಿರ್ಪನೆ ಗಗನಮಾರ್ಗದಿಂದೆ ॥
ಹೊಳ್ಳೆದೆಯ ಹೊರಬಿಗರೊಳೆಂದುದೀ ನುಡಿಗಳಂ ।
ತಳ್ಳಂಕದಿಂದೆ ನೀನಾಹವದೊಳಿಂತೆಣಿಕೆ ।
ಗೊಳ್ಳಲೇಕಿವನ ಬಿಂಕವನೀಗ ಮುರಿವೆನೆನ್ನಂ ಕಳುಹಿ ನೋಡೆಂದನು ॥ ೧೦ ॥

ತಂದೆಗೋಸುಗ ಮಾಳ್ದನವಸರಕೆ ಗೋನಿಮಿ ।
ತ್ತಂ ದೇವ ವಿಪ್ರಾರ್ಥಕಸುದೊರೆದೊಡಾತಂಗೆ ।
ಸಂದೇಹಮಿಲ್ಲದಾದಪುದು ಗಡ ಕೈವಲ್ಯ ಮಾಗಳಾನೆಂತು ರಣಕೆ ॥
ಹಿಂದುಗಳೆದಪೆ ನೇಕಪತ್ನಿಯಾಗಿಹ ಸತಿಯ ।
ಮುಂದಕ್ಕೈದುವೆನೆಂತು ಭಾನುಸಂಭವನ ಸುತ ।
ನೆಂದೆನಿಸಿಕೊಂಬೆನೆಂತನ್ನೃತಮಂ ನುಡಿವನಲ್ಲಾಹವಕೆ ಕಳುಹೆಂದನು ॥ ೧೧॥

ಮಂದಿ ಸಹಿತೀ ಬಭ್ರುವಾಹನಂ ಬರಲಿ ನಾ।
ನಿಂದು ರಣದೊಳ್ ನಿನ್ನ ಕಂಗಳ್ಗೆ ಹಬ್ಬಮಂ ।
ತಂದಲ್ಲದಿರೆನೆಂದು ವೃಷಕೇತು ಬಲ್ಪಿಂ ಧನಂಜಯಂಗೆರಗಿ ಬಳಿಕ ॥
ಪೊಂದೇರ್ಗಡರ್ದು ನಿಜ ಚಾಪಮಂ ತುಡುಕಿ ನರ ।
ನಂದನನ ಸಮ್ಮುಖಕೆ ನಡೆತಂದು ನುಡಿದನೆಲೆ ।
ಮಂದಮತಿ ಪಾರ್ಥಸುತನಹಡೆ ನಿಲ್ ಕರ್ಣಜಂ ತಾನೆನುತ ತೆಗೆದೆಚ್ಚನು ॥೧೨॥

ಲೇಸನಾಡಿದೆ ಕರ್ಣಸುತನಾದೊಡೊಳ್ಳಿತ್ತೈ ।
ವಾಸಿಯುಳ್ಳವನಪ್ಪೆ ಫಲುಗುಣಂ ಕೊಂದನ ।
ಲ್ಲಾ ಸಮರದೊಳ್ ನಿನ್ನತಾತನಂ ತನಗೆ ನೀನಿದಿರಪ್ಪುದುಚಿತಮೆನುತೆ ॥
ಸೂಸಿದಂ ಕಣೆಗಳಂ ಬಭ್ರುವಾಹನನದಂ ।
ನೇಸರಣುಗನ ಸುತಂ ಬರೆಕೆಯ್ದು ಪಾರ್ಥಿಯಂ ।
ಗಾಸಿಮಾಡಿದನಂಬುಗಳ ಮಳೆಯೊಳವನೀತನಂ ಮುಸುಕಿದಂ ಶರದೊಳು ॥ ೧೩॥

ಇಸುವರೆಚ್ಚಂಬುಗಳನೆಡೆಯೊಳಿಕ್ಕಡಿಗೈವ ।
ರಿಸುವರೋರೊರ್ವರಂ ಗಾಯಗಾಣಿಸಿ ಕೆರ
ಳ್ದಿಸುವರಶ್ವಧ್ವಜ ವರೂಥ ಸಾರಥಿಗಳಂ ತರಿದಿಳೆಗುರುಳ್ಚಿ ಕೂಡೆ॥
ಇಸುವರೊಮ್ಮೊಮ್ಮೆ ಮೈಮರೆದು ಚೇತರಿಸಿಕೊಂ ।
ಡಿಸುವರಾಗ್ನೇಯಾದಿ ದಿವ್ಯಾಸ್ತ್ರನಿಕರದಿಂ ।
ದಿಸುವರಿಂತವರವರ ಸರಿಬರಿಗೆ ಬಾಣಂಗಳಂ ಕರ್ಣಪಾರ್ಥಸುತರು ॥ ೧೪ ॥

ಅಂದಾದ ಕರ್ಣಾರ್ಜುನರ ಕಾಳಗವನವರ ।
ನಂದನರ್ ನಿರ್ಣೈಸುತಿರ್ದರೆನೆ ಶಸ್ತ್ರಾಸ್ತ್ರ ।
ದಿಂದೆ ಶರಸಂಧಾನ ಸತ್ವ ಸಾಹಸ ಲಕ್ಷ್ಯ ಲಳಿ ಲಾಘವಂಗಳಿಂದೆ ॥
ಮುಂದುವರಿವಗ್ಗಳಿಕೆ ಮುಳಿಸು ಮೂದಲೆ ಮೋಡಿ ।
ಬಂದಿ ಭಾರಣೆ ಬಿಂಕ ಬೆಸೆ ಚಮತ್ಕಾರಂಗ ।
ಳಿಂದ ಸಮಮಾಗೆ ಕೈದೋರಿದಂ ವೃಷಕೇತು ಬಭ್ರುವಾಹನನ ಮೇಲೆ ॥ ೧೫ ॥

ಬಳಿಕಖಿಳ ದಿವ್ಯಾಸ್ತ್ರದಿಂದೆ ವೃಷಕೇತು ವೆ ।
ಗ್ಗಳಿಸೆ ವಾಡಬ ವೈಷ್ಣವಂಗಳಿಂ ಪರಿಹರಿಸಿ ।
ಕೊಳುತರ್ಜುನಾತ್ಮಜಂ ಕೆರಳ್ದವನನೆಚ್ಚೊಡುಚ್ಚಳಿಸಿ ತಚ್ಛೋಣಿತವನು ॥
ತೊಳೆಯಲಿಳಿದುವು ಭೋಗವತಿಯ ಜಲಕಂಬುಗಳ್ ।
ಮುಳಿದು ಕರ್ಣಜನಿಸಲ್ಕಾತನಂ ಸುತ್ತಿಸಿತು ।
ಸುಳಿಗಾಳಿಯಂದದಿಂ ಕಣೆಗಳರೆಗಳಿಗೆ ಪರ್ಯಂತರಂ ಸಂಗರದೊಳು ॥ ೧೬ ॥

ಮತ್ತೆ ಹೊಡಕರಿಸಿ ಪಾರ್ಥನ ಸೂನು ಗೋಷಾಗ್ನಿ ।
ಪೊತ್ತಿ ಕಿಡಿಗೆದರಿ ದಿವ್ಯಾಸ್ತ್ರಮಂ ಪೂಡಿ ತೆಗೆ ।
ಯುತ್ತೆಲವೊ ಕರ್ಣಸುತ ನೀನೆ ಬಿಲ್ಲಾಳಪ್ಪೆನಾಂ ಪೊಣರ್ದತಿಬಲರೊಳು ॥
ಚಿತ್ತಚಂಚಲಮಿಲ್ಲದೀಕ್ಷಿಸೆನುತೆಚ್ಚೊಡೆದೆ ।
ಗೊತ್ತಿ ಶಿರಮಂ ಕೂಡಿ ಪಿಡಿದಾಗಸಕೆ ಬಾಣ ॥
ವೆತ್ತಿಕೊಂಡೊಯ್ದು ವೃಷಕೇತುವಂ ತಿರುಗಿಸಿತು ದೆಸೆದೆಸೆಗಳಂ ನಭದೊಳು
॥ ೧೭ ॥

ಭಾನುಸುತ ಸೂನುವಂ ನಭಕೆತ್ತಿ ಕೊಂಡೊಯ್ದು ।
ನಾನಾದೆಸೆಗೆ ತಿರುಗಿಸಿತು ಮುಹೂರ್ತತ್ರಿತಯ ।
ಮಾನೆಲಕೆ ಕೆಡಹದೆ ಮಹಾಶರಂ ಕೆಳಗೆ ಬಿಲ್ವಿಡಿದು ಸನ್ನದ್ಧರಾಗಿ ॥
ಈ ನರನುಮಾ ಬಭ್ರುವಾಹನನನು ವೊಡನೈದೆ ।
ಬಾನೆಡೆಯೊಳಾತಂ ಪಿತಾಮಹಂಗಭಿನಮಿಸಿ ।
ಕಾನನ ಸರಿತ್ಸಾಗರಂಗಳೊಳ್ ಬೀಳದಿಳಿದಂ ಮಣಿಪುರದ ಮಹಿಯೊಳು ॥೧೮॥

ಮೊಗವೆತ್ತಿ ಫಲುಗುಣಂ ನೋಡುತಿರೆ ಕರ್ಣಜಂ ।
ಗಗನದಿಂ ಬಿದ್ದಿಳೆಗೆ ಪೊಡೆಚಂಡಿನಂತೆ ಪುಟ ।
ನೆಗೆದಿದ್ದು ರೋಷದಿಂ ಘುಡುಘುಡುಸಿ ಪ್ರಾರ್ಥಸುತನಂ ಪಚಾರಿಸಿ ಕನಲ್ದು ॥
ತೆಗೆದಿಸಲ್ ಬಾಣಂಗಳಶ್ವ ಸಾರಥಿ ಪತಾ ।
ಕೆಗಳಿಂದಮರ್ದ ರಥಸಹಿತ ಚಿತ್ರಾಂಗದೆಯ ।
ಮಗನಂ ನಭಸ್ಥಳಕೆ ಕೊಂಡಡರ್ದುವು ನಾಕ ಪರಿಯಂತಮಾಕ್ಷಣದೊಳು ॥೧೯॥

ನಭದೊಳತ್ಯುಗ್ರದಿಂ ತಪಿಸುವ ದಿವಾಕರ ।
ಪ್ರಭೆಯಿಂದುರಿಯ ರಥಂ ಬಿದ್ದನುರ್ವಿಗೆ ಪಾರ್ಥಿ ।
ರಭಸದಿಂ ಪೂರ್ವದೊಳಡರ್ದ ಸಂಪಾತಿ ಗರಿ ಸೀದಿಳೆಗೆ ಬೀಳುವಂತೆ ॥
ತ್ರಿಭುವನಕೆ ಪೊಸತಾಗೆ ಕರ್ಣಜಂ ಮತ್ತೆ ರಿಪು ।
ಸುಭಟನಂ ಮೂರುಬಾಣದೊಳೆಚ್ಚು ದಿವಸ ವ ।
ಲ್ಲಭನ ಮಂಡಲದಲ್ಲಿಗೈದಿಸಿ ಪಚಾರಿಸಿ ಜರೆದು ಕೂಡೆ ಬೊಬ್ಬಿರಿದನು ॥೨೦॥

ಬೊಬ್ಬಿರಿವ ಕರ್ಣಜನ ದನಿಗೇಳ್ದು ರೋಷದಿಂ ।
ದಬ್ಬರಿಸಿ ಗಗನದೊಳ್ ತನ್ನ ರಥಮಂ ಬಿಟ್ಟು ।
ಹೆಬ್ಬಟ್ಟದಂತಿವನ ಮಸ್ತಕದ ಮೇಲೆ ಬೀಳಲ್ಕಿವಂ ಕನಲ್ದು ಕೂಡೆ ॥
ಉಬ್ಬಿ ಪುಟನೆಗೆದೆದ್ದು ಸಾಯಕದೊಳೆಚ್ಚವನ ।
ನೆಬ್ಬಿಸಿದನಾಗಸಕೆ ಮತ್ತೆ ಭೀಭತ್ಸು ಕಂ ।
ಡೊಬ್ಬೆರಳನಲ್ಲಾಡಿ ಪೊಗಳಲ್ಕೆ ವೃಷಕೇತು ಫಲುಗುಣಂಗಿಂತೆಂದನು ॥ ೨೧ ॥

ತಾತ ನೋಡಂದು ರಣದೊಳ್ ತೇರ ಗಾಲಿ ವಸು ।
ಧಾತಳದೊಳಳ್ದೊಡಾಯತವಾಗಿ ನಿಲ್ವನಂ ।
ಘಾತಿಸದಿರೆಂದು ನಿನ್ನೊಡನೆ ನಮ್ಮಯ್ಯನಾಡಿದವೊಲಾಡದೆ ಸುಮ್ಮನೆ ॥
ಈತನೆನ್ನಸ್ತ್ರದಿಂ ಗಾಸಿಯಾದಪನೆಂದು ।
ಮಾತಾಡುವನಿತರೊಳ್ ಮತ್ತವನ ಮೇಲೆ ಬಂ ।
ದಾತ ಬೀಳಲ್ ನೊಂದರಿರ್ವರುಂ ಚೇತರಿಸಿಕೊಂಡು ಧುರಕನುವಾದರು ॥೨೨॥

ಮಣಿ ವರೂಥಾರೂಢರಾಗಿ ಬಳಿಕಿರ್ವರುಂ ।
ರಣರಂಗದೊಳ್ ಕಡುಗಿ ಕಾದಿದರ್ ಕಾಯದೊಳ್ ।
ಕಣೆಗಳಿಡಿಯಲ್ ಖಂಡಮಂ ಕಚ್ಚಿ ಪಾರಲರುಣಾಂಬುಗಳ್ ಕೋಡಿವರಿಯೆ ।
ಪೊಣರ್ವರಂಬರಕಡರ್ದೊಮ್ಮೆ ಮೇದಿನಿಗಿಳಿದು ।
ಪೆಣಗುವರ್ ಮತ್ತೊಮ್ಮೆ ನಭದೊಳಿರ್ದೊರ್ವರ್ ಧ ।
ರಣಿಯೊಳಿರ್ದೊರ್ವರ್ ನೆಲದೊಳೊರ್ ವರಾಗಸದೊಳೊರ್ವರಿರ್ದಾ ಕಲಿಗಳು ॥ ೨೩ ॥

ಭೂಪ ಕೇಳಿಂತೈದುದಿನಮೈದೆ ಕಾದಿದರ್ ।
ಚಾಪವಿದ್ಯಾಪ್ರವೀಣರ್ ಬಳಿಕ ಪಾರ್ಥಜಂ ।
ಭಾಪುರೇ ವೃಷಕೇತು ನೀನೆ ಪಟುಭಟನಪ್ಪೆ ಲೋಕದೊಳ್ ಸಾಕೆದೆಯೊಳು ॥
ಶ್ರೀಪತಿಧ್ಯಾನಮಂ ಮಾಡೆನುತೆ ತೆಗೆದಿಸಲ್ ।
ಕೋಪದಿಂದಾಕಣೆಯ ನಿವನರಿವನಿತರೊಳ್ ಪ್ರ ।
ತಾಪದಿಂ ಕವಲಂಬನೆಚ್ಚು ಕತ್ತರಿಸಿದಂ ಕರ್ಣಜನ ಕಂಧರವನು ॥೨೪॥

ಕಡಿದು ಕವಲಂಬುಗಿಯೆ ಕರ್ಣಜನ ತಲೆ ನಭಕೆ ।
ಸಿಡಿದು ಕಂತುಕದಂತೆ ಬಂದು ಬಿದ್ದುದು ಪಾರ್ಥ ।
ನಡಿಗೆ ನಾರಾಯಣ ಮುಕುಂದ ಮಾಧವಯೆನುತೆ ಮುಂಡವತಿವೇಗದಿಂದೆ ॥
ನಡೆದು ರಣದೊಳ್ ಮಣಿಪುರೇಂದ್ರನಂ ಪೊಯ್ದಿಳೆಗೆ ।
ಕೆಡಹಿ ಪಡೆಯೆಲ್ಲಮಂ ಸದೆದುರುಳ್ದುದು ನರಂ ।
ಪಿಡಿದೆರಡು ಕೈಗಳಿಂದಾ ಶಿರವನೆತ್ತಿಕೊಂಡೀಕ್ಷಿಸುತಳಲ್ದನಂದು ॥ ೨೫ ॥

ಬಿಟ್ಟಕಂಗಳ್ ಬಿಗಿದ ಪುರ್ಬುಗಳ್ ಪೆರೆ ನೊಸಲ ।
ಬೊಟ್ಟು ಸೂಚಿಸಿದ ಕುರುಳ್ ಥಳಥಳಿಪ ಕುಂಡಲಂ ।
ಪುಟ್ಟುದುಪ್ಪುಳ್ಮೀಸೆ ಪೊಳೆವಲ್ ನಗುವ ಮೊಗಂ ಕಳಕಳಿಸೆ ಕಳೆಯದಿಂದೆ ॥
ಕಟ್ಟುಗ್ರವಾಗಿರ್ದ ತನಿವೀರರಸದೊಂದು ।
ಗಟ್ಟಿಯೆನೆ ತೋರ್ಪ ಕರ್ಣಜನ ತಲೆಯಂ ನರಂ ।
ನಿಟ್ಟಿಸುತೆ ಪಣೆಯಂ ಪಣೆಯೊಳಿಟ್ಟು ಪೊಸೆದು ಚುಂಬಿಸಿ ಕಂಬನಿಯೊಳಾಳ್ದನು ॥ ೨೬ ॥

ಮಗನೆ ನೀನೆಂತು ಮಡಿದೈ ಕೃಷ್ಣರಾಯಂಗೆ ।
ಸೊಗಸಾದುದೇ ನಿನ್ನಳಿವು ಧರ್ಮತನಯಂಗೆ ।
ಮೊಗದೋರ್ಪ ಸುತರುಂಟೆ ನೀನಲ್ಲದೇನೆಂದಳಲ್ವಳೈ ಕುಂತಿ ನಿನಗೆ ॥
ಪಗೆಯೆಂದು ಕೊಂದೆವಗ್ರಜನ ನೆಮಗಾತನಿಂ ।
ಮಿಗಿಲೆಂದು ಕಂಡಿಹೆವಲ್ತೈ ನಿನ್ನ ನೈವರ್ಗೆ ।
ಸುಗತಿ ಗುಡುವಾತ್ಮಭವರಿರ್ದಪರೆ ಪೇಳೆಂದು ಹಳವಳಿಸಿದಂ ಪಾರ್ಥನು ॥ ೨೭ ॥

ಸಾಲದೆ ಮಹಾಹವದೊಳಭಿಮನ್ಯು ಮಡಿದಳಲ್ ।
ಬಾಲಕಂ ನೀನಿರ್ದೊಡೇನಕಟ ಕಣ್ಣ ಮುಂ ।
ದಾಲಿಸೈ ತನ್ನ ಮಾತಂ ನುಡಿಸಲಾಗದೇ ನೋಡೆನ್ನ ನಾದರದೊಳು ॥
ಪಾಲಿಸೈ ತುರಗಮಂ ಮುಂದಿಯಂ ನಡೆಸಿನ್ನು ।
ಮೇಲಣುದ್ಯೋಗಮಾವುದು ಕಂದ ನಿನ್ನ ಗುಣ ।
ಶೀಲಮಂ ಭೂಪನೊಳ್ ಬಣ್ಣಿಪ ವೃಕೋದರಂಗೇನೆಂಬೆನುಸಿರೆಂದನು ॥ ೨೮ ॥

ಮೂಗಿಲ್ಲದಾನನಂ ಲಿಂಗಮಿಲ್ಲದ ಪೀಠ ।
ಮಾಗಿರದೆ ಪಾಂಡವರ ಸಿರಿಯಿನ್ನು ನೀನಿಲ್ಲ ।
ದಾಗ ನಿನ್ನದಟಿಂದೆ ಯುವನಾಶ್ವಾನುಸಾಲ್ವರ ಸಖ್ಯಮಾದುದೆಮಗೆ ॥
ಯಾಗಮಹುದರಸಂಗೆ ನಿನ್ನಿಂದ ನೀಂ ಪದ್ದು ।
ಕಾಗೆಗೊಡಲಂ ಕೊಟ್ಟು ರಣದೊಳೆನ್ನಂ ಬಿಟ್ಟು ।
ಪೋಗಲಪ್ಪುದೆ ತಂದೆ ವೃಷಕೇತು ಪೇಳೆಂದು ಮರುಗಿದಂ ಸವ್ಯಸಾಚಿ ॥ ೨೯ ॥

ಈ ಪರಿಯೊಳಾ ವೃಷಧ್ವಜನ ತಲೆವಿಡಿದವನ ।
ರೂಪಗುಣ ಶೀಲಮಂ ನೆನೆನೆನೆದು ಶೋಕ ಪ್ರ ।
ಳಾಪದಿಂ ನರನಳಲುತಿರಲತ್ತ ಕರ್ಣಸುತನಚ್ಚ ಬಂಪಪ್ಪಳಿಸಲು ॥
ಧೂಪಿಸಿ ಧರೆಗೆ ಬಿದ್ದೊಡನೆ ಮೂರ್ಛೆ ತಿಳಿದೆದ್ದು ।
ಚಾಪದ ಕೊನೆಗೆ ಮೊಗವನಿಟ್ಟೋರೆಯಾಗಿ ನಿಂ ।
ದಾ ಪಾರ್ಥನಂ ನೋಡಿ ನಸುನಗುತೆ ಚಿತ್ರಾಂಗದೆಯ ತನುಜನಿಂತೆಂದನು ॥೨೦॥

ಎಲೆ ಪಾರ್ಥ ವೈಶ್ಯಸಂಭವರಾವಹೆವು ನಿಮ್ಮ ।
ಬಲ ಸಮಾಜದೊಳಂಬುಗಳ ಪಸರಮಂ ಹರಹಿ ।
ಗೆಲವಿನಗ್ಗದಲಾಭಮಂ ಪಡೆದೆವದಟರ ಶಿರಂಗಳಂ ಕೊಂಡೆವರಿಸಿ ॥
ಕಲಿಗಳೈತಂದು ಜೀವಕೆ ಸಂಚಕಾರಮಂ ।
ಸಲೆ ಬೇಡಿದೊಡೆ ಕೊಟ್ಟೆವಿಚ್ಛೆಯುಳ್ಳೊಡೆ ನಿನ್ನ ।
ತಲೆಯ ಬೆಲೆಗಿದೆ ಸಾಹಸ ದ್ರವ್ಯಮೆನ್ನೊಳೆಂದಾರ್ಜುನಿ ಪಚಾರಿಸಿದನು ॥ ೨೧ ॥

ಇವರೊಳೇನಹುದಿನ್ನು ವೀರನೀ ಕರ್ಣಸುತ ।
ನಿವನ ತಲೆಯುಂ ಸಮರ್ಪಿಸು ಮಹಾದೇವಂಗೆ ।
ತವೆ ರುಂಡಮಾಲೆಯೊಳ್ ಪೂಜ್ಯಮಾಗಿಹುದೀಶ್ವರ ಪ್ರೀತಿಯಹುದು ನಿನಗೆ ॥
ಶಿವನಂದು ಪಾಶುಪತ ಬಾಣಮಂ ಕೊಟ್ಟುದಿ ।
ಲ್ಲವೆ ನಿಜಸ್ವಾಮಿಯುಂ ಮರೆದಪರೆ ಸಾಕಿದರ ।
ಬವಣೆಯೇತಕೆ ನಮಗೆ ಕಾದುವೆಯೊ ತುರಗಮಂ ಬಿಟ್ಟಪೆಯೊ ಪೇಳೆಂದನು ॥

ನೋಡಿದಂ ತಿರುಗಿ ಕಣ್ಣಾಲಗಳ್ ಕೆಂಪಡರೆ ।
ಮಾಡಿದಂ ಕೋಪಮಂ ಧೈರ್ಯದಿಂದಳಲನೀ ।
ಡಾಡಿದಂ ಕರ್ಣಜನ ಶಿರವನಲ್ಲಿರಿಸಿದಂ ಕೊಂಡನುರು ಕಾರ್ಮುಕವನು ॥
ತೀಡಿದಂ ಜೇಗೈದು ತಿರುವಿನೊಳ್ ಬಾಣಮಂ ।
ಪೂಡಿದಂ ತೆಗೆದೆಚ್ಚು ರುಧಿರ ಪ್ರವಾಹವಂ ।
ತೋಡಿದಂ ಬಭ್ರುವಾಹನನ ಸರ್ವಾಂಗದೊಳ್ ಕಲಿಪಾರ್ಥನಾ ಕ್ಷಣದೊಳು॥೨೨॥

ಮೈಸಿರಿಯುಳಲ್ಗಳವು ಲೇಸಾಯ್ತು ಪಗೆಯ ಮಗ ।
ನೈಸಲೇ ಕರ್ಣಜಂ ಸಾಕಿವೇತಕೆ ಬರಿದೆ ।
ವೈಸಿಕದ ಬಾಣಪ್ರಯೋಗಂಗಳಿಂದ್ರ ಕೀಲದೊಳುಮಾಕಾಂತನಿಂದೆ ॥
ಕೈಸಾರ್ದ ಸಾಯಕವನುಗಿಯೆನುತ ಪಾರ್ಥನಂ ।
ಪೈಸರಿಸದೆಚ್ಚನೀ ಬಭ್ರುವಾಹನನ ಕಣೆ ।
ಗೈಸದು ನಭೋವಲಯಮೆನೆ ಕವಿದುವಂಬುಗಳ್ ದೇವತತಿ ಬೆರಗಾಗಲು ॥ ೨೪ ॥

ಮತ್ತವು ಮಸುಳ್ವಂತೆ ನರನಾದುರ್ಜ ತೆಗೆದಿಸಲ್।
ಪೆತ್ತುವು ಸರಳ್ಗಳೊಂದೊಂದಯುತ ನಿಯುತಮಂ ।
ಪೊತ್ತುವು ನಭಸ್ಥಳಕೆ ಕೊಂಡು ರಿಪುಸೇನೆಯಂ ತಾರೆಗಳನುದಿರಿಸಿದುವು॥
ಕಿತ್ತುವು ಕುಲಾದ್ರಿಗಳನಾಗಸದ ಬಟ್ಟೆಯಂ ।
ಕೆತ್ತುವು ದಿಗಂತಮಂ ತುಂಬಿದುವು ಬಾಣಂಗ ।
ಳಿತ್ತುವು ಜಗತ್ತ್ರಯಕೆ ಕಂಪಮಂ ಪಿಂತೆಂದುಮಿಲ್ಲದು ವಿಚಿತ್ರಮೆನಲು ॥೩೫॥

ಕೊರೆದುವಂಗೋಪಾಂಗಮಂ ಪಾರ್ಥನಂಬುಗಳ್ ।
ತೆರದ ಜಾಳಾಂಧ್ರದಂತಾಯ್ತುಗಿದ ಬಟ್ಟೆಗಳ್ ।
ಕರೆದ ಪೆರ್ಮಳೆಯಿಂದೆ ನನೆದ ಜಾದಿನ ಗಿರಿಯೊಳಿರದಿಳಿವ ಕೆಂಬೊನಲ್ಗಳ ॥
ತೆರದೊಳೆಸೆದುವು ರಕ್ತಧಾರೆಗಳ್ ಗಾಯದೊಳ್ ।
ಮರೆದನೊಡಲಂ ನಿಮಿಷಕೊಡನೆ ತರಹರಿಸಿದಂ।
ಜರೆದನರ್ಜುನನಂ ರಣಾಗ್ರದೊಳ್ ಮೂದಲಿಸಿ ಬಭ್ರುವಾಹನಂ ಕನಲ್ದು ॥೩೬॥

ಕರ್ಣ ಭೀಷ್ಮ ದ್ರೋಣರಂ ಗೆಲ್ದು ಕೊಟ್ಟಂ ಸು ।
ಪರ್ಣಧ್ವಜಂ ನಿನಗೆ ಕರುಣದಿಂ ಕಾದಿದ ನ।
ಪರ್ಣಾಧವಂ ನಿನ್ನೊಳಗ್ಗಳಿಕೆ ಪಿರಿದೆಂದು ಮೇದಿನಿಯೊಳರಿಯದವರು ॥
ವರ್ಣಿಸುವರೆಂದು ಬೆರೆತಿಹೆ ತನ್ನ ಸಮರಮಂ।
ನಿರ್ಣೈಸಿದೊಡೆ ವೀರನಹುದೆಂದು ಬಾಣಮಯ।
ದರ್ಣವಮಿದೆತ್ತಣಿಂ ಮೇರೆದಪ್ಪಿದುದೆನಲ್ ಬಭ್ರುವಾಹನನೆಚ್ಚಲು ॥ ೩೭ ॥

ಕೆತ್ತಿದುವು ದಿಕ್ತಟದ ಭಿತ್ತಿಗಳನದ್ರಿಗಳ ।
ನೆತ್ತಿದುವು ಧರೆಯನುಚ್ಚಳಿಸಿ ಕೂರ್ಮನ ಬೆನ್ನ।
ನೊತ್ತಿದುವು ಕಲಕಿದುವು ಸಾಗರವನಾದಿತ್ಯಮಂಡಲವ ನಂಡಲೆದುವು ॥
ಮುತ್ತಿದುವು ಬಾಂದಳವನೆಲ್ಲಮಂ ಕೆಲಕೆಲವು ।
ಪತ್ತಿದುವು ಪರಿದುವಿಳಿದುವು ಸಕಲಲೋಕಕ್ಕೆ।
ಬಿತ್ತಿದುವು ಭೀತಿಯಂ ಬಭ್ರುವಾಹನನ ಶರಜಾಲಮದನೇವೇಳ್ವೆನು ॥ ೩೮ ॥

ಹಾರಿಸಿತು ರಥಮಂ ತುರಂಗಮಂ ರುಧಿರಮಂ।
ಕಾರಿಸಿತು ಸಾರಥಿಯ ಜೀವಮಂ ಸುರಲೋಕ।
ಕೇರಿಸಿತು ಛತ್ರಚಾಮರ ಪತಾಕಾಳಿಯಂ ಕೆಂಗರಿಯ ಗಾಳಿಯಿಂದೆ॥
ತೂರಿಸಿತು ಟೆಕ್ಕೆಯದ ಮೇಲೆ ಹನುಮಂತನಂ ।
ಚೇರಿಸಿತು ಪಾರ್ಥನ ಶರೀರದೊಳ್ ಬಟ್ಟೆಯಂ ।
ತೋರಿಸಿತು ಬಭ್ರುವಾಹನನ ಶರ ಸಂಕುಲಂ ಫಲುಗುಣಂ ಕಂಪಿಸಲ್ಕೆ ॥ ೩೯ ॥

ಮತ್ತೆ ಸಂಗರದೊಳನ್ಯೋನ್ಯಮವರಿರ್ವರ್ಗೆ ।
ಚಿತ್ತದೊಳ್ ಮುಸುಗಿತು ಘನ ಕ್ಷಾತ್ರತಾಮಸಂ।
ಪೊತ್ತಿತತಿರೋಷಾಗ್ನಿ ಬಳಿಕೊರ್ವ ರೊರ್ವರಂ ಜೈಸುವಭಿಲಾಷೆಯಿಂದೆ ॥
ತೆತ್ತಿಸಿದ ಕಣೆಗಳಿಂ ಮೈಗಳ್ಮೆಯೊಗದೊಲಿರೆ ।
ನೆತ್ತರೊರತೆಗಳಿಂದೆ ತನುಗಳುರೆ ಪೂತ ಮು।
ಳ್ಮುತ್ತಗದೊಲಿರೆ ತಂದೆಮಕ್ಕಳೆಚ್ಚಾಡಿದರ್ ನಿಚ್ಚಟದೊಳಚ್ಚರಿಯನೆ ॥೪೦॥

ಜನಪ ಕೇಳ್ ಜಾಹ್ನವಿಯ ಶಾಪದಿಂ ಬಳಿಕ ಪಾ ।
ರ್ಥನ ಸತ್ವಮೆಳದಾಗಿ ಬರೆ ಕಂಡು ಬಭ್ರುವಾ।
ಹನನೆಂದನೆಲೆ ಧನಂಜಯ ತನ್ನ ಜನನಿ ಚಿತ್ರಾಂಗದೆ ಪತಿವ್ರತೆ ಕಣಾ॥
ಅನಿಮಿತ್ತಮಾಕೆಯಂ ಪಳಿದ ಕಾರಣದಿಂದೆ ।
ನಿನಗೆ ಕೈಗುಂದುತಿದೆ ಸಾಕಿನ್ನು ಕೃಷ್ಣನಂ ।
ನೆನೆ ಮರುಳೆ ಮುರಹರನ ಸಾರಥ್ಯಮಿಲ್ಲದಾರಂ ಗೆಲ್ದೆ ಹೇಳೆಂದನು ॥ ೪೧ ॥

ಕ್ಷೋಣಿಗೋಸುಗ ಕೊಂದೆ ನೀನಂದು ಕರ್ಣನಂ।
ಮೇಣವನ ತನಯನ ನೆಳಲ್ಗೆ ಸೇರದೆ ಮನದ ।
ಕೇಣದಿಂದೆನ್ನ ಕೈಯಿಂದೆ ಕೊಲಿಸಿದೆ ಸಾಕು ಹಗೆ ಹರಿದುದಿನ್ನು ನಿನಗೆ ॥
ಪ್ರಾಣಮಂ ಕಾದುಬಿಡುವೆಂ ಪೋಗು ಬಿಲ್ಗೊಳಲ್ ।
ತ್ರಾಣಮುಳ್ಳೊಡೆ ನಿಂದು ಚಿತ್ತದೊಳ್ ನೆನೆ ಚಕ್ರ।
ಪಾಣಿಯಂ ಬಲಮಪ್ಪುದೆಂದು ಜರೆದಂ ಬಭ್ರುವಾಹನಂ ಫಲುಗುಣನನು ॥೪೨॥

ಹೊಣೆ ಹೊಕ್ಕಿದು ತಾಂ ಪಗೆವನಂ ಗೆಲ್ದೊಡಂ।
ಮಾಣದೆ ರಣಾಗ್ರದೊಳ್ ಮಡಿದೊಡಂ ಕ್ಷತ್ರಿಯ।
ರ್ಗೂಣೆಯಮೆ ಕರ್ಣನಂ ಕೊಂದೊಡೇನವನ ಸುತನಳಿದೊಡೇನಾಹವದೊಳು॥
ಕ್ಷೀಣಬಲನ್ ತಾನಕಟ ನೀಂ ಸಮರ್ಥನೇ ।
ಕಾಣಬಹುದೆನುತೆ ಭೀಮಾನುಜಂ ಕೋಪದಿಂ ।
ಬಾಣಂಗಳಂ ಮಗನಮೇಲೆ ಕರೆಯಲ್ಕವಂ ಪರೆಗಡಿಯುತಿಂತೆಂದನು ॥ ೪೩॥

ಪ್ರೀತಿಯಿಂ ದ್ರೋಣನಿತ್ತಂಬುಗಳ ಮನ್ಮಥಾ।
ರಾತಿ ಮುಖ್ಯಾಮರರ್ ಕೊಟ್ಟ ಬಾಣಂಗಳ।
ಜ್ಞಾತಮಾದುವು ನಿನಗೆ ಮರುಳೆ ನಿನ್ನೊಡನಾಡಿ ಕೃಷ್ಣನಂ ಮರೆದೆಯಾಗಿ।
ಏತಕಾಹವಮಿನ್ನು ಸಾಕೆನಲ್ ಫಲುಗುಣಂ।
ಖಾತಿಯಿಂ ಮಗುಳಿಸಲ್ಕಾ ಬಭ್ರುವಾಹನಂ।
ಘಾತಿಸಿದನಡಿಗಡಿಗೆ ಪಾರ್ಥನಂ ಜಾಹ್ನವಿಯ ಶಾಪದಿಂ ಕೈಗಿಡಲ್ಕೆ ॥೪೪॥

ಸುರನದಿಯ ಶಾಪದಿಂ ಮೋಹಿಸಿ ನರಂ ಮುಳಿದು।
ಧುರದೊಳಾವಾವಂಬನಿಸುವ ನದನೆಲ್ಲಮಂ।
ಪರೆಗಡಿದು ಕೋಪದಿಂದೆ ಪೂಡಿದಂ ಬಭ್ರುವಾಹಂ ತನ್ನ ಕಾರ್ಮುಕದೊಳು॥
ನಿರುಪಮ ಜ್ವಾಲಾಮುಖದ ಕಾಮರೂಪದುರು।
ತರ ವಡಬಶಿಖಿಯಂದದರ್ಧಚಂದ್ರಾಕೃತಿಯ।
ಶರವನುತ್ಕೀರ್ಣಸ್ಫುಲಿಂಗ ಪ್ರಕರವನುಗ್ರ ಪ್ರಭಾಭೀಕರವನು ॥ ೪೫ ॥

ಅರ್ಕಾದಿ ಸರ್ವಗ್ರಹಗಳಿಂದ್ರಾದಿ ದೇ।
ವರ್ಕಳಾಂಗಿರಸಾದಿ ಮುನಿಗಳೆಲ್ಲರ್ ಮರುಗಿ।
ದರ್ಕರೆದು ವರುಣಾಂಬಲೆವಂ ಮೇಘಮುದಿರಿತುಲ್ಕಾಪಾತಮಿಳೆ ನಡುಗಿತು।
ಶರ್ಕರಾವರ್ತಂ ಪ್ರವರ್ತಿಸಿತು ಪಾರ್ಥಜಂ।
ಕರ್ಕಶದ ಬಾಣಮಂ ತೆಗೆದಿಸಲ್ ಕಿಡಿಗಳ ಪೋ।
ದರ್ಕವಿಯೆ ದೆಸೆದೆಸೆಗೆ ಭುಗುಭುಗಿಸುವ ಜ್ವಾಲೆ ಮೇಲ್ವಾಯ್ದು ಬರುತಿರ್ದುದು॥

ಅತ್ಯುಗ್ರ ಸಾಯಕಂ ಬರೆ ಪಾರ್ಥನಿದಿರಾಗಿ।
ಪ್ರತ್ಯಸ್ತ್ರದಿಂದಿಸಲದಂ ಕೊಳ್ಳದೈತರಲ್।
ಸತ್ಯಭಾಮಾ ಕಾಂತನಂ ಚಿಂತಿಪನಿತರೊಳ್ ತೀವ್ರದಿಂ ಕೊರಳನರಿಯೆ॥
ಅತ್ಯಧಿಕ ಕುಂಡಲದ ತಲೆ ಚಿಗಿದು ನಭದೊಳಾ।
ದಿತ್ಯ ಮಂಡಲಮಿಳೆಗುರುಳ್ವಂತೆ ಮುನಿಗಣ।
ಸ್ತುತ್ಯ ಕೇಶವ ಕೃಷ್ಣಯೆನುತ ಬಿದ್ದುದು ಕರ್ಣಸುತನ ಶಿರದೆಡೆಗೆ ಪೋಗಿ ॥೪೭॥

ಕಲಿ ವೃಷಧ್ವಜನ ಶಿರದೊಡನೆ ಕೂಡಿತು ನರನ।
ತಲೆ ಕರ್ಣಜನ ಕಬಂಧವನಪ್ಪಿಕೊಂಡುದಾ।
ಫಲುಗುಣನ ಮುಂಡಮಿದನೆಲ್ಲರುಂ ಕಂಡು ಮರುಗಿದರಾಗ ಕರುಣದಿಂದೆ॥
ನಲವಿಂದೆ ಬೊಬ್ಬಿರಿದುದಾ ಬಭ್ರುವಾಹನನ।
ಬಲಮೈದೆ ಮೊಳಗಿದುವು ವಾದ್ಯಂಗಳಾಹವದ।
ಗೆಲವಿಂದೆ ಪುರಕೆ ತಿರುಗಿದನವಂ ವಂದಿ ಸಂದೋಹದ ಪೊಗಳ್ಕೆಯಿಂದೆ ॥ ೪೮ ॥

ತ್ರಿಜಗಂ ಮರುಗುವಂತೆ ಕಾರ್ತಿಕೈಕಾದಶೀ।
ಕುಜವಾರದುತ್ತರಾನಕ್ಷತ್ರದಂದು ವಾ।
ರಿಜಮಿತ್ರನಸ್ತಮಯ ಸಮಯದೊಳ್ ಕೃಷ್ಣಯೆನುತರ್ಜುನನ ತಲೆ ಬೀಳಲು॥
ವಿಜಯೋತ್ಸವದೊಳೈದಿದಂ ಬಭ್ರುವಾಹನಂ।
ನಿಜಪುರಕೆ ಗುಡಿ ತೋರಣದೊಳೆಸೆಯೆ ಬಣ್ಣಿಸಲ್।
ಪ್ರಜೆಗಳಂಗನೆಯರಾರತಿ ಪುಷ್ಪ ದಧಿ ಲಾಜ ದೂರ್ವೆಯೊಳಿದಿರ್ಗೊಳಲ್ಕೆ ॥ ೪೯ ॥

ಮಿಗೆ ಜಯೋತ್ಸವದಿಂದೆ ಪೌರಜನದೊಸಗೆಯಿಂ।
ಬಗೆಬಗೆಯ ಸಿಂಗರದ ಪೆಣ್ಗಳ ಸೊಡರ್ಗಳಿಂ।
ನಗರ ಪ್ರವೇಶಮಂ ಮಾಡಿದಂ ಬಭ್ರುವಾಹನನಿತ್ತಲರಮನೆಯೊಳು ॥
ಸೊಗಸಿಂದುಲೂಪಿ ಸಹಿತಿರುತಿರ್ದ ಚಿತ್ರಾಂಗ।
ದೆಗೆ ಬಂದು ಸುದತಿಯರ್ ದೇವಿ ನೀನೇಂ ನೋಂತು।
ಮಗನಂ ಪಡೆದೆಯೊ ನರನಂ ಕೊಂದು ಬರ್ಪನಾರತಿಗಳಂ ತರಿಸೆಂದರು ॥ ೫೦ ॥

ಮಾನಿನಿಯರಿಂತಾಗ ಚಿತ್ರಾಂಗದೆಗೆ ನಿನ್ನ।
ಸೂನು ಕಲಿ ಪಾರ್ಥನಂ ಸಮರದೊಳ್ ಕೊಂದು ಸುಂ।
ಮಾನದಿಂದೈತಪ್ಪನೆಂದು ಪೊಗಳಲ್ ಕೇಳಿ ಹಮ್ಮೈಸಿ ಬಿದ್ದಿಳೆಯೊಳು ॥
ಹಾ ನಾಥ ಕೆಟ್ಟೆನಕಟೆಂದು ಕಂಬನಿಯೊಳ।
ಳ್ದಾ ನಾರಿ ದುಃಖಾರ್ತೆಯಾಗಲಂತಃಪುರದ।
ಮೀನಾಕ್ಷಿಯರ್ ಕೂಡೆ ರೋದಿಸಲ್ ಪೆರ್ಚಿತು ವಿಷಾದರವಮರಮನೆಯೊಳು ॥೫೧॥

ರಾಜಾಲಯ ದ್ವಾರದೊಳ್ ತೇರನಿಳದು ನೀ।
ರಾಜನಾದಿಗಳಿಂದಿದಿರ್ಗೊಂಬ ಸಂಭ್ರಮದ।
ರಾಜವದನೆಯರೊಳಗೆ ಚಿತ್ರಾಂಗದೆಯ ಶೋಕದಿಂದವಾರ್ತೆಯರಾಗಿರೆ ॥
ಈ ಜಯೋತ್ಸವದೊಳಿಂತೀ ವಿಷಾದ ಧ್ವನಿ ವ।
ಧೂ ಜನಕಿದೇಕೆನುತ ಪೊಕ್ಕನಂತಃಪುರವ।
ನಾ ಜನನಿಯಂಗದಿರವಂ ಕಂಡು ಬೆರಗಾಗಿ ಪಾರ್ಥಸುತ ನಿಂತೆಂದನು ॥ ೫೨ ॥

ಅಪಜಯಂ ತನಗಾದುದಿಲ್ಲ ಸಂಗ್ರಾಮದೊಳ್।
ವಿಪರೀತಮೇತಕಿಂತಾನಂದ ಕಾಲದೊಳ್।
ಕುಪಿತ ಮುಖನಾಗಿ ತನ್ನಂ ಜರೆದೊಡರ್ಜುನನ ಶಿರವನರಿದೆಂ ಧುರದೊಳು ॥
ರಿಪುಭಯಂಕರ ಕರ್ಣ ತನಯಂಗೆ ಸಂಗರದೊ।
ಳುಪಹತಿಯನಿತ್ತೆಂ ಪ್ರಯಾಸದಿಂದದಕೆ ನೀಂ।
ತಪಿಸಲೇಕೆಂದು ಕಣ್ಣೀರ್ದೊಡೆದು ಮಾತೆಯಂ ಸಂತೈಸಲಿಂತೆಂದಳು ॥ ೫೩ ॥

ಲೇಸು ಮಾಡಿದೆ ಮಗನೆ ಪಗೆಯಾದನೇ ನರಂ।
ವಾಸಿ ಬಂದುದೆ ನಿನಗೆ ಮತ್ಕಾಂತನಳಿದನೇ।
ವಾಸವನ ಸೂನು ಮೃತನಾದನೇ ಧರ್ಮಾನುಜಂ ಪ್ರಾಣಮಂ ತೊರೆದನೇ॥
ವಾಸುದೇವನ ಸಖಂ ಮಾಡಿದನೇ ನಿನ್ನಂತ।
ದಾಸುರ ಪರಾಕ್ರಮದೊಳಾತ್ಮಪಿತೃಘಾತಮಂ।
ಹೇಸದೆಸಗಿದರುಂಟೆ ಸುಡಲಿ ಸುತರೇಕೆಂದಳಲ್ದಳಾ ಚಿತ್ರಾಂಗದೆ ॥ ೫೪ ॥

ಈ ಕರ್ಣಸೂತ್ರಮಿಾಕರ್ಣ ತಾಟಂಕಮಿಾ।
ಶ್ರೀಕರಂ ನಿಜ ಜನನಿಗೇಕೆಂದು ಬಿಡಿಸಿದೈ।
ಸಾಕಿನ್ನು ಮಗವೊಮ್ಮಗರಳಿದುದಂ ಕೇಳ್ದಂತು ಸೈರಿಪಳೊ ಕುಂತಿದೇವಿ॥
ಭೂಕಾಂತನೇ ಗೈದಪನೊ ಧರ್ಮರಾಜ ನವಿ।
ವೇಕದಿಂ ಬಾಳ್ಕೆಗಿಡಿಸಿದೆಯೆಂದು ತನಯನಂ।
ಶೋಕದಿಂ ಮಿಗೆ ಬೈದಳಲ್ಪ ಚಿತ್ರಾಂಗದೆ ಗುಲೂಪಿ ಬಳಿಕಿಂತೆಂದಳು ॥೫೫॥

ದೇವಿ ನಿಲ್ಲಿನ್ನು ಮರ್ಜುನನ ಮೃತಿ ಸಂಶಯಂ।
ಭಾವಿಸುವೊಡೆನಗೊಂದು ಕುರುಪುಂಟು ತನ್ನ ಕೇ।
ಳೀವನದೊಳಂದು ಪಾರ್ಥಂ ತನಗೆ ತೋರಿದಂ ದಾಡಿಮ ದ್ರುಮವೈದನು॥
ಆವ ದಿನಕೊಣಗುವುವು ತರುಗಳಾ ದಿನಕೆನ್ನ।
ಜೀವಕಳಿವಹುದೆಂದು ತಾನದಂ ನೋಡಿ ಬಹೆ।
ನೀ ವಿಷಾದಂ ಬೇಡ ಸೈರಿಸೆನೆ ಕಳುಹಿದ ಳುಲೂಪಿಯಂ ಚಿತ್ರಾಂಗದೆ ॥ ೫೬ ॥

ಕ್ರೀಡಾವನಕೆ ಪೋಗಿ ನಿಮಿಷದೊಳಹೀಂದ್ರಸುತೆ।
ನೋಡಿ ಬಂದಲ್ಲಿಯ ದವಾಗ್ನಿಯಿಂದಾ ಪಂಚ।
ದಾಡಿಮ ದ್ರುಮಮೊಣಗಿತರ್ಜುನನ ಮೃತಿ ದಿಟಂ ನಡೆ ಪೋಪೆವಲ್ಲಿಗೆಂದು॥
ಪೀಡಿಸುವ ಶೋಕದಿಂ ಚಿತ್ರಾಂಗದೆಗೆ ನುಡಿಯೆ।
ಕೂಡೆ ಪೊರಮಟ್ಟೆಲ್ಲರುಂ ರಣಕೆ ನಡೆತಂದು।
ಜೋಡಾಗಿ ಬಿದ್ದಿರ್ದ ಕರ್ಣಸುತ ಪಾರ್ಥರಂ ಕಂಡಲ್ಲಿ ಕೆಡೆದಳಲ್ದರು ॥ ೫೭ ॥

ಶೀತೋಷ್ಣರುಚಿಗಳಂ ಗಗನ ಗತಿಯುಂ ಬಿಟ್ಟು।
ಭೂತಳದ ಮೇಲೆ ರವಿ ಶಶಿಗಳೆಸೆವಂತೆ ಪುರು।
ಹೂತಸುತ ಕರ್ಣಜರ ತಲೆಗಳೊಪ್ಪಿರೆ ಕಂಡುಲೂಪಿ ಚಿತ್ರಾಂಗದೆಯುರು॥
ಕಾತರಸಿ ಕರಗಿ ಕಂಬನಿಯೊಳಾಳ್ದಾಗ ಶೋ।
ಕಾತಿಶಯದಿಂದೆ ಪಾರ್ಥನ ಪಾದದೊಳ್ ಪೊರ।
ಳ್ದಾತನ ಗುಣಂಗಳಂ ಸಾಲ್ಗೊಳಿಸಿ ಬಣ್ಣಿಸಿ ಪೊರಳ್ದು ಗೋಳಿಡುತಿರ್ದರು ॥೫೮॥

ನಿನ್ನಂಗ ಸಂಗಮನಗಲ್ದಾಯ್ತು ಪಲಕಾಲ।
ಮಿನ್ನೊಮ್ಮೆ ನೆರೆಯಲಾಗದೆ ನಾಥ ಮೂಜಗದೊ।
ಳುನ್ನಿಸಲ್ ನಿನಗೆ ಪಡಿಯಹರುಂಟೆ ರೂಪ ಗುಣ ವಿಕ್ರಮ ಪ್ರಾಥಗಳೊಳು॥
ಭಿನ್ನಿಸದೆ ಕೆಚ್ಚೆದೆಯ ಸತಿಯರಾವಸುವಿಡಿದೆ।
ವಿನ್ನೆಗಂ ಕೇಳ್ದಂತು ಸೈರಿಪರೊ ಕಾಂತನೊಳ್।
ನನ್ನಿಯುಳ್ಳರಸಿಯರ್ ದ್ರೌಪದಿ ಸುಭದ್ರೆಯರದೆಂತುಳಿವರಕಟೆಂದರು ॥ ೫೯ ॥

ಅಡಿಯೊಳ್ ಪೊರಳ್ದು ಕಾಯವನಪ್ಪಿ ಕೈಗಳಂ।
ಪಿಡಿದುರಸ್ಥಳಕೆ ತೆಗೆದೊಂದಿಸಿ ಕೊರಲ್ಗೆ ಕಡಿ।
ವಡೆದ ತಲೆಯಂ ಕೂಡಿ ನೋಡಿ ಮುಂಡಾಡಿ ಪಣೆಗಿಟ್ಟು ಮೊಗಮಂ ಚುಂಬಿಸಿ॥
ಒಡನೊಡನೆ ಪಾರ್ಥನ ಚರಿತ್ರಮಂ ಸಾಲ್ಗೊಳಿಸಿ।
ನುಡಿನುಡಿಗಳಲ್ಲದ್ದು ಕೆಲದೊಳ್ ಕಡೆದ ಕರ್ಣಜಂ।
ಗೊಡಲುರಿಯೊಳಕಟ ಸುತ ಹಾಯೆಂದು ಮರುಗಿದರುಲೂಪಿ ಚಿತ್ರಾಂಗದೆಯರು ॥೬೦॥

ಬಳಿಕ ಚಿತ್ರಾಂಗದೆ ಕುಮಾರನಂ ನೋಡಿ ಕೊಲೆ।
ಗೆಳಸಿದೈ ಜನಕಂಗೆ ಜನನಿಯರ್ ನಾವಿರ್ವ।
ರುಳಿಯಲೇಕಿನ್ನಕಟ ವೈಧವ್ಯಮಂ ತಾಳಬಲ್ಲೆವೆ ಮಹೀತಳದೊಳು॥
ಸೆಳೆದು ಪೊಡೆ ಖಡ್ಗದಿಂದೆಮ್ಮ ಶಿರಂಗಳಂ।
ಬಳಿಕೈದೆ ಭಾರ್ಗವಂ ಕೊಂದುದಿಲ್ಲವೆ ತಾಯ।
ನಳುಕದಿರ್ ಪಿತನ ಮಾತೃದ್ವಯದ ವಧೆ ನಿನಗೆ ಸಫಲಮಾದಪುದೆಂದಳು ॥ ೬೧॥

ತಾಯ ಮಾತಂ ಕೇಳ್ದು ಶೋಕಕಲುಷಿತನಾಗಿ।
ಪ್ರೀಯದಿಂ ಪೋಗಿ ಕಂಡೊಡೆ ತನುಜನಲ್ಲೆಂದು।
ನೋಯೆ ನುಡಿದಾಹವಂ ಬೇಕೆಂದೊಡೀತನಂ ಕೊಂದೆ ನಾಂ ಪಂತಮೆಂದು॥
ದಾಯತಪ್ಪಿದ ಬಳಿಕ ಪೇಳ್ದೊಡೇನಹುದಿನ್ನು।
ಹೇಯಮಾದುದು ತನ್ನ ಬಾಳ್ಕೆ ಪಿತೃವಧೆಯೊಳೀ।
ಕಾಯಮಂ ಬಿಡುವೆನೀಗಲೆ ನೋಳ್ಪುದೆಂದವಂ ಕಿಚ್ಚುವುಗಲನುವಾದನು ॥ ೬೨॥

ತಂದೆಯಂ ಕೊಂದುಳಿದನೆಂದು ಲೋಕದ ಜನಂ।
ನಿಂದಿಸದೆ ಬಿಡದಿದಕೆ ನಿಷ್ಕೃತಿಗಳಂ ಕಾಣೆ।
ನೊಂದು ಮಂತ್ರಧ್ಯಾನ ಜಪ ತೀರ್ಥ ಯಾಗ ಯೋಗಂಗಳಿಂ ಕಳೆದುಕೊಳಲು॥
ಸಂದಿಗ್ಧಮಾಗಿರ್ದ ಪಾತಕಂ ಪೋಪುದು ಮು।
ಕುಂದನ್ಮರಣೆಯಿಂದಮರ್ಜುನಂ ವೈಷ್ಣವಂ।
ಬಂದುದಪಕೀರ್ತಿ ನಾಂ ನಾಚದೆಂತಿರ್ದಪೆಂ ಪುಗುವೆನಗ್ನಿಯೊಳೆಂದನು ॥೬೩॥

ಅನಲಪ್ರವೇಶಮಂ ನಿಶ್ಚಯಿಸಿ ಬಭ್ರುವಾ।
ಹನನಗುರು ಚಂದನದ ಕಾಷ್ಠಂಗಳಂ ತರಿಸು।
ವನಿತರೊಳ್ ಕಂಡು ಚಿತ್ರಾಂಗದೆ ಕನಲ್ದು ಸುತನಂ ಬೈದು ಫಲುಗುಣಂಗೆ॥
ವನಜನಾಭಂ ಮಿತ್ರನಿನ್ನೆಗಂ ಮನದೊಳಂ।
ದನುಪಮ ಕೃಪಾಳು ತಾನಿಲ್ಲಗೈದದೆ ಮಾಣ್ದ।
ಪನೆ ಸೈರಿಸನ್ನೆಗಂ ನರನ ಜೀವಕ್ಕೆ ಪೊಣೆ ದೇವಪುರ ಲಕ್ಷ್ಮೀಶನು ॥೬೪॥

ಇಪ್ಪತ್ತುನಾಲ್ಕನೆಯ ಸಂಧಿ

ಸೂಚನೆ ॥ ಪತ್ನಿಯರ ದೆಸೆಯಿಂದ ಮಡಿದಿರ್ದ ಪಾರ್ಥಂ ಪ್ರ ।
ಯತ್ನದಿಂ ನಿಜಸುತಂ ತಂದ ಸಂಜೀವಕದ ।
ರತ್ನದಿಂ ಕೃಷ್ಣಪ್ರಸಾದದಿಂ ಜೀವಿಸಿದನುರ್ವಿಗಾಶ್ಚರ್ಯಮೆನಲು ॥

ರಾಯ ಕೇಳಲ್ಲಿಗಸುರಾಂತಕಂ ಬಂದು ಕೌಂ ।
ತೇಯನಂ ನೋಡದಿರನನ್ನೆಗಂ ಸೈರಿಪುದು ।
ಪಾಯಮುಳ್ಳೊಡೆ ನರನ ಜೀವಮಂ ಪಡೆವುದಿಂತಗ್ನಿಪ್ರವೇಶದಿಂದೆ ॥
ಸಾಯಲೇನಹುದೆಂದಳಲ್ದು ಸುತನಂ ಬೈದು ।
ಬಾಯಾರಿ ಚೀರಿ ಚಿತ್ರಾಂಗದೆ ಹಲುಬಲೊಂದು ।
ಪಾಯಮಂ ಕಂಡು ನುಡಿದಳ್ ಪನ್ನಗೇಂದ್ರಸಂಭವೆ ಬಭ್ರುವಾಹನಂಗೆ ॥ ೧ ॥

ಮಗನೆ ಮಡಿದರ್ಜುನಂ ಮಗುಳೇಳ್ವತೆರನಂ ನಿ ।
ನಗೆ ಪೇಳ್ವೆ ನಾನೀಗ ಪಾತಾಳಲೋಕದೊಳ್ ।
ಖಗರಾಜನೊರಸಿದಹಿನಿಕರದಸು ಮರಳ್ವಂತೆ ಫಣಿವರಂ ಬೇಡಿಕೊಳಲು ॥
ಅಗಜಾರಮಣನಿತ್ತ ಸಂಜೀವಕದ ಮಣಿಯು ।
ರಗಪತಿಯೊಳಿಹುದದಂ ಸತ್ವದಿಂ ತರಬಲ್ಲ ।
ವಿಗಡರಂ ಕಾಣೆನೀ ಮೂಜಗದೊಳೆನೆ ಬಭ್ರುವಾಹನಂ ಖತಿಗೊಂಡನು ॥ ೨ ॥

ಸಂಜೀವಕದ ಮಣಿಯನೀಗ ತಾರದೊಡೆ ತ ।
ನ್ನಂ ಜನನಿ ಪೆತ್ತಳೀತಕೆ ಮತ್ತೆ ಮಡಿದಿಹ ಧ ।
ನಂಜಯನ ಹರಣಮಂ ಪಡೆವೆನವನೀಯದೊಡೆ ಫಣಿಲೋಕಮಂ ಸುಡುವೆನು ॥
ಕಂಜಜ ಕಪರ್ದಿಗಳೊಳ್ ತೊಡಕಿದೊಡೊರಲ್ಚುವೆಂ ।
ಭಂಜಿಸುವೆನಖಿಳ ದಿಕ್ಪಾಲರಂ ಸೆಣಸಿದೊಡೆ ।
ಸಂಜಾತನಾದುದಕೆ ಸಫಲಮಾಯ್ತೆನುತುಬ್ಬಿದಂ ಬಭ್ರುವಾಹನಂದು ॥ ೩ ॥

ಮರುಳಾಟಮೇಕೆ ನಿನ್ನದಟು ಕೊಳ್ಳದು ಮಗನೆ ।
ಗರಳಮಯದುರಿಯೊಳಿವೆ ಸೀವುದು ಕಣಾ ನೋಡ ।
ಲುರಗಪತಿ ಶೇಷರಾಜನ ಕೋಶದೆಡೆಯೊಳಿಹ ಸಂಜೀವಕದ ಮಣಿಯನು ॥
ತರಬಲ್ಲನಾವವಂ ಗುಳಿಕ ವಾಸುಕಿ ತಕ್ಷ ।
ಕರ ಶಂಖ ಪದ್ಮ ಕರ್ಕೋಟಕಾದಿಗಳ ಭೀ ।
ಕರ ವಿಷೋತ್ಕರದಿಂದೆ ಕಾಹು ಬಲಿದಿಹುದೆನಲುಲೂಪಿಗವ ನಿಂತೆಂದನು ॥ ೪ ॥

ಈ ಮಹಾಹಿಗಳ ವಿಷಕಳಕುವೆನೆ ಯೆನ್ನ ಮಾ।
ತಾಮಹಂ ಹರಿಗೆ ಹಾಸಿಗೆಯಾದವಂ ಮೇಲೆ।
ಭೂಮಿಯಂ ಪೊತ್ತವಂ ಶೇಷರಾಜಂ ಗಾಸಿಯಹನೆಂಬ ಭಯಮಲ್ಲದೆ॥
ಆ ಮಣಿಯನೀಯದೊಡೆ ಸಪ್ತಪಾತಾಳಮಂ।
ಸಾಮರ್ಥ್ಯದಿಂದ ಭೇದಿಸಿಕೊಂಡು ಬಂದು ಸು।
ತ್ರಾಮಸುತನಂ ಬದುಕಿಸದೆ ಮಾಣ್ದಪೆನೆ ತಾಯೆ ಹೇಳೆಂದೊಡಿಂತೆಂದಳು ॥೫॥

ಒಂದು ಮೊದಲೊಂಬತ್ತುನೂರು ಕಡೆಯಾದ ಪೆಡೆ।
ಯಿಂದೆಸೆವ ನಾಗಂಗಳತಿ ವಿಷೋಲ್ಬಣದುರಗ।
ವೃಂದ ಪೋಲೈಸುವುದು ಸಾಸಿರ ಮೊಗದ ಶೇಷರಾಜನಂ ಪಾತಾಳದ।
ಮಂದಿರದೊಳೊಮ್ಮೊಮ್ಮೆ ಗರುಡನಲ್ಲಿಗೆ ಬಂದು।
ಕೊಂದಹಿಗಳಂ ಬದುಕಿಪೊಡೆ ತೋರಿಸುವರಲ್ಲ।
ದೆಂದುಂ ತೆಗೆಯರಾ ಮಣಿಯನೆಂದುಲೂಪಿ ನುಡಿಯಲ್ಕಾತ ನಿಂತೆಂದನು ॥೬॥

ಲೇಸನಾಡಿದೆ ತಾಯೆ ಪಾತಾಳದಲ್ಲಿಹ ಮ।
ಹಾಸರ್ಪ ಸಂಕುಳವನೆಲ್ಲಮಂ ಕೊಂದಳಿದ।
ವಾಸವನ ಸುತನಂ ಮಡಿದ ವೀರವೃಷಕೇತುವಂ ಬಿದ್ದ ಸೈನಿಕವನು॥
ಆ ಸುಮಣಿಯಂ ಕೊಂಡು ಬಂದೆಬ್ಬಿಸಿದ ಬಳಿಕ।
ಮಿಾಸಲಾಗಿರ್ದ ಸಂಜೀವಕವನೀವೆಂ ಗ।
ತಾಸುವಾಗಿರ್ದ ಫಣಿಗಳ್ಗೆಂದು ಪಾರ್ಥಜಂ ನುಡಿದೊಡವಳಿಂತೆಂದಳು ॥೭॥

ತನಯ ಕೇಳನ್ಯರೊಳ್ ಕೊಳ್ವ ಕಜ್ಜದ ಮಾಳ್ಕೆ।
ವಿನಯದಿಂದೆಸಗಿದೊಡೆ ಸಲೆ ಸುಗುಣಮಾದಪುದು।
ಮೊನೆಯ ಮೇಲಪ್ಪುದಾಯಾಸಮಂತದರಿಂದೆ ನೀನತಿಕ್ರಮಿಸದೇಡ॥
ತನಗುಂಟು ಕೆಳೆ ಪುಂಡರೀಕನೆಂಬಹಿಯೊರ್ವ।
ನನುಕೂಲನೆಮ್ಮ ತಂದೆಗೆ ಮಂತ್ರಿ ತಾನೀಗ।
ನೆನೆದೊಡಿಲ್ಲಿಗೆ ಬರ್ಪನಾತನಂ ಕಳುಹಿ ತರಿಸುವೆನಾ ಮಣಿಯನೆಂದಳು ॥೮॥

ಇಂತೆಂದುಲೂಪಿ ಬಳಿಕಾ ಪುಂಡರೀಕನಂ।
ಚಿಂತಿಸುವಿನಂ ಬಂದಿದೇಕೆ ಬರಿಸಿದೆಯೆನಲ।
ನಂತನಲ್ಲಿಗೆ ಪೋಗಿ ನಿನ್ನ ತನುಜೆಯ ಕರ್ಣತಾಟಂಕದುಳಿವಿಗಳಿದ॥
ಕುಂತೀಕುಮಾರಕಂ ತನ್ನ ರಮಣಂ ಬದುಕು।
ವಂತಮೃತ ಸಂಜೀವಕದ ಮಣಿಯನೀವುದೆಂ।
ದಂತರಿಸದಖಿಳ ವೃತ್ತಾಂತಮಂ ಪೇಳ್ದದಂ ಕೊಂಡು ಬಾ ನಡೆಯೆಂದಳು ॥೯॥

ಆ ಪುಂಡರೀಕ ಫಣಿ ಬಳಿಕ ದುಃಖಿತೆಯಾದು ।
ಲೂಪಿಯಂ ಸೈತಿಟ್ಟು ಸಂಜೀವಕದ ಮಣಿಗೆ ।
ಪ್ಪೋಪೆನಾ ನಹಪತಿಯ ಸಮಯಮಂ ಕಾಣ್ಬುದರಿದಲಿ ತಳುವಾಗದಿರದು ॥
ಈ ಪಾರ್ಥನಂಗ ಕಳಿವಾಗದಿರದನ್ನೆಗಂ ।
ರೂಪು ಕೆಡದಂತೆ ಕಚ್ಚುವೆನೀಗ ಮದ್ವಿಷಂ ।
ವ್ಯಾಪಿಸಲೊಡಲ್ ಕಳಲದೆನೆ ಬಭ್ರುವಾಹನಂ ಕೇಳ್ದು ಮತ್ತಿಂತೆಂದನು ॥ ೧೦ ॥

ಎಲೆ ಪುಂಡರೀಕ ಕೇಳೀ ಕರ್ಣಸಂಭವಂ ।
ಕಲಿ ಚೆಲ್ವನತಿಬಲಂ ಶುಚಿ ಸುಗುಣಿ ಕೋವಿದಂ ।
ಕುಲವಿವರ್ಧನನೀತನಂಗಮಂ ಕೆಡದಂತೆ ಮೊದಲೆ ನೀ ಕಚ್ಚಿ ಬಳಿಕ ॥
ಫಲುಗುಣನ ದೇಹಮಂ ಕಚ್ಚೆನಲೊಡರ್ಚಿ ಫಣಿ ।
ತಿಲಕನವರಿರ್ವರ ಶರೀರಂಗಳಂ ಕಚ್ಚಿ ।
ಸಲೆ ಸಂತಪಿಟ್ಟು ನಂಬುಗೆಗೊಟ್ಟು ಬೀಳ್ಕೊಂಡು ಪಾತಾಳಕೈತಂದನು ॥ ೧೧ ॥

ಅತಳದಾಶ್ಚರ್ಯಮಂ ವಿತಳದ ವಿಚಿತ್ರಮಂ ।
ಸುತಳದ ಸುರುಚಿಯಂ ಮಹಾತಳದ ಮಣಿಮಯೋ ।
ನ್ನತಿಯಂ ತಳಾತಳದ ತಾಣದತಿಶಯಮಂ ರಸಾತಳದ ರಂಜಿತವನು ॥
ಪ್ರತಿದಿನದೊಳರಿದರಿಯುತಾ ಪುಂಡರೀಕಫಣಿ ।
ಪತಿ ನೋಡಿ ನೋಡಿ ವಿಸ್ಮಿತನಾಗುತ್ತೈದಿದಂ ।
ವಿತತ ರತ್ನ ಪ್ರಭಾ ಶೋಭಿತದ ಪಾತಾಳಲೋಕದಹಿರಾಜನೆಡೆಗೆ ॥ ೧೨ ॥

ಫಲಿತ ಕಾಂಚನ ವೃಕ್ಷಲತೆಗಳ ಬನಂಗಳಿಂ ।
ಜ್ವಲಿತ ನವರತ್ನ ಸೌಧಂಗಳ ಪುರಂಗಳಿಂ ।
ಕಲಿತ ಪೀಯೂಷ ದೀರ್ಘಿಕೆಗಳಿಂ ಕನಕಾರವಿಂದದ ಕೊಳಂಗಳಿಂದೆ ॥
ಲಲಿತ ಲಾವಣ್ಯದುರಗಾಂಗನೆಯರಿಂ ಸಮಾ ।
ಕುಲಿತವಾಗಿಹ ಭೋಗವತಿಯ ನದಿಯಿಂದೆ ನಿ ।
ಶ್ಚಲಿತ ಸುಖನಿಲಯಮೆನಿಸಿರ್ದ ಪಾತಾಳಕ್ಕೆ ಪುಂಡರೀಕಂ ಬಂದನು ॥ ೧೩ ॥

ನವರತ್ನಮಯದ ಗೋಪುರದ ಕಾಂತಿಯ ದಿವ್ಯ ।
ಭವನದಿಂ ನಾಗ ವಧುಗಳ ನೃತ್ತಗೀತದು ।
ತ್ಸವದಿಂದ ಪುಣ್ಯ ಗಂಧೋತ್ಕರದ ಪದ್ಮವನ ಪುಷ್ಪವಾಟಿಕೆಗಳಿಂದೆ ॥
ವಿವಿಧೋಪಚಾರ ಕೃತಪೂಜೆಗಳ ನಾನಾ ವಿ ।
ಭವದಿಂದೆಸೆವ ಮಹಾ ಹಾಟಕೇಶ್ವರನೆಂಬ ।
ಶಿವಲಿಂಗಮಿರೆ ಭೋಗವತಿಯ ತಟದೊಳ್ ಕಂಡು ಪುಂಡರೀಕಂ ಮಣಿದನು ॥೧೪॥

ದಿವ್ಯಭವನದೊಳನೇಕಾಸುರ ಸುರಾದಿ ನಿಖಿ।
ಳ ವ್ಯಾಳ ವೃತನಾಗಿ ವರ ಫಣಾಮಣಿ ಸಹ ।
ಸ್ರವ್ಯೂಹದರ್ಚಿಯಿಂದುರು ಕಾಯಕಾಂತಿಯಿಂ ದೇದಿಪ್ಯಮಾನನಾಗಿ ॥
ಅವ್ಯಾಕುಲದೊಳಚ್ಯುತ ಧ್ಯಾನದಿಂದೆ ಕ।
ರ್ತವ್ಯದಿಂದವನಿಯಂ ತಾಳ್ದನಘೋರ್ಯ್ರುತ್ತಮ।
ದ್ರವ್ಯಕಧಿಪತಿಯಾಗಿ ರಂಜಿಸುವ ಶೇಷನೋಲಗಕುರುಗನೈತಂದನು ॥ ೧೫ ॥

ಪುಂಡರೀಕಂ ಸಮಯುಮರಿದುರಗ ರಾಜನಂ ।
ಕಂಡೆರಗಿ ನುಡಿದನವಧರಿಸೆಲೆ ಫಣೀಂದ್ರ ಭೂ।
ಮಂಡಲದ ರಾಯರೊಳ್ಪಾಂಡುಸುತ ಕೌರವರ್ಗಾದುದಾಹವಮದರೊಳು ॥
ದಿಂಡುದರಿದಹಿತರಂ ಭೀಷ್ಮನಂ ಕೊಂದನಾ ।
ಖಂಡರಾತ್ಮಜನದರ ಪಾತಕಕೆ ನೃಪತಿ ಕೈ।
ಕೊಂಡನಚ್ಯುತನಾಜ್ಞೆಯಿಂ ಕ್ರತುವನಾಯ್ತು ಗಂಗಾಶಾಪಮರ್ಜುನಂಗೆ ॥೧೬॥

ಆ ಜಾಹ್ನವಿಯ ಶಾಪದಿಂ ಬಭ್ರುವಾಹನಂ।
ವಾಜಿಸಹಿತೈದಿದ ಧನಂಜಯುನ ತಲೆಯಿಂ ಮ।
ಹಾಜಿಯೊಳ್ತರಿಯೆ ಪತಿಶೋಕಮಂ ತಾಳಲಾರದೆ ನಿನ್ನ ಮಗಳುಲೂಪಿ ॥
ತೇಜದಿಂದೆಸೆವ ಸಂಜೀವಕದ ಮಣಿಯಂ ಪ್ರ।
ಯೋಜನಕೆ ತಹುದೆಂದು ಕಳುಹಿದೊಡೆ ಬಂದೆನೀ।
ವ್ಯಾಜದಿಂದೆ ನೋಡೆನುತೆ ಕೊಟ್ಟನವಳ ಕುರಹಂ ಪನ್ನಗೇಶ್ವರಂಗೆ ॥೧೭॥

ಆ ಪುಂಡರೀಕನಿಂತೆಂದುರಗ ರಾಜಂಗು।
ಲೂಪಿ ಕಳುಹಿದ ಕರ್ಣಕಂಠ ಭೂಷಣದೆ ಸ್ವ।
ರೂಪಮಂ ಮುಂದರಿಸಿ ನಿನ್ನ ನಿಜ ಜಾಮಾತನರ್ಜುನಂ ಸುಜನನಿಳೆಗೆ ।
ಶ್ರೀಪತಿಯು ಸಖನಿಂದ್ರಸೂನು ಧರ್ಮಾನುಜಂ।
ಭೂಪಾಲರೊಳ್ ಪೆಸರ್ವಡೆದವಂ ಜೀವಿಸೆ ಪ।
ರೋಪಕಾರಂ ಪೊಲ್ಲಮಲ್ಲ ನಿನಗದರಿಂದೆ ಕುಡುವುದು ಮಣಿಯನೆಂದನು ॥೧೮॥

ಶೇಷರಾಜಂ ಬಳಿಕ ತನ್ನ ತನುಜೆಯ ಕರ್ಣ ।
ಭೂಷಣವನಾ ಕಂಠಸೂತ್ರಮಂ ಕಂಡು ಸಂ।
ತೋಷವರ್ಜಿತನಾಗಿ ಪೊರೆಯೊಳಿಹ ತಕ್ಷಕಾದ್ಯಹಿಪತಿಗಳಂ ನೋಡುತೆ॥
ದೋಷಮೇನಿದಕೆ ಮಣಿಯಂ ಕುಡುವೆವೈಸಲೆ ವಿ।
ಶೇಷ ಫಲಮಹುದಾರ್ಜಿಸಿದ ವಸ್ತು ಲೋಗರಧಿ ।
ಲಾಷೆಗಾದೊಡೆ ಪಾರ್ಥನುತ್ತಮಂ ವೈಷ್ಣವಂ ಜಾಮಾತನೆಮಗೆಂದನು ॥೧೯॥

ಕೇಳಿ ದುಮ್ಮಾನದಿಂ ತಮತಮಗೆ ನಿಖಿಳ ಸ ।
ರ್ಪಾಳಿ ಚಿಂತಿಸೆ ಬಳಿಕ ಧೃತರಾಷ್ಟ್ರನೆಂಬ ದು ।
ರ್ವ್ಯಾಳಪತಿ ನುಡಿದನೆಲೆ ನಾಗೇಂದ್ರ ತಮ್ಮವಸರಕ್ಕೆ ಬೇಹುರದನನ್ಯರ ।
ವೇಳಗಿತ್ತೊಡೆ ಮರಳಿ ಬಂದುಪುದೆ ಮಾನವರ್।
ಖೂಳರ್ ಕೃತಘ್ನರುಪಕಾರಮಂ ಬಲ್ಲರೆ ವೃ।
ಥಾಳೋಚನೆಗಳೇತಕಿದಕೆ ಮಣಿಯಂ ಕುಡದಿರೆನೆ ಫಣಿಪನಿಂತೆಂದನು ॥ ೨೦ ॥

ನಾಡೊಳೂರೊಳ್ ಮನೆಯೊಳೊರ್ರೋರ್ವರುಂಟು ಪರ।
ಪೀಡೆಗಳುಕದೆ ವಕ್ರಗತಿಯಿಂದೆ ನಡೆವ ಕಡು ।
ಗೇಡಿಗರ್ ನಿನ್ನಂತೆ ಶಿವಶಿವಾ ಪ್ರಾಣಿಗಳ್ ದುಃಖಾರ್ತರಾಗಿ ಬಂದು ॥
ಬೇಡಿದೊಡೆ ತನಗುಳ್ಳ ವಸ್ತುವಂ ಕುಡದೆ ಕೆಡೆ।
ನೋಡುವವನಧಿಕನೆ ದಧೀಚಿ ಶಿಬಿಗಳ ಮಾಳ್ಕೆ ।
ಜೋಡಿಯಾದುದೆ ಮಣಿಯನೀವೆಂ ಕಿರೀಟಿಗೆನೆ ಧೃತರಾಷ್ಟ್ರನಿಂತೆಂದನು ॥೨೧॥

ಹೇಳಿದಂತಿರದು ಪುರುಷಾರ್ಥಮಂ ನೋಡಿದೊಡೆ ।
ಕಾಳಹುದು ನಾಗಲೋಕದ ಬಾಳ್ಕೆ ಮೀರಿ ಪಾ ।
ತಾಳಕೆ ಮತಂಗ ಖುಷಿಶಾಪದಿಂ ಬಾರನೈಸಲೆ ಗರುಡನಿಳೆಯಮೇಲೆ ॥
ತಾಳಬಲ್ಲನೆ ನಮ್ಮರತ್ನಮಂ ಕಂಡು ನರ ।
ರಾಳಿಕೆಗಳಲ್ಪಕಾಲಂಗಳಿಂದುಳಿದೊಡಂ ।
ನಾಳೆ ಪಾಂಡವನಳಿಯದಿರ್ದಪನೆ ಮಣಿಯಂ ಕುಡದಿರಲ್ಕಿಂತೆಂದನು ॥ ೨೨ ॥

ಕಷ್ಟದಿಂದಾವು ಮಣಿಯಂ ಕುಡದೆ ಮಾಣ್ದೊಡೇಂ।
ನಷ್ಟಮಾದಪುದೆ ಪಾರ್ಥನ ಜೀವಮಸುರಾರಿ ।
ಯಿಷ್ಟನಲ್ಲವೆ ಪಾಂಡವಪ್ರಾಣನಾಗಿರ್ಪನಂತಲ್ಲ ದಾನತರ್ಗೆ ॥
ಸ್ಪಷ್ಟದಿಂ ಕೃಷ್ಣಕಾರುಣ್ಯಸಂಜೀವನಂ।
ದೃಷ್ಟವಾಗಿರಲದರ ಹಂಗದೇತಕೆ ನೀನ ।
ರಿಷ್ಟನಾಗದಿರಿನ್ನು ಮಿಗಿಸಿಕೊಳ್ವೆವು ಲೇಸನೆಂದೊಡವನಿಂತೆಂದನು ॥ ೨೩ ॥

ಉರಗೇಂದ್ರ ನೀನಾಡಿದವೊಲೆಂತುಮರ್ಜುನಂ ।
ಮುರಹರನ ಕರುಣದಿಂ ಸಪ್ರಾಣನಪ್ಪನಿದ ।
ಕುರುತರದ ಸಂಜೀವಕದ ಮಣಿಯನಿತ್ತು ನಮ್ಮೆಲ್ಲರಂ ಕೆಡಿಸಬೇಡ ॥
ಗರುಡದೇವನ ಹಾವಳಿಗೆ ಜೋಕೆಯಾಗಿರಲಿ ।
ತಿರುಗಿ ಕಳುಹಿಸು ಪುಂಡರೀಕನಂ ತವಸುತೆಯ ।
ಪೊರೆಗೆಂದು ಧೃತರಾಷ್ಟ್ರನೆನಲೊಪ್ಪಿ ನಿಖಿಳ ಸರ್ಪಾಳಿ ಗರ್ಜಿಸುತಿರ್ದುದು ॥೨೪॥

ಭೂಪಾಲ ಕೇಳ್ ದೊರೆಗಳೊಲಿದೀವ ಕಜ್ಜಂ ಸಂ।
ಮಿಾಪದ ದುರಾತ್ಮರಿಂ ಕೆಡದೆ ಮಾಣ್ದಪುದೆ ಪೇ ।
ಳಾಪನ್ನಗೇಶ್ವರಂ ಧೃತರಾಷ್ಟ್ರನೆಂದ ಮಾತಿನ ಮೇಲೆ ಖಿನ್ನನಾಗಿ॥
ಆ ಪುಂಡರೀಕನಂ ಕರೆದು ಕುಡಲೀಸರ'ಪ।
ರೋಪಕಾರಕೆ ಮಣಿಯನೀ ಫಣಗಳಿಂತೆಂದು ।
ಲೂಪಿಗರಿಪೆಂದು ಕಳುಹಿದೊಡಮಂ ನರನಳಿದ ರಣಭೂಮಿಗೈತಂದನು ॥೨೫॥

ಚಂದನದ ತೈಲದಿಂದುರಿವ ಬೊಂಬಾಳಂಗ।
ಳಿಂದೆ ಕರ್ಪೂರದ ಸೊಡರ್ಗಳಿಂ ಮಣಿಲೀಪ ।
ದಿಂದಿರುಳ್ಕಂಗೊಳಿಸುತಿರೆ ಬಭ್ರುವಾಹನಂ ಮಂದಿಸಹಿತಾ ರಣದೊಳು॥
ನಿಂದಿರಲುಲೂಪಿ ಚಿತ್ರಾಂಗದೆಯರಮರೇಂದ್ರ।
ನಂದನನ ಬಳಿಯ ಸಂಜೀವಕದ ರತ್ನಮಂ।
ದಂದಶೂಕೇಶ್ವರಂ ಕುಡುವನೆಂಬಾಸೆಯಿಂ ಪಂಬಲಿಸುತಿರುದಿರ್ದರು ॥ ೨೬ ॥

ಅನ್ನೆಗಂ ಪುಂಡರೀಕಂ ಬಂದುಲೂಪಿಯೊಳ್ ।
ಪನ್ನಗೇಂದ್ರಂ ಸುಧಾಮಣಿಯಂ ಕುಡದೆ ತಿರುಗಿ ।
ತನ್ನಂ ಕಳುಹಿದ ವೃತ್ತಾಂತಮನುಸಿರಲದಂ ಚಿತ್ರಾಂಗದೆಗೆ ಸೂಚಿಸೆ ॥
ಇನ್ನು ವೈಧವ್ಯದಿಂದೊಡಲಂ ಪೊರೆಯೆನೆಂದು।
ನನ್ನಿಯಿಂದಗ್ನಿಪ್ರವೇಶಮಂ ನಿಶ್ಚೈಪ।
ಳಂ ನೋಡಿ ಕೋಪದಿಂದಾ ಬಭ್ರುವಾಹನಂ ನಿಜಮಾತೆಗಿಂತೆಂದನು ॥೨೭॥

ಚಕ್ರಿಸೇವಕನೀ ಕಿರೀಟಿ ಧರ್ಮಾನುಜಂ ।
ಶಕ್ರಸುತನೆನ್ನ ತಾತಂ ಮೇಲೆ ತುರಗಮೇ।
ಧ ಕ್ರತುವಿಗೋಸುಗಂ ಮಡಿದಿರಲ್ಬೇಡಿದೊಡೆ ಮಣಿಯಂ ಕುಡದೆ ಶೇಷನು॥
ವಕ್ರನಾದೊಡೆ ವಾಸುಕಿ ಪ್ರಮುಖ ಫಣಿಗಳ ನ।
ತಿಕ್ರಮಿಸಿ ತದ್ರತ್ನಮಂ ಕೊಂಡುಬಹೆನೆನ್ನ ।
ವಿಕ್ರಮನನೀಗ ನೋಡೆನುತೆದ್ದು ಕರೆಸಿದಂ ಪಾರ್ಥ ನಿಜಸೈನಿಕವನು ॥೨೮॥

ಫಣಿಕುಲವನಾಕ್ರಮಿಸಿಕೊಂಡು ಬಹೆನಾ ಮಹಾ ।
ಮಣಿಯ ನಲ್ಲಹುದೆಂದೊಡಜ ಹರಿ ಪಿನಾಕಿಗಳ ।
ಪಣೆಯಕ್ಕರಂಗಳಂ ತೊಡವೆ ನೊರಸುವೆನಷ್ಟದಿಕ್ಪಾಲರಾಯುಗಳನು ॥
ಎಣಿಕೆ ಬೇಡಿದಕಿನ್ನು ವೀರ ವೃಷಕೇತು ಫ।
ಲ್ಗುಣರ ದೇಹಂಗಳತಿ ಜತನವೆಂದಾಪ್ತರ್ಗೆ।
ರಣದ ಸುಯ್ದಾನಮಂ ಪೇಳ್ದು ನಿಜ ಬಲಸಹಿತ ಪಾರ್ಥಸುತ ನನುವಾದನು ॥೨೯॥

ಏರಿಸಿ ಮಹಾಧನುವನಶನಿಬಾಣವನೆಚ್ಚು।
ಡೋರುಗಳೆದವನಿಯಂ ಸಪ್ತಪಾತಾಳಕ್ಕೆ।
ತೋರಿಸಿದನೊಂದು ಪೆರ್ಬಟ್ಟೆಯಂ ನಡೆದ ನಾರ್ಜುನಿ ತನ್ನ ಸೇನೆ ಸಹಿತ।
ಮೀರಿದ ಶರಾವಳಿಯ ಘಾತಿಯಂ ತವೆ ತಾಳ।
ಲಾರದೆ ಸಕಲ ಭೋಗಿತತಿ ಬಂದನಂತಂಗೆ।
ದೂರಲ್ಕೆ ಧೃತರಾಷ್ಟ್ರನಂ ಬೈದು ಫಣಿಗಳಂ ಕಾಳೆಗಕೆ ಬೀಳ್ಕೊಟ್ಟಸು ॥೩೦॥

ನಾಗ ರಥವಾಜಿಗಳ ಕಾಲಾಳ ಕೈದುಗಳ।
ನಾಗದಳಮೈದು ಯೋಜನದಗಲದಿಂದೆ ನಾ।
ನಾಗತಿಯೊಳೈತಂದುದಾರ್ಜುನಿಯ ಸೈನಿಕದಮೇಲೆ ಸನ್ನಾಹದಿಂದೆ॥
ತಾಗಿದುದು ಸರ್ಪಾವಳಿ ತಮತಮಗೆ ವಾಸಿ ಮುಂ।
ತಾಗಿ ವದನದ ವಿಷಜ್ವಾಲೆ ಮಿಗೆ ಡಾವರಿಸಿ।
ತಾ ಗಿರಿಶನಕ್ಷಿಯಿಂ ಪೊರಮಡುವ ದಳ್ಳುರಿಯ ದಾಳಿಯೆನೆ ಪರಬಲದೊಳು ॥೩೧॥

ಗುಳಿಕ ತಕ್ಷಕ ಶಂಖ ಕರ್ಕೋಟಕಾದಿ ಫಣಿ।
ಗಳ ತಂಡದಿಂದೆ ಧೃತರಾಷ್ಟ್ರನುರವಣಿಸಿ ಪರ।
ಬಲದೊಳಿಪ್ಪತ್ತೊಂದುಸಾಸಿರ ಭಟಾಳಿಯಂ ಕೆಡಹಲಾರ್ಜುನಿ ಕನಲ್ದು॥
ಪೊಳೆವ ಕೂರ್ಗಣೆಗಳಂ ಕರೆಯಲ್ಕೆ ಪನ್ನಗಾ।
ವಳಿಯ ತಲೆಗಳ್‌ಪರಿದು ಬೀಳುತಿರ್ದುವು ಮಹಾ।
ಪ್ರಳಯದೊಳ್ ಗಗನದಿಂದುದಿರ್ವುಡುಗಳಂತೆ ತೊಳತೊಳಪ ಪೆಡೆವಣಿಗಳೊಡನೆ॥
॥ ೩೨ ॥

ದರ್ವೀಕರಾವಳಿಯ ನರೆಗಡಿಯಲವು ಮತ್ತೆ।
ಸರ್ವದಳಮಂ ವಿಷಜ್ವಾಲೆಯೊಳುರಿಪಲದಕೆ।
ನಿರ್ವಾಹಮಂ ಕಂಡು ಸಾರಂಗ ಶಿಖಿ ನಕುಲ ಗೃಧ್ರಂಗಳಾಗಿ ಸೀಳ್ವ॥
ಉರ್ವ ಮಂತ್ರಾಸ್ತ್ರಂಗಳಂ ತಿರುವಿನೊಳ್ ಪೂಡಿ।
ಗೀರ್ವಾಣಪತಿ ಸುತನ ಸೂನು ಕಾಲದ ಕಡೆಯ।
ಶರ್ವನಂತಿರೆ ಕೋಪಮಂ ತಾಳ್ದು ತೆಗೆದೆಚ್ಚನೇವೇಳ್ವೆ ನದ್ಭುತವನು ॥೩೩॥

ಇಟ್ಟಣಿಸಿ ಪದ್ದು ಸಾರಂಗ ಮುಂಗುಲಿ ನವಿಲ।
ಥಟ್ಟುರಗಸೇನೆಯಂ ಘಾತಿಸಿ ಪೊರಳ್ಚಿದುದು।
ಬಿಟ್ಟನಾರ್ಜುನಿ ಮತ್ತೆ ಮಧುಶರವನಾ ಕ್ಷತಂಗಳಮೇಲೆ ಜೇನ್ಗರೆವೊಲು॥
ತೊಟ್ಟು ತೆಗೆದೆಚ್ಚಂ ಪಿಪೀಲಿಕಾಸ್ತ್ರವನೊಡನೆ।
ಕಟ್ಟಿರುಹೆ ಮುತ್ತಿದುವು ಫಣಿಗಳಂ ಕಚ್ಚಿದುವು।
ನಿಟ್ಟಿಸುವ ಕಂಗಳಂ ತಿಂದವು ನೆಣಂಗಳಂ ಕೊರೆದು ವೊಡಲಸ್ಥಿಗಳನು ॥೩೪॥

ಪೋೞಿಗೊಂಬುಗಳ ಪಳಮರದಂತೆ ತಿರುಳಿಲ್ಲ।
ದೋೞಿಗಳ ತಿಂತ್ರಿಣೀಫಲದಂತೆ ಕುಳಿಕ ಕ।
ರ್ಕೋಟಕಾದಿಗಳೊಡಲ್ ಪೊಳ್ಳಾದುವಿರುಹೆಗಳ ಮುತ್ತಿಗೆಗೆ ಕಂಗೆಟ್ಟುವು॥
ತೋಟಿಯುಂ ತಂದು ಧೃತರಾಷ್ಟ್ರನ ವರೂಥಮಂ।
ಘೋಟಕವ ನಿಷುಕಾರ್ಮುಕಂಗಳಂ ಖಂಡಿಸಿ ಕಿ।
ರೀಟಿಸುತ ನುರುಬಿದೊಡೆ ಮುರಿವಡೆದುರಗಸೇನೆ ಶೇಷನಿದ್ದೆಡೆಗೋಡಿತು ॥೨೫॥

ಕೆಟ್ಟೋಡಿ ಬಂದಹಿಗಳಾರ್ಜುನಿಗೆ ರತ್ನಮಂ।
ಕೊಟ್ಟುಳುಹದೇಕೆಂದು ನಾಗರಾಜಂಗೆ ಮೊರೆ।
ಯಿಟ್ಟೊಡಾತಂ ಕನಲ್ದೇಕೆ ತಡೆದಿರಿ ಮೊದಲ್ ಮಂತ್ರಜ್ಞರಿಳೆಯ ನರರು॥
ಕಟ್ಟುಗ್ರವಾಗಿರ್ದ ನಿಮ್ಮ ವಿಷಕಂಜರಿ।
ನ್ನಟ್ಟಿ ಸುಡದಿರನೀಗ ಪಾರ್ಥಿ ಪಾತಾಳವಂ।
ನೆಟ್ಟನೆ ಸಮರ್ಥರ್ಗೆ ತನುವನೊಪ್ಪಿಸದೊಡುಳಿವರೇ ಕೃಶರೆಂದನು ॥೨೬॥

ಸಾಕದಂತಿರಲಿನ್ನು ಪಾರ್ಥಿಯ ಶರಾಗ್ನಿಯಿಂ।
ಕಾಕೋದರಾಳಿ ಬೇಯದ ಮುನ್ನಮಾರ್ಜುನಿಗೆ।
ಬೇಕಾದ ವಸ್ತುವಂ ಕೊಟ್ಟೆಮ್ಮನುಳುಹೆಂದು ಫಣಿಕುಲಂ ಬಾಯ ಬಿಡಲು॥
ಲೋಕದೊಳ್ ದಾನ ಧರ್ಮೋಪಕಾರಂಗಳ್ಗೆ।
ತಾ ಕುಡದೆ ಪಾಜಿಕೊಂಡಿರ್ದ ಲೋಭಿಯ ಧನಂ।
ಕಾಕಭಾಜನಮಪ್ಪುದಡವಿಯೊಳ್ ಬಿದ್ದ ಪೆಣನಂತೆಂದನುರಗೇಂದ್ರನು ॥೨೭॥

ಧರಣಿಧರ ನಮ್ಮ ದುರ್ನೀತಿಯಂ ನೋಡದಿರ್।
ಮುರಹರ ಪ್ರೀತಿಯಪ್ಪಂತೆ ಕುಡು ರತ್ನಮಂ।
ನರ ಸುತಂ ಗರ್ಜನಂ ಬದುಕಲೆಂದಹಿಗಳಾ ಶೇಷನಂ ಬೇಡಿಕೊಳಲು॥
ಹರಿಯು ಕಾರುಣ್ಯಸಂಜೀವನಂ ಪಾಂಡವ।
ರ್ಗಿರಲದೇಗೆಯ್ದುದಾವಿತ್ತಮಣಿ ದುಗ್ಧ ಸಾ।
ಗರಕಜಕ್ಷೀರಮಂ ಬೆರಸಿದುಪಕಾರಮಹುದೆಂದು ಮತ್ತಿತ್ತೆಂದನು ॥೨೮॥

ಈ ಮಣಿಯುಮಂ ಕಲ್ಪತರು ಕಾಮಧೇನು ಚಿಂ।
ತಾಮಣಿಯುಮಂ ಬಯಸಲೇಕಕಟ ಯಾದವ ಶಿ।
ಖಾಮಣಿಯುನುನ್ನತದ ಭಕ್ತಿಯಿಂದರಿವರ್ಗೆ ಸಾಕದಂತಿರಲಿ ನೀವು॥
ಆ ಮಣಿಯ ದಾನಮಂ ತಡೆದ ಪಾಪಂ ಹರಿಯ।
ರಾಮಣೀಯಕ ಮೂರ್ತಿ ದರ್ಶನದೊಳಲ್ಲದು ದು।
ತಾ ಮಣಿಯದಂಜದಿರಿ ಗರುಡಂ ಮುಳಿವನಲ್ಲ ಬನ್ನಿ ಪೋಗುವಮೆಂದನು ॥೨೯॥

ಇಂತೆಂದಖಿಳ ಪನ್ನಗಾವಳಿಯ ನೊಡಗೊಂಡ ।
ನಂತರದೊಳಾ ಮಹಾ ಮಣಿವೆರಸಿ ಪೊರಮಟ್ಟ ।
ನಂತನುರು ಕುಂಡಲ ದ್ವಿತಯಮಂ ಶತ ಶಲಾಕೆಯೊಳೆಸೆವ ಸತ್ತಿಗೆಯನು ॥
ಸಂತಸದೊಳಾರ್ಜುನಿಗೆ ಕೊಟ್ಟು ಕಂಡಾತನಂ ।
ಸಂತೈಸಿ ಪಾತಾಳದುತ್ತಮ ಸುವಸ್ತುಸಹಿ ।
ತಂತರಿಸುತೈದಿದಂ ಫಲುಗುಣಂ ಮಡಿದಿಹ ರಣಾವನಿಗೆ ಸಂಭ್ರಮದೊಳು ॥೪೦॥

ಸುಮ್ಮಾನದಿಂದೆ ಶೇಷಂ ಪೋಗುತಿರೆ ಕಂಡು ।
ದುಮ್ಮಾನದಿಂದೆ ಧೃತರಾಷ್ಟ್ರಂ ನಿಜಾಲಯದೊ ।
ಳುಮ್ಮಳಿಸಿ ಮಣಿವಿಜಯಮಾರ್ಜುನಿಗೆ ಪಾರ್ಥಂಗೆ ಜೀವಂ ಯುಧಿಷ್ಠರಂಗೆ ॥
ತಮ್ಮನಭ್ಯುದಯಂ ಮಹಾಧ್ವರಕೆ ತುರಗ ಮಿನಿ ।
ತೊಮ್ಮೆ ಸಂಜನಿಸುತಿರ್ದಪುದಕಟ ಬಹು ವಿಘ್ನ ।
ಮಂ ಮಾಡಿದೆಂ ತಪ್ಪಿತೀಗಳಾನೇಗೈವೆನೆಂದು ಚಿಂತಿಸುತಿರ್ದನು ॥೪೧॥

ಅನ್ನೆಗಂ ದುರ್ಬುದ್ಧಿ ದುಸ್ಸ್ವಭಾವರ್ಕಳೆಂ ।
ಬುನ್ನತದ ಪೆಸರುಳ್ಳ ಮಕ್ಕಳುಂಟಿರ್ವರಾ ।
ಪನ್ನಗಂಗವರಾತನಂ ಸಂತವಿಟ್ಟು ನೀಂ ಬಹುದು ಫಣಿರಾಜನೊಡನೆ ॥
ಮುನ್ನಮೆ ರಣಕೆ ಪೋಗಿ ಪಾರ್ಥನ ತಲೆಯನಾವು ।
ಗನ್ನದಿಂ ಕೊಂಡೊಯ್ವೆವೆಮ್ಮ ಚೇಷ್ಟೆಗಳಿಂದೆ ।
ಭಿನ್ನವಾಗದೆ ನರರ್ಗೆ ಬಾಳ್ಕೆ ಬಾರದೆ ನರಕಮಂಜಬೇಡಿದಕೆಂದರು ॥೪೨॥

ಅರಸ ಕೇಳ್ ದುರ್ಬುದ್ಧಿ ದುಸ್ಸ್ವಭಾವರ್ ಮೊದಲೆ ।
ಧರೆಗೆ ಬಂದರ್ಜುನನ ತಲೆಯನಪಹರಿಸಿಕೊಂ ।
ಡಿರದೆ ಬಕದಾಲ್ಭ್ಯನ ಮಹಾಘೋರ ನಿರ್ಜನಾರಣ್ಯದೊಳ್ ಬಿಸುಡಲಿತ್ತ ॥
ಹರಿಸದಿಂ ಶೇಷನಂ ಮುಂದಿಕ್ಕಿಕೊಂಡು ಮಣಿ ।
ವೆರಸಿ ರಣಮಂಡಲಕೆ ಕಲಿ ಬಭ್ರುವಾಹನಂ ।
ಬರಲಾ ಸಮಯದೊಳಾದುದು ಬಹಳ ಕಳಕಳಂ ಕಾಣದೆ ನರನ ಶಿರವನು ॥೪೩॥

ಕಾಂತೆಯರೊಡನೆ ತನ್ನ ಜನನಿಯರ್ ಕುಂಡಲದ ।
ಕಾಂತಿಯಿಂದಾ ರಣಾಗ್ರದೊಳೆಸೆಯುತಿರ್ದ ನಿಜ ।
ಕಾಂತನ ಶಿರವನಲ್ಲಿ ಕಾಣದೇನಾದುದಾರೊಯ್ದರೆಲ್ಲರ್ಪುದೆಂದು ॥
ಪ್ರಾಂತದೆಣ್ದೆಸೆಗಳಂ ನೋಡಿ ಹಮ್ಮೈಸಿ ವಿ
ಭ್ರಾಂತಿಯಿಂದರಸಿ ಹಾಹಾಯೆಂಬ ರಭಸಮಾ ।
ಶಾಂತಮಂ ತೀವಲಾ ಸಮಯಕಹಿಪತಿ ಸಹಿತ ಬಭ್ರುವಾಹಂ ಬಂದನು ॥೪೪॥

ಅಕ್ಕರೊಳುಲೂಪಿ ಚಿತ್ರಾಂಗದೆಯರನ್ನೆಗಂ ।
ಕಕ್ಕಸದ ರಣದೊಳರ್ಜುನನ ಕಾಲ್ದೆಸೆಯೊಳಿವೆ ।
ಯಿಕ್ಕದೆ ರಮಣನ ತಲೆತನುಗಳಂ ನೋಡುತಿರ್ದವರಾಗ ಪಾರ್ಥಿ ಬರಲು ॥
ಇಕ್ಕೆಯೊಳ್ ಶಿರಮಿಲ್ಲದಿರೆ ಬೆದರಿ ಮೈಮರೆಯೆ ।
ಮಿಕ್ಕಸತಿಯರ ನೆರವಿ ಗಜಬಜಿಸಿ ಕಂಡಿಳೆಯೊ ।
ಳೊಕ್ಕನೊಡಲಂ ಬಭ್ರುವಾಹನಂ ಮೃತಕಲ್ಪನಾಗಿ ಪಲವೆಣಿಕೆಯಿಂದೆ ॥೪೫॥

ಇಂತಾಗುತಿರಲಿತ್ತ ಲತ್ತಲಭನಗರದೊಳ್ ।
ಕುಂತಿ ಪಾರ್ಥಂ ಬಿದ್ದದ್ದನದಿರುಳ್ ಕಂಡಳ ।
ತ್ಯಂತ ಭೀಕರದ ಕನಸಂ ಪೇಳ್ದಳಸುರಾರಿ ಧರ್ಮಜ ವೃಕೋದರರ್ಗೆ ॥
ಅಂತಕನ ದೆಸೆಗೆ ಸೈರಿಭವನೇರಿ ಪೋ ।
ಪಂ ತೈಲ ವಾಪಿ ಗತನಾಗಿ ದಾಸಣದ ಪೂ ।
ವಂ ತೊಡಂದಾಳ್ದು ಗೋಮಯ ವಿಲಿಪ್ತಾಂಗನಾಗಿರ್ದಪಂ ವಿಜಯನೆಂದು ॥೪೬॥

ಬೆಂದಪುದು ಪಡೆದೆನ್ನೊಡಲ್ ಸುಭದ್ರೆಯ ಕಂಗ ।
ಳಿಂದೊಸರ್ದಪುದು ಕಂಬನಿ ಕೃಷ್ಣ ನಿನ್ನ ಸಖ ।
ನಿಂದು ಜೀವಂತನಾಗಿರ್ಪುದರಿದೆಂದು ಪೃಥೆ ಹಂಬಲಿಸಿ ಮರುಗುತಿರಲು ॥
ಇಂದಿರಾವಲ್ಲಭಂ ಗರುಡನಂ ನೆನೆಯಲ್ಕೆ ।
ಬಂದನಾತಂ ಬಳಿಕವನ ಬೆನ್ನಡರ್ದನಿಲ ।
ನಂದನ ಯಶೋದೆ ದೇವಕಿ ಕುಂತಿಯರ್ವೆರಸಿ ಮಣಿಪುರಕೆ ನಡೆತಂದನು ॥೪೭॥

ವಿಸ್ತರದ ರಾಜಭವನದ ಮಾಟಕೂಟದಯು ।
ತ ಸ್ತಂಭದಿಂದೆಸೆವ ಸಭೆಯ ನವರತ್ನದ ಗ ॥
ಭಸ್ತಿಗಳ ಕೋಟಾವಲಯದ ಮಣಿಪುರಮಂ ಪೊರಗೆ ಕಾದಿ ಮಡಿದ ರಣವ ॥
ಹಸ್ತಿಹಯ ನರವೃಂದಮಂ ಸುತ್ತುಲರಿವ ದೀ ।
ಪಸ್ತೋಮಮಂ ಬಿದ್ದ ಪಾರ್ಥನಂ ನೆರೆದಿಹ ಸ ।
ಮಸ್ತ ಸತಿಯರನಭ್ರದಿಂ ಶೌರಿ ಭೀಮಂಗೆ ತೋರಿ ಮಗುಳಿಂತೆಂದನು ॥೪೮॥

ಭೀಮ ನೋಡಿಲ್ಲಿ ಪಾರ್ಥನ ದೇಹಮಿದೆ ವದನ ।
ತಾಮರಸಮಂ ಕಾಣೆನಡಗಿದುದೊ ಬಳಸಿರ್ದು ।
ಭಾಮಿನಿಯರಾನನ ಶಶಾಂಕ ಮಂಡಲದಿಂದೆನಲ್ಕೆ ಹರಿಗನಿಲಸೂನು ॥
ಶ್ರೀಮನೋಹರ ನಿನ್ನ ಮೂರ್ತಿರವಿ ಮೂಡೆ ನು ।
ತ್ರಾಮ ಸುತನಾಸ್ಯಾಬ್ಜಮಪ್ರಕಾಶಿತಮಹುದೆ ।
ಭೂಮಿಯೊಳ್ ಪೇಳೆನೆ ಮುರಾರಿ ಪಕ್ಷೀಂದ್ರನಿಂದಿಳಿದನಾ ರಣದೆಡೆಯೊಳು ॥೪೯॥

ಲಲಿತ ರತ್ನಪ್ರದೀಪಂಗಳಿಂ ಬಳಸಿರ್ದ।
ಲಲನೆಯರ ಭೂಷಣದ ಕಾಂತಿಯಿಂ ಕಪ್ಪುರದ।
ಮಲಯಜದ ತೈಲದ ಸೊಡರ್ಗಳಿಂ ನಡುವಿರುಳ್ ಪಗಲಂತೆ ಕಾಣಿಸುತಿರೆ॥
ಕಲಭೀಮ ದೇವಕಿ ಯಶೋದೆ ಪೃಥೆಯುರ್ವರಸಿ।
ನೆಲಕಿಳಿದು ಪಾರ್ಥನ ಶರೀರಮಂ ಕಂಡಾಗ।
ಜಲಜಾಂಬಕಂ ಮರುಗುತಾವನಿಂದಾದುದೈ ತಂದೆ ಮೃತಿ ನಿನಗೆಂದನು ॥೫೮॥

ಬಂದೆನೇಳೈ ಪಾರ್ಥ ಕೃಷ್ಣನಾಂ ಕುಂತಿಗಭಿ।
ವಂದಿಸೈ ಮಾತೆಯಲ್ಲವೆ ನಿನಗೆ ನೀನಳಿಯ।
ನೆಂದು ಪರಸುವರಲೈ ದೇವಕಿ ಯಶೋದೆಯುರ್ ಭಾವಿಸೆಯದೇಕಿವರನು॥
ಎಂದಿನಂತಗ್ರಜನ ನೀಕ್ಷಿಸೈ ಭೀಮನಂ।
ತಂದೆ ಹೇಳಿಂತು ಮಾತಾಡದಿರ್ದಪರೆ ನೀಂ।
ಮುಂದೆ ನೃಪಯಜ್ಞಮಂ ನಡೆಸುವವರಾರೆನುತೆ ಕಳವಳಿಸಿ ಹರಿ ನುಡಿದನು ॥೫೧॥

ಮರುಗಿದಂ ಮೈದುನಂಗಸುರಾರಿ ಮಾನವರ।
ತೆರದಿಂದೆ ದೇವಕಿ ಯಶೋದೆಯುರ್ವರಸಿ ಮೈ।
ಮರೆದಳಾ ಕುಂತಿ ನಿಜ ತನಯನಿರವಂ ಕಂಡು ಶೋಕದಿಂದಾಕ್ಷಣದೊಳು॥
ಕರೆದುವಶ್ರುಗಳಾ ವೃಕೋದರನ ಕಂಗಳಿಂ।
ತುರುಗಿತಳಲೊಡಲೊಳ್ ಸಹೋದರನ ಮರಣದೊಳ್।
ಪೊರಗೆಗಿರ್ಪಂ ಕೃಷ್ಣನೆಂದು ಮನದೊಳ್ ತಿಳಿದು ಕಲಭೀಮನಿಂತೆಂದನು ॥೫೨॥

ದೇವ ರವಿಗಂಧಕಾರಮೆ ಮಾರ್ಗಮರ್ಜುನಂ।
ಜೀವಿಸದೆ ಮಾಣ್ದಪನೆ ಮರುಗಲೇಕೀಕ್ಷಿಸು ಕೃ।
ಪಾವಲೋಕನದಿಂದೆ ಕರ್ಣಜಂ ಬಿದ್ದಿರ್ದಪಂ ನೋಡು ಪಾರ್ಥನೊಡನೆ॥
ಭೂವಲಯದೊಳ್ ತಮ್ಮ ತುರಗಮಂ ಕಟ್ಟಿಕೊಂ।
ಡೀ ವೀರರಿರ್ವರಂ ಕೆಡಹಿದ ಪರಾಕ್ರಮಿಯ।
ದಾವನೋ ಕಾಣ್ಬೆನೈಸಲೆ ಬರಲಿ ಕದನಕೆಂದನಿಲಜಂ ಗರ್ಜಿಸಿದನು ॥೫೩॥

ಈಪರಿಯೊಳನಿಲಜಂ ಕೃಷ್ಣನೊಳ್ ಮಾತಾಡು।
ವಾ ಪಥದೊಳನಿರುದ್ಧ ಸಾತ್ಯಕಿ ಪ್ರದ್ಯುಮ್ನ।
ರಾಪುರದ ಮಧ್ಯದೊಳುಲೂಪಿಯ ನಿವಾಸದೊಳ್ ಚೇತರಿಸಿಕೊಂಡು ಕೂಡೆ।
ಶಾಪ ಹತನಾಗಿ ಫಲುಗುಣನಿರ್ದ ರಣಕೆ ಬಂ।
ದೀ ಪಂಕಜಾಕ್ಷ ಮಾರುತಿಗಳಂ ಕಂಡು ಬಳಿ।
ಕಾ ಪಾರ್ಥನಂದನಂಗೆಚ್ಚರಿಸಿ ಕಾಣಿಸಿದರಚ್ಯುತ ವೃಕೋದರರನು ॥೫೪॥

ಜನಪ ಕೇಳ್ ಫಲುಗುಣನ ಕೃತ್ಯಮಂ ಬಭ್ರುವಾ ।
ಹನನ ವೃತ್ತಾಂತಮಂ ಪವನಜ ಮುರಾರಿಗ।
ಳ್ಗನಿರುದ್ಧ ಸಾತ್ಯಕಿ ಪ್ರದ್ಯುಮ್ನರರಿಪಿ ಬಳಿಕಾತನಂ ಕಾಣಿಸಲ್ಕೆ ॥
ಅನುಜಂಗೆ ಮುನಿದವಂ ಪಗೆಯಾಗದಿರ್ದಪನೆ ।
ಜನಕನಂ ಕೊಂದವಂ ಪಾಪಿಯಲ್ಲವೆ ತನ್ನ ।
ನನುವರಸದಪ್ಪಳಿಸು ಗದೆಯೊಳೆಂದೆರಗಿದಂ ಪಾರ್ಥ ಭೀಮನ ಪದದೊಳು॥೫೫॥

ಶಿಕ್ಷರಕ್ಷೆಗೆ ಕರ್ತೃ ವೈಷ್ಣವದ್ರೋಹಿಗ ।
ಳ್ಗಕ್ಷಮಂ ನೀನದರಿನರ್ಜುನಂ ಭಾಗವತ ।
ಪಕ್ಷಕಗ್ರೇಸರಂ ತನಗೆ ಪಿತನಾತನಂ ಕೊಂದ ಕತದಿಂದೆ ಕೊಲೆಗೆ ॥
ದಕ್ಷನಾಂ ಮಿಾರಿದೊಡೆ ರಾಹುವಿನ ಕಂಠಮಂ ।
ತತ್ಕ್ಷಣದೊಳರಿದಂತೆ ಕತ್ತರಿಸು ಚಕ್ರದಿಂ ।
ಪಕ್ಷಿವಾಹನ ತನ್ನ ಕೊರಲನೆಂದಾ ಪಾರ್ಥ ಕೆಡೆದನಚ್ಯುತನಡಿಯೊಳು ॥೫೬॥

ಇಂತಾಗಳನಿಲಸುತ ಕೃಷ್ಣರ ಮನಂ ಮರುಗು ।
ವಂತಳಲ್ದೊಡನೆ ದೇವಕಿಯಂ ಯಶೋದೆಯಂ ।
ಕುಂತಿಯಂ ಕಂಡು ಕಡುಶೋಕದಿಂದವರವರ ಚರಣಂಗಳೊಳ್ಪೊರಳ್ದು ॥
ಎಂತುಟಿದಕಯ್ಯನಂ ಕೊಂದೆನಾ ನಿಮಗೆ ಮೊ ।
ಮ್ಮಗಂ ತನ್ನನೇಕೆ ಪರಸುವಿರಕಟ ಪಾರ್ಥ ಸೀ ।
ಮಂತಿನಿಯರಿರ್ದಪರುಲೂಪಿ ಚಿತ್ರಾಂಗದೆಯರಿವರ ನೀಕ್ಷಿಪುದೆಂದನು ॥೫೭॥

ಅನಿತರೊಳುಲೂಪಿ ಚಿತ್ರಾಂಗದೆಯರ್ಜುನನ ।
ಜನನಿಯಂ ಕೃಷ್ಣಮಾತೆಯರಂ ನಿರೀಕ್ಷಿಸಿ ನ ।
ರನ ಪೆಂಡಿರಾವೆಂದು ಪೇಳ್ದವರ ಚರಣಂಗಳೊಳ್ ಪೊರಳ್ದಳಲ್ದು ಕೂಡೆ ॥
ವನಜಾಂಬಕಿಯರೊರಲೆ ಬಳಿಕನಿಬರೆಲ್ಲರುಂ ।
ಘನಶೋಕದಿಂದೆ ಹಾಹಾರವಂಗೆಯ್ಯೆ ನಿಜ ।
ತನುಜನಂಗದಮೇಲೆ ಬಿದ್ದು ದುಃಖಿತೆಯಾಗಿ ಕುಂತಿ ಹರಿಗಿಂತೆಂದಳು ॥೫೮॥

ಕಂಡೆಲೈ ಕೃಷ್ಣ ಫಲುಗುಣನಿರವನಿನ್ನು ಭೂ ।
ಮಂಡಲದೊಳೆನಗೆ ಸುತರಿರ್ದಪರೆ ನೀನಾರ ।
ಬಂಡಿಯುಂ ಪೊಡೆದಪ್ಪೆ ತ್ರೈಲೋಕ್ಯವೀರನೆಂದೆನಿಸಿಕೊಳ್ವವನದಾರು ॥
ಖಂಡಪರಶುವಿನುತ್ತಮಾಂಗಮಂ ಪೊಯ್ದು ಕೋ ।
ದಂಡಮಂ ಪಿಡಿವರಾರನುಜಾಗ್ರಜರ ನಡುವೆ ।
ಚಂಡ ತೇಜದೊಳೆಸೆವರುಂಟೆ ಧರ್ಮಜನಾರನಪ್ಪುವಂ ಪೇಳೆಂದಳು ॥೫೯॥

ಈತನಂತಿರಲಿತ್ತನೋಡೆಲೆ ಮುಕುಂದ ವೃಷ।
ಕೇತು ಮಡಿದಿರ್ದಪಂ ಸೈರಿಸುವೆನೆಂತಿವನ ।
ತಾತನಂ ಕಂಡು ಹಿಗ್ಗುವೆನಾರುಮರಿಯದಂತಾತ್ಮಜ ಸ್ನೇಹದಿಂದೆ ॥
ಆತನಂ ಕೊಂದನೀ ಪಾರ್ಥನಂದಾನೋವ।
ನೀತರಳನೇಳ್ಗೆಯಿಂ ಮರೆದಿರ್ದೆನಿನ್ನೆಗಂ।
ಬೀತುದೆನಗಿಂದು ಸಂತತಿ ಕರ್ಣಜನೊಳೆಂದಳಲ್ದಳಾ ಕುಂತಿ ಮರುಗಿ ॥೬೦॥

ಆ ಸಮಯಕ್ಕೈತಂದು ಕಂಡನಹಿಪತಿ ಪೀತ ।
ವಾಸನಂ ಪೊಡಮಟ್ಟುನಡಿದಾವರೆಗೆ ನುಡಿದ।
ನೀಸಕಲ ಲೋಕಮಂ ಪೊರೆವ ನಿನಗೀ ನರನ ಜೀವಮಂ ಪಡೆವುದರಿದೆ ॥
ಬೇಸರೇತಕೆ ದೇವ ಧರ್ಮಜನ ಕುಲಮುದ್ದ ।
ದೋಸರಿಸದುದ್ಧರಿಸು ನಿನ್ನ ಡಿಂಗರಿಗರ್ಗೆ ।
ಲೇಸಲ್ಲದಘ ಶೋಕ ಭಯ ತಾಪ ದುಃಖಂಗಳಿರ್ದಪುವೆ ಪೇಳೆಂದನು ॥೬೧॥

ತಾತನಸುವಂ ಪಡೆಯಲೀ ಬಭ್ರುವಾಹನಂ ।
ಪಾತಾಳಕೆಯ್ದಿ ಜೀವದ ರತ್ನಮಂ ಬೇಡಿ ।
ಘಾತಿಸಿದ ನಹಿಗಳಂ ತಾನದಂ ಪರಿಹರಿಸಿ ನಿನ್ನ ನೀಕ್ಷಿಸುವೆನೆಂದು ॥
ಭೂತಳಕೆ ಬಂದೆನಿದೆ ಮಣಿ ತನ್ನ ಕೈಯೊಳೀ ।
ಶ್ವೇತವಾಹನನ ತಲೆಯಂ ತರಿಸು ಜಗದೊಳ ।
ಜ್ಞಾತಮಾವುದು ನಿನಗೆ ಸರ್ವಗತನಪ್ಪೆ ನೀನೆಂದು ಫಣಿಪತಿ ನುಡಿದನು ॥೬೨॥

ಶೇಷನಿಂತೆಂದೊಡಾಲಿಸಿ ಕೃಷ್ಣನಬಲೆಯರ ।
ಘೋಷಮಂ ನಿಲಿಸಿ ನೀವೆಲ್ಲರುಂ ಕೇಳ್ವುದೀ ।
ಭಾಷೆಯಂ ಬ್ರಹ್ಮಚರ್ಯದೊಳಿಂದ್ರಿಯಂಗಳಂ ತಾನಿನ್ನೆಗಂ ಧರೆಯೊಳು ॥
ಪೋಷಿಸಿದೆನಾದೊಡಾ ಪುಣ್ಯದಿಂ ಕುಂಡಲ ವಿ ।
ಭೂಷಿತದ ಪಾರ್ಥನ ಶಿರಂ ಬರಲಿ ಕಳ್ದೊಯ್ದ ।
ದೋಷಿಗಳ್ ತನ್ನಾಜ್ಞೆಯಿಂದ ಹತರಾಗಲರಿದಿಹುದು ಸಾರಿದೆನೆಂದನು ॥೬೩॥

ಜನಪ ಕೇಳಾಶ್ಚರ್ಯಮಂ ಬಳಿಕ ಕೃಷ್ಣನಿಂ ।
ತೆನೆ ದುಸ್ಸ್ವಭಾವ ದುರ್ಬುದ್ಧಿಗಳನರಿದು ಪಾ ।
ರ್ಥನ ತಲೆಯನಾಕ್ಷಣಕೆ ತಂದುದು ಸುದರ್ಶನಂ ಮಣಿಪುರದ ರಣಭೂಮಿಗೆ ॥
ಜನಮೈದೆ ಕೊಂಡಾಡಿತುರಗಪತಿ ಹರಿಸದಿಂ ।
ವಿನುತ ಸಂಜೀವಕದ ಮಣಿಯನಿತ್ತಂ ಮುಕುಂ ।
ದನ ಕೈಯೊಳಾಗ ಹರಿ ನೋಡಿದಂ ಕೃಪೆಯಿಂದೆ ಕರ್ಣಸುತ ಫಲ್ಗುನರನು ॥೬೪॥

ತದನಂತರದೊಳಂಬುರುಹ ಲೋಚನಂ ತಾನೆ ।
ಮೊದಲಿನಜಸುತನ ತನುತಲೆಗಳಂ ಕೂಡಿ ಜೀ ।
ವದ ಮಣಿಯನೆದೆಯಮೇಲಿರಿಸಿ ಬಳಿಕರ್ಜುನನ ಕಾಯಕೆ ಶಿರವನೊಂದಿಸಿ ॥
ಹೃದಯದೆಡೆಗಾ ದಿವ್ಯರತ್ನಮಂ ಸಂಗರಿಸಿ ।
ಬದುಕಲಿವರೀಶನಾಜ್ಞೆಯೊಳೆಂದು ಪರಸಿ ಕರು ।
ಣದೊಳವರನೀಕ್ಷಿಸಿದೊಡಭವಪ್ರಸಾದದಿಂ ಜೀವಿಸಿದರಾ ಕ್ಷಣದೊಳು ॥೬೫॥

ಲೀಲೆಯೊಳಜಾಂಡ ಕೋಟಿಗಳಳಿವುವಾದಪುವು ।
ಪಾಲಿಸಿದೊಡಿರ್ದಪುವು ಗಡ ಪರಮ ಪುರುಷನ ಕೃ ।
ಪಾಲೋಕನದೊಳೇಳ್ವುದರಿದೆ ಮಡಿದರ್ಜುನಾದಿಗಳೆಂದು ಧರೆ ಪೊಗಳಲು ॥
ಆಲಿಗಳರಳ್ದುವಸು ಪನರಿಸಿತೊಡಲೊಳಗೆಸೆದು।
ದಾಲಲಿತ ಮುಖಕಾಂತಿ ಪೊಗರೇರಿತವಯವಂ ।
ಮೇಲೆ ಮೈಮುರಿದರೊಯ್ಯನೆ ಪಾರ್ಥ ಕರ್ಣ ಸುತರಸುರಾರಿಯಂ ಜಪಿಸುತೆ ॥೬೬॥

ಇಡಿದ ಕತ್ತಲೆಯಿಂ ಜಗುಳ್ದವಾರಿಜದಂತೆ ।
ಬಿಡದೆ ಮುಸುಕಿದ ಮೇಘಮಂ ಕಳೆದ ರವಿಯಂತೆ ।
ತುಡುಕಿರ್ದ ರಾಹು ತೊಲಗಿದ ಚಂದ್ರನಂತೆ ಕರ್ಣಜ ಪಾರ್ಥರಾಸ್ಯಂಗಳು ॥
ಕಡುಚೆಲ್ವಕಾಂತಿ ಕಳೆಗಳನಾಂತುವಾಗ ಪಾ ।
ಲ್ಗಡಲೊಡೆಯನಂ ಮುಂದೆ ಕಂಡು ಪದ ಕಮಲದೊಳ್ ।
ಪೊಡಮಡಲವರ್ಗಳಂ ತೆಗೆದಪ್ಪಿ ಚುಂಬಿಸುತೆ ಮೈದಡವಿದಂ ಕೃಪೆಯೊಳು ॥೬೭॥

ದುಂದುಭಿಗಳಭ್ರದೊಳ್ ಮೊಳಗಿದುವು ಸೂಸಿದುದು ।
ಮಂದಾರದರಲ ಸರಿ ನರ ಕರ್ಣಜರ ಮೇಲೆ ।
ಬಂದಪ್ಪಿದಂ ಬಳಿಕವರ್ಗಳಂ ಭೀಮನಾಲಿಂಗಿಸಿದಳಾಗ ಕುಂತಿ ॥
ವಂದಿಸಲ್ ಪರಸದರ್ ದೇವಕಿ ಯಶೋದೆಯರ್ ।
ಮುಂದಿರ್ದ ಶೇಷನಂ ಕಾಣಿಸಲ್ ಪೊಡಮಟ್ಟ ।
ರಂದವರ್ ಮುದದಿಂದೆ ಹರಿ ಪಾಂಚಜನ್ಯಮಂ ಪಿಡಿದನುರುಘೋಷವಾಗೆ ॥೬೮॥

ಪದುಳಿಸಿದನನಿರುದ್ಧ ಸಾತ್ಯಕಿ ಪ್ರದ್ಯುಮ್ನ ।
ಗದ ಸಾಂಬ ಕೃತವರ್ಮ ಶಠ ನಿಶಠ ಪ್ರಮುಖ ।
ಯದುವೀರರನುಸಾಲ್ವ ಯೌವನಾಶ್ವಾಸಿತಧ್ವಜ ಹಂಸಕೇತುಗಳ್ಗೆ ॥
ಮುದವೇರಿತಸುರಾರಿಯಂ ಕಂಡು ತಮತಮಗೆ ।
ಪದಕೆರಗಿ ಬಿನ್ನೈಸಿದರ್ ಬಭ್ರುವಾಹನನ ।
ಕದನದಾಯಾಸಮಂ ನಗರದೊಳುಲೂಪಿ ಚಿತ್ರಾಂಗದೆಯರೆಸಗಿದುದನು ॥ ೬೯ ॥

ಹರಿ ಬಳಿಕ ಜಾಹ್ನವಿಯ ಶಾಪದಿಂದಾದುದೀ ।
ಪರಿಭವಂ ನಿನಗೆಂದು ಪಾರ್ಥನಂ ತಿಳಿಪಿದಂ ।
ತರಿಸಿ ಕಾಣಿಕೆಗೊಟ್ಟು ಲೂಪಿ ಚಿತ್ರಾಂಗದೆಯರಸುರಾರಿಯಂ ಕಂಡರು ।
ನೆರೆದುದುಭಯರ ಸೇನೆ ಬಹಳ ಪರಿತೋಷದಿಂ ।
ಮೊರೆದುದುತ್ಸವದಿಂದೆ ನಿಖಿಳ ವಾದ್ಯಪ್ರತತಿ ।
ಪರೆದುವು ಸಮಸ್ತಸಂತಾಪಂಗಳೆಲ್ಲರ್ಗೆ ಕೃಷ್ಣದರ್ಶನದೊಳಂದು ॥ ೨೦ ॥

ಪಾರ್ಥಜಂ ಬಳಿಕನಿಬರೆಲ್ಲರಂ ವಿನಯದಿಂ ।
ಪ್ರಾರ್ಥಿಸಿದೊಡಲ್ಲಿಂದೆ ಮಣಿಪುರಕೆ ಬರಲಾಗಿ ।
ತೀರ್ಥಸ್ವರೂಪನಹ ಕೃಷ್ಣನಂ ಶೇಷನಂ ಮಂಡಲಾಧೀಶರೆನಿಪ ॥
ಪಾರ್ಥಿವರನಳಿದೆದ್ದ ವಿಜಯನಂ ಕಂಡತಿ ಕೃ ।
ತಾರ್ಥರಾದಪೆವೆಂಬ ಹರ್ಷದಿಂ ತಮತಮಗೆ ।
ಸಾರ್ಥ ವೈಭವದಿಂದಲಂಕರಿಸಿ ನಗರಮಂ ನಿಖಿಲಜನಮಿದಿರ್ಗೊಂಡುದು ॥ ೨೧ ॥

ತಳಿತ ಗುಡಿಗಳ ಚೆಲ್ವನೋರಣದ ತೋರಣದ ।
ಕಳಸ ಕನ್ನಡಿವಿಡಿದ ಕನ್ನೆಯರ ಮನ್ನೆಯರ ।
ದಳದ ಪೊಡೆಪಿನ ಮೊರೆವ ಭೇರಿಗಳ ಭೂರಿಗಳ ಮೃದುಮೃದಂಗಧ್ವನಿಗಳ ॥
ತೊಳಗಿ ಬೆಳಗುವ ಲೋಚನಾಂತೆಯರ ಕಾಂತೆಯರ ।
ಲಳಿಲುಳಿಯ ನರ್ತನದ ಕೋಪುಗಳ ರೂಪುಗಳ ।
ತಳಿವ ಸೇಸೆಯ ಪೂಗಳೊತ್ತುಗಳ ಮುತ್ತುಗಳ ವಿಭವದಿಂ ಪೊಳಲೆಸೆದುದು ॥ ೨೨ ॥

ಈ ಸಂಭ್ರಮದೊಳೆಸೆವ ನಗರದೊಳ್ ನಡೆತಂದು ।
ವಾಸುದೇವಾದಿಗಳ್ ಬಭ್ರುವಾಹನ ಸದನ ।
ದಾಸಭೆಗೆ ವಿವಿಧೋಪಚಾರ ವಿಭವಂಗಳಂ ಕೈಕೊಳುತೆ ಬಂದು ಪುಗಲು ॥
ಆ ಸವ್ಯಸಾಚಿಗೆ ನಿಜಾತ್ಮಜಂ ತನ್ನ ಸಿಂ ।
ಹಾಸನವನಿತ್ತಖಿಲ ರಾಜ್ಯಮಂ ಕೊಟ್ಟು ಲ ।
ಜ್ಜಾಸಮನ್ವಿತನಾಗಿ ಸುಮ್ಮನಿರಲರ್ಜುನಂ ಮಾತಾಡದಿರುತಿರ್ದನು ॥ ೨೩ ॥

ರಾಯ ಕೇಳರ್ಜುನಂ ಖಿನ್ನನಾಗಿರೆ ಕಂಡು ।
ವಾಯುಸುತ ಶೇಷಾದಿಗಳ್ ನುಡಿದರೆಲ್ಲಿಯುಮು ।
ಜೇಯನಹೆ ಧರೆಯೊಳಿಂದಾತ್ಮಜನ ದೆಸೆಯಿಂದೆ ನಿನಗಪಜಯಂ ಬಂದುದು ॥
ನೋಯಲೇತಕೆ ಬರಿದೆ ಮನ್ನಿಸು ಕುಮಾರನಂ ।
ಪ್ರೀಯಮಾಗಿದೆ ಮಗನ ಮೇಲಿನ್ನು ಮಕಟ ಕಟ ।
ಪಾಯಮಿದು ಸುರನದಿಯ ಶಾಪದಿಂದಾಯ್ತುಳಿದೆ ಕೃಷ್ಣಪ್ರಸಾದದಿಂದೆ ॥ ೨೪ ॥

ಅರಸಿಯರುಲೂಪಿ ಚಿತ್ರಾಂಗದೆಯರಿವರನಾ ।
ದರಿಸದೆ ನಿಜಾತ್ಮಜಂ ಬಭ್ರುವಾಹನನಿವನ ।
ಸಿರಿಯನಂಗೀಕರಿಸದೀತನಂ ಮನ್ನಿಸದೆ ಫಲುಗುಣನಿದೇಕೆ ಬರಿದೆ ॥
ಮರುಳಾದನಕಟ ನೀಂ ಪೇಳಲಿಲ್ಲವೆ ಚಕ್ರ ।
ಧರ ನಿನ್ನ ಮೈದುನಂಗೆಂದು ಪವನಜ ಫಣೀ ।
ಶ್ವರ ಹಂಸಕೇತು ದೇವಕಿ ಕುಂತಿ ವರ ಯಶೋದಾದಿಗಳ್ ಪೇಳ್ದರಂದು ॥ ೭೫ ॥

ಲಜ್ಜಿಸಿದನಾ ಬಭ್ರುವಾಹನಂ ಬಳಿಕ ತ ।
ನ್ನುಜ್ಜಗವನೆಲ್ಲರುಂ ಕೇಳ್ವುದೀ ರಾಜ್ಯಮಂ ।
ಮಜ್ಜನಕನಂಘ್ರಿಗೊಪ್ಪಿಸಿ ನಿಜ ಶರೀರಮಂ ಕೆಡಹಿ ತುಹಿನಾಚಲದೊಳು ॥
ಸಜ್ಜನರ ಗತಿವಡೆವೆನಲ್ಲದೊಡೆ ಗುರುಧರ್ಮ ।
ಕೃಜ್ಜನಾರ್ದನ ಭಕ್ತನೀತನಂ ಘಾತಿಸಿದ ।
ಕಜ್ಜದಿಂದೊದವಿದ ಮಹಾಪಾತಕಂ ಪೋಗದೆನೆ ಭೀಮನಿಂತೆಂದನು ॥ ೭೬ ॥

ತಪ್ಪನಾಡಿದೆ ಮಗನೆ ಕೃಷ್ಣನಿರುತಿರೆ ಮುಂದೆ ।
ಬಪ್ಪುದೇ ಪಾತಕಂ ಗುರು ಪಿತಾಮಹ ಮುಖ್ಯ ।
ರಪ್ಪವರನೆಲ್ಲರುಂ ಕೊಂದೆಮಗೆ ನಿಂದುವೇ ದೋಷ ಲೇಶಂಗಳೀಗ ॥
ಒಪ್ಪುವಾದಿತ್ಯನಂ ಕಂಡಬಳಿಕಿರ್ದಪುದೆ ।
ಕಪ್ಪಿನ ತಮಂ ಮರುಳೆ ಹರಿಯನಾಶ್ರೈಸಿದರ ।
ನಪ್ಪುವದೆ ಕಲಿತಾಪ ದುಃಖ ಭಯಶೋಕ ನರಕಾದಿ ಪೀಡೆಗಳೆಂದನು ॥ ೭೭ ॥

ಸಲೆ ನಿಷ್ಕೃತಿಗಳಿಲ್ಲದೈದು ಪಾಪಂಗಳಂ ।
ಕಲಿಯುಗದ ಮಾನವರ ಬಹಳ ದುರಿತಂಗಳಂ ।
ತೊಲಗಿಸಿ ಭವಾಂಬುಧಿಯನುತ್ತರಿಪ ಹರಿಯ ನಾಮಂಗಳಾವ ಜಿಹ್ವೆಗೆ ॥
ನೆಲೆಗೊಂಬುವಾತನಂ ಕಂಡವಂ ಶುಚಿ ನಿನಗೆ ।
ಜಲರುಹಾಕ್ಷಂ ಕಣ್ಣಮುಂದಿರಲ್ ಪಾತಕವೆ ।
ಪಲವೆಣಿಕೆ ಬೇಡ ಪಾಲಿಸು ನೃಪನ ತುರಗಮಂ ಮಗನೆ ಸುಖಿಯಾಗೆಂದನು ॥ ೭೮ ॥

ಇಂತೆಂದು ಭೀಮನಾಡಿದೊಡನಿಬರೆಲ್ಲರುಂ ।
ಸಂತೋಷಮಂ ತಾಳ್ದರರ್ಜುನಂ ತನಯನಂ ।
ಸಂತೈಸಿ ಕುಳ್ಳಿರ್ದನಸುರಾರಿ ಪವನಜರ್ವೆರಸಿ ಸಿಂಹಾಸನದೊಳು ॥
ಕುಂತಿ ನಿಜಪುತ್ರ ಪೌತ್ರರ ವಿಭವಕುಬ್ಬಿದಳ ।
ನಂತರದೊಳಾದುದಾ ಮಣಿಪುರದೊಳುತ್ಸವ ಮ ।
ನಂತನಂ ಸತ್ಕರಿಸಿ ಕಳುಹಿದರ್ ಪಾತಾಳಕಖಿಳ ಸರ್ಪಾಳಿ ಸಹಿತ ॥ ೭೯ ॥

ಸತ್ಯಭಾಮಾಕಾಂತ ಭೀಮ ನರ ಮನ್ಮಥಾ ।
ದಿತ್ಯಭವಸುತ ಕುಂತಿ ದೇವಕಿ ಯಶೋದೆಯರ ।
ನತ್ಯಂತ ಹರ್ಷದೊಳುಲೂಪಿ ಚಿತ್ರಾಂಗದೆಯರಾದರಿಸೆ ನೃಪಗೃಹದೊಳು ॥
ನಿತ್ಯಕೃತ್ಯದ ವಿವಿಧ ಭೋಗ ವಿಭವಂಗಳಿಂ ।
ನೃತ್ಯಗೀತಂಗಳ ವಿಲಾಸ ಗೋಷ್ಠಿಗಳಿಂದೆ ।
ಪ್ರತ್ಯೇಕಮೆಲ್ಲರುಂ ಸಂತುಷ್ಟರಾಗಿರ್ದರೈದುದಿನಮಾಪುರದೊಳು ॥ ೮೦ ॥

ದಿವಸಮೈದರ ಮೇಲೆ ಚಿಂತಿಪಂ ಗಜಪುರದೊ ।
ಳವನೀಶನೆಂದಲ್ಲಿ ಕೂಡಿದ ಸುವಸ್ತುಗಳ ।
ನಿವಹಮಂ ಕುಂತಿ ಚಿತ್ರಾಂಗದೆ ಫಣೀಂದ್ರಸುತೆ ದೇವಕಿ ಯಶೋದೆಯರನು ॥
ಪವನಜನೊಡನೆ ಹಸ್ತಿನಾವತಿಗೆ ಕಳುಹಿ ಪಾ ।
ರ್ಥಿವ ಪಾರ್ಥ ಪಾರ್ಥರಂ ಸಲೆ ಕೂಡಿಕೊಂಡು ದಾ ।
ನವ ಮರ್ದನಂ ತಾನೆ ಕುದುರೆಯಂ ಬಿಡಿಸಿ ರಕ್ಷೆಗೆ ನಡೆದನದರ ಪಿಂತೆ ॥ ೮೧ ॥

ಸಂಜೀವಕದ ಮಣಿಯ ಫಣಿಪತಿಯ ಕೃಷ್ಣನ ಧ ।
ನಂಜಯನ ಪುಣ್ಯಪ್ರಸಂಗದಿಂದಪಮೃತ್ಯು ।
ನಂಜು ದುಷ್ಕೃತಿ ಶತ್ರುಪೀಡೆಗಳ್ ಪೊರ್ದವೆಂಬೀ ಮಹಾ ಮಹಿಮೆಯಿಂದೆ ॥
ರಂಜಿಪೀ ಕಥೆಗೇಳ್ದೊಡಾಯುರಾರೋಗ್ಯ ಮತಿ ।
ಮಂಜುಳ ಸುಕೀರ್ತಿ ಸುಖ ಸಂಪತ್ಕಳತ್ರ ಸುತ ।
ಸಂಜಾತ ಹರಿಭಕ್ತಿ ಸಮನಿಪುದು ದೇವಪುರ ಲಕ್ಷ್ಮೀಶನಾಜ್ಞೆಯಿಂದೆ ॥ ೮೨ ॥

ಇಪ್ಪತ್ತೈದನೆಯ ಸಂಧಿ

ಸೂಚನೆ ॥ ಊರ್ಜಿತ ಪ್ರಬಲ ರಿಪುವೀರರಂ ಗೆಲ್ದು ಕೃ ।
ಷ್ಣಾರ್ಜುನರನಾಹವದೊಳೊಟ್ಟೈಸಿ ಭುಜ ವಿಕ್ರ ।
ಮಾರ್ಜಿತ ವಿನಯದೊಡನೆ ತಾಮ್ರಧ್ವಜಂ ತುರಗಮಂ ತಂದೆಗೊಪ್ಪಿಸಿದನು ॥

ಎಲೆ ಮುನಿಪ ಸದಮಲಂ ಮೊದಲೆ ಪಾಲ್ಗಡಲದಕೆ ।
ಮಲಯಾನಿಲಂ ತೀಡೆ ಬೆಳುದಿಂಗಳಂ ಪೂಡೆ ।
ಲಲಿತ ಸುಮನೋವಾಸಿತಂ ಕೂಡೆ ಮೇಲೆಮೇಲನಿದಾಗಿ ತೋರುವಂತೆ ॥
ಸಲೆ ಸೊಗಸು ನಿನ್ನ ನುಡಿ ಸರಸಮಚ್ಚರಿ ಪುಣ್ಯ ।
ನಿಲಯಮೆನೆ ಕೃಷ್ಣಚರಿತಾಮೃತವ ನೀಕಿವಿಗ ।
ಳೊಲಿದೀಂಟಿ ತಣಿದಪುವೆ ಮುಂಗತೆಯನುಸಿರೆಂದು ಬೆಸಗೊಂಡನವನೀಶನು ॥ ೧ ॥

ಕೈಮುಗಿಯುತಾದರದೊಳವನಿಪಂ ಬೆಸಗೊಳಲ್ ॥
ಜೈಮಿನಿ ಮುನೀಶ್ವರಂ ಪೇಳ್ದನೆಲೆ ನೃಪತಿ ಕೇ ।
ಳ್ಮುಂದಣಾಶ್ಚರ್ಯಮಂ ಭೀಮಸೇನನಂ ಗಜಪುರಕೆ ಕಳುಹಿ ಬಳಿಕ ।
ಹೈಮಾಂಬರಂ ಸಕಲ ದಳಸಹಿತ ಮೈದುನನ ।
ಮೈಮೆಚ್ಚಿಕೆಗೆ ಮಖ ತುರಂಗದೊಡನೈದಿದಂ ।
ವೈಮಾನಿಕ ಪ್ರತತಿ ಬೆರಗಾಗೆ ಕಲಿ ಬಭ್ರುವಾಹನಂ ಕೂಡೆ ಬರಲು ॥ ೨ ॥

ತುರಗಂ ನಡೆದುದು ಮಣಿಪುರದಿಂ ಶರದ್ದಿನದೊ ।
ಳರಸಂಚೆ ಸಂಚರಿಸತೊಡಗಿದುವು ನದಿಗಳು ।
ಬ್ಬರಮಡಗಿ ತಿಳಿದು ಪರಿದುವು ಬೆಳತುದಾಗಸಂ ಮೆರೆದುದುಡುರಾಜಿಕೂಡೆ ॥
ತರಣಿ ಶಶಿಗಳ ಕಿರಣಮೈದೆ ನಿರ್ಮಲವಾದು ।
ವರವಿಂದದಲರ ನರಸಿದುವಳಿಗಳೆಣ್ದೆಸೆಯ ।
ತರುಣಿಯರ ಗುರುಕುಚವ ಮೇಲುದಂ ಸೆಳೆದಂತೆ ಗಿರಿನಿಕರಮೆಸೆದಿರ್ದುದು ॥ ೩ ॥

ಪುಳಿನ ಜಘನಂ ಮತ್ಸ್ಯಲೋಚನಂ ಹಂಸಗತಿ ।
ಸುಳಿನಾಭಿ ಕೋಕಸ್ತನಂ ಪಂಕಜಾನನಂ ।
ಸೆಳೆನಡು ಸುಕಂಬು ಕಂಠಂ ತರಂಗ ತ್ರಿವಳಿ ಶೈವಾಲ ರೋಮಾವಳಿ ॥
ಲಲಿತಪ್ರವಾಹ ಲಾವಣ್ಯ ಲಹರಿಗಳೆಸೆಯೆ ।
ತೊಳತೊಳಗಿ ಬೆಳಗುವ ನದೀವಧುಗಳುಳ್ಗದಡು ।
ತಿಳಿದು ನಿಜಕಾಂತನಾಗಿಹ ಸಿಂಧುರಾಜನಂ ನೆರೆಯದಿರರೆಂಬೊಲಾಯ್ತು ॥ ೪ ॥

ಕರೆಕರೆದ ತಮ್ಮ ಮಳೆವೊನಲಿಂದೆ ಶಶಿಕಾಂತ ।
ದೊರತೆವೊನಲುರೆ ಪೆಗ್ಗಳಿಸೆ ನಾಚಿ ಬೆಳ್ಪಾದ ।
ತೆರದಿಂ ಮುಗಿಲ್ಗಳಿರೆ ದೆಳುದಿಂಗಳೊಪ್ಪಿದುದು ಬೆಳಸುಗಳ ಪಣ್ದಿನೆಗಳ ॥
ಮಿರುಪ ಹೊಂಬಣ್ಣದ ಹರಿದ್ರಾನುಲೇಪನದ ।
ಮೆರೆವ ಮೈಸಿರಿಯ ಮಾಂಗಲ್ಯದಿಂ ಭೂದೇವಿ ।
ನೆರೆ ಶೋಭಿಸುವ ಶರತ್ಕಾಲದೊಳ್ ತಿರುಗಿತಧ್ವರ ಹಯಂ ಧರೆಯಮೇಲೆ ॥೫॥

ವಿಟನಂತೆ ಕಾಂತಾರತಲಸದ್ವಿಲಾಸ ಪ ।
ರ್‍ಯಟನದಿಂದೊಪ್ಪಿದುದು ಸುಕವೀಂದ್ರನಂತೆ ಸಂ ।
ಘಟಿತ ಚಾತುರ್ಯ ಪದ ರಚನೆಯಿಂ ವಿವಿಧ ವಿಷಯಂಗಳೊಳ್ ಕಾಣಿಸಿದುದು ॥
ಭಟನಂತೆ ಸಮ್ಯಗ್ವಿರಾಜಿತ ಭೂಮಿ ಭೃ ।
ತ್ಕಟಕಂಗಳಲ್ಲಿ ಸಂಚರಿಸಿದುದು ಪಾಂಡವನ ।
ಪಟುತರ ಮಹಾಧ್ವರ ತುರಂಗಮಂ ಬೆಂಬಿಡದೆ ಬಹ ನೃಪರ ಸೇನೆಸಹಿತ ॥೬॥

ಪೋದುದಧ್ವರವಾಜಿ ರತ್ನಪುರಮೆಂಬ ಪುಟ ।
ಭೇದನದ ಪತಿ ಮಯೂರಧ್ವಜನ ರಾಷ್ಟ್ರಕವ ।
ನಾದಿಯೊಳ್ ತುರಗಮೇಧಂಗಳೇಳಂ ಮಾಡಿ ನರ್ಮದಾತಟಕೆ ಬಂದು ॥
ಸಾದರದೊಳೆಂಟನೆಯ ಮಖಕೆ ದೀಕ್ಷಿತನಾಗಿ ।
ಮೇದಿನಿಯ ಮೇಲೆ ಹಯಮಂ ಬಿಡಲ್ಕಿದಿರಾಗಿ ।
ಬೀದಿಯೊಳ್ ಬರುತಿರ್ದುದಾ ನೃಪನ ಸೂನು ತಾಮ್ರಧ್ವಜನ ಕಾಪಿನಿಂದೆ ॥೭॥

ಕ್ಷೋಣೀಂದ್ರ ಕೇಳೀ ತುರಂಗಮಾ ಕುದುರೆಯಂ ।
ಕಾಣುತುಂ ಧ್ವನಿಗೈದು ಪರಿತಂದು ಮೊಗವನಾ ।
ಘ್ರಾಣಿಸಿ ಮಿಳರ್ಚಿ ಕಿವಿಗಳ ನೊಡನೆ ಪೆರದೆಗೆದು ಮುಂಗಾಲ್ಗಳಿಂದಡರ್ದು ॥
ಮೇಣೊಂದನೊಂದದು ಹಿಂದಣ ಖುರಂಗಳಂ ।
ಮಾಣದಡಿಗಡಿಗೆ ಕಂದದ ತೀಟೆಗಳನಾಡಿ ।
ಮಾಣಿಕ್ಯಮುಕ್ತಾಳಿಗಳ ಭೂಷಣಂಗಳಂ ಪರಿದಿಕ್ಕಿ ಬಿರುಗೊಂಡುವು ॥೮॥

ಭಾರಣೆಯ ಬಲದೊಡನೆ ಕುದುರೆಗಾವಲೊಳಿರ್ದ ।
ವೀರತಾಮ್ರಧ್ವಜನ ಮಂತ್ರಿ ನಕುಲಧ್ವಜಂ ।
ದೂರದೊಳ್ ಕಂಡನೀ ತೆರನಂ ವಿಚಾರಿಸಿದನೆತ್ತಣ ತುರಂಗಮೆಂದು ॥
ಚಾರರಂ ಕಳುಹಿ ತರಿಸಿದನದರ ಮಸ್ತಕದೊ ।
ಳಾರಾಜಿಸುವ ಕನಕ ಪಟ್ಟ ಲಿಖಿತವನೋದಿ ।
ಭೂರಮಣ ಧರ್ಮಜನ ಬಿರುದುಗಳ ವಿಸ್ತರವ ನೊಡೆಯಂಗೆ ಕೇಳಿಸಿದನು ॥೯॥

ಕೇಳುತ ಕನಲ್ದು ತಾಮ್ರಧ್ವಜಂ ಕಟ್ಟಿದಂ।
ತೋಳ ಬಲ್ಪಿಂದೆ ಪಾರ್ಥನ ತುರಗಮಂ ಬಳಿಕ।
ಮೇಳೈಸಿ ನಿಲಿಸಿದಂ ನಿಜಬಲದ ಪೌಜುಗಳನರ್ಧಚಂದ್ರಾಕೃತಿಯೊಳು॥
ಏಳಧ್ವರಂ ಪಿಂತೆ ಕೃಷ್ಣವರ್ಜಿತಮಾಯ್ತು।
ಪೇಳಲೇನಿದು ಕೃಷ್ಣಸಂಯುಕ್ತಮಾದಪುದು।
ಕಾಳೆಗಂ ಕೃಷ್ಣನೊಳ್ ದೊರಕೊಳ್ವುದೀಗಳೆಂ ದುಬ್ಬೇರಿದಂ ಮನದೊಳು ॥೧೦॥

ತಂದೆಯ ಮಹಾಧ್ವರಕೆ ಕೃಷ್ಣನೊಡಗೂಡುವಂ।
ಮುಂದೆ ಪಾಂಡವ ವೀರರೊಳ್ ತನಗೆ ಕಾಳೆಗಂ।
ಬಂದಪುದು ಲೇಸಾದುದೆಂದು ತಾಮ್ರಧ್ವಜಂ ನಕುಲಧ್ವಜನೊಳಾಡಲು॥
ಮಂದ ಪೌರುಷದಲ್ಪಭಾಗ್ಯದತಿಕೃಶಮಾದ।
ಮಂದಿ ಕುದುರೆಯ ಮೇದಿನೀಶ್ವರರ್ ಕಾಳೆಗಕೆ।
ನಿಂದಪರೆ ನಿನ್ನೊಳಿದು ಪುಸಿಯೆನುತೆ ಮತ್ತವಂ ನಸುನಗೆಯೊಳಿಂತೆಂದನು ॥೧೧॥

ಚಪ್ಪನ್ನದೇಶದೊಳ್ ನಿನಗೆ ಮಲೆತಿದಿರಾಗಿ।
ಬಪ್ಪ ಭೂಮಿಪರಿಲ್ಲ ನಿಮ್ಮಯ್ಯನರಮನೆಯೊ।
ಳೊಪ್ಪಂಬಡೆದ ನರ್ತಕೀಜನದ ನಿತ್ಯ ಪುಷ್ಪಾಂಜಲಿಯ ಸಂಗ್ರಹಕ್ಕೆ ॥
ತಪ್ಪದೆಂದು ತೆರುವ ಕಟ್ಟಳೆಯ ಮುತ್ತುಗಳ।
ಕಪ್ಪಮಂ ಕೊಂಡು ಬಂದನೊ ಬಭ್ರುವಾಹನಂ।
ಸಪ್ಪಳಿದು ಪೊಸತೆತ್ತಣದೊ ಸೈನ್ಯಮೆನೆ ತಾಮ್ರಕೇತು ಮಗುಳಿಂತೆಂದನು ॥೧೨॥

ಧಾತ್ರಿಯೊಳ್ ವೀರರಿಲ್ಲೆನ್ನದಿರ್ ನಾರದಂ।
ರಾತ್ರಿಯೊಳ್ ಬಂದೆನ್ನೊಳಾಡಿದಂ ಧರೆಗತಿ।
ಕ್ಷಾತ್ರಪೌರುಷದಿಂದೆ ವರ್ತಿಪರ್ ಬಭ್ರುವಾಹನ ಕರ್ಣತನಯರೆಂದು॥
ಗೋತ್ರಾರಿ ಪುತ್ರ ದಾನವ ಸೂದನರ್ ಮನುಜ।
ಮಾತ್ರರಲ್ಲೆಯ್ದೆ ನರನಾರಾಯಣರ್ ಕಮಲ॥
ನೇತ್ರಸಮರನಿರುದ್ಧ ಸಾತ್ಯಕಿ ಪ್ರದ್ಯುಮ್ನ ಭೋಜಾದಿ ಯದುಗಳೆಂದು ॥೧೩॥

ಉದ್ಧತ ಪರಾಕ್ರಮಿಗಳಿ ನಿಬರಿಂದಿವರೊಡನೆ।
ಯುದ್ಧಮಾದಪುದೆಮಗೆ ನಮ್ಮ ಖಿಳಸೇನೆ ಸ।
ನ್ನದ್ಧಮಾಗಿರ ಲರ್ಧಚಂದ್ರಾಕೃತಿಯೊಳೆಂದು ತಾಮ್ರಧ್ವಜಂ ಮಂತ್ರಿಗೆ॥
ಬುದ್ಧಿಗಲಿಸಿದನಿತ್ತ ಪಾಂಡವನ ಬಲದೊಳ್ ಪ್ರ।
ಸಿದ್ಧಭಟ ರನುಸಾಲ್ವ ಕರ್ಣಸುತ ಸಾಂಬಾನಿ।
ರುದ್ಧ ಕೃತವರ್ಮಾದಿಗಳ್ ಮಸಗಿದರ್ ತುರಂಗಮಂ ಬಿಡಿಸುವುಜ್ಜುಗದೊಳು ॥೧೪॥

ಕುದುರೆಯುಂ ಕಟ್ಟಿ ಪಡೆಸಹಿತ ತಾಮ್ರಧ್ವಜಂ ।
ಕದನಕಿದಿರಾಗಲಸುರಾಂತಕಂ ಕಂಡು ತೋ ।
ರಿಸಿದನರ್ಜುನಂಗಿವಂ ಬರ್ಹಿಧ್ವಜನ ತನುಜನನಸೂಯಕಂ ಧೀರನು ॥
ಉದಿತ ಕಾಮುಂ ಸತ್ಯವಾದಿ ಶುಚಿ ವೈಷ್ಣವಂ।
ಸದರಮಲ್ಲಿವನೊಡನೆ ಕಾಳಗಂ ನರ್ಮದಾ।
ನದಿಯ ತೀರದೊಳಿವನ ತಂದೆ ದೀಕ್ಷಿತನಾಗಿಹಂ ಗೆಲ್ವುದರಿದೆಂದನು ॥೧೫॥

ಎಂದಖಿಳಸೇನೆಯಂ ಗೃಧ್ರದಾಕಾರಕ್ಕೆ ।
ತಂದು ನಿಲಿಸಿದನಸುರಮರ್ದನಂ ಮೇಣದರ।
ಮುಂದೆಸೆಯೆ ಕೊರಲೊಳನುಸಾಲ್ವನಂ ಕಂಗಳೊಳ್ ನೀಲ ಹಂಸಧ್ವಜರನು ॥
ಕಂದರ್ಪಕಾನಿರುದ್ಧರನುಭಯ ಪಕ್ಷದೆಡೆ ।
ಗಂಡದಿಂದಡಿಗಳ್ಗೆ ಭೋಜ ಸಾತ್ಯಕಿಗಳಂ।
ಹಿಂದಣಗರಿಗೆ ಮೇಘನಾದನಂ ಕಲಿಯೌವನಾಶ್ವನಂ ಜೋಡಿಸಿದನು ॥೧೬॥

ವ್ಯೂಹಚಂಚು ಸ್ಥಾನಕಿರಿಸಿದಂ ಕಲಿ ಬಭ್ರು ।
ವಾಹನ ವೃಷಧ್ವಜನನುಳಿದ ಭಟರಂ ಗೃಧ್ರ ।
ದೇಹದವಯವದೆಡೆಗೆ ನೆಲೆಗೊಳಿಸಿ ಬಳಿಕದರ ಹೃದಯದೊಳ್ ಫಲುಗುಣನನು ॥
ವಾಹಿನಿ ಸಹಿತ ನಿಲಿಸಿ ದಾರುಕನೆಸಗೆ ರಥಾ ।
ರೋಹಣಂಗೈದು ಮುರಮಥನಂ ಪಿಡಿದನಾ ಮ ।
ಹಾಹವಕೆ ವರಪಾಂಚಜನ್ಯಮಂ ಘೋರ ರವದಿಂದಹಿತರೆದೆಗಳೊಡೆಯೆ ॥೧೭॥

ಪಾಂಚಜನ್ಯಧ್ವನಿಗೆ ಬೆದರದುಬ್ಬೇರಿ ರೋ ।
ಮಾಂಚನದೊಳಾಗ ತಾಮ್ರಧ್ವಜಂ ಶ್ರೀವತ್ಸ।
ಲಾಂಛನಂಗಿದಿರಾಗಿ ನುಡಿದನೆಲೆ ದೇವ ಕಟ್ಟಿದೆನರ್ಜುನನ ಹಯವನು ॥
ವಾಂಛೆಯುಳ್ಳೊಡೆ ಬಿಡಿಸು ಪಾಲಿಸು ಕಿರೀಟಿಯಂ ।
ನೀಂ ಚಕ್ರಮಂ ತುಡುಕು ಶಾರ್ಙ್ಗಮಂ ಪಿಡಿ ರಣಕೆ।
ನಾಂ ಚಲಿಸೆನಿದೆಯೆನ್ನ ವಾಜಿಯಂ ತಡೆ ಸತ್ವಮುಳ್ಳೊಡೆನುತಾರ್ದೆಚ್ಚನು ॥೧೮॥

ಹರಿಗೆ ಕೂರ್ಗಣೆ ಮೂರು ದಾರುಕಂಗೈದು ರಥ ।
ಹರಿಗಳ್ಗೆ ನಾಲ್ಕು ಸಿತವಾಹನಂಗಿಪ್ಪತ್ತು ।
ವರಭೋಜಪತಿಗೆಂಟು ಶಿನಿಸುತಂಗೊಂಬತ್ತು ಹಂಸಧ್ವಜಂಗೆ ಪತ್ತು॥
ತರಣಿತನಯಜ ಬಭ್ರುವಾಹಾನುಸಾಲ್ವಕ ।
ಸ್ಮರ ಯೌವನಾಶ್ವಾನಿರುದ್ಧ ನೀಲಧ್ವಜ।
ರ್ಗೆರಡೆರಡು ಮೇಘನಾದಂಗೇಳು ಕೋಲ್ಗಳಂ ಕರೆದವಂ ಬೊಬ್ಬಿರಿದನು ॥೧೯॥

ಅಚ್ಯುತಂ ಬೆರಗಾದನಾತನ ಪರಾಕ್ರಮಕೆ ।
ಮೆಚ್ಚಿದಂ ಫಲಗುಣಂ ವಿಕ್ಕಳಿದ ಪಟುಭಟರ್ ।
ಬೆಚ್ಚಿದರ್ ಮಸಗಿ ವೀರಾವೇಶದಿಂದೆ ತಮತಮಗೆ ಬಳಿಕನಿರುದ್ಧನು ॥
ಎಚ್ಚನೆಲವೆಲವೊ ತಾಮ್ರಧ್ವಜ ವಿಚಾರಿಸದೆ ।
ಕೆಚ್ಚೆದೆಯೊಳಿದಿರಾದೆ ಮುರಹರನ ಮೊಮ್ಮನಾಂ ।
ಬೆಚ್ಚುವೊಡೆ ಬಿಡು ಹಯವನಲ್ಲದೊಡೆ ನೋಡೆನ್ನ ಬಾಣ ಜಾತವನೆಂದನು ॥೨೦॥

ಬಾಣಜಾತವನೀಗ ನೋಡಲಿರ್ದಪುದೆ ನೀಂ ।
ಬಾಣಜಾತೆಯ ರಮಣನಂತುಮಲ್ಲದೆ ಪುಷ್ಪ ।
ಬಾಣಜಾತಂ ಮೇಲೆ ತನ್ನ ಮಗಳುಷೆಗೆ ನೀಂ ಪ್ರಾಣೇಶನೆಂದು ರಣದೆ ॥
ಬಾಣನುಳುಹಿದನಂದು ಕೈಗಾಯ್ದುವಲ್ಲೆಮ್ಮ ।
ಬಾಣಂಗಳೀಕ್ಷಿಸೆಂದಾರ್ದು ತಾಮ್ರಧ್ವಜಂ ।
ಬಾಣಾಯುತಂಗಳಂ ಸುರಿಯಲ್ಕೆ ಮಧ್ಯದೊಳ್ ತರಿದೀತನಿಂತೆಂದನು ॥೨೧॥

ಸಂಗರಕೆ ಸಾಹಸವೊ ಮಾತುಗಳೊ ಪೂರ್ವಪ್ರ ।
ಸಂಗಮೇತಕೆ ಮರುಳೆ ತರಹರಿಸಿಕೊಳ್ಳೆನುತೆ ।
ಸಂಗಡಿಸಿದವನ ರಥದಚ್ಚು ನೊಗ ಗಾಲಿ ಟೆಕ್ಕೆಯ ಕುದುರೆ ಸಾರಥಿಗಳ ॥
ಅಂಗಿ ಬಿಲ್ಬತ್ತಳಿಕೆ ಸೀಸಕಂಗಳ ಜಂಜ ।
ಡಂಗಳಿಲ್ಲೆನಿಸಿ ಕೆಲಬಲದ ರಕ್ಷೆಯ ಚಾತು ।
ರಂಗಮಂ ಸವರಿ ರಿಪುಮೋಹರಕೆ ಪೊಕ್ಕನನಿರುದ್ಧನದನೇವೇಳ್ವೆನು ॥ ೨೨ ॥

ರಣದೊಳನಿರುದ್ಧನಾಟೋಪದಿಂ ಚಾಪದಿಂ ।
ಕಣೆಗಳಂ ತೆಗೆದಿಸಲ್ಕರಿಗಳಂ ಹರಿಗಳಂ ।
ಮಣಿಮಯ ರಥಂಗಳಂ ಕಾಲಾಳ ಮೇಲಾಳ ಸಂದಣಿಯ ಮಂದಿಗಳನು ॥
ಹಣಿದು ವಾಡಿದುದಹಿತ ಬಲದೊಳಗೆ ನೆಲದೊಳಗೆ ।
ಪೆಣನ ಮೆದೆ ಕೆಡೆಯಲಕ್ಷೌಹಿಣಿಯ ವಾಹಿನಿಯ ।
ಗಣನೆ ಮೂರಳಿದುದೊಂದೇ ಕ್ಷಣಕೆ ವೀಕ್ಷಣಕೆ ನೆರೆ ಭಯಂಕರಮಾಗಲು ॥೨೩॥

ಒತ್ತಿಬಹ ರಥಿಕರಂ ವ್ಯಥಿಕರಂ ಮಾಡಿದುವು ।
ಮುತ್ತುವ ತುರಂಗಮದ ತುಂಗ ಮದದಂತಿಗಳ ।
ಮೊತ್ತಮಂ ಪೋಳಾಗಿ ಸೀಳಾಗಿ ಕೆಡಹಿದುವು ಕೊಡಹಿದುವು ವಾಹಕರನು ॥
ಮತ್ತೆ ಭಟರಂಗಮಂ ಭಂಗಮಂ ಪಡಿಸಿದುವು ।
ಕತ್ತರಿಸಿ ತಲೆಗಳಂ ಕೊಲೆಗಳಂ ಕೊಂಡು ಬಿಸಿ ।
ನೆತ್ತರಂ ಪರಪಿದುವು ನೆರಪಿದುವು ಮರುಳ್ಗಳು ಮನನಿರುದ್ಧನಸ್ತ್ರಂಗಳು ॥೨೪॥

ಪೊಸರಥವೊಳ್ಳೈದಿದಂ ಮತ್ತೆ ತಾಮ್ರಧ್ವಜಂ।
ಮುಸುಕಿತಗಣಿತ ಚಾತುರಂಗಮನಿರುದ್ಧನಂ।
ಮಸುಗಿತು ತಮಸ್ತೋಮ ಮಾದಿತ್ಯಮಂಡಲದ ಗಸಣಿಯಿಲ್ಲೆನೆ ನಭದೊಳು ॥
ವಸುಧೆಯುದಿರಿತು ಗೋರುಶೈಲ ಮಲ್ಲಾಡಿದುದು।
ಬಸವಳಿದ ನಹಿ ಕೂರ್ಮನೆದೆಗೆಟ್ಟು ನುಡುಗಿದುವು।
ದೆಸೆಯಾನೆ ಕಡಲುಕ್ಕಿತಾಹವಂ ಘೋರವಾದುದು ರೋಮಹರ್ಷಣದೊಳು॥೨೫॥

ಕೋಪದಿಂ ಪ್ರಳಯಾಗ್ನಿಯಂದದ ಶರಂಗಳಂ।
ಚಾಪದಿಂ ತೆಗೆದಿಸುತ್ತನಿರುದ್ಧನಮಿತ ಪ್ರ।
ತಾಪದಿಂದುಜ್ವಲಿಸುತಿರ್ದಂ ವಿಧೂಮ ಪಾವಕನಂತೆ ಪರಬಲದೊಳು॥
ಶ್ರೀಪತಿಯ ಪೌತ್ರನೆಂದಿನ್ನೆಗಂ ತಾಳ್ದೊಡಾ।
ಟೋಪಮೇ ನಿನಗೆನುತೆ ತಾಮ್ರಧ್ವಜಂ ಕನ।
ಲ್ದಾಪುಪ್ಪಬಾಣ ತನುಜನ ಮೇಲೆ ಕಣೆಗರೆದನಂಬರಂ ತುಂಬುವಂತೆ ॥ ೨೬ ॥

ಪರ್ಬಿದುವು ತೆಗೆದಿಸಲ್ ತಾಮ್ರಧ್ವಜನ ಕಣೆಗ।
ಳರ್ಬುದಂಗಳ ಸಂಖ್ಯೆಯಿಂದೊಡನೆ ನರನ।
ಪೆರ್ಬಡೆಯ ಮೇಲೆ ಕವಿದುದು ನೊಂದನನಿರುದ್ಧನೇರ್ವಡೆದು ಮೂರ್ಛೆಯಿಂದೆ॥
ಸರ್ಬದಳಮಂ ತಗಳ್ದುವು ಬೇಸಗೆಯ ಬಿರುವೆ।
ಲರ್ಬಿಸಿ ರಜಮಂ ತೆರಳ್ಚುವಂತಾಗ ವೀ।
ರರ್ಬಿಂಕದಿಂದಾಂತು ನಿಂದರನುಸಾಲ್ವಕ ಪ್ರದ್ಯುಮ್ನ ಸಾತ್ಯಕಿಗಳು ॥ ೨೭ ॥

ಹಂಸಕೇತುವನೆಚ್ಚು ಕೃತವರ್ಮ ಸಾತ್ಯಕಿಗ।
ಳಂ ಸದೆದು ಬಭ್ರುವಾಹನ ಯೌವನಾಶ್ವರ್ಗೆ।
ಹಿಂಸೆಯಂ ಕೈಗೈದು ನೀಲಧ್ವಜಾನುಸಾಲ್ವಾದಿ ಭಟರಂ ಘಾತಿಸಿ॥
ಕಂಸಾರಿ ಸುತನಂ ಪಚಾರಿಸಿ ವಿಜಯ ಮುರ।
ಧ್ವಂಸಿಗಳ ಮೇಲೆ ನಡೆತರೆ ಕಂಡು ಕರ್ಣ ತನ।
ಯಂ ಸರಸಕಿದಿರಾಗಿ ಕತ್ತರಿಸಿ ಕೆಡಹಿದಂ ತಾಮ್ರಧ್ವಜನ ರಥವನು ॥ ೨೮ ॥

ತೇರುಡಿಯೆ ಮತ್ತೊಂದು ತೇರ ನಳವಡಿಸಲಾ।
ತೇರನಿಸಲೊಡನೆ ಪೊಸತೇರೊಳವನೈದಲಾ।
ತೇರುಮಂ ಕತ್ತರಿಸೆ ತೇರ್ಸೈಸದಂತಿಂತು ನೂರುತೇರಂ ಖಂಡಿಸಿ।
ಸೇರಿಸೇರಿದ ಸೇನೆಯುಂ ಸವರಿ ಕರ್ಣಜಂ।
ಸೇರಿಬರೆ ತಾಮ್ರಧ್ವಜಂ ಕನಲ್ದವನಿಯಂ।
ಸೇರಿ ಬಾಣತ್ರಯದೊಳಾತನಂ ಘಾತಿಸಿ ರಥಾರೋಹಣಂಗೈದನು ॥ ೨೯ ॥

ಅನಿರುದ್ಧನಂ ಗೆಲ್ದು ವೃಷಕೇತುವಂ ಕೆಡಹ।
ಲನುಸಾಲ್ವನಿದಿರಾದೊಡಾತನ ಪರಾಕ್ರಮುವ।
ನನುವರದೊಳುರೆ ಮುರಿದು ಕೃತವರ್ಮ ಸಾತ್ಯಕಿ ಪ್ರದ್ಯುಮ್ನರಂ ಸೋಲಿಸಿ॥
ಅನುಪಮ ಬಲಂ ಬಭ್ರುವಾಹನಂ ಕಾದಲವ।
ನನುವನೊಪ್ಪಂಗೆಡಿಸಿ ಹಂಸಧ್ವಜನ ಜಯವ।
ನನುಕರಿಸಿ ಯೌವನಾಶ್ವಾಸಿತಧ್ವಜರಂ ತಗುಳ್ದವಂ ಬೊಬ್ಬಿರಿದನು ॥ ೩೦ ॥

ಬಲದೊಳಗೆ ಮಿಡುಕುಳ್ಳ ವೀರರೊಳ್ ಧೀರರೊಳ್।
ಕಲಿತನದೊಳಿದಿರಾಗಿ ನಿಲ್ವರಂ ಗೆಲ್ವರಂ।
ಸಲೆ ಪಲಾಯನಕೆ ಮೈಗುಡುವರಂ ಬಿಡುವರಂ ವಾಹನಾಯುಧ ತತಿಯನು॥
ಫಲುಗುಣಂ ಕಾಣುತತ್ಯುಗ್ರದಿಂ ವ್ಯಗ್ರದಿಂ।
ಸೆಳೆದು ಕೋದಂಡಮಂ ತೀಡಿದಂ ಪೂಡಿದಂ।
ಪೊಳೆವ ಕೆಂಗರಿಯ ನಿಡುಗೋಲ್ಗಳಂ ಸಾಲ್ಗಳಂ ಕಟ್ಟಿದಂ ಗಗನ ಪಥಕೆ ॥ ೩೧॥

ಲೇಸಾದುದೈ ಪಾರ್ಥ ಕೃಷ್ಣನ ಸಹಾಯದಿಂ।
ದೀಸು ದಿನಮಾಹವದೊಳೆಲ್ಲರಂ ಗೆಲ್ದೆ ಬಿಡು।
ವಾಸಿಯುಂ ತನ್ನೊಡನೆ ಗೋತ್ರಹತ್ಯಾದೋಷಮಂ ಕಳೆದುಕೊಂಬ ಮಖಕೆ॥
ಏಸು ಹರಿಗಳ್ ಬೇಕು ನಿನಗೈಸನೀವೆ ನಾ।
ನೀ ಸರೋಜಾಕ್ಷನಿರಲೇತಕೆಲೆ ಮರುಳೆ ಧನ।
ದಾಸೆಯಿಂ ಧರ್ಮಮಂ ಮಾಣ್ದನಂತಾದೆ ಹೋಗೆನುತವಂ ತೆಗೆದೆಚ್ಚನು ॥ ೩೨॥

ಎಲವೊ ತಾಮ್ರಧ್ವಜ ಸುವಿತ್ತದಿಂ ಧರ್ಮಮಂ।
ನಿಲಿಸಬೇಕಲ್ಲದೆ ನಿರರ್ಥಕದೊಳಾದಪುದೆ।
ಜಲಜಾಕ್ಷನಂ ಬರಿದೆ ಸಾಕ್ಷಾತ್ಕರಿಸಬಹುದೆ ವಿಧಿ ವಿಧಾನದೊಳಲ್ಲದೆ॥
ಪಲವು ಮುಖದಿಂದೆ ಪರಿಪೂರ್ಣನಾಗಿಹ ಹರಿಯ।
ನೆಲೆಯ ನೀನೆಂತರಿವೆ ಮೂಢ ಫಡ ಹೋಗೆನುತೆ।
ಫಲುಗುಣಂ ತೆಗೆದೆಚ್ಚನಾತನ ವರೂಥ ಹಯ ಸಾರಥಿಗಳೆಡೆಗೆಡೆಯಲು ॥ ೩೩ ॥

ಆ ರಥಂ ಮುರಿಯೆ ಪೊಸರಥವನವನೇರಿ ಬರ।
ಲಾಗಥಂ ಪುಡಿಯಾಗೆ ನರನಿಸಲ್ ಬಳಿಕಾ ಮ।
ಹಾ ರಥಂ ಮತ್ತೊಂದು ರಥದೊಳುರವಣಿಸಲದನರ್ಜುನಂ ತಡೆಗಡಿದನು ॥
ಆ ರಣದೊಳಿಂತವನ ಸ್ಯಂದನ ಸಹಸ್ರಮಂ।
ಬಾರಿಬಾರಿಗೆ ಕತ್ತರಿಸಿ ಕೆಡಹಿ ಫಲುಗುಣಂ।
ಪೂರೈಸಿದಂ ದೇವದತ್ತಮಂ ಕೊಂದನಿರ್ಕೆಲದ ಚಾತುರ್ಬಲವನು ॥ ೩೪ ॥

ಅರ್ಜುನನ ಸಾಹಸಕೆ ಮೆಚ್ಚಿ ತಾಮ್ರಧ್ವಜಂ।
ಗರ್ಜಿಸಿ ಕನಲ್ದುಮಮು ತಾನದೇಂ ಪೌರುಷ ವಿ।
ವರ್ಜಿತನೆ ಫಡಯೆನುತ ತೆಗದಿಸಲ್ ಬರಸಿಡಿಲ್ ಪೊಡೆದು ಗಿರಿ ಜರಿವಂತಿರೆ॥
ನಿರ್ಜರೇಂದ್ರನ ಸೂನು ಪೊನಲಿಡಲ್ ಬಿಸಿಯು ನೆ।
ತ್ತರ್ಜೊಂಪಿಸುತೆ ಮೈಮರೆದು ಬಿದ್ದನಿಳೆಯೊಳ್ ಪು।
ನರ್ಜನ್ಮಮೆನೆ ಕೂಡೆ ಚೇತರಿಸಿ ನರನೆಚ್ಚು ಕಡಿದನಾತನ ಧನುವನು ॥ ೩೫ ॥

ಬಿಲ್ಮುರಿಯೆ ಮತ್ತೊಂದು ಬಿಲ್ಗೊಂಡು ಕೋಪದಿಂ।
ಪಲ್ಮೊರೆಯುತೊಡನೆ ತಾಮ್ರಧ್ವಜಂ ತೆಗೆದಾರ್ದಿ।
ಸಲ್ಮಹಿಯೊಳರ್ಜುನನ ತೇರೊಂದುಯೋಜನಂ ಪೋಗೆ ತರಹರಿಸಿಕೊಳುತೆ॥
ನಿಲ್ಮೋರೆದೋರೆನುತೆ ಫಲುಗುಣಂ ಬೊಬ್ಬಿರಿದಿ।
ಸಲ್ಮುಗಿಲ ಬಟ್ಟೆಯು ನಡರ್ದುದಾತನ ರಥಂ।
ಬಲ್ಮೆಗೆ ಮುರಧ್ವಂಸಿ ಮೆಚ್ಚಿ ತಲೆದೂಗಿದಂ ಭೂಪಕೇಳದ್ಭುತವನು ॥ ೩೬ ॥

ಎಡಬಲದ ಮಂಡಲದ ಭೇದದಿಂ ಛೇದದಿಂ।
ದಡಿಗಡಿಗೆಸೆವ ಪರಾಕ್ರಮದಿಂದೆ ಕ್ರಮದಿಂದೆ।
ತುಡುವ ಬಿಡುವಂಬಿನ ತರಂಗದಿಂ ರಂಗದಿಂ ತೊಲಗದವಗ್ಗಳಿಕೆಯಿಂದೆ॥
ದೃಢಚಾಪ ಘೋಷ ಭೀಕರದಿಂದೆ ನಿಕರದಿಂದೆ।
ಜಡತೆ ಪೊದ್ದದ ಸಾಹಸತ್ವದಿಂ ಸತ್ವದಿಂ।
ಕಡುಗಿ ತಾಮ್ರಧ್ವಜ ವಿಜಯರಾಗ ಜಯರಾಗಕೆಚ್ಚಾಡಿದರ್ ಧುರದೊಳು ॥ ೩೭ ॥

ಧಾತ್ರೀಶ ಕೇಳ್ ಕೌತುಕವ ಸೇಳುದಿನ ಮಹೋ।
ರಾತ್ರಿಗಳೊಳಂ ಬಿಡದೆ ಕಾದಿದರ್ ಪಂಕರುಹ।
ನೇತ್ರಂ ಸಮೀಪದೊಳ್ ನೋಡುತಿರೆ ತಾಮ್ರಧ್ವಜಾರ್ಜುನರ್ ಬಳಿಕವರೊಳು॥
ಗೋತ್ರಾರಿಸುತನವಂ ಮತ್ತೆ ಜೋಡಿಸಿ ತಂದ।
ಮಾತ್ರದೊಳ್ ಸಾಸಿರ ರಥಂಗಳಂ ಕಡಿದತಿ।
ಕ್ಷಾತ್ರದಿಂ ಕೆಡಹಿದಂ ಪಡೆಯೊಳಕ್ಷೌಹಿಣಿಗಳಿನ್ನೂರನಾಹವದೊಳು ॥ ೩೮ ॥

ಆ ತಾಮ್ರಕೇತು ಪಾಂಡವಸೇನೆಯೊಳ್ ಪ್ರಯುತ।
ಚಾತುರಂಗಮನೈದೆ ಸಂಹರಿಸಿ ಪಾರ್ಥನಂ।
ಘಾತಿಸಿದನಡಿಗಡಿಗೆ ಪಳವಿಗೆಯ ಹನುಮನಂ ಪಲ್ಗಿರಿಸಿ ಹರಿಯನೆಚ್ಚು॥
ಸೂತವಾಜಿಗಳನೊಡನೆ ಜವಗೆಡಿಸಿ ವಿ।
ಖ್ಯಾತ ಚಾಪದ ನಾರಿಯುಂ ಕಡಿದು ಕಲಿ ಕರ್ಣ।
ಜಾತಾನುಸಾಲ್ವ ಸಾತ್ಯಕಿ ಬಭ್ರುವಾಹನಾದಿಗಳನುರೆ ನೋಯಿಸಿದನು ॥ ೩೯ ॥

ತೆತ್ತಿಸಿದುವುಭಯವೀರರ ಮೈಯೊಳಂಬುಗಳ್ ।
ನೆತ್ತರಭ್ರಕೆ ಚಿಮ್ಮಿ ಮಳೆವನಿಗಳಂತೆ ಹರಿ ।
ಯುತ್ತಮಾಂಗದಮೇಲೆ ಸೂಸಿದುವು ವಾಯುವಶದಿಂದೆ ಕೇಳದ್ಭುತವನು ॥
ಮತ್ತೆ ಫಲುಗುಣನವನ ಧನುವನಿಕ್ಕಡಿಯಾಗಿ ।
ಕತ್ತರಿಸೆ ಖತಿಯೊಳ್ಕೈತಂದು ಪಾರ್ಥನ ರಥವ ।
ನೆತ್ತಿಕೊಂಡಾಗಸಕೆ ಪುಟನೆಗೆದು ಧರೆಯೊಳಪ್ಪಳಿಸಿದಂ ತಾಮ್ರಕೇತು ॥೪೦॥

ನಭಕೆ ವಿಜಯನ ರಥವನೀಡಾಡಿ ಬಳಿಕದಂ ।
ರಭಸದಿಂದಿಳೆಗಪ್ಪಳಸುವಿನಂ ಪರಿತಂದು ।
ಶುಭಕರ ಕರಾಗ್ರದಿಂ ಪಿಡಿದಾ ವರೂಥಮಂ ಸ್ವಸ್ಥಾನಮಾಗಿ ನಿಲಿಸಿ ॥
ಅಭಯಮಂ ಪಾರ್ಥಂಗೆ ಮಾಡಿದಂ ಮುರಹರಂ ।
ತ್ರಿಭುವನದೊಳಚ್ಯುತನ ಭಕ್ತರ್ಗೆ ಬರ್ಪುದೆ ಪ ।
ರಿಭವಮೆಂದನಿಮಿಷರ್ ಕೊಂಡಾಡೆ ಬಲಮೆರಡಕಾಶ್ಚರ್ಯಮಾಗೆ ಕೂಡೆ ॥೪೧॥

ಭೂರಮಣ ಕೇಳ್ ಬಳಿಕ ನಸುನಗುತ ನುಡಿದನಸು ।
ರಾರಾತಿ ಪಾಂಡವಂಗಳು ಕದಿರಧರ್ಮಮಂ ।
ದೀರಣದೊಳೀತನಂ ಗೆಲ್ದಪಾವಿರ್ವರುಂ ಸಾಹಸಂಗೈದಲ್ಲದೆ ॥
ತೀರದೆಸು ನೀನೊಂದು ಕಡೆಯೊಳಾಸಿಸುವೆನೀ ।
ವೀರನಂ ಮತ್ತೊಂದು ದೆಸೆಯೊಳೆಂದರುಪಿ ನರ ।
ನಾರಾಯಣರ್ ಕರೆದರಂಬುಗಳ ನೋರೊರ್ವರೊಂದೊಂದು ಮುಖದೊಳೆರ್ದು ॥೪೨॥

ಪಾಂಡವ ಮುಕುಂದರೊಂದೇಬಾರಿ ಮುಳಿದು ವರ ।
ಗಾಂಡೀವ ಶಾರ್ಙ್ಗ ಚಾಪಂಗಳಂ ಕೊಂಡಬ್ಬ ।
ಜಾಂಡಕಧಿಕ ಕ್ಷೋಭವಾಗೆ ತಾಮ್ರಧ್ವಜನ ಮೇಲೆ ತೆಗೆದಿಸುತಿರಲ್ಕೆ ॥
ಕಾಂಡವಿಲ್ಲದೆ ಕವಿದುವಂಬುಗಳಡಗಿತು ಮಾ ।
ರ್ತಾಂಡ ಮಂಡಲವಾಗ ಶಿಖಿಕೇತು ನಂದನಂ ।
ತಾಂ ಡಿಬಿಕಮರ್ದನಕಿರೀಟಿಗಳನಡಿಗಡಿಗೆ ಘಾತಿಸಿದನಾಹವದೊಳು ॥೪೩॥

ಮೀರಿದ ಪರಾಕ್ರಮದೊಳಕ್ಷಿಗಳರಲ್ದುವು ।
ದ್ಬೇರಿ ಪುಳಕೋತ್ಸವದೊಳಾ ತಾಮ್ರಕೇತು ಕೈ ।
ದೋರಿ ಬೊಬ್ಬಿರಿದು ನಸುನಗುತೆ ಕೃಷ್ಣನೊಳೆಂದನೆಲೆ ದೇವ ತನ್ನ ಕೂಡೆ ॥
ಬೇರೆ ನೀಂ ಬಿಲ್ವಿಡಿದು ಕಾದಿ ಕೌಂತೇಯನಂ ।
ಗಾರುಮಾಡದಿರರ್ಜುನಂಗೆ ಸಾರಥಿಯಾಗು ।
ಸಾರಿದೆಂ ಸಾಕೆಂದು ತೆಗೆದೆಚ್ಚೊಡಚ್ಯುತಂ ಮೆಚ್ಚಿನೊಳೊಡಂಬಟ್ಟನು ॥೪೪॥

ಹರಿ ಬಳಿಕ ತನ್ನ ರಥಮಂ ಬಿಟ್ಟು ಫಲುಗುಣನ ।
ವರ ವರೂಥಾಗ್ರದೊಳ್ ಚಮ್ಮಟಿಕೆ ವಾಘೆಯಂ।
ಧರಿಸಿ ತುರಗಂಗಳಂ ಚಪ್ಪರಿಸಲೆಡಬಲಕೆ ವಾಯುವೇಗದೊಳಡರ್ದು ॥
ಮುರಿದು ಮಂಡಲಭೇದ ಚಳವಳಿಕೆ ಚದುರೋಜೆ ।
ವೆರಸಿ ರಣರಂಗದೊಳ್ ಕಾರಮಿಂಚಿನ ತೆರದೊ।
ಳುರವಣಿಸಿದುವು ಕೂಡೆ ಶಕ್ರಸುತನೆಚ್ಚನಡಿಗಡಿಗೆ ತಾಮ್ರಧ್ವಜನನು ॥೪೫॥

ಹರಿ ನಂದನನ ದಿವ್ಯ ಹರಿಮಯ ವರೂಥಮಂ।
ಹರಿವೇಗದಿಂದೆಸೆವ ಹರಿ ಚತುಷ್ಟಯಮುಮಂ ।
ಹರಿಯುಮಂ ಪಳವಿಗೆಯ ಹರಿಯುಮಂ ಪಾರ್ಥನ ಲಹರಿಯುಮಂ ಧಾತುಗೆಡಿಸಿ॥
ಹರಿಬದ ಕಲಿಗಳಂ ಪ್ರಹರಿಸಿ ತಾಮ್ರಧ್ವಜಂ ।
ಹರಿನಾದಮಂ ಮಾಡಿ ಹರಿದಾಡುತಿರೆ ಕೂಡೆ ।
ಹರಿಣಾಂಕ ಕುಲಜಂ ವಿಹರಿಸಿದಂ ಬಾಣದಿಂ ಹರಿಕಿರಣಮಡಗುವಂತೆ ॥೪೬॥

ಮತ್ತೆ ಮುರಹರನ ನೀರ್ಮೈದುಕೂರ್ಗಣೆಯೊಳರು ।
ವತ್ತು ಮಾರ್ಗಣದಿಂದೆ ಸುರಪ ಸುತನಂ ಘಾತಿ ।
ಸುತ್ತವಂ ಬೊಬ್ಬಿರಿಯೆ ನರನವನ ರೋಮರೋಮಂಗಳಂ ಭೇದಿಪವೊಲು ॥
ತೆತ್ತಿಸಿದನಂಬುಗಳನವನು ಮತ್ತಸುತಿರ್ದ ।
ನಿತ್ತಂಡದಾಹವಮಂ ಸಮವಾಗಿ ಬರೆ ವಿಜಯ ।
ನೊತ್ತಾಯದಿಂದವನ ಕುದುರೆ ಸಾರಥಿ ರಥವನೆಚ್ಚು ಹುಡಿಹುಡಿಗೈದನು ॥೪೭॥

ಚೂರ್ಣಮಾದೊಡೆ ರಥಂ ತಾಮ್ರಧ್ವಜಂ ರೋಷ ।
ಪೂರ್ಣಮುಖನಾಗಿ ಕಲಿ ಪಾರ್ಥನ ಸಮೀಪಮಂ ।
ತೂರ್ಣದಿಂದೈದಿ ಪೊಯ್ವನಿತರೊಳ್ ಚರಣಾಗ್ರದಿಂದೆ ಮುರಹರನೊದೆಯಲು ॥
ಜೀರ್ಣತರು ಮುರಿದು ಬೀಳ್ವಂತಿಳೆಗೆ ಬಿದ್ದೊಡನೆ ।
ಕೀರ್ಣ ಪ್ರತಾಪದಿಂದೆದ್ದು ಮತ್ತೊಂದು ವಿ।
ಸ್ತೀರ್ಣಮಾಗಿರ್ದ ಮದಕುಂಜರಕಡರ್ದು ಶರಪಂಜರವ ನೊದವಿಸಿದನು॥೪೮॥

ಬೀದಿವರಿಸಿದನಾತನಾನೆಯಂ ಬಭ್ರುವಾ ।
ಹಾದಿ ವೀರರ ಮೇಲೆ ಕಣೆಗಳಂ ಕರೆದನಿದಿ ।
ರಾದ ಭಟರೆಲ್ಲರುಂ ಮೂರ್ಛೆವೃತಿಯಂ ತಳೆದರ್ಜುನಂ ಮೈಮರೆದನು ॥
ಕಾದುವವರಿಲ್ಲ ಪಾಂಡವ ಬಲದೊಳಾಗ ಮಧು ।
ಸೂದನಂ ಬೆರಗಾಗಿ ಕಡುಗೋಪದಿಂದೆ ತಾ ।
ನೇ ದಿವ್ಯಚಕ್ರಮಂ ತುಡುಕಿ ನಡೆದಂ ಧುರಕೆ ಮೂಜಗಂ ತಲ್ಲಣಿಸಲು ॥೪೯॥

ಉರಗೇಂದ್ರ ಕಮಠ ದಿಕ್ಕರಿಗಳುಂ ಗಿರಿಗಳುಂ ।
ಶರಧಿಯುಂ ದೆಸೆಗಳುಂ ಧರಣಿಯುಂ ತರಣಿಯುಂ ।
ಪಿರಿದು ಕಂಪಿಸಲಾ ತ್ರಿವಿಕ್ರಮಂ ಚಕ್ರಮಂ ಕೊಂಡು ಕಾಳೆಗಕೆ ಬರಲು ॥
ಅರುಣಧ್ವಜಂ ಕಂಡು ಕೋಪದಿಂ ಚಾಪದಿಂ ।
ಸರಳ ಮಳೆಯಂ ಕರೆಯುತುರುಬಿದಂ ತರುಬಿದಂ ।
ಹರಿಯನದ್ಭುತಮಾಗೆ ಸಂಗರಂ ಸಿಂಗರಂ ಮೆರೆಯಲಂತಕಪುರದೊಳು ॥೫೦॥

ಕಟ್ಟುಗ್ರಕೋಪದಿಂದೈತಪ್ಪ ದಾನವ ಘ ।
ರಟ್ಟನಂ ತಡೆದು ತಾಮ್ರಧ್ವಜಂ ಕಾಳೆಗಂ ।
ಗೊಟ್ಟನಳವಿಗೆ ಸೇರಿತಾತನ ಚತುರ್ಬಲಂ ಸರ್ವಸನ್ನಾಹದಿಂದೆ ॥
ಇಟ್ಟಣಿಸಿ ತಾಹವಂ ಬಳಿಕ ಮುರವೈರಿ ತಿರು ।
ಪಿಟ್ಟ ಚಕ್ರದ ಪಲವು ಧಾರೆಗಳ ಸೋಂಕಿನಿಂ ।
ಥಟ್ಟುಗೆಡೆದುದು ಪಗೆಯ ಪಡೆಯೊಳಕ್ಷೌಹಿಣಿಯ ಶತಕಮೊಂದೇಕ್ಷಣದೊಳು ॥೫೧॥

ಪಡೆ ಮಡಿಯೆ ರೋಷದಿಂದಾಗ ತಾಮ್ರಧ್ವಜಂ ।
ನುಡಿದನಸುರಾಂತಕನೊಳೆಲೆ ದೇವ ಸೈನ್ಯಮಂ ।
ತಡೆಗಡಿದೊಡೇನಹುದು ಹಿಂದೆ ಪಾರ್ಥಂಗಾಗಿ ನಿನ್ನ ಪುಣ್ಯವನಿತ್ತಲಾ ॥
ಕುಡದಿರು ಧನಂಜಯುಗಾಗಿ ತನಗೀಗ ನಿ ।
ನ್ನೊಡಲನಿದು ನಿಶ್ಚಯಂ ನಿನ್ನಂ ಕಿರೀಟಿಯುಂ ।
ಪಿಡಿದು ತಾತನ ಮಖವನಾಗಿಪೆಂ ನೋಡೆಂದು ಹರಿಯಂ ಪಚಾರಿಸಿದನು ॥೫೨॥

ಧರಣೀಂದ್ರ ಕೇಳ್ ಚಕ್ರಪಾಣಿಯಾಗಿರ್ದ ಮುರ ।
ಹರನಂ ರಣಾಗ್ರದೊಳ್ ಮೇಲ್ವಾಯ್ದು ತುಡುಕಿ ನಿಜ ।
ಕರಪೊಂದರಿಂದೆರಡು ಕೈಗಳಂ ಮತ್ತೊಂದು ಹಸ್ತದಿಂ ಪದಯುಗವನು ॥
ಪಿರಿದು ಸತ್ವದೊಳೊತ್ತಿ ಪಿಡಿದೊಂದುಗೂಡಿ ಹರಿ ।
ಚರಣಮಂ ನೊಸಲೆಡೆಯೊಳಿಟ್ಟು ತಾಮ್ರಧ್ವಜಂ ।
ಪರಿದನರ್ಜುನನಿದ್ದ ಬಳಿಗಾಗಿ ಸಾಹಸಕೆ ಮೂಜಗಂ ಬೆರಗಾಗಲು ॥೫೩॥

ಪಿಡಿಗೈಯೊಳಿರ್ದಸುರರಿಪು ಪಾರ್ಥನಂ ಕರೆದು ।
ತುಡು ಮಹಾಸ್ತ್ರನನೆಂದು ನೇಮಿಸಲ್ ಫಲುಗುಣಂ ।
ಫಡಯೆನುತೆ ಬಾಣಮಂ ಗಾಂಡೀವದೊಳ್ ಪೂಡುವನ್ನೆಗಂ ಭರದೊಳೊದಗಿ ॥
ತಡೆಗಾಲೊಳಾತನಂ ಕೆಡಹಿ ಭುಜಯುಗ್ಮದಿಂ ।
ತೊಡರಿಕೊಂಡುಪ್ಪರಿಸಿ ನರ ಕೃಷ್ಣರಿರ್ವರಂ ।
ಮಿಡುಕಲೀಯದೆ ಬಿಗಿದು ತಾಮ್ರಧ್ವಜಂ ಧರೆಗೆ ಬಿದ್ದನಗಧರನೊಡೆಯಲು ॥೫೪॥

ಉದ್ದಂಡ ಭುಜಬಲದೊಳೊರ್ವರೊರ್ವರ ನೊತ್ತಿ।
ಬಿದ್ದರಿಳೆಗಾ ಮೂವರುಂ ನೊಂದು ಮೂರ್ಛೆಗೊಂ।
ಡಿದ್ದರದರೊಳ್ ಪಾರ್ಥ ಶೌರಿಗಳ್ ಬಳಿಕ ತಾಮ್ರಧ್ವಜಂ ಸತ್ವದಿಂದೆ॥
ಎದ್ದು ನೋಡಿದನಲ್ಲಿ ತನ್ನೊಡನೆ ಕಾಳೆಗಕೆ।
ಹೊದ್ದುವಡಟರನಾರುಮಂ ಕಾಣದೆಲ್ಲರಂ।
ಗೆದ್ದೆರಡು ಕುದುರೆಯಂ ಕೊಂಡುಳಿದ ಪಡೆ ಸಹಿತ ನಿಜನಗರಿಗೈತಂದನು ॥೫೫॥

ಪಟ್ಟಣದ ಪೊರವಳಯದೊಳ್ ಚಿತ್ರಮಯವಾಗಿ।
ಕಟ್ಟಿದಧ್ವರ ಮಂಟಪದ ನಡುವೆ ದೀಕ್ಷೆಯಿಂ।
ನೆಟ್ಟನೆ ಪರಿಗ್ರಹಿಸಿ ಭೂಸುರರ್ ವೆರಸಿ ಕುಳ್ಳಿರ್ಪ ಪಿತನೆಡೆಗೆ ಬಂದು॥
ಮುಟ್ಟಿ ಚರಣಂಗಳಂ ಸಾಷ್ಟಾಂಗದಿಂದೆ ಪೊಡ।
ಮಟ್ಟು ತಾಮ್ರಧ್ವಜಂ ಕೈಮುಗಿದು ತರಿಸಿ ಮುಂ।
ದಿಟ್ಟನೆರಡಶ್ವಂಗಳಂ ಬಳಿಕ ಶಿಖಿಕೇತು ನಂದನಂಗಿಂತೆಂದನು ॥೫೬॥

ವತ್ಸರಂ ತುಂಬದೇತಕೆ ತಿರುಗಿತೀ ಹಯಂ।
ವತ್ಸ ಹೇಳದರೊಡನೆ ಮತ್ತೊಂದು ವಾಜಿ ಬಲ।
ವತ್ಸಮರ ಮುಖದಿಂದೆ ಜಯಿಸಿದಂತಿರ್ದಪುದಿದೆತ್ತಣದು ನಿನಗಿಳೆಯೊಳು॥
ಮತ್ಸರದ ಕದನದಿಂದಾವ ಭೂಪನೊಳಾಯ್ತು।
ವತ್ಸವಿಾಪಕೆ ಬಂದ ಹದನಾವುದೆಂದು ಶ್ರೀ।
ವತ್ಸಭಾಮಧ್ಯದೊಳ್ ನಸುನಗುತೆ ಶಿಖಿಕೇತು ತನಯನಂ ಬೆಸಗೊಂಡನು ॥೫೭॥

ಚಿತ್ತಯಿಸು ತಾತ ನೃಪವರ ಯುಧಿಷ್ಠಿರನ ಮಖ।
ದುತ್ತಮ ತುರಂಗಮಿದು ರಕ್ಷೆಗರ್ಜುನ ಕೃಷ್ಣ।
ರಿತ್ತಂಡಮುಂ ಪಡೆವೆರಸಿ ಬಂದೊಡಾನದಂ ಕಟ್ಟಿದೊಡೆ ತನಗವರೊಳು॥
ತತ್ತುದಾಹವಮೆಂದು ನಿಜಸುತಂ ಬಿನ್ನೈಸೆ।
ಮತ್ತೆ ಸಂಶಯದಿಂದೆ ಭೂಪಾಲಕಂ ತನ್ನ।
ಹತ್ತಿರಿಹ ನಿಜಮಂತ್ರಿ ನಕುಲಕೇತುವನೀಕ್ಷಿಸಲ್ಕಾತನಿಂತೆಂದನು ॥೫೮॥

ಜೀಯ ಪುಸಿಯಲ್ಲ ಪಾಂಡವರಾಯನಶ್ವಮುಂ।
ಕಾಯಬಂದಿಹ ಬಭ್ರುವಾಹನಾದಿಗಳ ನೊ।
ತ್ತಾಯದಿಂದೆಲ್ಲರಂ ಸದೆಬಡಿದುರುಳ್ಚಿ ಬಳಿಕೈದೆ ಕೃಷ್ಣಾರ್ಜುನರನು॥
ಸಾಯದಂತಡಗೆಡಹಿ ಪಿಡಿದು ಬಿಟ್ಟೊಡನೆ ಕಾಂ।
ತೇಯನ ತುರಂಗಮಂ ಕೊಂಡು ನಿನ್ನಾತ್ಮಜಂ।
ನೋಯದೈತಂದನೆನೆ ಮರುಗುತೆ ಮಯೂರಧ್ವಜಂ ಮಂತ್ರಿಗಿಂತೆಂದನು ॥೫೯॥

ಅಕಟ ಕೆಡಿಸಿದನಲಾ ಕಾರ್ಯಮಂ ನಮಗಿದೇ।
ತಕೆ ಯಜ್ಞಮಿನ್ನು ನೆಮಗೀ ಮಗಂ ಪಗೆಯಲ್ತೆ।
ಸ್ವಕರಸ್ಥನಾದ ಹರಿಯಂ ಬಿಟ್ಟು ಕಟ್ಟಿದಂ ಗರ್ದಭಾಕೃತಿ ಹರಿಯನು ॥
ವಿಕಳಮತಿಯಾಗಿರ್ದ ನೀತನೇವೇಳ್ವೆನು ।
ತ್ಸುಕದಿಂದಮೊಡಗೂಡಿ ಮಂಚದೊಳ್ ಪ್ರಾಣನಾ ।
ಯಕನಿರಲ್ ಮರೆದೊರಗಿದಧಮಾಂಗನೆಯವೊಲೆಂದವನಿಪಂ ಬಿಸುಸುಯ್ದನು ॥೬೦॥

ಮತ್ತೆ ಸುತನಂ ನೋಡಿ ಬೈದನೆಲವೊ ಪೋ ।
ಗತ್ತ ನಿನ್ನಂ ಪಾಳ್ಪುದೇನಮಲ ತುಲಸಿಯಂ ।
ದುತ್ತಿವಿಡಿದಬ್ಬಮಂ ಮಾಣುತುತ್ತರದ ಕುಸುಮದ ತೊಡವುಗಟ್ಟುವಂತೆ ॥
ಉತ್ತಮವಿದೆಂದು ಕೃಷ್ಣಾರ್ಜುನರ ಬಿಟ್ಟು ತಂ।
ದಿತ್ತೆ ತುರಂಗಂಗಳಂ ಸಾಕಿನ್ನು ಯಜ್ಞ ಮವ ।
ರೆತ್ತಲಿರ್ದಪರೆಂಬುದಂ ಪೇಳ್ದೊಡುಳುಹಿದನವನೆಂದು ಭೂಪತಿ ಸುಯ್ದನು ॥ ೬೧॥

ಕಡೆಯಾದುದಧ್ವರಕೆ ಸಾಕಿನ್ನು ತುರಗಮಂ ।
ಪೊಡೆಯೆತ್ತಲಾದೊಡಂ ಮುರಮಥನ ಪಾರ್ಥರಾ ।
ವೆಡೆ ತನಗದಂ ತೋರವೇಳ್ಪುದೆಂದಾ ಮಯೂರಧ್ವಜಂ ಮರುಗಿ ಮರುಗಿ ॥
ಬಿಡದೆ ನಿಜ ತನಯನಂ ಬೈದು ಗರ್ಜಿಸಿ ತನ್ನ ।
ಮಡದಿಸಹಿತಿರುತಿರ್ದನಾ ದಿನಂ ದೇವಪುರ।
ದೊಡೆಯ ಲಕ್ಷ್ಮೀಶನಂ ಕಣ್ಣಾರೆ ಕಾಣಬೇಕೆಂಬ ಕಡುತವಕದಿಂದೆ ॥ ೬೨ ॥

—

ಇಪ್ಪತ್ತಾರನೆಯ ಸಂಧಿ

ಸೂಚನೆ॥ ದ್ವಿಜನಾಗಿಬಂದು ಬೇಡಲ್ ಮಯೂರಧ್ವಜಂ।
ನಿಜ ಶರೀರದೊಳರ್ಧಮಂ ಕೊಯ್ದು ಕೊಟ್ಟು ಪಂ।
ಕಜ ಪತ್ರ ನೇತ್ರನಂ ಮೆಚ್ಚಿಸಿ ಹಯದ್ವಯ ಮನಿತ್ತು ಮಖಮಂ ಮಾಣ್ದನು॥

ಭೂರಮಣ ಕೇಳ್ ಕೃಷ್ಣ ಕಾಂಕ್ಷಿಯಾಗಿರ್ದಂ ಮ।
ಯೂರಧ್ವಜ ಕ್ಷಿತೀಶ್ವರನಿತ್ತ ಲತ್ತ ರಣ।
ಧಾರಿಣಿಯೊಳಸುರಾರಿಗೆ ತ್ಸರಿಕೆ ತಲೆದೋರಿ ಶರ್ಜುನಂಗರಿವಾದುದು॥
ವೀರಭಟರೆಲ್ಲರ್ಗೆ ಮೂರ್ಛೆ ತಿಳಿದುದು ಬಳಿಕ।
ವಾರಿಜಾಕ್ಷಂ ಸಕಲ ಸೇನೆಯಂ ಸಂತೈಸಿ।
ಚೋರಬುದ್ಧಿಯೊಳೊಂದುಪಾಯಮಂ ಕಂಡಾ ಧನಂಜಯಂಗಿಂತೆಂದನು ॥ ೧॥

ನೋಡಿದೈ ಕುಂತೀಕುಮಾರ ತಾಮ್ರಧ್ವಜಂ।
ಮಾಡಿದ ವಿಘಾತಿಯಂ ನಮ್ಮೆಲ್ಲರಂ ಧುರದೊ।
ಳೀಡಿರಿದುರುಳ್ಚಿ ಹಯಮಂ ಕೊಂಡು ರತ್ನಪುರಿಗೈದಿದಂ ಪಿತನ ಬಳಿಗೆ॥
ಆಡಲೇನಖಿದಿನ್ನು ಸೇನೆ ಮೆಲ್ಲನೆ ಪಿಂತೆ।
ಬೀಡಾಗಿ ನಡೆತರಲಿ ಮುಂದೆ ಪೋದಪೆನೆನ್ನ।
ಕೂಡೆ ಬಾ ನಿನಗೊಂದುಪಾಯಮಂ ತೋರಿಸುವೆನೆಂದನಸುರಾರಿ ನಗುತೆ ॥ ೨

ಆ ಹರಿಯ ನುಡಿಗೇಳ್ದು ಫಲುಗುಣಂ ಸೇನಾಸ।
ಮೂಹಮಂ ಪಿಂದುಳಿಪಿ ರತ್ನನಗರಿಗೆ ಪಕ್ಷಿ।
ವಾಹನನಕೂಡೆ ನಡೆತಂದನವರಿರ್ವರುಂ ಮಾತಾಡಿಕೊಂಡು ಬಳಿಕ॥
ರೂಹುಗಾಣಿಸದಂತೆ ವಿಪ್ರವೇಷನಾಂತು।
ದೇಹಿಕರ ತೆರದಿಂದೆ ವೃದ್ಧನಾದಂ ಶೌರಿ।
ಮೋಹದಿಂ ತನಗೆ ಕೈಗುಡುವ ಬಾಲಕ ಶಿಷ್ಯನಾದನಮರೇಂದ್ರಸೂನು ॥ ೩॥

ಬಟ್ಟೆ ವಿಡಿದವರಿರ್ವರುಂ ಮಯೂರಧ್ವಜನ।
ಪಟ್ಟಣಕೆ ನಡೆತಂದರನ್ನೆಗಂ ದೆಸೆದೆಸೆಯೊ।
ಳಿಟ್ಟಣಿಸಿ ಲೋಕಮಂ ಕಂಗೆಡಿಸುವಂಧಕಾರಂಗಳಂ ನಿಲಲೀಯದೆ॥
ಅಟ್ಟಿ ಹರಿಹರಿದುರೆ ಬಳಲ್ದು ಕಾಹುರದೆ ಕಂ।
ಗೆಟ್ಟು ಕಳೆಗುಂದಿ ಮೆಲ್ಲನೆ ನಭೋಮಾರ್ಗಮಂ।
ಬಿಟ್ಟು ಪಶ್ಚಿಮಗಿರಿಯ ತಪ್ಪಲಂ ಸಾರ್ದನೆನೆ ರವಿ ಪಡುಗಡೆಯೊಳೆಸೆದನು ॥ ೪॥

ಮೆಲ್ಲಮೆಲ್ಲನೆ ತರಣಿ ಮುಳುಗಿದಂ ಪಡುಗಡಲೊ।
ಳೆಲ್ಲಗಲ್ಲಗೆ ಮೂಡಿದುವು ಸಂಜೆದಾರಗೆಗ।
ಳೆಲ್ಲೆಲ್ಲಿಯುಂ ತಮಂ ತುಂಬಿದುದು ತುಂಬಿಗಳೊಡನೆ ಮುಗಿದುವಂಬುಜಾಳಿ॥
ನಲ್ಲನಲ್ಲರ ನೇಹ ಗಲಹದೊಳ್ ಪನಿದು ರತಿ।
ಗೊಲ್ಲದೊಲ್ಲದ ಕಾಂತೆಯರ ಮನಂ ತರಹರಿಸಿ।
ನಿಲ್ಲನಿಲ್ಲದವೊಲಂಗಜ ನುರುಬತೊಡಗಿದಂ ಮರುಗಿದುವು ಕೋಕಂಗಳು ॥ ೫ ॥

ಹೊತ್ತುಹೊತ್ತಿಗೆ ಮತ್ತೆ ಮತ್ತೆ ಬಲವತ್ತರವೊ।
ಳೊತ್ತಿಡಿದು ಸುತ್ತಲೆತ್ತೆತ್ತಲುಂ ಕೆತ್ತವೋಲ್।
ಮುತ್ತಿ ಮುಸುಕಿತ್ತು ಕಗ್ಗತ್ತಲೆ ಧಾತ್ರಿಯಂ ಮುಳ್ಳವೊನೆ ಕೊಳ್ಳದಂತೆ॥
ಚಿತ್ತಜಾಂ ಕತ್ತಿಯಂ ಕಿತ್ತುಕೊಂಡೆತ್ತಿ ಹೊ।
ಯ್ಯುತ್ತೆ ಬರಲುತ್ತುಂಗ ವೃತ್ತಕುಚೆಯರ್ ತಮಗೆ।
ತೆತ್ತಿದರ್ ತೆತ್ತಿಗರನೊತ್ತಿಗಂ ಸುತ್ತಿರ್ದರಾಗಳನುರಾಗದಿಂದೆ ॥ ೬ ॥

ಆ ರಜನಿಯೊಳ್ ಬಳಿಕ ರತ್ನಪುರಮಂ ಪೊಕ್ಕು।
ನೀರಜದಳೇಕ್ಷಣಾ ಕೇಳಿಕೇಳಿಗಳೊಳ್ ಸ।
ಮೀರಜನ ತಮ್ಮನಂ ಕೂಡಿಕೊಂಡೈತರುತೆ ಕಾಡನತಿ ನಿದ್ರೆಯಿಂದೆ॥
ಊರ ಜನವೆಲ್ಲಮುಂ ಮರೆದೊರಗಲಲ್ಲಲ್ಲಿ।
ಮಾರಜ ಕೃಪೆಯಿಂದೆ ಪೊರಮಟ್ಟು ಸಂಚರಿಪ।
ಚಾರು ಜಲರುಹ ವದನೆಯರ ಬೇಟವಾಟದ ಪಲವು ಬಗೆಯ ಚೇಷ್ಟೆಗಳನು ॥ ೭ ॥

ಆಭರಣಮುಲುಗಿದೊಡೆ ಕಣ್ದಿರ್ ಸೂಸಿದೊಡೆ।
ಶೋಭಿಸುವ ತನುಗಂಧ ಮುಣ್ಮಿದೊಡೆ ಜನರ ನಿ।
ದ್ರಾಭಂಗವಾಗಿ ಕಾಡಪರೆಂಬ ಭೀತಿಯಿಂದೈತರ್ಪ ಕಾಮಿನಿಯನು॥
ಸಾಭಿಲಾಷೆಯೊಳೋರ್ವ ವಿಟನಿದಿರ್ವಂದು ಮು।
ಕ್ತೇಭ ಗಾಮಿನಿ ಭೃಂಗ ನೀಲ ಕುಂತಳೆ ಪನ್ನ।
ಗಾಭ ಸುಂದರ ವೇಣಿ ಬೆದರಬೇಡೆನುತ ತಕ್ಕೈಸಿದನದೇಂ ಪ್ರೌಢನೋ ॥ ೮ ॥

ತೋರ ಮುತ್ತಿನ ಹಾರಮಂ ತೊಟ್ಟು ಚಂದ್ರಮುಖಿ।
ಕಾರ ಕತ್ತಲೆಯೊಳಡಿಯಿಡಲಂಜಿ ಪಣೆಗೆ ಕ।
ಸ್ತೂರಿಯಂ ಕಣ್ಗೆ ಕಾಡಿಗೆಯಂ ಕೊರಲ್ಗೆ ಹರಿ ನೀಲಮಣಿ ಭೂಷಣವನು॥
ಸೇರಿಸಲ್ಕದು ನೈಜಮಾಗೆ ಬೆರಗಾಗಿ ಬಳಿ।
ಕೋರೆದುರುಬಂ ತೆಗೆದು ಜಡೆಕಟ್ಟಿ ಪೊರಮಟ್ಟು।
ಕೇರಿಗೊಂಡೈದಿದಳ್ ಸಂಕೇತ ಭವನದೊಳಾ ಕಾದಿರ್ದ ಕಾಂತನೆಡೆಗೆ ॥ ೯ ॥

ಸಂಚುವ ಸತೀಜನದೊಳಂಗಭವ ಕೇಳೀ ಪ್ರ ।
ಪಂಚ ವರನೊಳ್ ಸಮನಿಸಿದ ಬಳಿಕ ಮನದೊ ।
ಳಂಚುವ ಬೆದರ್ಕೆಯಂ ಬಿಟ್ಟು ನಿಜ ಭವನಮಂ ಪೊರಮಟ್ಟು ಕತ್ತಲೆಯೊಳು ॥
ಮಿಂಚುವ ವಿಭೂಷಣಕೆ ಮುಸುಕಿಟ್ಟು ಸುಳಿವರ್ಗೆ ।
ಹೊಂಚುವ ಚಮತ್ಕೃತಿಯ ನಳವಡಿಸಿ ನೆನಹಿಂಗೆ ।
ಮುಂಚುವ ಪದನ್ಯಾಸಮಂ ಕಲಿತು ನಡೆವ ಜಾರೆಯರ ಚದುರೆಸೆದಿರ್ದುದು॥೧೦॥

ಕಿಕ್ಕಿರಿದಡರ್ದುರವ ನಿಂಬುಗೊಂಡುರೆ ಬಳೆದ ।
ಕಕ್ಕಸದ ಬಟ್ಟಬಲ್ಮೊಲೆಗಳೋಪನ ಕೈಗೆ ।
ವೆಕ್ಕಸಂ ನೋಳ್ಪರ್ಗೆ ಕಣ್ಗಿಸುರ್ ಮುದುಗಿದೊಡೆ ಮದನಂಗೆ ಮಾನಹಾನಿ ॥
ಸೊಕ್ಕು ಲೇಸಾಗದೆಂದೊಪ್ಪಿಡಿಯೊಳೊದಗಿ ನೋ ।
ಟಕ್ಕೆ ಕಾಣಿಸದೆ ಕಾಮನ ರೂಪನಳವಡಿಸಿ ।
ತಕ್ಕ ಬಡತನದೊಳಿರ್ದುದು ಸಣ್ಣ ಸೆಳೆನಡು ನಿಶೆಯೊಳೈದಿ ಬಹ ಜಾರೆಯ ॥೧೧॥

ನಿಟಿಲಮಂ ನೇವರಿಸುತಂಗುಲಿಯ ತುದಿಯಿಂದೆ ।
ತುಟಿವಿಡಿದು ನೋಡುತ್ತೆ ಮಣಿಮಣಿದು ವೃತ್ತ ಕುಚ ।
ತಟಮಂ ನಿರೀಕ್ಷಿಸುತೆ ಕರ್ಣಪತ್ರವ ನಮರ್ಚುತ ಹಾರಮಂ ಸರಿಯುತೆ ॥
ಕಟಿಗೆ ನಿರಿಯಂ ಸೇರಿಸುತೆ ನಿಮಿರ್ದ ಕ್ಷತಕೆ ।
ವಿಟನನುರೆ ಬೈಯುತ್ತ ತಿರುಗಿ ನಿಜಮಂದಿರಕೆ ।
ಕುಟಿಲ ಕುಂತಳದ ಜಾರೆಯರೈದಿ ಬರುತಿರ್ದರಲ್ಲಲ್ಲಿ ಕತ್ತಲೆಯೊಳು ॥ ೧೨ ॥

ಕತ್ತಲೆಯೊಳಸುರಾರಿ ಫಲ್ಗುಣರ್ ಜಾರೆಯರ ।
ವೃತ್ತಾಂತಮಂ ನೋಡುತ್ತೈತರಲ್ಕನಿತರೊಳ್ ॥
ಪೊತ್ತಿದಿಹ ಜಕ್ಕವಕ್ಕಿಗಳ ವಿರಹದ ಬೆಂಕಿವೊಗೆ ಪೊಗೆದು ಮೇದಿನಿಯೊಳು ॥
ಸುತ್ತಿ ಸುತ್ತಲುಮಂಧಕಾರವಾಗಿರುತಿರಲ್ ।
ಚಿತ್ತಜಂ ತಂಬೆಲರೊಳೂದಿದೊಡೆ ಪಜ್ಜಳಿಸಿ ।
ಮತ್ತುರಿವ ಕಿಚ್ಚಿನೇಳಿಗೆಯಂತೆ ಮೂಡಿದಂ ಚಂದ್ರನಿಂದ್ರನ ದೆಸೆಯೊಳು ॥ ೧೩ ॥

ಮುರುಗಿದುವು ಕೋಕ ಕೋಕನದಂಗಳಾಗ ಬಾ ।
ಯ್ದೆರೆದುವು ಚಕೋರ ಕೋರಕ ಕುಮುದ ರಾಜಿಗಳ್ ।
ತುರುಗಿದ ತಮಿಸ್ರಮಾಲೋಕಸ್ಥಿತಿಗೆ ತೊಲಗಿದುದು ದೆಸೆದೆಸೆಯೊಳು ॥
ಮೊರೆದುದು ಸಮುದ್ರಮುದ್ರವದ ಪೆರ್ಚುಗೆಯಿಂದ ।
ಮೊರೆತುದುಡುಕಾಂತ ಕಾಂತ ಪ್ರತತಿ ಕುಸುಮ ಶರ ।
ನುರುಬಿದನಗಲ್ದರಂ ಚಾಪ ಚಾಪಲಹಸ್ತನಾಗಿ ಚಂದ್ರೋದಯದೊಳು ॥ ೧೪ ॥

ಪ್ರಾಚೀನಿತಂಬಿನಿಯ ಮುಖ ಬಿಂಬದೆಳನಗೆಯ ।
ರೋಚಿಗಳೊ ಪೆರ್ಚುಗೆಯೊಳುಬ್ಬಿದ್ದ ಪಾಲ್ಗಡಲ ।
ವೀಚಿಗಳೊ ಮನ್ಮಥನ ಕೀರ್ತಿಯ ಮರೀಚಿಗಳೊ ನಿಜಕಾಂತನಂ ಕಾಣುತೆ ॥
ನಾಚಿ ಬೆಳ್ಪೇರಿದಳೊ ರಾತ್ರಿವಧು ಚೆಲ್ಲದನೊ ।
ಭೂಚಕ್ರಕಂಗಜಂ ಬೇಳುವೆಯ ಬೂದಿಯ್ನಂ ।
ವಾಚಿಸುವೊಡರಿದೆನಲ್ಪಸರಿಸಿತು ಚಂದ್ರಕಿರಣಂಗಳೆಲ್ಲಾ ದೆಸೆಯೊಳು ॥ ೧೫ ॥

ತವೆ ಶಾಂತನಮೃತ ರೂಪಂ ಶೈತ್ಯ ವರ್ಧನಂ ।
ಭುವನ ಪ್ರಕಾಶಂ ಜನಾವಲೋಕ ಪ್ರಿಯಂ ।
ಧವಳ ತನು ವೃತ್ತಂ ನಿರಂತರಂ ವಿಷ್ಣುಪದ ಸೇವಕಂ ಕೃಷ್ಣಾಂಕನು ॥
ದಿವಿಜ ತೋಷಕನಾದ ರಾಜನಭ್ಯುದಯದೊಳ್ ।
ಕುವಲಯ ಶ್ರೀ ವಿರಾಜಿತಮಪ್ಪುದೇಂ ಕೌತು ।
ಕವೆ ಜಾರಚೋರರ್ಕಳಡಗದಿರ್ದಪರೆ ಪೇಳೆನಲಿಂದು ಮೆರೆದನಂದು ॥ ೧೬ ॥

ಚಂದ್ರನುದಯಂಗೆಯ್ಯೆ ದೆಸೆದೆಸೆಗಳೆಲ್ಲಮುಂ ।
ಚಂದ್ರಿಕೆಗಳಿಂದೆ ಬೆಳದೆಳಗಿ ಬೆಳ್ಳಿವೊಲಾಗೆ ।
ಚಂದ್ರಕಾಂತಂಗಳಿಂದೊಲ್ದು ನಿರ್ಮಿಸಿದ ನವ ಸೌಧಸೌಧಾಗ್ರಂಗಳು
ಚಂದ್ರಶಾಲೆಗಳೊಳಗೆ ರತಿ ಕಲಾ ಪ್ರೌಢಿಯಿಂ ।
ಚಂದ್ರವದನೆಯರಂತರಂಗದೊಳ್ ಪುಡಿದ ಕೆ ।
ಚ್ಚಂ ದ್ರವಿಸುವಂತೆ ರಂಜಿಸಿ ರಮಿಸುತಿಹ ಪುರುಷರಾಪುರದೊಳೆಸೆದಿರ್ದರು॥೧೭॥

ಕುಚಮಂಡಲದ ಮೇಲೆ ಚಾರು ನಯನದ ನಡುವೆ ।
ಕಚದೆಡೆಯೊಳಿಹ ಕೃಷ್ಣ ವೈಭವಂ ತನ್ನ ಬಗೆ ।
ಗುಚಿತಮಪ್ಪುದು ನಿನ್ನೆದೆಯೊಳಿರ್ಪ ಕೃಷ್ಣಭಾವಂ ತನಗೆ ವಿರಹಿತವನು ॥
ರಚಿಸದಿರದೆಂದೊರ್ವನಿನಿಯಳಂ ತಿಳಿಸಲ್ಕೆ ।
ವಿಚಲಮಪ್ಪುದೆ ಕೃಷ್ಣಹೃದಯಮೆಂದವಳೊದರೆ ।
ವಚನದೋಷಕೆ ಬೇಡಿಕೊಂಬವೊಲ್ ಕಾಲ್ಗೆರಗಿ ಸಂತೈಸಿದಂ ಪ್ರಿಯೆಯನು॥೧೮॥

ಅಚ್ಚಬೆಳ್ದಿಂಗಳೊಳ್ ಮತ್ತೋರ್ವನಿನಿಯಳಂ ।
ನಿಚ್ಚಟದೊಳುಳಿವಂತೆ ನೀವಿಯಂ ಬರೆ ಸೆಳೆದು ।
ಹೆಚ್ಚಳಿಸಿ ಪ್ರಿಯೆ ನಿನ್ನ ಸರ್ವಾಂಗಮಂ ನೋಡಿ ಕೃಷ್ಣಾವಲೋಕನವನು ॥
ಮೆಚ್ಚಿ ತಣಿಯದವೊಲಿರ್ದಪುವೆನ್ನ ಕಂಗಳೆಂ ।
ದುಚ್ಚರಿಸಲೆಲೆ ಮರುಳೆ ತಪ್ಪನಾಡಿದೆ ದೃಷ್ಟಿ ।
ಗೊಚ್ಚತಂಗೊಂಡು ರಂಜಿಪ ಕೃಷ್ಣರೂಪಮಿರಲನ್ಯಮಿನ್ನೇಕೆಂದಳು ॥ ೧೯ ॥

ಅಂಗಜ ಶ್ರಮದಿಂದೆ ಬೆಮರ್ದ ಕಾಮಿನಿ ತನ್ನ ।
ತುಂಗಕುಚ ತಟದ ಕಸ್ತೂರಿಯೊಳ್ ಪುದಿದಿನಿಯ ।
ನಂಗಮಂ ಕಂಡಿದೇತಕೆ ಕೃಷ್ಣರೂಪಾದೆ ನೀನೆಂದು ಬೆಸಗೊಳಲ್ಕೆ ॥
ಅಂಗನೆ ತಿಳಿಯದಾಪೆ ಪೊತ್ತಿರ್ದನಂದು ಕೃ ।
ಷ್ಣಂ ಗಿರಿಯನೊಂದ ನೆರಡದ್ರಿಗಳ ನೀಗಳಾಂ ।
ಹಿಂಗದಾಂತಿಹೆ ನೆನಗೆ ಕೃಷ್ಣಭಾವಂ ಬರ್ಪುದಚ್ಚರಿಯೆ ಪೇಳೆಂದನು ॥ ೨೦ ॥

ಕತ್ತಲೆಯನಡಸಿ ಪಿಡಿವವರುಂಟೆ ತಾರೆಗಳ ।
ಮೊತ್ತಮಂ ಪೊಯ್ದು ಕೆಡಪಿದರುಂಟೆ ಬಟ್ಟೆಗಳ!
ನೊತ್ತಿ ಕರದಿಂದೆ ಕದುಬಿದರುಂಟೆ ಗಗನಮಂ ತಕ್ಕೆಗೊಂದಿಸಿದರುಂಟೆ ॥
ವೃತ್ತದಿಂಡಸೆವ ಶಶಿಯಂ ಚುಂಬಿಸಿದರುಂಟೆ ।
ಚಿತ್ತಜಾಹವದ ಭಟರಂಗವಣ್ ಪೊಸತೆಂದು ।
ಹತ್ತಿರಿಹ ಪಂಜರದ ರಾಜಕೀರಂ ಪೇಳ್ದುದೊರ್ವ ನಾಯಕಿಯ ಕೂಡೆ ॥ ೨೧ ॥

ಹರಶರ ಪ್ರಥಮಾವತಾರಲೋಚನೆ ಮಹೇ ।
ಶ್ವರ ಚಾಪ ತುಂಗ ವಕ್ಷೋಜಾತೆ ಹಿಮಕರಾ ।
ಭರಣ ಮಾರ್ಗಿವೇಣಿ ಶಾನಿರ್ಮುಮನ್ಯಳಂ ಮದನ ಬಾಣಾಕ್ಷಿಯೆಂದು ॥
ಸ್ಮರಕಾರ್ಮುಕ ಭ್ರೂಲತಾಶೋಭೆಯೆಂದು ಶಂ ।
ಬರಮಥನ ಶಿಂಜಿನೀ ಲೋಲಕುಂತಳೆಯೆಂದು ।
ಕರೆದೆ ಗಡ ನೀನೆಂದು ಸವತಿಮತ್ಸರಕೊರ್ವಳೋಪನಂ ಕೋಪಿಸಿದಳು ॥ ೨೨ ॥

ಆವಮಂ ಕೆಳೆಯೆಂದುರಿಯನಪ್ಪಿ ಬಾಳ್ದವಂ ।
ಪಾವಗಿಮ ಬದುಕಿದವ ನಾವವಂ ಮೃಡ ನಯನ !
ಪಾವಕಜ್ವಾಲೆಯಿಂದುರೆ ಬೆಂದು ಜೀವಿಸುವನಾವವಂ ತ್ರಿಭುವನದೊಳು ।
ಈ ವಾಯುವೀಚಂದ್ರ ನೀಪುಷ್ಪಬಾಣನೀ ।
ಮೂವರುಂ ವಿರಹಿಗಳ ಕೊಲೆಗುಳಿದರಕಟ ತಾ ।
ನೇಗೈವನೆಂದೋಪನಗಲ್ದ ಕಾಮಿನಿಯೊರ್ವಳಾಗ ಚಿಂತಿಸುತಿರ್ದಳು ॥ ೨೩ ॥

ವಂಚನೆಯೊಳಿಂತಿರುಳ್ ಪುರಜನದ ನಾನಾ ಪ್ರ ।
ಪಂಚೆಲ್ಲಮಂ ನೋಡುತಸುರಾರಿ ಫಲ್ಗುಣರ್ ।
ಸಂಚರಿಸುತಿರ್ದರಾ ಪಟ್ಟಣದೊಳನ್ನೆಗಂ ಕಾಂತರಾಲಿಂಗನದೊಳು ॥
ಹೊಂಚಿರ್ದ ಕಾಮಿನಿಯರೆದೆಗೆ ಧಿಗಿಲೆನಲ್ ಕೂಗ ।
ಲಿಂಚದೊಳ್ ಕೋಳಿಗಳ್ ಕೂಟ ವೆಣೆವಕ್ಕಿಗಳ್ ।
ಮುಂಚಿದುವು ತಾವರೆಗೆ ತುಂಬಿವಿಂಡೆರಗಿದುದು ಕೊರಗಿದುವು ನೈದಿಲೆಗಳು ॥ ೨೪ ॥

ಬಳಿಕ ದಿನದಿನಕೊಂದು ಪರಿಯಾಗಿ ದೋಷಮಂ।
ತಳೆದು ಸಲೆ ಪೆಚ್ಚಿದ ಕರಂಗಳಿಂ ಸಿರಿಯಿರ್ದ।
ನಿಳೆಯಂಗಳಂ ಬಾಧಿಸುವ ರಾಜನೈಶ್ವರ್ಯಮಿರ್ದಪುದೆ ಪೇಳೆನಲ್ಕೆ ॥
ತೊಲಗಿದುವು ಬೆಳುದಿಂಗಳಾದಿತ್ಯನೊಳ್ ನೆರೆಯು।
ಲೆಳಸಿ ಕುಂಕುಮದಿಂದೆ ಪೂರ್ವದಿಗ್ವನಿತೆ ಮಂ।
ಗಳ ಮಜ್ಜನಂಗೈದಳೆಂಬಂತೆ ರಂಜಿಸಿತು ಮೂಡದೆಸೆ ಕೆಂಪಡರ್ದು ॥ ೨೫ ॥

ಗಾಲಿಯೊಂದೇ ರಥಕೆ ಜೋಡಾಗಿ ಪೂಡುವೊಡೆ ।
ಸಾಲದೇಳೇಹಯಂ ನಡೆಸುವೊಡೆ ಸಾರಥಿಗೆ ।
ಕಾಲಿಲ್ಲ ಲೋಕ ಯಾತ್ರೆಯನೊಲ್ಲೆನೆಂದೊಡಾಗದೆ ತನಗೆ ತಿರುಗಲೇಕೆ ॥
ಕಾಲಗತಿಯಂ ಮೀರದಾರದಿಂತೆಂಬುದಂ।
ಮೂಲೋಕಕೆಚ್ಚರಿಸುವಂತೆ ಪೂರ್ವಾಚಲದ ।
ಮೇಲೆ ಮೂಡಿದನೆಂದಿನವೊಲಬ್ಜಬಾಂಧವಂ ನಯನಾಂಧಮಂದಡಗಲು ॥೨೬॥

ಜನನಾಥ ಕೇಳ್ ಮಯೂರಧ್ವಜ ಮಹೀಶ್ವರಂ ।
ದಿನನಾಥನುದಯದೊಳ್ ವಿಮಲ ಸಂಧ್ಯಾವಿಧಿಯ।
ನನುಕರಿಸಿ ಕೃಷ್ಣನಿದ್ದೆಡೆಗೆ ತಾಂ ಪೋಗಿ ಕಂಡಪೆನೆಂಬ ಕಾರಿಯವನು॥
ಮನದೊಳಗೆ ನಿಶ್ಚಯಿಸಿ ಪೊರಮಡುವನಾಗಿ ನಿಜ ।
ತನುಜನಂ ಕರೆಸಿ ಮಂತ್ರಿಗಳೆಲ್ಲರುಂ ಒರಿಸಿ।
ವಿನುತ ಭೂಸುರ ನೃಪಾಲಸ್ತೋಮದೊಡಗೂಡಿ ಕುಳ್ಳಿರ್ದನೋಲಗದೊಳು
॥ ೨೭ ॥

ಅನ್ನೆಗಂ ವೃದ್ಧ ವಿಪ್ರಾಕಾರಮಂ ತಳೆದ ।
ಪನ್ನಗಾರಿಧ್ವಜಂ ನಿಜ ಶಿಷ್ಯ ಪಾರ್ಥನಂ ।
ತನ್ನೊಡನೆ ಕೂಡಿಕೊಂಡೊಯ್ಯನೊಯ್ಯನೆ ಹಯದ್ವಯದಿಂದೆ ಪತ್ನಿಸಹಿತ ॥
ರನ್ನದೊಡವುಗಳ ಕಸ್ತೂರಿಯ ತಿಲಕದ ನೊಸಲ।
ಮನ್ನೆಯರ ಗಡಣದಿಂ ದ್ವಿಜನಿಕರದಿಂದೆ ಸಂ।
ಪನ್ನ ದೀಕ್ಷೆಯೊಳೆಸೆವ ಭೂಪನೆಡೆಗೆಯ್ದಿ ಕೇಳ್ ಸ್ವಸ್ತ್ಯಸ್ತು ನಿನಗೆಂದು ॥ ೨೮ ॥

ಮತ್ತಲೆ ಮಹೀಪಾಲ ಶಾರ್ದೂಲ ನಿನಗಾಗ।
ಲುತ್ತರೋತ್ತರಮೆಂದು ತನಗೆ ನೀಂ ಬೇಡಿದುದ।
ನಿತ್ತಪೆ ಮಹಾದಾನಿಯೆಂದು ಶಿಷ್ಯಂವೆರಸಿ ಬಂದೆ ನಾನೀಗ ನಿನ್ನ ॥
ಉತ್ತಮಾಧ್ವರಶಾಲೆಗೆಂಬ ದ್ವಿಜನಂ ಕಂಡು।
ಚಿತ್ತದೊಳ್ ಬೆದರಿ ನೃಪನಿರದೆದ್ದು ಪದಕೆರಗಿ ।
ದತ್ತಾರ್ಘ್ಯ ಪಾದ್ಯಾಸನಂಗಳಿಂದುಪಚರಿಸಿ ಕುಳ್ಳಿರಿಸುತಿಂತೆಂದನು ॥ ೨೯ ॥

ಎಂದು ಪರಿಯಂತಂ ದ್ವಿಜರ್ಗವಜ್ಞೆಯಾನೆಸಗ ।
ರಂದು ಪರಿಯಂತ ಮೈಸಲೆ ನರರ ಬಾಳ್ಕೆ ನೀಂ ।
ಬಂದು ಪರಸಿದೊಡಾದುದಿಂದುತ್ತರೋತ್ತರಂ ತನಗೆ ನಿಶ್ಚಯಮಿಳೆಯೊಳು ॥
ಸಂಧಿಸಿದ ಜನದ ವಂದನೆಗೆ ಮೊದಲೇ ಸ್ವಸ್ತಿ ।
ಯೆಂದೊಡಾ ಭೂಸುರಂ ಪ್ರಿಯದೊಳಾ ಪ್ರಾಣಿಯಂ ।
ಕೊಂದನಲ್ಲದೆ ಬೇರೆ ಶಾಪಮೇತಕೆ ವಿಪ್ರ ಪೇಳೆಂದೊಡಿಂತೆಂದನು ॥೩೦॥

ಪರಸಲಾಗದು ನಮಸ್ಕಾರಕ್ಕೆ ಮುನ್ನ ಭೂ ।
ಸುರರನ್ಯರಂ ತನ್ನ ಸಂಕಟ ನಿಮಿತ್ತದಿಂ ।
ದರಸಂಗೆ ಬಿನ್ನಪಂಗೈವನಾಶೀರ್ವಾದಮಂ ಮೊದಲೆ ಮಾಡದಿಹನೆ ॥
ಧರಣಿಪತಿ ವಂದ್ಯನಲ್ಲವೆ ದೋಷಮೇನಿದಕೆ ।
ಪಿರಿದಾರ್ತನಾಗಿ ನಿನ್ನೆಡೆಗೆ ನಾಂ ಬಂದೆನ ।
ಧ್ವರಶಾಲೆಗೆಂದು ಕಪಟದ್ವಿಜಂ ನುಡಿಯಲ್ಕೆ ನರನಾಥನಿಂತೆಂದನು ॥ ೩೧ ॥

ದ್ವಿಜತಿಲಕ ನೀನನುಗ್ರಹಿಸೆನಗೆ ಧನ್ಯ ನಾಂ ।
ನಿಜ ಶಿಷ್ಯನಂ ಕೂಡಿಕೊಂಡು ಮುಖ ಮಂಟಪಕೆ ।
ಬಿಜಯಮಾಡಿದ ಕಜ್ಜಮಾವುದೇತರೊಳಾಸೆ ನಿನಗಾರ್ತಮೇನಿದರೊಳು ॥
ತ್ಯಜಿಸಬೇಡೊಂದುಮಂ ಪೇಳ್ದೊಡಾನೀವೆ ನಾ ।
ರಜಮಿಲ್ಲದೆಲ್ಲಮಂ ವಾಚಿಸೆಂದಾಶಿಖಿ ।
ಧ್ವಜನಾಡಲಾ ವಿಪ್ರನಿಂತೆಂದು ತನ್ನ ವೃತ್ತಾಂತಮಂ ವಿವರಿಸಿದನು ॥ ೩೨ ॥

ಉರ್ವೀಂದ್ರ ಕೇಳಾದೊಡಾಂ ಧರ್ಮಪುರದೊಳ್ ಪೆ ।
ಸರ್ವಡೆದಿಹೆಂ ಕೃಷ್ಣ ಶರ್ಮನೆಂದೆನಗೆ ಸುತ ॥
ನೊರ್ವನುಂಟಾತನ ವಿವಾಹಕ್ಕೆ ತವ ಪುರೋಹಿತ ಸತ್ಯಶೀಲನಲ್ಲ ॥
ಒರ್ವಕನ್ನಿಕೆ ಮದುವೆಗಿಹಳೆಂದೊಡಲ್ಲಿಗ ।
ಕ್ಕರ್ವೆರಸಿ ಮಗನನೊಡಗೊಂಡು ಬರುತಿರ್ದೆಂ ಪೊ ।
ದರ್ವಡೆದಡವಿಯ ಪಥದೊಳ್ ಪಿಡಿದುದೊಂದು ಕೇಸರಿ ತನ್ನ ನಂದನನನು ॥೩೩॥

ಆ ಸಿಂಗಮತಿ ಭರದೊಳೆರಗಲಾ ಭೀತಿಗೆ ನ್ಯ ।
ಕೇಸರಿ ಸ್ಮರಣೆಯಂ ಬಿಡದೆ ನಾನಕಟ ಹಾ ।
ಹಾಸೂನು ಹಾಯೆಂದು ಹಂಬಲಿಸಲದು ತನ್ನ ಘೋರ ನಖ ದಂಷ್ಟ್ರದಿಂದೆ ॥
ಗಾಸಿಮಾಡದೆ ಪುತ್ರನಂ ಪಿಡಿದುಕೊಂಡಟ್ಟಿ ।
ಹಾಸದಿಂ ಮಾನವರ ತೆರದಿಂದೆ ನುಡಿದುದೆಲೆ ।
ಭೂಸುರೋತ್ತಮ ತನ್ನ ಮಾತನಾಲಿಸು ಬರಿದೆ ಹಲುಬಲೇನಪ್ಪುದೆಂದು ॥೩೪॥

ಮಕ್ಕಳಿಲ್ಲದವರ್ಗೆ ಲೋಕವಿಲ್ಲೆಂಬುದೇ ।
ನಕ್ಕಜವೆ ನಿಖಿಳ ನಿಗಮಾರ್ಥಮಿದು ತನಗೀಗ ।
ಸಿಕ್ಕಿದನಲಾ ನಿನ್ನ ತನುಸಂಭವಂ ಬಿಡಿಸಿಕೊಳಲಾರ್ಪರಾರು ಬರಿದೆ ॥
ಕಕ್ಕುಲತೆ ಬೇಡ ನಡೆ ಶಿಷ್ಯನಂ ಕರೆದುಕೊಂಡು ।
ಮಿಕ್ಕಸುತರುಳ್ಳೊಡಾರೈವುದೆನೆ ಮಗನ ಮೇ।
ಲಕ್ಕರಾವರಿಸಿ ಕಡುಶೋಕದಿಂದುಗ್ರಕೇಸರಿಗೆ ತಾನಿಂತೆಂದೆನು ॥ ೩೫ ॥

ಅತಿ ವೃದ್ಧನಲ್ಪದಿನವಿರ್ಪವಂ ಪುತ್ರವ ।
ರ್ಜಿತನಿನ್ನು ತಾನಿರ್ದು ಮಾಳ್ಪುದೇನೆನ್ನನಾ।
ಹುತಿಗೊಂಡು ತನಗೆ ಗತಿಗುಡುವ ಸುತನಂ ಬಿಡುವುದೆಂದು ನಾಂಬೇಡಿಕೊಳಲು॥
ಮೃತಿಯು ಬಯಸುವ ದುಃಖಿಗಾವ ಕಂಟಕಮಿಲ್ಲ।
ಹತವಹುದು ಸುಖದಿಂದೆ ಬಾಳ್ವಂಗೆ ಕಾಲಕ।
ಲ್ಪಿತದಿಂದೆ ದೊರಕಿದನಿವಂ ನಿನ್ನನೊಲ್ಲೆನಾಂ ಪೋಗೆಂದು ಹರಿ ನುಡಿದುದು ॥೩೬॥

ಆ ನುಡಿಗೆ ನಡುಗಿ ತನಯುನ ಮೇಲಣಾಸೆಯಿಂ ।
ದಾನೆಂದೆನಾ ಸಿಂಹಕೆಲೆ ಮೃಗಾಧಿಪ ತನ್ನ ।
ಸೂನುವಂ ಕಾವರಿಲ್ಲವೆ ಧರೆಯೊಳುಗ್ರ ತಪ ದಾನ ಧರ್ಮಂಗಳಿಂದೆ॥
ಏನುಪಾಯಂ ಗೆಯ್ವೆನೆಂದು ಮರುಗಲ್ಕೆ ಪಂ ।
ಚಾನನಂ ಬಳಿಕ ತನಗೊಂದಾಸೆಯಂ ಕೊಟ್ಟು।
ಭೂನಾಥ ನಿನ್ನೆಡೆಗೆ ಕಳುಹಿದೊಡೆ ಬಂದೆನೆನಲವನೀಶನಿಂತೆಂದನು ॥೩೭॥

ವಿಪ್ರೇಂದ್ರ ಕೇಳೆನ್ನ ರಾಷ್ಟ್ರದೊಳ' ನಾರಸಿಂ ।
ಹ ಪ್ರವರ್ತನ ಮಲ್ಲದೆಲ್ಲಿಯಲುಂ ಕ್ಷುದ್ರಸಿಂ ।
ಹ ಪ್ರಸಂಗವ ನರಿಯೆನಿನ್ನೆಗಂ ನಿನ್ನ ಸುತನಂ ಪಿಡಿದ ಸಿಂಹಮುಂಟೆ ॥
ಅಪ್ರಸಿದ್ಧ ಪ್ರೋಕ್ತಮಿದು ಸಿಂಹಕೆನ್ನಿಂದ।
ಹ ಪ್ರಯೋಜನಮದೇಂ ಮಾಜದಂಜದೆ ತನಗೆ ।
ಕ್ಷಿಪ್ರದಿಂ ಪೇಳೆಂದು ಭೂವರಂ ಬೆಸಗೊಂಡೊಡಾ ಪಾರ್ವನಿಂತೆಂದನು ॥೩೮॥

ಎನ್ನೊಳಾ ಸಿಂಹವಾಡಿದ ನುಡಿಯ ನೀಗಳಾಂ ।
ನಿನ್ನೊಳೆಂಬುದು ನೀತಿಯಾದಪುದೆ ಸುತಹೀನ।
ಮಿನ್ನೇಸು ದಾರುಣವೊ ಪೇಳಬೇಕಾಗಿಹುದು ನೃಪ ಕೇಳದರ ಮಾತನು॥
ಮುನ್ನೆ ಮುದಿಗೂಡು ತಪದಿಂದೊಣಗಿತಿದನೊಲ್ಲೆ ।
ನುನ್ನಿಸದಿರಾರ್ಪೊಡೀವುದು ದಿವ್ಯ ದುಗ್ಧ ಸಂ ।
ಪನ್ನ ಫಲಪುಷ್ಪವಾಗಿಹ ಮಯೂರಧ್ವಜನ ಮೈಯೊಳರ್ಧವನೆಂದುದು ॥೩೯॥

ಈ ಮಗನ ಮೇಲೆ ನಿನಗಾಸೆಯುಳ್ಳೊಡೆ ಬಿಡುವೆ ।
ನಾ ಮಯೂರಧ್ವಜನ ದೇಹಾರ್ಧಮಂ ಕೊಂಡ. ।
ಬಾ ಮಹೀಪಾಲನಲ್ಲಿಗೆ ಪೋಗು ಕೊಲ್ಲೆನಾನನ್ನೆಗಂ ನಡೆಯೆನಲ್ಕೆ ॥
ಭೂಮಿಾಶನಿತ್ತಪನೆ ತನ್ನ ತನುಭಾಗವಂ ।
ಭ್ರಾಮಕಮಿದೆಂದು ಜರೆದಾಂ ತಿರಸ್ಕರಿಸೆ ಮ।
ತ್ತೀಮಾತನಾಡಿದುದು ತನ್ನೊಳಾಕೇಸರಿ ನರೇಂದ್ರ ಕೇಳ್ ಕೌತುಕವನು ॥೪೦॥

ಎಲೆ ಮರುಳೆ ವಿಪ್ರಪರಪುರುಷಾರ್ಥಕೆಳಸುವಂ ।
ನೆಲದ ಮೇಲಣ ಬಾಳ್ಕೆಯಂ ನಿಜ ಶರೀರವಂ ।
ಸೆಲೆಯೆಂದು ನೋಡುವನೆ ಕವಚಮಂ ಕರ್ಣಂ ದಧೀಚಿ ತನ್ನಸ್ತಿಗಳನು ॥
ಒಲಿದಿತ್ತು ಕೀರ್ತಿಯಂ ತಳೆಸುದಿಲ್ಲವೆ ನಿನ್ನ ।
ಕುಲಮುಳಿಯಬೇಕೆಂದು ಪೋಗಿ ನೀಂ ಬೇಡಿವೋಡೆ ।
ಸಲೆ ಕರುಣದಿಂದಾನೃಪಂ ಕಾಯಮಂ ಕೊಯ್ದು ಕುಡದಿರಂ ಪೋಗೆಂದುದು ॥ ೪೧ ॥

ಸುತ್ಯಾಗಿ ಶುಚಿ ಶೂರನುಪಕಾರಿ ಕಮಲಾಕ್ಷ ।
ಭೃತ್ಯನನಸೂಯಂ ಕೃಪಾವನಧಿ ಭುವನ ಜನ ।
ನುತ್ಯಂ ಮಯೂರಧ್ವಜಂ ತನ್ನ ಜೀವನವ ನಾದೊಡಂ ಬೇಡಿದರ್ಗೆ ॥
ಅತ್ಯಂತ ಹರ್ಷದಿಂದಿತ್ತು ಸತ್ಕೀರ್ತಿಯನ ।
ನಿತ್ಯ ಸಂಸಾರದೊಳ್ ಪಡೆದಲ್ಲದಿರ್ದಪನೆ ।
ಸತ್ಯಮಿದು ಪೋಗೆಂದು ಸಿಂಹಮೆನ್ನಂ ಕಳುಹಿದೊಡೆ ನಿನ್ನೆಡೆಗೆ ಬಂದೆನು ॥ ೪೨ ॥

ರಾಯನಾಂ ಸುಧನಲ್ಲವೆ ಸಕಲ ವೈಭವ ।
ಶ್ರೀಯುಕ್ತಮಾಗಿರ್ದ ನಿನ್ನ ಘನ ಸೌಂದರ್ಯ ।
ಕಾಯಮಂ ಕೊಟ್ಟು ತನ್ನಾತ್ಮಜಂ ಬದುಕಬೇಕೆಂದು ಸಿಂಹದ ಮಾತಿಗೆ ॥
ವಾಯದಿಂ ಬಂದೆನ್ನಲ್ಲಿಗೆ ಸಾಕದಂತಿರಲ ।
ಪಾಯುಕೊಳಗಾಗಿರ್ದ ತನ್ನ ಸುತನುಳಿವುದಕು ।
ಪಾಯವಂ ಕಾಣೆನೆಂದಾ ಕಪಟ ಭೂಸುರಂ ಸುಯ್ದು ಮತ್ತಿಂತೆಂದನು ॥ ೪೩ ॥

ಭೂಸುರಂ ಬ್ರಹ್ಮಚರ್ಯೆಯೊಳಿರ್ದ ಪುತ್ರಂಗ ।
ತಾಸುವಾದೊಡೆ ರಾಮಚಂದ್ರಂಗೆ ಮೊರೆಯಿಟ್ಟೊ ।
ಡಾ ಸುತನ ಜೀವಮಂ ಒರಿಸನೇ ಪೌರುಷಮೊಳಾ ರಾಘವೇಶ್ವರಂಗೆ ॥
ಪಾಸಟಿಯಲಾ ನೀನು ಮದರಿನೆನ್ನಾತ್ಮಜಂ ।
ಕೇಸರಿಯ ಬಾಯ ತುತ್ತಾದನೀ ದುಃಖದಾ ।
ಯಾಸಮಂ ನಿನಗೊರೆದೆ ನಿನ್ನುಳುಹು ಮಾಣೆಂದು ಕಪಟದ್ವಿಜಂ ನುಡಿದನು ॥ ೪೪ ॥

ಕೇಳ್ದನವನೀಶ್ವರಂ ಪ್ರಚ್ಛನ್ನ ಭೂಸುರಂ |
ಪೇಳ್ದ ವೃತ್ತಾಂತಮಂ ಕೀರ್ತಿ ನಿಲ್ವುದು ನರರ |
ಬಾಳ್ದುಟಪುದಲ್ಲೆಂದು ನಿಶ್ಚೈಸಿ ಪಿವನಂ ಕರೆದು ನಿನಗೀ ತನುವನು ||
ಸೀಳ್ದು ಕೊಟ್ಟಪೆನೆಂದಭಯವಿತ್ತು ಬಳಿಕ ತಾ |
ನಾಳ್ದಿಳೆಯ ನಾತ್ಮಜಂಗಪ್ಪೈಸಿ ಹರ್ಷಮಂ |
ತಾಳ್ದನಿಬರೆಲ್ಲರಂ ಮಂಟಪದೊಳಿಹುದೆಂದು ಕುಳ್ಳಿರಿಸಿ ಪೊರಮಟ್ಟನು || ೪೫ |

ತರಿಸಿ ಗಂಗಾತೋಯಮಂ ಮಜ್ಜನಂಗೈದು |
ಪರಮ ಸಾಲಗ್ರಾಮ ತೀರ್ಥಮಂ ಕೈಕೊಂಡು |
ತರುಣ ತುಳಸೀದಳದ ಮಾಲೆಯಂ ಕಂಧರದೊಳಾಂತು ಮಂಟಪಕೆ ಬಂದು ||
ನೆರೆದ ಭೂಸುರ ಸಭೆಗೆ ಸಾಷ್ಟಾಂಗದಿಂದೆರಗಿ |
ಕರಯುಗಳಮಂ ಮುಗಿದು ನಿಂದು ಬಿನ್ನೈಸಿದಂ |
ಧರಣೀಶ್ವರಾಗ್ರಣಿ ಮಯೂರಧ್ವಜಂ ಜನಾಧೀಶ ಕೇಳ್ ಕೌತುಕವನು || ೪೬ ||

ಈ ಮಹಾಸ್ಥಾನದೊಳ್ನೆರೆದಖಿಳ ಭೂಸುರ |
ಸ್ತೋಮಮಂ ನಿರೀಕ್ಷಿಸುವುದಂದು ಬಲಿಯಧ್ವರಕೆ |
ವಾಮನಂ ಬಂದಂತೆ ತನ್ನ ಮಖಕೀ ದ್ವಿಜಂ ತಾನೆ ಬಿಜಯಂಗೈದನು ||
ಶ್ರೀಮಾಧವಸ್ವರೂಪದೊಳೀಗರಿದು ತ |
ನ್ನೀ ಮೆಯ್ಯೊಳರ್ಧಮಂ ಕೊಯ್ದು ಕೊಟ್ಟಪೆ ನತಿ |
ಪ್ರೇಮದಿಂದೀತಂಗೆ ಬದುಕಲೀತನ ಸುತಂ ಪೊಸತಾಗಲಿಳೆಗೆಂದನು ||೪೭ ||

ಭೂನಾಥನೆಂದ ಮಾತಂ ಕೇಳ್ದು ಸಕಲ ಪ್ರ |
ಧಾನಿಗಳಮರಸನ ಪುರೋಹಿತರ ಮಾದ್ವಿಜರು |
ಮೇನಿದತ್ತಣ ಕೃತ್ಯಮೀ ವಿಪ್ರ ನಂತಕೋಪಮನೆಂದು ಭೀತಿಯಿಂದೆ ||
ದಾನಮೆಂದೊಡೆ ರಾಜ್ಯ ಲಕ್ಷ್ಮಿ ಧನ ಕನಕ ಮಣಿ |
ಧೇನುಗಳ ನೀವರೀ ಕಾಯಮಂ ಕೊಯ್ದು ಕುಡು |
ವೀ ನಿಮಿತ್ತವ ನರಿಯೆವೆಂದೆಲ್ಲರುಂ ಕಂಪಿಸಲ್ ನೃಪತಿಯಿಂತೆಂದನು || ೪೮ ||

ಯಾಚಿಸಿದನಂಗಮಂ ಸುತನನುಳುಹೆಂದೆನಗೆ |
ಸೂಚಿಸಿದನೀದ್ವಿಜಂ ತಾಂ ಕೊಡುವೆನೆ ದೊಡನೆ |
ವಾಚಿಸಿದೆ ನಿಂತಿದಕೆ ತಪ್ಪಿದೊಡೆ ಲೋಕದೊಳ್ ತನ್ನಂ ಸಮಸ್ತ ಜನರು ||
ನಾಚಿಸದೆ ಮಾಣ್ಬರೆ ಪುಸಿದೊಡಂತಕನವರ್ |
ಪಾಚಿಸರೆ ನರಕದೊಳ್ ಮೈಯನರಿದೀಯುಲಾ |
ಶೋಚಿಸಲದೇಕಿನ್ನು ತೊಲಗಿ ನೀವೆಂದು ನೃಪನನಿಬರಂ ಸೈತಿಟ್ಟನು || ೪೯ ||

ಆ ಮಯೂರಧ್ವಜಂ ಬಳಿಕಲ್ಲಿ ವಿಪ್ರರಂ ।
ಹೇಮ ಮಣಿ ಗಜ ತುರಗ ವಸ್ತ್ರಭೂಷಣ ಧೇನು ।
ಭೂಮಿ ದಾನಂಗಳಿಂ ತಣಿಸಿ ನೆಡಿಸಿದನೆರಡು ಕಂಬಮಂ ನಡುವೆ ತನ್ನ ॥
ಕೋಮಲ ಶರೀರಮಂ ಪುಗಿಸಿ ಕಾಂಚನಮಯ ಸು ।
ದಾಮದಿಂ ತೋಳ್ತೊಡೆಗಳಂ ಬಿಗಿಸಿಕೊಂಡು ನಿಂ ।
ದಾ ಮಹೀಸುರನ ಪದಕಮಲಂಗಳಂ ತೊಳೆದು ಸಾದರದೊಳಿಂತೆಂದನು ॥ ೫೦ ॥

ಭೂಸುರೋತ್ತಮ ನಿನಗೆ ತಾ ಕುಡವ ದೇಹಾರ್ಧ ।
ದೀಸುದಾನದೊಳಖಿಲ ಯಜ್ಞನಾಯಕನಾದ ।
ವಾಸುದೇವಂ ಪ್ರೀತನಾಗಲಸ್ಮತ್ಕುಲೋದ್ಭವರಾದ ಜೀವಿಗಳೊಳು ॥
ಲೇಸಿಂದೆ ಪಾರ್ವಂಗೆ ತನು ಧನವ ನೀವೆಡೆಯೋ ।
ಳೋಸರಿಸದಿರಲಿ ಬುದ್ಧಿಗಳೆಂದು ನೃಪತಿ ಕ ।
ಟ್ಟಾಸುರದ ಕೊಯ್ಯಾಗರರಂ ಕರೆಸಿ ತೆಗೆಸಿದಂ ಮಸೆದ ಕೊಯ್ಗತ್ತಿಗಳನು ॥೫೧॥

ಕುಡುವನಿರೆ ತನಗೆ ಬೇಕಾದುದಂ ಬೇಡುವಂ ।
ಬಿಡುವನೇ ಬೇಡುವಂ ಬರೆ ತನ್ನೊಳಿರ್ದುದಂ ।
ತಡೆದವನೆ ಕುಡುವವಂ ಕುಡುವ ಬೇಡುವರೊಳಗೆ ಕುಡೆನೆಂಬ ಬೇಡೆನೆಂಬ ॥
ಎಡೆತಡೆಗಳಿಲ್ಲೆಂಬ ನಾಳ್ನುಡಿಯ ನೀಪಾರ್ವ ।
ಪೊಡವೀಶರೊಳ್‌ಕಂಡೆವೆಂದು ನಡನಡುಗಿ ಮೊರೆ ।
ಯಿಡುತಿರ್ದುದವನ ರಾಷ್ಟ್ರದ ಜನಂ ಬೆದರಿ ಕುರರೀಗಣಂಗಳ ತೆರದೊಳು ॥೫೨॥

ಪೂರ್ವಮಂ ನೆನೆದು ಕಂಬನಿಗಳಿಂ ಧ್ವನಿಗಳಿಂ ।
ಚೀರ್ವರಂ ಪ್ರಜೆಗಳಂ ಪಾಲಿಸದೆ ಲಾಲಿಸದೆ ।
ಜಾರ್ವ ಪರಿಯೆಂತೆಂದಳಲ್ವರಂ ನಿಲ್ವರಂ ಬೆರಗಾಗಿ ಬೆರಗುಗೊಂಡು ॥
ಸಾರ್ವಭೌಮಕ ನಿನ್ನ ರಕ್ಷೆಯಂ ಶಿಕ್ಷೆಯಂ ।
ಮಾರ್ವರಲ್ಲೆಮ್ಮ ನೀಂ ಬಿಡುವರೇ ಕುಡುವರೇ ।
ಪಾರ್ವಂಗಸುವನೆಂದು ಬಯ್ವರಂ ಸುಯ್ವರಂ ನೋಡಿ ನೃಪನಿಂತೆಂದನು ॥೫೩॥

ಪ್ರಜೆಗಳಿರ ನೀವಿದಕೆ ದುಃಖಿಪರೆ ಧನ್ಯನಾಂ ।
ನಿಜಶರೀರದೊಳರ್ಧಮಂ ಕೊಯ್ದು ಕುಡುವೆ ನೀ ।
ದ್ವಿಜನ ಹಸ್ತದೊಳಿವಂ ನೃಹರಿಯೆಂದೀತನಡವಿಯ ಸಿಂಹಕೀಯಲಿದನು ॥
ಗಜಬಜ ವಿದೇತಕೆ ಪರೋಪಕೃತಿಗಲ್ಲದ ಮ ।
ನುಜನ ಬಾಳ್‌ಸಣಬುರಿದ ಬೂದಿಯಂತಪ್ಪುದಾ ।
ರಜವಿಲ್ಲದೀಕ್ಷಿಪುದು ಕೌತುಕವನೆಂದೊಡಂಬಡಿಸಿದಂ ನರನಾಥನು ॥ ೫೪ ॥

ಮತ್ತೆ ಮನುಜೇಂದ್ರನಾವಿಪ್ರನಂ ಕರೆದು ನಿನ ।
ಗಿತ್ತೆನೀ ದೇಹಾರ್ಧಮಂ ಪರಿಗ್ರಹಿಸೆಂದು ।
ಚಿತ್ತದೊಳ್ಮಿಗೆ ಹರ್ಷಮಂ ತಾಳ್ದು ಪೊರೆಯೊಳಿಹ ಸೂದಕರ್ಮಜ್ಞರೊಡನೆ ॥
ಪೊತ್ತುಗಳೆಯದೆ ತನ್ನ ತನುವ ನೆರಡಾಗಿ ಮಸೆ ।
ವೆತ್ತೆ ಕರಪತ್ರದಿಂ ಸೀಳ್ವುದೆಂದಾಜ್ಞಾಪಿ ।
ಸುತ್ತಿರೆ ಶಿಖಿಧ್ವಜನ ಸತಿ ಕುಮುದ್ವತಿ ನುಡಿದಳತಿವಿನಯದಿಂದೆ ಪತಿಗೆ ॥ ೫೫ ॥

ನೀಂ ತಿಳಿದುದಿಲ್ಲರಸ ವಿಪ್ರೇಂದ್ರನರಿಯಂ ವ ।
ನಾಂತರದೊಳಾ ಸಿಂಹಮೆಂದನುಡಿ ಶಾಸ್ತ್ರಸಿ ॥
ದ್ಧಾಂತಮಂಗನೆ ಪುರುಷನರ್ಧಾಂಗಮೆಂಬುದಕ್ಕೆ ನಿನ್ನ ವಾಮಾಂಗಿಯಾದ ॥
ಕಾಂತೆಯಂ ಬೇಡಿದೊಡೆ ಕೊಯ್ದು ಕಾಯುವನೀವ ।
ಛಾಂತಿಯೇತಕೆ ತನ್ನನಸುವೆರಸಿ ಕೊಟ್ಟು ಕಳೆ ।
ತಾಂ ತಳೆವೆ ನೈದೆತನದಿಂದೆ ಸದ್ಗತಿಯನೆಂದಾ ಕುಮುದ್ವತಿ ನುಡಿದಳು ॥ ೫೬ ॥

ಸಮ್ಮತಮಿದಹುದೆಂದರೆಲ್ಲರುಂ ಭೂವರಂ ।
ಸುಮ್ಮನಿರೆ ಕಂಡನೀ ತೆರನಂ ದ್ವಿಜತ್ವಮಂ ।
ನೆಮ್ಮಿದ ಮುಕುಂದನೆಲೆ ರಾಯ ನಿನ್ನರಸಿ ನುಡಿದುತ್ತರವನೊಪ್ಪಬಹುದು ॥
ಸುಮ್ಮಾನದಿಂ ಜನೇಶ್ವರನ ದಕ್ಷಿಣಭಾಗ ।
ಮಮ್ಮೆಲ್ವೆನೆಂದು ಒಕ್ಕಣಿಸಿತಲ್ಲದೆ ಸಿಂಹ ।
ವೆಮ್ಮೊಡನೆ ವಾಮಾಂಗಮೆಂದಾಡಿತಿಲ್ಲೆನಲ್ ನೃಪನ ಸುತನಿಂತೆಂದನು ॥ ೫೭ ॥

ಕರುಣಿಸೆಲೆ ವಿಪ್ರ ನಿನ್ನಂ ಬೇಡಿಕೊಂಬೆ ನಾಂ ।
ತರುಣಂ ಸುಪುಷ್ಟವಪು ತುಷ್ಟಿ ಮೃಗಪತಿಗಾಗ ।
ದಿರದು ತಾತನ ಋಣತ್ರಯಕೆ ಹರಿವಹುದು ರಾಘವ ಭೀಷ್ಮರಂತೆ ಕೀರ್ತಿ ॥
ಸ್ಥಿರವಹುದು ಪಿತನ ಭಾಷೆಗೆ ನಿಲಲ್ ಜನಕನವ ।
ತರಿಪನಾತ್ಮಜನಾಗಿ ತಂದೆಮಕ್ಕಳವರೊಳ ।
ಗೆರವಿಲ್ಲ ತನ್ನಂಗಮಂ ತೆಗೆದುಕೊಳ್ಳೆಂದು ತಾಮ್ರಧ್ವಜಂ ನುಡಿದನು ॥ ೫೮ ॥

ಭೂಪಾಲ ಕೇಳವನ ಮಾತಿಗೆ ಮಹೀಸುರಂ ।
ಕಾಪಟ್ಯಮಿಲ್ಲೆಲೆ ಕುಮಾರ ನೀನೆಂದ ನುಡಿ ।
ಪಾಪಿ ಕೇಸರಿ ತನ್ನೊಳವನಿಪನ ಸತಿಯೆಂದು ಸುತನೆಂದು ಪೇಳ್ದುದಿಲ್ಲ ॥
ಆಪೊಡೆ ಮಯೂರಧ್ವಜನ ದಕ್ಷಿಣಾಂಗಮಂ ।
ತಾ ಪುತ್ರನಂ ಬಿಡುವೆನೆಂದೊಡಿಲ್ಲಿಗೆ ಬಂದೆ ।
ನೀಪರಿಯೊಳಳುಕುವರೆ ಕುಡಬೇಡ ಪೋಪೆನೆನೆ ನರನಾಥನಿಂತೆಂದನು ॥ ೫೯ ॥

ರಾಣಿಯುಂ ಕುಡುವುದಿಲ್ಲಾತ್ಮಜನ ನೀವುದಿ ।
ಲ್ಲೂಣೆಯುಂ ತನ್ನ ಭಾಷೆಗೆ ಬಾರವಂತಬ್ಜ ।
ಪಾಣಿ ಮೆಚ್ಚುವವೊಲರ್ಧದೇಹಮಂ ಕೊಯ್ದು ಕೊಟ್ಟಪೆನೀಗ ಸೈರಿಸೆನುತ ॥
ಸಾಣೆವಿಡಿದಿರ್ದ ಕರಪತ್ರಮಂ ಕುಡಿಸಿದಂ।
ಪ್ರಾಣನಾಥೆಯು ಕೈಯೊಳೆನ್ನುತ್ತಮಾಂಗಮಂ ।
ಕೇಣಮಿಲ್ಲದೆ ತನುಜನಂ ಕೂಡಿಕೊಂಡು ನೀ ಸೀಳೆಂದು ನೇಮಿಸಿದನು ॥೬೦॥

ಬಾಲಲೀಲೆಗಳಿಂದೆ ನಂದನಂ ತರುಣಿರತಿ।
ಕಾಲದೊಳ್ ನಖದಿಂದ ಸೀಳಲ್ಕೆ ನೋವುದೆ ವಿ।
ಶಾಲಾಕ್ಷಿ ಶನಗಿದು ವಿನೋದ ಮಸಿಪತ್ರದಿಂ ಸೂನು ಸಹಿತೀಗ ನೀನು॥
ಆಲಸ್ಯಮಂ ಮಾಡದರಿವುದೀ ಮಸ್ತಕದ
ಮೇಲಣಿಂದಿಳಿಯೆ ಮುಂತಾಗಿ ತನ್ನಂಗಮಂ।
ಪಾಲೆರಡು ನಮಮಾಗೆ ಗರುಡ ಹನುಮಂತರ್ಗೆ ಚಕ್ರಿ ಪಚ್ಚಾಂಟದಂತೆ ॥ ೬೧ ॥

ಆ ಮಹೀಪಾಲ ನೀತೆರದೊಳ್ ಕುಮುದ್ವತಿಗೆ ।
ನೇಮಿಸೆ ಕುಮಾರನಂ ಕೂಡಿಕೊಂಡವಳತಿ
ಪ್ರೇಮದಿಂ ಕರಪತ್ರಮಂ ಕೊಂಡು ಮುನ್ನ ದೈತ್ಯನನಿಂತು ಸೀಳ್ದನೆಂದು ।
ಆ ಮಹಾಸಭೆ ನಾರಸಿಂಹನಂ ನೆನೆವಂತೆ ।
ರಾಮರಾಮೆಂದು ಜಪಿಸುತ ಕೊಯ್ಯಳನಿಸಿಪ ।
ಶಿರೋಮಣಿಯ ಮಸ್ತಕವನೆರಡಾಗಿ ನರಿಸದಿಂದೋರೆಪೋರೆಗಳಿಲ್ಲದೆ ॥ ೬೨ ॥

ಸ್ತಂಭದ್ವಯದ ನಡುವೆ ನಿಂದ ನೃಪನಂ ತನ್ನ ।
ಸಂಭವನುಮರಸಿಯುಂ ಪಿಡಿದೊಬ್ಬರೊಂದುಕಡೆ ।
ಯಿಂ ಭಾಳಮಧ್ಯಮಂ ತೀಕ್ಷ್ಣ ಕರಪತ್ರದಿಂ ಘರಘರನೆ ಸೀಳುತಿರಲು ॥
ಜಂಭರಿಪುನಂದನ ಮುರಾರಿಗಳ್ ಬೆರಗಾದ ।
ರಂಭೋಧಿ ಘೋಷದಿಂದೆದ್ದು ಹಾಹಾಕಾರ।
ದಿಂ ಭಯಂಗೊಂಡೊರಲುತಿರ್ದುದಾಸ್ಥಾನಮೆಲೆ ಭೂಪ ಕೇಳ್ ಕೌತುಕವನು॥೬೩॥

ಪೆಂಡತಿಯೊಳಾತ್ಮಜನೊಳರಸನೊಳ್ ಮಿಗೆ ನೋಡಿ ।
ಕಂಡುದಿಲ್ಲೊಂದಿನಿಸು ಖಯಖೇದಿಯುಂ ಬಳಿಕ ।
ಪುಂಡರೀಕಾಂಬಕಂ ನೃಪನ ವಾಮಾಕ್ಷಿಯೊಳ್ ಕಂಬನಿಗಳೊಸರುತಿರಲು ॥
ಅಂಡಲೆಯೊಳಳುತಳುತ ಕುಡುವವನ ದಾನಮಂ ।
ಕೊಂಡಪರೆ ಬುಧರಕಟ ಲೋಕದೊಳ್ ಬೇಡುಮಂ ।
ಭಂಡನೆನುತೊಡಮುರಿದು ತಿರುಗಿದಂ ತನಯುನಂ ತಿನಲಿ ಹರಿ ಒನದೊಳೆನುತೆ
॥೬೪॥

ಬೆರಗಾದಳಾ ಕುಮುದ್ವತಿ ನುಡಿದಳರಸಂಗೆ ।
ಬರಿದೆ ಕೊಯ್ಸಿದೆ ನಿನ್ನ ಮಸ್ತಕವ ನೆಡಗಣ್ಣೊ ।
ಳೊರೆವ ಕಂಬನಿಗಳಂ ಕಂಡಾ ದ್ವಿಜೋತ್ತಮಂ ನೀನಳುತ ಕುಡುವೆಯೆಂದು ॥
ಪೊರಮಟ್ಟು ಪೋದನೊಲ್ಲದೆ ವಿಫಲವಾದುದ ।
ಕ್ಕರೋಳತ್ತ ದಾನವಿದಕಂತೆನೆಲ್ ಭೂವರಂ ।
ಮರುಗಿ ಕರೆಸಾತನಂ ತಿಳಿಪುವೆಂ ಪೋಳ್ಗಳೆರಡಂ ಕೂಡಿ ಪಿಡಿಯೆಂದನು ॥ ೬೫ ॥

ಬಳಿಕಾ ಕುಮುದ್ವತಿ ನರೇಂದ್ರಮಸ್ತಕದ ಪೋ ।
ಳ್ಗಳನೊಂದುಗೂಡಿ ಪಿಡಿದಾಗ ನಿಜ ತನಯನಂ ।
ಕಳುಹಲವನಾಪಾರ್ವನಂ ತಡೆದೊಡಂಬಡಿಸಿ ವಿನಯದಿಂ ಕರೆತರಲ್ಕೆ ।
ತಿಳಿಪಿದಂ ಭೂಪನೆಲೆ ವಿಪ್ರ ಕರಪತ್ರಹತಿ ।
ಗಳುಕಿತಿಲ್ಲುಪಕಾರಕಾಯ್ತು ದಕ್ಷಿಣಭಾಗ ।
ಮುಳಿದುದು ನಿರರ್ಥಕಂ ವಾಮಾಂಗವೆಂದೊಸರಿತೆಡಗಣ್ಣ ಜಲಮೆಂದನು ॥೬೬॥

ಮೆಚ್ಚಿದಂ ನೃಪನೆಂದ ಮಾತಿಗೆ ಮುರಧ್ವಂಸಿ ।
ಹಚ್ಚಿರ್ದ ರಾಯನ ಕಳೇಬರದ ಪೋಳ್ಗಳಂ ।
ಬೆಚ್ಚು ಕಾರುಣ್ಯದಿಂ ವೈದಡವಿ ತಕ್ಕೈಸಿ ನಿನ್ನಂ ಪರೀಕ್ಷಿಸಿದೆನು ॥
ನಿಚ್ಚಟದ ಭಕ್ತಿಯಿಂ ಕಂಡೆಸಿವನರ್ಜುನಂ ।
ಮಚ್ಚುಮರೆಯೇಕಿನ್ನು ತಾನೀಗ ಕೃಷ್ಣನೆಂ ।
ದೆಚ್ಚರಿಸಿ ನಿಗಮದರಿಕೆಯ ತನ್ನ ಸಾಕಾರ ಮೂರ್ತಿಯಂ ತೋರಿಸಿದನು ॥೬೭॥

ಪರ ಸುಪ್ರಸನ್ನ ವದನದ ಕಮಲ ನೇತ್ರದ ಮ ।
ಕರ ಕುಂಡಲದ ಲಲಿತ ನಾಸಿಕದ ಪಣೆಯ ಕ ।
ಸ್ತುರಿಯ ತಿಲಕದ ಮುರಿದ ಪುರ್ಬುಗಳ ಸುಳಿಗುರುಳ ಮಣಿ ಮಕುಟದೆಳ
ಕೊರಲ ವನಮಾಲೆಗಳ ಕೌಸ್ತುಭ ಶ್ರೀವತ್ಸ । [ದೊಳಸಿಯ ॥
ದುರದ ಚಂದನದ ನಳಿತೋಳ್ಗಳ ಘನಾಂಗ ಸೌಂ ।
ದರಿಯದವಯವದ ಸರ್ವಾಭರಣ ಭೂಷಿತದ ಹರಿ ನೃಪನ ಮುಂದೆಸೆದನು ॥೬೮॥

ಹೇಮಾಂಬರದ ಲಲಿತ ಕಾಂತಿ ಹೊಳೆಹೊಳೆವ ಸೌ ।
ದಾಮಿನಿಯವೋಲಿರೆ ಪೊರೆದ ಕರುಣರಸ ವೊಸರ್ವ ಧಾ ।
ರಾಮಯದ ಮಳೆವೊಲಿರೆ ನುಡಿದ ಗಂಭೀರವಾಕ್ಯಂ ಕಡೆ ಮೊಳಗುವೊಲಿರೆ ॥
ಕೋಮಲ ಶ್ಯಾಮ ಲಾವಣ್ಯತನು ಮುಂಗಾರ ।
ಜೀಮೂತದೊಡ್ಡಿನವೊಲಿರೆ ಪಿರಿದು ನಲಿಯುದಿಸ ।
ಲೇ ಮಯೂರಧ್ವಜಂ ಪೇಳೆನಲ್ ಕೃಷ್ಣನಂ ಕಂಡು ಪುಳಕಿತನಾದನು ॥ ೬೯ ॥

ಜಯಜಯ ಜಗನ್ನಾಥ ವರ ಸುಪರ್ಣ ವರೂಥ।
ಜಯಜಯ ರಮಾಕಾಂತ ಶಮಿತ ದುರಿತಧ್ವಾಂತ।
ಜಯಜಯ ಸುರಾಧೀಶ ನಿಗಮನಿರ್ಮಲಕೋಶ ಕೋಟಿಸೂರ್ಯಪ್ರಕಾಶ॥
ಜಯಜಯ ಕ್ರತುಪಾಲ ತರುಣ ತುಲಸೀಮಾಲ।
ಜಯಜಯ ಕ್ಷ್ಮಾಪೇಂದ್ರ ಸಕಲ ಸದ್ಗುಣ ಸಾಂದ್ರ।
ಜಯತುಜಯ ಯದುರಾಜ ಭಕ್ತಸುಮನೋಭೂಜ ಜಯತುಜಯ ಯೆನುತಿರ್ದನು ॥ ೨೦ ॥

ನೋಡಿದಂ ಕಣ್ತಣಿಯೆ ಬಳಿಕಿಳೆಗೆ ತನುವ ನೀ।
ಡಾಡಿ ದಂಡಪ್ರಣಾಮಂಗೈದು ಭೂವರಂ।
ಮಾಡಿದಂ ನಿಗಮಾರ್ಥದನುಪಮ ಸ್ತುತಿಗಳಂ ಮುರಹರನ ಮುಂದೆ ನಿಂದು॥
ಕೂಡೆ ತಾಮ್ರಧ್ವಜ ಕುಮುದ್ವತಿಗಳೆರಗಿದರ್।
ಮೂಡಿದಾನಂದದಿಂ ತಮತಮಗೆ ಕೈಮುಗಿದು।
ಬೇಡಿಕೊಳುತಿರ್ದುದು ಮಹಾಸಭೆ ಮುಕುಂದನಂ ಜಯಜಯ ನಿನಾದದಿಂದೆ ॥ ೨೧ ॥

ಪನ್ನಗಾರಿಧ್ವಜಂ ಬಳಿಕಾ ನೃಪಾಲನಂ।
ಮನ್ನಿಸಿ ಕೃತಾರ್ಥನಹೆ ನೀನರ್ಧ ದೇಹಮಂ।
ನನ್ನಿಯಿಂದೀಯೆ ಮೆಚ್ಚಿದೆನೀಗ ನಿನಗೆ ಸಂಗ್ರಾಮದೊಳ್ ತಾಮ್ರಕೇತು॥
ನಿನ್ನ ಪಡೆಯೆಲ್ಲಮುಮ ನೀಸವ್ಯಸಾಚಿಯುಮ।
ನೆನ್ನುವಂ ಮೂರ್ಛೆಗಾಣಿಸಿ ಕೆಡಹಿ ಬಂದುದಕೆ॥
ಮುನ್ನೆ ಹರ್ಷಿತನಾದೆನಿನ್ನು ಸತಿಸುತರೊಡನೆ ಮಾಡು ಯಜ್ಞವನೆಂದನು ॥೨೨॥

ಧರ್ಮಜನ ತುರಗಮಿದೆ ನಿನ್ನ ಹಯಮಿದೆ ನೀನೆ।
ನಿರ್ಮಲಾಧ್ವರಮೆರಡುಮಂ ಸಮಯಮಾಗಲ್ಕೆ।
ಕರ್ಮಕಧಿಪತಿಯಾಗಿ ಮಾಳ್ಪುದೆಂದಚ್ಯುತಂ ನುಡಿದೊಡೆ ಮಯೂರಕೇತು॥
ಚರ್ಮಶೃಂಗಮನಾಂತು ಮಖದೀಕ್ಷೆಯಂ ಕೊಂಬ।
ದುರ್ಮತಿಗಳುಂಟೆ ನಿನ್ನಂ ಕಂಡ ಬಳಿಕದರ।
ಮರ್ಮಮಂ ಬಲ್ಲೆನಾನೆಲೆ ದೇವ ತನ್ನ ಬಿನ್ನಪವನವಧರಿಸೆಂದನು ॥ ೨೩ ॥

ವಿಶ್ವೇಶ ನಿನ್ನ ಶಾಶ್ವತ ಮೂರ್ತಿಯಂ ತಳೆವ।
ವಿಶ್ವಾಸದಿಂದೆ ನಿನಗೊಪ್ಪಿಸಿದೆ ನೀಗಳೀ।
ನಶ್ವರ ಶರೀರಮಂ ಸಾಕದಂತಿರಲಿನ್ನು ತಾಂ ಕರ್ಮಕರ್ತೃವಾಗಿ॥
ಅಶ್ವಮೇಧಂಗಳಂ ಮಾಡಿದೊಡೆ ನಗವೆ ನಿ।
ನ್ನ ಶ್ವಾಸದಿಂದೊಗೆದ ಮಂತ್ರಾಳಿಗಳ್ ಮಾತ।
ರಿಶ್ವ ಮಿತ್ರಜ್ವಾಲೆ ಪೊರೆಯೊಳಿರೆ ಭೇಷಜವ ನರಸುವರೆ ಹಿಮಕೆಂದನು ॥ ೨೪ ॥

ದೇವ ಚಿತ್ರ್ರಸೆನ್ನ ನಂದನಂ ನಿನ್ನೆ ಸಮು।
ರಾವನಿಯೊಳೊಳಗಾದ ನಿಮ್ಮಿರ್ವರಂ ಬಿಟ್ಟು।
ಭಾವದಿಂ ಬಂದನಿಲ್ಲಿಗೆ ತನ್ನ ಪುಣ್ಯದಿಂ ತನುಗನುಗ್ರಹಿಸಲೆಂದು ॥
ನೀವೆ ಬಿಜಯಂಗೈದಿರದರಿಂದೆ ಸಲೆ ಧನ್ಯ।
ರಾವು ನರ ನಾರಾಯಣರ್ಕಳಂ ಕಂಡೆವಿ।
ನ್ನಾವ ಕಲ್ಪಿತವೆನಗೆ ಧರ್ಮಜನೆ ಮಾಡಿ ಬದುಕಲಿ ಮುಖಂಗಳನೆಂದನು ॥೭೫॥

ಸುರನದಿಯ ತೋಯಮಿರೆ ನೀರಡಿಸಿ ಹಿಮ ಜಲಕೆ।
ಪರಿವಂತೆ ನಿನ್ನ ದರ್ಶನಮಿರ್ದು ಮಿಾ ಮಹಾ।
ಧ್ವರಕೆಳಸುವವನಲ್ಲ ತನ್ನುಮಂ ತನ್ನ ಸತಿಸುತರುಮಂ ತನ್ನೊಳಿರ್ದ ॥
ತುರಗಂಗಳಂ ತನ್ನ ಯಜ್ಞಮಂ ಯಜ್ಞೋಪ।
ಕರಣಂಗಳಂ ತನ್ನ ರಾಜ್ಯಮಂ ತನ್ನ ಮಂ।
ದಿರದ ಸರ್ವಸ್ವಮಂ ನಿನ್ನ ಪದಕರ್ಪಿಸಿದೆನೆಂದವಂ ಕೈಮುಗಿದನು ॥೭೬॥

ಇಂತೆಂದು ಭೂವರಂ ನುಡಿಯೆ ಹರ್ಷಿತನಾಗಿ।
ಕುಂತೀಸುತಂಗವನ ಭಕ್ತಿಯಂ ತೋರಿಸುತ।
ನಂತರದೊಳಾ ನೃಪನ ನಗರದೊಳ್ ಮೂರು ದಿನಮಿರ್ದು ನಿಜಸೇನೆ ಬರಲು ॥
ದಂತಿಪುರಕಲ್ಲಿಯ ಸಮಸ್ತವಸ್ತುಗಳೈದು।
ವಂತೆ ನೇಮಿಸಿ ಮಯೂರಧ್ವಜಂ ಸಹಿತ ನಡೆ।
ದಂ ತುರಗಮೆರಡುಮಂ ಬಿಡಿಸಿ ಮುಂದಕೆ ದೇವಪುರದ ಲಕ್ಷ್ಮೀಕಾಂತನು ॥೭೭॥

ಇಪ್ಪತ್ತೇಳನೆಯ ಸಂಧಿ

ಸೂಚನೆ ॥ ಹರಿಗಳಂ ತಡೆಯಲ್ಕೆ ಸಾರಸ್ವತಾಖ್ಯಪುರ ।
ವರದೊಳಂತಕನ ವೃತ್ತಾಂತಮಂ ಕೇಳ್ದು ಸಂ ।
ಗರದೊಳಚ್ಯುತನ ಮತದಿಂ ವೀರವರ್ಮನಂ ಜಯಿಸಿದಂ ಕಲಿಪಾರ್ಥನು ॥

ಸೋಮ ಕುಲತಿಲಕ ಜನಮೇಜಯ ನರೇಂದ್ರ ಕೇ ।
ಳಾ ಮಯೂರಧ್ವಜಂ ತನ್ನ ನಗರದೊಳತಿ ।
ಪ್ರೇಮದಿಂ ಮೂರುದಿನಮರ್ಜುನ ಮುರಾರಿಗಳನಿರಿಸಿಕೊಂಡಿರ್ದು ಬಳಿಕ ॥
ಭೀಮಾನುಜನ ಕೂಡೆ ಪೊರಮಟ್ಟನನುಸಾಲ್ವ ।
ಕಾಮ ಕರ್ಣಜ ಬಭ್ರುವಾಹನ ಸುವೇಗ ನಿ ।
ಸ್ಸೀಮ ನೀಲಧ್ವಜ ಮರಾಳಧ್ವಜಾದಿಗಳ್ ಪಡೆವೆರಸಿ ನಡೆದರೊಡನೆ ॥ ೧ ॥

ತುಂಬಿತು ಮಹೀಮಂಡಲವನತುಲಸೇನೆ ನಡೆ ।
ಗೊಂಬುದಿನ್ನೆಲ್ಲಿಗೆ ಮಹಾದೇವ ಕೌತುಕಮಿ ।
ದೆಂಬ ತೆರನಾಗಿ ಮುಂದಕೆ ತಳೆವ ಕುದುರೆಗಳ ಕೂಡೆ ಸೌರಾಷ್ಟ್ರಕಾಗಿ ॥
ಬೆಂಬಿಡದೆ ಬಂದುದರ್ಜುನನ ಬಲಮಲ್ಲಿ ಸುಖ ।
ದಿಂಬಾಳ್ವ ಭೂವರಂ ವೀರವರ್ಮಂ ಜನಾ ।
ಡಂಬರದೊಳಿರ್ದಪಂ ಸಾರಸ್ವತಾಖ್ಯ ನಗರದೊಳತಿ ವಿಲಾಸದಿಂದೆ ॥ ೨ ॥

ನೆರೆ ನಾಲ್ಕು ಚರಣದಿಂ ಧರ್ಮಮಡಿಯಿಡುತಿಹುದು ।
ಮರೆದು ಕನಸಿನೊಳಾದೊಡಂ ಪಾತಕದ ಕೃತ್ಯ ।
ಕೆರಗುವವರಿಲ್ಲ ಪುರುಷ ಸ್ತ್ರೀಕದಂಬದೊಳ್ ವ್ಯಾಧಿಗಳ ಪೀಡೆಗಳನು ॥
ಅರಿಯರಾರುಂ ದುಃಖ ಶೋಕಸಂತಾಪದಿಂ ।
ಮರುಗುವವರಂ ಕಾಣೆನಾ ನೃಪನ ರಾಷ್ಟ್ರದೊಳ್ ।
ಸೆರೆಯಾಗಿ ವೈವಸ್ವತಂ ಮನೆಯಳಿಯತನದೊಳಿರುತಿಹಂ ಭೂವರಂಗೆ ॥ ೩ ॥

ಆ ವೀರವರ್ಮನೀ ಪಾಂಡವನ ಕುದುರೆಗಳ್ ।
ಕಾವ ಪಡೆಸಹಿತ ನಿಜರಾಷ್ಟ್ರಕೈತಂದುವೆಂ ।
ಬೀ ವಾರ್ತೆಯುಂ ಕೇಳ್ದು ನಗುತೆ ಖತಿಗೊಂಡು ಕೃಷ್ಣಾರ್ಜುನರ ಸಾಹಸವನು ॥
ನಾವರಿದುಕೊಂಬೆವಶ್ವಂಗಳಂ ಕಟ್ಟುವುದು ।
ನೀವೆಂದು ಕಳುಪಲಾ ನೃಪನ ಪರಿವಾರಂ ಮ ।
ಹಾ ವಿಭವದಿಂದೆ ಕರಿ ತುರಗ ರಥ ಪಾಯದಳಮೊತ್ತರಿಸೆ ಪೊರಮಟ್ಟುದು ॥ ೪ ॥

ಸುಲಭನೆಂದನುಪಮು ಸುಫಾಲನೆಂದುನ್ನತ ಕು।
ಪಲನೆಂದು ನೀಲನೆಂದಗ್ಗದ ಸರಳನೆಂದು ।
ಬಲವಂತರಿವರ್ೈವರಾ ನೃಪನ ಸೂನುಗಳ್ ಪೊರಮಟ್ಟು ಸೇನೆ ಸಹಿತ ॥
ಕೆಲವರಿದಡರ್ದು ಕೈದುಡುಕಿ ತುಸ ಮಾತ್ರವೆನೆ ।
ಫಲುಗುಣನ ತುರಗಂಗಳಂ ತಂದು ನಿಮಿಷದೊಳ್ ।
ನಿಲಿಸಿದರ್ಪಿತನ ಸನ್ನಿಧಿಯೊಳದನರ್ಜುನನ ಪಡೆ ಕಂಡು ಕವಿದುದೊಡನೆ ॥ ೫ ॥

ಮೋಹರದ ಮುಂದೆ ನಡೆತರುತಿರ್ದ ಕಲಿ ಬಭ್ರು ।
ವಾಹನಂ ಕೇಳ್ದು ಕಡುಗೋಪದಿಂದೊದಗಿ ಬಂ ।
ದಾಹವಕೆ ಶಂಖನಾದಂಗೆಯ್ಯೆ ಬೆದರಿತು ಜಗತ್ತ್ರಯಂ ಪರಬಲದೊಳು ॥
ಸಾಹಸಿಗಳುಡಗಿದರ್ ಬಳಿಕೆರಡು ಚೂಣಿಗಳ ।
ಕಾಹುರದ ಕಲಿಗಳೊಡವೆರಿಸಿ ಹೊಯ್ದಾಡಿದರ್ ।
ಬಾಹು ನಖ ಮುಷ್ಟಿ ಕೇಶಾಕೇಶಿ ಮಲ್ಲಯುದ್ಧದ ಹತಾಹತಿಗಳಂದೆ ॥ ೬ ॥

ಬಳಿಕೆರಡು ಕಡೆಯ ಭಟರುಬ್ಬರದೊಳುಬ್ಬರದೊ ।
ಳೆಳಸಿ ಹೊಯ್ದಾಡುತಿರಲಾಚೆಯಿಂದೀಚೆಯಿಂ ।
ತಳತಂತ್ರಮೊಡನೊಡನೆ ಮುಗ್ಗಿದುದು ಮಗ್ಗಿದುದು ಬಹಳ ಕೋಲಾಹಲದೊಳು ॥
ಖಳಿಕಟಿಲು ಖಟಿಲೆಂಬ ರವದಿಂದೆ ಜವದಿಂದೆ ।
ಕಳವರಿದು ಘೋರಪ್ರಹಾರದಿಂ ವೀರದಿಂ । [॥ ೭ ॥
ಬಳಸಿ ಬಿದ್ದುದು ಮಂದಿ ಹೆಣಮಯದ ರಣಮಯದ ರೌಕುಳದ ರಚನೆ ಮೆರೆಯೆ॥

ಮತ್ತೆ ಪುರದಿಂದಯುತ ನಿಯುತ ಸಂಖ್ಯೆಯ ರಥವ।
ಮೊತ್ತದಿಂ ಕುದುರೆ ಮಂದಿಗಳ ಸಂದಣಿಗಳಿಂ ।
ಮತ್ತಗಜ ಘಟೆಗಳಂದಾನೃಪನ ಸುತರ್ೈವರುಂ ಪಚಾರಿಸುತ ಬಂದು ॥
ಒತ್ತಾಯಮಂ ಮಾಡೆ ಬಭ್ರುವಾಹಂ ಕನ ।
ಲ್ದುತ್ತುಂಗ ಚಾಪದಿಂ ಕಣೆಗರೆಯುತಿರಲನಿಬ ।
ರೆತ್ತಲಡಗಿದರೊ ಪೇಳೆನೆ ಮಡಿದುದರಿಚಾತುರಂಗಮದನೇವೇಳ್ವೆನು ॥ ೮ ॥

ಕಲಿ ಬಭ್ರುವಾಹನನ ಕೋಲ್ಗಳಿಂ ನಿಜಸೇನೆ ।
ಖಿಲಮಾಗುತಿರೆ ಕೇಳ್ದು ವೀರವರ್ಮಂ ತಾನೆ ।
ಬಲ ಸಹಿತ ಪೊರಮಟ್ಟು ತನಗಳಿಯನಾಗಿರ್ದ ಕಾಲಂಗೆ ತೋರಿಸಲ್ಕೆ ॥
ಕೊಲತೊಡಗಿದಂ ಬಳಿಕ ಧರ್ಮರಾಜಂ ಮುಳಿದು ।
ಫಲುಗುಣನ ತಳತಂತ್ರಮಂ ತನ್ನ ಮಾವಂಗೆ ।
ಗೆಲವಾಗಬೇಕೆಂದು ಜೀವಿಗಳ ವಧೆಗೆ ಜವನಳಕುವನೆ ಜಗದೊಳೆನಲು ॥ ೯ ॥

ಎಂದಿರ್ದೊಡಂ ಪ್ರಾಣಿಗಳನೆಲ್ಲರುಂ ಕೊಲ್ವ ।
ದಂದುಗಂ ತನಗೆ ಬಿಡದೆಂದು ಮುಳಿದಂತಕಂ ।
ಬಂದು ಪೊಕ್ಕನೊ ಕಿರೀಟಿಯ ದಳವನೆನೆ ಹತಾಹತಿಗಳಂ ಮಾಡುತಿರಲು ॥
ನಿಂದು ಕಾದುವರಿಲ್ಲದಂ ಕಂಡು ಪಾರ್ಥ ಮು।
ಕುಂದನಂ ಬೆಸಗೊಂಡನೆರೆ ದೇವ ಸೈನ್ಯಮಂ ।
ಮುಂದುಗೆಡಿಸುವ ಪರಾಕ್ರಮದ ಕಟ್ಟಾಸುರದ ವೀರನಿವನಾವನೆಂದು ॥ ೧೦ ॥

ತಾತ ಕೇಳ್ಮೈ ಪಾರ್ಥ ನಿನಗೆ ಹಿರಿಯಯ್ಯನಹ
ನೀತಂ ಕಣಾ ಧರ್ಮರಾಜ ನೀ ನೃಪನ ಜಾ।
ಮಾತನಾಗಿರ್ದಪಂ ಮಾವಂಗೆ ಹಿತವಾಗಿ ನಮ್ಮ ಚಾತುರ್ಬಲವನು ॥
ಘಾತಿಸುವನೆಂದು ಹರಿ ನುಡಿದೊಡೆ ಧನಂಜಯನಿ ।
ದೇತಕೆ ಮಹೀಪತಿಗೆ ತಾನಳಿಯನಾದನೀ ।
ಭೂತಳದೊಳಿದನರಿಪದೇಕೆಂದು ಬೇಡಿಕೊಳಲಸುರಹರನಿಂತೆಂದನು ॥ ೧೧ ॥

ಆಲಿಸಾದೊಡೆ ಪಾರ್ಥ ವೀರವರ್ಮಕ ಮಹೀ।
ಪಾಲಕನ ತನುಜೆ ಮಾಲಿನಿಯೆಂಬ ನಾಮದಿಂ।
ದಾಲಯದೊಳಿರುತಿರ್ದೊಡಾದುದಾ ಕನ್ನಿಕೆಗೆ ಯೌವ್ವನಪ್ರಾಪ್ತಿ ಬಳಿಕ॥
ಬಾಲಕಿಗೆ ಪತಿಯಾಗಬೇಕೆಂದು ನರನಾಥ।
ನಾಲೋಚಿಸಿದೊಡಾಕೆ ಪಿತನೊಡನೆ ಮಾನವರ ।
ಮೇಲೆನಗೆ ಮನವೆರಗದೆನಲವಂ ಮತ್ತೆ ವರನಾರೆಂದೊಡಿಂತೆಂದಳು ॥ ೧೨ ॥

ಬೊಪ್ಪ ಕೇಳ್ ಮನುಜರ್ಗೆ ಮರಣ ಮೆಂದಿರ್ದೊಡಂ।
ತಪ್ಪದದರಿಂದೆ ಮಾನವರ ಪಾಣಿಗ್ರಹಣ ।
ಕೊಪ್ಪೆನಾಂ ಪತಿಯೊಳುರಿವುಗವೇಳ್ಪುದಲ್ಲದೊಡೆ ವಿಧವೆಯಾಗಿರವೇಳ್ಪುದು॥
ಅಪ್ಪುವೊಡೆ ನಿಜಕಾಂತನಿಲ್ಲದೊಡೆ ಮನ್ಮಥಂ।
ನಿಪ್ಪಸರದಿಂದಿಸುವ ಕುಸುಮಾಸ್ತ್ರ ಕನ್ಯರಂ।
ಬಪ್ಪನರಕವ ನರಿಯದೊಡಗೂಡುವೇಳ್ಪುದಿದಕಂಜುವೆಂ ತಾನೆಂದಳು ॥ ೧೩ ॥

ನಿಜನಾಥನಿರ್ದಲ್ಲಿ ಮರಣವಾದೊಡೆ ಪುಣ್ಯ ।
ಮಜನಾದರಿಪನವನ ಕೂಡೆ ತನ್ನಂಗಮಂ।
ತ್ಯಜಿಸಿದೊಡೆ ವಿಧವೆಯಾದೊಡೆ ಸತಿಗೆ ಪಾತಕಂ ಬಂದಲ್ಲದಿರದು ಬಳಿಕ।
ಪ್ರಜೆಗಳಂ ಪಡೆದು ಸದ್ಗತಿಗೈದವೇಳ್ಪುದಿದು ।
ರುಜುವಲ್ಲ ಮಾನುಷ್ಯಮಾರ್ಗಮಿದಕಾರದಾಂ।
ಭಜಿಸುವೆಂ ಧರ್ಮರಾಜನ ನೆನ್ನನಾತಂಗೆ ಕುಡು ಮದುವೆಯುಹೆನೆಂದಳು ॥೧೪॥

ಮೃತರಾದೊಡವನ ಪೊರೆಗೈದುವರ್ ಸುಕೃತ ದು ।
ಷ್ಕೃತವನಾತನೆ ಬಲ್ಲನದರಿಂದೆ ತನಗೆ ರವಿ।
ಸುತನೆ ವರನಾದಪಂ ವ್ರತ ದಾನ ಜಪತಪದೊಳಾತನಂ ಮೆಚ್ಚಿಸುವೆನು ॥
ಅತಿಶಯಮಿದೆನ್ನದಿರ್ ನಿನ್ನ ಪುಣ್ಯದ ಫಲಂ।
ಪ್ರತಿಕೂಲಮಾಗದೆನಗಿನ್ನು ವೈವಸ್ವತಂ ।
ಪತಿಯಾಗದಿರನವನ ಕಾಯಮಂ ತಳೆದು ಜನಪಡೆದಪೆಂ ತಾನೆಂದಳು ॥ ೧೫ ॥

ಇಂತೆಂದು ಮಾಲಿನಿ ಮಹೀಪತಿಗೆ ವಿನಯದಿಂ ।
ದಂತಸ್ಥಮಾಗಿಹ ಮನೋರಥವ ನೊರೆದಿನ್ನು ।
ಸಂತತಂ ಬಿಡದೆ ನಾನಾವಿಧದ ಪುಣ್ಯ ಕರ್ಮಂಗಳಂ ನೀನೇ ರಚಿಸಿ ॥
ಎಂತಾದೊಡಾಂ ಧರ್ಮರಾಜಂಗೆ ಮದುವೆಯು ।
ಪ್ಪಂತೆ ಮಾಡೆಂದು ಕಾಲ್ಗೆರಗಿದೊಡೆ ತನುಜೆಯಂ ।
ಸಂತೈಸಿ ತೊಡಗಿದಂ ಯಮಸೂಕ್ತದಿಂದ ವೈವಸ್ವತ ಪ್ರಾರ್ಥನೆಯನು । ೧೬ ॥

ಅಂದು ಮೊದಲಾಗಿ ಮಾಲಿನಿ ದಿವಾರಾತ್ರಿಯೊ ।
ಳ್ಕುಂದದೆ ಕೃತಾಂತನಂ ನಾನಾ ವಿಧಾನಂಗ ।
ಳಿಂದೆ ಪೂಜಿಸುತಿರ್ದಳನ್ನೆಗಂ ದಿನದಿನಕೆ ಯೌವನಂ ಪ್ರಬಲಮಾಗೆ ॥
ಇಂದುವದನೆಯ ನೆನಹಿಗೊಳಗಾಗಿ ತರಣಿಜಂ ।
ಬಂದು ಮೈದೋರದಿರೆ ಧರ್ಮದ ಸಹಾಯಕ್ಕೆ ।
ಮುಂದುವರಿದಮರಮುನಿ ನಾರದಂ ತಿಳಿದನೀ ವೃತ್ತಾಂತಮಂ ಮನದೊಳು ॥೧೭॥

ನಾರದ ಮುನೀಶ್ವರಂ ಕಾಲನಲ್ಲಿಗೆ ಬಂದು ।
ವೀರವರ್ಮಕ ನೃಪನ ತನುಜೆ ಮಾಲಿನಿಯಂ ವಿ ।
ಚಾರಿಸದೆ ಸುಮ್ಮನಿರ್ದಪರೆ ನೀಂ ಧರೆಯ ಮಾನವರನೊಲ್ಲದೆ ನಿನ್ನನು ॥
ಹಾರೈಸಿ ಪತಿಯಾಗದೇಕೆಂದು ಭಜಿಸುವಳ್ ।
ಚಾರಿತ್ರ ಗುಣ ಶೀಲ ಸತ್ಯ ಧರ್ಮಂಗಳಿಂ ।
ಸಾರಸ್ವತಾಖ್ಯ ಪುರಮಂ ಪಾವನಂಗೈವಳಾಕೆಯಂ ವರಿಸೆಂದನು ॥ ೧೮ ॥

ನಿಜವಾಗಿ ಮನದೊಳನ್ಯವನುಳಿದು ತನ್ನನೇ ।
ಭಜಿಪ ಶರಣಾಗತರ ನಾದರಿಸದಿರ್ದಪರೆ ।
ಸುಜನರೆಲೆ ತರಣಿಸುತ ನಾಲ್ಕು ಚರಣವನೂರಿ ನಡೆವ ಧರ್ಮದೊಳಡರ್ದು ॥
ಪ್ರಜೆಗಳಿಂದೆಸೆವ ಸಾರಸ್ವತ ಪುರಕ್ಕಾ ಮ ।
ನುಜ ವೇಷಮಂ ತಾಳ್ದು ನೀಂ ಪೋಗಿ ವರಿಸು ಭೂ ।
ಭುಜ ಕುವರಿಯನೆಂದೊಡೊಪ್ಪಿ ವೈವಸ್ವತಂ ಕಳುಹಿದಂ ಸುರಮುನಿಯನು । ೧೯ ॥

ಅಸ್ವಭಾವಕಮಲ್ಲ ನೈಜಮಿದು ತನಗೆನೆ ತ ।
ಪಸ್ವಿಗಳ ಮೌನಿಮಣಿ ನಾರದಂ ಪೋಗಿ ವೈ ।
ಪಸ್ವತಂಗರುಪಿ ಮಾಲಿನಿಯ ಭಾಪವನಲ್ಲಿ ಬೀಳ್ಕೊಂಡು ಖೇಚರದೊಳು ॥
ಸುಸ್ವರದ ವೀಣೆವಿಡಿದಾನಂದದಿಂದೆ ಸಾ।
ರಸ್ವತ ಪುರಕೆ ಬಂದು ಕಾಲನಾಡಿದುದಂ ಯ।
ಶಸ್ವಿಯಾಗಿಹ ವೀರವರ್ಮನಂ ಕಂಡು ಸತ್ಕೃತನಾಗಿ ವಿವರಿಸಿದನು ॥ ೨೦॥

ಧರ್ಮರಾಜನ ಪೊರಗೆ ಪೋಗಿರ್ದನೆಲೆ ವೀರ।
ವರ್ಮ ಕೇಳಿನ್ನೆಗಂ ನೀನಾರ್ಜಿಸಿದ ಪುಣ್ಯ।
ಕರ್ಮ ಫಲದಿಂದೆ ವೈಶಾಖ ಮಾಸದ ಶುಕ್ಲಪಕ್ಷದೊಳ್‌ಧರೆಗೆ ಬಂದು ॥
ನಿರ್ಮಲಚರಿತ್ರೆ ತವ ತನುಜೆ ಮಾಲಿನಿಯಂ ಜ।
ನರ್ಮೆಚ್ಚೆ ಮದುವೆಯಾದಪನೆಂದನಂತಕಂ ।
ಪೆರ್ಮೆಯಿಂದಾದರಿಸುವಂತೆ ಸಂಪಾದಿಸುವುದೆಂದು ಮುನಿಪತಿ ನುಡಿದನು ॥ ೨೧॥

ಸುರಮುನಿಯ ವಾಕ್ಯಮಂ ಕೇಳಿದಂ ತಾಳಿದಂ ।
ಪರಿತೋಷಮಂ ಭೂಪನೊಲವಿಂದೆ ನಲವಿಂದೆ ।
ಪುರವರವನೈದೆ ಸಿಂಗರಿಸಿದಂ ತರಿಸಿದಂ ಬೇಕಾದ ವಸ್ತುಗಳನು ॥
ಸರಸ ಗುಣ ಸೌಂದರ್ಯ ಶಾಲಿನಿಗೆ ಮಾಲಿನಿಗೆ ।
ತರಣಿಜನಕೊಡೆ ವೈವಾಹಮುಂ ಮೋಹಮುಂ ।
ದೊರಕೊಂಬುದೆಂದು ವಿಸ್ತರಿಸಿದಂ ಬರಿಸಿದಂ ಬಾಂಧವರನುತ್ಸವದೊಳು ॥ ೨೨॥

ರಿಪುಮಥನ ಕೇಳಿತ್ತ ಮಾಲಿನಿಯ ಪರಿಣಯಕೆ ।
ತಪನಜಂ ಪೊರಮಟ್ಟು ತನ್ನ ಮನ್ನಣೆಯವರ ।
ನಪರಿಮಿತ ಪರಿವಾರಮಂ ಕರೆಸಿ ಬಹುದು ನೀವೆಮ್ಮೊಡನೆ ಮದುವೆಗೆನಲು ॥
ಕುಪಿತ ವದನದ ಕೋರೆದಾಡೆಗಳ ಕಾರೊಡಲ ।
ವಿಪರೀತ ವಿಕ್ರಮ ಭಯಂಕರದ ವೀರಭಟ ।
ರುಪಮಿಸುವೊಡರಿದೆನಲ್ ಕ್ಷಯನೆಂಬ ಮಂತ್ರಿಯೊಡನೈತಂದರಾಕ್ಷಣದೊಳು
॥ ೨೩ ॥

ದುರಿತ ಕೋಟಿಗಳೊಡನೆ ಸಂಚಪಾತಕ ಮುಖ್ಯ।
ದೋರ್ಗಳಿಟ್ಟಣಿಸಲಗಣಿತ ರೋಗ ಸಂಕುಲಂ ।
ಬೆರಸಿ ಮಿಗೆ ರಾಜಕ್ಷಯಾದಿ ನಿಖಿಳ ವ್ಯಾಧಿನಾಯಕರ್‌ಬಳಿಸಂದರು ॥
ಉರುತರದ ರುಜೆಗಳರಸಿಯರ ಸಂಖ್ಯಾತದಿಂ।
ನೆರೆದುದು ವಿಷೂಚಿ ಸಂಗ್ರಹಣಿ ಮೊದಲಾದ ಭೀ ॥
ಕರ ವದನೆಯರ ಕೂಡೆ ಬಳಿಕಂತಕಂಗೆ ಬಿನ್ನೈಸಿದಂ ಕ್ಷಯ ಸಚಿವನು ॥ ೨೪ ॥

ದೇವ ನಿಮ್ಮೊಡನೆ ಮದುವೆಗೆ ಬಂದೊಡೆಮಗೆ ಪೇ ।
ದಾವಳಿಯ ಘೋಷ ಶ್ರವಣಮಹುದು ಹೋಮ ಧೂ ।
ಮಾವಲೋಕನಮಹುದು ಪುಣ್ಯಕರ್ಮಿಗಳ ಸೋಂಕಿನಗಾಳಿ ಮೇಲೆಬಹುದು ॥
ಆ ವೀರವರ್ಮಕಂ ಧಾರ್ಮಿಕಂ ಗೋ ವಿಪ್ರ ।
ಸೇವಕಂ ಪ್ರಜೆಗಳುಂ ದ್ವಿಜಹಿತವರತಿ ಶುಚಿಗ ।
ಳಾವೆಂತು ಬಹೆವಲ್ಲಿಗೆಂದೊಡೆ ಕೃತಾಂತಕಂ ಕ್ಷಯಂಗೆ ಮಗುಳಿಂತೆಂದನು ॥ ೨೫ ॥

ಕ್ಷಯ ಕೇಳ್ ಸಮಸ್ತ ಪಾತಕ ರೋಗನಾಯಕರ್ ।
ಭಯಮಯಾಕಾರಂಗಳಂ ಬಿಟ್ಟು ದಿವ್ಯಾಕೃ ।
ತಿಯನಾಂತು ತನ್ನ ಪಟ್ಟಣದೊಳೆಂತನವರತ ಮಿರುತಿರ್ಪರಂತನಿಬರು ॥
ಪ್ರಿಯದಿಂದೆ ಬರಲೆಮ್ಮೊಡನೆ ಮದುವೆಗಾ ಪುರಾ ।
ಶ್ರಯದೊಳಿಹರೆಲ್ಲರುಂ ಪುಣ್ಯಕರ್ಮಿಗಳವರ ।
ನಯನಾವಲೋಕನಕೆ ಸೊಗಸಾಗಬೇಕೆಂದು ವೈವಸ್ವತಂ ನುಡಿದನು ॥ ೨೬ ॥

ಆಲಿಸುವುದೆಲ್ಲರುಂ ಪಾಪಿಗಳ ಕಣ್ಗೆ ತಾಂ ।
ಕಾಲಾಗ್ನಿ ಸದೃಶನಾಗಿರ್ದಪೆಂ ಪುಣ್ಯಾತ್ಮ ।
ರಾಲಿಗಳ್ಗತಿಸೌಮ್ಯನಾಗಿಹೆಂ ನೀವು ಮೆನ್ನಂತೆ ರಮಣೀಯಮಾದ ॥
ಶಾಲಿಸೌಂದರದೆ ರೂಪಂಗಳಂ ತಳೆದು ದಿ ।
ವ್ಯಾಲಂಕೃತಿಗಳಿಂದ ವೀರವರ್ಮಕ ಧರಾ ।
ಪಾಲಕನ ಪಟ್ಟಣಕೆ ಬಹುದೆಂದು ಭೃತ್ಯರ್ಗೆ ತರಣಿಜಂ ನೇಮಿಸಿದನು ॥ ೨೭ ॥

ವಿಜಯ ಕೇಳಿಂತೆಂದು ಬಳಿಕ ದಿವ್ಯಾಕೃತಿಯ ।
ನಿಜಭೃತ್ಯರೊಡನೆ ಶಮನಂ ವೀರವರ್ಮ ಭೂ ।
ಭುಜನ ಪಟ್ಟಣಕೆ ಬರಲಾ ನೃಪನಿದಿರ್ಗೊಂಡು ನಾರದಂ ಮೊದಲಾಗಿಹ ॥
ದ್ವಿಜರ ಮುಂದಗ್ನಿ ಸಾಕ್ಷಿಕದೊಳಾತಂಗೆ ಪಂ ।
ಕಜವದನೆ ಮಾಲಿನಿಯನಿತ್ತು ವಿಧಿ ವಿಹಿತದಿಂ ।
ತ್ರಿಜಗಕಿದು ಪೊಸತೆನೆ ವಿವಾಹಭವನದೊಳಂದು ಮದುವೆಯಂ ಮಾಡಿಸಿದನು॥೨೮॥

ಅಚ್ಚರಿಯೊಳಾದ ವೈವಾಹದುತ್ಸವಕೆ ಸಲೆ ।
ಮೆಚ್ಚಿ ವೈವಸ್ವತಂ ನುಡಿದನೆಲೆ ರಾಯ ನಿ ।
ನ್ನಿಚ್ಛೆ ಯಾವುದು ಬೇಡು ಕುಡುವೆ ನಿನ್ನಲ್ಪಕಾಲಕೆ ಬಹುದು ಮೃತ್ಯು ನಿನಗೆ ॥
ಎಚ್ಚರಿಂದರಿದಿರ್ಪುದೆನೆ ವೀರವರ್ಮಕಂ ।
ನಿಚ್ಚಟದೊಳೀ ಮಗಳನಿತ್ತು ಮಗುಳೀಸಿಕೊಂ ।
ಬಚ್ಚಿಗದ ವರಮದೇಕೆನೆ ಕನ್ಯಾಶುಲ್ಕಮತಿ ದೋಷಕರಮೆಂದನು ॥ ೨೯ ॥

ಎಂದೊಡಂತಕನೆಂದನೆಲೆ ಮಹೀಪಾಲ ನಿನ ।
ಗಿಂದು ಪುರುಷಾರ್ಥಮಲ್ಲೀ ವರಂ ಕರೆದು ಲೇ ।
ಸಿಂದೆ ಕೊಟ್ಟಾತನಂ ವಿಗೆ ಪರಸದಿರ್ದಪನೆ ತೆಗೆದುಕೊಂಡವನಿಳೆಯೊಳು ॥
ಹಿಂದುಗಳೆಯದಿರೆನ್ನ ಮಾತನೆನೆ ಭೂವರಂ ।
ಮುಂದೆ ತನಗಲ್ಪಕಾಲಕೆ ಮೃತ್ಯು ಬಹುದನರಿ ।
ದೊಂದುಪಾಯಾಂತರವ ನೆಣಸಿ ನಸುನಗುತ ಶಮನಂಗೆ ಬಳಿಕಿಂತೆಂದನು ॥ ೩೦ ॥

ಆದೊಡಿಲ್ಲಗೆ ಬರಲಿ ನಿನ್ನೀ ಕೃಪೆಯಿಂದೆ ಮಧು ।
ಸೂದನಂ ತನಗನ್ನೆಗಂ ಮರಣವಾಗದಿರ ।
ಲಾ ದೈತ್ಯಮಥನನಂ ಕಾಣ್ಬ ಪರಿಯಂತರಂ ನೀನುಮೆವ್ವಿಮಾಪುರದೊಳು ॥
ಕಾದುಕೊಂಡಿಹುದೆನ್ನ ನೀವುದೀ ವರವ ನೆನೆ ।
ಸಾದರದೊಳಿತ್ತಂದು ಮೊದಲಾಗಿ ನಾನಾ ವಿ ।
ನೋದದಿಂ ಮಾಲಿನಿಯೊಡನೆ ರಮಿಸುತಿರ್ಪನೀ ಪಟ್ಟಣದೊಳಿನ ತನುಜನು ॥೩೧॥

ಇನ್ನರಿದೆಲೈ ಪಾರ್ಥ ರವಿತನಯ ನೀಪುರದೊ ।
ಳನ್ನೆಗಂ ಬಂದಿರ್ದ ವೃತ್ತಾಂತಮಂ ನೋಡು ।
ತನ್ನ ಮಾವನ ಸಹಾಯಕೆ ನಮ್ಮ ಸೇನೆಯಂ ಸಂಹರಿಸುತಿಹನಿತ್ತಲು ॥
ಸನ್ನದ್ಧನಾಗಿ ತನ್ನಂ ಕಾಣ್ಬ ಲವಲವಿಕೆ ।
ಯಿಂ ನಡೆತಹಂ ವೀರವರ್ಮನೀಕ್ಷಿಸು ಧುರಕೆ ।
ನಿನ್ನ ಕೋದಂಡಮಂ ನುಡಿಸೆನುತ ಹರಿ ಧನಂಜಯನ ರಥಕೈತಂದನು ॥ ೩೨ ॥

ವೀರವರ್ಮನ ಕಾಳೆಗಕ್ಕೆ ಹರಿ ಫಲುಗುಣನ ।
ತೇರನೇರಲ್ಕಂಡು ತಮತಮಗೆ ಕವಿದರ್ ಮ ।
ಯೂರಧ್ವಜಾದಿ ಭೂಪಾಲಕರ್ತೊಲಗಹೇಳಂತಂಕಂ ತಾನಾದೊಡೆ ॥
ನಾರಕಿಗಳಂ ಬಾಧಿಸುವುದಲ್ಲದಸುರ ನಂ ।
ಹಾರಕನ ಸೇವೆಯಂ ಮಾಡುತಿಹ ನಮ್ಮ ಪರಿ ।
ವಾರಮಂ ಕೊಲ್ವೊಡಧಿಕಾರಮೆತ್ತಣದೆನುತೆ ಮುಂಕೊಂಡು ಕವಿದೆಚ್ಚರು ॥ ೩೩ ॥

ಅನಿರುದ್ಧ ಸಾತ್ಯಕಿ ಪ್ರದ್ಯುಮ್ನ ಕೃತವರ್ಮ।
ನಿನಜಸುತ ಗದ ಸಾಂಬ ಹೈಡಿಂಬಿ ಬಭ್ರುವಾ।
ಹನ ಯೌವನಾಶ್ವ ಪ್ರವೀರ ಹಂಸಧ್ವಜ ಸುವೇಗ ಕಲಿ ನೀಲಕೇತು ॥
ಅನುಸಾಲ್ವ ತಾಮ್ರಕೇತನ ಮಯೂರಧ್ವಜರ್।
ತನತನಗೆ ಕಣೆಗರೆಯಲಾ ವೀರವರ್ಮ ನೆ।
ಚ್ಚನಿಬರಂ ಮುರಿದು ಕೃಷ್ಣಾರ್ಜುನರ ಸರಿಸದೊಳ್ ನಿಂದು ನಗುತಿಂತೆಂದನು॥೩೪॥

ಈ ವೀರರೊರ್ವರುಂ ತನಗೆ ಪಾಡಲ್ಲ ರಾ।
ಜೀವ ಲೋಚನ ನಿನ್ನೊಳೀ ನರನೊಳೀ ಧ್ವಜದ।
ಪಾವನಿಯೊಳುರೆ ಕಾದಿ ಮದ್ಭುಜದ ಕಂಡೂತಿಯಂ ಕಳೆಯುವೇಳ್ಪುದೀಗ ॥
ಮೂವರುಂ ತೊಲಗದಿರಿ ಸಾಕೆನುತ ಕೃಷ್ಣಗಾಂ।
ಡೀವಿ ಪವನಜರನಾರೇಳೆಂಟು ಸರಳನೆ।
ಚ್ಚಾವನುಮತೀಶನುಳಿದವರ ನೈದೈದುಬಾಣಂಗಳಿಂ ಘಾತಿಸಿದನು ॥ ೩೫ ॥

ಈತನೀಗಲೆ ದೇವ ವೀರವರ್ಮಕನೆಂಬ।
ಭೂತಳಾಧಿಪನಾದೊಡೊಳ್ಳಿತಿವನತಿ ಬಲಂ ।
ಮಾತುಳನಲಾ ಧರ್ಮರಾಜಂಗೆ ಕಟ್ಟಿಕೊಳಬಹುದಿವಂ ಕುದುರೆಗಳನು ॥
ಘಾತಿಸಿದೊಡೆಮಗೆ ತಪ್ಪಿಲ್ಲಲಾ ಬೆಸಗೊಂಬ ।
ಮಾತಾವುದಶ್ವಂಗಳಂ ಬಿಡದೆ ಭುಜದ ಕಂ ।
ಡೂತಿಯಂ ಕಳೆದಪಂ ಗಡ ನೋಳ್ಪೆನೆನುತ ನರನೆಚ್ಚನಾ ನರಪತಿಯನು ॥ ೩೬ ॥

ಕಟಕಿಯೇಕೆಮ್ಮೊಡನೆ ಪಾಂಡುಸುತ ನೀನೆ ಪಟು।
ಭಟನಪ್ಪೆ ಮೂಜಗಕೆ ಕೃಷ್ಣನ ಸಹಾಯದಿಂ ।
ಘಟಿಸಿದಗ್ಗಳಿಕೆಗೇತಕೆ ಬೆರೆವೆ ಸೈರಿಸೆನುತಾ ನೃಪಂ ಕೋಪದಿಂದೆ ॥
ಚಟುಲ ಚಾಪದೊಳುರುಳ್ಚಿದ ನಂಬನಖಿಳ ದಿ ।
ಕ್ತಟದೊಳ್ ಗಗನ ಮಂಡಲದೊಳಹಿತಬಲದೊಳು।
ತ್ಕಟ ಬಾಣಮಯವಾಗೆ ಹರಿನರ ಕಪೀಂದ್ರ ರಥಾವಾಜಿಗಳ್ ಭ್ರಮಿಸುವಂತೆ॥೩೭॥

ನೆರೆ ಮಂತ್ರಿ ಮಂತ್ರದಿಂ ದಹಿತರುತ್ಸಾಹಮಂ।
ಬರಿಗೈವ ತೆರದಿಂದೆ ನರನವನ ಕಣೆಗಳಂ।
ತರಿದೊಟ್ಟುತಿದರೊಳೇನಾದಪುದು ಸಾಕಿನ್ನು ಬಿಡು ನಮ್ಮ ಕುದುರೆಗಳನು ॥
ಬಿರುನರಳ ಬಿಡೆಯು ಕೆಡೆಗುಡದಿರೊಡಲಂ ಕೆಡೆಯೊ ।
ಳುರುಬೆಗೆರಗದೆ ಹರಿಯದರಿದುಕೊಳ್ಳೆನುತ ಕೋ ।
ಲ್ಗರೆದೊಡಾ ನೃಪತಿ ಪಾರ್ಥನ ಬಾಣಮಂ ಕಡಿದು ನಸುನಗೆಯೊಳಿಂತೆಂದನು॥೩೮॥

ಎಲೆ ಪಾರ್ಥವಿನಯದಿಂ ನೀಂ ಬೇಡಿಕೊಂಡೊಡೆ ಮೊ।
ದಲೆ ಬಿಡುವೆನಶ್ವಂಗಳಂ ಬರಿದೆ ಕಾಳೆಗಕೆ ।
ಬಲ ಸಹಿತ ಬಂದೆ ನಮ್ಮೊಡನೆ ನೀನುರು ಬೆಗೆರಗುವರೆ ನೆಲದಾನ್ಮಾರಕಟಾ॥
ಕಲಿತನದ ಪಂತಮುಂಟಾದೊಡಿದು ಸಮರಮೈ ।
ಸಲೆ ಕಾಣಬಹುದೆನುತ ಕಣೆಗಳರವತ್ತರಿಂ ।
ಫಲುಗುಣ ಮುರಧ್ವಂಸಿ ವಾನರ ಹಯಂಗಳಂ ಕೆಡೆಯೆಚ್ಚು ಬೊಬ್ಬಿರಿದನು ॥೩೯॥

ಅರಸ ಕೇಳವನ ಬಾಣದ ಘಾತಿಗರ್ಜುನಂ।
ಕೊರಗಿದಂ ಮೇಲೆ ಪಲ್ಗಿರಿದನಾ ಕಪಿ ಚಕ್ರ।
ಧರನೈದೆ ಕೈಮರೆದು ವಾಘೆಯಂ ಸಡಲಿಸೆ ರಥಾಶ್ವಂಗಳಸ್ತ್ರಹತಿಗೆ॥
ತರಹರಿಸಲರಿಯದೋಡಿದುವೊಂದು ಕಡೆಗೆ ಬಳಿ।
ಕುರವಣಿಸಿ ಪಾಂಡವನ ಪತಾಕಿನಿಯು ಸುಭಟ ಪ್ರ।
ಕರವ ನರೆಯಟ್ಟಿದಂ ತಿರುತಿರುಗಿ ಚಾರಿವರಿದೇವೇಳ್ವೆನದ್ಭುತವನು ॥ ೪೦ ॥

ಅಭ್ರದೊಳ್ ಮಿಂಚು ಸುಳಿವಂತೆ ಪರಬಲದೊಳ್ ಪ॥
ರಿಭ್ರಮಿಸಿತವನ ರಥಮೆರಗುತಿಹ ಸಿಡಿಲಂತೆ।
ವಿಭ್ರಾಜಿಸಿತು ಘೋಷವೊಡನೆ ಬಿರುವಳೆಯಂತೆ ಕರೆದುವಂಬಿನ ಸರಿಗಳು॥
ಬಭ್ರುವಾಹನ ಮಯೂರಧ್ವಜಾದಿಗಳಾಹ।
ವ ಭ್ರಷ್ಟರಾದರಿದಕರ್ಜುನಂ ರೋಷಬ।
ದ್ಧ ಭ್ರುಕುಟಿ ಮುಖಭಯಂಕರನಾಗಲಸುರಾರಿ ಕಂಡು ಬಳಿಕಿಂತೆಂದನು ॥ ೪೧ ॥

ಖಾತಿ ಬೇಡೆಲೆ ಪಾರ್ಥ ನಿನಗೆನಗೆ ಮಣಿಯಂ ಮ।
ಹಾತಿಬಲ ನೆಲ್ಲರಂತಲ್ಲ ದಟುಪಾಯಂಗ।
ಳೀತನೊಳ್ ಕೊಳ್ಳದು ಜಯದ್ರಥನ ತಲೆಯನರಿದಂಬಿವನೆಡೆಗೆ ಪೋಗದು॥
ಸೂತಜನ ರಥದ ಗಾಲಿಗೆ ಸಿಲ್ಕನಿಕ್ಕಿದ ಮ।
ಹೀತಳದೊಳೆದರಿಲ್ಲಿವಂಗೆ ನಾಂ ಮುಳಿದೊಡೆ ಸು।
ನೀತನ ಶಿರಚ್ಛೇದನಂಗೈದ ಚಕ್ರಮಿವನಂ ಮುಟ್ಟದೇವೇಳ್ವೆನು ॥ ೪೨ ॥

ಇಂತೆಂದು ಹರಿ ಪಾರ್ಥನಂ ನಿಲಿಸಿ ನೋಡಿ ಹನು।
ಮಂತನಂ ಕರೆದು ನೀನೀತನ ವರೂಥಮಂ।
ತೊಂತಿ ವಾಲಾಗ್ರದಿಂ ಗಗನದೊಳ್ ತಿರುಪಿಡು ಮಹಾರ್ಣವಕೆ ಪೋಗಲೆನಲು॥
ಎಂತಿವನ ರಥಮನೀಡಾಡುವೆಂ ದಶವದನ।
ನಂತೆಯುಂ ಜಂಬುಮಾಲಿಯವೊಲುಂ ರಾಮಸೀ।
ಮಂತಿನಿಗೆ ಕಾವಲಿರ್ದಸುರೆಯರ ತೆರದೊಳಂ ಖಳನೀತನಲ್ಲೆಂದನು ॥ ೪೩ ॥

ವಾಯುಸುತ ಶಂಕೆ ಬೇಡೆನ್ನಾಜ್ಞೆ ಧರ್ಮದ ಸ।
ಹಾಯಮಿದು ನಿನಗೆಮಗೆ ಬೇಕಾದ ಕಜ್ಜಮೆಂ।
ದಾ ಯದುಕುಲಾಧಿಪಂ ನೇಮಿಸಿದೊಡಾ ಕಪಿವರಂ ತನ್ನ ವಾಲಧಿಯನು॥
ಆಯತಂಗೈದು ಸಾರಥಿ ಕುದುರೆಗಳ್ ಸಹಿತ।
ಜೇಯನಾಗಿಹ ನೃಪನ ರಥಮಂ ಶೋಡದರ್ಾಂಜ।
ನೇಯಂ ನಭಸ್ಥಳಕೆ ಚಿಗಿದಂ ಪಯೋನಿಧಿಗೆ ಬಿಸುಡುವುದ್ಯೋಗದಿಂದೆ ॥ ೪೪ ॥

ಅನ್ನೆಗಂ ತನ್ನ ರಥಮಂ ಬಿಟ್ಟು ವೀರವ ।
ರ್ಮನರನ ಮಣಿಯ ವರೂಥವುಂ ತೆಗೆದು ಕೂಂ ।
ಡುನ್ನತ ಪರಾಕ್ರಮದೊಳಾಗಸದೆಡೆಗೆ ಚಿಗಿದು ಬಂದೆಲೈ ವಾನರೇಂದ್ರ ॥
ನಿನ್ನೊಳಿರ್ದಪುದು ಬರಿದೇರೆನ್ನ ಕೈಯೊಳಿದೆ ।
ಪನ್ನಗಾರಿಧ್ವಜ ಕಿರೀಟಿಗಳ್ವೆರಸಿರ್ದ ।
ಸನ್ನುತಸ್ಯಂದನಂ ನೋಡೆಂದು ಗಗನದೊಳ್ ಕಪಿಯಂ ಪಚಾರಿಸಿದನು ॥ ೪೫ ॥

ಎಲ್ಲಿಗೆನ್ನ ವರೂಥವಂ ಬೀರ್ವೆ ಕೀಶ ನೀ ।
ನಲ್ಲಿಗೀಡಾಡುವೆಂ ಸವ್ಯಸಾಚಿಯ ರಥವ ।
ನಲ್ಲದೊಡೆ ಪಾಲ್ಗಡಲ ಶೇಷ ತಲ್ಪದೊಳೆ ಮೆರೆವಿಂದಿರಾದೇವಿ ತನ್ನ ॥
ವಲ್ಲಭನಗಲ್ದು ಪಾರ್ಥನ ಭಕ್ತಿಗೊಲಿದಿರಲ್ ।
ತಲ್ಲಣಿಸಿ ವಿರಹದಿಂ ತಪಿಸುತಿಹಳಾ ರಮೆಗೆ ।
ನಲ್ಲನೊಡಗೂಡುವಂತಮೃತಾಬ್ಧಿಗಿಡುವೆನೆಂದುಬ್ಬಿದಂ ಭೂಪಾಲನು ॥ ೪೬ ॥

ಸಾಗರಕೆ ಲಂಘಿಸಿದ ಸಾಹಸಕೆ ಬೆರೆವೆ ನೀ ।
ನಾಗಸದೊಳಾದಿತ್ಯನಿರೆ ಚಂದ್ರನೊಪ್ಪುವನೆ ।
ಪೋಗೆಲೆ ಮರುಳೆ ತನ್ನ ಮುಂದಣ ಪರಾಕ್ರಮಿಗಳುಂಟೆ ಮೂಜಗದೊಳೆನುತೆ ॥
ತಾಗಿದಂ ನೃಪತಿ ಹನುಮಂತನಂ ಬಳಿಕ ನಾ ।
ವೀಗಳವರಂತಲ್ಲ ತಾನೆತನ್ನಂ ಪೊಗಳು ।
ವೀ ಗರುವಿಕೆಯ ನರಿಯೆವತಿವೃದ್ಧರೆಂದೆರಗಿದಂ ಕಪಿ ಮಹೀಶ್ವರನನು ॥ ೪೭ ॥

ಆ ವೀರವರ್ಮಂ ಕನಲ್ದಾಗ ಪಾರ್ಥ ರಾ ।
ಜೀವಾಕ್ಷ ಕಪಿಗಳಂ ಕರೆದು ಲೋಕತ್ರಯಕೆ ।
ಮೂವರುಂ ನೀವತಿಪರಾಕ್ರಮಿಗಳಾನೊರ್ವನಾಹವದೊಳೆನ್ನ ಕೂಡೆ ॥
ಸಾವಧಾನದೊಳೊದಗಿದೊಡೆ ಕಾಣಬಹುದೆನುತ ।
ಪಾವನಿಯ ನಡಸಿ ಪೊಯ್ದೊಡೆ ಮುಷ್ಟಿಘಾತದಿಂ ।
ದಾ ವಾಯುಜಂ ತೊಲಗಲಸುರಹರನಾ ನೃಪನ ವಕ್ಷಸ್ಥಳವನೊದೆದನು ॥ ೪೮ ॥

ಹರಿಯ ಪದಘಾತಿಗಾ ನೃಪತಿ ಮೂರ್ಛಿತನಾಗಿ ।
ಧರೆಗುರುಳ್ದೊಡನೆ ಚೇತರಿಸುತೆಲೆ ವೀರರ್ಕ ।
ಳಿರ ನೀವು ಮೂವರಾನೊರ್ವನೆಂದಾಹವದೊಳುರವಣಿಸಬೇಡಿ ಬರಿದೆ ॥
ಮುರಹರನ ದರ್ಶನಂ ದೊರೆಕೊಳ್ವಿನಂ ತನಗೆ ।
ಮರಣಮಿಲ್ಲಂತಕ ವರದಿಂದೆ ಬಳಿಕೀಗ ।
ಪುರುಷೋತ್ತಮನ ಪದಸ್ಪರ್ಶಮಾಯ್ತೆನಗಿನ್ನು ಮೃತ್ಯುವೆತ್ತಣದೆಂದನು ॥ ೪೯ ॥

ಎಂದೊಡಸುರಾಂತಕಂ ನೋಡಿದಂ ಕಾರುಣ್ಯ।
ದಿಂದೆ ನಿಜ ರಥದೊಳಿದಿರಾಗಿ ಸಮರಕೆ ಮತ್ತೆ ।
ನಿಂದಿಹ ನರೇಂದ್ರನಂ ನುಡಿದಂ ಕಿರೀಟಿಗೆಲೆ ಪಾರ್ಥ ನಿನಗೆನಗಿವನೊಳು ॥
ಕುಂದದೆ ಸಹಸ್ರ ವರ್ಷಂ ಪೋಣರ್ದೊಡೆ ತೀರ ।
ದೆಂದಿಗುಂ ಲಘು ಹಸ್ತನತಿಬಲಂ ಶಸ್ತ್ರಾಸ್ತ್ರ ।
ದಿಂದಧಿಕ ನಖಿಳ ವೀರರ್ಕಳಂ ಗೆಲ್ದನಿವನಾಂ ತೋಷಿಸುವೆನೆಂದನು ॥೫೦॥

ದೇವ ನೀನಾವನಂ ತೋಷಿಸುವೆ ಜಗದೊಳವ।
ನೇ ವಿಜಯಿ ಮೇಣವನೆ ಬಲವಂತನೆಂದೊಡಿ ।
ನ್ನೀ ವಸುಮತೀಶ್ವರಂ ಧುರದೊಳೆನ್ನಾಳ್ತನಕೆ ಸೋಲ್ದಪನೆ ನಾಕಿದೆಂದ
ಶ್ರೀವಲ್ಲಭನೊಳರ್ಜುನಂ ಪೇಳ್ದೊಡಾ ಮಾತ।
ನಾ ವೀರವರ್ಮಕಂ ಕೇಳ್ದು ಮಿಗೆ ಮೆಚ್ಚಿ ಗಾಂ ।
ಡೀವಿಗಭಿವಂದಿಸಿ ಬೆರಳ್ಗೊನೆಯ ನೊಲೆದೊಲೆದು ಕೊಂಡಾಡುತಿಂತೆಂದನು॥೫೧॥

ಎಲೆ ಧನಂಜಯ ಚರಾಚರಮೆಲ್ಲಮಂ ಬಾಹು ।
ಬಲದಿಂದೆ ಗೆಲ್ವೆನೆಂಬಗ್ಗಳಿಕೆಯಂ ಬಿಟ್ಟು ।
ಜಲಜಾಯತಾಕ್ಷನಾಡಿದ ಮಾತಿಗನುಸಾರಿಯಾಗಿ ನೀನೆಂದ ನುಡಿಗೆ ॥
ಸಲೆ ಸೊಗಸಿತೆನ್ನ ಮನವಿನ್ನು ಕಾದುವೆನೆಂಬ ।
ಚಲಮಿಲ್ಲ ತನಗೆನುತ ಕರದ ಚಾಪವನಿಳುಹಿ ।
ನಲವಿಂದೆ ಬಂದು ಕೃಷ್ಣನ ಪಾದಕೆರಗಿದಂ ವೀರವರ್ಮಂ ಪ್ರಿಯದೊಳು ॥೫೨॥

ತಾಮರಸ ಲೋಚನಂ ತೆಗೆದು ಬಿಗಿದಪ್ಪಿದಂ ।
ಪ್ರೇಮದಿಂದಾ ನೃಪನನರ್ಜುನಂ ಮನ್ನಿಸಿದ ।
ನಾ ಮಯೂರಧ್ವಜಾದಿಗಳೆಲ್ಲರುಂ ಕೂಡೆ ಭಾವಿಸಿದರುಚಿತದಿಂದೆ ॥
ಜಾಮಾತನಾಗಿರ್ದ ವೈವಸ್ವತಂ ಬಂದು ।
ಭೂಮಿಾಶನಂ ಮುಕುಂದನ ಕೈಯೊಳಿತ್ತು ಸು ।
ತ್ರಾಮಸುತ ಮುಖ್ಯರಭಿವಂದಿಸಲ್ಪರಸಿ ನಿಜನಗರಕ್ಕೆ ಬೀಳ್ಕೊಂಡನು ॥೫೩॥

ಬಳಿಕವಂ ತನ್ನ ತನು ದೇಶ ಕೋಶಂಗಳಂ ।
ಬಳುವಳಿಗಳಂ ಮಾಡಿ ತುರಗಂಗಳಂ ತರಿಸಿ ।
ನಳಿನೋದರನ ಕೈಯೊಳಿತ್ತು ಮಿಗೆ ಭಕ್ತಿಯಿಂದುಪಚರಿಸಿ ಮುರಹರನನು ॥
ಉಳಿದ ನೃಪರೆಲ್ಲರಂ ಸತ್ಕರಿಸಿ ವಿನಯದಿಂ ।
ಪೊಳಲೊಳರುದಿನಮಿರಿಸಿಕೊಂಡಿರ್ದು ಪಾರ್ಥನಂ ।
ದಳ ಸಹಿತ ಪೊರಮಟ್ಟನುತ್ಸವದೊಳಶ್ವರಕ್ಷೆಗೆ ಧನಂಜಯನ ಕೂಡೆ ॥೫೪॥

ಭದ್ರ ಲಕ್ಷಣದಿಂದೆ ಶುಭ್ರಮಾಗಿಹ ಕರಿಗ ।
ಳದ್ರಿ ಸಮಮಾದುವೆಪ್ಪತ್ತೊಂದು ಸಾವಿರವ ।
ನುದ್ರೇಕದತಿವೇಗದೇಕ ಕರ್ಣ ಶ್ಯಾಮದಗಣಿತ ಸುವಾಜಿಗಳನು ॥
ವಿದ್ರುಮಾಧರೆಯರ ಸಹಸ್ರಮಂ ನವ ವಿಧದ ।
ಸದ್ರತ್ನ ರಾಜಿಗಳನೆಂಟೆಡೆಯೊಳೊಗೆದ ಎಲ ।
ಸದ್ರುಚಿರ ಮುಕ್ತಾಫಲಂಗಳಂ ಕೊಟ್ಟು ನರನೊಡನವಂ ಪೊರಮಟ್ಟನು ॥೫೫॥

ಸಾರಸ್ವತಾಖ್ಯ ಪುರದಿಂದೆ ಬಳಿಕರ್ಜುನಂ ।
ವೀರವರ್ಮ ಕ್ಷಿತಿಪನಂ ಕೂಡಿಕೊಂಡಾ ಮ ।
ಯೂರಧ್ವಜಾದಿಗಳ್ವೆರಸಿ ಪಡೆ ಸಹಿತ ಕುದುರೆಗಳೊಡನೆ ನಡೆಯೆ ಮುಂದೆ ॥
ಘೋರನಕ್ರಾಕುಲದ ಪೆರ್ಮಡುಗಳಿಂದೆ ಗಂ ।
ಭೀರಮಾಗಿಹ ಮಹಾನವಮಿದುರ್ದೊಂದದಂ ॥
ಭೂರಿಪೋತಪ್ರಕರದಿಂ ಕಳೆದನಮರನಗರೀ ಶ್ರೀಶನಾಜ್ಞೆಯಿಂದೆ ॥ ೫೬ ॥

ಇಪ್ಪತ್ತೆಂಟನೆಯ ಸಂಧಿ

ಸೂಚನೆ॥ ಇಂದ್ರಜಂ ತುರಗಂಗಳಂ ಕಾಣದಿರೆ ನಾರ ।
ದಂ ದೃಷ್ಟಿಗೋಚರಕ್ಕೈದಿ ವಿಸ್ತರಿಸಿದಂ ।
ಚಂದ್ರಹಾಸ ಕಥಾವಿಶೇಷಮಂ ಕರ್ಣ ಪೀಯೂಷಮಂ ಪ್ರೀತಿಯಿಂದೆ ॥

ಭೂಮಿಪತಿ ಕೇಳ್, ಬಳಿಕ ಸೌರಾಷ್ಟ್ರದಿಂದೆ ಸು ।
ತ್ರಾಮ ಸುತನಸುರಾರಿ ಸಹಿತ ಕುದುರೆಗಳ ಕೂ ।
ಡಾ ಮಹಾನದವನುತ್ತರಿಸೆ ನಡೆತರುತಿರ್ದನಾ ಪಥದೊಳೈಕಿಲಿಂದೆ ॥
ಹೇಮಂತ ಶೈಶಿರದ ಮಾಗಿ ಮಡಲಿಡೆ, ತರಣಿ ।
ಸೋಮನಂತಿರೆ ಬಿಸಿಲ್ ಬೆಳುದಿಂಗಳ ವೊಲಾಗೆ ।
ತಾಮರಸ ರಾಜಿ ನಸಿಡುವು ಕುಗ್ಗಿದುವು ಕೋಗಿಲೆಯ ಕಂಠಕಲರವಗಳು ॥೧॥

ಬಾಲೆಯರ ಕಡೆಗಣ್ಣ ಬಾಣದಿಂದಂಗಜಂ, ।
ರೋಲಂಬ ರಾಜಿ ಸೊಕ್ಕಾನೆಗಳ ಸೊಗಡಿಂದೆ, ।
ಕಾಲಮಂ ಕಳೆವೊಲಾದುದು ಪೂಗಳಿಲ್ಲದೆ ಮಸುಳ್ದುವಿನ ಶಶಿ ರುಚಿಗಳು ॥
ಜ್ವಾಲೆ ಶೀತಳಮಾದುದಗ್ನಿಯಿಂ ಬಿಟ್ಟು ಕಾಂ ।
ತಾಲಿಂಗನವನೆ ಬಯಸಿದುದು ಕಾಮುಕ ಜನಂ ।
ಮೂಲೋಕಮಂ ಮಾಗಿ ನಡುಗಿಸಿತು ಮೇಣುಡುಗಿಸಿತು ಪೆರ್ಚಿದೈಕಿಲಿಂದೆ ॥೨॥

ಉತ್ತಮಾಂಗದ ಗಂಗೆಯಂ ಸಾಗರಕೆ ಕಳುಹಿ, ।
ಪೊತ್ತ ಶಶಿಕಲೆಯ ನಂಬರಕಿಟ್ಟು, ತನ್ನ ನಡು ।
ನೆತ್ತಿಯೊಳ್ ಕಣ್ಣತೆರೆದಗ್ನಿಯಂ ತಾಳ್ದುದಲ್ಲದೆ ಕಾಂತೆಗರೆಮೆಯ್ಯನು ॥
ತೆತ್ತು ಬಿಡದಪ್ಪಿಕೊಂಡಿರ್ಪನೀಶ್ವರ ನೆನಲ್ ।
ಮತ್ತೆ ಕಾಮಿನಿಯರ ಕುಚಾಲಿಂಗನವ ನುಳಿದೊ ।
ಡೆತ್ತಣದು ಹಿಮಕೆ ಭೇಷಜಮೆಂದು ವಿರಹಿಗಳ್ ಕೂರ್ಪರ ನರಸುತಿರ್ದರು ॥೩॥

ನೆರೆ ಲೋಭಿ ವಿತ್ತಮಂ ಸುಯ್ದಾನಮಂ ಮಾಳ್ಪ ।
ತೆರದಿಂದೆ ಕಾಮಿನೀ ಪ್ರಣಯಮಂ ನಂಬಿರ್ಪ ।
ನರಿವಿನಂತಿಡಿದ ಶೈಶಿರದ ಶೀತಕೆ ಪಗಲಿರುಳ್ ತಮ್ಮ ಗೂಡುಗಳನು ॥
ಪೊರಮಟ್ಟು ಪಾರಲೊಲ್ಲದೆ ವಾಯಸ ಪ್ರತತಿ ।
ಗರಿಗಳಂ ಪೊದಿಸಿ ಮುಗ್ಗುಲೊಳಿಟ್ಟು ಕೋಗಿಲೆಯು । ॥೪॥
ಮರಿಗಳಂ ಮೆಯ್ಯೊಳ್ ಪುದುಗಿಕೊಂಡು ಮರುಕದಿಂದೈದೆ ಪಾಲಿಸುತಿರ್ದುವು

ಭುವನಮಂ ತೀವಿರ್ದ ಹಿಮಮುಮಂ ತಮಮುಮಂ ।
ತವಿಸುವ ತವಕದಿಂದಮವಗಡಿಸಿ ಜವಗೆಡಿಸಿ ।
ಬವಣಿಗೊಂಡಭ್ರದೊಳ್ ತೊಳಲುತ್ತೆ ಬಳಲುತ್ತೆ ಬಂದೊಡಂ ಮತ್ತೆ ಬಿಡದೆ ॥
ಕವಿಯಲ್, ಪ್ರತಾಪದೇಳಿಗೆ ನಂದಿ ಮಿಗೆ ಕುಂದಿ ।
ರವಿ ತಣ್ಣಗಾದನೆನೆ ಕಾಣಿಸಿತು ಮಾಣಿಸಿತು ।
ತವೆ ತಕ್ಕೆಯೊಳ್ ನೆರೆಯ ಬಲ್ಲರೊಳ್ ನಲ್ಲರೊಳ್ ಮುನಿಸನಾ ಶೈಶಿರದೊಳು ॥೫॥

ಊರ್ಜೀಶ ಕೇಳ್ ಬಳಿಕ ಸೇನಾ ಸಮಗ್ರದಿಂ ।
ಗೀರ್ವಾಣ ಪತಿ ನಂದನಂ ಬಹಳದೇಶ ಪನ ।
ಪರ್ವತ ನದೀ ನದಂಗಳನುತ್ತರಿಸಿ, ಕುದುರೆಗಳ ಹಿಂದುಗೊಂಡು ಬರಲು ॥
ತರ್ವಾಯೊಳವು ಹಾಯ್ದ್ವನಿಲ ಜವದಿಂ ಪಡೆಯೊ ।
ಳೊರ್ವರುಮರಿಯದಂತೆ ಕುಂತಳ ನಗರಕೆ ಬಲ ।
ಗರ್ವಿತ ಚಂದ್ರಹಾಸಾಖ್ಯನರಸಲ್ಲಿಗವನಾ ಹರಿಗಳಂ ತಡೆದನು ॥೬॥

ಬೆಂಗಾವಲಾಗಿರ್ದ ಪಟುಭಟರ್ ವಿಾರಿದ ತು ।
ರಂಗಯುಗಮಂ ಕಾಣದೈತಂದು ಸಿತವಾಹ ।
ನಂಗೆ ಬಿನ್ನೈಸಿದರ್ ಜೀಯ ಪೋದುವು ಹರಿಗಳರಸಿದೊಡೆ ಗೋಚರಿಸವು ॥
ಮುಂಗೈವ ಕಜ್ಜಮಂ ಬೆಸಸೆನೆ ಧನಂಜಯಂ ।
ಮಂಗಳಾತ್ಮಕನ ಮೊಗನೋಡಿ ಚಿಂತಿಸುವಿನಂ ।
ಕಂಗೊಳಿಸಿತಾಗಸದೊಳೊಂದು ಬೆಳಗೇಡನೆಯ ದಿನಮಣಿಯ ತೇಜದಂತೆ ॥೭॥

ಕ್ರೀಡೆಯಿಂ ಮಾಧವನುತ ಪ್ರಸಂಗವನುಂಟು ।
ಮಾಡುತ್ತೆ ಸುಮನೋನುರಾಗದಿಂದಿರದೆ ನಲಿ ।
ದಾಡುತ್ತೆ, ಕುಜವಂಶ ಭೇದನಂಗೆಯ್ಯುತ್ತ ಸಾಮಜೋಲ್ಲಾಸದಿಂದೆ ॥
ಪಾಡುತ್ತೆ, ವಿಷ್ಣುಪದ ಕಮಲ ಮಧುಕರನೆಂಬ ।
ರೂಢಿಯಂ-ನಿಜವಾಗಿ ಕಾಣಿಸುವ ತೆರದಿಂದೆ ।
ನೋಡುವರ ಕಣ್ಗೆ ಗೋಚರಿಸಿದಂ, ನಾರದ ಮುನೀಶ್ವರಂ ಬಾಂದಳದೊಳು ॥೮॥

ಕೆಂಜೆಡೆಯ ಸುಲಿಪಲ್ಲ, ಚೀರ ಕೃಷ್ಣಾಜಿನದ, ।
ಮಂಜುಲ ತುಲಸಿಯ ದಂಡೆಯ ಕೊರಳ ತಾವಡದ, ।
ರಂಜಿಸುವ ಪದ್ಮಾಕ್ಷಗಳ, ಲಲಿತ ಮೇಖಲೆಯ, ಚಾರುತರದುಪವೀತದ ॥
ಕಂಜನಾಭ ಧ್ಯಾನದಮಲ ವೀಣಾಕ್ವಣಿತ ।
ಸಂಜಾತ ಗಾನ ಸುಖದೆಸೆವ ತೇಜೋಮಯದ ।
ಪುಂಜವೆನಿಪಮರಮುನಿ ನಾರದಂ ಪಾರ್ಥಾದಿಗಳ ಕಣ್ಗೆ ಕಾಣಿಸಿದನು . ॥೯॥

ಅಂಭೋಜಮಿತ್ರ ನಾಸರೊಳಾಗಸವನುಳಿದು ।
ಕುಂಭಿನಿಗೆ ಬಂದಪನೊ. ಪೇಳೆನಲ್,ಗಗನ ಪಥ ।
ದಿಂ ಭಾಸುರಪ್ರಭೆಯೊಳಾ ಮುನಿಪ ನಿಳಿತಂದೊಡನುರಾಂತಕಾದಿ ನೃಪರು॥
ಸಂಭಾವಿಸಿದರಾ ತಪೋನಿಧಿಯ ನತಿವಿನಯ ।
ಗಂಭೀರ ವಾಕ್ಯದಿಂ ಬೆಸಗೊಂಡ ನುಪಚರಿಸಿ ।
ಜಂಭಾರಿ ನಂದನಂ ನಾರದನನಖಿಳ ಲೋಕಸ್ಥಿತಿ ವಿಶಾರದನನು . ॥೧೦॥

ಎಲೆ ಮುನೀಶ್ವರ,ತನ್ನ ಕುದುರೆಗಳ್ ಪೋದುವೀ।
ನೆಲದೊಳಾವೆಡೆಯೊಳಿರ್ದಪುವೆಂದರಿಯೆನಿನ್ನು ।
ಬಲವಂತರೀ ಸ್ಥಳದೊಳಿಲ್ಲಲೇ.ಕಂಡುದಂ ತನಗೊರೆಯವೇಳ್ವುದೆಂದು॥
ಫಲುಗುಣಂ ಕೇಳ್ದೊಡಾ ನಾರದಂ ನಸುನಗುತೆ ।
ಸುಲಲಿತಾಶ್ವಂಗಳೈದಿದುವು ಕುಂತಳಪುರಕೆ,।
ಕಲಿ ಚಂದ್ರಹಾಸಾಖ್ಯ ನರಸಲ್ಲಿಗಾ ನೃಪಂ ಕಟ್ಟಿಕೊಂಡಿಹನೆಂದನು . ॥೧೧॥

ಹಿಂದಣರಸುಗಳ ಬಲಮಿವನ ಹದಿನಾರರೊಳ ।
ಗೊಂದು ಕಳೆಯಲ್ಲವಂ ಪರಮ ವೈಷ್ಣವನಿವನ ।
ಮುಂದದಟರಂ ಕಾಣೆನಾಹವದೊಳೀತನ ಚರಿತ್ರಮತಿಚಿತ್ರಮೆಂದು ॥
ಮಂದಸ್ಮಿತದೊಳಾ ತಪೋಧನಂ ಪೇಳ್ದೊಡೆ,ಪು ।
ರಂದರಾತ್ಮಜನವನ ವರ್ತನವನಾದ್ಯಂತ ।
ದಿಂದೆನಗೆ ವಿಸ್ತರಿಸಿ ಪೇಳ್ವುದೆನಲರ್ಜುನಂಗಾ ತಪೋನಿಧಿ ನುಡಿದನು . ॥೧೨॥

ಸಮಯಮಲ್ಲದು ನಿನಗೆ ಪಾರ್ಥ, ಸಿಕ್ಕಿರ್ದಪುವು।
ವಿಮಲಮುಖ ವಾಜಿಗಳ್ ಚಿಂತಿಸುತಿಹಂ ಮಹೀ।
ರಮಣನಿಭಪುರದೊಳೆನೆ ಫಲುಗುಣಂ'ನರರ ಬಾಳ್ ಚಿರಕಾಲಮಿಪ್ಪುದಿಲ್ಲ ॥
ಭ್ರಮೆಯಿಂದೆ ಕೇಳದಿರಬಹುದೆ ವೈಷ್ಣವ ಕಥೆಯ।
ನಮಮ!ತನಗಾವ ಪೊಳ್ತುಭಯ ಬಲಮಧ್ಯದೊಳ್।
ಕಮಲಾಕ್ಷನೊರೆದ ಗೀತಾಮೃತವನಾಲಿಸಿದೆನೆನೆ ಮುನಿಪನಿಂತೆಂದನು ॥೧೩॥

ಇನ್ನೊರೆವೆನಾಲಿಸಾದೊಡೆ ಪಾರ್ಥ ಧಾರ್ಮಿಕಂ।
ಮುನ್ನೊರ್ವನುಂಟು ಕೇರಳ ದೇಶದವನಿಪಂ।
ಸನ್ನುತ ಗುಣೋದಯಂ ಮೇಧಾವಿಯೆಂಬವಂ ಬಲಯುತಂ ಬಳಿಕವಂಗೆ॥
ತನ್ನ ಪಟ್ಟದ ರಾಣಿಯೊಳ್ ಬಹಳ ಭಾಗ್ಯ ಸಂ।
ಪನ್ನನೆಡೆದಂಘ್ರಿಗರುವೆರಳಾಗಿ ದಿವದೊಳು।
ತ್ಪನ್ನನಾದಂ ಮೂಲನಕ್ಷತ್ರದಿಂದರಿಷ್ಟಾಂಶದೊಳ್ ಸುಕುಮಾರನು ॥೧೪॥

ಪುತ್ರೋತ್ಸವಂ ಮಾಡಿ ಕೆಲವು ದಿನಮಿರೆ ನೃಪಂ।
ಶತ್ರುಗಳ್ ಬಂದು ನಿಜನಗರಮಂ ಮುತ್ತಿದೊಡೆ।
ಕ್ಷತ್ರಧರ್ಮದೊಳವರೊಡನೆ ಯುದ್ಧರಂಗದೊಳ್ಪೊಯ್ದಾಡಿ ಮಡಿಯೆ ಕೇಳ್ದು॥
ಚಿತ್ರಭಾನು ಪ್ರವೇಶಂಗೈದಳಂದು ಶತ।
ಪತ್ರಲೋಚನೆ ಪತಿವ್ರತೆಯಾಗಿ ಬಳಿಕಲೆ ದ।
ರಿತ್ರೀಶ್ವರನ ರಾಜ್ಯಮಂ ತೆಗೆದುಕೊಂಡಹಿತರಾಳ್ದರದನೇವೇಳ್ವೆನು ॥೧೫॥

ಬಳಿಕೋರ್ವ ದಾದಿ ಶಿಶುವಂ ಕೊಂಡು ಪೊರಮಟ್ಟು।
ತೊಳಲಿ ಬಳಲುತೆ ಮೆಲ್ಲಮೆಲ್ಲನೈತಂದು ಕುಂ।
ತಳ ನಗರಮಂ ಪೊಕ್ಕಳಲ್ಲಿ ಸಾಕಿದಳರ್ಭಕನನತಿ ಪ್ರೇಮದಿಂದೆ॥
ಎಳೆಯಂಗೆ ಬೇಕಾದುದಿಲ್ಲದಿರೆ ಮರುಗುವಳ್।
ಪೊಳಲೊಳಗೆ ತಿರಿದು ಹೊರೆದಳಲುವಳ್ ಮುದ್ದಿಸಿ ಪ।
ಸುಳೆಯಭಿನಯಂಗಳ್ಗೆ ಹಿಗ್ಗಿ ಬಿಸುಸುಯ್ವಳವಳನುದಿನದೊಳಾರ್ತೆಯಾಗಿ ॥೧೬॥

ಇಡೆ ತೊಟ್ಟಲಿಲ್ಲಾಡಿಸುವರಿಲ್ಲ ನಿನಗೆ ಪೊಂ।
ದೊಡಿಗೆಯಿಲ್ಲರೆ ನಿಳಯಮಿಲ್ಲ ಬಿಡದೆರೆವ ನೀ।
ರ್ಗುಡಿವಾಲ್ಗೆಣ್ಣೆ ದೆಣ್ಣೆಗಳಿಲ್ಲ ಲಾಲಿಸಿ ನಲಿವ ತಂದೆತಾಯ್ಗಳಿಲ್ಲ॥
ಪೊಡವಿಪತಿ ಕೇರಳಾಧೀಶ್ವರಂ ಪರಕೆಯೊಳ್।
ಪಡೆದೆನಿದಕೀಗ ನಿನ್ನಂ ನೋಡುವೆನ್ನ ಕ।
ಣ್ಣೊಡೆಯದಕಟಕಟೆಂದು ಬಿಸುಸುಯ್ದಳಲ್ದು ಮರುಗವಳಾಕೆ ದಿನದಿನದೊಳು॥
।೧೭॥

ಮೊಳೆವಲ್ಲುಗುವಡೊಲ್ಲು ದಟ್ಟಡಿ ತೊದಲ್ನುಡಿ।
ತೊಳತೊಳಗುತಿಹ ಸೊಬಗು ಮೆರೆವ ನಗೆಮೊಗದ ಬಗೆ।
ಪೊಳೆವ ಕಣ್ಮಿಸುಪ ನುಣ್ದಪಿಗೆಣ್ ಚೆಲ್ವಪಣೆ ಕುರುಳ ಜೋಲಂದೆಗಾಲು॥
ಸುಳಿ ನಾಭಿ ಮಿಗೆ ಶೋಭಿಪುದರದೆಡೆ ಬಟ್ಟದೊಡೆ।
ನಳಿತೋಳಿಡಿದ ಧೂಳಿ ಸೊಗಯಿಸುವ ವರ ಶಿಶುವ।
ನಲಿದಾಡಿಸುವ ರೂಢಿಯಿಲ್ಲೆಂದು ನೆರೆ ನೊಂದು ಮರುಗವಳಜಸ್ರಮವಳು॥೧೮।

ಬಾಲಕನ ಲೀಲೆಯಂ ಕಂಡು ಹಿಗ್ಗುವಳೊಮ್ಮೆ।
ಲಾಲನೆಗಳಿಲ್ಲೆಂದಳಲ್ದು ಮರುಗುವಳೊಮ್ಮೆ।
ಪಾಲಿಸಿದಳಿಂತು ನಡೆನುಡಿಗಳಂ ಕಲಿವಲ್ಲ ಪರಿಯಂತಮಾ ಶಿಶುವನು॥
ಮೇಲೆ ರುಜೆ ಬಂದದಱೆ ವಿಧಿವಶದೊಳಾ ಧಾತ್ರಿ।
ಕಾಲನರಮನೆಗೈದಿದಳ್ ಬಳಿಕ ಪಸುಳೆಗೆ ನಿ।
ರಾಲಂಬಮಾಗಲಾ ಪಟ್ಟಣದೊಳೆಲ್ಲರ್ಗೆ ಕಾರುಣ್ಯಕೀಡಾದನು ॥೧೯॥

ಚೆಲ್ವಶಿಶು ಬೀದಿಯೊಳ್ ಬಂದು ದೇಸಿಗನಾಗಿ ।
ನಿಲ್ವಿನಂ ಕಂಡ ಕಂಡಬಲೆಯರ್ ಕರೆಕರೆದು ।
ಮೆಲ್ವ ತನಿವಣ್ಗಳಂ ಕಜ್ಜಾಯ ಸಕ್ಕರೆಗಳಂ ಕುಡುವರೆತ್ತಿಕೊಂಡು ॥
ಸೊಲ್ವ ಮಾತುಗಳನಾಲಿಸಿ ಮುದ್ದಿಸುವ ರೀವ ।
ರೊಲ್ವುದಂ ಮಜ್ಜನಂಗೈಸಿ ಮಡಿಯಿಂ ಪೊದಿಸಿ।
ಮೆಲ್ವಾಸಿನೊಳ್ ಮಲಗಿಸುವರಳ್ತಿಯಿಂದೊಸೆದು ತಂತಮ್ಮ ಮಕ್ಕಳೊಡನೆ ॥೨೦॥

ಪರಪುಟ್ಟನಾಗಿ ಪಟ್ಟಣದ ಬೀದಿಗಳೊಳಗೆ।
ತಿರುಗುತಿಹ ಬಾಲಕನ ರೂಪಮಂ ಕಂಡು ಕರೆ।
ಕರೆದು ಭವನಂಗಳ್ಗೆ ಕೊಂಡೊಯ್ದು ಗಣಿಕೆಯರ್ ತಮತಮಗೆ ಮೋಹದಿಂದೆ॥
ಸರಸ ಪರಿಮಳ ಸುಗಂಧಂಗಳಂ ತೀಡಿ ಕ।
ಸ್ತೂರಿಯ ತಿಲಕವನಿಟ್ಟು ಕಂಮಲರ್ ಮುಡಿಸಿ ಕ।
ರ್ಪೂರ ವೀಳೆಯಂಗೊಟ್ಟು ಮಡಿತೊಡಿಗೆಗಳಿನ್ನೈದೆ ಸಿಂಗರಿಸಿ ಕಳುಹುತಿಹರು॥೨೧॥

ಆಡುವೆಳೆಮಕ್ಕಳೊಡನಾಡುವಂ ಲೀಲೆ ಮಿಗೆ।
ನೋಡುವಚ್ಚರಿಗಳಂ ನೋಡುವಂ ಬಾಲಕರ।
ಕೂಡೆ ಮನೆಮನೆಗಳೊಳಗಾಡುತಿಹನೆಲ್ಲರ್ಗೆ ಮುದ್ದಾಗಿ ಮೋಹಿಸುವನು॥
ನೋಡುವರ ಪಾಡುವರನಾಡೆ ಸಾಧನೆಗಳಂ।
ಮಾಡುವರ ನರ್ಥಿಯಿಂ ಬೇಡುವರ ನೆರವಿಯೊಳ್।
ಕ್ರೀಡಿಸುವನಾಪುರದ ರೂಢಿಸಿದ ಬೀದಿಯೊಳ್ ಪಸುಳೆ ಪರಪುಟ್ಟನಾಗಿ ॥೨೨॥

ಬಟ್ಟೆಯೊಳ್ ಪುಣ್ಯವಶದಿಂದರ್ಭಕನ ಕಣ್ಗೆ ।
ಪುಟ್ಟ ಸಾಲಗ್ರಾಮದೊಂದು ರಮಣೀಯ ಶಿಲೆ।
ಕಟ್ಟೆಸಕದಿಂದೆ ಕಾಣಿಸಲದಂ ತಾನೆತ್ತಿಕೊಂಡು ಕೆಳೆಯರ್ಗೆ ತೋರಿ ॥
ಬಟ್ಟಗಲ್ಲಿಂತು ವರ್ತುಳದಿಂದೆ ಚೆಲ್ವಾಗಿ।
ಪುಟ್ಟುವುದೆ ಪೊಸತೆಂದು ಪಿಡಿದಾಡುತೊಡನೆ ಜೈ।
ತಿಟ್ಟು ಕೊಂಬಂ ಬಾಯೊಳನವರತ ಪಿರಿಸಲ್ಕೆ ತನಗೆ ಮನೆಯಿಲ್ಲವಾಗಿ ॥೨೩॥

ತೊಳಪ ಸಾಲಗ್ರಾಮ ದುಪಲಮಂ ಬಾಲಕಂ ।
ಕೆಳೆಮಕ್ಕಳೊಡನಾಟದಶ್ವಗೋಳಕವೆಂದು।
ತಿಳಿದಣ್ಣೆ ಕಲ್ಗೊಡ್ಡಿಗಳನಾಡುತದರಿಂದೆ ಗೆಲ್ದೆಲ್ಲರಂ ಜರೆಯುತ॥
ಕಳಕಳಿಸಿ ನಗುತತಿಸ್ನೇಹದಿಂ ಕ್ರೀಡೆಯಂ।
ತಳೆದಾಗಳುಣಿಸುಗಳ ನುಂಬಲ್ಲ ತನ್ನ ಕೈ।
ದಳಿಕೆ ತಂಡುಳಿದ ಪೊಳ್ತಿನೊಳಾವಗಂ ಬಾಯೊಳಿರಿಸಿಕೊಂಡಿರುತಿರ್ಪನು ॥೨೪॥

ಕುಂತೀಕುಮಾರ ಕೇಳಾಮಹಾ ಪತ್ತನದೊ।
ಳಿಂತರ್ಭಕರೊಳಾಡುತಿಹ ಪಸುಳೆಗೈದು ಬರಿ।
ಸಂ ತುಂಬಿತಾ ಸಮಯದೊಳ್ ಪ್ರಬಲದಿಂ ಪ್ರವರ್ತಿಪ ದುಷ್ಟಬುದ್ಧಿಯೆಂಬ॥
ಕುಂತಳೇಂದ್ರನ ಮಂತ್ರಿ ತನ್ನ ಮನೆಯೊಳ್ ವಿಪ್ರ।
ಸಂತರ್ಪಣಂಗೆಯ್ಯಲಾ ದ್ವಿಜರ್ ಭೋಜನಾ।
ನಂತರದೊಳ್ಕೈದೆ ಸತ್ಕೃತರಾಗಿ ಕುಳ್ಳಿರ್ದು ಪರಸುತಲ್ಲಿರುತಿರ್ದರು ॥೨೫॥

ಅಲ್ಲಿ ಕೆಳೆಯರೊಳಾಡುತಿರ್ದ ಶಿಶುವಂ ಕಂಡ।
ರುಲ್ಲಾಸದಿಂದೆಸೆವ ಭೂಸುರರ್ ಬಾಲಕನ।
ಸಲ್ಲಲಿತ ರಾಜಲಕ್ಷಣಕೆ ಬೆರಗಾದರವನಂಗಮಂ ನೋಡಿನೋಡಿ॥
ನಿಲ್ಲದನುರಾಗದಿಂದಾರ ಸುತನೀ ತರುಣ।
ನೆಲ್ಲಿಂದ ಬಂದನೆಂದಾ ದುಷ್ಟಬುದ್ಧಿಯಂ।
ಮೆಲ್ಲನೆ ವಿಚಾರದಿಂ ಕೇಳ್ದೊಡಾ ವಿಪ್ರರ್ಗೆ ನಗುತಾತನಿಂತೆಂದನು ॥೨೬॥

ಈಪುರದೊಳೆನಿತಿಲ್ಲನಾಥರಾಗಿಹ ಬಾಲ।
ರೀಪರಿಯೊಳೆತ್ತಣವ ನಾರಸುತನೆಂದರಿಯೆ।
ವೀ ಪಸುಳೆಯಂ ರಾಜಕಾರ್ಯದೊಳಗಿಹೆವಿದರ ಚಿಂತೆ ನಮಗೇತಕೆನಲು॥
ಆ ಪಾರ್ವರೆಂದಿರ್ದೊಡಂ ಚಾರುಲಕ್ಷಣದೊ।
ಳೀ ಪೊಳಲ್ಗೀ ಕುಂತಳಾಧೀಶನಾಳ್ವ ನ।
ಮ್ಮಾ ಪೊಡವಿಗೊಡೆಯನಹ ನೀತನಂ ನೀನಿರಿಸಿಕೊಂಡು ರಕ್ಷಿಪುದೆಂದರು ॥೨೭॥

ಕ್ರೂರ ನಕ್ರಾಕುಲದೊಳಿಡಿದಿರ್ದ ಪೆರ್ಮಡು ಗ।
ಭೀರ ನಿರ್ಮಲ ಜಲದೊಳೆಸೆವಂತೆ ಮನದೊಳ್ ಕ।
ಠೋರತರ ಭಾವಮಂ ತಳೆದು ಬಹಿರಂಗದೊಳ್ ವಿನಯಮುಳ್ಳಾತನಾಗಿ॥
ಚಾರು ಲಕ್ಷಣದ ಶಿಶುವಂ ನೋಡಿ ಧರೆಯ ಬ್ರಂ।
ದಾರಕರ ನುಡಿಗೊಪ್ಪಿದವೊಲಿರ್ದು ಬಳಿಕ ಸ।
ತ್ಕಾರದಿಂದಾ ವಿಪ್ರರಂ ಕಳುಹಿದಂ ದುಷ್ಟಬುದ್ಧಿ ನಿಜಭವನದಿಂದೆ ॥೨೮॥

ಈ ಕುಂತಳೇಂದ್ರಂಗೆ ಸುತರಿಲ್ಲ ರಾಜ್ಯ ಮೆನ।
ಗೇಕಾಧಿಪತ್ಯಮಾಗಿರ್ದಪುದು ಮುಂದಿವಂ।
ಭೂಕಾಂತನಾದಪಂಗಡ ವಿಪ್ರರೆಂದ ನುಡಿ ತಪ್ಪದೆನ್ನಾತ್ಮಜರ್ಗೆ॥
ಬೇಕಾದ ಸಂಪದಂ ಬಯಲಾಗಿ ಪೋಪುದೆಂ।
ದಾ ಕುಮತಿ ಬೇರೊಂದುಪಾಯಮಂ ಚಿಂತಿಸಿ ಭ।
ಯಾಕಾರದೊಡಲ ಚಂಡಾಲರಂ ಕರೆಸಿ ಬೆಸಸಿದನಾರುಮರಿಯದಂತೆ ॥೨೯॥

ಕಾನನಾಂತರದೊಳ್ಳೀ ಶರಳನಂ ಕೊಂದು ನೀ ।
ವೇನಾಪೊಡಂ ಕುರುಪುತಂದೆನಗೆ ತೋರ್ಪುದೆಂ ।
ದೊ ನರೇಂದ್ರನ ಮಂತ್ರಿ ಬೆಸಸಿದೊಡೆ ಪಶುಘಾತಕಿಗಳಾಡುತಿಹ ಶಿಶುವನು ॥
ಹೀನ ದಯದಿಂದೆ ಪಿಡಿದೆತ್ತಿಕೊಂಡೊಯ್ದುರ್ ಭ ।
ಯಾನಕದೊಳಂದು ಕೊಲೆಗೆಳಸಿ ಪ್ರಹ್ಲಾದನಂ ।
ದಾನವೇಶ್ವರನಾಜ್ಞೆಯಿಂ ಕಾಳರಕ್ಕಸರ್ ಬಂದು ಕೈದುಡುಕಿದಂತೆ. ॥೩೦॥

ಪಾತಕಿಗಳೊಡಲೊಳಿಹ ಪರಮಾತ್ಮನಂತೆ ಯಮ ।
ದೂತರೆಳೆತಂದಜಾಮಿಳನಂತೆ ಕಾಕ ಸಂ ।
ಘಾತದೊಳ್ ಸಿಕ್ಕಿರ್ದ ಕೋಗಿಲೆಯ ಮರಿಯಂತೆ ನಲುಗಿ ಕತ್ತಲೆಯೊಳಿರ್ದ ॥
ಶೀತಲ ಮರೀಚಿ ಲಾಂಛನದಂತೆ ಬಹಳ ಕೋ ।
ಪಾತಿಶಯದೊಳಗಿಹ ವಿವೇಕದಂತಾ ಪಶು ।
ಘಾತಕಿಗಳೆತ್ತಿಕೊಂಡೊಯ್ವ ಬಾಲಕನಿರ್ದನವರೆಡೆಯೊಳಂಜುತಳುತೆ ॥೩೧॥

ಪೆಗಲೊಳೇರಿಸಿ ಬನಕೆ ಚಂಡಾಲರೊಯ್ಯುತಿರೆ ।
ಮಿಗೆ ಬೆದರಿ ಭಯದಿಂದೆ ಬಾಲಕಂ ಬಾಯೊಳಾ ।
ವಗಮಿರಿಸಿಕೊಂಡಿರ್ಪ ದಿವ್ಯ ಸಾಲಗ್ರಾಮದುಪಲದತಿಮಹಿಮೆಯಿಂದೆ ॥
ಬಗೆದೋರಲಾಗ ಮುರಹರ ಕೃಷ್ಣ ಕಮಲಾಕ್ಷ ।
ಖಗರಾಜಗಮನ ಸಲಹೆಂದು ಚೀರಿದೊಡವನ ।
ಮೊಗನೋಡಿ ಕರುಣದಿಂ ಕಟುಕರೆದೆ ಕರಗಿದುದದೆಂತೊ ಹರಿನಾಮದೇಳ್ಗೆ ॥೩೨॥

ಒಯ್ದು ಪಸುಳೆಯನರಣ್ಯದೊಳಿರಿಸಿ ಮಸುಗಿ ಬಿಸು ।
ಸುಯ್ದು ಪಶುಘಾತಕಿಗಳಾ ದುಷ್ಟಬುದ್ಧಿಯಂ ।
ಬಯ್ದು ಶಿಶುವಧೆಗಳುಕಿ ನಿಂದು ನೋಡುತೆ ಕಂಡರರ್ಭಕನೆಡೆದ ಕಾಲೊಳು ॥
ಅಯ್ಲ್ಲದೊಂದು ಬೆರಲಿರ್ಪುದಂ ಬಳಿಕದಂ ।
ಕುಯ್ದು ಕುರುಪಂ ಕೊಂಡು ತಮ್ಮ ದಾತಾರನೆಡೆ ।
ಗೆಯ್ದು ತೋರಿದೊಡವನವರ್ಗಳಂ ಮನ್ನಿಸಿ ಮಹೋತ್ಸವದೊಳಿರುತಿರ್ದನು ॥೩೩॥

ಇತ್ತಲಾ ವಿಪಿನದೊಳ್ ತನ್ನ ವದನದೊಳಿರ್ದ ।
ವೃತ್ತ ಸಾಲಗ್ರಾಮ ಶಿಲೆಯ ಪ್ರಭಾವದಿಂ ।
ದುತ್ತಮಶ್ಲೋಕನಂ ಭಜಿಸೆ ದಯೆಗೈದೆಡದ ಕಾಲ ಷಷ್ಠಾಂಗುಳಿಯನು ॥
ಕತ್ತರಿಸಿಕೊಂಡುಳುಹಿ ಪೋದರಂತ್ಯರ್ ಬಳಿಕ ।
ತುತ್ತಿಸಿದ ರಾಹು ತೊಲಗಿದ ಶಶಿವೊಲಿರ್ದನವ ।
ನೆತ್ತಣದು ಬಾಧೆಗಳ್ ನರ ನಿನ್ನ ಮಿತ್ರನಂ ಮರೆವೊಕ್ಕ ಜೀವಿಗಳ್ಗೆ. ॥೩೪॥

ಬಸಿವ ನೆತ್ತರ ಗಾಯದೆಡದಡಿಯ ವೇದನೆಗೆ ।
ಪಸುಳೆ ಹರಿಹರಿಯೆಂದೊರಲ್ದಳುತಿರಲ್ಕೆ ಕಣ್ಣೊ ।
ಳೊಸರ್ವ ಬಾಷ್ಪಂಗಳಂ ಕಂಡು ಮಿಗವಕ್ಕಿಗಳ್ ನೊಂದು ಕಡು ಶೋಕದಿಂದೆ ॥
ಪಸಿವು ನೀರಡಕೆಯಂ ತೊರೆದಲ್ಲಿ ನಿಂದುಪಚ ।
ರಿಸುತಿರ್ದುವಾ ಶಿಶುವನೆಂದೊಡೆಲೆ ಪಾರ್ಥ ಕೇಳ್ ।
ವಸುಮತಿಯೊಳಾರ್ತರಂ ನೋಡಿ ಮಿಗೆ ಮರುಗದಿಹ ಮಾನವಂ ಪಾಪಿಯಲ್ತೆ ॥
॥೩೫॥

ಗರಿಗೆದರಿ ಕೊಡೆವಿಡಿದು ನಿಂದುವು ಬಿಸಿಲ್ಗೆ ನವಿ ।
ಲಿರಕೆಯಿಂ ಬೀಸಿ ಬಿಜ್ಜಣವಿಕ್ಕಿತಂಚೆ ತುಂ ।
ತುರನುದುರ್ಚಿತು ಸಾರಸಂ ಸಲಿಲದೊಳ್ ನೆನೆವ ಪಕ್ಕಂಗಳಂ ಬಿದಿರ್ಚಿ ॥
ಮರುಗಿ ಮೆಲ್ನುಡಿಯೊಳುಪಚರಿಸಿದುವು ಗಿಳಿಗಳ ।
ಕ್ಕರೊಳಳಿಗಳರ್ಭಕನ ರೋದನದ ಕೂಡಳುವ ।
ತೆರವೊಳ್ ಮೊರೆದುವಲ್ಲಿ ಕರುಬರಿದೂರಿಂದೆ ಕಾಡೊಳ್ಳಿತೆನಿಸುವಂತೆ ॥೩೬॥

ನಿಲ್ಲದೆ ನರಳ್ವ ಪಸುಳೆಯ ನಿರ್ಮಲಾಸ್ಯಮಂ ।
ಪುಲ್ಲೆಗಳ್ ಕಂಡು ಕಾನನಕೆ ಕಾಮಿನಿ ತಮ್ಮ ।
ನಲ್ಲನೈತರಲುಮ್ಮಳಿಸಿ ವಾಹನವನರಸ ಬಂದ ಪೂರ್ಣೇಂದುವೆಂದು ॥
ವಲ್ಲಭ ಸ್ವಾಮಿಯಂ ಬೇಡಿಕೊಳುತಿರ್ಪುವೆನೆ ।
ಮೆಲ್ಲಮೆಲ್ಲನೆ ಪೊರೆಗೆ ಪೊದ್ದಿ ಬಾಲಕನಂಘ್ರಿ । ॥೩೭॥
ಪಲ್ಲವದ ರುಧಿರಮಂ ಕುಡಿ ನಾಲಗೆಗಳಿಂದೆ ಮಿಗೆ ಲೇಹನಂಗೈದುವು

ಕೋಗಿಲೆಯ ನಿಡುಸರಂ ಪಾರಿವದ ಕಲ್ಲುಣಿಸು ।
ಗೂಗೆಗಳ ಕಣ್ದೊಳಸು ಬಕನ ಮೌನದ ಬೆರಗು ।
ನಾಗದ ನಿರಾಹಾರ ಮಳೆಗಳ ಪರಿಭ್ರಮಣ ಮಿಥದ ಸೀತ್ಕಾರಂಗಳು ॥
ಪೋಗಲಡಿಯಿಡಲರಿಯದಾರ್ನೈವ ಜನವಿಲ್ಲ ।
ದಾಗಹನ ಗಹ್ವರದೊಳಳುವ ಶಿಶುವಂ ನೋಡ ।
ಲಾಗಿ ಬಂದೆಡೆಗೊಂಡ ದುಃಖಾತಿರೇಕಮಂಬಂತೆ ಕಾಣಿಸುತಿರ್ದುದು ॥೩೮॥

ಬಾಲಕನ ರೋದನದ ಕೂಡೆ ಬನದೇವಿಯರ್ ।
ಗಾಳಿ ತೀಡಿದೊಡೆ ಘೋರೆಂಬ ತರುಲತೆಗಳಿಂ ।
ಗೋಳಿಟ್ಟರಗ್ನಿ ಜಲ ಭೂ ಗಗನ ವಾಯು ರವಿಶಶಿಗಳ್ ದೆಸೆವೆಣ್ಗಳು ॥
ಹೇಳಲೇನಡವಿಯ ಚರಾಚರಂಗಳ ಜೀವ ।
ಜಾಲಂಗಳುರೆ ಮರುಗುತಿರ್ದುವನಿತರೊಳೊಂದು ।
ಕೋಲಾಹಲದ ಘೋಷವೆಲ್ಲಿಯುಂ ಕಿವಿಗಿಡಿದುದಾ ಮಹಾ ಕಾನನದೊಳು ॥೩೯॥

ದಿನಪನುಪಟಲದಿಂದೆ ನೆಲೆಗೆಟ್ಟು ಪಲವು ರೂ।
ಪನೆ ತಾಳ್ದು ವನವಾಸದುರುತಪದ ಸಿದ್ಧಿಯಿಂ।
ಘನತೆಯಂ ಪಡೆದು ಮಿಗೆ ಪಗೆಯಾದ ಪಗಲಂ ತೊಲಗಿಪಂಧಕಾರಮೆನಲು॥
ಅನುಪಮದ ಕಾರೊಡಲ ಬೇಡವಡೆ ಬೇಂಟೆಗೆ ವಿ।
ಪಿನದೊಳ್ಪೈತರುತಿರ್ದುದಬ್ಬರದ ಬೊಬ್ಬೆಗಳ।
ನಿನದದಿಂ ಜೀವಿಗಳ ಕೊಲೆಗೆಳಸಿದಂತಕನ ದೂತ ಸಂಘಾತದಂತೆ ॥೪೦॥

ತಪ್ಪತಪ್ಪಲೊಳಲ್ಲಿಗಲ್ಲಿ ಮಂಜುಗಳೆಸೆವ।
ಕಪ್ಪಕಪ್ಪನೆಯ ಗಿರಿಗಳ ಪರ್ಬುಗೆಗಳಂತೆ।
ಬಪ್ಪಬಪ್ಪೆಳನಾಯ್ಗಳಂ ಹಾಸೊಳಾಂತು ಬಂದುದು ಶಬರ ಸೇನೆ ಬಳಿಕ॥
ಸೊಪ್ಪುಸೊಪ್ಪುಗಳ ಮೆಳೆ ಮೆಳೆಗಳಂ ಸೋವುತ್ತೆ।
ತಪ್ಪತಪ್ಪದೆ ಶರ ಶರಂಗಳಂ ತೆಗೆದೆಚ್ಚು।
ತೊಪ್ಪತೊಪ್ಪನೆ ಮೃಗ ಮೃಗಂಗಳಂ ಕೆಡಹಿದರ್ ಕಾನನದೊಳೇವೇಳ್ವೆನು ॥೪೧॥

ಚಾಪ ಬಾಣಂಗಳೇತಕೆ ಬೇಂಟೆ ಗಂಗಜನ।
ಚಾಪ ಬಾಣಂಗಳಿರ್ದಪುವೆಮ್ಮೊಳೆಂಬೊಲಿಹ।
ಚಾಪಲ ಭ್ರೂಲತೆಯ ಚಂಚಲಾಪಾಂಗದ ಪುಳಿಂದಿಯರ್ ತಮ್ಮತಮ್ಮ॥
ಓಪರಂ ಬಳಿವಿಡಿದು ಬರುತಿರ್ದರಾಗ ಸ।
ಲ್ಲಾಪದಿಂದೆಸೆವ ಹರಿ ಹರಿಣ ಕರಿ ಚಮರಿಗಳ।
ರೂಪಂಗಳವಯವದೊಳಾರಾಜಿಸಲ್ಕವಕೆ ತಾವೆ ದೇಹಂಗಳೆನಲು ॥೪೨॥

ಸೊಕ್ಕಾನೆಗಳ ಸೊಗಡನುರ್ವ ಕತ್ತುರಿಯ ಮೃಗ।
ದಿಕ್ಕೆಗಳ ನಲ್ಲಲ್ಲ ಪುಣುಗಿನ ಜವಾದಿಗಳ।
ಬೆಕ್ಕುಗಳ ಬಿಡೆಯದಾಡುಂಬೊಲನರಸುವ ಕಿರಾತರಂಗಚ್ಛವಿಗಳು॥
ಅಕ್ಕರಿಂದವರವರ ತನು ಪರಿಮಳಂಗಳ್ಗೆ।
ತುಕ್ಕುವೆಳದುಂಬಿಗಳ ಬಳಗಂಗಳೆಂಬಂತೆ।
ಪೊಕ್ಕುಪೊಕ್ಕಡವಿಯೊಳ್ ಕಣ್ಗೆ ಕಾಣಿಸುತಿರ್ದುವೇನೆಂಬೆ ನಚ್ಚರಿಯನು ॥೪೩॥

ಇದೆ ಪಂದಿ ಕೆದರಿದ ನೆಲಂ ನೋಡಲಿದೆ ದಂತಿ।
ಕದಡಿದ ಕೊಳಂ ತೋಗಲಿದೆ ಪುಲಿಯುಗಿದ ಮೃಗದ।
ಮಿದುಳಿತ್ತಲಿದೆ ಸಿಂಗಮೆರಗಿದಾನೆಯ ತಲೆಯ ಮುತ್ತುದುರಿ ನೆತ್ತರೊಡನೆ॥
ಇದೆ ವನಮಹಿಪನುದ್ದಿಕೊಂಡ ಮರದಿಗುಡಿತ್ತ।
ಲಿದೆಕೊ ಸಾರಂಗಮಿಕ್ಕಡಿಗೈದ ಪಾವಿತ್ತ।
ಲಿದೆ ಪುಲ್ಲೆಗಳ ಪಕ್ಕೆ ಮರೆಗಳಿಕ್ಕೆಗಳೆಂದು ಪರಿದರ್ ಪುಳಿಂದರಂದು ॥೪೪॥

ನಡೆ ಪಜ್ಜೆವಿಡೆ ಪೋಗು ತಡೆ ನಿಲ್ಲು ಜಡಿ ಬೊಬ್ಬೆ ।
ಗುಡು ಪೊದರೊಳಡಗು ಕೈಗೆಡದಿರಿಸು ನಿಡು ಸರಳ ।
ತುಡು ಕೆಲಕೆ ಸಿಡಿಯದಿರ್ ಪೊಡೆ ಸಾರ್ಚು ತುಡುಕು ಮೊಗಸಡಗು ಮರಕಡ
ಅಡಗಿ ಪೊಯ್ಯುಡಿ ಕೋಲನಿಡು ಮುಂದುಗಡೆ ನಾಯ ॥ [ರೊಡರ್ಚು॥
ಬಿಡು ಕೂಡೆ ಪಡಿತಳಿಸು ಸೆಡೆಯದಿರ್ ಕೆಡೆಪೆಂಬ ।
ನುಡಿಗಳಡಿಗಡಿಗೆ ಕಿವಿಗಿಡಿದುವೆಲ್ಲೆಡೆಯೊಳಿಂದಡವಿಯೊಳ್ ಕಡುಪೊಸತೆನೆ॥ ೪೫॥

ಉಬ್ಬಿದುರದೇರದೆಗೆದೊಡಲ ಬಾಗಿದ ಬೆನ್ನ ।
ಹಬ್ಬುಗೆಯ ಪಚ್ಚಳಧ ಸೆಡೆದ ಬಾಲದ ಕೊನೆಯ ।
ಕೊಬ್ಬಿದ ಕೊರಳ ಸಣ್ಣ ಜಂಘೆಗಳ ಕೊಂಕುಗುರ ಮಡಿಗಿವಿಯ ಕಿಡಿಗಣ್ಗಳ ॥
ಹೆಬ್ಬಲ್ಲ ಬಿಡುವಾಯ ಜೊಲ್ವ ಕೆನ್ನಾಲಗೆಯ ।
ಗಬ್ಬಿನಾಯ್ಗಳ ಹಾಸನುಗಿದು ಬಿಡೆ ಪಂದಿಗಳ ।
ನಬ್ಬರಿಸಿ ತುಡುಕಿದುವು ಕೇಸರಿಗಡರ್ದು ಮೇಲ್ವಾಯ್ದು ಪುಲಿಯಂ ಕೊಂದುವು
॥೪೬॥

ಬಿಡದೆ ಕತ್ತುರ್ಗಳಂ ಸೋವಿದರ್ ತೀವಿದರ್ ।
ಗಿಡಗಳ ಪೊದರ್ಗಳಿಂದೆಬ್ಬಿಸಿದರುಬ್ಬಿಸಿದ ।
ರೊಡನೊಡನೆ ಖಗ ಮೃಗ ವ್ರಾತಮಂ ಪಾತಮಂ ಮಾಡಿದರ್ ಕೂಡೆಕೂಡೆ ।
ಸಿಡಿಗುಂಡು ಬಡಿಗೋಲ್ಗಳುರುಬೆಯಿಂದಿರುಬೆಯಿಂ ।
ಧಿಡು ಗವಣೆ ನೇಣುರುಲ್ಗೊಲೆಗಳಿಂ ಬಲೆಗಳಿಂ ।
ಜಡಿದಾರ್ದು ಬೊಬ್ಬೆಯುಬ್ಬರದಿಂದೆ ಶರದಿಂದೆ ಕಾಡೊಳ್ ಕಿರಾತರಂದು ॥೪೭॥

ಕುತ್ತುರೊಳ್ ಪುದುಗಿರ್ದು ಪುಲಿ ಪೊರಮಡಲ್ ಕಂಡು ।
ಕಿತ್ತು ಕೂರ್ಗಣೆಗಳಂ ಪೂಡಿ ಲುಬ್ಧಕರಿರ್ವ ।
ರಿತ್ತತ್ತಲಿರ್ದು ಸರಿಸದೊಳೆಚ್ಚೊಡದರೊಡಲ ನುಚ್ಚಳಿಸಿದಂಬು ತಾಗಿ ॥
ಇತ್ತಂಡಮುಂ ವ್ಯಾಘ್ರದೊಡನಿಳೆಗುರುಳ್ದುದು ।
ದ್ವೃತ್ತದಿಂದಭಯ ಜನ್ಮಮೇಕಾರ್ಥಕೆಳಸಿದೊಡೆ ।
ಮತ್ತೆ ಲೇಸಾದಪುದೆ ಜಗದೊಳೀ ಮೂವರುಪಹತಿ ಚಿತ್ರಮಲ್ಲೆಂದನು ॥೪೮॥

ನಳಿತೋಳ ಬಲ್ಮೊಲೆಯ ಸೊಕ್ಕುಜವ್ವನದ ಪರಿ ।
ಮಳ ಗಾತ್ರವಳಿಕುಂತಳದ ಮೆಲ್ನಡೆಯ ಶಬರಿ ।
ಹಳುವದೊಳ್ತನ್ನ ಕಾಂತನ ಬಳಿಯೆ ಬರಲೊಂದು ಸಿಂಗಮತಿ ಭರದೊಳೆರಗಿ॥
ಬಳಿಕವಳ ಮಧ್ಯಮಂ ಕಂಡು ಸಾಮಾನ್ಯಮಂ ।
ತಳೆದು ಮತ್ತಾಕೆಯ ಚಲಾಪಾಂಗಮಂ ನೋಡಿ ।
ಮುಳಿದಡರಲಾ ಕೇಸರಿಯನೆಚ್ಚು ಕೆಡಹಿದಂ ಕ್ರೋಧದಿಂದಾ ವ್ಯಾಧನು ॥ ೪೯ ॥

ಮರಿಗೆ ಮರೆಯಾಗಿ ಮೈಯೊಡ್ಡಿ ಮಡಿದುವು ಕೆಲವು ।
ಬರಿಯಬಿಲ್ದನಿಗೆ ರಮಣನ ತಾಗಿತಂಬೆಂದು ।
ನೆರೆ ಮೋಹದಿಂ ಪೊರಳ್ದುವು ಕೆಲವು ರೂಪುಗೊಂಡೊಂದೊಂದೆಣೆಯನಗಲ್ದು ॥
ಮರುಗಿ ಮದನಾಸ್ತ್ರದಿಂದಿರದೆ ಬಿದ್ದುವು ಕೆಲವು ।
ಶಿರಾಸರಳ್ ತಮ್ಮ ಕೂರ್ಪರ ಮೇಲೆ ಬರಲದಕೆ ।
ಗುರಿಯಾಗಿ ತೊರೆದುವಸುವಂ ಕೆಲವು ಪುಲ್ಲೆಗಳ್ ಬೇಡರಿಸುವೆಸುಗೆಯಿಂದೆ॥೫೦॥

ಕರಿಯ ಕುಂಭಸ್ಥಳದ ಮುಕ್ತಾಫಲಂಗಳಂ ।
ಬರುಹಿಗಳ ಗರಿಗಳಂ ಚಮರಿ ವಾಲಂಗಳಂ ।
ದ್ವಿರದ ನವ ದಂತಾಂಕುರಂಗಳಂ ಮೃಗಸಾರ ಮೃತ್ತಿಕೆಗಳಂ ಬನದೊಳು ॥
ಇರದೆತ್ತಿಕೊಂಡು ಬರುತಿರ್ದಪರೊ ಶಬರಿಯರ್ ।
ದರಹಾಸ ಕಬರಿ ಕುಂತಳ ಕುಚ ಶ್ಯಾಮ ತನು ।
ಪರಿಮಳಂಗಳನಾಂತು ಬಂದಪರೊ ತಿಳಿಯಲರಿದೆಂಬಂತೆ ಕಾಣಿಸಿದರು ॥೫೧॥

ಪುಲಿ ಕರಡಿ ಕರಿ ಸಿಂಗ ಸಾರಂಗ ಮರಿ ಪಂದಿ ।
ಮೊಲ ಹುಲ್ಲೆ ಕಾಡೆಮ್ಮೆ ಚಮರಿಗಳ್ ಮೊದಲಾದ ।
ಪಲವು ಮೃಗಜಾತಿಯುಂ ಕ್ರೌಂಚ ಶಿಖಿ ತಿತ್ತಿರಿ ಕಪೋತಾದಿ ಪಕ್ಷಿಗಳನು ।
ಕೊಲುತೆ ಬಹ ಬೇಡರ್ಗೆ ಸಿಕ್ಕದೋಡಿದುದೊಂದೆ ।
ರಳೆ ಕುಳಿಂದಕನೆಂಬ ದೊರೆ ಕಂಡು ತನ್ನ ಚಾ ।
ಪಲ ಹಯದೊಳವರ ಬಳಿಸಂದನತಿವೇಗದಿಂ ಬಿಲ್ವಿಡಿದು ಕೊಲ್ವೆನೆಂದು ॥ ೫೨ ॥

ಆ ಕುಳಿಂದಂ ದುಷ್ಟಬುದ್ಧಿಯ ನಿಯೋಗದಿಂ ।
ದಾ ಕಾನನದ ನಾಡ ಪಳಿತಮಂ ಕೈಕೊಂಡು ।
ಭೂಕಾಂತನಾಗಿಹಂ ಚಂದನಾವತಿಯೆಂಬ ಪುರದೊಳವನಲ್ಲಿಯಿಂದೆ ॥
ಈ ಕಿರಾತ ಪ್ರಕರದೊಡನೆ ಪೊರಮಟ್ಟು ಮೃಗ ।
ಯಾ ಕಾಮನಾಗಿ ಬಂದಿರ್ದವಂ ಸಿಡಿದೋಡು ।
ವಾ ಕುರಂಗದ ಬೆನ್ನನೈದಿದಂ ತೇಜಿಯ ಜವಂ ಗಾಳಿಯಂ ಮುಂಚಲು ॥ ೫೩ ॥

ಹರಿಣನಂ ಬೆಂಬತ್ತಿ ಬರಬರಾ ಕುಳಿಂದಕಂ ।
ಹರಿಯನೇ ಜಪಿಸುತಳುತಿಹ ಬಾಲನಂ ಕಂಡು ।
ಹರಿಯನಲ್ಲಿಯೆ ನಿಲಿಸಿ ನೋಡಿ ನಿಜ ಶಿರವ ನಲ್ಲಾಡಿ ತಾಂ ಮೃಗವ ಕೊಲೆಗೆ ॥
ಹರಿತಂದ ಪಾಪಮತಿ ಪುಣ್ಯಮೊದವಿಸಿತು ಸುವಿ ।
ಹರಿಸುವೊಡೆ ಶಿವಶಿವಾ ಪೊಸತೆಂದು ಹರ್ಷದ ಲ ।
ಹರಿಯೊಳೋಲಾಡಿದಂ ಕಡವರವನೆಡಹಿ ಸಂಧಿಸಿದ ಕಡುಬಡವನಂತೆ ॥೫೪॥

ಇಳಿದು ನಿಜವಾಜಿಯಂ ಸಾರ್ದು ಮೈದಡವಿ ಬರೆ ।
ಸೆಳೆದು ಬಿಗಿಯಪ್ಪಿ ಕಂಬನಿದೊಡೆದು ಕೊಡೆ ಸ ।
ಗ್ಗಳೆಯ ನೀರಿಂದ ಕಾಲ್ದುದಿ ಖೊಳ್ ಒಸಿವ ನೆತ್ತರಂ ತೊಳೆದು ಮೋಹದಿಂದೆ ॥
ಗಳದೊಳುಬ್ಬುವ ಗದ್ಗದಂಗಳಂ ಸೈರಿಟ್ಟು ।
ತಿಳಿಪಿ ಲಾಲಿಸಿದಂ ಕುಳಿಂದಕಂ ಸೌಭಾಗ್ಯ ।
ನಿಳಯದೈರಕೆಯು ವನುವ ನೊಡವಿದಗ್ಗದ ಪುಣ್ಯದೊಡಲಸುವನಾ ಶಿಶುವನು ॥೫೫॥

ಎಡಬಲದೊಳಿಹ ತನ್ನವರೊಳಾ ಕುಳಿಂದಕಂ ।
ನುಡಿದನೀ ಬಾಲಕಂ ತನ್ನ ತಾಯ್ತಂದೆಗಳ ।
ನೊಡಹುಟ್ಟಿದವರ ಹಂಬಲಿಸದೆ ಮುರಾರಿಯಂ ನೆನೆವ ನದರಿಂದಿವಂಗೆ ।
ಒಡೆಯನಚ್ಯುತನಾದ ಕಾರಣಂ ವ್ಯತನಾಗ ।
ದಡವಿಯೊಳ್ ಜೀವಿಸಿದನೆಲ್ಲರ್ಗೆ ತನುಜರಂ ।
ಕುಡುವವಂ ಕೃಷ್ಣನೈಸಲೆ ತನಗೆ ಮಕ್ಕಳಿಲ್ಲೀತನೇ ಸುತನೆಂದವನು ॥೫೬॥

ಪತ್ತುವಿಧಮುಂಟು ಸುತರದರೊಳೌರಸ ಪುತ್ರ ।
ನುತ್ತಮಂ ಮೇಣಾತನಿಲ್ಲದೊಡೆ ಬಳಿಕವೊಂ ।
ಬತ್ತು ಬಗೆಯೊಳಗೊಂದು ತೆರದ ಮಗನಾದೊಡಂ ಬೇಕಲಾ ಮಾನವರ್ಗೆ ।
ತತ್ತನಯರೊಳ್ ತನಗೆ ತಾನೆ ದೊರೆಕೊಂಡವಂ ।
ದತ್ತನಂದನನಿವಂ ತನಗೆಂದವಂ ಮುದದೊ ।
ಳೆತ್ತಿಕೊಂಡಶ್ವವನಡರ್ದು ಪರಿಜನಸಹಿತ ನಿಜಪುರಕೆ ಬರುತಿರ್ದನು ॥೫೭॥

ಮೃಗಯಾ ವ್ಯಸನದಿಂದೆ ಕಾನನಕೆ ತಾಂ ಕೃಷ್ಣ ।
ಮೃಗದ ಕೂಡೈದಿದೊಡೆ ದೊರೆಕೊಂಡನೀ ಕೃಷ್ಣ ।
ಮೃಗ ಭಾವದರ್ಭಕಂ ಪಾಪಕೆಳಸಿದೊಡಾಯ್ತು ಪುಣ್ಯಮೆನುತಲ್ಲ ಮಡಿದ ॥
ಮೃಗಜಾತಿಗಳನವರವರ್ಗೆ ವೆಚ್ಚಿಸಿ ನೆರೆದ ।
ಮೃಗಜೀವಿಗಳನೆಲ್ಲರಂ ಕಳುಹಿ ನಿಜಪುರಕೆ ।
ಮೃಗಧರನೊರೆಸುವ ಶಿಶುವಂ ಕೊಂಡು ಪರಿಜನದೊಡನೆ ಬಂದನುತ್ಸವದೊಳು ॥೫೮॥

ಮುಂದೆ ಪರಿತಂದು ಚರರರಿಪೆ ಸಿಂಗರಿಸಿದರಾ ।
ಚಂದನಾವತಿಗೆ ಸಂಭ್ರಮದಿಂ ಕುಳಿಂದಕಂ
ಬಂದು ನಿಜ ಭವನಮಂ ಪುಗಲದಿರ್ವಂದು ನಲಿದವನ ಸತಿ ಮೇಧಾವಿನಿ ॥
ಕಂದನಂ ತೆಗೆದೆತ್ತಿಕೊಳುತ ಬಿಗಿಯಪ್ಪಿ ಸಾ ।
ನಂದದಿಂ ಪೊರೆಯೇರಿದಳ್ ತನ್ನ ಬಂಜೆತನ ।
ಮಿಂದು ಪೋದುದು ಪುತ್ರವತಿಯಾದೆನೆನ್ನ ಪುಣ್ಯದ್ರುಮಂ ಫಲಿಸಿತೆಂದು ॥೫೯॥

ಬಳಿಕ ನಗರದೊಳಾದುದುತ್ಸವಂ,ಪಾರ್ವರ್ಗೆ ।
ನಿಳಯದ ಸಮಸ್ತ ವಸ್ತುಗಳನೊಲಿದಿತ್ತನೊಂ !
ದುಳಿಯದೆ ವಿಹಿತ ಜಾತಕರ್ಮವಂ ಮಾಡಿಸಲ'ಬುಧರುತ್ತರೋತ್ತರವನು ॥
ತಿಳಿದು,ನಿರ್ಮಲ ಮುಖಾಂಬುಜದಿಂ ಶಶಾಂಕನಂ ।
ಕಳಕಳಿಸಿ ನಗುವನದರಿಂ ಚಂದ್ರಹಾಸನಂ ।
ದಿಳೆಯೊಳೀತಂಗೆ ಪೆಸರಾಗಲೆಂದುಚ್ಚರಿಸಿ ನಾಮಕರಣಂಗೈದರು ॥ ೭೦ ॥

ಪಸುಳೆತನದಂದಿಂದೆ ವೃದ್ಧಾಪ್ಯದನ್ನೆಗಂ ।
ಬಿಸಜನಾಭನ ಭಕ್ತಿ ದೊರೆಕೊಳದ ಮನುಜರಂ।
ನಸು ನಗುವಧವಳದೊಳ್ಪಿಂ ಚಂದ್ರಹಾಸನಿವನಖಿಳ ಭೂಮಂಡಲದೊಳು ॥
ಪಸರಿಸುವ ಜಸದ ಬೆಳ್ಪಿಂ ಚಂದ್ರಹಾಸನಿವ।
ನಸಮ ನಕ್ಷೀಣನಕಳಂಕನತಿಶಾಂತನೆಂ ।
ದೆಸೆವ ಸದ್ಗುಣದೇಳ್ಗೆಯಿಂ ಚಂದ್ರಹಾಸನಿವನಹುದೆಂದು ಬುಧರೊರೆದರು ॥೭೧॥

ಮಂಜು ಮುಖಮಾಸ್ಪದಂ,ಚಾರು ವೃತ್ತಂ,ಕಲಾ ।
ಪುಂಜಂ,ಸದಾನಭೋಗಂ,ಕುವಲಯ ಪ್ರಿಯಂ।
ರಂಜಿಸುವ ರಾಜನೆನ್ನ ವೊಲಾದೊಡಂ ಮಿತ್ರತೇಜ ಕಳವಳಿದು ಪಗೆಯ॥
ಭಂಜನೆಗೆ ಸಿಕ್ಕಿ ಬಡತನವಟ್ಟು ಕಂದಿ ಸ್ಥಳಿ ।
ವಂ ಜಗವರಿಯೆ ಪೊತ್ತನೆಂದು ಬಿಡದಮೃತಾರ್ಚಿ ।
ಯಿಂ ಜರೆದು ನಗುವನದರಿಂ ಚಂದ್ರಹಾಸನಿವನಹನೆನೆ ಪೆಸರ' ಮೆರೆದುದು॥೭೨॥

ಕತ್ತಲೆಯ ಮನೆಗೆ ಮಣಿದೀಪಮಾದಂತೆ,ಸಲೆ।
ಬತ್ತಿದ ಸರೋವರಕೆ ನವ ಜಲಮೊದವಿದಂತೆ।
ಬಿತ್ತರದ ಕಾವ್ಯರಚನೆಗೆ ದೇವತಾಸ್ತುತಿ ನೆಗಳ್ದಂತೆ ಭೂತಳದೊಳು ॥
ಮತ್ತೆ ಸಂತಾನಮಿಲ್ಲದ ಕುಳಿಂದನ ಬಾಳ್ಕೆ
ಗುತ್ತಮ ಕುಮಾರನಾದಂ ಚಂದ್ರಹಾಸನೆನೆ
ಲುತ್ತರೋತ್ತರಮಪ್ಪುದಚ್ಚರಿಯೆ ಸುರಪುರದ ಲಕ್ಷ್ಮೀವರನ ಭಕ್ತರು ॥೭೩ ॥

ಇಪ್ಪತ್ತೊಂಭತ್ತನೆಯ ಸಂಧಿ

ಸೂಚನೆ । ಮಂತ್ರಿ ಮತ್ಸರದಿಂದೆ ಮುಂದೆ ತಪ್ಪುವ ದೈವ ।
ಯಂತ್ರಭೇದವನರಿಯದಿಂದುಹಾಸನ ಮೇಲೆ ।
ತಂತ್ರಮಂ ಪಣ್ಣಿ ಕೊಲಸುವೆನೆಂದು ಕಳುಹಿದಂ ಕುಂತಳೇಂದ್ರನ ನಗರಿಗೆ ॥

ಧ್ರುವನಂಬರಸ್ಥಳದೊಳಸ್ಮತ್ಪಿತಾಮಹಂ ।
ದಿವದೊಳ್ ಭೀಷಣಂ ಲಂಕೆಯೊಳ್ ಪಾತಾಳ ।
ಭುವನದೊಳ್ ಬಲಿ ವಿಷ್ಣುಭಕ್ತರಂ ಕಾಣ್ಬರಾರೀ ಚಂದ್ರಹಾಸನಿಂದೆ ॥
ಅವನಿ ಪಾವನಮಪ್ಪುದಾತನಂ ಸಂಧಿಸುವ ।
ಲವಲವಿಕೆಯಾಗಿಪ್ಪುದೆಲೆ ತಪೋಧನ ತನಗೆ ।
ವಿವರಿಸೀತನ ಕಥೆಯನೆಂದರ್ಜುನಂ ಕೇಳ್ದೊಡಾ ಮುನಿಪನಿಂತೆಂದನು ॥೧॥

ಆಲಿಸೆಲೆ ಫಲುಗುಣ ಕುಳಿಂದಕನ ಭವನದೊಳ್ ।
ಬಾಲಕಂ ಪೆರ್ಚುವ ಸುಧಾಂಶುಕಳೆಯಿಂ ನಗುವ ।
ಲೀಲೆಯಿಂ ಚಂದ್ರಹಾಸಂ ತಪ್ಪನೆಂಬಂತೆ ದಿನದಿನಕೆ ವರ್ಧಿಸುತಿರೆ ॥
ಮೇಲೆ ಮೇಲೆಸೆದುದಾ ಪೊಳಲ ಸಿರಿ ವಿಮಲ ಗುಣ ।
ಶೀಲದಿಂ ಮೆರೆದುದೆಲ್ಲಾ ಜನಂ ಬಿಡದೆ ಕೊಡ ।
ವಾಲಂ ಕರೆದುವಾಕಳುತ್ತು ಬಿತ್ತದೆ ಬೆಳೆಯತೊಡಗಿತಿಳೆ ಮಳೆಗಳಿಂದೆ ॥ ೨ ॥

ಸೂಚಿತದ ಪೂರ್ವಜನ್ಮದ ಪುಣ್ಯಫಲದಿಂದೆ ।
ಯಾಚಿತದೊಳನುಪಮದ ಶಿಶು ನಿಧಾನಂ ತನಗೆ ।
ಗೋಚರಿಸಿತೆಂದು ನಲಿದಾ ಕುಳಿಂದನುಮವನ ರಾಣಿಯುಂ ದಿನದಿನದೊಳು ॥
ಲೋಚನಂ ತಣಿಯೆ ನೋಡುತ ಹರ್ಷ ವಾರಿಧಿಯ ।
ವೀಚಿಯೊಳ್ ಮುಳುಗಾಡಿ ಪುತ್ರವಾತ್ಸಲ್ಯದಿಂ ।
ದಾ ಚಂದ್ರಹಾಸನಭ್ಯುದಯದೊಳ್ ಪೆರ್ಚಿದರನೇಕ ಸಂಪದಮೊದವಲು ॥೩॥

ಲಕ್ಷಣದೊಳೆಸೆವ ಸುಕುಮಾರನಂ ನಗರಿಗ ।
ಧ್ಯಕ್ಷನಾಗಿಹ ಕುಳಿಂದಂ ಕೆಲವು ದಿನದ ಮೇ ।
ಲಕ್ಷರಾಭ್ಯಾಸಕಿರಿಸಿದೊಡೆ ಹರಿಯೆಂಬೆರಡು ವರ್ಣಮಲ್ಲದೆ ಪೆರತನು ॥
ಅಕ್ಷಿಯಿಂದೀಕ್ಷಿಸದೆ ವಾಚನದಿರಲ್ಕೆ ಗುರು ।
ಶಿಕ್ಷಿಸಿ ಕನಲ್ದು ಬರೆಯೆಂದೊಡಂ ಕೇಳದಿರೆ ।
ತತ್ಕ್ಷಣದೊಳಾತನೈತಂದವನ ತಾತಂಗದಂ ಪೇಳ್ದೊಡಿಂತೆಂದನು ॥೪॥

ಈತನೇಕಾದಶಿಯೊಳುಪವಾಸಮಂ ಮಾಳ್ಪ।
ನೀತನಂ ಕಂಡು ನಾವೆಲ್ಲರುಮನುಷ್ಠಿಸುವೆ।
ವೀತನಚ್ಯುತಭಕ್ತ ನೀತನಿಂದೆನಗಪ್ಪುದಭ್ಯುದಯಮಿಹಪರದೊಳು॥
ಈತನಲ್ಲದೆ ಬೇರೆ ತನುಜಾತರಿಲ್ಲ ತನ।
ಗೀತನಲ್ಲಿಯೆ ಜೀವಮಾಗಿರ್ಪನಿನ್ನದರಿ।
ನೀತನೆಂತಾದೊಡಿರಲೀತಂಗೆ ಶಿಕ್ಷೆ ಬೇಡೆಂದಂ ಕುಳಿಂದನಂದು ॥ ೫ ॥

ಅಂದು ಮೊದಲಾಗಿ ತನ್ನಿಚ್ಛೆಯಿಂ ಚಂದ್ರಹಾ।
ಸಂ ದಾನವಾರಿಯಂ ಬಿಡದೆ ಬಾಲಕ್ರೀಡೆ।
ಯಿಂದುತ್ಸವಂಗಳಂ ಮಾಡಿ ಕೆಳೆಯರ್ವೆರಸಿ ಕೊಂಡಾಡಿ ಭಕ್ತಿಯಿಂದೆ॥
ತಂದು ಫಲ ವರ್ಗಮಂ ಪೂಜೆಗೈದುಪವಾಸ।
ದಿಂದ ಜಾಗರಣದಿಂದೇಕಾದಶೀ ವ್ರತವ।
ನಂದದಿಂದಾಚರಿಪನಖಿಳ ಜನಕುಪದೇಶಿಪಂತೆ ಹರಿ ಮಹಿಮೆಗಳನು ॥ ೬ ॥

ಮೆಲ್ಲನಿಂತಿರಲೆಂಟನೆಯ ವರುಷಮಾಗಲ್ಕೆ।
ನಿಲ್ಲದುಪನಯನಮಂ ವಿರಚಿಸಿ ಕುಳಿಂದಂ ಸ।
ಮುಲ್ಲಾಸಮಂ ತಾಳ್ದನಂಗಸಹಿತಖಿಳ ವೇದಂಗಳಂ ನೀತಿಗಳನು॥
ಸಲ್ಲಲಿತ ಶಬ್ದಾದಿ ಶಾಸ್ತ್ರಸಿದ್ಧಾಂತಂಗ।
ಳೆಲ್ಲಮಂ ಗುರುಮುಖದೊಳಧಿಕರಿಸಿ ಬೇಕಾದ।
ಬಿಲ್ಲವಿದ್ಯೆಯನರಿದು ಗಜ ತುರಗದೇರಾಟದೊಳ್ ಚತುರನಾದನವನು॥ ॥ ೭॥

ವಿದಿತ ವೇದಾರ್ಥಮಂ ವಿಷ್ಣುವೆಂದರಿದು ಬಹು।
ವಿಧ ಶಾಸ್ತ್ರತತಿಗೆ ಹರಿ ಗತಿಯೆಂದು ತಿಳಿದು ತಾ।
ನಧಿಕರಿಸಿ ಬಳಿಕ ನಿಜಭಕ್ತಿಚಾಪಕೆ ಸತ್ವಗುಣವನಳವಡಿಸಿ ತನ್ನ॥
ಸುಧಿಯ ಶರಮಂ ಪೂಡಿ ಕೃಷ್ಣನಂ ಗುರಿಮಾಡಿ।
ವಿಧುಹಾಸನನುಪಮ ಧನುರ್ವಿದ್ಯೆಯಂ ಜಗದೊ।
ಳಧಿಕತರಮಾಗೆ ಸಾಧಿಸಿ ಪರಮ ಭಾಗವತ ಕಲೆಗಳಿಂದೆಸೆದಿರ್ದನು ॥ ೮ ॥

ಷೋಡಶ ಪ್ರಾಯದೊಳವಂ ಪ್ರಬಲ ಭಟನಾಗಿ।
ಮೂಡಿದಗ್ಗಳಿಕೆಯಿಂದೈದೆ ರಥಿಕರ್ಕಳಂ।
ಕೂಡಿಕೊಂಡೈದಿ ನಿಜ ತಾತಂಗೆ ಮಲೆವ ಮನ್ನೆಯರೆಲ್ಲರಂ ಘಾತಿಸಿ॥
ಮಾಡಿದಂ ದಿಗ್ವಿಜಯಮಂ ಕುಳಿಂದಕನಾಳ್ವ।
ನಾಡಲ್ಲದೆಣ್ದೆಸೆಯ ಸೀಮೆಗಳನೊತ್ತಿದಂ।
ಪೂಡಿಸಿದನವರವರ ಮನೆಗಳ ಸುವಸ್ತುಜಾಲಂಗಳಂ ತನ್ನ ಪುರಕೆ ॥ ೯ ॥

ಹರಿಯನಾರಾಧಿಸದೆ ರಾಜ್ಯಮದದಿಂ ಸೊಕ್ಕಿ ।
ದರಿ ಭೂಪರಂ ಗೆಲ್ದು ಮಣಿ ಕನಕ ಮುಕ್ತಾಳಿ ।
ಕರಿ ತುರಗ ಮೊದಲಾದ ಮುಖ್ಯ ವಸ್ತು ಪ್ರತತಿ ಸಹಿತ ಪಟ್ಟಣಕೆ ಬರಲು ॥
ಪುರದ ಸಿಂಗರದ ಮಂಗಳ ವಾದ್ಯರವದಬಳೆ ।
ಯುರ ಸೊಡರ್ವೆಳಗಿನಾರತಿಗಳ ಮಹೋತ್ಸವದ ।
ಸಿರಿಯೊಳ್ ಕುಳಿಂದಂ ಕುಮಾರನನಿದಿರ್ಗೊಳಿಸಿ ಮತ್ತೆ ಕಾಣಿಸಿಕೊಂಡನು ॥೧೦॥

ತಾಯಿತಂದೆಗಳೀಗಳಿಂದಿರಾದೇವಿ ನಾ ।
ರಾಯಣರ್ ತನಗೆಂದು ಭಾವಿಸಿ ನಮಿಸಲವರ್ ।
ಪ್ರೀಯದಿಂ ತನಯನಂ ತೆಗೆದಪ್ಪಿದರ್ ಬಳಿಕ ಪುರವೀಧಿಯೊಳ್ ಬರುತಿರೆ ॥
ಆಯತಾಕ್ಷಿಯರಾಗಳಲರ್ಗಳಂ ಚೆಲ್ಲಿದರ್ ।
ಕಾಯಜಾಕೃತಿಯೊಳ್ಳೈತಹ ಚಂದ್ರಹಾಸನ ವಿ ।
ಡಾಯಮಂ ನೋಡುವ ಕಟಾಕ್ಷದ ಮರೀಚಿಗಳ ವೀಚಿಗಳ ವಿಕಿರದೊಡನೆ ॥ ೧೧ ॥

ನಿಳಯಕ್ಕೈತಂದನುತ್ಸವದಿಂ ಕುಳಿಂದಕಂ ।
ಬಳಿಕ ತನ್ನಾಧಿಪತ್ಯವನಾತ್ಮಜಂಗೆ ಮಂ ।
ಗಳ ಮುಹೂರ್ತದೊಳಿತ್ತನಂದಿಸಿಂ ಚಂದ್ರಹಾಸಂ ಪಾಲಿಸುವನಿಳೆಯನು ॥
ತುಳುಕಾಡಿತಾನಾಡ ಸಿರಿ ಚಂದನಾವತಿಯು ।
ಪೊಳಲ ಸೌಭಾಗ್ಯಮಭಿವರ್ಧಿಸಿತು ವೈಷ್ಣವದ ।
ಬಳೆವಳಿಗೆಯಾದುದೆಲ್ಲಾ ಜನದೊಳಾಚಾರ ಗುಣ ದಾನ ಧರ್ಮದಿಂದೆ ॥ ೧೨ ॥

ದಶಮಿಯ ಮಹೋತ್ಸವಂ ಪೆರ್ಚಿತೇಕಾದಶಿಯೊ ।
ಳಶನಮಂ ತೊರೆದರಚ್ಯುತ ಪರಾಯಣರಾಗಿ ।
ನಿಶೆಯೊಳ್ ನಿರಂತರಂ ನಿದ್ರೆಯಂ ಬಿಟ್ಟರಾ ಮರುದಿನಂ ದ್ವಾದಶಿಯೊಳು ॥
ಕುಶಶಯನ ಪೂಜೆಯಂ ಮಾಡಿ ಭುಂಜಿಪರಿಂತ ।
ತಿಶಯಮಾದುದು ಮೇಲೆ ಮೇಲೆ ಮಾಧವ ಭಕ್ತಿ ।
ವಿಶದ ಗುಣನಿಧಿ ಚಂದ್ರಹಾಸನಾಜ್ಞೆಯೊಳವನ ದೇಶದ ಸಮಸ್ತ ಜನಕೆ ॥೧೩॥

ಜಲಜಾಕ್ಷ ಭಕ್ತಿಯಿಂ ಪ್ರಹ್ಲಾದನಾಗಿ ನಿ ।
ಶ್ಚಲ ಹರಿಧ್ಯಾನದಿಂ ಧ್ರುವನಾಗಿ ಸತ್ವದಿಂ ।
ಬಲಿಯಾಗಿ ಶಾಂತತ್ವದಿಂ ವಿಭೀಷಣನಾಗಿ ವೈಷ್ಣವಾಭರಣನೆಂಬ ॥
ಕಲೆಯಿಂದೆ ಮಹಿಗೆ ರುಕ್ಮಾಂಗದಂ ತಾನಾಗಿ ।
ಸಲೆ ಕೀರ್ತಿಯಿಂ ಪುಂಡರೀಕನಾಗಿರುತಿಹಂ ।
ಸುಲಲಿತ ಚರಿತ ಭಾಗವತ ಶಿರೋಮಣಿ ಚಂದ್ರಹಾಸನುರ್ವೀತಳದೊಳು ॥೧೪॥

ರೂಪಿಂದೆ ಮದನನುಂ ನಾರಿಯರುಮಮಿತ ಪ್ರ।
ತಾಪದಿಂ ದಿನಪನುಂ ಪರ ಮಹೀಪಾಲರುಂ।
ವ್ಯಾಪಿಸಿದ ಕೀರ್ತಿಯಿಂ ಪೀಯೂಷ ಕಿರಣನುಂ ತಾರೆಗಳುಮಭಿವರ್ಧಿಪ ॥
ಶ್ರೀಪತಿಯ ಭಕ್ತಿಯಿಂ ಗರುಡನುಂ ಸನಕಾದಿ।
ತಾಪಸರುಮೈದೆ ಸೋಲ್ದಪರೆಂದೊಡಿನ್ನುಳಿದ ।
ಕಾಪುರುಷರೀ ಚಂದ್ರಹಾಸನಂ ಪೋಲ್ದಪರೆ ಪೇಳೆಂದು ಮುನಿ ನುಡಿದನು ॥೧೫॥

ಈತೆರದೊಳಿರೆ ಕುಳಿಂದಂ ಚಂದ್ರಹಾಸನಂ।
ಪ್ರೀತಿಯಿಂದಂ ಕರೆದು ನುಡಿದನೆಲೆ ಮಗನೆ ವಿ।
ಖ್ಯಾತಮಾಗಿಹ ರಾಜಧಾನಿ ಕುಂತಳಮಿಲ್ಲಿಗಾರುಯೋಜನದೊಳಿಹುದು ॥
ಭೂತಳಮಿದಾನಗರದರಸಿನದು ನಮಗೊಡೆಯ ।
ನಾತನ ಶಿರಃಪ್ರಧಾನಂ ದುಷ್ಟಬುದ್ಧಿ ಸಂ।
ಜಾತ ವಸ್ತುಗಳ ಸಿದ್ಧಾಯಮಂ ಕುಡುವೇಳ್ಪುದರಸಂಗೆ ನಾವೆಂದನು ॥ ೧೬ ॥

ರಾಯಂಗೆ ವರ್ಷವರ್ಷಕೆ ನಾವು ಕುಡುವ ಸಿ।
ದ್ಧಾಯಮಂ ದುಷ್ಟಬುದ್ಧಿಗೆ ಸಲಿಸಿ ಬರ್ಪ ನಿ।
ಷ್ಕಾಯುತ ದ್ರವ್ಯಮಂ ನೃಪನ ರಾಣಿಗೆ ಪುರೋಹಿತನಾದ ಗಾಲವಂಗೆ ॥
ಪ್ರೀಯದಿಂದುಪಚರಿಸುವರ್ಥಮಂ ತತ್ಕಾಲ।
ಕೀಯಬೇಕೆಲೆ ಮಗನೆ ಧನವನೊದವಿಸಿ ಕಳುಹ।
ನೂಯೆಗೀಡಾಗಬೇಡೆಂದು ನಿಜನಂದನಂಗಾ ಕುಳಿಂದಂ ಪೇಳ್ದನು ॥ ೧೭ ॥

ಪಿತನ ಮಾತಂ ಕೇಳ್ದು ಚಂದ್ರಹಾಸಂ ಮಹೀ ।
ಪತಿಗೆ ಮಹಿಷಿಗೆ ಮಂತ್ರಿ ದುಷ್ಟಬುದ್ಧಿಗೆ ಪುರೋ ।
ಹಿತ ಗಾಲವಂಗೆ ಸಲಿಸುವ ಧನವನದರ ಸಂಗಡಕೆ ತಾನಾಹವದೊಳು ॥
ಪ್ರತಿಭೂಪರಂ ಜಯಿಸಿ ತಂದ ವಸ್ತುಗಳನಂ।
ಕಿತದಿಂದೆ ಕಟ್ಟಿ ಶಕಟೋಷ್ಟ್ರಕರಿ ಭಾರಗಳ।
ಶತ ಸಂಖ್ಯೆಯಿಂದೆ ಕಳುಹಿದನಾಪ್ತರಂ ಕೂಡಿಕೊಟ್ಟು ಕುಂತಳ ನಗರಿಗೆ ॥ ೧೮ ॥

ಹಸ್ತಿ ಹಯ ರತ್ನ ವಸ್ತ್ರಾಭರಣ ಕರ್ಪೂರ।
ಕಸ್ತೂರಿ ಮಲಯಜ ಸುವರ್ಣ ರಜತಾದ್ಯಖಿಳ ।
ವಸ್ತುಚಯಮಂ ಕೊಂಡು ಚಂದ್ರಹಾಸನ ಚರರ್ ಬಂದು ಕುಂತಳ ನಗರಿಗೆ ॥
ವಿಸ್ತಾರದಿಂದೆಸೆವ ನಗರೋಪಕಂಠದ ನ ।
ರಸ್ತೀರದೊಳ್ ಮಿಂದು ಚಕ್ರಿಯಂ ಪೂಜೆಗೈ ।
ದಸ್ತಮಯ ಸಮಯದೊಳ್ ಪೊಕ್ಕರಾ ಪಟ್ಟಣವನತಿಶುಚಿರ್ಭೂತರಾಗಿ ॥ ೧೯ ॥

ನೊಸಲೊಳೆಸೆವೂರ್ಧ್ವಪುಂಡ್ರದ ಸುಧೌತಾಂಬರದ ।
ಮಿಸುಪ ತುಳಸಿಯ ದಂಡೆಗಳ ಕೊರಳ ನಿಚ್ಚಳದ ।
ದಶನಪಙ್ಕ್ತಿಯ ವಿಕಿಲ್ಬಿಷಗಾತ್ರದಚ್ಛಸಾತ್ವಿಕ ಭಾವದಿಂದೆ ಮೆರೆವ ॥
ಶಶಿಹಾಸನನುಚರರ್ ಬಂದು ಕಾಣಲ್ಕಿದೇಂ।
ಪೊಸಶಕಟ ನಿಮಗೀಗಳೇಕೆ ಶುದ್ಧಿಸ್ನಾನ।
ಮಸುವಿಡಿದಿಹನೆ ಕುಳಿಂದಕನೆಂದು ಶಂಕೆಯಿಂ ಕೇಳ್ದನಾ ದುಷ್ಟಬುದ್ಧಿ ॥ ೨೦ ॥

ಅಶುಭಕೋಟಿಯನೊರಸುವೇಕಾದಶೀ ವ್ರತಕೆ ।
ವಿಶದ ಸಲಿಲಸ್ನಾನವಿಂದೆಮಗೆ ಸಮನಿಸಿತು ।
ಕುಶಲದಿಂ ಬಾಳ್ವಂ ಕುಳಿಂದನಾತನ ಸೂನು ಚಂದ್ರಹಾಸಂಗೆ ನಾಡು ॥
ವಶವರ್ತಿಯಾಗಿರ್ಪುದವನಾಜ್ಞೆಯಿಂದುಭಯ ।
ದಶಮಿಯೊಳ್ ನಡೆವುದುತ್ಸವವಚ್ಯುತಂಗೆ ಕ ।
ರ್ಕಶಮಿಲ್ಲದಖಿಳಜನಮಂ ಬಿಡದೆ ಪಾಲಿಪಂ ಹರಿಭಕ್ತಿನಿರತನಾಗಿ ॥ ೨೧ ॥

ಸುತ್ತಲುಂ ದಿಗ್ವಿಜಯಮಂ ಮಾಡಿ ರಿಪು ನೃಪರ ।
ನೊತ್ತಿ ಭುಜಬಲದಿಂದೆ ಕಪ್ಪಮಂ ಕೊಂಡು ಬಂ ।
ದುತ್ತಮ ಸುವಸ್ತುಗಳನೆಂದುಮೀವರ್ಥಮಂ ಚಂದ್ರಹಾಸಂ ಕಳುಹಲು ॥
ಪೊತ್ತುತಂದಿಹೆವನೇಕ ದ್ರವ್ಯವರಮನೆಗೆ ।
ಹತ್ತು ನಿನಗೊಂದರೆಣಿಕೆಯೊಳೆಂದು ಲೇಖನವ ।
ನಿತ್ತೊಡೆ ಕುಳಿಂದಕನ ಸೇವಕರ್ಗಾ ದುಷ್ಟಬುದ್ಧಿ ಮಗುಳಿಂತೆಂದನು ॥ ೨೨ ॥

ಏನಿದೆತ್ತಣ ಕೌತುಕದ ನುಡಿ ಕುಳಿಂದಂಗೆ ।
ಸೂನು ಜನಿಸಿರ್ದಪನೆ ಬಂಜೆಯಾಗಿಹಳವನ ।
ಮಾನಿನಿ ವಿಚಿತ್ರಮೆನಲಾಚರರ್ ಜೀಯ ಪುಸಿಯಲ್ಲವಂ ಬೇಂಟೆಗೈದೆ ॥
ಕಾನನದ ಮಧ್ಯದೊಳನಾಥನಾಗಿಹ ಶಿಶು ನಿ ।
ಧಾನಮಿರೆ ಕಂಡೆತ್ತಿಕೊಂಡು ಬಂದನಾತ್ಮಜ ಪ ।
ಧಾನದಿಂದೋಪಿದಂ ಪ್ರೀತಿ ಮಿಗೆ ಚಂದ್ರಹಾಸಾಭಿಧಾನದೊಳೆಂದರು ॥ ೨೩ ॥

ಕೇಳಿ ವಿಸ್ಮಿತನಾದನಾ ದುಷ್ಟಬುದ್ಧಿ ನಾಂ ।
ಪಾಳೆಡವಿಯೊಳ್ಪಸುಳೆಯಂ ಕೊಂದು ಬಹುದೆಂದು ।
ಹೇಳಿದೊಡೆ ಚಂಡಾಲರಂದುಳುಹಿ ಬಂದರಹುದೆಂದು ನಿಶ್ಚೈಸಿ ಬಳಿಕ ॥
ತಾಳಿದಂ ದ್ವೇಷಮಂ ಚಿತ್ತದೊಳ್ ಪೊರಗೆ ಕರು ।
ಣಾಳುಗಳ ತೆರದಿಂದವರ್ಗಳಂ ಮನ್ನಿಸಿ ನಿ ।
ಜಾಲಯಕೆ ತೆಗೆಸಿದಂ ಚಂದ್ರಹಾಸಂ ಕಳುಹಿದಗಣಿತ ಸುವಸ್ತುಗಳನು ॥ ೨೪ ॥

ಇಂದುಹಾಸನ ದೂತರುಪವಾಸವಿರದಾರ |
ದೆಂದು ಬಾಣಸಿಗರಂ ಕರೆಸಿ ಬಹುವಿಧ ಪಾಕ |
ದಿಂದೆ ಷಡ್ರಸ ಭೋಜ್ಯಮಂ ಮಾಡಿಸಿದೊಡೂಟಕವರೊಲ್ಲೆವೆನೆ ಕನಲ್ದು ||
ಎಂದಿನಂತಲ್ಲ ಗರ್ವಿಸಿದಂ ಕುಳಿಂದನವ |
ನಿಂದೆ ಸೊಕ್ಕಿದರವನ ಭೃತ್ಯರವರೆಲ್ಲರಂ |
ತಂದು ಕಾರಾಗಾರದೊಳ್‘ನಿಗಳಮಂ ಪೂಡಿಸುವೆನೆಂದನಾ ಸಚಿವನು || ೨೫ ||

ಕಷ್ಟಮೇತಕೆ ಜೀಯ ಹರಿವಾಸರ ವ್ರತ |
ಭ್ರಷ್ಟರಾದಪೆವೆಂಬ ಭಯಕೆ ನಿನ್ನಾಲಯದ |
ಮೃಷ್ಟಾನ್ನಮಾವೊಲ್ಲೆದಿರ್ದೆವೈಸಲೆ ಗರ್ವದಿಂ ಬೇರೆಯಲ್ಲವೆಂದು ||
ದುಷ್ಟಬುದ್ಧಿಯ ಚಿತ್ತಮಂ ತಿಳುಹಿ ಮರುದಿನದೊ |
ಳಿಷ್ಟಭೋಜನದಿಂದೆ ಸನ್ಮಾನಮಂ ತಳೆದು |
ಹೃಷ್ಟಮಾನಸರಾಗಿ ಬೀಳ್ಕೊಂಡು ತಿರುಗಿದರ್‘ಚಂದ್ರಹಾಸನ ದೂತರು || ೨೬ ||

ಮನ್ನಿಸಿ ಕುಳಿಂದಕನ ಚರರಂ ಕಳುಹಿ ಮಂತ್ರ |
ಭಿನ್ನಮಾಗದವೊಲರಮನೆಗೆ ಬಂದಾಗ ತಾ |
ನುನ್ನಿಸಿದ ಬಗೆಯನಾಳೋಚಿಸಿ ನೃಪಾಲನಂ ಬೀಳ್ಕೊಂಡು ಮದನನೆಂಬ ||
ತನ್ನ ತನಯನ ಮೇಲೆ ರಾಜಕಾರ್ಯದ ಭಾರ |
ಮನ್ನಿಯೋಜಿಸಿ ದುಷ್ಟಬುದ್ಧಿ ಪೊರಮಡುತಿರ್ದ |
ನನ್ನೆಗಂ ವಿಷಯಾಭಿಧಾನದಿಂದೆಸೆವ ನಿಜಸುತೆ ಭರದೊಳೈತಂದಳು || ೨೭ ||

ತನು ಸೊಂಪಡರ್ದು ನುಂಪಿಡಿದು ಕಂಪೊಗೆಯೆ ಲೋ |
ಚನದ ನೋಟದ ಹೊಳಹು ಹೊಡಕರಿಸೆ ಚೆಲ್ವ ಕದ |
ಪಿನ ಕಾಂತಿ ಕಳಕಳಿಸೆ ನಸುಲಜ್ಜೆ ನಗೆಮೊಗದೊಳಂಕುರಿಸೆ ತನಿ ಸೊಬಗಿನ ||
ವನಜ ಕುಟ್ಮಲದಂತೆ ಕುಚ ಯುಗಂ ಪೊಣ್ಮೆ ಜಡ|
ತನದಿಂದೆ ನಡುವೆಸೆಯೆ ಗತಿ ಮಂದಮಾಗೆ ಜೌ |
ವನದೇಳ್ಗೆಯಿಂದೆಸೆವ ವಿಷಯೆ ನಿಜತಾತನ ಸಮೀಪಕೈತರುತಿರ್ದಳು || ೨೮ ||

ಎಸಳ್ಗಂಗಳ ದಿಟ್ಟಿ ಮನ್ಮಥನ ಕರದಿಟ್ಟಿ |
ಮಿಸುಪ ಪುರ್ಬಿನ ಗಾಡಿ ದರ್ಪಕನ ಸಿಂಗಾಡಿ |
ಲಲಿತ ಮಂದಸ್ಮಿತಂ ಮುನಿಜನದ ವಿಸ್ಮಿತಂ ಕುರುಳು ವಿಟ ನಿಕರದುರುಳು ||
ಅಸಿಯ ಕೋಮಲ ಕಾಯ ಮಂಗಜೋತ್ಸವ ಕಾಯ |
ಮೆಸೆವ ನವ ಯೌವನಂ ಸ್ಮರನ ಕೇಳೀವನಂ |
ಪೊಸತಿದೆನಲಾ ವಿಷಯೆ ಜನಿತ ಮೋಹನ ವಿಷಯೆ ಪಿತನೆಡೆಗೆ ನಡೆತಂದಳು ||೨೯||

ಕನ್ನೆ ವೆಣ್ಗಳ ಕೆಳದಿಯರ ಕೂಡೆ ಶೈಶವೋ |
ಛ್ಛಿನ್ನಯೌವನೆಯಾದ ವಿಷಯೆ ಬರೆ ಕಂಡಿವ |
ಳ್ಗಿನ್ನು ವರನಾಗಬೇಕೆಂದು ಚಿಂತಿಸಿ ಮನದೊಳಾ ದುಷ್ಟಬುದ್ಧಿ ಬಳಿಕ |
ತನ್ನ ಮಗಳಂ ತೆಗೆದು ತಕ್ಕೈಸಿ ವಾತ್ಸಲ್ಯ |
ದಿನ್ನಾಳೆ ಬಂದಪೆಂ ಪೋಗು ನಿಜ ಭವನಕೆನೆ |
ಸನ್ನುತ ವಸಂತದೊಳ್ದಾಯ್ದೆರೆವ ಕೋಗಿಲೆಯ ಮರಿವೊಲವಳಿಂತೆಂದಳು ‖೩೦‖

ತಾತ ನಂದನದೊಳಾಂ ನೀರ್ವೊಯ್ದು ಬೆಳೆಯಿಸಿದ |
ಚೂತಲತೆ ಪೂತುದಿನ್ನುದ್ಯಾಪನಂಗೈಸ |
ದೇತಕಿರ್ದಪೆ ರಾಜಕಾರ್ಯಮೇನೆಂದು ತಲೆವಾಗಿ ನಸುಲಜ್ಜೆಯಿಂದೆ ‖
ಮಾತನಾಡುವ ಮಗಳ ಭಾವವಂ ಕಂಡು ಸಂ |
ಪ್ರೀತಿಯಿಂತಿಳಿಪಿ ಮೈದಡವಿ ಮುದ್ದಿಸಿ ತನ್ನ |
ಜಾತ ಮದನಂಗಿವಳ ನೋಪಿಯಂ ಮಾಡಿಸೆಂದಾ ಮಂತ್ರಿ ನೇಮಿಸಿದನು ‖೩೧‖

ಮನೆಗೆ ಮಗಳಂ ಕಳುಹಿ ರಾಜಕಾರಿಯಕೆ ಮುದ |
ನನೆಸಿರಿಸಿ ತನ್ನ ಪರಿಜನ ಸಹಿತ ಪೊರಮಟ್ಟು |
ದಿನವೆರಡಕ್ಕೈತಂದು ಮುನ್ನಿರ್ದ ಕಾಡೆಲ್ಲಮೆಸೆವ ನಾಡಾಗಿರಲ್ಕೆ ‖
ಮನದೊಳ್ಕರುಬನಾಂತು ಮೆಚ್ಚಿದವನಾಗಿ ಲೇ |
ಸಿನೊಳಾ ಕುಳಿಂದಕನಿದಿರ್ವಂದು ಸತ್ಕರಿಸೆ |
ಘನವಿಭವದಿಂದೆ ರಾಜಿಪ ಚಂದನಾವತಿಗೆ ಬಂದನಾ ದುಷ್ಟಬುದ್ಧಿ ‖ ೩೨ ‖

ರಿಪುಮಥನ ಕೇಳ್ಕುಳಿಂದಂ ಬಹಳ ವೈಭವದೊ |
ಳುಪಚರಿಸಿ ತನ್ನ ನಂದನ ಚಂದ್ರಹಾಸನಂ |
ವಿಪುಲ ಪರಿತೋಷದಿಂದೊಡೆಯಂಗೆ ಕಾಣಿಕೆಯನಿಡಿಸಿ ಕಾಣಿಸಿದ ಬಳಿಕ ‖
ವಿಪಿನದೊಳ್ತನಗೀ ಕುಮಾರಕಂ ಮುಂಗೈದ |
ತಪದ ಫಲದಿಂ ತಾನೆ ದೊರೆಕೊಂಡನೀತನಂ |
ಕೃಪೆಯಿಂದೆ ನೀವೆ ಪಾಲಿಸವೇಳ್ಪುದೆಂದು ನಿಜಪತಿಗೆ ಕೈವರ್ತಿಸಿದನು ‖ ೩೩ ‖

ಗಾಡಿಸಿದ ನೃಪಲಕ್ಷಣದ ಚಂದ್ರಹಾಸನಂ |
ನೋಡಿ ವಿಸ್ಮಿತನಾಗಿ ತನ್ನ ಮನದೊಳ್ಪಿಂತೆ |
ಮಾಡಿಸಿದ ಕೃತ್ಯಮಂ ನೆನೆದು ವಂಚಿಸಿದರೇ ಚಂಡಾಲರೆಮ್ಮನೆಂದು ‖
ಕೂಡೆ ಮಮ್ಮಲಮರುಗಿ ಪುಸಿಗೆ ನಸು ನಗುತ ಕೊಂ |
ಡಾಡಿ ಮನ್ನಿಸಿ ತನಗೆ ನಿನ್ನ ಸುತನಂ ಕಂಡು |
ಮೂಡಿತುತ್ಸವಮೆಂದನಾ ದುಷ್ಟಬುದ್ಧಿ ವಿನಯದೊಳಾ ಕುಳಿಂದನೊಡನೆ ‖ ೩೪ ‖

ವ್ಯಾಳದಂಗದ ನಯವೊ ಗರ್ತಸಂಛಾದಿತ ತೃ ।
ಣಾಳಿಗಳೊ ಮಕರದಿಕ್ಕಿಯ ಮಡುವಿನಂಬುಜವೊ।
ಬಾಳ ಧಾರೆಗೆ ಲೇಪಿಸಿದ ಮಧುವೊ ಕಮಲಾಂಬಕಿಯರ ಕೃತಕದ ಬೇಟವೊ ।
ಕಾಳಕೂಟಂಬೆರಸಿದಮೃತಾನ್ನಭೋಜನವೊ ।
ಪೇಳಲರಿದೆನೆ ಸೊಗಸಿತಾ ದುಷ್ಟಬುದ್ಧಿ ಘಾ ।
ತಾಳಿಕೆಯನೊಳವುದುಗಿ ಹರ್ಷಲಾಂಛನದಿಂದೆ ನಸುನಗುತ ನುಡಿದ ಮಾತು
॥ ೩೫ ॥

ಎತ್ತ ಬಲ್ಲರ್ ಸುಜನರೆಲೆ ಪಾರ್ಥ ಕಪಟಿಗಳ।
ಚಿತ್ತದೊಳ್ಪುದುಗಿರ್ದ ಮಾಟಮಂ ವೀಳಯವ ।
ನಿತ್ತು ಮನ್ನಿಸಿ ಮಂತ್ರಿಪತಿ ಚಂದ್ರಹಾಸನಂ ಕರೆದು ಕುಳ್ಳಿರಿಸಿಕೊಂಡು॥
ಮತ್ತೆ ಮನದೊಳ್ ಮುನ್ನ ಭೂಸುರರ್ ತನಗೆಂದ ।
ವೃತ್ತಾಂತಮಂ ನೆನೆದು ತನ್ನ ಸುತರಾಳ್ಕೆಗಾ ।
ಯಿತ್ತು ಕಂಟಕಮಕಟ ಪಗೆಯಾದನಿವನೊರ್ವನೆಂದು ಚಿಂತಿಸುತಿರ್ದನು ॥ ೩೬॥

ಬಂಜೆಯಾಗದು ವಿಪ್ರರಂದೆನ್ನೊಳೆಂದ ನುಡಿ।
ರಂಜಿಸುವ ರಾಜಲಕ್ಷಣದೊಳೊಪ್ಪುವ ನಿವಂ ।
ಭಂಜಿಸದೊಡೀ ಧರಣಿಗೀತನರಸಾದಪಂ ಬಳಿಕ ತನ್ನಾತ್ಮಜರ್ಗೆ ॥
ಸಂಜನಿಸಲರಿದು ಭೂಪಾಲತ್ವಮಗ್ಗಳಿಕೆ ।
ಗಂಜುವವನಲ್ಲ ಬಲವಂತನಹನೀತಂಗೆ ।
ನಂಜನೂಡಿಸಿ ಕೊಲ್ವುಪಾಯಂ ಮಾಳ್ಪೆನೆಂದೆಣಿಸಿದಂ ದುಷ್ಟಬುದ್ಧಿ ॥ ೩೭ ॥

ರಾಕಾಶಶಾಂಕನಭ್ಯುದಯಮಂ ಕೆಡಿಸಿ ತ।
ನ್ನಾಕಾರಮಂ ತೋರಿಸುವೆನೆಂಬ ಕತ್ತಲೆವೊ।
ಲಾ ಕಮಲಲೋಚನನ ಭೃತ್ಯನಂ ಕೊಲಿಸಿ ತಾಂ ಬಾಳ್ವೆನೆಂಬುಜ್ಜುಗದೊಳು ।
ಆ ಕುಮತಿಯಹಮಂತ್ರಿ ಬಳಿಕೊಂದು ಲೇಖನವ ।
ನೇಕಾಂತದೊಳ್ ಬರೆದು ಮೇಣದಕೆ ಮುದ್ರೆಯಂ ।
ಜೋಕೆಯಿಂದಳವಡಿಸಿ ಶಶಿಹಾಸನಂ ನೋಡಿ ನಸುನಗುತಲಿಂತೆಂದನು ॥ ೩೮ ॥

ಉರ್ವ ಮಂತ್ರದ ಕಜ್ಜಮಿದು ಚಂದ್ರಹಾಸ ನೀ ।
ನೊರ್ವನೆ ಹಯಾರೂಢನಾಗಿ ನಾಲ್ವರ್ ಸೇವ ।
ಕರ್ವೆರಸಿ ರಾಜಧಾನಿಗೆ ಪೋಗಿ ತನ್ನ ಮಗ ಮದನಂಗೆ ಮುದ್ರೆಸಹಿತ ॥
ಸರ್ವಜನಮರಿಯದಂತೀವುದೀ ಪತ್ರಿಕೆಯ ।
ನುರ್ವರೆಯೊಳಾವೆಸಗಿದತಿಶಯದ ಮಾಳ್ಕೆ ನ ।
ಮ್ಮಿರ್ವರೊಳ್ ಗುಪ್ತಮಾಗಿರಲೆಂದು ಕೊಟ್ಟನಾ ಮಂತ್ರಿ ತಲ್ಲೇಖನವನು ॥ ೩೯॥

ಪ್ರೀತಿಯಿಂ ಪೇಳ್ದನಂತಸ್ಥಮಂ ತನ್ನೊಳೀ ।
ಮಾತು ನಿಶ್ಚಯವೆಂದು ನಂಬಿ ಕೈಕೊಂಡು ಹ ।
ರ್ಷಾತಿಶಯದಿಂದೆ ಮಂತ್ರಿಗೆ ಮಣಿದು ಬೀಳ್ಕೊಂಡು ವಂದಿಸಿ ಕುಳಿಂದನಡಿಗೆ ॥
ಆತನೊಳ್ ಪರಕೆವೆತ್ತೊಡನೆ ಕಳುಹಿಸಿಕೊಂಡು ।
ಮಾತೆ ಮೇಧಾವಿನಿಗೆ ಬಂದು ನಿರ್ಗಮವನಾ ।
ಖ್ಯಾತಿಸಿ ಪದಾಂಬುಜಕೆ ಪಣಿಯಿಟ್ಟನಾ ಚಂದ್ರಹಾಸನಭ್ಯಗ್ರದಿಂದೆ ॥ ೪೦ ॥

ಆ ಸುದತಿ ಪಣಿವಿಡಿದು ನೆಗಪಿ ಸುಕುಮಾರಂಗೆ ।
ಸೇಸೆದಳೆದಾರತಿಯನೆತ್ತಿ ತಿಲಕವನಿಟ್ಟು ।
ಭಾಸುರ ಸುಲಾಜ ದಧಿ ದೂರ್ವಾಕ್ಷತಗಳೊಡನೆ ತಳಿಗೆದಂಬುಲವನಿತ್ತು ॥
ಲೇಸೊದವಲಧ್ವದೊಳ್ ನಿನ್ನವಯವಂಗಳಂ ।
ವಾಸುದೇವಂ ಕಾಯಲನುಕೂಲೆಯಾಗಿಪ ವ ।
ಧೂ ಸಮನ್ವಿತನಾಗಿ ರಾಜ್ಯಮಂ ಪಡೆಯೆಂದು ಪರಸಿ ಬೀಳ್ಕೊಟ್ಟಳಂದು ॥ ೪೧ ॥

ಕ್ರಮದಿಂದೆ ಮಾತೆಯಂ ಬೀಳ್ಕೊಂಡು ಪೊರಮಡುವ ।
ಸಮಯದೊಳ್ ಚಂದ್ರಹಾಸಂ ಕಂಡನಿದಿರೆ ಕುಂ ।
ಕುಮ ಸುರಂಜಿತ ಹರಿದ್ರಾಂಗದಿಂ ಕಂಗೊಳಿಪ ನೂತನ ವಧೂವರರನು॥
ಸಮ ಸದಾಕಾರದಿಂ ಬರುತಿರ್ದ ಭೂಸುರೋ ।
ತ್ತಮಯುಗವ ನೆಳಗರುವೆರಸಿ ಬರ್ಪ ಗೃಷ್ಟಿಯಂ ।
ರಮಣೀಯ ಕುಸುಮ ಫಲಮಂ ಕೊಂಡು ತನಗೀಯಲೈತಹ ವನಾಧಿಪರನು ॥೪೨॥

ಸೂಡಿದಂ ಪರಿಪರಿಯೊಳೆಸೆವ ಕುಸುಮಂಗಳಂ ।
ಮಾಡಿದ ಸುಮೌಳಿಯಂ ತಲೆಗೊರ್ವನೊರ್ವನೆಡೆ ।
ಗೂಡಿ ಸೇರಿಸಿ ಕಟ್ಟಿದಚ್ಚಸಂಪಗೆಯ ಮಾಲೆಯನಿಕ್ಕಿದಂ ಕೊರಳ್ಗೆ ॥
ನೀಡಿದಂ ಮತ್ತೊರ್ವನೊಪ್ಪುವ ಕರಾಂಬುಜಕೆ।
ದಾಡಿಮದ ಫಲವನಿವನೆಲ್ಲಮಂ ಕೈಕೊಂಡು ।
ಗಾಡಿವಿಗೆ ಮೆರೆವ ನವ ವರನಂತೆ ಪೊರಮಟ್ಟನಾ ಚಂದ್ರಹಾಸನಂದು॥ ೪೩ ॥

ಹಯವರ ಸಮಾರೂಢನಾಗಿ ಸೇವಕ ಚತು ।
ಷ್ಟಯದೊಡನೆ ಸೂಚಿತ ಶುಭೋದಯದ ಶಕುನಾವ ।
ಳಿಯನಾಲಿಸುತ ಬಟ್ಟೆವಿಡಿದು ಕುಂತಳಪುರದ ಬಾಹ್ಯೋಪವನಕೆ ಬರಲು ॥
ನಯಸರದ ಕೋಗಿಲೆಯ ಸಾದರದ ನುಡಿಯೊಳತಿ ।
ಶಯ ಫಲೋತ್ಕರದ ತರು ಶಾಖೆಗಳ ಕೈಗಾಣಿ ।
ಕೆಯೊಳಿದಿರ್ಗೊಳ್ವವೊಲಾ ವನಂ ಚಂದ್ರಹಾಸನ ಮುಂದೆ ಕಣ್ಗೆಸೆದುದು ॥ ೪೪ ॥

ತಳಿರ್ದುರುಗಿದೆಳೆಮಾವುಗಳ ನೆಳಲ್ ಕವಿದ ನಿ ।
ರ್ಮಲ ಪುಳಿನ ತಳದಿಂ ತೊಡರ್ದ ಡರ್ದಲರ್ವಳ್ಳಿ ।
ಗಳ ಮಂಟಪಂಗಳಂ ವಿವಿಧ ಮಣಿಮಯ ಕೃತಕ ಗಿರಿ ಕಂದರಂಗಳಿಂದೆ ॥
ತೊಳೆಪ ರನ್ನದ ಪಾಸರೆಗಳಿಂದೆ ರಂಜಿಸುವ ।
ನಳಿನೋತ್ಪಲ ಪ್ರಕರ ಶೋಭಿತ ಸರೋವರಂ।
ಗಳ ರಮ್ಯಸೋಪಾನವಿಂದೆ ತದ್ರಾಜ ಕೇಳೀವನಂ ಕಣ್ಗೆಸೆದುದು ॥ ೪೫ ॥

ಸರಸಿಯೊಳ್ನಲಿದಾಡುವಂಚೆಗಳ ಕೊಂಚೆಗಳ ।
ಬೆರಸಿ ರಮಿಸುವ ಕುಣಿವ ಕೋಕಿಗಳ ಕೇಕಿಗಳ ।
ನೆರೆನೆರೆದು ಮೊರೆವ ಮರಿದುಂಬಿಗಳ ದೊಂಬಿಗಳ ಚೀರ್ವ ಗಿಳಿ ಕೋಗಿಲೆಗಳ ॥
ತರುಲತೆಯ ತುರುಗಲ ರಸಾಲ ಪ್ರವಾಳ ಪ್ರ ।
ಕರದ ಶೋಭೆಗಳ ಕುಸುಮಾಳಿಗಳ ಗಾಳಿಗಳ ।
ಪರಿಮಳದ ಮನಕಿಂಪನೊಗೆಯಿಸುವ ರಾಜೋಪವನಮೆಸೆದುದು ॥ ೪೬ ॥

ಹೃದ್ಯವಾಗಿಹ ಶೈತ್ಯ ಸೌರಭ್ಯ ಮಾಂದ್ಯದಿಂ ।
ದುದ್ಯಾನ ಮಾರುತಂ ಬೀಸಿ ಮಾರ್ಗಶ್ರಮಂ ।
ಸದ್ಯಃ ಪ್ರಶಮನಮಾಗಲ್ಕೆ ಹರ್ಷದೊಳಲ್ಲಿ ಕೃಷ್ಣನಂ ಪೂಜೆಗೈವ ॥
ಉದ್ಯೋಗದಿಂದಿಳಿದು ತಣ್ಣೆಳಲ ತರುಮೂಲ ।
ಕುದ್ಯತ್ತುರಂಗಮಂ ನೀರ್ಗುಡಿಸಿ ಕಟ್ಟಿ ನಿರ ।
ವದ್ಯಗುಣನಿಧಿ ಚಂದ್ರಹಾಸನೆಳವುಲ್ಗಳಂ ತಿರಿತರಿಸಿ ಮುಂದಿಟ್ಟನು ॥ ೪೭ ॥

ತೇಜಿಯಂ ಕಟ್ಟಿದೆಡೆಯೊಳ್ ಸೇವಕರನಿರಿಸಿ ।
ರಾಜವನದೊಳ್ ಪೊಕ್ಕು ಶಶಿಹಾಸನಲ್ಲಿ ವಿ ।
ಭ್ರಾಜಿಸುವ ನಿರ್ಮಲಸರಸ್ತೀರದೊಳ್ಮಿಂದು ಶುಚಿಯಾಗಿ ಸುಸ್ಥಳದೊಳು ॥
ರಾಜೀವಮಾದಿಯಾದಲರ್ಗಳಂ ತಿರಿಸು ಹರಿ ।
ಪೂಜೆಯಂ ಮಾಡಿ ತಾಂ ತಂದ ಪಾಥೇಯಮಂ ।
ಭೋಜನಂಗೈದು ವಿಶ್ರಮನಾಗಿ ತಳಿತ ಮಾಮರನ ನೆಳಲಂ ಸಾರ್ದನು ॥ ೪೮ ॥

ತಿರಿದೆಳೆದಲರ್ಗಳಂ ಪಾಸಿ ಕುಳ್ಳಿರ್ದೊಯ್ಯ ।
ನೊರಗಲ್ಕೆ ನಡುವಗಲ ಬಿಸಿಲಿಂದೆ ಮಾರ್ಗದೊಳ್ ।
ನೆರೆ ಬಳಲ್ದಿಹ ಚಂದ್ರಹಾಸಂಗೆ ತಣ್ಣೆಲರ ಸೊಗಸಿಂದೆ ಕಣ್ಣಿವೆಗಳು ॥
ಸೆರೆಗೊಂಡುವಾಲಿಗಳನಾತ್ಮೀಯ ಕೃತ್ಯಮಂ ।
ಮರೆದು ನಿದ್ರಾಲೋಲನಾಗಿ ಮಲಗಿದವನಂ ।
ಮಿರುಗುವಹಿತಲ್ಪದೊಳ್ ದೇವಪುರನಿಲಯ ಲಕ್ಷ್ಮೀವರಂ ಪವಡಿಸುವೊಲು ॥ ೪೯ ॥

ಮೂವತ್ತನೆಯ ಸಂಧಿ

ಸೂಚನೆ ॥ ನಿದ್ರೆಗೈವಿಂದುಹಾಸನ ಕಂಚುಕದ ಕೊನೆಯೊ ।
ಳಿರ್ದ ಪತ್ರವನೋದಿಕೊಂಡು ಚದುರಿಂದದಂ ।
ತಿದ್ದಿ ತನಗಾತನಂ ಕಾಂತನಹ ದಾಯಮಂ ಮಾಡಿದಳ್ ಮಂತ್ರಿತನುಜೆ ॥

ಕುಂತೀಕುಮಾರ ಕೇಳ್ ಚಂದ್ರಹಾಸಂ ಬನದೊ ।
ಳಿಂತು ಸುಖನಿದ್ರೆಯಿಂದಿರುತಿರ್ಪ ಸಮಯದೊಳ್ ।
ಕುಂತಳೇಂದ್ರಂಗೆ ಚಂಪಕಮಾಲಿನಿನಾಮದೊರ್ವ ಮಗಳುಂಟವಳ್ಗೆ ॥
ಸಂತತಂ ಮಂತ್ರಿಸುತೆ ವಿಷಯೆ ಸಖಿಯಾಗಿರ್ಪ ।
ಳಂತರಿಸದವರಿರ್ವರುಂ ಬಂದರಲ್ಲಿಗೆ ವ ।
ಸಂತಕಾಲಂ ಪ್ರಾಪ್ತಮಾಗಿರೆ ಜಲಕ್ರೀಡೆಗಾಳಿಯರ ಗಡಣದಿಂದೆ ॥ ೧ ॥

ಒಚ್ಚೋರೆಗಣ್ಣ ಕೋಮಲೆಯರೊಪ್ಪಿಡಿ ನಡುವಿ ।
ನಚ್ಚಗದ ಬಾಲಕಿಯರೋರಣದ ಪೊಳೆವಲ್ಲ ।
ನಿಚ್ಚಳದ ಕದಪಿನ ನಿತಂಬದಿಝುರೊಮ್ಮಾರುವೇಣಿಯ ವಿಲಾಸಿನಿಯರು ॥
ಒಚ್ಚತದ ಚೆಲ್ವನೆಳೆವೆಣ್ಗಳುಳ್ಗೈಕೊಳ್ಳ ।
ದಚ್ಚರಿಯ ಕಡುಗಕ್ಕಸದ ಬಟ್ಟಬಲ್ಮೊಲೆಯ ।
ಪೊಚ್ಚಪೊಸಜೌವನದ ನೀರೆಯರ್ ನಡೆತಂದರೊಗ್ಗಾಗಿ ಸಂಭ್ರಮದೊಳು ॥ ೨ ॥

ಕಲಕೀರವಾಣಿಯರ್ ಕಾಳಾಹಿವೇಣಿಯರ್ ।
ಕಲಭ ಮದಯಾನೆಯರ್ ಕಾಯಜ ನಿಧಾನೆಯರ್ ।
ಕಲಧೌತ ಗಾತ್ರೆಯರ್ ಕಂಜದಳ ನೇತ್ರೆಯರ್ ಕಳೆವೆತ್ತ ಕಾಮಿನಿಯರು ॥
ಕಲಶಕುಚಯುಗಳೆಯರ್ ಕನಕ ಮಣಿನಿಗಳೆಯರ್ ।
ಕಳಕಳಿಪ ವದನೆಯರ್ ಕುಲಿಶಾಭ ರದನೆಯರ್ ॥
ಕಳೆದುಳಿದ ರನ್ನೆಯರ್ ಕಾಂತಿಸಂಪನ್ನೆಯರ್ ನಂದನಕೆ ನಡೆತಂದರು ॥ ೩ ॥

ತಳಿರಡಿಗೆ ತೊಂಡೆವಣ್ ತುಟಿಗೆ ತಾವರೆ ಮೊಗಕೆ ।
ಬೆಳಗಾಯಿ ಮೊಲೆಗೆ ನೈದಿಲೆ ಕಣ್ಗೆ ಬಾಳೆ ತೊಡೆ ।
ಗೆಳೆವಳ್ಳಿ ಮೈಗೆ ಸಂಪಗೆ ನಾಸಿಕಕ್ಕೆ ಮಲ್ಲಿಗೆ ನಗೆಗೆ ಮೊಲ್ಲೆ ಪಲ್ಗೆ ॥
ಅಳಿ ಕುಂತಳಕೆ ನವಿಲ್ ನುಡಿಗಂಚೆ ನಡೆಗೆ ಕೋ ।
ಗಿಲೆ ಗಿಳಿಗಳಿಂಚರಕೆ ಸೋಲ್ದವಯವಂಗಳೊಳ್ ।
ನೆಲಸಿದುವು ಪೆಣ್ಗಳ್ಗೆ ಸೋಲದವರಾರೆನಲ್ ನಡೆತಂದರಂಗನೆಯರು ॥ ೪ ॥

ಮಿಂಡೆದ್ದ ಹೆಣ್ಗಳುಪವನಕೆ ನಡೆತಂದು ಮುಂ ।
ಕೊಂಡು ಬಹುವಿಧದ ಚೇಷ್ಟೆಗಳಿಂದೆ ಭುಲ್ಲವಿಸಿ ।
ಕಂಡ ಕಂಡ ವನಿಜಾತಂಗಳಂ ಚಿಗುರಿಸಿದರೊಡನೆ ಪೂದೋರಿಸಿದರು ॥
ತಂಡತಂಡದೊಳಲ್ಲಿ ಪರಿಪರಿಯ ಲಗ್ಗೆಯುದ್ದಿ ।
ಬೆಂಡಾಗಿ ಬಂದು ನಿರ್ಮಲ ಸರೋವರನು ।
ದ್ದಂಡದೊಳ್ಪೊಕ್ಕರಂಬುಕ್ರೀಡೆಗಂಗಜನ ಸೊಕ್ಕಾನೆಗಳ ತೆರದೊಳು ॥ ೫ ॥

ನಿರಿ ಗುರುಳ್ಗಳ ತುಂಬಿಗಳ ಪೊಳೆವ ಲೋಚನದ ।
ಮರಿಮೀನ ಮೊಗದಲರ್ದಾವರೆಯ ತಿವಳಿಗಳ ।
ಕಿರುದೆರೆಯ ಕಂಧರದ ಕಂಬುವಿನ ಘನ ಕುಚಂಗಳ ಕಂಜ ಮುಕುಳಂಗಳ ॥
ಪೊರೆವಾರ ಪುಳಿನದ ತನುಚ್ಛವಿಯ ತಿಳಿನೀರ ।
ಮೆರೆವ ಮಧ್ಯದ ಮೃಣಾಳದ ಬಗೆಯ ಭೇದಮಂ ।
ಕುರುಪಿಡುವೊಡರಿದೆನಲ್ ಸರಿಸಿಯೊಳ್ ತರಳೆಯರ ಜಲಕೇಳಿ ಕಣ್ಗೆಸೆದುದು ॥೬॥

ಲಲನೆಯರ್ ತಾವರೆದೆರದ ಮೇಲುದಿನೊಳೆಸೆವ ।
ನೆಲೆಮೊಲೆಗಳಲುಗೆ ತಾವರೆದೆರದ ಕೈಗಳಿಂ ।
ತುಡುಕಿದರ್ ಚೆಲ್ವಕಂಕಣ ರವಂ ಮಿಗೆ ಚೆಲ್ವಕಂಕಣ ರವಂಗಳೊಡನೆ ॥
ವಿಲಸಿತದ ಕಾಸಾರದಂಬುಗಳನೆಸೆವ ಜೀ ।
ರ್ಕೊಳವಿಗಳ ಕದನ ಕಾಸಾರದಂಬುಗಳವೋ ।
ಲಳವಡಿಸಿ ಸರಸಕೇಳಿಗೆ ಪೊಕ್ಕರಡಿಗಡಿಗೆ ಸರಸಕೇಳಿಗೆಯಾಗಲು ॥ ೭ ॥

ಹೊಳೆವ ಹುಬ್ಬುಗಳ ಭಾಸುರ ಚಾಪಲತೆಯು ಮಂ ।
ಡಳಿಸಿದುನ್ನತ ಪಯೋಧರದ ಕಡೆಗಣ್ಣ ಚಂ ॥
ಚಲದ ಭೂಷಣದ ಘನರವದ ಚಿತ್ರಾಂಗಿಯರ್ ತವೆ ಹಸ್ತದೊಳ್ ತೋಯದ ॥
ಮಳೆಗರೆವುದಚ್ಚರಿಯೆ ಪೇಳೆನೆ ಸುವಾರಿಯಂ ।
ತುಳುಕಿದರ್ ಬಿಂಕದಿಂದೊರ್ವರೋರ್ವರ ಮೇಲೆ ।
ಮೊಲೆಗೆಲದ ಕುಂಕುಮದ ಕದಡರುಣ ಗಿರಿತಟದ ಕೆಂಬೊನಲ್ಗಳವೊಲಾಗೆ ॥ ೮ ॥

ಹರಿಯ ಲೋಚನಮಜಂ ಕುಳ್ಳಿರ್ಪ ತಾಣಮಿಂ ।
ದಿರೆಯ ನಿಳಯಂ ದಿವಾಕರನ ಕೆಳೆ ಮನ್ಮಥನ ।
ಸರಳ್ಕಾಡಿಗಳಿಕ್ಕೆ ಪರಿಮಳದ ಬೀಡೆನಿಸಿಕೊಂಡು ಸಂಪೂರ್ಣತೆಯೊಳು ॥
ಪರಿಶೋಭಿಸಿದುವಲ್ಲಿ ನೆರೆದಿಂಗಳಂ ಪೋಲ್ವ ।
ತರುಣಿಯರ ಚೆಲ್ವ ನಗಮೊಗದ ಮುಂದೀಗ ತಾ ।
ವರೆಯಾದುವೆಂಬಂತೆ ಪೆಣ್ಗಳಾಸ್ಯಕೆ ಸೋಲ್ದುವಾ ಕೊಳದ ಕಮಲಂಗಳು ॥ ೯ ॥

ಮೇಲಕುಪ್ಪರಿಸಿ ತಲೆಕೆಳಗಾಗಿ ಬಿದ್ದೊಡಂ ।
ಲೋಲ ಲೋಚನಕೆ ಪಾಸಟಿಯಾಗದಿರೆ ಮೀನ್ಗ ।
ಳಾಳದೊಳ್ ಮುಳುಗಿದುವು ಗತಿಗಳ ವಿಲಾಸಮಂ ಕಂಡು ಕಲಹಂಸಂಗಳು ॥
ಕಾಲಿಂದ ನಡೆಯಲೊಲ್ಲದೆ ನಭಕೆ ಪಾರಿದುವು ।
ಬಾಲೆಯರ ಕಣ್ಣ ಹೊಳಪಿಗೆ ಗಮನದುಜ್ಜುಗಕೆ ।
ಸೋಲದವರಾರೆಂಬ ತೆರನಾಗೆ ಸಲಿಲದೊಳ್ ಕ್ರೀಡಿಸಿದರಂಗನೆಯರು ॥ ೧೦ ॥

ಶಿಖರಿ ದಶನ ದ್ಯುತಿಯ ಬೆಳ್ನಗೆಯು ನೂಸಲೆನೆ ।
ನಖ ರುಚಿಯ ತೆರಳಿಕೆಯ ಹೊರಳಿಯೆನೆ ಲೋಚನ ವಿ ।
ಶಿಖದ ಮುಮ್ಮೊನೆವೊಗರ ಧಾಳಿಯೆನೆ ಹಾರಮಂ ಪರಿದು ಬೀರ್ದರೊ ಪೇಳೆನೆ ।
ಸಖಿಯರಂ ಕೂಡಿಕೊಂಡೊರ್ವರೊರ್ವರ್ಗೆ ಸ ।
ಮ್ಮುಖವಾಗಿ ವಿಷಯೆ ಚಂಪಕಮಾಲಿನಿಯರಾಗ।
ಸುಖ ಜಲಕ್ರೀಡೆಯೊಳ್ ಚೆಲ್ವ ತಿಳಿನೀರ ತುಂತುರ್ವನಿಗಳೆಸೆದಿರ್ದುವು ॥ ೧೧ ॥

ಮುದದಿಂದ ವಿಷಯೆ ಚಂಪಕಮಾಲಿನಿಯರೊಡನೆ ।
ಸದತಿಯರ್ ನಾನಾಪ್ರಕಾರದಿಂ ಕ್ರೀಡಿಸಿದ।
ರುದಕದೊಳ್ ಬಳಿಕ ತಮ್ಮಾನನ ಶುಧಾಂಶು ಮಂಡಲದ ಬೆಳುದಿಂಗಳಿಂದೆ ॥
ಸುದಮಲ ಸರೋವರದ ತೀರದೊಳ್ ಬಳಸಿ ಕ।
ಟ್ಟಿದ ಚಂದ್ರಕಾಂತ ಸೋಪಾನದೊಳೊಸರ್ವ ನೀ ।
ರೊದವಿತೆನೆ ಮೈಗಳ್ಗೆ ತಣ್ಣಸಂ ತೋರಲಾ ಕೊಳದಿಂದೆ ಪೊರಮಟ್ಟರು ॥ ೧೨ ॥

ಕೂಲವನಡರ್ದು ನನೆದಂಗದೊಳ್ ಪೊತ್ತಿದ ದು ।
ಕೂಲದೊಳಿರಲ್ಕೆ ತಾಪಸರ ದೃಢಮತಿಗೆ ಪ್ರತಿ।
ಕೂಲ ಕೃತಿಗಳೊ ಮೋಹನದ ರಸದೊಳಾರ್ದತೆಯನಾಂತ ಚೆಲ್ವಿನ ಕಣಿಗಳೊ ॥
ಸಾಲ ಮಣಿಮಯದ ಸೋಪಾನದೊಳ್ ನಿಲಿಸಿರ್ದ ।
ಸಾಲಭಂಜಿಕೆಗಳೊ ವಿಚಿತ್ರಮೆನೆ ರಂಜಿತ ರ ।
ಸಾಲ ಪಲ್ಲವ ಪಾಣಿ ಪಾದ ತಳದಬಲೆಯರ ರೂಪುಗಳ್ ಕಣ್ಗೆಸೆದುವು ॥ ೧೩ ॥

ಅದಟಿಂದೆ ಮನ್ಮಥಂ ತ್ರಿಜಗಮುಂ ಗೆಲ್ವೆಡೆಯೊ ।
ಳೊದವಿದ ಪಲವು ಕೈದುಗಳನಲ್ಲಿ ಜಾಡಿಸಿ ತೊ ।
ಳೆದು ತೀರದೊಳ್ ನಿಲಿಸಿ ಮೇಲಣಿಂದೊರೆಗಳಂ ತುಡಿಸಿದನೊ ಪೇಳೆನಲ್ಕೆ ॥
ಉದಕದಿಂ ಪೊರಮಟ್ಟು ನಿಂದ ನೀರೆಯರ ಕಾ ।
ಯದ ಬಳಿಯೆ ನನೆದು ನಿಡಿದಾಗಿ ಮಿಡಿಪರಿಯಂತಿ।
ಳಿದು ಜೋಲ್ವ ಕೇಶಪಾಶಂಗಳಾರಾಜಿಸಿದುವೇನೆಂಬೆನಚ್ಚರಿಯನು ॥ ೧೪ ॥

ತೊಳಗುವ ನಿತಂಬ ಗಿರಿಯಿಂದಾಗಸಕೆ ಪರ್ಬಿ ।
ದೆಳೆಯುವಲ್ಲಿಯ ಮೇಲೆ ನೆಲಸಿದೆಣೆವಕ್ಕಿಗಳ್ ।
ಬಳಿವಿಡಿದು ಮದನ ಶಬರನ ಬಲೆಗೆ ಸಿಕ್ಕಿ ನಭಕುಬ್ಬಿಕೊಂಡೇಳ್ವ ತೆರದೆ ।
ಸಲಿಲದೊಳ್ ನನೆದ ದೇವಾಂಗದೊಳಡರ್ದ ನೆಲೆ।
ಮೊಲೆಗಳಾರಾಜಿಸೆ ಮೃಗಾಕ್ಷಿಯರ ಚೆಲ್ವು ನಿ ।
ಚ್ಚಳದಿಂದೆ ಕಾಣಿಸಿತು ಕಾಸಾರ ತೀರದೊಳ್ ತೀರದೊಳ್ಪಿಂದೆ ಮೆರೆದು ‖ ೧೫ ‖

ಹಿಮದಿಂದೆ ತಣ್ಣಸಂಪಡೆದಿರ್ದ ಮಾಗಿಯಂ ।
ಕ್ರಮದಿಂದೆ ಜಾರಿಸಿ ವಸಂತರ್ತು ತಲೆದೋರ್ಪ ।
ಸಮಯದವೊಲೇಣಾಕ್ಷಿಯರ್ ನನೆದ ಮೈಯೊಳಿಹ ವಸನಂಗಳಂ ಸಡಿಲ್ಚಿ ‖
ರಮಣೀಯ ಚಿತ್ರಾವಲಂಬನದ ಶೋಭೆಗಳ ।
ಸಮನಿಸಿದ ಚಂದ್ರಿಕೆಯ ಸೊಗಸುವೆಳೆಮಾದಳದ ।
ಸುಮನೋನುರಾಗದಿಂ ಪಲವು ಬಣ್ಣಂಗಳಂ ತೆಗೆದುಟ್ಟು ರಂಜಿಸಿದರು ‖ ೧೬ ‖

ತಡಿಗಡದೊಡನೆ ಮುಡಿವರ್ಗಮಂ ತೆಗೆದುಟ್ಟು ।
ನಿಡುಗುರುಳ್ಗೆಸೆವ ಧೂಪದ ಪೊಗೆಗಳಂ ಕೊಟ್ಟು ।
ತೊಡವೆಲ್ಲಮಂ ತೊಟ್ಟು ಪಣೆಗೆ ತಿಲಕಮನಿಟ್ಟು ತಿಗುರಿಂದೆ ಸೊಬಗುವಟ್ಟು ‖
ಅಡಿಗಲತಿಗೆಯನಕ್ಷಿಗಂಜನವನಲರ್ಗಳಂ ।
ಮುಡಿಗೆ ನುಣ್ಗದಪಿಂಗೆ ಮಕರ ಪತ್ರಮನಾಂತು ।
ಬಿಡದೆ ಮಧುಪಾನಮಂ ಮಾಡಿ ಕಪ್ಪುರವೀಳೆಯಂಗೊಂಡು ಸೊಗಯಿಸಿದರು‖೧೭‖

ಬಳಿಕೊರ್ವರೊರ್ವರಂ ನೋಡುತ್ತೆ ದೂಡುತ್ತೆ।
ನಲವಿಂದೆ ನೃತ್ತಮಂ ಮಾಡುತ್ತೆ ಪಾಡುತ್ತೆ ।
ಬಳಸಿ ಸರಸೋಕ್ತಿಗಳನಾಡುತ್ತೆ ತೀಡುತ್ತೆ ಬೆಳ್ನಗೆಯ ಬೆಡಗುಗಳನು ‖
ಅಲರ್ಗಳಂ ತೆಗೆತೆಗೆದು ನೀಡುತ್ತೆ ಸೂಡುತ್ತೆ ।
ಲಲಿತ ಮಧು ಚಷಕಮಂ ಬೇಡುತ್ತೆ ಕಾಡುತ್ತೆ।
ಕಲೆಗಳ ವಿಲಾಸಮಂ ಪೂಡುತ್ತೆ ಕೂಡುತ್ತೆ ಕಣ್ಗೆಸೆದರೆಳೆವೆಣ್ಗಳು ೧೮ ‖

ಆಳಿಯರೊಳಿಂತು ಚಂಪಕಮಾಲನಿಗೆ ಸರಸ ।
ಕೇಳಿ ವೆಗ್ಗಳಿಸಿರ್ದ ಸಮಯದೊಳಲರ್ಗೊಯ್ವು।
ಬೇಳಂಬದಿಂದೆ ಕೆಲಸಿಡಿದು ಬಂದಾ ವಿಷಯೆ ಚೂತದ್ರುಮದ ನೆಳಲೊಳು ‖
ತೋಳ ತಲೆಗಿಂಬಿನ ತಳಿರ್ವಸೆಯ ಮೇಲೆ ತಂ ।
ಗಾಳಿಗೊಡ್ಡಿದ ಮೆಯ್ಯ ಸೊಗಸಿಂದೆ ಮರೆದು ನಿ ।
ದ್ರಾಲೋಲನಾಗಿ ಮಲಗಿಹ ಚಂದ್ರಹಾಸನಂ ಕಂಡು ಸ್ವೈರಗಾದಳು ‖ ೧೯ ‖

ಲೋಕತ್ರಯಂ ತನಗೆ ವಶವರ್ತಿಯಾದುದಿ ॥
ನ್ನೇಕೆ ಧಾವತಿಯೆಂದು ಸುಖದಿಂದೆ ಪವಡಿಸಿದ ।
ನೋ ಕಬ್ಬುವಿಲ್ಲನೆನೆ ಬೇಸರದೆ ಬಾಂದೆಳವೊಳಾವಗಂ ನಡೆವ ಬವಣಿ ॥
ಸಾಕೆಂದು ನಿದ್ರೆಗೈದನೊ ಸೋಮನೆನೆ ವನ ।
ಶ್ರೀ ಕಾಮಿನಿಯರತಿಶ್ರಮದೊಳೊರಗಿದನೊ ಕುಸು ।
ಮಾಕರನೆನಲ್ಕೆ ಮಲಗಿಹ ಚಂದ್ರಹಾಸನಂ ಕಂಡು ವಿಸ್ಮಿತೆಯಾದಳು ॥ ೨೦॥

ಒರ್ವರೊರ್ವರನಗಲ್ದಶ್ವಿನೀದೇವತೆಗ ।
ಳುರ್ವ ನಳಕೂಬರ ಜಯಂತಾದಿ ಸುರ ತನುಜ ।
ರುರ್ವರೆಗದೇಕೆ ಬರ್ಪರಿನಶಶಿಗಳಾದೊಡಿಹವುಷ್ಣಶೀತ ದ್ಯುತಿಗಳು ॥
ಗೀರ್ವಾಣ ಯಕ್ಷ ಕಿನ್ನರ ಸಿದ್ಧ ಗರುಡ ಗಂ ।
ಧರ್ವರೊಳಗಾವನೋ ಮನುಜನಲ್ಲೆಂದವನ ।
ಸರ್ವಾಂಗವಂ ಬಿಡದೆ ನೋಡಿದಳ್ ವಿಷಯೆ ವಿಷಯಾಸಕ್ತೆಯಾಗಿ ಬಳಿಕ ॥೨೧॥

ಬೆಚ್ಚರಳೆಗಂಗಳವನವಯವದ ಚೆಲ್ವಿನೊಳ್ ।
ಬೆಚ್ಚುವಂಗಜನಾಗ ಕಿವಿವರೆಗೆ ತೆಗೆದು ತುಂ ।
ಬೆಚ್ಚಲಗೆರ್ಲಂತರಂಗದೊಳ್ ನಾಂಟಿದವು ದಾಂಟಿದುವು ಗರಿಗಳೊಡನೆ ॥
ಬೆಚ್ಚನಾದೆದೆಯಿಂದೆ ಕಾತರಿಸಿ ಮುದುಡುಗೊಂ ।
ಡೆಚ್ಚರಿಂದೇಳ್ವ ರೋಮಾಂಚನದೊಳಾಸೆ ಮುಂ ।
ದೆಚ್ಚೆ ಬೆವರುವ ಬಾಲೆ ಬೇಸರದೆ ನಿಂದು ನಿಟ್ಟಿಸುತಿರ್ದಳೇವೇಳ್ವೆನು ॥ ೨೨ ॥

ಸುತ್ತನೋಡುವಳೊಮ್ಮೆ ನೂಪುರವಲುಗದಂತೆ ।
ಹತ್ತೆ ಸಾರುವಳೊಮ್ಮೆ ಸೋಂಕಲೆಂತಹುದೆಂದು ।
ಮತ್ತೆ ಮುರಿದಪಳೊಮ್ಮೆ ಹಜ್ಜೆಹಜ್ಜೆಯಮೇಲೆ ನಲ್ವಳಮ್ಮದೆ ನಿಲ್ವಳು ॥
ಚಿತ್ತದೊಳ್ನಿಶ್ಚೈಸಿ ನೆರೆಯಲೆಳಸುವಳೊಮ್ಮೆ ।
ಹೊತ್ತಲ್ಲ ದನುಚಿತಕೆ ಬೆದರಿ ಹಿಂಗುವಳೊಮ್ಮೆ ।
ತತ್ತಳದ ಬೇಟದೊಳ್ಬೆಂಡಾಗಿ ವಿಷಯೆ ನಿಂದಿರ್ದಳಾತನ ಪೊರೆಯೊಳು ॥ ೨೩ ॥

ದಿವಿಜೇಂದ್ರತನಯ ಕೇಳೀ ತೆರದೊಳಾಗ ನವ ।
ಯುವತಿ ನಿಂದೀಕ್ಷಿಸುತ ಕಂಡಳವನಂಗದೊಳೆ ।
ಸೆವ ರುಚಿರ ಕಂಚುಕದ ತುದಿಸೆರಗಿನೊಳ್ ಕಟ್ಟಿಕೊಂಡಿರ್ದ ಪತ್ರಿಕೆಯನು
ತವಕದಿಂ ಬಿಟ್ಟು ಮುದ್ರೆಯನೋಸರಿಸಿ ತೆಗೆದು ।
ವಿವರದೊಳ್ ತನ್ನ ತಂದೆಯ ಹೆಸರ ಬರೆಹವಿರೆ ।
ಲವಲವಿಕೆ ಮಿಗೆ ನೋಡಿ ಹರ್ಷಪುಳಕದೊಳಂದು ನಿಂದೋದಿಕೊಳುತಿರ್ದಳು
॥ ೨೪

ಶ್ರೀಮತ್ಸಚಿವ ಶಿರೋಮಣಿ ದುಷ್ಟಬುದ್ಧಿ ಸು।
ಪ್ರೇಮದಿಂ ತನ್ನ ಮಗ ಮದನಂಗೆ ಮಿಗೆ ಪರಸಿ।
ನೇಮಿಸಿದ ಕಾರ್ಯಮೀ ಚಂದ್ರಹಾಸಂ ಮಹಾಹಿತನೆಮಗೆ ಮೇಲೆ ನಮ್ಮ॥
ಸೀಮೆಗರಸಾದಪಂ ಸಂದೇಹಮಿಲ್ಲದಕೆ।
ಸಾಮಾನ್ಯದವನಲ್ಲ ನಮಗೆ ಮುಂದಕೆ ಸರ್ವ।
ಧಾಮಿತ್ರನಪ್ಪನೆಂದೀತನಂ ಕಳುಹಿದೆವು ನಿನ್ನ ಬಳಿಗಿದನರಿವುದು ॥ ೨೫॥

ಹೊತ್ತುಗಳೆಯದೆ ಬಂದ ಬಳಿಕಿವನ ಕುಲ ಶೀಲ।
ವಿತ್ತ ವಿದ್ಯಾವಯೋ ವಿಕ್ರಮಂಗಳ ನೀಕ್ಷಿ।
ಸುತ್ತಿರದೆ ವಿಷವ ಮೋಹಿಸುವಂತೆ ಕುಡುವುದೀತಂಗೆ ನೀನಿದರೊಳೆಮಗೆ।
ಉತ್ತರೋತ್ತರಮಪ್ಪುದೆಂದು ಬರೆದಿಹ ಲಿಪಿಯ।
ನೆತ್ತಿ ವಾಚಿಸಿಕೊಂಡು ತರಳಾಕ್ಷಿ ತಾನದಕೆ।
ಮತ್ತೊಂದಭಿಪ್ರಾಯಮಂ ತಿಳಿದಳುಲ್ಲಂಘಿಸುವರುಂಟೆ ವಿಧಿಕೃತವನು ॥ ೨೬ ॥

ಈತಂ ತಮಗೆ ಮಹಾಹಿತನೆಂದು ತಮ್ಮ ಧರೆ।
ಗೀತನರಸಹನೆಂದು ಕುಲಶೀಲ ವಿದ್ಯೆಗಳ।
ನೀತನೊಳರಸಬೇಡವೆಂದು ಮುಂದಕೆ ಸರ್ವಧಾಮಿತ್ರನಪ್ಪನೆಂದು॥
ಈತಂಗೆ ವಿಷಯೆ ಮೋಹಿಸುವಂತೆ ಕುಡುವುದೆಂ।
ದಾ ತಾತನಣ್ಣಂಗೆ ಬರೆಸಿ ಕಳುಹಿದ ಪತ್ರ।
ವೇ ತಪ್ಪದಿದು ವರ್ಣಪಲ್ಲಟದ ಮೋಸವೆಂದಬಲೆ ಭಾವಿಸುತಿರ್ದಳು ॥ ೨೭॥

ಕಡುಚೆಲ್ವನಾದ ವರನಂ ಕಂಡು ನಿಶ್ಚೈಸಿ।
ತಡೆಯದಿಂದೀತಂಗೆ ವಿಷಯ ಮೋಹಿಸುವಂತೆ।
ಕುಡುವುದೆಂದಲ್ಲಿಂದೆ ತನ್ನ ಪಿತನೀತನಂ ಕಳುಹಿದಂ ಸುತನ ಬಳಿಗೆ॥
ಒಡಗೂಡದಿರದೆನ್ನ ಮನದೆಣಿಕೆ ಪತ್ರಿಕೆಯೊ।
ಳೆಡಹಿ ಬರೆದಕ್ಕರದ ಬೀಳಿರ್ದೊಡದರಿಂದೆ।
ಕೆಡುವುದಗ್ಗದ ಕಜ್ಜಮೆಂದಾ ತರುಣಿ ತಾನದಂ ತಿದ್ದಲನುಗೈದಳು ॥ ೨೮ ॥

ತಪ್ಪಿರ್ದ ಲಿಪಿಯೊಳ್ ವಕಾರಮಂ ತೊಡೆದಲ್ಲಿ।
ಗೊಪ್ಪುವ ಯಕಾರಮಂ ಕೆಲಬಲದ ಮಾಮರದೊ।
ಳಿಪ್ಪ ನಿರ್ಯಾಸಮಂ ತೆಗೆದು ಕಿರುವೆರಳುಗುರ್ಗೊನೆಯಿಂದೆ ತಿದ್ದಿ ಬರೆದು॥
ಅಪ್ಪಂತೆ ಮೊದಲಿರ್ದ ಮುದ್ರೆಯಂ ಸಂಘಟಿಸಿ।
ಕುಪ್ಪಸದ ಸೆರಗಿನೊಳ್ ಕಟ್ಟಿ ಪಳೆಯವೊಲಿರಿಸಿ।
ನಪ್ಪುಳಾಗದ ತೆರದೊಳೆದ್ದು ಮೆಲ್ಲನೆ ಮಂತ್ರಿಸುತೆ ತೊಲಗಿ ಬರುತಿರ್ದಳು ॥೨೯॥

ದಿಟ್ಟಿ ಮುರಿಯದು ಕಾಲ್ಗಳಿತ್ತಬಾರವು ಮನಂ ।
ನಟ್ಟು ಬೇರೂರಿದುದು ಕಾಮನಂಬಿನ ಗಾಯ ।
ವಿಟ್ಟಣಿಸಿತಂಗಲತೆ ಕಾಹೇರಿತೊಡಲೊಳಗೆ ವಿರಹದುರಿ ತಲೆದೋರಿತು ॥
ಬಟ್ಟೆವಿಡಿದೊಡನೊಡನೆ ತಿರುತಿರುಗಿ ನೋಡುತಡಿ ।
ಯಿಟ್ಟಳೀಚೆಗೆ ಬಳಿಕ ಬೆರಸಿದಳ್ ಕೆಳದಿಯರ ।
ತಟ್ಟಿನೊಳ್ ಸಂಭ್ರಮದ ಸಂತಾಪದೆಡೆಯಾಟದಂತರಂಗದ ಬಾಲಿಕೆ ॥ ೩೦ ॥

ಆಳಿಯರ್ ಕಂಡರೀಕೆಯ ಮೊಗದ ಭಾವಮಂ ।
ಕೇಳಿದರಿದೇನೆಲೆ ಮೃಗಾಕ್ಷಿ ತಳುಪಿದೆ ಮನದ ।
ಬೇಳಂಬಮಾವುದುಕ್ಕುವ ಹರ್ಷರಸದೊಡನೆ ಬೆರಸಿಹುದು ಬೆದರುವೊನಲು ॥
ಗಾಳಿ ಪರಿಮಳವನಡಗಿಪುದುಂಟೆ ತನು ಚಿತ್ತ ।
ದಾಳಾಪಮಂ ಮಾಜಲರಿದಪುದೆ ಸಾಕನ್ನು ।
ಹೇಳದೊಡೆ ಮಾಣಲಂತಸ್ಥಮದು ತಾನೆ ತುಬ್ಬುವುದೆಂದು ನಗುತಿರ್ದರು ॥ ೩೧ ॥

ಕೆಳದಿಯರ ನುಡಿಗೆ ನಸುನಗುತ ನಿಜ ಭಾವಮಂ ।
ಮೊಳೆಗಾಣಿಸದೆ ಪುಸಿಗೆ ಸರಸವಾಡುತೆ ಪೊತ್ತು ।
ಗಳೆವ ಮಂತ್ರಿಜೆ ಸಹಿತ ತಿರುಗಿದಳ್ ಒನದಿಂದೆ ಮನೆಗೆ ಚಂಪಕಮಾಲಿನಿ ॥
ಪೊಳಲೊಳ್ ವಿವಾಹೋತ್ಸವಂಗಳಾ ಸಮಯದೊಳ್ ।
ಸುಳಿದುವಗ್ಗದ ಗೀತ ನೃತ್ಯ ವಾದ್ಯಂಗಳಿಂ ।
ಕಳಸ ಕನ್ನಡಿಗಳ ವಿಲಾಸದ ಪುರಂಧ್ರಿಯರ ಶೋಭನದ ಸುಸ್ವರದೊಳು ॥ ೩೨ ॥

ಪದುಳದಿಂದೈತಂದು ಬಾಲಿಕೆಯರಂ ಕಳುಹಿ ।
ಸದನಮಂ ಪೊಕ್ಕಳವನೀಶ್ವರಾತ್ಮಜೆ ಬಳಿಕ ।
ಮದುವೆಗಳ ಮಂಗಳೋತ್ಸವದ ಮಧುರ ಸ್ವರಂಗಳನಾಲಿಸುತೆ ಮನದೊಳು ॥
ಇದು ಶುಭ ನಿಮಿತ್ತಮಿಂದೆನಗೆ ವೈವಾಹದ ।
ಭ್ಯುದಯಮಾದಪುದು ಕಾಂತನೊಳಂಬೆಣಿಕೆಯಿಂದೆ ।
ಮದನ ಶರದಿಂದೆ ಪೀಡಿತೆಯಾದ ಮಂತ್ರಿಸುತೆ ಮನೆಗೆ ಬರುತಿರ್ದಳೆಂದು ॥ ೩೩ ॥

ಪುರುಹೂತ ಸಂಭೂತ ಕೇಳ್ ವನದೊಳ್ ವಿಷಯೆ ।
ವಿರಹ ತಾಪದೊಳೊಂದು ಗಳಿಗೆಯಂ ಪತ್ತುಸಾ ।
ಸಿರ ಯುಗಕೆ ಸಮಮಾಗಿ ಭಾವಿಪಳ್ ನಿಂದಲ್ಲಿ ನಿಲ್ಲಳಾರಂ ನೋಡಳು ॥
ಪರಿಚಯದಬಲೆಯರ ನಗ್ಗಿಸುವಳಾಪ್ತಸಖಿ ।
ಯರ ಮಾತನಾಲಿಸಳ್ ಸಂಗರಕೆ ಮೈಗುಡಳ್ ।
ಕರೆವ ಪಂಜರದ ಗಿಳಿಯಂ ನುಡಿಸಳೊಡಿಸಳ್ ಸಾಕುವಮಿಗಪಕ್ಷಿಗಳನು ॥ ೩೪ ॥

ಉಣ್ಣಳೊರಗಳ್ ನುಡಿಯಳುಡಳಿಡಳ್ ತುಡಳುರಿಗೆ ।
ತಣ್ಣಸವನರಸುವಳ್ ಕುಮಾರಿ ತನು ತನಗೆ ।
ತಿಣ್ಣಮೆಂದಲಸುವಳ್ಬಿ ಸುಯ್ವಳೇನಿದೆಂದಂಡಲೆದು ಕೇಳ್ವವರೊಳು ॥
ಕಣ್ಣಳವನೊದವಿಪಳ್ ಶೈತ್ಯವಸ್ತುಗಳಿಂದೆ ।
ಪಣ್ಣಿದುಪಚಾರಗಮಂ ಹೃದಯದೊಳ್ ನೀವೊದೆಯ್ದಂ ।
ಸುಣ್ಣ ಮರಳ್ವಂತಾದುದೆಂದು ಕಾತರಿಸುವಳಬಲೆ ಕಾಮತಾಪದಿಂದೆ ॥ ೩೫ ॥

ಜಲಯಂತ್ರದೆಡೆಯೊಳ್ ತಳಿರ್ವಸೆಯ ತಾಣದೊಳ್ ।
ಮಲಯಜದ ಮಾಡದೊಳ್ ಶಶಿಕಾಂತ ವೇದಿಯೊಳ್ ।
ಸುಲಲಿತ ಲತಾಮಂಟಪದೊಳೆಸೆವ ತಂಗೊಳವ ತಡಿಯ ಪುಳಿನಸ್ಥಳದೊಳು ॥
ಎಳೆವೆಲರ ತುಂಬಿಗಳ ಪಲ್ಲವದ ಕುಸುಮ ಸಂ ।
ಕುಲದ ಹಂಸದ ಗಿಳಿಯ ಕೋಗಿಲೆಯ ಕರ್ಕಶಕೆ ।
ನಿಲಲರಿಯದುಪ್ಪರಿಗೆದುದಿನೆಲೆಯ ಚಂದ್ರಶಾಲೆಗೆ ಬಂದಳಂಬುಜಾಕ್ಷಿ ॥ ೩೬ ॥

ಅಲ್ಲಿ ನಿಜ ಸಖಿಯರಬಲೆಯ ಚಿತ್ತದಾಸರಂ ।
ಮೆಲ್ಲಮೆಲ್ಲನೆ ತವಿಸಲೆಂದುಪಚರಿಸಲವರ ।
ಸಲ್ಲಲಿತ ಮುಖವಾಣಿ ಲೋಚನ ಭ್ರೂಕುಂತಳಾಧರಂಗಳನೀಕ್ಷಿಸಿ
ತಲ್ಲಣಿಸಿ ತಿಂಗಳರಗಿಳಿ ಪೂಸರಲ್ ಕಬ್ಬು ।
ವಿಲ್ಲಾರಡಿಗಳೊಳ್ದಳಿರ್ಗಳೆಂದೆಣಿಸಿ ನು ।
ಣ್ಗಲ್ಲದೊಳ್ ಕೈಯಿಟ್ಟು ಬೆರಗಾಗಿ ಚಿಂತಿಸುವ ತೆರದೊಳವಳಿರುತಿರ್ದಳು ॥ ೩೭ ॥

ಪಾವಗಿದುಳಿದರುಂಟೆ ಹರನ ಕೋಪದೊಳುರಿದು ।
ಜೀವಿಸಿದರುಂಟೆ ಕಾಳ್ಕಿಚ್ಚಿನೊಳ್ ಕೆಳೆಗೊಂಡು ।
ಬೇವುತಸುವಿಡಿದು ಬಾಳ್ದವರುಂಟೆ ಚಂದ್ರ ಮನ್ಮಥಪವನರಬಲೆಯರ್ಗೆ ॥
ಹಾವಳಿಯ ನೊದವಿಸುವೆವೆಂದು ಬದುಕಿದರಲ್ಲ !
ದಾವ ಕರುಣಿಗಳವರ್ವಿ ರಹಮೀಕೆಯ ಮನವ ।
ನಾವರಿಸಲೇನಹುದೊ ಶಿವಶಿವಾ ತಾಳಲರಿದೆಂದೊರ್ವ ಸಖಿ ನುಡಿದಳು ॥ ೩೮ ॥

ಬೆಳವಿಗೆಗೆ ಸುರರೊಂದು ಕಳೆಯನೇಕುಳುಹಿದರೊ ।
ಮುಳಿದಂದು ಶಿವನೇಕೆ ಮತ್ತೆ ಕರುಣಿಸಿದನೋ ।
ಮೆಲುತ ಮೆಲುತೇಕೆ ಬಿಟ್ಟುವೊ ಫಣಿಗಳೆಂದು ಶಶಿ ಮದನ ಮಂದಾನಿಲರನು ॥
ಸಲೆ ಬೈದು ಕೋಗಿಲೆಯ ತುಂಬಿಗಳ ಗಿಳಿಯ ಕಳ ।
ಕಳಕೆ ವಾಯಸಮಂ ಸರೋಜಷಮಂ ತನ್ನ ಕರ ।
ತಳಮಂ ಜರೆದು ನಿಂದಿಸಿದಳೊರ್ವ ಸಖಿ ಬಾಲೆಯಂ ನೋಡಿ ಬಿಸುಸುಯ್ಯುತೆ ॥ ೩೯ ॥

ಇವಳ ಮನದೆಣಿಕೆ ಕೈಗೂಡಲಾವೆಲ್ಲರುಂ ।
ವಿವಿಧ ಕುಸುಮೋತ್ಕರ ಸುಗಂಧಾಕ್ಷತೆಗಳಿಂದೆ ।
ನವ ಪಕ್ವಫಲ ಮೋದಕಾದಿ ನೈವೇದ್ಯದಿಂ ಧೂಪ ದೀಪಂಗಳಿಂದೆ ॥
ಶಿವನ ವಲ್ಲಭೆಯನರ್ಚಿಸಿ ಪರ್ಷವರ್ಷಕು ।
ತ್ಸವದಿಂದೆ ನೋಂಪಿಯಂ ಮಾಳ್ಪೆವೆಂದಾ ಸಕಲ ।
ಭುವನ ಮಾತೆಯನುಮಾದೇವಿಯಂ ಗೌರಿಯಂ ಪ್ರಾರ್ಥಿಸಿದರಾ ಸಖಿಯರು ॥೪೦॥

ಪ್ರಾಸಾದದಗ್ರದೇಳನೆಯ ನೆಲೆಯೊಳ್ಚಂದ್ರ ।
ಹಾಸನೈತಹ ಮಾರ್ಗಮಂ ನೋಡುತುಪಚರಿಸು ।
ವಾ ಸಖೀಜನದ ನುಡಿಗಳನಾಲಿಸುತೆ ವಿಷಯೆ ಚಿತ್ತದೊಳ್ ತನ್ನ ಪಿತನ ॥
ಶಾಸನವನಿಂಮು ಮದನಂ ಪಾಲಿಪಂತೆ ನೀಂ ।
ಸೂಸು ಕಾರುಣ್ಯವರ್ಷವನೆನ್ನ ಮೇಲೆಂದು ।
ಮಾನು ದತಿ ಭಕ್ತಿಯಿಂ ಬೇಡಿಕೊಳುತಿರ್ದಳಾನತೆಯಾಗಿ ಪಾರ್ವತಿಯನು ॥೪೧॥

ವಿಜಯ ಕೇಳಿತ್ತ ಬನದೊಳ್ ಚಂದ್ರಹಾಸನಂ ।
ಬುಜ ಮಿತ್ರನಪರಾಹ್ಣಕೈದಲ್ಕೆ ನಿದ್ರೆಯಂ ।
ತ್ಯಜಿಸಿ ಮೊಗದೊಳೆದು ಮುಕ್ಕುಳಿಸಿ ಕಪ್ಪುರವೀಳೆಯಂಗೊಂಡು ಬಳಿಕ ಬಿಗಿಸಿ ॥
ನಿಜ ವಾಜಿಯಂ ಬಂದಡರ್ದನುಚರರ್ವೆರಸಿ ।
ಋಜುವಾದ ಶಕುನಂಗಳಂ ಕೇಳುತೊಲಿದು ಪೌ ।
ರ ಜನಮಿವನಾರೆಂದು ನೋಡಲ್ಕೆ ನಗರಮಂ ಪೊಕ್ಕು ನಡೆತರುತಿರ್ದನು ॥೪೨॥

ಆ ನಗರದೊಳ್ ಕುಂತಳೇಶ್ವರನು ನಿರ್ಮಲ ।
ಜ್ಞಾನದಿಂ ಗಾಲವನ ಸೂಕ್ತಮಂ ಕೇಳುತ ಸ ।
ದಾನಂದ ಯೋಗಮಂ ಕೈಕೊಂಡು ದುಷ್ಟಬುದ್ಧಿಗೆ ವಿಚಾರವನೊಪ್ಪಿಸಿ ॥
ಧ್ಯಾನಪರನಾಗಿರ್ಪನದರಿಂದೆ ಪೊಳಲಂ ಪ್ರ ।
ಧಾನಿ ಪಾಲಿಪನವಂ ಪೊರಮಟ್ಟಿರಲ್ಕೆ ತ ।
ತ್ಸೂನು ಮದನಂ ಧುರಂಧರಕಿವೆತ್ತು ಸಮಯಕೋಲಗದೊಳಿರುತಿರ್ದನು ॥೪೩॥

ಶ್ರೀಕಂಠನಂ ಕೆಣಕಿ ಮೈಗೆಟ್ಟ ಮದನನಂ ॥
ಲೋಕದೊಳ್ ಜರೆವಂತೆ ಶಂಕರ ಪ್ರಿಯನಾಗಿ ।
ಸಾಕಾರದಿಂದೆಸೆವ ಮದನನಿವನೆಂಬಂತೆ ರಂಜಿಸುವ ಮಂತ್ರಿಸೂನು ॥
ವ್ಯಾಕೀರ್ಣ ರತ್ನರೋಚಿಗಳ ಚಾವಡಿಯ ಚಾ ।
ಮೀಕರದ ಸಿಂಹಾಸನದೊಳಿರ್ದನಿಕ್ಕೆಲದ ।
ಕೋಕನದ ನೇತ್ರೆಯರ್ ಚಿಮ್ಮಿಸುವ ಚಾರು ಚಂಚಲ ಚಾಮರಂಗಳಿಂದೆ ॥ ೪೪ ॥

ಉಚಿತದಿಂದೊಪ್ಪುವ ಮಹೀಸುರರ ಭೂಭುಜರ।
ನಿಚಯದ ನಿಯೋಗಿಗಳ ಗಣಕರ ಪುರೋಹಿತರ।
ವಚನ ಕೋವಿದರ ಕವಿ ಗಮಕಿಗಳ ವಂದಿ ಗಾಯಕ ನಟರ ನರ್ತಕಿಯರ।
ರುಚಿರದಿಂ ಕೃಷ್ಣಚಾರಿತ್ರಮಂ ಸೊಗಸಾಗಿ।
ರಚಿಸುತಿಹ ಭಾವಕರ ಸಂಗೀತಗೋಷ್ಠಿಯಿಂ।
ಸಚಿವ ಸುತನೋಲಗಂ ರಮಣೀಯವಾಗಿರ್ದುದಿಂದ್ರನಾಸ್ಥಾನದಂತೆ ॥ ೪೫ ॥

ಲೀಲೆ ಮಿಗೆ ನಗರದೊಳ್ ನಡೆತಂದು ಮಂತ್ರಿಸುತ।
ನಾಲಯದ ಮುಂದೆ ವಾಜಿಯನಿಳಿದು ತದ್ದ್ವಾರ।
ಪಾಲಕರ್ಗಿಂದುಹಾಸಂ ಪೇಳ್ದೊಡವರಂತರಾಂತರದೊಳೆಚ್ಚರಿಸಲು ॥
ಏಳನೆಯ ಬಾಗಿಲ ವಿವೇಕನೆಂಬವನಿದಂ।
ಕೇಳಿ ತಾಂ ಪಿಡಿದ ಶ್ರದ್ಧಾಯಷ್ಟಿಸಹಿತ ಬಂ।
ದೋಲಗದೊಳಿರ್ದ ಮದನಂಗೆ ಬಿನ್ನೈಸಲ್ ಪರಾಕಾದೊಡಿಂತೆಂದನು ॥ ೪೬ ॥

ಅವಧರಿಸು ಜೀಯ ನಿಮ್ಮಯ್ಯಂಗೆ ಕ್ರೋಧನೆಂ।
ಬವನಾಪ್ತನಾಗಿ ಹಿಂಸಾಯುಷ್ಟಿವಿಡಿದು ಸ।
ಲ್ವವನಲಾ ಬಾಗಿಲ್ಗೆ ತನಗಾತನಂತೆ ನಿನ್ನೊಳ್ ಸಲುಗೆಯುಂಟೆ ಬರಿದೆ ॥
ತವ ಭೃತ್ಯನಾಗಿಹೆಂ ಸಾಕದಂತಿರಲಖಿಳ।
ಭುವನಕಧಿಪತಿಯಾದ ಮುರಹರನ ಭಕ್ತನ।
ಲ್ಲವೆ ಚಂದ್ರಹಾಸನಾತನ ಬರವನರಿಪಲೇತಕೆ ಸುಮ್ಮನಿಹೆಯೆಂದನು ॥ ೪೭ ॥

ನೀತಿ ಸಮ್ಮತದಿಂ ವಿವೇಕನಿಂತೆನೆ ಕೇಳ್ದು।
ಶಾತಕುಂಭಾಲಂಕೃತಾಸನವನಿಳಿದು ಹ।
ರ್ಷಾತಿಶಯದಿಂದೆ ಮದನಂ ಚಂದ್ರಹಾಸನನಿದಿರ್ವಂದು ಕಂಡು ನಗುತೆ ॥
ಪ್ರೀತಿಯಿಂದಪ್ಪಿ ಕೈವಿಡಿದೊಡನೆ ಸಭೆಗೆ ತಂ।
ದಾತನಂ ಸತ್ಕರಿಸಿ ಚಂದನಾವತಿಯ ತ।
ದ್ಭೂತಳದ ಮೇಧಾವಿನಿಯ ಕುಳಿಂದನ ಕುಶಲದೇಳ್ಗೆಯಂ ಬೆಸಗೊಂಡನು ॥೪೮॥

ವಿನಯದಿಂ ಮತ್ತೆ ನಸುನಗೆವೆರಸಿ ನಿನ್ನ ದ।
ರ್ಶನಮಿಂದಪೂರ್ವಮಾದುದು ಬಂದ ಕಾರ್ಯಮಂ।
ತನಗೊರೆವುದೆಂದು ಮದನಂ ಚಂದ್ರಹಾಸನಂ ಕೇಳ್ದೊಡಾತಂಗೆ ನಿನ್ನ ॥
ಜನಕನೆನ್ನಂ ನಿನ್ನ ಬಳಿಗತಿರಹಸ್ಯದಿಂ ॥
ದನುಮತಿಸಿ ಕಳುಹಲಾನೈತಂದೆನೆಂದು ಕುರು।
ಪಿನ ಮುದ್ರೆ ಸಹಿತ ನಿಜ ಕರದೊಳಿಹ ಪತ್ರಮಂ ಕೊಟ್ಟನಾತನ ಕೈಯೊಳು ॥೪೯॥

ಇದ್ದವರ ನಾ ಸಭೆಯೊಳಿರಿಸಿ ಶಶಿಹಾಸನಂ ।
ಗದ್ದುಗೆಗೆ ನೆಲೆಗೊಳಿಸಿ ಮದನನಾಸ್ಥಾನದಿಂ ।
ದೆದ್ದಮಲನೆಂಬ ತನ್ನನುಜನಂ ಕೂಡಿಕೊಂಡೇಕಾಂತ ಭವನಕ್ಕೈದಿ ॥
ಹೊದ್ದಿಸಿದ ಮುದ್ರೆಯುಂ ತೆಗೆದು ಪತ್ರವನೋದಿ ।
ತಿದ್ದಿದಕ್ಕರವ ನರಿಯದೆ ನಿಜದ ಬರೆಹಮೆಂ ।
ದದ್ದನತಿ ಹರ್ಷಾರ್ಣವದೊಳಾಗ ಶತಯಾಗತನಯ ಕೇಳ್ ಕೌತುಕವನು ॥೫೦॥

ಲೇಸಾದುದಯ್ಯನಿಂದೆನಗೆ ನೇಮಿಸಿ ಕಳುಹಿ ।
ದೀ ಸುವೊಕ್ಕಣೆಗಳ್ ಮಹಾಹಿತಂ ತನಗೀತ ॥
ನೀ ಸೀಮೆಗರಸಾದಪಂ ಸರ್ವಥಾಮಿತ್ರನಪ್ಪವಂ ನಿಶ್ಚಯಮಿದು ॥
ಮೋಸವೇ ಕುಲಾಚಾರಗತಿಯ ನಾರೈವೊಡೆ ವಿ ।
ರಾಸದಿಂ ವಿಷಯೆ ಮೋಹಿಸುವಂತೆ ಕುಡುವೆನಿದ ।
ಕೋಸರಿಸಲೇಕೆ ತಂಗಿಗೆ ತಕ್ಕ ವರನೀತನೆಂದು ಮದನಂ ತಿಳಿದನು ॥ ೫೧ ॥

ಮುನ್ನ ತಂದೆಯ ನಿರೂಪದ ಕಾರ್ಯಮದರ ಮೇ ।
ಲೆನ್ನ ಮನವಿವನೊಳಕ್ಕರ್ವೆರಸುತಿದೆ ರೂಪ ।
ನುನ್ನಿಸುವೊಡನುಜೆಗೀತಂಗೆ ಪಾಸಟಿ ವಿಚಾರಿಸೆ ಕೃಷ್ಣಭಕ್ತನಿವನು ॥
ಇನ್ನು ಸಂಶಯವಿಲ್ಲವೀಚಂದ್ರಹಾಸಂಗೆ ।
ಕನ್ನೆಯಿದ್ದಿಲಂದದಕ್ಷಿಯ ತಂಗಿಯುಂ ಕೊಟ್ಟು ।
ಮನ್ನಿಸುವೆನೆಂದು ನಿಶ್ಚೈಸಿ ಮದನಂ ಮತ್ತೆ ಬಂದನೋಲಗದ ಸಭೆಗೆ ॥ ೫೨ ॥

ಗಣಿತಜ್ಞರಂ ಕರೆಸಿ ನೋಡಿಸಿದನಾಗಳನು ।
ಗುಣವಾದ ರಾಶಿಕೂಟವನಮಲ ಲಗ್ನಮಂ ।
ಗುಣಿಸಿ ವಿಸ್ತರಿಸಿದರ್ ಬಳಿಕ ಮದನಂ ಮಾಡಿಸಿದನೊಸಗೆಯಂ ಪೊಳಲೊಳು ॥
ಅಣಿದುವಧ್ರವನೆಸೆವ ಗುಡಿ ತೋರಣಂಗಳಿ ।
ಟ್ಟಣಿಸಿದುವು ಬೇಕಾದ ಮಂಗಳ ಸುವಸ್ತುಗಳ್ ।
ಮಣಿಮಯದ ವೇದಿಯಂ ವಿರಚಿಸಿದರೊಪ್ಪಿನಿಂ ವೈವಾಹ ಮಂಟಪವನು ॥೫೩॥

ಬಳಿಕ ಮದನನ ಹೇಳಿಕೆಯೊಳಂದು ವಿದಿತ ಮಂ ।
ಗಳ ವಿವಾಹೋಚಿತ ಕ್ರಿಯೆಗಳಂ ವಿರಚಿಸಿದ ।
ರಿಳೆಯ ದಿವಿಜರ್ ಪುರಂಧ್ರಿಯರೈದೆ ಮಜ್ಜನದ ಮಂಡನದ ಮಾಳ್ಕೆಗಳನು ॥
ಅಳವಡಿಸಿದರ್ ಪಣೆಯೊಳೆಸೆವ ಬಾಸಿಗದ ಮದ ।
ವಳಿಗನಾಗಿರ್ದಂ ಕುಳಿಂದಜಂ ದೇವಪುರ ।
ನಿಳಯ ಲಕ್ಷ್ಮೀಕಾಂತನೊಲವಿಂದೆ ವಿಷಮಮೃತಮಹುದು ಪೊಸತೇನೆನಲ್ಕೆ ॥೫೪॥

ಮೂವತ್ತೊಂದನೆಯ ಸಂಧಿ.

ಸೂಚನೆ॥ ಕೃತ ವಿವಾಹದೊಳಗುಪಹತಿಯ ಕೃತಕಂಗಳಿಂ ।
ಸುತನೊಡನೆ ಮೃತನಾದ ಮಂತ್ರಿಯಂ ಧರಣಿ ಗಧಿ ।
ಪತಿಯಾಗಿ ನೆಗಪಿದಂ ಚಂದ್ರಹಾಸಂ ಚಂಡಿಕಾದೇವಿಯಂ ಮೆಚ್ಚಿಸಿ ॥

ವಾಸವಾತ್ಮಜ ಕೇಳಲಂಕಾರದಿಂ ಚಂದ್ರ ।
ಹಾಸನಂ ಮದವಳಿಗನಂ ಮಾಡುತಿರ್ದರ್ ಸು।
ವಾಸಿನಿಯರುತ್ಸವದೊಳಿಂತೆಂದು ಮದನನಂತಃಪುರದೊಳೆಚ್ಚರಿಸಲು ॥
ಪ್ರಾಸಾದದಗ್ರದೊಳ್ ತಪಿಸುತಿಹ ವಿಷಯೆಗೆ ವಿ ।
ಲಾಸಿನಿಯರೈತಂದು ನುಡಿದರಂಬುಜ ವನಕೆ ॥
ನೇಸರುದಯಿಸುವ ಕಾಲದ ಮುಂದೆ ತುಂಪಿಡಿದು ಬೀಸುವೆಳೆಗಾಳಿಯಂತೆ ॥ ೧ ॥

ಸೊಗಯಿಸುವ ಪಚ್ಚಗಪ್ಪುರದ ಪುಡಿಯಂ ಪೈಗೆ ।
ತಿಗುರಿದೊಡೆ ಬಾವನ್ನದೊಳ್ಗೆಸರ ನೆಸೆವ ಕುಚ ।
ಯುಗದೆಡೆಗೆ ಮೆತ್ತಿದೊಡೆ ಕಣ್ಣ್ಪೆಗೆ ಪನ್ನೀರನೊಡನೊಡನೆ ತೊಡೆದೊಡದಕೆ ॥
ಮಿಗೆ ಪೆಚ್ಚಿತುರಿಯಂದು ಮತ್ತೆ ಸಿಡಿಮಿಡಿಗೊಂಡು।
ಮುಗುಳಂಬನುರುಬೆಗಾರದೆ ಪೊರಳುತಿಹ ಮಂತ್ರಿ।
ಮಗಳೆಡೆಗೆ ಪರಿತಂದು ನುಡಿದೊಳೊಸಗೆಯ ನಾಪ್ತಸಖಿಯೊರ್ವಳವಳಕೂಡೆ ॥೨॥

ಚಿಂತೆಯಂ ಬಿಡು ತರಳೆ ಕೈಸಾರ್ದುದೀಗ ನಿ।
ನ್ನಂತರಂಗದ ಬಯಕೆ ಶಶಿಹಾಸನೆಂಬವಂ ।
ಕಂತು ಸಮನಾಗಿಹಂ ನೀನದೇಂ ಪುಣ್ಯಮಂ ಮಾಡಿದೆಯೊ ಮುನ್ನಿಳೆಯೊಳು ॥
ಕುಂತಳೇಂದ್ರನ ಕುವರಿ ನಗುತ ಸಂಸದೊಳಾಡಿ ।
ದಂತಾಯ್ತು ತಂದೆ ಕಳುಹಿದ ಲೇಖನವನೋದಿ।
ಸಂತಸದೊಳಿಂದು ಮದನಂ ನಿನ್ನನಾತಂಗೆ ಕುಡುವನೆಂದವಳೊರೆದಳು ॥ ೩ ॥

ರಜ್ಜುಬಂಧವನುಗಿದ ಮೃಗದಂತೆ ತಾಂ ನೆನೆದ।
ಕಜ್ಜಮೊಡಗೂಡಲ್ಕೆ ಮೊಗವುರಲ್ದುದು ಬಳಿಕ।
ಲಜ್ಜೆ ಮೊಳೆದೋರಿದುದು ತಲೆವಾಗಿ ನೆಲನ ನುಂಗುಟದಿಂದೆ ಬರೆಯುತಿರಲು ॥
ಉಜ್ಜುಗವಿದೇನಬಲೆ ಸಾಕು ನಡೆ ಮಂಗಳ ಸು।
ಮಜ್ಜನದ ಮನೆಗೆಂದು ಕಮಲಾಯತಾಕ್ಷಿಯಂ ।
ತಜ್ಜನನಿ ಕಳುಹಿದ ನಿತಂಬಿನಿಯರುಪ್ಪರಿಗೆದುದಿಯಿಂದಿಳುಹಿ ತಂದರು ॥ ೪ ॥

ವರ ಶಾತಕುಂಭ ಕುಂಭಸ್ತನದ ಪಲ್ಲವಾ ।
ಧರದ ಗುಣರಾಜಿ ರಾಜಿತದ ಕೋಮಲೆಗೆ ಸೌಂ ।
ದರ ಕುಂಕುಮಾಂಗ ಮಾಂಗಲ್ಯದಬಲೆಯರುದಕಪೂರಿತ ಕನಕಕಲಶದ ॥
ಸುರುಚಿವೆತ್ತರುಣ ತರುಣ ಪ್ರವಾಳದ ವಸ್ತ್ರ ।
ಪರಿವೃತದ ಕಲ್ಪಕಲ್ಪ ವಿಧಾನಮಾಗಿರದೆ ।
ವಿರಚಿಸಿದರಾಗ ರಾಗದೊಳಮಲ ಶೋಭನ ಸ್ನಾನವಂ ಸೋತ್ಸವದೊಳು ॥೫॥

ಮುಟ್ಟಿದೊಡೆ ಕಂದದಿರದವಳ ಸುಕುಮಾರ ತನು ।
ದಿಟ್ಟಿಯರದೆಂತೊ ನವ ಕುಂಕುಮವನೀಗ ನುಂ ।
ಪಿಟ್ಟರಲ್ಲದೆ ಪೋದ ಮಧ್ಯದೊಳದೆಂತು ನಿಲಿಸಿದರೊ ದಿವ್ಯಾಂಬರವನು ॥
ಬಟ್ಟವೊಲೆಗಳ ಪೊರೆಗೆ ಬಾಗಿ ನಡೆವಳ್ಗೆಂತು ।
ಕಟ್ಟಿದರೊ ಹಾರಾವಳಿಯನೆಂದು ಕೌತುಕಂ ।
ಬಿಟ್ಟು ನೋಳ್ಪವೊಲೆಸೆದಳಾವಿಷಯೆ ಬಳಿಕಲಂಕಾರ ಮಂಡಿತೆಯಾಗಲು ॥ ೬ ॥

ಬಾವನ್ನಗಂಪಿನಂಗದ ಲಲನೆಗನುಲೇಪ ।
ನಾವಳಿಗಳೇಕಿನ್ನು ಕನ್ಯಕಾ ತಿಲಕಕ್ಕೆ ।
ಭಾಪಿಸೆ ಲಲಾಮವೇತಕೆ ಪಣೆಗೆ ಸೊಂಪೊದವಿದವಯವದೊಳಂಪುವಡೆದ ॥
ಪೂವೆಸೆವ ಕೋಮಲೆಗದೇಕೆ ಕುಸುಮದ ಮಾಲೆ ।
ಲಾವಣ್ಯ ಭೂಷಣದ ಪೆಣ್ಗಾಭರಣಮೇಕೆ ।
ಕೋವಿದೆಯರಲ್ಲ ಸೈರಂಧ್ರಿಯರೆನಲ್ಕೆ ವಿಷಯೆಗೆ ಸಿಂಗರಂ ಗೈವರು ॥ ೭ ॥

ಅಪರದಿಗ್ಭಾಗದಂತಂಜನೋದ್ಭಾಸಿತಂ ।
ವಿಪುಲ ಹರಿಪದದಂತೆ ತಾರಕಾಲಂಕೃತಂ ।
ಲಿಪಿಯಂತೆ ದೀರ್ಘಶೋಭಾನ್ವಿತಂ ದ್ವಿಜನಂತೆ ಶ್ರುತಿಯುತಂ ದೈತ್ಯನಂತೆ ॥
ಅಪಹೃತಾನಿಮಿಷ ಲೀಲಾವಿಲಾಸಂ ನರಾ ।
ಧಿಪನಂತೆ ಕುವಲಯಶ್ರೀಧರಂ ಘನದಂತೆ ।
ಚಪಲಾಭಿರಾಮಮಾಗಿರ್ದುದಾ ಶಶಿಮುಖಿಯ ನೇತ್ರಯುಗಮೇವೇಳ್ವೆನು ॥ ೮ ॥

ಉಲ್ಲಾಸ ತಿಲಕಮುಂ ಸು ತಮಾಲ ಪತ್ರಮುಂ ।
ಮೊಲ್ಲೆಯ ಮುಗುಳ್ಗಳುಂ ಚೂತ ಪ್ರವಾಳಮುಂ ।
ಮಲ್ಲಿಗೆಯಲರ್ಗಳುಂ ಸಂಪಗೆಯ ಮೊಗ್ಗೆಯುಂ ನಿಂಬದಳಮುಂ ತೊಳಗುವ ॥
ಸಲ್ಲಲಿತ ಸಾಲ ಕಾನನದೊಳಿರ್ದಪುವು ಪೊಸ ।
ತಲ್ಲಂಬ ತೆರನಾದುದೆಂತು ಬಣ್ಣಿಸುವೆನೀ ॥
ಚೆಲ್ಲೆಗಂಗಳ ಚೆಲ್ವಿಕೆಯೊಳೆಸೆವ ಬಾಲಕಿಯ ನಗೆಮೊಗದ ಸೌಂದರವನು ॥ ೯ ॥

ಶ್ರವಣ ಭೂಷಣದಿಂದೆ ಹಸ್ತಾಭರಣದಿಂದೆ ।
ದಿವಿಜ ಪದಮೆಸೆವಂತೆ ಕುಂತಳ ಶ್ರೀಯು ವೈ ।
ಭವದಿಂದೆ ರಮಣೀಯ ಕಾಂಚೀಪ್ರದೇಶದಿಂ ಭೂಭಾಗವೊಪ್ಪುವಂತೆ ॥
ತವೆ ಮೆರೆವ ಸುಗ್ರೀವ ತಾರಾವಲಂಬದಿಂ ।
ದವಿಕಲಾಂಗದ ವಿರಾಜಿತದಿಂದೆ ಸನ್ನುತ ।
ಪ್ಲವಗ ಕುಲದುನ್ನತಿಯ ಬೆಳವಿಗೆಯ ಚೆಲ್ವಿಂದೆ ವಿಷಯೆ ಕಂಗೊಳಿಸಿರ್ದಳು ॥೧೦॥

ಲಾವಣ್ಯವಾರಿ ಪೂರಿತವಾದ ನಾಭೀ ಸ ।
ರೋವರದ ತಿವಳಿದೆರೆಗಳ ನಡುವೆ ರಂಜಿಸುವ ।
ಶೈವಾಲದಂತೆ ಜಘನಾದ್ರಿಯಂ ವೇಡೈಸಿದಮಲ ಕಾಂಚೀದಾಮದ ॥
ದಾವ ಶಿಖಿಯಿಂದೆ ನಭಕೇಳ್ವ ಕರ್ಬೊಗೆಯಂತೆ ।
ಪೀವರ ಸ್ತನದುರ್ಗಕಂಗಜನಡರ್ದಿಳಿವ ।
ಠಾವಿನಂತಾ ಚಂದ್ರಮುಖಿಯ ತನುಮಧ್ಯದೊಳ್ ಬಾಸೆ ಕಂಗೊಳಿಸಿರ್ದುದು॥೧೧॥

ಬಿಡದೆ ಮುಕ್ತಾಹಾರದಿಂದೆ ಸಮರೂಪದಿಂ ।
ದೃಢತೆವೆತ್ತೂರ್ಧ್ವಮುಖವಾಗಿ ಕರ್ಕಶ ವೃತ್ತ ।
ದೊಡಗೂಡಿ ಕುಚ ಯುಗಂ ಮೆರೆದುದು ಕಠೋರ ತಪದಿಂದೆಸೆವ ಯೋಗಿಯಂತೆ॥
ಬಡವಾಗಿ ಬಲ್ಲಿದರ ನಡುವೆ ನವೆದಿರ್ದು ಸೊಂ ।
ಪಡಗದೆ ವಿಜೃಂಭಿಸುವ ವೀರ ಕಂಠೀರವಕೆ ।
ಪಡಿಯಾಗಿ ಸತ್ಪುರುಷನಂದದೊಳ್ ಕಾಣಿಸಿತು ಮಧ್ಯಲತೆ ಮಂತ್ರಿಸುತೆಯ ॥೧೨॥

ತೊಳಗಿ ಬೆಳಗುವ ಸದ್ಗುಣಾವಳಿಗಳೈಶ್ವರ್ಯ ॥
ಲಲನೆಯಂ ಗೃಹಪತಿಯ ಮಂದಿರಕೆ ಸಂಘಟಿಸಿ ।
ಬೆಳವಿಗೆಯನತಿಶಯಂವಾಳ್ಪಂತೆ ಸಿಂಗರಂಗೈದು ನೀಲಾಳಕೆಯರು ॥
ಬಳಿಕ ಪೊನ್ನಂದಣದ ಮೇಲೆ ವೈವಾಹ ಮಂ ।
ಗಳ ಮಹೋತ್ಸವಕೆ ವಿರಚಿಸಿದ ಮಂಟಪದೆಡೆಗೆ ।
ನಳಿನ ಪತ್ರಾಕ್ಷಿಯಂ ತಂದರೊಸಗೆಯೊಳಂದು ವಿಭವದ ವಿಲಾಸದಿಂದೆ ॥೧೩॥

ಬಳಸಿದ ಸಮಸ್ತಜನ ಜಂಗುಳಿಯ ಕೈಸೊಡ ।
ರ್ಗಳ ಸಾಲ ಹಂದಣಿಯ ಪಾಡುವ ಪುರಂಧ್ರಿಯರ ।
ಕಳಸ ಕನ್ನಡಿವಿಡಿದ ಕನ್ನೆಯರ ನಾನಾ ಸುವಸ್ತುಗಳ ವಿಸ್ತರಣದ ॥
ತೊಳಗುವೊಸಗೆಯ ವಾದ್ಯ ಸಂಕುಲದ ಬಹು ಫಲಾ ।
ವಳಿಗಳ ವಿಡಾಯದಿಂದೈತಂದು ದಂಡಿಗೆಯ ।
ನಿಳಿದನಾರತಿಗಳ ನಿವಾಳಿಯಿಂ ಚಂದ್ರಹಾಸಂ ಭದ್ರಮಂಟಪದೊಳು ॥೧೪॥

ವರ ತಾರಕಾಕ್ಷೆಯೆಂಬಾ ಪ್ರಧಾನನ ಪತ್ನಿ ।
ಚರಣಮಂ ಪ್ರಕ್ಷಾಳನಂಗೈಯೆ ಮದನನಾ ।
ದರಿಸಿ ಮಧುಪರ್ಕಮಂ ಮಾಡೆ ಕನ್ಯಾವರಣದೊಳ್ಕುಲ ಪರಂಪರೆಯನು ॥
ಒರೆಯೆನಲ್ ಶಶಿಹಾಸನೆನಗೆ ವಾಮನಗೋತ್ರ ।
ಮರವಿಂದನಾಭಂ ಪಿತಂ ಹರಿ ಪಿತಾಮಹಂ ।
ಮುರಹರಂ ಪ್ರಪಿತಾಮಹಂ ಕುಳಿಂದನುಮವನ ಸತಿಯುಂ ಗುರುಗಳೆಂದನು॥೧೫॥

ಅಲ್ಪಭಾಷಿತಮಲ್ಲದಿಹ ಚಂದ್ರಹಾಸನ ಸು ।
ಜಲ್ಪಿತಂ ಸೊಗಸೆ ಮದನಂ ಮುದದೊಳಾಗ ಸಂ।
ಕಲ್ಪಿತ ನಿರೀಕ್ಷಣೆಗೆ ಸುಮುಹೂರ್ತಮಂ ಕೇಳ್ದು ತೆರೆದೆಗೆಸಿ ಭೂ ದಿವಿಜರ ॥
ನಲ್ಸರಕವೆತ್ತು ಜೀರಗೆಬೆಲ್ಲದೊಪ್ಪಮೆಸೆ ।
ಯಲ್ಪದದ ಮೆಟ್ಟಕ್ಕಿ ಸುತ್ತುನೂಲ್ ಮೆರೆಯೆ ಫಣಿ ॥
ತಲ್ಪನಿದಿರೊಳ್ ತದರ್ಪಿತಮಾಗಲೆಂದವನ ಕೈಗೆ ಧಾರೆಯನೆರೆದನು ॥೧೬॥

ಮೊರೆವ ಮರಿದುಂಬಿಗಳ ಮಾಲೆಯಂ ತಾಳ್ದ ಸವ ॥
ಪರಿಮಳದ ಮಂದಾರ ಮಾಲೆಯಂ ವಿಷಯೆ ಸೌಂ ।
ದರ ಶಿರೀಷದ ಮಾಲೆಯಂ ಪೋಲ್ವ ನಳಿತೋಳನೆತ್ತಿ ಕಂಧರದೊಳಿಡಲು ॥
ಭರಿತ ಲಾವಣ್ಯ ಸಾಕಾರದಿಂ ಮಂಗಳಾ ।
ಭರಣಂಗಳೆಸೆವಲಂಕಾರದಿಂ ಪಾರ್ವರು ॥
ಚ್ಚರಿಪಗ್ನಿಹೋತ್ರ ಪ್ರಕಾರದಿಂ ವಧುವಂ ಕುಳಿಂದಜಂ ಕೈವಿಡಿದನು ॥೧೭॥

ಮುಂದೆ ವಿರಚಿಸಿದ ವೇದಿಯೊಳೆಸೆವ ಹಸೆಗೆ ನಡೆ ।
ತಂದು ಪಾಣಿಗ್ರಹಣಮಂ ಗೈದು ಲಾಜಾಜ್ಯ ।
ದಿಂದೆ ಹೋಮದೊಳಗ್ನಿಯಂ ಬೆಳಗೆ ವಿಪ್ರರಾಶೀರ್ವಾದಮಂ ಮಾಡಲು ॥
ಬಂದು ತಿಲಕವನಿಟ್ಟು ಪತ್ರಫಲಮಂ ಕೊಟ್ಟು ।
ಪೊಂದಳಿಗೆವಿಡಿದಾರತಿಯ ನೆತ್ತಲೈದೆಯರ್ ।
ಕಂದರ್ಪ ರತಿಗಳ ವಿವಾಹಮೆನೆ ಕಂಗೊಳಿಸಿತಾ ದಂಪತಿಗಳ ಮದುವೆ ॥೧೮॥

ತತ್ಕಾಲದೊಳ್ ಮದನನಾ ಚಂದ್ರಹಾಸನಂ।
ಸತ್ಕರಿಸಿ ಬಳುವಳಿಗೆ ಬಹಳ ಗೋ ಮಹಿಷಿ ಬಲ ।
ವತ್ಕರಿಸಿ ತುರಂಗ ರಥ ಶಯ್ಯಾಸನಂಗಳಂ ವಳಿತ ವಾಹನ ಪದವನು ॥
ಉತ್ಕೃಷ್ಟ ಪರಿಮಳದ್ರವ್ಯ ಸಂಕುಲಮಂ ಚ ।
ಮತ್ಕಾರದಬಲೆಯರನಂಬರಾಭರಣ ವಿಲ ।
ಸತ್ಕಂಠಮಾಲೆಗಳನಿತ್ತನೆಂದುಂ ಬಳಸಿ ತೀರದ ಸುವಸ್ತುಗಳನು ॥೧೯॥

ಉರ್ವೀಶ್ವರನ ಪುರೋಹಿತ ಗಾಲವಂಗೆ ತನ ॥
ಗುರ್ವ ಬಾಂಧವ ಪುತ್ರಮಿತ್ರರ್ಗೆ ನೆರೆದ ಭೂ ।
ಗೀರ್ವಾಣರೆಲರ್ಗೆ ಕವಿ ಗಮಕಿ ನಟ ವಿದೂಷಕ ವಂದಿ ಗಾಯಕರ್ಗೆ ॥
ಸರ್ವ ಜನಕವರವರ ತರವರಿತು ಸತ್ಕರಿಸಿ ।
ತರ್ವಾಯೊಳಗಣಿತ ದ್ರವ್ಯಮಂ ಪೊತ್ತು ಬೇ ।
ಸರ್ವಿನಂ ಕೊಟ್ಟನುತ್ಸವದಿಂದೆ ಯಾಚಕರ್ಗಾಗ ದುರ್ಮತಿಯ ಸೂನು ॥೨೦॥

ತದನಂತರದೊಳನಿಬರೆಲ್ಲರಂ ಕಳುಹಿ ನಿಜ ।
ಸದನದೆ ಸಮಗ್ರ ವೈಭವದೊಳಿರಲಂದಿರುಳ್ ॥
ಮದನಂ ಸ್ವಬಾಂಧವರ್ವೆರಸಿ ದಂಪತಿಗಳಂ ಸಹಭೋಜನಂ ಮಾಡಿಸಿ ॥
ಇದನಂಗತಾತನಂ ಪೂಜಿಸಿದ ಫಲದೊಳಾ ।
ದುದನಂತ ಸೌಭಾಗ್ಯಮೆಂದು ಮುದದಿಂ ಪವಡಿ ।
ಸಿದನನ್ನೆಗಂ ಪೂರ್ವಶೈಲ ಶಿಖರದ ಹೊಂಗಳಸದಂತೆ ರವಿ ಮೆರೆದನು ॥೨೧॥

ಪಂಕರುಹ ಮಿತ್ರನುದಯದೊಳೆದ್ದು ಮದನಂ ಸ್ವ ।
ಕಿಂಕರರ್ಗರಿಪಲವರೆಂದಿನ ಮಹೋತ್ಸವ ಕ ।
ಲಂಕರಿಸಿದರ್ ಧ್ವಜಪತಾಕೆಗಳ ರಚನೆಯಿಂದಮಲ ಮಣಿ ಮಂಟಪವನು ॥
ಕಂಕಣದ ಘನರವದ ಮಿಂಚುಗಂಗಳ ಸತೀ ।
ಸಂಕುಲದ ಮಾಳ್ಕೆಗಳ ಮಂಗಳ ಸ್ನಾನದಿಂ ।
ಕುಂಕುಮ ವಿಲಿಪ್ತಾಂಗನಾಗಿ ನಿಜ ಸತಿಸಹಿತ ಚಂದ್ರಹಾಸಂ ಮೆರೆದನು ॥೨೨॥

ಚಂಪಕ ಸ್ನೇಹಸಮ್ಮರ್ದನದ ಕುಂಕುಮದ ।
ಕಂಪಿನನುಲೇಪನದ ನಿರ್ಮಲ ಜಲ ಸ್ನಾನ ।
ದಂಪಿನ ಕಳೇವರದ ರಂಜಿಸುವ ನೊಸಲ ಮುತ್ತಿನ ಬಾಸಿಗದ ಚೆಲ್ವಿನ ॥
ದಂಪತಿಗಳೊಪ್ಪಿದರ್ ಪಾಡುವ ಪುರಂಧ್ರಿಯರ ।
ನುಂಪಿಡಿದ ಸರದಿಂದೆ ಮಂಗಳ ಸುವಾದ್ಯ ರವ ।
ದಿಂ ಪಾರ್ವರಡಿಗೊಡಿಗೊಡರ್ಚುವ ಶುಭಸ್ವಸ್ತಿವಾಚನದ ಘೋಷದಿಂದೆ ॥೨೩॥

ಸುತ್ರಾಮ ತನಯ ಕೇಳುತ್ಸವದೊಳೀಪರಿ ದಿ ।
ನತ್ರಯಂ ನಡೆಯಲ್ಕೆ ನಾಲ್ಕನೆಯ ದಿವಸದೊಳ್ ।
ಚಿತ್ರಮಂ ವಿರಚಿಸಿ ಪೊಳಲ್ಬುಗಿಸಿ ನಾಗವಲ್ಲಿಯ ಸೊಡರ್ಗಳನೊದವಿಸಿ ॥
ಕ್ಷತ್ರಿಯ ವಿವಾಹವೈಭವದೊಳಿದು ಪೊಸತೆನೆ ಧ ।
ರಿತ್ರಿಯೊಳ್ ಚಂದ್ರಹಾಸಂಗಾಯ್ತು ಮದುವೆ ಶತ ।
ಪತ್ರನಾಭನ ಕಿಂಕರರ್ಗೆ ಮಾಡಿದ ಮಿಥ್ಯೆಯದು ತಾನೆ ಪಥ್ಯಮೆನಲು ॥೨೪॥

ವಿಸ್ತರಿಸಿ ಮೃಷ್ಟಭೋಜನದ ನವಕುಸುಮ ಫಲ।
ವಸ್ತುಗಳ ಕರ್ಪೂರ ವೀಟಿಕೆಯ ಚಂದನದ॥
ಕಸ್ತುರಿ ಜವಾಜಿಗಳ ಪರಿಮಳದ ಕರ್ದಮದ ವಸ್ತ್ರಭೂಷಣದ ವಿತ್ತದ॥
ಪ್ರಸ್ತುತದ ಸನ್ಮಾನದಿಂದೆ ಮನ್ನಿಸಿದಂ ಸ।
ಮಸ್ತ ಜನಮಂ ಮದನನಾಪ್ತ ಬಂಧುಗಳಂ ಪ್ರ।
ಶಸ್ತ ಪೂಜೆಗಳಿಂದೆ ಸತ್ಕರಿಸಿ ಕೊಟ್ಟನೆಲ್ಲರ್ ತಣಿಯೆ ತಾಂ ತಣಿಯದೆ ॥೨೫॥

ಬಂಡಾರದಖಿಳ ವಸ್ತುವನೊಂದು ತೃಣಮಾಗಿ।
ಕಂಡು ವೆಚ್ಚಿಸಿ ಚಂದ್ರಹಾಸನ ವಿವಾಹಮಂ।
ಕೊಂಡೆಸಗುತಿರ್ದನೊಲವಿಂ ಮದನನಿತ್ತ ಕುಂತಳಪುರದೊಳವನತ್ತಲು॥
ಆಂಡಲೆದು ಚಂದನಾವತಿಯೊಳ್ ಕುಳಿಂದನಂ।
ದಂಡಿಸಿದನಾ ದುಷ್ಟಬುದ್ಧಿ ಜರೆದುರೆ ಬೈದು।
ಹಿಂಡಿ ಹಿಳಿದರ್ಥಮಂ ತೆಗೆದು ಸೆರೆಮನೆಗಿಕ್ಕಿ ನಿಗಳಮಂ ಕಾಲ್ಗೆಪೂಡಿ ॥೨೬॥

ಹೆಕ್ಕಳಿಸಿ ರಾಜ್ಯಮಂ ಕೊಟ್ಟೊಡೆನ್ನಂ ಮರೆದು।
ಸೊಕ್ಕಿ ತನಗೊರ್ವ ಮಗನಂ ಮಾಡಿಕೊಂಡವನ।
ಮಕ್ಕಳಾಟಿಕೆಯಿಂದೆ ದೇವತಾಲಯ ತಟಾಕಾರಾಮ ಕೊಡವೆಗಳನು॥
ಇಕ್ಕಿ ಕಿಡಿಸಿದನೆಂದವನ ವಳಿತಮಂ ತೆಗೆದು।
ಕಕ್ಕಸದ ಬಂಧನದೊಳಿರಿಸಿ ಕುಂತಳನಗರಿ।
ಗಕ್ಕರಿಂದೈತಂದನಾ ದುಷ್ಟಬುದ್ಧಿ ವಾಹಕರನವಗಡಿಸಿ ನಡೆಸಿ ।೨೭॥

ಕೊಂದಪನೊ ವಿಷವನೂಡಿಸಿ ಚಂದ್ರಹಾಸನಂ।
ಮಂದಮತಿಯಾಗಿ ಮರೆದಿರ್ದಪನೋ ಮಗನೆಂಬ।
ಸಂದೇಹದಿಂ ಚಂದನಾವತಿಯೊಳಿರದೆ ಕುಂತಳಪುರಕೆ ದುಷ್ಟಬುದ್ಧಿ॥
ನಿಂದಲ್ಲಿ ನಿಲ್ಲದೈತರೆ ಪಥದೊಳದಿರಾಗಿ।
ಬಂದು ನುಡಿದುದು ಸರ್ಪಮೊಂದು ನಿನ್ನಾಲಯದೊ।
ಳಿಂದುವರೆಗೊಡವೆಯಂ ಕಾದಿರ್ದೆನದು ನಿನ್ನ ಸುತನಿಂದೆ ಪೋದುದೆಂದು ॥೨೮॥

ಮಾನವರ ತೆರದೊಳಿಂತೆಂದೊರೆದು ಫಣಿ ಬಿಲಕೆ।
ತಾನಿಳಿಯೆ ಕೇಳ್ದು ವಿಸ್ಮಿತನಾಗಿ ಮಂತ್ರಿ ದು।
ಮ್ಮಾನದಿಂ ನಗರದ ಸಮೀಪಕ್ಕೈತರೆ ವಾದ್ಯಘೋಷಿತಂ ಕಿವಿಯೊಳಿಡಿಯೆ॥
ಏನಿದುತ್ಸವಮೂರೊಳೆನೆ ಕಂಡವರ್ ನಿನ್ನ।
ಸೂನು ಮದನಂ ಚಂದ್ರಹಾಸಂಗೆ ವಿಷಯೆಗೆ ವಿ।
ಧಾನದಿಂ ಮದುವೆಯಂ ಮಾಡಿಸಿದ ನದರೊಸಗೆ ಪೊಳಲೊಳಾದವುದೆಂದರು॥೨೯॥

ಕೂರ್ದಸಿಯ ನಿಳುಹಿದಂತಾಯ್ತು ಕರ್ಣದೊಳಾಗ।
ಕಾರ್ದುವಕ್ಷಿಗಳರುಣತೆಯನುಗ್ರ ಕೋಪದಿಂ।
ಮಿಾರ್ದನೇ ತನ್ನ ನೇಮವನಕಟ ಮಗನೆಂದು ಪಲ್ಗಡಿಯುತ್ತೈತರಲ್ಕೆ ॥
ಸಾರ್ದ ಸಂತೋಷದಿಂ ಬಂದು ಕಾಲ್ಗೆರಗಿದೊಡೆ।
ಚೀರ್ದು ಸುತನಂ ಬೈದು ಮಂತ್ರಿ ನಿಜ ಸದನಮಂ।
ಸೇರ್ದು ಪೊನ್ನಂದಣಮನಿಳಿದಾತ್ಮಜಾತನಂ ನೋಡಿ ಮುಳಿದಿಂತೆಂದನು ॥೩೦॥

ಮದನನಂ ಮದುವಕ್ಕಳಂ ಮಹಾವೈಭವದ।
ಮದುವೆಯಂ ತ್ಯಾಗಭೋಗವನುಚಿತ ರಚಿತಮಂ।
ಮುದದಿಂದೆ ಬಣ್ಣಿಸುವ ಭಟ್ಟರಂ ಬಿತ್ತರಿಸಿ ಪರಸುವ ಮಹೀಸುರರನು॥
ಸುದತಿ ವಿಷಯೆಗೆ ತಕ್ಕ ವರನಿಂದುಹಾಸನೆಂ।
ದಿದಿರಾಗಿ ಬಂದಾರತಿಯನೆತ್ತಿ ನುಡಿವ ಶಶಿ।
ವದನೆಯರನವಗಡಿಸಿ ಮಂತ್ರಿ ಬೈದಂ ತನ್ನ ಮನೆಗಾಪ್ತರಾದವರನು ॥೩೧॥

ರಂಜಿಸುವ ಪೊಸಮುತ್ತಿನೆಸವ ಬಾಸಿಗದ ನೊಸ।
ಲಿಂ ಜಡಿವ ಮಣಿಭೂಷಣಾವಳಿಯ ಕಾಂತಿಯಿಂ।
ಮಂಜುಳ ಹರಿದ್ರ ಕುಂಕುಮ ಚರ್ಚಿತಾಂಗದಿಂ ಚೆಲ್ವಿಂದೆ ಸಂಗಡಿಸಿದ॥
ಅಂಜಲಿಗಳಿಂ ಮೆರೆವ ದಂಪತಿಗಳಭಿನಮಿಸೆ।
ಮಂಜರಂ ಮರಿಗಿಳಿಗಳಂ ನಿರೀಕ್ಷಿಸುವಂತೆ।
ನಂಜಿಡಿದ ಮನದಮಾತ್ಯಂ ನೋಡಿ ತನ್ನ ಸುತನಂ ಬಯ್ದು ತಿಂತೆಂದನು ॥೩೨॥

ಮೂಢನೀನೆಲವೆಲವೊ ಮದನ ನಿನ್ನೊಡೆಗೆ ನಾಂ।
ಗೂಢದಿಂ ಬರೆಸಿ ಕಳುಹಿದೊಡುರುವ ಕಜ್ಜಮಂ।
ರೂಢಿಯಿಂ ಮಾಡಿ ಕೆಡಿಸಿದೆ ಪಾಪಿ ಹೃದಯ ಶೂಲವನೆನಗೆ ಮೇದಿನಿಯೊಳು॥
ಗಾಢದಿಂ ಬಲಿದೆ ಸಾಮ್ರಾಜ್ಯ ಸಿಂಹಾಸನಾ।
ರೂಢನಾಗಿರಲೊಲ್ಲದಾರ್ಜಿಸಿದ ವಿತ್ತಮಂ।
ವೇಡೈಸಿದಖಿಳ ಜನಕಿತ್ತೆ ವನವಾಸವೇ ಗತಿ ನಿನಗೆ ಹೋಗೆಂದನು ॥೩೩॥

ಪಿತನ ಮಾತಂ ಕೇಳ್ದು ಮದನನುರೆ ಬೆರಗಾಗಿ।
ಖತಿಯೇಕೆ ಜೀಯ ನಿಮ್ಮಡಿಗಳ ನಿರೂಪಮಂ।
ಪ್ರತಿಪಾಲಿಸದೆನಲ್ಲದಾನತಿಕ್ರಮಿಸಿ ಮಾಡಿದ ಕಜ್ಜಮೇನಿದರೊಳು॥
ಕ್ಷಿತಿಗೆ ಕೌತುಕವೆ ತಂದೆಯ ಮಾತಿಗಾಗಿ ರಘು।
ಪತಿ ವರ್ತಿಸನೆ ವಿಪಿನ ವಾಸದೊಳ್ ಪತ್ರಸಂ।
ಮತಿವಿಡಿದು ವಿಷಯೆಗೆ ವಿವಾಹಮಂ ವಿರಚಿಸಿದೊಡಾಯ್ತೆನಗೆ ವನಮೆಂದನು॥೩೪॥

ಗನ್ನಗತಕದ ಮಾತು ಸಾಕೆನ್ನ ಕಣ್ಣ ಮುಂ।
ದಿನ್ನಿರದೆ ಹೋಗೆಂದು ಮಂತ್ರಿ ಮಗನಂ ಬೈದು।
ಮುನ್ನ ತಾಂ ಬರೆಸಿ ಕಳುಹಿದ ಪತ್ರಮಂ ತರಿಸಿ ನೋಡಿಕೊಂಡದರೊಳಿರ್ದ॥
ಭಿನ್ನಿಸಿದ ಭಾವಾರ್ಥಮಂ ತಿಳಿದು ತಪ್ಪಿಲ್ಲ।
ವೆನ್ನ ತನಯನೊಳಿನ್ನು ಲೋಕದೊಳ್ ವಿಧಿಲಖಿತ।
ಮನ್ನಿವಾರಿಪರುಂಟೆ ಶಿವಾಶಿವಾ ಪೊಸತೆಂದು ಬಿಸುಸುಯ್ದು ಬೆರಗಾದನು ॥೩೫॥

ವಿಷವ ಮೋಹಿಸುವಂತೆ ಕೊಡುವುದೆನಲೀತಂಗೆ।
ವಿಷಯೆ ಮೋಹಿಸುವಂತೆ ಕೊಡುವುದೆಂಬೀ ಲೇಖ।
ವಿಷಯವಿದು ವಿಧಿಕೃತವೋ ತನ್ನ ಮೋಸವೊ ಬರೆದವನ ಮರೆಹೊ ಶಶಿಹಾಸನ॥
ಮೃಷೆಯೊ ಮದನನ ಮೇಲೆ ತಪ್ಪಿಲ್ಲ ಮೊದಲೆನಗೆ।
ಋಷಿಗಳಾಡಿದ ಮಾತು ಪುಸಿಯದೆಂದಾ ಮಂತ್ರಿ।
ವಿಷಮಬುದ್ಧಿಯೊಳೊಂದುಪಾಯಮಂ ಮನದೊಳಗೆ ನೆನೆದು ಚಿಂತಿಸುತಿರ್ದನು॥
॥೩೬॥

ವಿಧುಹಾಸನಂ ಪಲ ವುಪಾಯದಿಂದೀಗ ನಾಂ।
ವಧಿಸದಿರ್ದೊಡೆ ತನ್ನ ಸಂತತಿಗೆ ಧರೆಯನಾ।
ಳ್ವಧಿಕ ಸಂಪದವಾಗದದರಿಂದೆ ಕುಲಘಾತಕಗೆ ಮದುವೆಯಾದ ವಿಷಯೆ॥
ವಿಧವೆಯಾಗಿರಲೆಂದು ಹೃದಯದೊಳ್ ನಿಶ್ಚೈಸಿ।
ಮಧುರೋಕ್ತಿಯಿಂದೆ ಮದುಮಕ್ಕಳಂ ಮನ್ನಿಸಿ ವಿ।
ವಿಧ ವೈಭವಂಗಳಂ ನಡೆಸಿ ಜಾಮಾತನಂ ಮಂತ್ರಿ ಕರೆದಿಂತೆಂದನು ॥೩೭॥

ವೀರ ಬಾರೈ ಚಂದ್ರಹಾಸ ನೀನಿನ್ನೆಗಂ।
ದೂರವಾಗಿರ್ದೆ ನಮಗಿನ್ನಳಿಯನಾದ ಬಳಿ॥
ಕೂರ ಹೊರ ಬನದೊಳಿಹ ಚಂಡಿಕಾಲಯಕೆ ಮದುವೆಯ ನಾಲ್ಕನೆಯ ದಿನದೊಳು॥
ನೀರಜಸಬಾಸ್ತ ಸಮಯದೊಳೊರ್ವನೇ ಪೋಗಿ।
ಗೌರಿಯಂ ಪೂಜಿಸಿ ಬಹುದು ನಮ್ಮ ವಂಶದಾ।
ಚಾರಮಿದು ವರನಾದವಂಗೆ ನೀನಿಂದಿದಂ ಮಾಡೆಂದು ನೇಮಿಸಿದನು ॥೩೮॥

ಲೇಸಾದುದೆಂದು ಮಾವನ ಮಾತಿಗೊಪ್ಪಿ ಶಶಿ।
ಹಾಸಂ ಪ್ರಸೂನ ಗಂಧಾಕ್ಷತೆಗಳಂ ತರಿಸ।
ಲಾ ಸಚಿವನತಿ ಗೂಢದಿಂದೆ ಚಂಡಾಲರಂ ಕರೆಸಿ ನೀವಂದಿನಂತೆ॥
ಮೋಸದಿಂ ಬಿಟ್ಟು ಬಾರದೆ ಚಂಡಿಕಾಲಯಕೆ।
ನೇಸರಂಬುಧಿಗಿಳಿಯಲರ್ಚನೆಗೆ ಬಹನೋರ್ವ।
ನೋಸರಿಸದಡಗಿಕೊಂಡಿರ್ದಾತನಂ ಕೊಲ್ವುದೆಂದು ಬೆಸಸಿದನವರ್ಗೆ ॥೩೯॥

ವಿಜಯ ಕೇಳಾ ಸಮಯದೊಳ್ ಕುಂತಳೇಶ್ವರಂ ।
ನಿಜ ಶರೀರಚ್ಛಾಯೆ ತಲೆಯಿಲ್ಲದಿರೆ ಕಂಡು ।
ದ್ವಿಜ ಶಿರೋಮಣಿ ಗಾಲವಂಗರಿಪಲಾತನಿದು ಮೃತಿಗೆ ಕಾರಣಮೆನಲ್ಕೆ ॥
ರುಜೆಗೆ ಮೈಗೊಡಬಾರದೆಂದು ನಿರ್ಶೋಕಮಂ ।
ಭುಜಗಪತಿ ಬಿಡುವಂತೆ ಸಕಲ ಸೌಭಾಗ್ಯಮಂ ।
ತ್ಯಜಿಸಿ ನಿರುಪಮ ಯೋಗಸಿದ್ಧಿಯಂ ಪಡೆಯೆ ವನವಾಸಕುದ್ಯೋಗಿಸಿದನು ॥೪೦॥

ಗಾಲವನ ಪದಕೆರಗಿ ಕೈಮುಗಿದು ನಿಂದು ಭೂ ।
ಪಾಲಕಂ ತನಗಿನ್ನು ಸಾಕು ರಾಜ್ಯದ ಚಿಂತೆ ।
ಕಾಲಮಂ ಸಾಧಿಸುವೆನತುಲ ಯೋಗದೊಳೆನಗೆ ಸುತರಿಲ್ಲ ಧರೆಯುನಾರ್ಗೆ ॥
ಬಾಲೆ ಚಂಪಕಮಾಲಿನಿಯನಾರ್ಗೆ ಕುಡುವೆಂ ವಿ ।
ಶಾಲಮತಿ ಬೆಸಸೆಂದು ಬೇಡಿಕೊಳೆ ಲಕ್ಷಣ ಸು ।
ಶೀಲನಹ ಚಂದ್ರಹಾಸಂಗೆ ಮೇದಿನಿ ಸಹಿತ ಮಗಳನಿತ್ತಪುದೆಂದನು ॥೪೧॥

ಎಂದೊಡರಸಂ ಗಾಲವನ ಬುದ್ಧಿಯಂ ಕೇಳ್ದು ।
ತಂದೆ ಮಾಡುವ ರಾಜಕಾರ್ಯಮಂ ನಿರ್ವಹಿಸು ।
ತಂದು ಬಾಗಿಲೊಳಿರ್ದ ಮದನನಂ ಕರಸಿ ಕೈವಿಡಿದು ಮೆಲ್ಲನೆ ಕಿವಿಯೊಳು ॥
ಮುಂದೆ ನಮಗುರ್ವ ಕೆಲಸದ ಪೊರಿಗೆಯುಂಟು ನೀ ।
ನಿಂದುಹಾಸನನಿಲ್ಲಗೀಗಳೊಡಗೊಂಡು ಬಾ ।
ಸಂದೇಹಿಸದೆ ಪೋಗೆನಲ್ಕೆ ಭೂಪಾಲನಂ ಬೀಳ್ಕೊಂಡು ಪೊರಮಟ್ಟನು ॥೪೨॥

ಉತ್ತಮ ಹಯಾರೂಢನಾಗಿ ಮದನಂ ಜವದೊ ।
ಳತ್ತಣಿಂದೈದೆ ರವಿ ಪಶ್ಚಿಮಾಂಬುಧಿಗಿಳಿವ ।
ಪೊತ್ತು ಪೊಂದಳಿಗೆಯೊಳ್ ಪುಷ್ಪ ಫಲ ತಾಂಬೂಲ ಗಂಧಾಕ್ಷತೆಗಳನಿರಿಸಿ ॥
ಎತ್ತಿಕೊಂಡತ್ತಣಿಂ ಬಹ ಚಂದ್ರಹಾಸನ ನಿ ।
ದೆತ್ತಪೋದಪೆಯೆಂದು ಬೆಸಗೊಳಲ್ ತವ ಪಿತಂ ।
ತೆತ್ತ ಸುವ್ರತಮೆನಲ್ ಚಂಡಿಕಾ ಪೂಜೆಯಂ ಮಾಡಿ ಬಂದಪೆನೆಂದನು ॥೪೩॥

ತಟ್ಟನೆ ತುರಂಗಮುವನಿಳಿದಿಳೆಗೆ ಮತ್ಪಿತನ ।
ಕಟ್ಟಳೆಯ ಚಂಡಿಕಾ ಪೂಜೆಗಾಂ ಪೋದಪೆಂ ।
ನೆಟ್ಟನೆ ಮಹೀಶ್ವರಂ ಪಿರಿದು ಕಜ್ಜಕೆ ನಿನ್ನೊಡಗೊಂಡು ಬಾಯೆನಲ್ಕೆ ॥
ಕಟ್ಟವಸರಕೆ ಬಂದನೆಂದರ್ಚನಾ ದ್ರವ್ಯ ।
ಮಿಟ್ಟ ಪೊಂದಳಿಗೆಯಂ ತೆಗೆದುಕೊಂಡಶ್ವಮಂ ।
ಕೊಟ್ಟಾತನಂ ಕಳುಹಿ ಪೊರಮಟ್ಟನೇಕಾಕಿಯಾಗಿ ಮದನಂ ಪೊಳಲನು ॥೪೪॥

ತನ್ನ ಪಿತನಾಜ್ಞೆಯಂ ನಡೆಸುವ ಕುಲವ್ರತದ ।
ನನ್ನಿ ಶಶಿಹಾಸಂಗೆ ಭಂಗಮಾದಪುದೆಂದು ।
ಮನ್ನಿಸಿ ನೆರೆದ ಸಕಲ ಸೇವಕರನೆಲ್ಲರಂ ಕಳುಹಿ ತಾನೊರ್ವನಾಗಿ॥
ಉನ್ನತ ದ್ರುಮಷಂಡ ಮಂಡಿತದ ಬನದೊಳ್ ಪ್ರ।
ಸನ್ನೆಯಾಗಿಹ ಚಂಡಿಕಾಲಯಕೆ ಬರುತಿರ್ದ ।
ನನ್ನೆಗಂ ಕರತಳದ ಗಂಧಪುಷ್ಪದ ಪಾತ್ರೆಯೋಸರಿಸಿ ಬಿದ್ದುದಿಳೆಗೆ ॥ ೪೫ ॥

ಚೀರುತೆ ಪೊಣರ್ದುವು ಬಿಡಾಲಗಳ್ ಪಕ್ಷಿಗಳ್ ।
ಕಾರಿದುವು ರುಧಿರಮಂ ಕೂಗಿದುವು ಗೂಗೆಗಳ್।
ಸಾರುತಿಹ ದುರ್ನಿಮಿತ್ತಂಗಳಂ ಕಂಡವಂ ವ್ರತ ಭಂಗಮಪ್ಪುದೆಂದು॥
ಮೀರಿ ನಡೆಯುತ ಮನದೊಳಿದರಿಂದೆ ಭೀತಿಗಳ್ ।
ತೋರದಿರವವನಿಯೊಳ್ ಚಂದ್ರಹಾಸಂಗೆನುತೆ ।
ಮೂರಂಬಕದೊಳೆಸೆವ ದೇವನರಸಿಯ ಭವನಕಾ ಮದನನೈತಂದನು ॥೪೬॥

ಖಳರಂತರಂಗ ಪ್ರವೇಶದ ವಿವೇಕಮಂ ।
ಬಳಸಿದರಿಷಡ್ವರ್ಗಮೊತ್ತರಿಸಿ ಮುರಿವಂತೆ ।
ಪೊಲಬರಿಯದೊಳಪುಗುವ ಮದನನಂ ಮಂತ್ರಿ ಕಳುಹಿದೊಡಲ್ಲಿ ಬಂದಡಗಿದ॥
ಕೊಲೆಗಡಿಗ ಚಂಡಾಲರುಗಿದ ಕೈದುಗಳಿಂದೆ।
ಕೆಲಬಲದೊಳಿರ್ದು ಪೊಯ್ದಿರಿದು ಕೆಡಹಿದೊಡೆ ಭೂ ।
ತಳಕೆ ಬೀಳುತ್ತವಂ ಮಾಧವ ಸ್ಮರಣೆಯಿಂದಸುದೊರೆದನಾಕ್ಷಣದೊಳು ॥೪೭॥

ಅವಗಡಿಸಿ ಮದನನಂ ಘಾತುಕರ್ ಚಂಡಿಕಾ ।
ಭವನದೊಳ್ ಕೊಂದು ನಿಲ್ಲದೆ ಪೋದರಿತ್ತಲು ।
ತ್ಸವದಿಂದೆ ಚಂದ್ರಹಾಸಂ ಕುಂತಳೇಂದ್ರನಂ ಕಾಣಲಾ ನ್ಯಪನವಂಗೆ॥
ಅವನಿಯಂ ಕೊಟ್ಟರಸುಪಟ್ಟವಂ ಕಟ್ಟಿ ಗಾ ।
ಲವನ ಮತದಿಂದೆ ಗಾಂಧರ್ವ ವೈವಾಹದಿಂ ।
ಕುವರಿ ಚಂಪಕಮಾಲಿನಿಯನಿತ್ತು ಸತ್ಕರಿಸಿ ಬನಕೆ ತಾಂ ಪೊರಮಟ್ಟನು ॥೪೮॥

ಬಾಧಿಸುವ ಸುಖದುಃಖದೊಡಲೆನಿಪ ಸಂಸಾರ ।
ಸಾಧನವನೆಲ್ಲಮಂ ತೊರೆದು ಸಮ್ಯಗ್ ಜ್ಞಾನ ।
ಬೋಧಿತದ ಯೋಗಮಂ ಸತಿ ಸಹಿತ ಗಾಲವನನುಜ್ಞೆಯಿಂದೆ॥
ಗೋಧೂಳಿಲಗ್ನದೊಳ್ ಪೊರಮಟ್ಟನಾ ಕುಂತ ।
ಳಾಧಿಪನರಣ್ಯವಾಸಕೆ ಬಳಿಕ ಚಂದ್ರಹಾ।
ಸಾಧೀನವಾಯ್ತವನ ಸಂಪದಂ ಪುರುಷಸ್ಯಭಾಗ್ಯಮೆಂಬುದು ನಿಜಮೆನೆ ॥೪೯॥

ಪಟ್ಟದರಸಾಗಲ್ಕೆ ಚಂದ್ರಹಾಸಂ ಬಳಿಕ ।
ಪಟ್ಟಣದ ಜನಮರಿಯಲೆಂದು ಸಿಂಗರಿಸಿ ತೋ।
ರ್ಪಟ್ಟ ಗಜಮಸ್ತಕದಮೇಲೆ ನೃಪಸುತೆಸಹಿತ ಪೊರಮಟ್ಟನುತ್ಸವದೊಳು॥
ದಟ್ಟಿಸಿದ ವಾದ್ಯರವ ಮೊದರಿತೀ ವಾರ್ತೆ ತಿವಿ ।
ದಟ್ಟಿದೊಡೆ ದುಷ್ಟಬುದ್ಧಿಗೆ ಮತ್ತೆ ಭೀತಿ ಪೊ।
ಯ್ದುಟ್ಟಿತೇನೆಂಬೆನದು ಪೊಸತಲಾ ದೈವಕೃತಮೆಂದು ಸೈವೆರಗಾದನು ॥೫೦॥

ಗಾಲವನ ಮತದೊಳೆನ್ನ ಕರೆಸದಿಂದು ಭೂ।
ಪಾಲಂ ಕುಳಿಂದತನಯಂಗಿಳೆಯನೊಪ್ಪಿಸಿ ವ।
ನಾಲಯಕೆ ತೆರಳಿದನೆ ಮದನನಿದ್ದೆಗ್ಯೆವನೆಂದು ಪಲ್ಮೊರೆದು ಮಗನ ॥
ಮೇಲೆ ಕೋಪಿಸುತಿರ್ದನನ್ನೆಗಂ ಧ್ರುವಃರಾರಿ ।
ಮಾಲಿನಿವೆರಸಿ ಮಾವನಂ ಕಾಣಲೆಂದು ಶುಂ ।
ಡಾಲ ಮಸ್ತಕದಿಂದಮಿಳಿತಂದ ಶಶಿಹಾಸನೆರಗಿದಂ ಸಚಿವನಡಿಗೆ ॥೫೧॥

ಕಳಿವರಿವ ಕೋಪದಿಂ ಮಂತ್ರಿ ವಂಶಾಚಾರ ।
ಮುಳಿಯಲಾಗದು ಚಂಡಿಕಾರ್ಚನೆಗೆ ನಡೆಯೆಂದು।
ಕಳುಹಿದೊಡೆ ನೀಂ ಮಾಡಿದುಜ್ಜುಗಮಿದೇನೆಂದು ಕೇಳ್ದೊಡಾ ಶಶಿಹಾಸನು ॥
ಅಳವಡಿಸಿಕೊಂಡು ನಾಂ ಪೋಗುತಿರೆ ನಡುವೆ ಕುಂ।
ತಳ ರಾಜನರಮನೆಗೆ ತನಗವಸರವನಿತ್ತು ।
ತಳರ್ದನೊರ್ವನೆ ನಿನ್ನಮಗನಂಬಿಕಾ ಪೂಜೆಗಿಂತಾಯ್ತು ಬಳಿಕೆಂದನು ॥೫೨॥

ಹಮ್ಮೈಸಿದಂ ದುಷ್ಟಬುದ್ಧಿ ನಯದೊಳಗಳಿಯ ।
ನಮ್ಮನೆಗೆ ಬೀಳ್ಕೊಟ್ಟನರಿದರಿದು ಪರಹಿಂಸೆ ।
ಯವಮ್ಮಾಡಿ ಮಾನವಂ ಬಾಳ್ದಪನೆ ದೀಪಮಂಕೆಡಿಸುವ ಪತಂಗದಂತೆ॥
ನಮ್ಮುಪಾಯವೆ ನಮಗಪಾಯಮಂ ತಂದುದೆಂ ।
ದೊವ್ಮೆ ನಿಜ ಸದನಮಂ ಪೊಕ್ಕಾರುಮರಿಯದವೊ।
ಲುಮ್ಮಳಿಸಿ ಶೋಕದಿಂ ಪೊರಮಟ್ಟನೇರಿಳಿದು ಕೋಟೆಯಂ ಕತ್ತಲೆಯೊಳು ॥೫೩॥

ಮಿಾಂಟುವಗ್ಗದ ಶೋಕದಿಂದಿರದೆ ಪೊರಮುಟ್ಟು ।
ನಾಂಟುವೊತ್ತುವ ಮುಳ್ಳುಕಲ್ಗಳಂ ಬಗೆಗೊಳದೆ।
ದೀಂಟುಗುಳಿಗಳ ನರಿಯದೇಳುತ್ತ ತಲೆಗೆದರಿ ಬಾಯ್ಬಿಡುತ್ತೆ॥
ಕೋಂಟೆಗಳ ನೇರಿಳಿದು ಪರಿಖೆಯ ಜಲಂಗಳಂ ।
ದಾಂಟಿ ಕತ್ತಲೆಯೊಳೊರ್ವನೆ ಮುಂತ್ರಿ ಪೊಳಲಪೊರ ।
ದೋಂಟದೆಡೆಯೊಳ್ ನೆಲಸಿದಂಬಿಕಾ ಭವನಮಂ ಸಾರ್ದನದನೇವೇಳ್ವೆನು ॥೫೪॥

ಪರಿದ ಪೂಮಾಲೆಗಳ ಬಣ್ಣಗೂಳ್ಗಳ ಬಲಿಯು ।
ಮೊರದ ಪಳಗೊಳ್ಳಿಗಳ ಭಸ್ಮದೊಡೆದೋಡುಗಳ ।
ಮುರಿದ ಗೂಡಂಗಳ ಕಳಲ್ದ ಶಿಬಿಕೆಗಳ ಚಿತಿಯೊಳ್ ಬೇವ ಕುಣಪಂಗಳ॥
ತುರುಗಿದೆಲುವಿನ ಜಂಬುಕಾವಳಿಯ ಗೂಗೆಗಳ।
ಬಿರುದನಿಯ ಭೂತ ಭೇತಾಳ ಸಂಕುಲದಡಗಿ ।
ನರಕೆಗಳ ಸುಡುಗಾಡೊಳಾ ಮಂತ್ರಿ ಚಂಡಿಕಾಲಯದೆಡೆಗೆ ನಡೆತಂದನು॥ ೫೫ ॥

ತಂಡ ತಂಡದ ಭೂತ ವಿತತಿಗಳ್ ತಲೆಗೆದರಿ ।
ಕೊಂಡು ಪೆರ್ಮರುಳಂದೆ ಬಂದ ದುಷ್ಟಬುದ್ಧಿಯಂ ।
ಕಂಡು ತಾವತಿಪಾತಕಂಗಳಂ ಮಾಡಿದ ಪಿಶಾಚರಗ್ಗಳೆಯರೆಮ್ಮ ।
ಹಿಂಡೊಳಿವನವೊಲಾರುಮಿಲ್ಲಾವ ಪಾಪ ದು ।
ರ್ದ್ದಂಡವೊ ಹಿರಣ್ಯಕಶಿಪುವಿನೆದೆಯುನುರೆ ಬಗಿದ।
ಚಂಡದೈವದ ಪೆಸರನುಸಿರುವನ ದೆಸೆಗಲ್ಲದಳುಕನಿವನೆನುತಿರ್ದುವು ॥ ೫೬ ॥

ಪಾಕಶಾಸನ ತನಯ ಕೇಳ್ ಬಳಿಕ ಮಂತ್ರಿ ಸುತ ।
ಶೋಕದಿಂದಲ್ಲಹ ಮರುಳ್ಗಳಂ ಕಾಣದವಿ।
ವೇಕದಿಂ ಬೇವ ಕುಣಪದ ಚಿತಿಯೊಳುರಿವ ಕಾಷ್ಠಂಗಳಂ ತೆಗೆದುಕೊಂಡು॥
ಆ ಕಾಳಿಕಾಲಯಕೆ ಬಂದದರ ಬೆಳಕಿನೊಳ್ ।
ವ್ಯಾಕೀರ್ಣ ಕೇಶದ ನಿಮಿರ್ದ ಕೈಕಾಲುಗಳ ।
ನೇಕಾಯುಧದ ಗಾಯದೊಡಲ ರುಧಿರದ ಪೊನಲ ಸುಕುಮಾರನಂ ಕಂಡನು ॥ ೫೭ ॥

ಉನ್ನಿಸಿದ ನಿಜ ಮನೋರಥಮುಡಿದೊರಗಿದಂತೆ ।
ತನ್ನ ಕುಲತರು ಮುರಿದು ಬಿದ್ದಂತೆ ಸೌಭಾಗ್ಯ ।
ದುನ್ನತಪ್ರಾಸಾದಮೊರ್ಗುಡಿಸಿ ಕೆಡೆದಂತೆ ಮುರಿದ ಮಿಸೆಗಳ ಮೊಗದ॥
ಬಿನ್ನಣದ ಬಿಟ್ಟಕಂಗಳ ಬಿಗಿದ ಪುರ್ಬುಗಳ ।
ಕೆನ್ನೀರೊಳದ್ದ ಕೇಶದ ಶೋಣಿತಾಂಬರದ ।
ಭಿನ್ನಮಾದವಯವದ ನಂದನಂ ಕಾತ್ಯಾಯಿನಿಯ ಮುಂದೆ ಮಡಿದಿರ್ದನು ॥೫೮॥

ಕಯ್ಯೊಳಿಹ ಕಾಷ್ಠಂಗಳಂ ಬಿಸುಟು ತನು ಭವನ ।
ಮೆಯ್ಯ ಗಾಯಂಗಳಂ ತಡಹಿ ತಕ್ಕೈಸಿ ಮಗು ।
ಳೊಯ್ಯನೊಯ್ಯನೆ ಕುಳ್ಳಿರಿಸಿ ಮೊಗಕೆ ಮೊಗವಿಟ್ಟು ಚುಂಬಿಸಿ ಕುಮಾರ ಪಿನ್ನ ॥
ಅಯ್ಯನಾಂ ಬಂದೆನೇಳ್ವೈ ತಂದೆ ನಾಡ ನಾ ।
ರಯ್ಯಬೇಡವೆ ಕಂದ ಕುಂತಳಾಧೀಶನೇ ।
ಗೆಯ್ಯ ಹೇಳಿದನೆನಗೆ ವಿವರಿಸದೆ ಸುಮ್ಮನಿರ್ದಪೆಯೆಂದೊರಲ್ದನವನು ॥೫೯॥

ಬಂದನಿದೆ ಶಶಿಹಾಸನನುಜ್ಞೆಯಿಂ ಕುಡು ವಿಪ್ರ |
ವೃಂದಮಂ ತಣಿಸು ಬಹುವಿಧದಿಂದೆ ನಾಂ ಬೈದೆ ||
ನೆಂದು ಮುನಿದಿರಬೇಡ ವೈಷ್ಣವದ್ರೋಹದಿಂದೆನಗಿಂತುಟಾಗದಿಹುದೆ ||
ಕಂದ ನೀ ನಚ್ಯುತಪರಾಯಣಂ ಶಿವ ಪೂಜ |
ಕಂ ದೇವಗುರುಧರಾಮರಸೇವಕಂ ಮೋಸ |
ದಿಂದಳಿವುದುಚಿತವೆ ಮದನ ತನ್ನ ಮರಿಯಾನೆ ಹಾ ಯೆಂದೊರಲ್ದನಂದು ||೬೦||

ಮಿತ್ರ ಪ್ರಿಯಂ ರಾಜತೋಷಿತಂ ಮಂಗಳ ಚ |
ರಿತ್ರಂ ಬುಧಾಶ್ರಯಂ ಗುರುಭಾವಿ ಕವಿನುತ ಪ |
ಚಿತ್ರಗುಣಿ ಮಂದರನಿಭಂ ಭೋಗಿ ಸಂತತಂ ಧ್ವಜವಜ್ರಶುಭ ಚರಣನು ||
ಪುತ್ರ ನಿನಗಪ್ಪುದು ನವಗ್ರಹ ಸ್ಥಿತಿಗಳ್ ಪ |
ರಿತ್ರಾಣಮಂ ಮಾಡಿದವರಿಲ್ಲ ನಿನಗಾನೆ |
ಶತ್ರುವಾದೆಂ ಮಗನೆ ಹಾ ಯೆಂದು ಹಲುಬಿದಂ ಮಂತ್ರಿ ಶೋಕಾರ್ತನಾಗಿ||೬೧||

ಕಂಬನಿಗಳರುಣಾಂಬುವಂ ತೊಳೆಯೆ ಮುಂಡಾಡಿ |
ಪಂಬಲಿಸಿ ಹಲುಬಿದಂ ಮರುಗಿ ತನ್ನಿಂದಳಿದ |
ನೆಂಬಳಲ್ಪಿಗೆ ಮಂತ್ರಿ ಸೈರಿಸದೆ ಕೆಲ ಬಲದ ಕಂಬಂಗಳಂ ಪಾಯಲು ||
ಕುಂಬಳದ ಕಾಯಂತೆ ಚಿಪ್ಪಾಗಿ ನಿಜಮಸ್ತ |
ಕಂ ಬಿರಿದು ಬಿದ್ದನುರ್ವಿಗೆ ಪೋದುದಸುಕಾಯ |
ದಿಂ ಬಳಿಕ ನಂದಿದ ಸೊಡರ್ಗಳೆನೆ ಮೃತರಾಗಿ ಸುತತಾತರಿರುತಿರ್ದರು ||೬೨||

ಅರಿಯರಾರುಂ ಪುರದೊಳಿವರಲ್ಲಿ ಮಡಿದುದಂ |
ತುರುಗಿದ ತಮೋಂಧಮೊಯ್ಯನೆ ಜಾರಿತಳಿಕುಲದ |
ಸೆರೆಬಿಟ್ಟುದಂಬುಜದೊಳೊಡನೆ ತಲೆದೋರಿದಂ ತರಣಿ ಮೂಡಣ ದೆಸೆಯೊಳು ||
ಪೊರಮಟ್ಟು ಚಂಡಿಕಾಲಯಕೆ ಪೊಸಪೂಗಳಂ |
ತಿರಿತಂದು ಪೂಜಿಸುವೊಡೊಳವುಗುವ ತಾಪಸಂ ||
ಬೆರೆತು ಬಿದ್ದಿಹ ತಂದೆಮಕ್ಕಳಂ ಕಂಡು ಹಮ್ಮೈಸಿ ವಿಸ್ಮಿತನಾದನು ||೬೩||

ಪಟ್ಟಣದೊಳಿರುಳೊಸಗೆ ಪಸರಿಸಿತು ರಾಜ್ಯಮಂ |
ಬಿಟ್ಟು ವನಕೈದಿದಂ ಕುಂತಳಾಧೀಶ್ವರಂ |
ಪಟ್ಟಮಾದುದು ಚಂದ್ರಹಾಸಂಗೆ ಸೂನು ಸಹಿತೀ ದುಷ್ಟಬುದ್ಧಿಗಿಲ್ಲ ||
ಕೆಟ್ಟೆಣಿಸಿದವರಾರೊ ಶಿವಶಿವಾದ್ಭುತಮೆನುತ |
ನೆಟ್ಟನೆ ನೃಪಾಲಯಕೆ ತಾಪಸಂ ಬಂದು ಮೊರೆ |
ಯಿಟ್ಟೊಡೆ ಕುಳಿಂದಜಂ ಕೇಳ್ದಿರದೆ ಪೊರಮಟ್ಟು ಕಾಲ್ನಡೆಯೊಳೈತಂದನು ||೬೪||

ಚಂಡಿಕಾಲಯಕಖಿಳ ಜನ ಸಹಿತ ನಡೆತಂದು |
ದಿಂಡುಗೆಡೆದಿಹ ಮಾವ ಮೈದುನರ ಹಾನಿಯಂ |
ಕಂಡು ಕಡುಶೋಕದಿಂದುರೆ ನೊಂದು ಚಂದ್ರಹಾಸಂ ದೇವಿಯಂ ನೋಡುತೆ ||
ಖಂಡಿಸಿದೆಲಾ ತನ್ನ ಭಾಗ್ಯಮಂ ತಪ್ಪಾವು |
ದಂಡಲೆದು ಪಡೆವೆ ನಿವರಸುಗಳಂ ಮಾರಿದೊಡೆ |
ಪುಂಡರೀಕಾಂಬಕನ ಸಾಯುಜ್ಯ ಮೆನಗಾಗಲೆಂದು ನಿಶ್ಚಿತನಾದನು || ೭೫ ||

ರಭಸದಿಂದೈತಂದು ಗೋಳಿಡುವ ಬಂಧುಜನ |
ಕಭಯಮಂ ಕೊಟ್ಟು ನಿಶ್ಚಲನಾಗಿ ಶಶಿಹಾಸ |
ನಭವನರಸಿಯ ಮುಂದೆ ಚತುರಶ್ರದೊಳ್ಕುಂಡಮಂ ತೆಗೆಸಿ ಬಳಿಕದರೊಳು ||
ಅಭಿಶೋಭಿಪವೊಲಗ್ನಿಯಂ ಪ್ರತಿಷ್ಠಿಸಿ ವಿಪ್ರ |
ಸಭೆಸಹಿತ ಕುಳ್ಳಿರ್ದು ಬಲಿ ದೀಪ ಮುಂತಾದ |
ವಿಭವಂಗಳಂ ಮಾಡಿ ಘೃತ ಪಾಯಸಾಜ್ಯ ತಿಲ ಹೋಮಂಗಳಂ ಬೇಳ್ದನು ||೭೬||

ಹೇಳಲೇನೈ ಪಾರ್ಥ ಚಂದ್ರಹಾಸಂ ಬಳಿಕ |
ಖಾಳಿಂದ ನಿಜ ದೇಹ ಮಾಂಸಮಂ ಕೊಯ್ಕೊಯ್ದು |
ಬೇಳಿ ಪೂರ್ಣಾಹುತಿಗೆ ಶಿರವನರಿದಪೆನೆಂದು ಖಡ್ಗಮಂ ಗೊಂಡೆತ್ತಿ ಪೂಡಿ
ಕಾಳಿ ನೀನಖಿಳಶಕ್ತಿಗಳ ರೂಪಂಗಳಂ |
ತಾಳಿ ಸರ್ವಾತ್ಮಕನ ಕೂಡಿ ರಮಿಸುವೆಯಲಾ |
ವ್ಯಾಳ ಶಾಯಿಗೆ ಸಮರ್ಪಿತವಾಗಲೊಪ್ಪುಗೊಳ್ಳೆಂದರಿಯಲನುವಾದನು ||೭೭||

ಬೆಚ್ಚಿದಂತೆಸೆವ ಪೀಠವನಿಳಿದು ರುದ್ರಾಣಿ |
ಚೆಚ್ಚರದೊಳೈತಂದು ಕೈಯ ಖಾಳಂ ಪಿಡಿದು |
ನಿಚ್ಚಟದ ಹರಿಭಕ್ತಿಗಾಂ ಪ್ರೀತಿಯಂ ತಳೆದೆನಾತ್ಮವಧೆ ಬೇಡ ನಿನಗೆ ||
ಪೆಚ್ಚಿದ ಕುಮಂತ್ರ ಪಾಪದೊಳಳಿದನೀ ಮಂತ್ರಿ |
ವೆಚ್ಚಿಸಿದನಸುವನಾತನ ಸುತಂ ನಿನಗಾಗಿ |
ಮೆಚ್ಚಿಸಿದೆ ನೀಂ ಮಗನೆ ಬಯಕೆಯಂ ಪೇಳೆರಡು ವರವ ನಿತ್ತಪೆನೆಂದಳು ||೭೮||

ದೇವಿಯು ಪದಾಂಬುಜದೊಳೆರಗಿ ಕೈಮುಗಿದು ನಿಂ |
ದಾವಾವ ಜನ್ಮ ಜನ್ಮಾಂತರದೊಳೆನಗೆ ರಾ |
ಜೀವನಾಭನ ಭಕ್ತಿ ದೊರೆಕೊಳಲಿದೊಂದು ಮಡಿದಿಹ ಮಂತ್ರಿ ಮಂತ್ರಿಸುತರು ||
ಜೀವಿಸಲಿದೊಂದೀಗಳಿಂತೆರಡು ವರಮಂ ಕೃ |
ಪಾವಲೋಕನದೊಳಿತ್ತಪುದೆಂದು ಮತ್ತೆ ಚರ |
ಣಾವನತನಾಗಲ್ಕೆ ಪಿಡಿದೆತ್ತಿ ಕ್ಷತಮಡಗೆ ಮೈದೊಡವುತಿಂತೆಂದಳು || ೭೯ ||

ಜಗದೊಳಾರಚ್ಯುತ ಪ್ರೀತಿಯಂ ಮಾಡುವರ್ ।
ಮಗನೆ ತನಗಿಷ್ಟರವರಾ ಬಾಲ್ಯದಿಂದೆ ನೀ ।
ನಗಧರಧ್ಯಾನಪರನಾಗಿರ್ಪೆ ನಿನ್ನ ಚರಿತವನೋದಿ ಕೇಳ್ವವರ್ಗೆ ॥
ಮಿಗೆ ವರ್ಧಿಪುದುಮುಕುಂದಾಭಿರತಿ ಮುಂದೆ ಕಲಿ ।
ಯುಗದೊಳೆನ್ನಾಜ್ಞೆಯಿದು ಹರಿಭಕ್ತಿ ನಿನಗೆ ಬೆಳ ।
ವಿಗೆಯಾಗದಿರ್ದಪುದೆ ನಿನ್ನವಾಂಛಿತಕಿನ್ನು ತಡೆಯುಂಟೆ ಹೇಳೆಂದಳು ॥ ೨೦ ॥

ಎಂದು ಕಾರುಣ್ಯದಿಂ ತಾನೊಮ್ಮೆ ಕಣ್ಮುಚ್ಚಿ ।
ನಿಂದು ಜಾನಿಸಲಾಗ ತಲೆದೋರಿ ತಾಕ್ಷಣದೂ ।
ಳೊಂದು ವೈಷ್ಣವಶಕ್ತಿ ಬಳಸಿದಾಯುಧದಿಂದದಂ ಪರಸಿ ಕೊಟ್ಟು ಬಳಿಕ ॥
ಇಂದುಹಾಸನ ಮಸ್ತಕದ ಮೇಲೆ ನಿಜ ಕರವ ।
ನೊಂದಿಸಿ ತದೀಯ ಮಂತ್ರೋಪದೇಶಂಗೈದ ।
ಳಂದು ಕರ್ಣದೊಳಾನತಪ್ರೀತೆ ಗಿರಿಜಾತೆ ವಿಖ್ಯಾತೆ ಲೋಕಮಾತೆ ॥ ೨೧ ॥

ತಾಯೆ ಪಾರ್ವತಿ ಪರಮ ಕಲ್ಯಾಣಿ ಶಂಕರ ।
ಪ್ರಿಯೆ ಸರ್ವೇಶ್ವರಿ ಜಗನ್ಮಾತೆ ಸನ್ನುತ।
ಚ್ಛಾಯೆ ಸಾವಿತ್ರಿ ಶಾರದೆ ಸಕಲ ಶಕ್ತಿರೂಪಿಣಿ ಕಾಳಿ ಕಾತ್ಯಾಯನಿ ॥
ಶ್ರೀಯೆ ವೈಷ್ಣವಿ ವರದೆ ಚಂಡಿ ಚಾಮುಂಡಿ ನಿರ ।
ಪಾಯೆ ನಿಗಮಾಗಮಾರ್ಚಿತೆ ಮಂತ್ರಮಯಿ ಮಹಾ ।
ಮಾಯೆ ರಕ್ಷಿಪುದೆಂದು ಕೈಮುಗಿದು ಚಂದ್ರಹಾಸಂ ಬೇಡಿಕೊಳುತಿರ್ದನು ॥೨೨॥

ಹರಿಯು ವಕ್ಷಸ್ಥಳವನಜನ ವದನಾಬ್ಜಮಂ ।
ಗಿರಿಶನ ಕಳೇಬರಾರ್ಧವನಿಂಬುಗೊಂಡೆಸೆವ ।
ಪರಮ ಕಲ್ಯಾಣಿ ಕಾಲತ್ರಯದುಪಾಸ್ತಿಗಧಿದೇವಿ ಗಾಯಿತ್ರಿ ವರದೆ ॥
ಗರುಡವಾಹನೆ ಹಂಸಗಮನೆ ವೃಷಭಾರೂಢೆ ।
ನಿರುಪಮ ಫಲಪ್ರದಾಯಿನಿ ಪುಣ್ಯಮಯಿ ಸಕಲ ।
ದುರಿತಹರೆ ತನ್ನನುದ್ಧರಿಸೆಂದು ಚಂದ್ರಹಾಸಂ ಬೇಡಿಕೊಳುತಿರ್ದನು ॥ ೨೩ ॥

ಮೊಳಗಿದುವು ದೇವದುಂದುಭಿಗಳಂತಾಗ ಪೂ ।
ಮಳೆಕರೆದುದಭ್ರದೊಳ್ ಕೊಂಡಾಡಿತಮರತತಿ ।
ಬಳಿಕ ಶಾಂಭವಿ ಮಾಯವಾದಳಸುಪಸರಿಸಿತು ಮದನ ಮಂತ್ರಿಗಳೊಡಲೊಳು॥
ಬಲ ರೂಪ ಕಾಂತಿಗಳ್ ಮುನ್ನಿನಂದದೊಳೆಸೆಯೆ ।
ಮಲಗಿದವರೇಳ್ವಂತೆ ಕಣ್ದೆರೆದು ಕುಳ್ಳಿರ್ದ।
ರೊಲವಿನಿಂ ಚಂದ್ರಹಾಸಂ ಪಾವನಡಿಗೆ ಮಣಿದಪ್ಪಿದಂ ಮೈದುನನನು ॥ ೨೪ ॥

ಭೂವಲಯಕಿದು ಪೊಸತು ಮರಣಮಾದೊಡೆ ಮತ್ತೆ ।
ಜೀವಮಂ ಬಸಿದವರುಂಟೆ ನಿನ್ನವೊಲೆಂದು ।
ಕೈವಾರಿಸುವ ನಿಖಿಳಪೌರಜನ ಪರಿಜನಕೆ ಚಂದ್ರಹಾಸಂ ಮುದದೊಳು ॥
ಕಾವರಾರ್ ಕೊಲ್ವರಾರಳಿವರಾರುಳಿವರಾರ್ ।
ಭಾವಿಪೊಡೆ ವಿಷ್ಣು ಮಾಯಾಮಯ ಮಿದೆಂದರಿದು ।
ನೀವೆಲ್ಲರುಂ ಕೃಷ್ಣ ಭಜನೆಗೈದಪುದೆಂದು ಸಾರಿದಂ ಬೇಡಿಕೊಳುತೆ ॥ ೭೫ ॥

ಇಪ್ಮಡಿಸಿತುತ್ಸವಂ ಬಳಿಕನಿಬರೆಲ್ಲರುಂ ।
ಸುಮ್ಮಾನದಿಂದೆ ನಗರ ಪ್ರವೇಶಂಗೈದ ।
ರುಮ್ಮಳಿಸುತಿರ್ದಂ ಕುಳಿಂದಕಂ ಪಾರ್ಥ ಕೇಳಾ ಚಂದನಾವತಿಯೊಳು ॥
ಸಮ್ಮತದೊಳಾತನಂ ಕರೆಸಿಕೊಂಡಾರಾಜ್ಯ ।
ಮಮ್ಮಹಾವಿಭವದಿಂ ವರಿಸಿದಂ ಚಂದ್ರಹಾ ।
ಸಮ್ಮುದಾನ್ವಿತನಾಗಿ ವಿಷಯೆ ಚಂಪಕಮಾಲಿನಿಯರ ಸಂಭೋಗದಿಂದೆ ॥ ೭೬ ॥

ನಂದನಂ ಜನಿಸಿದಂ ಬಳಿಕ ವಿಷಯಾ ಗರ್ಭ ।
ದಿಂದೆ ಮಕರಧ್ವಜಾಖ್ಯಂ ಕೂಡೆ ಸೌಭಾಗ್ಯ ।
ದಿಂದೆ ಚಂಪಕಮಾಲಿನಿಯ ಬಸಿರೊಳುದಿಸಿದಂ ಪದ್ಮಾಕ್ಷನೆಂಬ ಸೂನು ॥
ತಂದೆಗಿಮ್ಮಡಿ ಪರಾಕ್ರಮಿಗಳಾದರ್ ಧರೆಯೊ ।
ಳಿಂದುಹಾಸಂಗೆ ಸಮನಾದ ದೊರೆಯಿಲ್ಲಾದು ।
ದಿಂದುವರೆಗಾತಂಗೆ ಮೂನ್ನೂರು ಬರಿಸಮಿರ್ದಪನೀಗ ವೃದ್ಧನಾಗಿ ॥ ೭೭ ॥

ಬುದ್ಧಿಪೂರ್ವಕಮಿಲ್ಲದಿಹ ಬಾಲಕಂಗೆ ಪರಿ ।
ಶುದ್ಧ ಸಾಲಗ್ರಾಮ ಶಿಲೆಯ ಸಂಸರ್ಗದಿಂ ।
ದುದ್ಧತದ ಸಾಮ್ರಾಜ್ಯ ಪದವಿ ಕೈಸಾರ್ದುದೆನಲಿನ್ನು ಬೇಕೆಂದು ಬಯಸಿ ॥
ಶ್ರದ್ಧೆಯಿಂ ಪ್ರತಿದಿನದೊಳರ್ಚಿಸುವ ನರನಾವ ।
ಸಿದ್ಧಿಯಂ ಪಡೆದಪನೊ ತನಗದರ ಪುಣ್ಯದಭಿ ।
ವೃದ್ಧಿಯಂ ಬಣ್ಣಿಸುವೊಡರಿದೆಂದು ಫಲುಗುಣಂಗಾ ನಾರದಂ ಪೇಳ್ದನು ॥ ೭೮ ॥

ಹರಿಯ ಸಾಲಗ್ರಾಮಶಿಲೆಯ ಮಹಿಮೆಗಳನಾ ।
ದರದಿಂದೆ ವಿಸ್ತರಿಸಿ ಚಂದ್ರಹಾಸನ ಪೂರ್ವ ।
ಚರಿತಮಂ ಪೇಳ್ದು ವಂದನೆಗೊಂಡು ದೇವಮುನಿ ಸರಿದನಂಬರ ಪಥದೊಳು ॥
ವರಭಾಗವತ ಶಿರೋಮಣಿಯ ದರ್ಶನದಿಂದೆ ।
ಪರಮ ವೈಷ್ಣವ ಸಂಗತಿಯನಾಲಿಸಿದೆನೆಂದು ।
ಸುರನಗರದರೆಯ ಲಕ್ಷ್ಮೀಪತಿಯ ಮೈದುನಂ ಪರಿತೋಷಮಂ ತಾಳ್ದನು ॥ ೭೯ ॥

ಮೂವತ್ತೆರಡನೆಯ ಸಂಧಿ

ಸೂಚನೆ ॥ ವರ ಚಂದ್ರಹಾಸನಂ ಪ್ರೀತಿಯಿಂದೊಡಗೊಂಡು।
ಶರಧಿಯ ಮಧ್ಯದೊಳ್ ಬಕದಾಲ್ಭ್ಯನಂ ಕಂಡು।
ಮರಳಿ ಕೃಷ್ಣಾರ್ಜುನರ್ ಸಿಂಧುದೇಶದ ಮೇಲೆ ಗಜನಗರಿಗೈತಂದರು ॥

ಕೇಳ್ದಿಲಾ ನರನಾಥ ಪಾರ್ಥಂಗೆ ನಾರದಂ ।
ಪೇಳ್ದ ವೃತ್ತಾಂತಮಂ ಬಳಿಕ ಸಂತೋಷಮಂ ।
ತಾಳ್ದು ಕುಂತೀಸುತಂ ಚಂದ್ರಹಾಸ ಪುರಾಭಿಮುಖಮಾಗಿ ನಡೆಯುತಿರಲು ॥
ಆಳ್ದೇರಿ ತಮತಮಗೆ ಭೂಪಾಲರೈದೆ ಕೆಂ ।
ದೂಳ್ದೇವಲೋಕಮಂ ಕಿತ್ತೆತ್ತಿಕೊಂಡೊಯ್ದು ।
ದಾಳ್ದಿದಿನ್ನೇನಂಬುಧಿಯೊಳವನಿತಳಮೆಂಬ ತೆರನಾಗಿ ಪದಹತಿಯೊಳು ॥ ೧ ॥

ಬರುತಿರ್ದುದರ್ಜುನನ ಸೈನಿಕಂ ಕುಂತಳ ನ ।
ಗರಿಗಾಗಿ ಜನಮೇಜಯಕ್ಷಿತಿಪ ಕೇಳಿತ್ತ ।
ನರನ ವಾಜಿಗಳೂರ ಪೊರವಳಯಮುಪವನದ ನಡುವೆ ತಮ್ಮಿಚ್ಛೆಯಿಂದೆ ॥
ತಿರುಗುತಿರೆ ಕಂಡವರ್ ಕೌತುಕಮಿದೆಂದು ಬಂ ।
ದೊರೆಯೆ ಪದ್ಮಾಕ್ಷಮಕರಧ್ವಜರ್ ಪಿಡಿದವರ ।
ಶಿರದ ಪಟ್ಟದ ಲಿಪಿಯನೋದಿ ವಿಸ್ಮಿತರಾಗಿ ತಂದೆಗೊಪ್ಪಿಸಿ ನುಡಿದರು ॥ ೨ ॥

ಜೀಯ ಬಿನ್ನಪವನವಧರಿಸಿಳೆಯಮೇಲೆ ಕೌಂ ॥
ತೇಯನ ಮಹಾಧ್ವರದ ವಾಜಿಗಳ್ ತಿರುಗಿ ತರು ।
ವಾಯೊಳಿಲ್ಲಿಗೆ ಬಂದೊಡಾವು ಕಟ್ಟಿದೆವಿನ್ನು ಬಿಡಿಸಿಕೊಂಬತಿಬಲರನು ॥
ಸಾಯಕದ ಮೊನೆಯೊಳೈಸಲೆ ಕಾಣಬೇಕೆನಲ್ ।
ಪ್ರೀಯದಿಂ ತನಯರಂ ತೆಗೆದಪ್ಪಿ ತಾನಭಿ ।
ಪ್ರಾಯಮಂ ತಿಳಿದು ಹರ್ಷಿತನಾಗಿ ಚಂದ್ರಹಾಸಂ ನಯದೊಳಿಂತೆಂದನು ॥ ೩ ॥

ಮಕ್ಕಳಿರ ಕೇಳಿ ತಾನಾಬಾಲ್ಯದಿಂದೆ ಬಿಡ ।
ದಕ್ಕರಿಂ ಚಿತ್ತದೊಳ್ ಧ್ಯಾನಿಸುವ ದೇವ ನಿನಿ ।
ತಕ್ಕೆ ಮೈದೋರುವಂ ಪಾರ್ಥನ ಸಹಾಯಕ್ಕೈತಂದು ನಮಗರಿವೆನಿದನು ॥
ಸಿಕ್ಕಿದೊಡೆ ಕೃಷ್ಣದರ್ಶನದ ಪುಣ್ಯವೆ ಸಾಕು ।
ಮಿಕ್ಕಸುಕೃತದ ಗಸಣಿಯೇಕಿನ್ನು ಧರ್ಮಾರ್ಥ್ವ ।
ರಕ್ಕೆ ತಿರುಗುವ ಕುದುರೆಗಳನಿಲ್ಲಿ ಕಟ್ಟಿದೊಡೆ ಪುರುಷಾರ್ಥಮೇನೆಂದನು ॥ ೪ ॥

ಧರಣಿಯೊಳ್ ಪ್ರತ್ಯಕ್ಷಧರ್ಮದಾಕೃತಿ ಯುಧಿ ।
ಷ್ಠಿರಭೂಪನಾತನ ಹಯಂಗಳಂ ತಡೆದಪರೆ ।
ಪಿರಿವಾಯಸದೊಳವರ್ ಪಾಲಿಸಿದರಿನ್ನೆಗಂ ದಶಮಾಸದಿಂದೆ ಮೇಲೆ ॥
ಅರೆದಿಂಗಳಾದುದಿನ್ನಿಹುದು ಪಕ್ಷತ್ರಯಂ ।
ಬರಿಸಕಲ್ಲಿಂದ ಮುಂದಿಲ್ಲ ಸಿಕ್ಕಿದರೊಡ ।
ಧ್ವರಮಳಿವುದದರಿಂದ ನೀವೆ ರಕ್ಷಿಸಿ ಪಾಂಡವಂಗೆ ಕೊಟ್ಟುಪುದೆಂದನು ॥ ೫ ॥

ತನ್ನ ಹೇಳಿಕೆಯೊಳಲ್ಲದೆ ಕೃಷ್ಣಫಲ್ಗುಣ ।
ರ್ಗಿನ್ನು ಸಿಕ್ಕಿದ ಹರಿಗಳಂ ಬಿಡದೆ ಭೂಮಿಯೊಳ್ ।
ಸನ್ನದ್ಧರಾಗಿ ಪಾಲಿಸಿ ನೀವು ಯಜ್ಞಕಾಲಕೆ ಧರ್ಮಜಂಗೆ ಕುಡಲು ॥
ಉನ್ನತದ ಸುಕೃತಮಾದಪುದು ನಮಗೆಂದು ಸಂ ।
ಪನ್ನಮತಿ ಚಂದ್ರಹಾಸಂ ನಿಜ ಕುಮಾರರಂ ।
ಮನ್ನಿಸಿ ತುರಂಗ ರಕ್ಷೆಗೆ ಕಳುಹಿ ಬಲಸಹಿತ ಪೊಳಲ ಪೊರಗಿರುತಿರ್ದನು ॥ ೬ ॥

ತುರಗಂಗಳಂ ಬಿಟ್ಟದರ ಕೂಡೆ ಸೇನೆಸಹಿ ।
ತಿರದೆ ಪದ್ಮಾಕ್ಷ ಮಕರಧ್ವಜರ್ ಪೋದ ಬಳಿ ।
ಕರವಿಂದನಾಭದರ್ಶನಕೆ ಲೋಲುಪನಾಗಿ ಚಂದ್ರಹಾಸಂ ಮುದದೊಳು ॥
ಪುರದ ಹೊರವಳೆಯದೊಳ್ ಸೇನೆಯಂ ಕೂಡಿಕೊಂ ।
ಡಿರುತಿರ್ದನನ್ನೆಗಂ ಮೇರೆದಪ್ಪಿದ ಮಹಾ ।
ಶರಧಿಯಂತರ್ಜುನನ ಮೋಹರಂ ತಲೆದೋರಿತೆತ್ತಣಾಶ್ಚರ್ಯಮೆನಲು ॥ ೭ ॥

ಸಮತಳಿಸಿ ಫಲುಗುಣನ ಸೇನೆ ಬಹುದಂ ಕಂಡು ।
ಸಮರಕಭಿಮುಖನಾಗಿ ತನ್ನ ಮೋಹರಸಹಿತ ।
ಸಮಚಂದ್ರಹಾಸನೈತರಲಾಗ ಮುರಹರಂ ಸಕಲ ಭೂಪಾಲಕರನು ॥
ಕ್ರಮದಿಂದೆ ನಿಲ್ಲಿಸಿ ಪಾರ್ಥಂಗೆ ಸಾರಥಿಯಾಗಿ ।
ಕಮಲ ಸುಗದಾ ಶಂಖ ಚಕ್ರದ ಚತುರ್ಭುಜದ ।
ಕಮನೀಯ ರೂಪಮಂ ಕೈಕೊಂಡು ಬಿಟ್ಟನಾತನ ಸಮ್ಮುಖಕೆ ರಥವನು ॥ ೮ ॥

ನೋಡಿದೈ ಪಾರ್ಥ ವೈಷ್ಣವ ಶಿರೋಮಣಿಯನೆನೆ ।
ಮೂಡಿಮುಳುಗುವ ಮಾಧವ ಧ್ಯಾನಚೇತನದ ।
ಸೂಡಿದ ಮುಕುಂದಪಾದಾಬ್ಜ ತುಲಸೀಪೂತಮಸ್ತಕದ ಸತ್ತ್ವಗುಣದ ॥
ಬೀಡೆನಿಪ ಕಲಿ ಚಂದ್ರಹಾಸನಂ ಕಂಡು ತಾ ।
ಮಾಡಿದಗ್ಗದಪುಣ್ಯದಿಂ ಜನ್ಮಸಫಲವಾ ।
ಯ್ತಾಡಲೇನೆಲೆದೇವ ತನ್ನ ಬಿನ್ನಪವನವಧರಿಸೆಂದನಿಂದ್ರಸೂನು ॥ ೯ ॥

ಜ್ಞಾನವೃದ್ಧಂ ತಪೋವೃದ್ಧಂ ವಯೋವೃದ್ಧ ।
ನೀನರೇಶ್ವರನೀತನೊಳ್ ಕಾದಿ ಜಯಿಸುವ ವಿ ।
ಧಾನವೆಂತೆನಗೆ ಬೆಸಸೆಂದರ್ಜುನಂ ಕೇಳ್ದೊಡಸುರಾರಿ ಕರುಣದಿಂದೆ ॥
ಧ್ಯಾನಿಸುವನಾ ಬಾಲ್ಯದಿಂದೆನ್ನನೀತಂಗೆ ।
ತಾನೊಲಿದೆನೆಂದು ನಿಜರೂಪಮಂ ತೋರಲಾ ।
ಭೂನಾಥನಂಬುಜಾಕ್ಷನ ದಿವ್ಯಮೂರ್ತಿಯಂ ಕಂಡು ಪುಳಕಿತನಾದನು ॥ ೧೦ ॥

ಕಂಬು ಚಕ್ರಾಬ್ಜ ಕೌಮೋದಕಿಗಳಂ ಧರಿಸಿ ।
ಪೊಂಬಟ್ಟೆಯಂ ತಾಳ್ದು ಕೌಸ್ತುಭದ ಶೋಭಾವ ।
ಲಂಬದಿಂ ಸರ್ವಾಭರಣ ವಿಭೂಷಿತನಾಗಿ ದಿವ್ಯಮಾಲೆಗಳನಾಂತು ॥
ತುಂಬಿದವಯವದ ಲಾವಣ್ಯಲಹರಿಗಳ ವಿಸ ।
ಟಂಬರಿವ ಕರುಣರಸವೆಳನಗೆಯ ಸಿರಿಮೊಗದ ।
ಶಂಬರಾರಿಯ ಪಿತಂ ಪಾರ್ಥನ ರಥಾಗ್ರದೊಳ್ ಕಣ್ಗೆಸೆದನಾ ನೃಪತಿಯ ॥೧೧॥

ಕಂಗಳ ನಿರೀಕ್ಷಣದ ಸೌಖ್ಯಮಂ ಸೂಸುವುದ ।
ಕಂಗಳ ಪೊನಲ್ತಿಟೆಯ ಹರ್ಷದಿಂದೇಳ್ವ ಪುಳ ।
ಕಂಗಳ ನೆಗಳ್ಕೆಯಂ ಭಯಭರಿತಭಕ್ತಿ ಭಾವಿಸೆ ರಥವನಿಳಿದು ಬಂದು ॥
ಮಂಗಳ ಪವಿತ್ರ ಕೋಮಲ ಪಾದಪದ್ಮಯು ।
ಗ್ಮಂಗಳ ಸಮೀಪದೊಳ್ ಚಂದ್ರಹಾಸಂ ಪ್ರಣಾ ।
ಮಂಗಳ ವಿಧಾನಮಂ ಮಾಡುತಿರೆ ಹರಿ ತೆಗೆದು ಬಿಗಿದಪ್ಪಿದಂ ಕೃಪೆಯೊಳು ॥೧೨॥

ಅಸುರಾರಿ ಬಳಿಕರ್ಜುನನ ವದನಮಂ ನೋಡಿ ।
ನಸುನಗುತ ನುಡಿದನೀತಕೆ ಸಮ್ಮನಿಹೆ ಧರ್ಮಿ ।
ಶಶಿಹಾಸನತಿಬಲಂ ಪರಿಣತಂ ಧ್ರುವಸನ್ನಿಭಂ ತನಗೆ ಭಕ್ತನಿವನು ॥
ಒಸೆದು ನೀನಾಲಂಗಿಸೆನೆ ದೇವ ನಿಮ್ಮಡಿಗ ।
ಳುಸಿರಿದುವಲಾ ತನ್ನ ಮಾರ್ಗಗತಿ ಲೇಸನ್ಯ ।
ರೆಸಗುವಂದದೊಳಾಚರಿಸೆ ಭಯಾವಹಮೆಂದು ಭೀಷ್ಮಸಂಗರದೊಳೆನಗೆ ॥ ೧೩ ॥

ಅದರಿಂದೆ ಕಾಳೆಗವೆ ತನಗೆ ಕರ್ತವ್ಯಮಿ ।
ವದದೊಳಾಲಿಂಗನಮುಚಿತಮಲ್ಲ ವೃದ್ಧನಹ ।
ನದರಿಂದೆ ಬೇಕಾದೊಡೀತಂಗೆ ವಂದಿಸುವೆನೆನೆ ತನ್ನ ಕಿಂಕರರ್ಗೆ ॥
ಮುವದೊಳೆರಗಿದೊಡೆ ಮೇಣವರನಪ್ಪಿದೊಡೆ ತ ।
ಪ್ಪದು ಮಾನವರ್ಗೆ ಕಾಪಿಲ ಗೋ ಸಹಸ್ರ ದಾ ।
ನದ ಪುಣ್ಯಮೆನ್ನ ಭಕ್ತರನಾದರಿಪುದಧರ್ಮವೆ ಪಾರ್ಥ ಹೇಳೆಂದನು ॥ ೧೪ ॥

ತನ್ನ ಶರಣರ ಜೀವನವೆ ತನಗೆ ಜೀವನಂ ।
ತನ್ನ ಶರಣರ್ ಬೇರೆ ತಿಳಿಯೆ ತಾಂ ಬೇರಲ್ಲ ।
ತನ್ನ ಶರಣರ ಹೃದಯಕಮಲದೊಳ್ ಪ್ರತ್ಯಕ್ಷಮಾಗಿ ತಾನಿರುತಿರ್ಪನು ॥
ನಿನ್ನ ತೆರದಿಂ ಮರುಳರಾರುಂಟು ಲೋಕದೊಳ್ ।
ನಿನ್ನ ತೆರದಿಂದೀತನೆನಗೆ ಬೇಕಾದವಂ ।
ನಿನ್ನ ತೆರನೇನೆಂದು ಜರೆದು ಕೌಂತೇಯನಂ ಕೇಳ್ದನಸುರಾರಿ ನಗುತೆ ॥೧೫॥

ಭೂಪಾಲ ಕೇಳ್ ಬಳಿಕ ಫಲುಗುಣಂ ಕೃಷ್ಣನ ನಿ ।
ರೂಪಮಂ ಕೈಕೊಂಡು ಹರ್ಷದಿಂದಾಗ ನಿ ।
ಷ್ಪಾಪನಾಗಿಹ ಚಂದ್ರಹಾಸನಂ ಬಂದು ಗಾಢಾಲಿಂಗನಂಗೈಯಲು ॥
ಆ ಪೊಡವಿಪತಿ ನುಡಿದನೆಲೆ ಪಾರ್ಥ ಕದನ ದಾ ।
ಳಾಪಮಂ ನಿನ್ನೊಡನೆ ಮಾಡಿದೊಡೆ ನೃಪಮಖಂ ।
ಲೋಪಮಹುದೆಂದು ಕಳುಹಿದೆನೆನ್ನ ತನುಜರಂ ತುರುಗ ರಕ್ಷಾರ್ಥಮಾಗಿ ॥ ೧೬॥

ಹಲವು ಮಾತುಗಳೇಕೆ ನಮಗೆ ನಿಮಗಾಶ್ರಯಂ ।
ಜಲಜಾಕ್ಷನಾಗಿರ್ದ ಬಳಿಕಾವಧರ್ಮಕಾ ।
ಶಲಮಕಟ ಸಾಕಿನ್ನು ಪಾರ್ಥ ನಿನ್ನಶ್ವಂಗಳಂ ತರಿಸಿ ಕುಡುವೆವೆನುತೆ ॥
ಬಲಸಹಿತ ಕುದುರೆಕಾವಲ್ಗೆ ಪೋಗಿಹ ಸುತರ ॥
ಬಳಿಗೆ ಚರರಂ ಕಳುಹಿ ಕರೆಸಲವರೈತಂದು ।
ಫಲುಗುಣನ ವಾಜಿಗಳನೊಪ್ಪಿಸಿ ಮುರಾರಿಯಂ ಕಂಡರತಿಭಕ್ತಿಯಿಂದೆ ॥ ೧೭ ॥

ನರನೊಡನೆ ಸಖ್ಯಮಾದುದು ಬಳಿಕ ಬಂದ ನೃಪ ।
ವರರೆಲ್ಲರಂ ಪ್ರಿಯದೊಳಾದರಿಸಿದಂ ಕೂಡೆ ।
ಹರಿಯನತಿಭಕ್ತಿಯಿಂದೈದೆ ಕೊಂಡಾಡಿದಂ ನಿರುಪಮ ಸ್ತುತಿಗಳಿಂದೆ ।
ಪರಿಪರಿಯ ಗುಡಿ ತೋರಣಾವಳಿಯ ರಚನೆ ಮಿಗೆ ।
ಪುರಕೆ ಬಿಜಯಂಗೈಸಿ ತಂದನುತ್ಸವದಿಂದೆ ।
ಸಿರಿಯನುರೆ ವಿಸ್ತರಿಸಿ ಭೂಪುರಂದರನಂತೆ ಚಂದ್ರಹಾಸಂ ಮೆರೆದನು ॥ ೧೮ ॥

ಇಂದುಹಾಸಾಶ್ರಯದೊಳಿರ್ದಖಿಲ ಪುರಜನಂ ।
ಕಂದರ್ಪ ತಾತನಂ ಕಂಡು ಕೃತಕೃತ್ಯಮಾ ।
ಯ್ತಿಂದಿರಾ ವಲ್ಲಭನ ಸಂದರ್ಶನಕೆ ದುಷ್ಟಬುದ್ಧಿ ನಿಜ ಸೂನುಸಹಿತ॥
ಬಂದು ನಿರ್ಧೂತ ಕಿಲ್ಬಿಷನಾದನಾಗಳೈ ।
ತಂದು ಗಾಲವನಸುರಮರ್ದನನ ಪಾದಾರ ।
ವಿಂದಮಂ ವಿವಿಧಾಗಮೋಕ್ತದಿಂ ಪೂಜಿಸಿದನತಿ ಭಕ್ತಿಭಾವದಿಂದೆ ॥ ೧೯ ॥

ಪ್ರೀತಿಯಿಂ ಚಂದ್ರಹಾಸಂ ತನ್ನ ರಾಜ್ಯಮಂ ।
ಪೀತಾಂಬರನ ಚರಣ ಸರಸಿರುಹಕರ್ಪಿಸಿದ ।
ನಾತಂ ಧನಂಜಯನ ಸಮ್ಮತದೊಳೊಸೆದು ವಿಷಯಾ ಕುಮಾರಂಗೆ ಕೊಟ್ಟು ॥
ಖ್ಯಾತಮಾದಕಿಳ ವಸ್ತುಗಳೊಡನೆ ಗಜಪುರಕೆ ।
ದೂತರಂ ಕಳುಹಿ ಸತ್ಕೃತನಾಗಿ ಭೂಪತಿ ।
ವ್ರಾತ ಸಹಿತಲ್ಲಿ ಮೂರಿರುಳಿರ್ದು ಪೊರಮಟ್ಟನೈದೆ ಕುದುರೆಗಳ ಕೂಡೆ ॥೨೦॥

ಮುಪ್ಪಾದೆನೆಲೆಮಗನೆ ಕೃಷ್ಣದರ್ಶನದಿಂದೆ ।
ತಪ್ಪದೆನಗಿನ್ನು ಮೋಕ್ಷದ ಲಾಭಮಸುರಾರಿ ।
ಗೊಪ್ಪಿಸುವೆ ನೀತನುವನಿವರಧ್ವರಂ ಮುಗಿದ ಬಳಿಕ ವನಕಾಂ ಪೋಪೆನು ॥
ಬಪ್ಪುದಿಲ್ಲದರಿಂದೆ ನಗರಕರಸಾಗಿ ಸುಖ ।
ಮಿಪ್ಪುದೆಂದಿರಿಸಿ ನಿಜ ತನಯರಂ ಶರಧಿಗೆಣೆ ।
ಯಪ್ಪ ವಾಹಿನಿಯೊಡನೆ ಪೊರಮಟ್ಟನಾ ಚಂದ್ರಹಾಸನರ್ಜುನನ ಕೂಡೆ ॥ ೨೧ ॥

ಪುತ್ರಸಂಪದಮಾಯುರಾರೋಗ್ಯ ಮರಿವು ಶತ ।
ಪತ್ರನಾಭನ ಭಕ್ತಿ ದೃಢವಾಗಲೀತನ ಚ ।
ರಿತ್ರಮಂ ಕೇಳ್ದವರ್ಗೆಂದು ಹರಿ ವರವನಿತ್ತಾತನಂ ಕೂಡಿಕೊಂಡು ॥
ಸುತ್ರಾಮ ಸುತನ ಕುದುರೆಗಳೊಡನೆ ಶರಲ್ದಂ ।
ಧರಿತ್ರಿಯೊಳ್ ದೇಶದೇಶದೊಳಿರ್ದ ಭುಜಬಲ ।
ಕ್ಷತ್ರಿಯೋತ್ತಮರಂಜಿ ತುರಗಂಗಳಂ ತಡೆಯದಭಿನಮಿಸಿ ಬಿಡುತಿರ್ದರು ॥ ೨೨ ॥

ರಾಯ ಕೇಳಾಶ್ಚರ್ಯಮಂ ಬಳಿಕ ವಾಜಿಗಳ್ ।
ವಾಯುವೇಗದೊಳೈದಿ ಬಡಗಣ ಪಯೋನಿಧಿಯ ।
ತೋಯಮಂ ಪೊಕ್ಕು ನಡೆದುವು ಕೂಡೆ ಸಾಗರದ ವಾರಿಯೊಳ್ ಕಾಲಡುವೊಡೆ ॥
ದಾಯಮಂ ಕಾಣದೆ ಧನಂಜಯಾದಿಗಳದಕು ।
ಪಾಯಮಿನ್ನೇನೆಂದು ಬೆಸಗೊಂಡೊಡಂಬುಜ ದ ।
ಳಾಯತಾಕ್ಷಂ ಪೇಳ್ದನಿಂತೆಂದು ನೆರೆದಿರ್ದ ಸಕಲ ಭೂಪಾಲಕರ್ಗೆ ॥ ೨೩ ॥

ಶುಭ್ರವಾಹನ ಮಯೂರಧ್ವಜ ಪ್ರದ್ಯುಮ್ನ ।
ಬಭ್ರುವಾಹನ ಹಂಸಕೇತು ನೃಪರಿವರ್ಗೈವ ।
ರಭ್ರವಾಹನನಂತೆ ಸರ್ವತ್ರ ಗಮನದ ವರೂಥದ ಮಹಾವೀರರು ॥
ವಿಭ್ರಾಜಿಸುವ ಸಮುದ್ರದ ಮೇಲೆ ನಡೆವ ಸುಗ ।
ತಿ ಭ್ರಷ್ಟರಲ್ಲೆಂದು ರುಕ್ಮಿಣೀಮುಖಪಂಕ ।
ಜ ಭ್ರಮರನಾಪಂಚರಥಿಕರಂ ಕೂಡಿಕೊಂಡಂಬುನಿಧಿಯಂ ಪೊಕ್ಕನು ॥ ೨೪ ॥

ಸಾಗರದ ನಡುವೆ ಕುರ್ವಕೆ ವರ ಹಯಂಗಳತಿ ।
ವೇಗದಿಂದೈದಲದರೊಡನೆ ಪಾರ್ಥಾದಿಗಳ್ ।
ಪೋಗಿ ಒಕದಾಲ್ಬ್ಯರುಷಿಯಂ ಕಂಡರಲ್ಲಿ ಕಣ್ಣೆವೆಗಳಂ ಮುಚ್ಚಿಕೊಂಡು ॥
ಯೋಗದಿಂದಿರುತಿರ್ದನಧ್ರುವದ ಕಾಯವಂ ।
ಸಾಗಿಸಲದೇಕೆಂದು ಕೊಳೆತೊಣಗಿ ಛಿದ್ರಂಗ ।
ಳಾದ ಸೆಲದಿಗಳಿಕ್ಕಿದಾಲದೆಲೆಯಂ ತನ್ನತಲೆಮರೆಗೆ ಕುಯ್ಯೊಳ್ಕಂತು ॥ ೨೫ ॥

ಸ್ಯಂದನಂಗಳನಿಳಿದು ವಿನಯದಿಂದೆಚ್ಚರಿಸಿ ।
ವಂದಿಸಿದೊಡರ್ಜುನಾದಿಗಳನಾ ಮುನಿವರಂ ।
ಕಂದೆರೆದು ಕಂಡು ಪುರುಷೋತ್ತಮಂ ಕ್ಷಣಿಕರಿವರ್ಕೈವರಂ ಕೂಡಿಕೊಂಡು ॥
ಬಂದಸೀ ಮಂಡಲದೊಳಿರಪಿಲ್ಲ ತನಗಿನ್ನು ।
ಮುಂದೆ ಸುಖಮಾಗದಲ್ಪಾಯುಷದೊಳೇಗೈವೆ ।
ನೆಂದು ಬಕದಾಲ್ಭ್ಯಋಷಿ ನುಡಿಯೆ ವಿಸ್ಮಿತನಾಗಿ ಫಲುಗುಣಂ ಬೆಸಗೊಂಡನು
॥ ೨೬ ॥

ಮೊಳಕಾಲ್ಗಳೆಡೆಯೊಳುದ್ಭವಿಸಿರ್ದ ಕಿಂಶುಕಂ।
ಗಳ ಮೇಲೆ ಗೂಡಿಕ್ಕಿ ಬಾಳ್ದಪುವು ಪಕ್ಷಿಗಳ ।
ಬಳಗಂಗಳೊರಸಿಕೊಂಬುವು ತೀಟೆಗಳನಂಗದೊಳ್ ಬಂದು ಮೃಗತತಿಗಳು ॥
ಬಳೆದಿಹವು ಸುತ್ತಲುಂ ಪುತ್ತುಗಳ್ ನಿಮ್ಮತೋ ।
ಳ್ಗಳ ಬಳಿಯೊಳಾಡುವುವು ಸರ್ಪಂಗಳಿರಲೊಂದು ।
ನಿಳಯಮಂ ಮಾಡದೇತಕೆ ಕಯ್ಯೊಳೀಪತ್ರವೆಂದು ಪಾರ್ಥಂ ಕೇಳ್ದನು ॥ ೨೭ ॥

ಮುನಿ ಕಿರೀಟಿಯು ನುಡಿಗೆ ನಸುನಗುತೆ ದುಃಖ ಭಾ ।
ಜನವಲಾ ಸ್ತ್ರೀಪರಿಗ್ರಹಮದಂ ಪೋಷಿಸುವ ।
ಮನುಜವರ್ಣಿಸುವನೆ ಕೃತ್ಯಾಕೃತ್ಯಮಂ ಬಳಿಕ ಮೋಕ್ಷಮೆತ್ತಣದವಂಗೆ ॥
ಕನಸಿನ ಸುಖಕ್ಕೆಳಸಿ ಬಿದ್ದಪನಧೋಗತಿಗೆ ।
ಜನನ ಮರಣಂಗಳ ಬಳಲ್ಕೆ ಬೆಂಬಿಡದಿಹುದು ।
ವನಿತೆಯರ ತೊಡಕಿಂದೆ ಕೆಡುತಿಹುದು ಲೋಕಮದನೇವರ್ಣಿಸುವೆನೆಂದನು ॥ ೨೮ ॥

ಮಡದಿ ಮಗ ಮೊಮ್ಮಂದಿರಂ ಸಾಗಿಸುವೆನೆಂತೊ ।
ಪೊಡವಿ ಬೆಳಸಾಳ್ಕೆ ಸಿರಿ ಕೀರ್ತಾರಮನೆಗಳಿಸಿ ।
ದೊಡವೆಗಳ ನಾರ್ಕೈವೆನೆಂತೊ ವೇದಾದಿ ಶಾಸ್ತ್ರಂಗಳಂ ಪಠನದಿಂದೆ ॥
ಕಡೆಗಾಣಿಸುವೆನೆಂತೊ ತಾನೆಂದು ಬಾಳುವಂಗೆ ।
ಬಿಡದೆ ಚಿಂತಿಸಿ ತಾಪಕೀಳಗಾಗಿ ಧರ್ಮದೊಳ್ ।
ನಡೆಯುದಾಶಾಪಾಶದಿಂದೆ ಸಂಸಾರದೊಳ್ ಕೆಡುತಿಹುದು ಜಗವೆಂದನು ॥ ೨೯ ॥

ಅಂತಾಗಿ ದಾರಸಂಗ್ರಹ ಪರ್ಣಶಾಲೆಗಳ ।
ನಿಂತೊಲ್ಲದಚಿರ ಕಾಲದೊಳಳಿವ ಕಾಯಮಿದ ।
ಕೆಂತಿರ್ದೊಡೇನೆಂದು ತಲೆಗೆ ತರಗೆಲೆವಿಡಿದು ತಾಂ ಪೊತ್ತುಗಳೆವೆನೆನಲು ॥
ಕುಂತೀಸುತಂ ಮತ್ತೆ ಕೇಳ್ದನಲ್ಪಾಯುಷ್ಯ ।
ಮಂ ತಳೆವುದೀಮಹಾತ್ಮರಿಗೇಕೆ ಶಿವಶಿವಾ ॥
ಪಿಂತೇ ಸುದಿನಮಾದುದೆಂದಿನಿಂದೀಪತ್ರವಿಹುದು ಮಸ್ತಕದೊಳೆಂದು ॥ ೩೦ ॥

ಅತ್ಯಲ್ಪರಾಗಿ ಮಾರ್ಕಂಡೇಯ ರೋಮಶರ್ ।
ಪ್ರತ್ಯೇಕರಳಿದರಿವರೆನಿಬರೆಂದರಿಯೆ ನಾಂ ।
ಸತ್ಯಲೋಕವನಾಳ್ದರಿಪ್ಪತ್ತು ಕಮಲಸಂಭವರಿನಿತರೊಳ್ ಮಡಿದರು ॥
ಕ್ಷಿತ್ಯಾದಿಗಳ್ ಜಲಮಯಂಗಳಪ್ಪಂದಾಧಿ ।
ಪತ್ಯದ ಚತುರ್ವದನರವಸಾನವಾದಂದು ।
ನಿತ್ಯಮಾಗಿರವು ಪದವಿಗಳೆಂದು ತಾನಿಲ್ಲಿ ಬಯಲೊಳಿದ್ದಪೆನೆಂದನು ॥೩೧॥

ಬಾರಿಬಾರಿಗೆ ಜಲಪ್ರಳಯಂಗಳಾಗಲ್ಕೆ ।
ಭೂರಿಶಾಖೆಗಳಿಂದೆ ತಳಿತಸೆವುದೊಂದುವಟ ।
ಭೂರುಹವದರದೊಂದೆಲೆಯಮೇಲೆ ತನ್ನ ಮೃದು ಪದಕಮಲದುಂಗುಟವನು ॥
ಚಾರುತರ ಕರ ತಾಮರಸದಿಂದೆ ಪಿಡಿದು ವದ ।
ನಾರವಿಂದದೊಳಿಟ್ಟು ನಗುತಳುತೆ ಲೀಲೆಯಿಂ ॥
ದೋರಂತೆ ಮಲಗಿಕೊಂಡಿಹನೋರ್ವಬಾಲಕಂ ತಾನಶತನಂ ಕಂಡೆನು ॥ ೩೨ ॥

ಅಂದು ಸಲಿಲದೊಳಾಳ್ದತನಗಾಲದೆಲೆಯಮೇ ।
ಲೊಂದೊಂದುಬಾರಿ ಬಾಲಕನಾಗಿ ಮೈದೋರಿ ।
ನಿಂದು ಮಾತಾಡಿಸದೆ ನೋಡದೆ ವಿಚಾರಿಸದೆ ದೂರದೂರದೊಳಿರ್ಪನು ॥
ಇಂದು ನಿಮ್ಮೈವರಂ ಕೂಡಿಕೊಂಡಿಲ್ಲಿಗೈ ।
ತಂದು ಕರುಣಿಸಿದನೀಹರಿ ಕೃಷ್ಣರೂಪದಿಂ ।
ಸಂದುದಿನ್ನೀತನೆ ಸದಾಶ್ರಯಂ ಮರೆವುಗುವೊಡೆನಗೆಂದು ಮುನಿ ನುಡಿದನು ॥ ೩೩ ॥

ಬಕದಾಲ್ಭ್ಯಮುನಿ ಬಳಿಕ ಕೃಷ್ಣನಂ ನೋಡಿ ಬಾ ।
ಲಕನಾದ ರೂಪಮಂ ವಟಪತ್ರಶಯನದೊಳ್ ।
ಸಕಲ ಜಗಮಳಿವಂದು ತನಗೆ ಕಾಣಿಸಿದೆಯಲ್ಲದೆ ರಮಾರಮಣನಾಗಿ ॥
ಪ್ರಕಟಿತದ ಧರ್ಮ ಸಂತತಿಗಳಂ ಪಾಲಿಸುವ ।
ಸುಕುಮಾರ ಮೂರ್ತಿಯಂ ಕೃಪೆಯಿಂದೆ ನಿನ್ನ ಸೇ ।
ವಕ ಜನಕೆ ತೋರುವಂತೆನಗೆ ತೋರಿದುದಿಲ್ಲ ತಾನಿನ್ನು ಬಿಡೆನೆಂದನು ॥ ೩೪ ॥

ಜನಪ ಕೇಳಿಂತೆಂದು ಹರ್ಷದಿಂ ಬಕದಾಲ್ಭ್ಯ ।
ಮುನಿ ಬಂದು ಕೃಷ್ಣನಂ ತಕ್ಕೈಸಿ ಮತ್ತೆ ಪಾ ।
ರ್ಥನ ಕೂಡೆ ಪೇಳ್ದಂ ಸದಾವಾಸಕೀಹರಿಯ ದೇಹವಿದು ಗೇಹಮೆನಗೆ॥
ಅನುಕೂಲೆಯಾದ ಸತಿ ಮುಕ್ತಿಯಲ್ಲದೆ ಬೇರೆ ।
ಮನೆಯಿಲ್ಲ ಮಡದಿಯಿಲ್ಲದಕಾಗಿ ತಾನೀಸು ।
ದಿನಮಿಲ್ಲ ತಲೆಗೆ ತರಗೆಲೆವಿಡಿದುಕೊಂಡಿರ್ದೆನೆನಲರ್ಜುನಂ ನುಡಿದನು ॥೩೫॥

ಇಪ್ಪತ್ತು ಕಮಲಜರ ಬಾಳ್ಕೆಯಂ ಕಂಡ ನಿಮ ।
ಗೊಪ್ಪದೆ ಗುರುತ್ವಂ ಮಹಾಪುರುಷರೀಸುದಿನ ।
ಮಿಪ್ಪುದಚ್ಚರಿಯಲಾ ಶಿವಶಿವಾ ನೀವೆ ನಮ್ಮೆಲ್ಲರ್ಗೆ ಪೂಜ್ಯರೆಂದು॥
ತಪ್ಪನೀಕ್ಷಿಸಲಾಗದರಸನ ಮುಖಂ ಸಫಲ ।
ಮಪ್ಪುದಿನ್ನೆಂದು ನರನಭಿವಂದಿಸಲ್ಕೆ ನಮ ।
ಗಪ್ಪಿಸದಿರೊಂದು ಗರ್ವದ ಭಾವಮಂ ಕೃಷ್ಣನಿರಲೆಂದು ಮುನಿ ನುಡಿದನು ॥೩೬ ॥

ಸರ್ವವೇದದ ಮೂಲನೀ ಕೃಷ್ಣ ನಾವಂಗೆ ।
ಗರ್ವಮಿನ್ನೆಲೆ ಪಾರ್ಥ ಕೇಳಾದೊಡೀ ಕಡಲ ।
ಕುರ್ವದೊಳ್ ಗಾನಿರುತಿರಲ್ಮಹಾ ಕಲ್ಪದೊಳ್ ಪದ್ಮಾಭಿಧಾನದಿಂದೆ ॥
ಉರ್ವನಾಲ್ವತ್ತನೆಯ ವಾರುಷಿಕನಾಗಿಹ ಚ ।
ತುರ್ವದನನಿಲ್ಲಗೆ ಮರಾಳವಾಹನದೊಳ ।
ಕ್ಕರ್ವೆರಸಿ ಬಂದೆನ್ನ ಮುಂದೆ ನಿಂದಾಗಳಧ್ಯಕ್ಷತೆಯೊಳಿಂತೆಂದನು ॥ ೩೭ ॥

ಎಲೆವಿಪ್ರ ನೀನಾರದೇತಕೀ ಪರ್ಣಮಂ ।
ತಲೆಗೆ ಪಿಡಿದಿಹೆ ಘೋರತಪಮೇಕದಂ ಬಯಕೆ ।
ಸಲೆ ಮೆಚ್ಚಿ ಬಂದೆನಾ ಕಮಲಜನುಸಿರ್ದೊಡಿತ್ತಪೆನೀಗ ವರವನೆನಲು ॥
ತೊಲಗತ್ತ ಸಾರ್ ನಿನ್ನತೆರದ ನಾಲ್ಮೊಗದರಂ ।
ಪಲಬರಂ ಕಂಡರಿವೆನೆನಗೀವುದಂ ಮತ್ತೆ ।
ಕೆಲಬರ್ಗೆ ಕೊಟ್ಟು ಕಳೆ ಪೋಗೆಂದು ನಾನೆಂದೆನಾ ಪದ್ಮಸಂಭವನೊಳು ॥ ೩೮ ॥

ಆನೆಂದುದಂ ಕೇಳ್ದು ಗರ್ವದಿಂದಾ ಪದ್ಮ ।
ಸೂನು ತೋರಿಸು ತನ್ನ ತೆರದ ನಾಲ್ಮೊಗದರಂ ।
ನೀನೆಂದು ಪೇಳ್ವನ್ನೆಗಂ ಬಂದುದೊಂದು ಸುಳಿಗಾಳಿ ಧರೆ ನಡುಗುವಂತೆ ॥
ನಾನಾದ್ರುಮಂಗಳಂ ಕಿತ್ತೆತ್ತಿ ಮಿಗೆ ಮಿರ್ದುರ್ದು ।
ಬಾನೆಡೆಗೆ ನಮ್ಮಿರ್ವರಂ ಕೊಂಡಡರ್ದುದದ ।
ನೇನೆಂಬೆನದ್ಭುತವನೆಲೆ ಪಾರ್ಥ ತೊಳಲಿಸಿತಜಾಂಡ ಶತಕೋಟಿಗಳನು ॥ ೩೯ ॥

ತೀವಿದೌದುಂಬರ ದ್ರುಮದ ಫಲದಂತೆ ರಾ ।
ಜೀವ ನಾಭನ ಮೆಯ್ಯೊಳಡಿದಿಹವಜಾಂಡಂಗ ।
ಳಾ ವಾಯುವಶದಿಂದೆ ತೊಳಲಿದೆವು ಪೊಕ್ಕೆ ವೊಂದರೊಳಷ್ಟಮುಖವಿರಿಂಚಿ ॥
ಜೀವಜಾಲದ ಸೃಷ್ಟಿಗೊಡೆಯನಾಗಿರ್ದವನು ।
ನಾವಿರ್ವರುಂ ಒರಲ್ ಕಂಡು ವಿಸ್ಮಿತನಾಗಿ ।
ನೀವದಾರೆತ್ತಣಿಂದೈದಿದಿರಿ ನಿಮ್ಮ ಪೆಸರೇನೆಂದು ಬೆಸಗೊಂಡನು ॥ ೪೦ ॥

ಚತುರಾಸ್ಯನಾಂ ಸತ್ಯಲೋಕದಿಂ ಬಂದೆನೀ ।
ವ್ರತಿ ಶಿಷ್ಯನೆನಗೆ ಬಕದಾಲ್ಭ್ಯನೆಂಬವನೆಂದು ।
ಶತಪತ್ರಜಂ ಪೇಳ್ದೊಡವಹಾಸಮಂ ಮಾಡುತಷ್ಟವದನದ ವಿರಿಂಚಿ ॥
ಅತಿಗರ್ವಭಾವದಿಂ ನೀನಜಂ ಶಿಷ್ಯನಿವ ।
ನತುಳರ್ಕೈ ಗುರುಶಿಷ್ಯರಿರ್ವರುಂ ನಿಮ್ಮ ಸಂ ।
ಸ್ಕೃತಿಗೆ ಶೌಚದ ಸಲಿಲದೂಳಿಗದ ವಟುಗಳಿಹರೆಮ್ಮೊಳ್ ಕೆಲಬರೆಂದನು ॥ ೪೧ ॥

ಇನಿತು ಗರ್ವದೊಳಷ್ಟವದನದ ವಿರಿಂಚಿ ನುಡಿ ।
ವನಿತರೊಳ್ ಪೊರೆಯೊಳಿಹ ನಾವು ಸಹಿತಾತನಂ ।
ಘನ ರಭಸದಿಂದೆ ಸುಳಿಗಾಳಿ ಕೊಂಡೊಯ್ದುದಾಗಸಕತಿಕಠೋರದಿಂದೆ ॥
ಅನಿಲವಶದೊಳ್ ಪೋಗಿ ಮೂವರುಂ ಮತ್ತೊಂದು ।
ವನಜಭವಲೋಕಮಂ ಕಂಡೆವಲ್ಲಿಯ ಪುಣ್ಯ ।
ಜನರೆಮ್ಮ ನೆತ್ತಣ ವಿಕಾರಿಗಳ್ ನೀವೆಂದು ನಗುತೆ ಕೊಂಡಾಡಿಸಿದರು ॥ ೪೨ ॥

ಅಲ್ಲಿ ಷೋಡಶಮುಖದ ಬೊಮ್ಮನಂ ಕಂಡವನ ।
ಮೆಲ್ಲಡಿಗೆ ನಮಿಸೆ ಗರ್ವದೊಳವಂ ನುಡಿಸದಿರೆ ।
ತಲ್ಲಣಿಸಿ ನಾವಂಜಲವನ ಪೊರೆಯವರೆಮ್ಮ ನಾರೆಂದು ಬೆಸಗೊಳಲ್ಕೆ ॥
ಬಳಿಕೆಡಷ್ಟಾನನ ಚತುರ್ವದನ ಬಕದಾಲ್ಭ್ಯ ।
ರಿಲ್ಲಿಗರಿಯದೆ ಬಂದೆವೆಂದು ನಾವುಸಿರಲ್ಕೆ ।
ಮಲ್ಲಿಗೆಯಲರ್ಗೆದರಿದಂತಟ್ಟಹಾಸದಿಂ ನಗುತಿರ್ದನಾ ವಿರಿಂಚಿ ॥ ೪೩ ॥

ಈ ವಿರಿಂಚಿಗಳನೀಕ್ಷಿಸಿ ತನ್ನ ಮಹಿಮೆಯನ ।
ದೇವಣ್ಣಿಸವೆನೆಂದು ಕೆಲದವರೊಳಾಡುವ ಕ ।
ಲಾವಕ್ತ್ರನಂ ಮತ್ತೆ ಸುಳಿಗಾಳಿ ಕೊಂಡಡರ್ದುದು ನಭಸ್ಥಳಕೆ ಬಳಿಕ ॥
ಮೂವತ್ತೆರಡು ಮೊಗದ ಕಮಲಜನ ಲೋಕಮಂ ।
ನಾವು ತಲೆಕೆಳಕಾಗಿ ನಾಲ್ವರುಂ ಪುಗಲೆಮ್ಮ ।
ನಾ ವಿಧಾತ್ರಂ ಕಂಡು ಕರುಣದಿಂ ಕೇಳ್ದೊಡಾವಿನಿತೆಲ್ಲಮಂ ಪೇಳ್ದೆವು ॥ ೪೪ ॥

ಏತಕ್ಕೈತಂದಿರಿಲ್ಲಿಗೆ ರವಿಯು ಮುಂದೆ ಖ।
ದ್ಯೋತಂಗಳೆಸೆದಪುನೆ ತನಗೆ ಸರಿಯಾರೆಂಬ ।
ಮಾತು ಮುಗಿಯದ ಮುನ್ನ ಕೊಂಡೆದ್ದುದಾವರ್ತ ಮಾರುತಂ ನಾವು ಬಳಿಕ ॥
ಆತನಂ ಕೂಡಿಕೊಂಡರುವತ್ತುನಾಲ್ಕುಮುಖ ।
ದಾತನಂ ಕಂಡೆವಾತನ ಗರ್ವದಿಂದೆ ಮುಂ ।
ದೀತೆರದೊಳಿಮ್ಮಡಿಸಿದಾಸ್ಯದ ವಿರಿಂಚಗಳ ಲೋಕಂಗಳಂ ಕಂಡೆವು ॥೪೫॥

ತೊಳಲಿದೆವು ಪಾರ್ಥ ಕೇಳಿಂತು ನಾವೆಲ್ಲರುಂ ।
ಬಳಿಕ ಸಾವಿರ ಮೊಗದೊಳೆಸೆವ ಪರಮೇಷ್ಠಿಯಂ ।
ಬಳಸಿದ ಸಮಸ್ತ ಸುರಮುನಿಗಳ ಪೊಗಳ್ವ ಸನಕಾದಿಗಳ ಗಡಣದೊಡನೆ ॥
ನಳಿನಸಖ ಶತಕೋಟಿ ತೇಜದಿಂ ತೊಳತೊಳಗಿ ।
ಬೆಳಗುತಿರಲಾವಿನಿಬರುಂ ಪೋಗಿ ಕಾಣಲ್ಕೆ ।
ಬಳಲಿದಿರಿದೇಕೆ ಬಂದಿರಿ ನಿಮ್ಮ ಕರುಣದಿಂಡಿಹೆನೆಂದು ಸೈತಿಟ್ಟನು ॥೪೬॥

ನಿಮ್ಮ ದೆಸೆಯಿಂದ್ಯೆಸಲೇ ತನಗೆ ಸಂತತಂ ।
ಸುಮ್ಮಾನ ಮಹುದೆಂದು ಮಿಗೆ ಸುಪ್ರಸನ್ನತೆಯೊ ।
ಳೆಮ್ಮನೆಲ್ಲರನಾದರಿಸಿ ನಿಗರ್ವಿಕೆಯಿಂ ಸಹಸ್ರ ವದನಂ ಕಳುಹಲು ॥
ಹೆಮ್ಮೆಗಳ ನುಳಿದು ವಿಸ್ಮಿತರಾದರವರನ್ನೆ ।
ಗಂ ಮೊದಲದೆಂತಿರುತಿರ್ದರಂತೆ ಕನಸೆನಲ್ತೋರ್ಪ ।
ತಮ್ಮಲೋಕಂಗಳಿಗೆ ಬಂದಿರ್ದರಾನೆಂದಿನವೊಲಿರ್ದೆ ನೀಕಡಲೊಳು ॥೪೭॥

ಅದರಿಂದೆ ಕೋವಿದರ್ ಗರ್ವಮಂ ಮಾಡಲಾ ।
ಗದು ಪಾರ್ಥ ತಾನೆಂದು ಸಂಧಿಸಿದ ಸಾಸಿರಮೊ ।
ಗದ ಪುರುಷನೀತನಲ್ಲವೆ ಕೃಷ್ಣರೂಪದಿಂ ಕಾಣಿಸುವನೀ ಜಗದೊಳು ॥
ಉದದಿ ಮಧ್ಯದೊಳಿನ್ನೆಗಂ ಭಜಿಸುತಿರ್ದೊಡಾ ।
ದುದು ಸಫಲಮೆಂದು ಬಕದಾಲ್ಭ್ಯಮುನಿ ನುಡಿಯಲ್ಕೆ ।
ಮುದದಿಂದೆ ಕೇಳ್ದು ವಿಸ್ಮಿತರಾಗಿ ಸಂಭಾವಿಸಿದರರ್ಜುನಾದಿ ನೃಪರು ॥೪೮॥

ಶ್ರೀಕಮಲಲೋಚನಂ ಬಕದಾಲ್ಭ್ಯನಂ ಬಳಿಕ ।
ಭೂಕಾಂತನಧ್ವರಕೆ ನೀವು ಬಿಜಯಂಗೈಯು ।
ಬೇಕೆಂದೊಡಂಬಡಿಸಿ ವಾಜಿಸಹಿತಂಬುಧಿಯ ತಡಿಗೆ ಬಂದಾ ಋಷಿಯನು ॥
ಲೋಕವರಿಯಲ್ಕೆ ಶಿಬಿಕಾರೋಹಣಂಗೈಸಿ ।
ಲಾಕುದುರೆಗಳ್ ತಿರುಗಿ ಸಿಂಧುದೇಶಕೆ ಬರಲ ।
ನೇಕ ಪೃಥ್ವೀಪಾಲರೊಡನೆ ಕೃಷ್ಣಾರ್ಜುನರ್ ನಡೆತಂದರುತ್ಸವದೊಳು ॥೪೯॥

ಮೂವತ್ತುಮೂರನೆಯ ಸಂಧಿ

ಸೂಚನೆ॥ ಧರಣಿಪಾಗ್ರಣಿ ಯುಧಿಷ್ಠಿರ ಮಹೀವಲ್ಲಭಂ ।
ತುರಗ ಮೇಧಾಧ್ವರವನೈದೆ ವಿಸ್ತರಿಸಿದಂ ।
ಭರತ ನಳ ನಹುಷಾದಿ ಪೃಥ್ವೀಶರ್ಗಿಂತಂಗೆ ಪಾಸಟಿಯೆ ಪೇಳೆನಲ್ಕೆ ॥

ಜನಮೇಜಯಕ್ಷಿತಿಪ ಕೇಳ್ ಬಳಿಕ ದೈತ್ಯ ಭಂ ।
ಜನನಖಿಳ ಭೂಪಾಲರಂ ನಾಗಪುರಕೆ ಯೋ ।
ಜನದಳತೆಯೊಳ್ ನಿಲಿಸಿ ಬೇರೆಬೇರವರವರ ಪಡೆಗಳಂ ಪಙ್ಕ್ತಿಗೊಳಿಸಿ ॥
ತನತನಗೆ ಗಂಧ ಮಾಲ್ಯಾಂಬರಾಭರಣ ನೂ ।
ತನ ವಿಭವದಿಂದೆ ಬಹುದೆಂದು ನೇಮಿಸಿ ಧರ್ಮ ।
ತನಯನಂ ಕಾಣಬೇಕೆಂಬ ಲವಲವಿಕೆಯಿಂ ಮುಂದೆ ಬಿಜಯಂಗೈದನು ॥ ೧ ॥

ಸುರನದಿಯ ತಡಿಯ ಪುಣ್ಯಕ್ಷೇತ್ರದೊಳ್ ಸುವಿ ।
ಸ್ತರದ ಮಣಿಮಂಟಪದೊಳಖಿಳ ಮುನಿಗಣದೊಡನೆ ।
ಬರಿಸಡಿಂದೊಡಲ ದಂಡಿಸಿ ನೆಲದಮೇಲೆ ಕುಳ್ಳಿರ್ದು ಯಮ ನಿಯಮದಿಂದೆ ॥
ಪರಮ ದೀಕ್ಷಾವಿಧಿಯನನುಕರಿಸಿ ಸಾಧ್ವಿಯರ ।
ನೆರವಿಯೊಳಿರವ ಪತ್ನಿವೆರಸಿ ತೊಳಗುವ ಯುಧಿ ।
ಷ್ಠಿರ ಭೂಪನಂ ಕಂಡನಸುರಾರಿ ವಂದಿಸಿತು ತತ್ಸಭೆ ಮುರಾಂತಕಂಗೆ ॥ ೨ ॥

ಯದುಕುಲಾಗ್ರಣಿ ಬಳಿಕ ಭೀಮನಂ ಬಿಗಿಯಪ್ಪಿ ।
ವಿದುರ ಧೃತರಾಷ್ಟ್ರ ಮಾದ್ರೇಯರಂ ತಕ್ಕೈಸಿ ।
ಮುದದಿಂದೆ ದೇವಕಿ ಯಶೋದೆಯುರ್ಗಭಿವಂದನಂಗೈದು ಪೃಥೆಗೆ ನಮಿಸಿ ॥
ಪದುಳವಿಟ್ಟೈದೆ ಗಾಂಧಾರಿಯಂ ಬಂದು ದ್ರೌ ।
ಪದಿ ಸುಭದ್ರೆಯರಂಘ್ರಿಗೆರಗಿದೊಡೆ ಮಣಿದೆತ್ತಿ ।
ತದನಂತರದೊಳಖಿಳ ಮುನಿಗಳ್ಗೆ ವಂದಿಸಿ ನಗುತೆ ನೃಪತಿಗಿಂತೆಂದನು ॥ ೩ ॥

ಅರಸ ನಿನ್ನಧ್ವರದ ವಾಜಿ ಭೂವಲಯಮಂ ।
ತಿರುಗಿ ಬಂದುದು ವರ್ಷಮಾತ್ರದೊಳ್ ಮೇದಿನಿಯ ।
ನರಪತಿಗಳೆಲ್ಲರುಂ ನಡೆತಂದರೊಡನೆ ಪಾರ್ಥ ಪ್ರತಾಪದ ಹರಹಿಗೆ ॥
ಧರಣಿ ಸಾಲದು ನೆರಪಿದೊಡವೆಗಮರಾಚಲಂ ।
ಸರಿಯಲ್ಲ ಬಕದಾಲ್ಭ್ಯಕಾದಿ ಮುನಿ ನಿಕರಮಿದೆ ।
ದೊರೆಯದಿಹ ಸಂಭಾರಮಿಲ್ಲ ನಡೆಸಿನ್ನು ಯಜ್ಞವನೆಂದು ಹರಿ ನುಡಿದನು ॥ ೪ ॥

ಆ ಮದಾಂತಕನ ಮಾತಂ ಕೇಳ್ದು ಹರಿಸದಿಂ।
ಭೂಮಿಪತಿ ನುಡಿದನೆಲೆ ದೇವ ತವ ಕಾರುಣ್ಯ।
ಜೀಮೂತವಿರೆ ಬಳೆಯದಿರ್ದಪುದೆ ಪಾರ್ಥ ಪ್ರತಾಪದವೊಲಂ ತಿಳಿಯಲು॥
ರೋಮ ರೋಮದೊಳಿಡಿದಜಾಂಡ ಕೋಟಿಗಳಿಹ ಮ।
ಹಾ ಮಹಿಮೆ ತಾನೆತ್ತ ನರನ ಸಂಗಡ ತಿರುಗು।
ವೀ ಮನುಜತನವೆತ್ತ ಭಕ್ತರಂ ಪಾಲಿಪುದೆ ನಿನ್ನ ಬಾಳುವೆಯೆಂದನು ॥ ೫ ॥

ದೇವ ಸಾಕಿನ್ನದರ ಮಾತೆಮ್ಮ ಪಂಚಕದ।
ಜೀವನಂ ನಿಮ್ಮದೈಸಲೆ ಬಾಹ್ಯವೇತಕೆ ಧ।
ರಾವಲಯದರಸುಗಳನೆಂತು ಜಯಿಸಿದಿರೆಂಬ ವಿವರಮಂ ಪೇಳ್ವುದೆಂದು ॥
ಭೂವಲ್ಲಭಂ ಕೇಳ್ದೊಡಿಂದಿರಾಪತಿ ಹಸ್ತಿ।
ನಾವತಿಯ ನಗರಮಂ ಪೊರಮಟ್ಟು ಮಗುಳಲ್ಲಿ।
ಗಾ ವಾಜಿಗಳ್ ಬಂದು ಪುಗುವಿನಂ ನಡೆದ ವೃತ್ತಾಂತಮಂ ವಿವರಿಸಿದನು ॥ ೬ ॥

ವಾಜಿ ಸಹಿತರ್ಜುನಂ ಪೊರಮಟ್ಟನಂದು ವಿ।
ಭ್ರಾಜಿಸುವ ಚೈತ್ರದೊಳ್ ಕೂಡೆ ಮಾಹಿಷ್ಮತಿಗೆ।
ರಾಜನಹ ನೀಲಧ್ವಜಂ ತುರಗಮಂ ತಡೆದನಗ್ನಿಯ ಸಹಾಯದಿಂದೆ॥
ಈ ಜಿಷ್ಣು ಸಂಗರದೊಳಾತನಂ ಜಯಿಸಲಾ।
ವ್ಯಾಜದಿಂ ಬಂದುದು ಸರಿದ್ವರೆಯ ಶಾಪಂ ಮ।
ಹಾ ಜವದೊಳಲ್ಲಿಂದೆ ಪೋಗಿ ತಿರುಗಿತು ಹಯಂ ಬಳಿಕ ವಿಂಧ್ಯಾಚಲದೊಳು ॥೭॥

ಆನಗದ ಪೆಣ್ಗಳಿಂ ಪಣ್ಗಳಿಂ ನಿರ್ಝರದ।
ಪಾನೀಯದಿಂಪಿನಿಂ ತಂಪಿನಿಂ ಕುಸುಮ ಗಂ।
ಧಾನಿಲನ ಕಂಪಿಂದೆ ಪೆಂಪಿಂದೆ ನೆಲವೇರಿ ಚಂಡಿಯ ವಿಶಾಪದಿಂದೆ॥
ಸೇನೆ ವಿಸ್ಮಯದೊಡನೆ ಹಯದೊಡನೆ ಮುಂದೆ ಸು।
ಮ್ಮಾನದಿಂ ನಡೆಯಲ್ಕೆ ತಡೆಯಲ್ಕೆ ಸಂಗರದೊ।
ಳೀನರಂ ಜಯಿಸಿದಂ ಚಲದಿಂದೆ ಬಲದಿಂದೆ ಹಂಸಧ್ವಜನ ಸುತರನು ॥೮॥

ಜನಪ ಕೇಳಾ ಘರ್ಮಕಾಲದೊಳ್ ತುಹಿನ ಗಿರಿ।
ತನುಜೆಯ ತಪೋವನದ ವಿಘ್ನಂಗಳಂ ಕಳೆದು।
ವನಿತಾ ಮಯದ ರಾಜ್ಯದೊಳ್ ಪ್ರಮೀಳೆಯ ನೊಡಂಬಡಿಸಿ ಗಜಪುರಕೆ ಕಳುಹಿ॥
ದನುಜೇಂದ್ರ ಭೀಷಣನನಾಕ್ರಮಿಸಿ ಬಭ್ರುವಾ।
ಹನನ ಪಟ್ಟಣಕೆ ನಿಜ ಹಯದೊಡನೆ ಬಂದನ।
ರ್ಜುನನಬ್ದ ಋತುವಿನೋಳ್ ಮೇಘರವಮಂ ಮಿಗುವ ವಾದ್ಯ ನಿರ್ಘೋಷದಿಂದೆ
॥ ೯ ॥

ಮಣಿಪುರಕೆ ಬಂದುದಾ ಸಮಯದೊಳ್ ಕುದುರೆ ಫಲು।
ಗುಣನಲ್ಲಿ ಮಡಿದನಾತ್ಮಜನಿಂದೆ ಬಳಿಕದಂ।
ಫಣಿರಾಜ ತನುಜೆ ಪರಿಹರಿಸಿದಳ್ ಮುಂದೆ ನಡೆಯಲ್ ತಾಮ್ರಕೇತು ತಡೆದು॥
ರಣದೊಳೆಮ್ಮೆಲ್ಲರಂ ಗೆಲ್ದುಡಾತನ ಪಿತಂ।
ಗುಣನಿಧಿ ಮಯೂರಧ್ವಜಂ ತನ್ನ ಯಜ್ಞಮಂ।
ಗಣಿಸದೆಮಗೊಪ್ಪಿಸಿ ತುರಂಗಸಹಿತೈತಂದನರಸ ಕೇಳ್ ಕೌತುಕವನು ॥ ೧೦ ॥

ಆ ಮಯೂರಧ್ವಜಂ ಹರಿ ಸಹಿತ ನಡೆಯೆ ನಿ।
ಸ್ಸೀಮನಹ ವೀರವರ್ಮಂ ತಡೆಯೆ ಬಿಡಿಸಲು।
ದ್ದಾಮ ವಾಜಿಗಳೈದಿ ಚಂದ್ರಹಾಸನ ಪುರಕೆ ಕಣ್ಗೆ ಗೋಚರಿಸದಿರಲು॥
ಪ್ರೇಮದಿಂ ನಾರದ ಮುನೀಶ್ವರಂ ಬಂದು ಸು।
ತ್ರಾಮ ಸುತನೊಳ್ ಕೂಡೆ ವಿಸ್ತರದೆ ವೈಷ್ಣವ ಶಿ।
ರೋಮಣಿಯ ಕಥೆವೇಳೆ ಕೇಳ್ದು ತತ್ಪುರಕೈದಿ ನಲಿದೈದುದಿನಮಿರ್ದನು ॥೧೧॥

ಶೈಶಿರದ ಕಾಲದೊಳ್ ಕಲಿ ಚಂದ್ರಹಾಸನಂ।
ವೈಸಿರಿಯೊಳೊಳಗೊಂಡು ಬಕದಾಲ್ಭ್ಯನಂ ಕಂಡು।
ಕೈಸಾರ್ದ ಹರಿಸದಿಂ ಸಿಂಧುದೇಶದ ಮೇಲೆ ಮಖ ಸಮಯಕಿಲ್ಲಗಾಗಿ॥
ಜೈಸಿ ಬಂದೆವು ನಿನ್ನನುಜ್ಞೆಯೊಳ್ ಗಡ ಕಳುಹಿ।
ದೈಸು ವೀರರ್ಕಳುಂ ಸುಖದೊಳೈತಂದರೊ।
ತ್ತೈಸಿದಗಣಿತ ವಸ್ತು ಸಹಿತಖಿಳ ನೃಪರೊಡನೆ ಬಹಳ ವಿಭವದೊಳೆಂದನು ॥೧೨॥

ಭೂಮಂಡಲದೊಳಿಂದು ಮಖ ಹಯಂ ತಿರುಗಿದ ಮ।
ಹಾ ಮಹೀಶ್ವರರೊಡನೆ ಬಂದ ವೃತ್ತಾಂತಮಂ।
ದಾಮೋದರಂ ಪೇಳ್ದು ರಾಯನಂ ಬೀಳ್ಕೊಂಡು ತನ್ನ ಮಂದಿರಕೆ ಬಳಿಕ॥
ಭೀಮನಂ ಕೈವಿಡಿದುಕೊಂಡು ನಡೆತರೆ ಸತ್ಯ।
ಭಾಮಾದಿ ರಾಣಿವಾಸಂಗಳದಿರಾಗಿ ಸು।
ಪ್ರೇಮದಿಂದಾರತಿಗಳಂ ಕೊಂಡು ಬಂದು ನಗುತಾತ್ಮಪತಿಯಂ ಕಂಡರು ॥೧೩॥

ಮಡದಿಯರ ಮಧ್ಯದೊಳ್ ಸತ್ಯಭಾಮಾ ದೇವಿ।
ನುಡಿದಳೆಲೆ ದೇವ ನಮಗಹಳು ಸೋದರಿ ಕುಬ್ಜೆ।
ಪೊಡವಿಯೊಳ್ ಫಲುಗುಣಂ ತುರಗ ರಕ್ಷೆಗೆ ಪೋದ ಪ್ರಮೀಲೆ ನಿಮಗೆ॥
ಒಡಹುಟ್ಟಿದವಳಾದಳಿನ್ನೇನೆನಲ್ಕವಳ।
ಮುಡಿಯಮಾತಂ ಕೇಳ್ದು ಮೊಳೆವ ನಸುನಗೆಯು ಬೆ।
ಳ್ಪಿಡಿಯೆ ಕಮಲಾಂಬಕಂ ಪವಮಾನ ನಂದನನ ಮೊಗನೋಡುತಿಂತೆಂದನು ॥೧೪॥

ಸಂತತಿಗೆ ಸಂತತಿಗಳಾದುವಿನ್ನೇನದರ ॥
ಚಿಂತೆ ಬಾಲ್ಯವೆ ನಮಗೆ ಭೀಮ ನೋಡೀಗ ನ ।
ಮ್ಮಂತರವ ನರಿಯದಿವಳೆಂದ ಕಟಕಿಯ ಮಾತನೆಂದು ಮುರಹರನೊರೆದೊಡೆ ॥
ಅಂತಹುದು ಪುಸಿಯಲ್ಲ ತರಳತನದೊಳ್ ಪುರುಷ ।
ರೆಂತಾದೊಡಂ ನಡೆವರೀ ಧರ್ಮಜನ ಪುರದೊ ।
ಳಿಂತು ಮಾರ್ಗಿಗಳಾಗದಿರಬಹುದೆ ಹೇಳೆಂದಳಾ ಸತ್ಯಭಾಮೆ ನಗುತೆ ॥ ೧೫ ॥

ಪ್ರಾಣೇಶ್ವರಿಯ ನುಡಿಗೆ ನಸುನಗುತೆ ಮತ್ತುಳಿದ ।
ರಾಣಿಯರ ಸರಸೋಕ್ತಿಗಳ ನಾಲಿಸುತೆ ಚಕ್ರ ।
ಪಾಣಿ ಮಾರುತಿ ಸಹಿತ ಭವನದೊಳ್ ಕುಳ್ಳಿರ್ದು ಸುಖದೊಳಿರಲಾಪದದೊಳು ॥
ಕ್ಷೋಣೀಂದ್ರರೊಡಗೂಡಿ ಫಲುಗುಣಂ ಘೂ ವರನ ।
ಕಾಣಿಕೆಗೆ ನಗರದ ಸಮೀಪಕ್ಕೈತಂದನಾ ।
ವಾಣಿಯಂ ದಾರುಕಂ ಬಂದು ಬಿನ್ನೈಸಲ್ಕೆ ಪೊರಮಟ್ಟನರಮನೆಯನು ॥೧೬॥

ಬಂದನಧ್ವರ ಶಾಲೆಗಸುರಾರಿ ಮತ್ತೆ ಯಮ ।
ನಂದನಂಗಿಲ್ಲಿಹುದು ನೀನಖಿಳ ಭೂಪಾಲ ।
ವೃಂದಮಂ ಬಕದಾಲ್ಭ್ಯಮುನಿಪನಂ ನಾವಿದಿರ್ಗೊಂಡು ಬಹೆವೆಂದುಸಿರ್ದು ॥
ಮುಂದೆ ಧೃತರಾಷ್ಟ್ರವಿದುರಾದಿ ವೃದ್ಧರ್ ಮಹೀ ।
ವೃಂದಾರಕ ಪ್ರತತಿ ಸಹಿತ ಪೊರಮಟ್ಟು ನಡೆ ।
ತಂದನುತ್ಸವದಿಂದೆ ಬರಲ್ಕೈದೆ ಸಕಲ ಜನಮೆಂದು ನೇಮಿಸಿ ಮುದದೊಳು ॥೧೭॥

ಅಸುರಹರನಾಜ್ಞೆಯಿಂದಾಗ ಪಟ್ಟಣದೊಳಗೆ ।
ಪೊಸತಾಯ್ತು ಗುಡಿ ತೋರಣದ ರಚನೆ ಬೀದಿಗಳೊ ।
ಳೆಸೆದುವು ಸುಮಂಗಳ ದ್ರವ್ಯಂಗಳೊಪ್ಪಿದುವು ಪನ್ನೀರಚಳೆಯಂಗಳು ॥
ಮುಸುಕಿದವು ಧೂಪ ವಾಸನೆಗಳಿಡಿದುದು ವಿವಿಧ ।
ಕುಸುಮ ಗಂಧೋತ್ಕರಂ ಘನ ಸಾರ ಕುಂಕುಮದ ।
ಕೆಸರುಗಳ ಪರಿಮಳಂ ತೀಡಿದುದು ಕಪ್ಪುರದ ಸೊಡರ್ಗಂಪು ರಂಜಿಸಿದುದು॥೧೮॥

ಪೊರಮಟ್ಟುದಖಿಳ ಪುರಜನಮೈದೆ ಸಿಂಗರದ ।
ಮೆರಹುಗಳ ಮಾಳಿಯಿಂ ಮೇಳವದ ರಚನೆಗಳ ।
ತರತರದ ವಿದ್ಯಾ ವಿನೋದದಿಂ ನಟ ನರ್ತಕೀ ಜನದ ಗೀತದಿಂದೆ ॥
ತುರುಗಿದ ಮೃದಂಗಾದಿ ವಾದ್ಯಧ್ವನಿಗಳಿಂದೆ ।
ಮಿರುಗುವ ವಿಲಾಸಿನಿಯರೋಳಿಯಿಂ ಮಾರ್ಗದೊಳ್ ।
ತೆರಪಿಲ್ಲೆನಲ್ಕೆ ವೈಭವದಿಂದೆ ಪಾರ್ಥನನಿದಿರ್ಗೊಂಬ ಸಂಭ್ರಮದೊಳು ॥೧೯॥

ದಂತಿಗಳ ಮೇಲೆ ದೇವಕಿ ಯಶೋದಾದೇವಿ ।
ಕುಂತಿಯರ್ ಪೊರಮಟ್ಟರದರ ಬಳಿವಿಡಿದು ಸೀ ।
ಮಂತಿನೀ ಗಣಸಹಿತ ರುಕ್ಮಿಣಿಯ ದಂಡಿಗೆ ತೆರಳ್ದುದತಿ ವಿಭವದಿಂದೆ ॥
ತಿಂತಿಣಿಸಿ ಗಗನದೊಳ್ ತುಂಬಿಗಳ್ ಕಾರಮುಗಿ ।
ಲಂತೆ ನವ ಪಾರಿಜಾತದ ಕುಸುಮ ಪರಿಮಳಕೆ ।
ಸಂತತಂ ಮುಸುಕಲಂದಣದೊಳೈದಿದಳಾಳಿಯರ್ವೆರಸಿ ಸತ್ಯಭಾಮೆ ॥ ೨೦ ॥

ಜಾಂಬುವತಿ ಮೊದಲಾದ ಪಂಕರುಹ ಪತ್ರಾಯ ।
ತಾಂಬಕನ ರಾಣಿಯರ್ ಪರಿಪರಿಯೊಳೆಸೆವ ದಿ ।
ವ್ಯಾಂಬರ ಸುಗಂಧ ಮಾಲ್ಯಾಭರಣ ಮುಕ್ತಾವಳಿಗಳ ಸಿಂಗರವನಾಂತು ॥
ತಾಂಬೂಲ ರಾಗರಸದೊಳ್ ಪಿಡಿದ ಲಲಿತ ವ ।
ದನಾಂಬುಜದ ಕಾಂತಿಗಳ ಕಳೆವೆತ್ತು ತಮತಮಗೆ ।
ಜಾಂಬೂನದಾಲಂಕೃತಾಂದೋಳಿಕಾರೋಹಣಂಗೈದು ಪೊರಮಟ್ಟರು ॥ ೨೧ ॥

ಇಟ್ಟಣಿಸಿತಮರೇಂದ್ರತನಯನನಿದಿರ್ಗೊಂಬ ।
ಬಟ್ಟೆಯೊಳ್ ನಾರೀಸಮೂಹಮೊರಸೊರಸಿನೊಳ್ ।
ತೊಟ್ಟಮೈದೊಡಿಗೆಗಳ ಮಸೆದ ಪೊಂಬುಡಿಯಂತೆ ಕುಂಕುಮ ರಜಂಗಳುಗಲು ॥
ಕಟ್ಟಿರ್ದ ಹಾರಾದಿಗಳ್ ಪರಿದುವಿರ್ದವೊಲ್ ।
ದಿಟ್ಟಿಗೊನೆಗಳ ಕಾಂತಿ ಸೂಸುತಿರೆ ತನುರುಚಿಯೊ ।
ಳುಟ್ಟ ವಸನ ದ್ಯುತಿ ವಿರಾಜಿಸುತ್ತಿರೆ ಹಾವಭಾವದ ವಿಲಾಸದಿಂದೆ ॥ ೨೨ ॥

ಬಂದುದು ಮಹಾಜನಂ ಬಹಳ ವೈಭವದಿಂದೆ ।
ನಿಂದುದು ಚತುರ್ಬಲಂ ಕೆಲಕೆಲದೊಳೊಡ್ಡಾಗಿ ।
ಸಂದಿಸಿದರಿವರವರ್ ಬಳಿಕಶ್ವಯುಗ ಸಹಿತ ನಡೆದು ಬಹ ಫಲುಗುಣಂಗೆ ॥
ಚಂದನದ ಮುತ್ತಿನಕ್ಷತೆಯ ಕುಂಕುಮ ಮಿಶ್ರ ।
ದಿಂದೆ ದಧಿ ಲಾಜ ದೂರ್ವಾಂಕುರಗಳಿಂದೆಸೆವ ।
ಪೊಂದಳಿಗೆವಿಡಿದಾರತಿಯನೆತ್ತಿ ಮುತ್ತುಗಳ ಸೇಸೆವಳಿದರ್ ಸತಿಯರು ॥ ೨೩ ॥

ವಿಜಯ ಹರಿಸುತ ಯೌವನಾಶ್ವ ಸಾತ್ಯಕಿ ವೃಷ ।
ಧ್ವಜ ಸಾಂಬ ಕೃತವರ್ಮ ಹೈಡಿಂಬಿ ಸಾಲ್ವಾವ ।
ರಜ ಸುವೇಗಾನಿರುದ್ಧಾದಿಗಳ್ ಧೃತರಾಷ್ಟ್ರಭೂಪನಂ ಕಂಡು ಬಳಿಕ ॥
ಅಜವಾಹನ ಧ್ವಜ ಮಯೂರಧ್ವಜಾರುಣ ।
ಧ್ವಜ ಚಂದ್ರಹಾಸ ನೀಲಧ್ವಜ ಧನಂಜಯಾ ।
ತ್ಮಜ ವೀರವರ್ಮ ಪ್ರಮುಖರಾದ ರಾಯರಂ ಕಾಣಿಸಿದರುಚಿತದಿಂದೆ ॥ ೨೪ ॥

ವಂದನೀಯರ್ಗೆ ವಂದಿಸಿ ವಂದಿಸುವ ಜನದ ।
ವಂದನೆಗಳಂ ಕೊಂಡು ಸಮಬಂಧುಗಳನಪ್ಪಿ ।
ಸಂದರ್ಶನೋತ್ಸವದೊಳನ್ಯೋನ್ಯ ಸಂಭಾಷಣೆಗಳಿಂದೆ ಮುದಿತರಾಗಿ॥
ವಂದಿಸಿದರೆಲ್ಲರುಂ ಬಕದಾಲ್ಭ್ಯಮುನಿ ಬಳಿ ।
ಕಂದಣಂಗಳನಿಳಿದು ಮುರಹರನ ನೇಮದಿಂ ।
ಬಂದರಧ್ವರಶಾಲೆಗರಸನಂ ಕಾಣಲ್ಕೆ ಗೋಧೂಳಿಲಗ್ನಮಾಗೆ ॥ ೨೫ ॥

ತರತರದ ಛತ್ರ ಚಾಮರಂಗಳ ವಿಡಾಯಿಗಳ ।
ಪರಿಪರಿಯ ಸಿಂದ ಸೀಗುರಿ ಪತಾಕಾವಳಿಯ ।
ಮೊರೆಮೊರೆವ ವಿವಿಧ ವಾದ್ಯಧ್ವನಿಯ ವಂದಿ ಮಾಗಧರ ಜಯಜಯ ನಿನದದ॥
ಸರಸತರ ಸಂಗೀತ ನರ್ತನದ ಮೇಳವದ ।
ನೆರೆನೆರೆದ ಚತುರಂಗದೊಡ್ಡುಗಳ ಸಂದಣಿಯ ।
ದೊರೆದೊರೆಗಳೈತಂದರುತ್ಸವದೊಳರಸನಂ ಕಾಣಲಚ್ಯುತನ ಕೂಡೆ ॥ ೨೬ ॥

ಮುಂದೆ ಕುದುರೆಗಳದರ ಬಳಿಯೊಳ್ ಸಮಸ್ತ ಯದು ।
ವೃಂದದೊಡಗೂಡಿ ತಾನೆಡಬಲದೊಳಮರೇಂದ್ರ ।
ನಂದನ ವೃಷಧ್ವಜರ್ ಪಿಂತೆ ಹಂಸಧ್ವಜ ಮಯೂರಧ್ವಜಾದಿ ನೃಪರು॥
ಸಂದಣಿಸಿ ಗೋಧೂಳಿ ಲಗ್ನದೊಳ್ ಭೂಪನಂ ।
ಸಂಧಿಸುವ ಮಾಳ್ಕೆಯಿಂ ಕಪ್ಪುರದ ತೈಲಂಗ ।
ಳಿಂಮರಿವ ಬೊಂದಾಳ ಶತಕೋಟಿಗಳ್ ಪಿಡಿಯಲಸುರಹರನೈತಂದನು ॥ ೨೭ ॥

ಕರ್ಣದೊಳ್ ಕೇಳಬಹುದಲ್ಲದಕ್ಷಿಯೊಳನಿಮಿ ।
ಷರ್ನೋಡಲಳವಹುದೆ ತುರಗಮೇಧಂಗಳನ ।
ಹರ್ನಿಶಾ ವಲ್ಲಭರ ಕುಲದ ಭೂಪಾಲಕರ್ ಮಾಡಿದರ್ ಪಲಬರವರು ॥
ನಿರ್ಣಯವೆ ಹರಿಯೊಡನೆ ಸಿರಿಸಹಿತ ಧರೆಗೆ ಪಯ ।
ದರ್ಣವಂ ಬಂದಪುದೊ ಶಿವಶಿವಾ ಪೊಸತಿದಂ ।
ವರ್ಣಿಸುವ ಕವಿ ಯಾವನೆನೆ ವಾಜಿಗಳ ಕೂಡೆ ನಡೆತಂದರವನೀಶರು ॥ ೨೮ ॥

ಯಾಜಮಾನ್ಯದೊಳೆಸೆವ ಭೂಪಾಲನಂ ಕಂಡು ।
ವಾಜಿಗಳನೊಪ್ಪಿಸಿ ಪದಾಂಬುಜಕೆ ಪೊಡಮಟ್ಟೊ ।
ಡಾ ಜಿಷ್ಣುವಂ ತೆಗೆದು ತಕ್ಕೈಸಿ ಕರ್ಣಜ ಪ್ರದ್ಯುಮ್ನಕಾದಿಗಳನು ॥
ತೇಜದಿಂದವನೀಶ್ವರಂ ಮನ್ನಿಸಿದ ಬಳಿಕ ।
ರಾಜೀವ ಲೋಚನಂ ಕಾಣಿಸಿದನರಸಂಗೆ ।
ರಾಜಮೌಳಿಗಳಾದ ಹಂಸಧ್ವಜಪ್ರಮುಖ ದೇಶಾಧಿಪಲ್ಲಭರನು ॥ ೨೯ ॥

ಈತಂ ಕಣಾ ರಾಜಹಂಸ ಹಂಸಧ್ವಜಂ ।
ಖ್ಯಾತನೀತಂ ವೀರ ವೀರವರ್ಮಾವನಿಪ ।
ನೀತಂ ನೃಪಾಲ ರತ್ನಾಭರಣ ಮಧ್ಯನಾಯಕ ನೀಲ ನೀಲಕೇತು ॥
ಈತಂ ವಿರೋಧಿ ಬಲ ವನ ಶಿಖಿ ಶಿಖಿಧ್ವಜಂ ।
ಭೂತಳ ಸ್ಥಿತ ಚಂದ್ರಚಂದ್ರಹಾಸಕ್ಷ್ಮೇಂದ್ರ ।
ನೀತನೀತಂ ದಿವಿಜ ಪತಿಯ ಸುತ ಸುತ ಬಭ್ರುವಾಹನಂ ನೋಡೆಂದನು ॥ ೩೦॥

ಏರಿಸಿ ನುಡಿವುದಿಲ್ಲ ತನಗೆ ಸಮವೆನಿಸುವರ್ ।
ಮೀರಿದ ಪರಾಕ್ರಮಿಗಳಿವರನುಪಚರಿಸೆಂದು ।
ಬೇರೆಬೇರಾ ನೃಪರನವರವರ ಸುತಸಹೋದರ ಮುಖ್ಯ ಮಂತ್ರಿಗಳನು ॥
ಮಾರೊಡ್ಡಿದಮರಾದ್ರಿಯಂತೆ ರಾಶಿಗಳಾಗೆ ।
ಹೇರಿ ತಂದೊಡವೆಯಂ ವಿವಿಧ ರತ್ನಂಗಳಂ ।
ತೋರಿಸಿ ಸುವಸ್ತುಗಳನೊಪ್ಪಿಸಿದನರಸಂಗೆ ದಾನವಧ್ವಂಸಿ ನಗುತೆ ॥ ೩೧ ॥

ಬಳಿಕಾ ಸಮಸ್ತ ಭೂಪಾಲರಸುರಾರಿಯಂ ।
ಬಳಸಿ ನಿಂದೆರೆ ದೇವ ನಿನ್ನ ದರ್ಶನವಾಯ್ತು ।
ನಳಿನಭವ ವಿಂಶತಿಯೊಳಿರ್ದ ಬಕದಾಲ್ಭ್ಯಮುನಿಯಂ ಕಂಡೆವಟ್ಟರಿಯೊಳು॥
ಇಳೆಯ ದೇಶದ ವೈಭವಂಗಳಂ ಹರಿಯೊಡನೆ ।
ತೊಳಲಿ ನೋಡಿದೆವಧ್ವರಕೆ ಬಂದೆವೀ ಪುಣ್ಯ ।
ನಿಳಯನಹ ಧರ್ಮಜನನೀಕ್ಷಿಸಿದೆವಿನಿತರಿಂ ಕೃತಕೃತ್ಯರಾವೆಂದರು ॥ ೩೨ ॥

ಎನಲವರ ನುಡಿಗಳ್ಗೆ ನಸುನಗುತೆ ಮುರಹರಂ ।
ವಿನಯದಿಂದರಸಂಗೆ ನೇಮಿಸಿದೊಡಾ ಸಕಲ ।
ಜನಪತಿಗಳಂ ಧರಾವಲ್ಲಭಂ ಸತ್ಕರಿಸಿ ವಿವಿಧೋಪಚಾರದಿಂದೆ ॥
ಮನವೊಲಿದು ಬಕದಾಲ್ಭ್ಯನಂ ಪೂಜೆಗೈದಖಿಳ।
ಮುನಿಗಳಂ ಕೂಡಿಕೊಂಡಧ್ವರೋಪಕ್ರಮಕೆ।
ವಿನುತ ಸಂಕಲ್ಪಮಂ ಮಾಡಿ ರಚಿಸಿದನಿಷ್ಟಿಕಾಚಯನಮಂ ಕ್ರಮದೊಳ್॥ ೩೩ ॥

ಕ್ಷೇತ್ರಮಂ ನೆಲೆಗೈದು ವೃಷಭಂಗಳಂಪೂಡಿ ।
ವೇತ್ರಮಂ ಪಿಡಿಯೆ ನೃಪನೋಷಧಿಗಳಂ ಕಮಲ ।
ನೇತ್ರ ತಾಳ್ದಿರೆ ಕುಂತಿ ದೇವಕಿ ಯಶೋದೆಯರ್ ಕೃಷ್ಣಾದಿ ಪೃಥ್ವೀಶರು ॥
ಧಾತ್ರೀಸುರರ್ ನಾರಿಯರ್ ವೆರಸಿ ಕನಕಮಯ ।
ಪಾತ್ರೆಯೊಳ್ ಕರ್ಪೂರ ಚಂದನ ಜಲವನೊಡನೆ ।
ಸೂತ್ರವಿಧಿಗಳ ಮಂತ್ರಪಾಠದಿಂ ತಳಿಯೆ ಶೋಧಿಸಿದರುಕ್ತಸ್ಥಳವನು ॥ ೩೪ ॥

ಶ್ರುತಿಮಂತ್ರವಿಧಿಗಳಿಂ ವ್ಯಾಸ ಬಕದಾಲ್ಭ್ಯರನು ।
ಮತದಿಂದೆ ಬುಧರಿಟ್ಟಿಗೆಗಳ ನಳವಡಿಸಿದರ್ ।
ಕ್ಷಿತಿಯೊಳ್ ಸುಪರ್ಣಾಕೃತಿಯ ವೇದಿಯಂ ಚತುರ್ ವ್ಯೂಹದೊಳ್ ನಿಲಿಸಿ ನಾಲ್ಕು॥
ಶತವನುದರಾನನಂಗಳ್ಗೆ ತೆಂಕಣ ಗರಿಯು ।
ಚಿತೆಗೆ ನೂರರಮೇಲೆ ನಾಲ್ವತ್ತು ನಾಲ್ಕನಾ ।
ಪ್ರತಿಯೊಳುತ್ತರ ಪಕ್ಷಕನಿತುಮಂ ಪುಚ್ಛಕೆಪ್ಪತ್ತೊಂದನೊಂದಿಸಿದರು ॥ ೩೫ ॥

ಮೊದಲೊಂದನಿಟ್ಟಿಗೆಯು ನಿಮ್ಮಡಿಸಲೆರಡನೆಯ ।
ದದ ನಿಮ್ಮಡಿಸಲುರೆ ವಿರಾಜಿಸಿತು ಮೂರನೆಯು ।
ದದ ನಿಮ್ಮಡಿಸಲಾಯ್ತು ನಾಲ್ಕನೆಯದದ ನಿಮ್ಮಡಿಸಲೆಸೆದುದೈದನೆಯುದು ॥
ಪುದಿದಿಂತು ಮೆರೆದುದು ಸುಪರ್ಣ ಪಂಚಕದ ಯಾ ।
ಗದ ವೇದಿಗಳ್ಮಹಾಮಂಟಪವನ್ನೈದೆ ರಚಿ ।
ಸಿದರೆಂಟು ಬಾಗಿಲ್ಗಳಿಂ ಕೂಡಿ ತೋರಣ ಪತಾಕೆಗಳ ವಿಸ್ತರದೊಳು ॥ ೩೬ ॥

ಇಷ್ಟಕಾಚಯನದಿಂ ರಾಜಿಸಿತು ಬಳಸಿ ಪರಿ ।
ಶಿಷ್ಟದಿಂದೊಪ್ಪಿದುವು ಪಲವು ವೇದಿಗಳೆಸೆದು ।
ವಷ್ಟಕುಂಡದ ರಚನೆ ಪಾಲಾಶಮೇಳು ಖಾದಿರವಾರು ಬಿಲ್ವಮೈದು ॥
ದೃಷ್ಟಮಾದುನ್ನತ ಶ್ಲೇಷ್ಮಾತಕಂ ಮೂರ ।
ಧಿಷ್ಠಿತದ ಯೂಪಮಿಂತೇಕವಿಂಶತಿಗಳು ।
ತ್ಕೃಷ್ಟ ತ್ರಿವೃತ್ಸೂತ್ರ ಭೂಷಿತ ಚಷಾಲದಿಂ ಮೆರೆದುವಾ ಮಂಟಪದೊಳು ॥೩೭॥

ವಿಹಿತ ಸಂಸ್ಥಾಪಿತ ಮಖಾವಳಿಗಳಿಂದೆ ಶತ ।
ಜುಹುಗಳಿಂ ವೈಕಂಕತದ ಷಷ್ಟಿ ಸ್ರುಕ್ಸ್ರುಪ ನಿ ।
ವಹದಿಂದೆ ಗೋಚರ್ಮ ಲೋಹಿತ ದುಲೂಖಲದ ಸೋಮವಲ್ಲಿಯ ಮುಸಲದ ॥
ವಿಹರಿಸುವ ದರ್ಭಾಸ್ತರಣದ ಚಮಸಾದಿಗಳ।
ಬಹು ಸಾಧನಂಗಳಿಂ ಭೂರಿ ಸಂಭಾರ ಸಂ ।
ಗ್ರಹದಿಂದೆ ಬೇಕಾದ ವಸ್ತುಸಂಜಾತದಿಂ ಮಖಶಾಲೆ ಕಣ್ಗೆಸೆದುದು ॥ ೩೮ ॥

ವರಿಸಿ ಬಕದಾಲ್ಭ್ಯನಂ ಬ್ರಹ್ಮತ್ವಕಿರಿಸಿದರ್ ।
ವರ ಮುನಿಪನಾ ವ್ಯಾಸನಾಚಾರ್ಯನಾದ ನ।
ಧ್ವರಿಯು ಮೊದಲಾದ ಋತ್ವಿಜರಾಗೆ ವಾಮದೇವ ವಶಿಷ್ಠ ಗೌತಮಾತ್ರಿ ॥
ವರ ಪರಾಶರ ಭರದ್ವಾಜ ಕೌಂಡಿನ್ಯ ಭಾ।
ಗುರಿ ಜಾಮದಗ್ನ್ಯಗಾಲವ ಜಾತಕರ್ಣ ಸೌ ।
ಭರಿ ಸುಮಂತ ಕಹೋಳನೈಭ್ಯ ರೋಮಶ ಮುಖ್ಯಮುನಿಗಳಾ ಕ್ರತುವರದೊಳು
॥೩೯॥

ರಕ್ಷೋಘ್ನಮಂತ್ರದಿಂದೆಂಟು ಬಾಗಿಲ್ಗಳಂ।
ರಕ್ಷಿಸುವರಾಗಿ ವಿಶ್ವಾಮಿತ್ರ ಭೃಗು ವಾಯು।
ಭಕ್ಷಕ ಪುಲಸ್ತ್ಯರ್ ಮಧುಚ್ಛಂದ ಧೌಮ್ಯೋಪಮನ್ಯುಕ ಕಪಿಲ ನೇತ್ರರು॥
ಅಕ್ಷಯ ತಪೋಧನ ವರ ಮುನಿಗಳೆಲ್ಲರುಂ ।
ಲಕ್ಷಿತದ ಪೂಜೆಗಳನನುಕರಿಸಲನಿಬರ ಸ।
ಮಕ್ಷದೊಳ್ ಧರ್ಮಜಂ ಮೃಗಶೃಂಗ ಧರನಾಗಿ ಯಾಜಮಾನ್ಯದೊಳೆಸೆದನು ॥೪೦॥

ವ್ಯಾಸಮುನಿ ಬಳಿಕಲ್ಲಿ ನುಡಿದನವನೀಶಂಗೆ।
ಭಾಸುರ ಸಭಾವಲಯದೊಳ್ ಮೆರೆವ ದಿವ್ಯ ಸಿಂ।
ಹಾಸನಾರೂಢರಾಗಿಹ ಮುಕುಂದಾದಿ ಭೂಪಾಲರ್ಗೆ ವಿನಯದಿಂದೆ।
ಈ ಸಮಯದೊಳ್ ಚತುಷ್ಷಷ್ಟಿ ದಂಪತಿಗಳ್ ವಿ।
ಲಾಸದಿಂದಮಲ ಕಲಶಂಗಳಂ ತುಂಬಿ ಗಂ।
ಗಾ ಸರಿತ್ತೋಯಮಂ ಕೊಂಡು ಬರವೇಳ್ಪುದರಸನ ಮಖನಿಮಿತ್ತಕಾಗಿ ॥೪೧॥

ಜನಪ ಕೇಳ್ ವ್ಯಾಸಮುನಿ ವಾಕ್ಯಮಂ ಕೇಳ್ದು ಬಳಿ।
ಕನಸೂಯೆ ಸಹಿತತ್ರಿ ಮೇಣರುಂಧತಿ ಸಹಿತ।
ಮುನಿ ವಸಿಷ್ಠಂ ಶೌರಿ ತಾನೆ ರುಕ್ಮಿಣಿಸಹಿತ ಪಾರ್ಥಂ ಸುಭದ್ರೆಸಹಿತ॥
ದನುಜಾರಿಸೂನು ಮಾಯಾವತಿ ಸಹಿತ ಮುದದೊ।
ಳನಿರುದ್ಧನುಷೆಸಹಿತ ಮಾರುತಿ ಹಿಡಿಂಬಿ ಸಹಿ।
ತಿನಸುತನ ಕುವರಂ ಪ್ರಭದ್ರೆ ಸಹಿತಮಲ ಕಲಶಂಗಳಂ ಪೊತ್ತೆಸೆದರು ॥೪೨॥

ಲಲನೆ ಲೀಲಾವತಿ ಸಹಿತ ಮಯೂರಧ್ವಜಂ।
ವಿಲಸಿತ ಸುನಂದೆ ಬಳಿವಿಡಿಯೆ ನೀಲಧ್ವಜಂ।
ಲಲಿತ ಪ್ರಭಾವತಿವೆರಸಿ ಯೌವನಾಶ್ವನನುಸಾಲ್ವಂಧಮಿಲ್ಲೆಗೂಡಿ॥
ಉಳಿದ ಹಂಸಧ್ವಜ ಕಿರೀಟಿಸುತ ಶಶಿಹಾಸ।
ಕಲಿ ವೀರವರ್ಮ ತಾಮ್ರಧ್ವಜಾದ್ಯವನಿಪರ್।
ಸಲೆ ತಮ್ಮತಮ್ಮ ಕಾಂತೆಯರೊಡನೆ ಸಲಿಲ ಕಲಶಂಗಳಂ ತಾಳ್ದಿಸೆದರು ॥೪೩॥

ದೊರೆದೊರೆಗಳೆಲ್ಲರುಂ ತಮ್ಮ ತಮ್ಮರಸಿಯರ್।
ವೆರಸಿ ಗಂಗಾ ತಟಕೆ ಮುಸುಕಿದ ಸುಪಲ್ಲವೋ।
ತ್ಕರದ ಪೊಂಗಲಸಂಗಳಂ ಕೊಂಡು ನಡೆಯಲವರವರ ಮೈಗಾವಲ್ಗಳ॥
ಪರಿವಾರದಿಂದೆ ಪಾರ್ವರ ಮಂತ್ರಘೋಷದಿಂ।
ನೆರೆದಿಹ ಮಹಾಜನದ ಸಂದಣಿಗಳಿಂ ಪಾತ॥
ಕರ ನೃತ್ಯ ವಾದ್ಯಗೀತಂಗಳ ವಿಲಾಸದಿಂದುತ್ಸವಂ ಚೆಲ್ವಾದುದು ॥೪೪॥

ಆನೆಗಳ ಮೇಲೆ ಕುವರಿಯರಿರ್ದು ಮುತ್ತುಗಳ ।
ಸೋನೆಗಳನಡಿಗಡಿಗೆ ಸೂಸುತಿರೆ ಮನ್ಮಥನ ।
ಸೇನೆಗಳ ತೆರದಿಂದೆ ನೃಪ ಸತಿಯರೋಳಿಗದ ತರಳೆಯರ್ ಕಂಗೊಳಿಸಲು ॥
ನಾನಾ ವಿಧದೊಳೆಸೆವ ಶೃಂಗಾರವಿಭವದಿಂ ।
ಭೂ ಸುತಾಶ್ಚರ್ಯವಾಗಿರೆ ಜಲಾಗಮಕೆ ಹರಿ ।
ತಾನೆ ಒರೆ ವೊಳಗಿದುವು ದೇವದುಂದುಭಿ ಕರೆದುದರಲ ಮಳೆ ಗಗನದಿಂದೆ ॥೪೫॥

ದೇವ ದೇವರ ದೇವನೆಂಬುದಂ ಮಾನುಷ್ಯ ।
ಭಾವದಿಂ ಲಕ್ಷ್ಮೀವಿಲಾಸನೆಂದೆಂಬುದಂ ।
ಗೋವಳಯರೊಡನಾಟದಿಂದೆ ನೀಗಾಡಿದಂತೀಗ ಪದ ನಖದೊಳೊಗೆದು ॥
ಪಾವನವೆನಿಸುವ ಗಂಗಾಜಲವನೆತ್ತುವ ಮ ।
ಹಾ ವಿಭುವಿನೆಸೆವ ಲೀಲೆಗೆ ಕೈಮುಗಿದು ಕುಂತಿ ।
ದೇವಕಿಯರಚ್ಯುತನ ವಸನಮಂ ಪಿಡಿದು ರುಕ್ಮಿಣಿಯ ಸೆರಗಂ ಬಿಗಿದರು ॥೪೬॥

ನೋಡಿದಂ ನಾರದ ಮುನೀಂದ್ರನೀ ಕೌತುಕವ ।
ನಾಡಿದಂ ಸತ್ಯಭಾಮೆಯ ಮನೆಗೆ ಒಂದು ನೀಂ ।
ಮಾಡುವುಜ್ಜುಗವಿದೇನೆಲೆ ದೇವಿ ಮಂದಿರದೊಳಧ್ವರಾರಂಭಕೀಗ ॥
ಆಡಂಬರದೊಳಂಬು ಕಲಶಂಗಳಂ ಪಿಡಿಯೆ ।
ಕೂಡಿದ ಚತುಷ್ಷಷ್ಟಿದಂಪತಿಗಳೊಗ್ಗಿನೊಳ್ ।
ಗಾಡಿ ಮಿಗೆ ರುಕ್ಮಿಣಿ ವಿರಾಜಿಸುವಳೇವೇಳ್ವೆನವಳ ಭಾಗ್ಯವನೆಂದನು ॥೪೭॥

ಛತ್ರ ಚಾಮರ ಧೂಪ ಗಂಧ ಕುಸುಮಾವಳಿಯ ।
ಚಿತ್ರ ವೈಭವದಿಂದೆ ದಂಪತಿಗಳಾಗಿ ಬಹು ।
ಪುತ್ರಪೌತ್ರರ್ವೆರಸಿ ಕೈವಾರಿಸುವ ಸಕಲ ಜನದ ಸನ್ಮಾನದಿಂದೆ ॥
ಅತ್ರಿ ಮೊದಲಾದ ಋಷಿಗಳ ಮುಂದೆ ನೆರೆದಿಹ ಧ ।
ರಿತ್ರಿಯೆ ಸಮಸ್ತ ರಾಜೋತ್ತಮರ ನಡುವೆ ಶತ
ಪತ್ರನೇತ್ರನ ಬಳಿಯೆ ರಂಜಿಸುವ ರುಕ್ಮಿಣಿಯ ಭಾಗ್ಯಮದನೇಂವೊಗಳ್ವೆನು॥ ೪೮॥

ಉರ್ವ ಮೋಹದ ರಾಣಿ ಕೃಷ್ಣಂಗೆ ನಾನೆಂದು
ಗರ್ವಿಸುವೆ ಒರಿದೆ ರುಕ್ಮಿಣಿಯಂತೆ ಶೌರಿ ಸಹಿ ।
ತುರ್ವಿಪನ ಯಜ್ಞದೊಳ್ ದಂಪತಿಗಳಾಗಿರ್ದವರ್ಗೆ ದುರ್ಲಭಮಿದೆನಲು ॥
ಗೀರ್ವಾಣ ನದಿಯು ಸಲಿಲಾಗಮಕೆ ಪೊರಮಟ್ಟು ।
ಸರ್ವ ಸಂಭ್ರಮದಿಂದೆ ವರ್ತಿಸದೆ ಮನೆಯೊಳಿಹ ।
ಸಿರ್ವಾಹಮೇನೆಂದು ನಾರದಂ ಕೇಳ್ದೊಡಾ ದೇವಿ ನಗುತಿಂತೆಂದಳು ॥೪೯॥

ಮುನಿಪ ನೀನರಿಯದವನಂತೀಗ ಬಂದೆನ್ನ ।
ಮನವ ನಾರೈದು ಕೇಳ್ದಪೆ ದನುಜರಿಪು ತನ್ನ ।
ಮನೆಯೊಳಿರ್ದಪನೆಂದು ಸತ್ಯಭಾಮಾದೇವಿ ಕೃಷ್ಣನಂ ತೋರಿಸಲ್ಕೆ ॥
ಜನಪತಿಯ ಮುಂದೆ ರುಕ್ಮಿಣಿ ಸಹಿತ ತೊಳಗುತಿಹ ।
ವನಜಾಕ್ಷನಂ ಕಂಡೆನಲ್ಲಿ ಮೇಣಿಲ್ಲಿ ವೋ ।
ಹನ ರೂಪನಾಗಿ ಕಂಗೊಳಿಸುತಿರ್ದಪನೆಂದು ನಾರದಂ ಬೆರಗಾದನು ॥೫೦॥

ನಾಂ ಬಂದ ಬಗೆಯನರಿದಿಲ್ಲ ನೀನಿಹೆ ಸಾಕ ।
ದೇ ಬಯಲ್ಗೀ ಮನುಜ ಲೀಲೆ ನಿನಗೆಂದು ಪೀ ।
ತಾಂಬರಂಗಭಿನಮಿಸಿ ಬೀಳ್ಕೊಂಡು ನಾರದಂ ಪೊರಮಟ್ಟು ವಹಿಲದಿಂದೆ ॥
ಜಾಂಬುವತಿಯಾಲಯಕೆ ನಡೆತಂದು ತಾಯೆ ಕಮ।
ಲಾಂಬಕಂ ನೃಪನ ಮುಖಕರಸಿಯರ್ವೆರಸಿ ಗಂ।
ಗಾಂಬು ವಂತಹನಲ್ಲಿ ಸಂಭ್ರಮದೊಳೇಕೆ ಪೋಗದೆ ಮನೆಯೊಳಿಹೆಯೆಂದನು॥೫೧॥

ಎಂದೊಡೆ ಮುನೀಂದ್ರ ನಾವೆಲ್ಲರುಂ ನಿಮಿಷಮರ ।
ವಿಂದದಳನೇತ್ರನನಗಲ್ದು ಜೀವಿಸಲರಿಯೆ ।
ವಿಂದೆಮ್ಮ ಮನೆಯೊಳಿರ್ದಪನಾತನೊಳ್ಪಿದನೊಳೆನಗೆ ಮತ್ಸರಮಿದೇಕೆ ॥
ತಂದೆ ನಿನ್ನಾಟಮಂ ಬಲ್ಲೆನೆನೆ ಜಾಂಬುವತಿ ।
ಯಂ ದೇವಋಷಿ ಪರಸಿ ಬೀಳ್ಕೊಂಡು ರಾಣಿಯರ ।
ಮಂದಿರದೊಳೆಲ್ಲಿಯುಂ ಕೃಷ್ಣನಿಹನೆಂದರಿದು ಮುಖಶಾಲೆಗೈತಂದನು ॥ ೫೨ ॥

ಅಲ್ಲಿಂದ ನಾರದಂ ಮತ್ತೆ ಬಂದಿಲ್ಲಿ ಭೂ ।
ವಲ್ಲಭನ ಮುಂದೆ ರುಕ್ಮಿಣಿ ಸಹಿತ ಕಟ್ಟಿರ್ದ ।
ಪಲ್ಲವದ ಪೊಂಗಳನಮಂ ತಾಳ್ದು ಋತ್ವಿಜರ ಮುನಿಗಣದ ನೃಪ ನಿಕರದ ॥
ಎಲ್ಲಾ ಜನಂಗಳ ಪೊಗಳ್ಕೆಯುಂ ಕೈಕೊಂಬ ।
ಸಲ್ಲಾಪದಿಂದೆಸೆಯುತಿರೆ ಕಂಡು ಬೆರಗಾಗಿ ।
ನಿಲ್ಲದೆ ನಿಗಮ ಸೂಕ್ತದಿಂ ನುತಿಸಿದಂ ದೇವಪುರದ ಲಕ್ಷ್ಮೀಪತಿಯನು ॥ ೫೩ ॥

ಮೂವತ್ತುನಾಲ್ಕನೆಯ ಸಂಧಿ

ಸೂಚನೆ ॥ ಮಿಗೆ ಮೂಜಗಂ ತಣಿಯೆ ಹಯಮೇಧ ಯಜ್ಞಮಂ ।
ಮುಗಿಸಿ ಧರ್ಮಾತ್ಮಜಂ ಕೃಷ್ಣಾದಿ ಸಕಲ ನೃಪ ।
ತಿಗಳನವರವರ ನಗರಂಗಳ್ಗೆ ಕಳುಹಿ ಸುಖದಿಂದೆ ರಾಜ್ಯಂಗೈದನು ॥

ಅರಸ ಕೇಳರುವತ್ತು ನಾಲ್ಕು ದಂಪತಿಗಳ ।
ಧ್ವರದ ಋತ್ವಿಕ್ಕುಗಳ್ವೆರಸಿ ವೇದವ್ಯಾಸ ।
ಪರಮ ಋಷಿ ಗಂಗೆಯೊಳ್ ಜಲದೇವತೆಯನರ್ಚಿಸಿದ ಮಂತ್ರಿತೋದಕವನು ॥
ವರ ಪುಷ್ಪ ಪಲ್ಲವದ ಪೊಂಗಳಸಮಂ ತುಂಬಿ ।
ಕರದೊಳನಸೂಯೆಗೀಯಲ್ಕವಳರುಂಧತಿಯು ।
ಶಿರಕೆ ಪೊರಿಸಿದೊಡಾಕೆ ರುಕ್ಮಿಣಿಯ ಸಿರಿಮುಡಿಯೊಳಿರಿಸಿ ನಗುತಿಂತೆಂದಳು ॥೧॥

ದೇವಿ ಸಿರಿಮುಡಿಗಲರ್ ಪೊರೆಯಹುದು ನಿನಗೆ ನೀರ್ ।
ತೀವಿರ್ದ ಪೊಂಗಳಸಮಿದು ತಿಣ್ಣಮಾಗದೆಂ ।
ದಾ ವಶಿಷ್ಠನ ರಮಣಿ ರುಕ್ಮಿಣಿಗೆ ವಿನಯದಿಂ ನುಡಿದೊಡೆ ಸುಭದ್ರೆ ಕೇಳ್ದು ॥
ಗೋವರ್ಧನವನಾಂತ ವಿಶ್ವಕುಕ್ಷಿಯ ನೆದೆಯೊ ।
ಳಾವಗಂ ಧರಿಸಿಕೊಂಡಿರ್ದ ಮಾನಿನಿಗೆ ಬಿ ।
ಣ್ಣಾಪುದು ಪತಿವ್ರತಾಧರ್ಮಮಿದಕಳುಕಲೇತಕೆ ತಾಯೆ ನೀನೆಂದಳು ॥ ೨ ॥

ನಸುನಗುತರುಂಧತಿಗೆ ಬಳಿಕ ರುಕ್ಮಿಣಿ ನುಡಿದ।
ಳುಸಿರಲಂಜುವೆನೀ ಸುಭದ್ರೆಯ ವಿಶೇಷ ಗುಣ।
ದೆಸಕಮಂ ನಮ್ಮಂತೆ ಬಿಡದೆ ರಮಣನ ನೆದೆಯೊಳಾವಗಂ ಧರಿಸಳೊಮ್ಮೆ ॥
ಒಸೆದೊಡೆ ವಿಚಾರಿಸುವಳಲ್ಲದೊಡೆ ವಲ್ಲಭನ।
ಗಸಣಿಯಂ ಪಾರಳ್ ಪತಿವ್ರತಾಧರ್ಮದೊಳ್ ।
ಪೊಸತೆಂದು ಸರಸವಂ ಮಾಡುತ್ತೈದೆಯರೊಡನೆ ಪೊಂಗಳಸಮಂ ತಾಳ್ದಳು ॥೩॥

ಅರುವತ್ತುನಾಲ್ಕು ದಂಪತಿಗಳೊಪ್ಪುವ ಗಂಗೆ ।
ದೊರೆಯಿಂದೆ ಬಳಿಕ ಮಖ ಮಂಟಪಕೆ ನೀರ್ದುಂಬಿ ।
ಮೆರೆವ ಪೊಂಗಳಸಂಗಳಂ ಕೊಂಡು ಬಂದರುತ್ಸವದಿಂದೆ ಮುನಿಗಳೊಡನೆ ॥
ಕರೆದುವನಿಬರ ಮೇಲೆ ಮುತ್ತುಗಳ ಸೇಸೆಗಳ್ ।
ನೆರೆ ಮೊಳಗಿದುವು ಸಕಲ ವಾದ್ಯಂಗಳಭ್ರದೊಳ್।
ತುರುಗಿತನಿಮಿಷ ವಿತತಿ ಕೌತುಕಕೆ ನೆರೆದುದು ಮಹಾಜನಂ ಮೇದಿನಿಯೊಳು ॥೪॥

ಆ ಪುಣ್ಯ ಸಲಿಲದೊಳ್ ಸೇಚನಂಗೈದೆಸೆವ ।
ಯೂಪದೊಳ್ ಕಟ್ಟಿ ಪೂಜಿಸಿದ ರಮಲಾಶ್ವಮಂ ।
ಭೂಪನುಂ ದ್ರೌಪದಿಯುಮಭಿಷಿಕ್ತರಾದರ್ ಸುಮಂತ್ರಿತ ಜಲಂಗಳಿಂದೆ ॥
ವ್ಯಾಪಿಸಿದ ವಿಧಿ ವಿಧಾನಂಗಳಿಂದಾವುದುಂ ।
ಲೋಪವಿಲ್ಲದೆ ನಡೆಯತೊಡಗಿತು ಮಹಾಧ್ವರಂ ।
ತಾಪಸ ಪ್ರತತಿ ಸಂದಿಗ್ಧಂಗಳಂ ತಿಳಿದು ಸಮ್ಮತದೊಳಹುದೆನಲ್ಕೆ ॥ ೫ ॥

ಬಂದ ಮುನಿಗಳ ಪಾದಮಂ ತೊಳೆದು ಸತ್ಕಾರ ।
ದಿಂದೆ ಪೂಜಿಸಿ ನಿವಾಸ ಸ್ಥಾನಮಂ ಕೊಟ್ಟು ।
ವಂದಿಸುವ ನಚ್ಯುತಂ ತಾನೆ ಕುಳ್ಳಿರ್ಪೊಡಾಸನವ ನೀವಂ ಸಾತ್ಯಕಿ॥
ಚಂದನ ಸುಕರ್ಪೂರ ಕುಸುಮ ತಾಂಬೂಲಂಗ ।
ಳಿಂದಲಂಕರಿಸುವಂ ಪ್ರದ್ಯುಮ್ನರವರವರ ॥
ಮಂದಿರಕೆ ಬೇಕಾದ ವಸ್ತುಗಳ ನೊದವಿಸುವನಡಿಗಡಿಗೆ ಸಹದೇವನು ॥ ೬॥

ಸಕಲ ಜನ ಜಾಲಮಂ ತಾರತಮ್ಯನವರಿತು ।
ನಕುಲನಾದರಿಸುವಂ ಪಗಲಿರುಳ್ ಪರಿಮಳೋ ।
ದಕವ ನಳವಡಿಸುವಂ ಕರ್ಣಸುತನೆಲ್ಲರಾರೈಕೆ ಹೈಡಿಂಬಿಗಾಯ್ತು ॥
ಶಕಟ ಸಂದೋಹದಿಂ ಪೂಡಿಸುವ ಸಂಭಾರ ।
ನಿಕರಕಧಿಪತಿಯಾದನನಿರುದ್ಧನನ್ನವಾ । [॥ ೭ ॥
ಟಿಕೆಗಳೊಳ್ ಪಾಕಮಂ ಮಾಡಿಸುವ ಮಣಿಹಮಂ ಕೃತವರ್ಮಕಂ ತಾಳ್ದನು

ಯೋಜನತ್ರಯದ ಚಪ್ಪರದೊಳೆಡವಿಡದೆ ನಾ ।
ನಾ ಜನಕೆ ಬೇಕಾದ ಷಡ್ರಸದ ಶಾಲ್ಯನ್ನ ।
ಭೋಜನವನೈದೆ ಮಾಡಿಸುತಿಹುದು ಸಾಂಬಾದಿ ಯಾದವರ್ಗಾಯ್ತು ಬಳಿಕ ॥
ಶ್ರೀ ಜನಾರ್ದನನ ಸಾನ್ನಿಧ್ಯಮಾಗಿರೆ ಧರ್ಮ ।
ಜನ ಮಹಾಧ್ವರಂ ಸಾಂಗಮಾಗದೆ ಮೇಣ್ ಸ ।
ರೋಜನಾಭಂ ತಾನೆ ಯಜ್ಞಸ್ವರೂಪನಲ್ಲವೆ ಭೂಪ ಹೇಳೆಂದನು ॥ ೮ ॥

ಸುರೆಯನೊಂದಲ್ಲದೆ ಪಯೋಧಿಗಳನಾರ ನಾ ।
ಕರುಷಣಂಗೈದರೆನೆ ಸುರಸಂಗಳೆಸೆಯೆ ಕುಲ ।
ಗಿರಿಗಳಂ ನಗುವಂತೆ ಮಿರುಪ ಶಾಲ್ಯೋದನದ ರಾಶಿಗಳ್ ಕಂಗೊಳಿಸಲು ॥
ಪರಿಪರಿಯ ಭಕ್ಷ್ಯ ಪಾಯಸ ವಿವಿಧ ಶಾಕಾದಿ ।
ಪರಿಕರಮದೆಂತೊದಗಿದುವೊ ಕೃಷ್ಣಸುರಭಿ ತಾಂ ।
ಪೊರೆಯೊಳಿರಲರಿದಾವುದೆಂಬಿನಂ ತಣಿದುಂಡರಾಮುಖದೊಳಖಿಳ ಜನರು ॥ ೯ ॥

ಊಟದ ಸುಗಂಧಾನುಲೇಪನದ ಕಪ್ಪುರದ ।
ವೀಟಿಕಾವಳಿಯ ಮಾಲ್ಯಾಂಬರ ವಿಭೂಷಣದ ।
ಮಾಟು ಸಿಂಗರದಿಂಪುವಡೆಯೆ ಮಿಗೆ ಬಯಸಿದ ಸುವಸ್ತುಗಳನಿತ್ತು ॥
ಪಾಟಿಸುವ ಭೀಮ ಫಲ್ಗುಣರ ಸನ್ಮಾನದ ಸ ।
ಘಾಟಿಕೆಯ ನೃಪ ಕುಲದ ಪುಣ್ಯಮುನಿಗಳ ಯಜ್ಞ ।
ವಾಟದತಿ ಕೌತುಕದ ಮಾಳ್ಕೆಯಂ ಕಂಡು ನಲಿದಾಡಿತು ಜನಂ ಮುದದೊಳು ॥ ೧೦ ॥

ಹೇಮ ವಸ್ತ್ರಾಭರಣ ಮುಕ್ತಾಫಲಂಗಳಂ ।
ಸಾಮಜ ತುರಂಗ ರಥ ರತ್ನ ಜಾಲಂಗಳಂ ।
ಗೋ ಮಹಿಷಿ ದಾಸೀ ನಿಕರಮಂ ಮೃಗಾಜಿನ ಕಂಬಳಾದಿಗಳನು ॥
ಚಾಮರ ವ್ಯಜನಾತಪತ್ರ ಯಾನಂಗಳಂ ।
ಭೂಮಿಗಳ ನಗುರುಚಂದನ ಮುಖ್ಯವಸ್ತುವಂ ।
ಭೀಮ ಫಲ್ಗುಣರಖಿಳ ಯಾಚಕಾವಳಿ ತಣಿಯೆ ಕುಡುತಿರ್ದರಾದರದೊಳು ॥೧೧॥

ಯಾಗ ದೀಕ್ಷೆಯ ನೃಪಂ ಮಂತ್ರವಾರಿ ಸ್ನಾತ ।
ನಾಗಿ ಬಳಿಕನುಪಮ ಸುವರ್ಣಚಯನದ ಪೊರೆಗೆ ।
ಪೋಗಿ ಹಯಮಂ ತರಿಸಲುಚ್ಚರಿಸಿ ಯಜ್ಞಪಶುವಾದುದೆಂದಭಿವರ್ಣಿಸೆ ॥
ಮೇಗೆ ಶ್ರುತಿವಾಕ್ಯಂಗಳಂ ಪಠಿಸುತಿರೆ ಘೋಟ ।
ಪೋಗು ನೀನಶ್ವಲೋಕದೊಳಮರಪದಮಪ್ಪ ।
ದೀಗ ನಿನಗೆಂದೆಂದುಮಳಿವಿಲ್ಲದುತ್ತಮ ಸ್ವರ್ಗಮಂ ಪಡೆಯೆಂದನು ॥ ೧೨ ॥

ನೃಪನ ಮಾತಂ ಕೇಳ್ದು ವಾಜಿ ತಲೆಗೊಡಹಿ ಮುರ ।
ರಿಪುವನೀಕ್ಷಿಸುವಭಿಪ್ರಾಯಮಂ ಮೋದದಿಂ ।
ವಿಪುಲ ಮತ ನಕುಲಂಗೆ ಸೂಚಿಸಿದೊಡಾತನದರಿಂಗಿತವನರಿದು ಬಳಿಕ ॥
ತಪನಸುತ ನಂದನಂಗೆಂದನವಧರಿಸು ಹಯ ।
ಮುಪರಿಲೋಕದೊಳಶ್ವಪದವಿಯಂ ತಾನೊಲ್ಲ ।
ನುಪಮೆಗೈದದ ಕೃಷ್ಣ ಸಾಯುಜ್ಯಮಂ ಪಡೆವೆನೆಂದೆಂಬುದೆನ್ನೊಳೆಂದು ॥ ೧೩ ॥

ಫಣಿ ಶಯನ ಸಾನ್ನಿಧ್ಯಮಿಂತಿಲ್ಲದೀಶ್ವರಾ ।
ರ್ಪಣಮಲ್ಲದನ್ಯ ಯಜ್ಞಂಗಳೊಳ್ ಮಡಿದ ಪಶು ।
ಗಣಕೆ ಮೇಣಾಕರ್ತೃಗಳ್ಗತಿಶಯ ಸ್ವರ್ಗಭೋಗಮಾದಪುದು ನಿನ್ನ ॥
ಪ್ರಣುತ ಸತ್ಕ್ರತು ಫಲಂ ಶ್ರೀಕಾಂತನಾ ಕಾ ।
ರಣದಿಂದೆ ಕೃಷ್ಣನ ಶರೀರಮಂ ಪೊಗುವೆನೀ ।
ಕ್ಷಣದೊಳಿದನೆಲ್ಲರುಂ ನೋಡಲೆನುತಿದೆ ತುರಗಮೆಂದು ನಕುಲಂ ನುಡಿದನು ॥೧೪॥

ತುರಗದಂತರ್ಭಾವಮಂ ತಿಳಿದು ನಕುಲನಿಂ ।
ತರಸಂಗೆ ಬಿನ್ನಪಂಗೈದುದಂ ಕೇಳ್ದಖಿಳ ।
ಧರಣೀಶ್ವರರ್ ಮುನಿಗಳಂಗನಾನಿಕುರುಂಬ ಮಾಶ್ಚರ್ಯಮಂ ನೋಡಲು ॥
ನೆರೆದುದು ಸುಮಂತ್ರಿತದ ಯೂಪದೊಳ್ಕಟ್ಟುತ ।
ಧ್ವರ ಹಯವ ನಭಿಮಂತ್ರಿಸಿದರಚ್ಯುತನಮುಂದೆ ।
ಪರಮಋಷಿಗಳ್ ಬಳಿಕ ಭೀಮನಂ ಕರೆದು ಮುದದಿಂ ಧೌಮ್ಯನಿಂತೆಂದನು॥ ೧೫ ॥

ಈಕ್ಷಿಪುದು ಸಕಲ ಜನಮೆಲೆ ವೃಕೋದರ ನಾಂ ಪ ।
ರೀಕ್ಷೆಯಂ ತೋರಿಸುವೆನೀತುರಂಗಮದೊಳೊಂ ।
ದೇಕ್ಷಣಂ ಖಡ್ಗಮಂ ಕೊಂಡು ನಿಶ್ಚಲನಾಗಿ ನಿಲ್ವುದೆಂದಾ ಧೌಮ್ಯನು ॥
ಪ್ರೋಕ್ಷಿಸಿ ಕರಾಗ್ರದಿಂ ಪಿಡಿದು ಹಯುಡೆಡಗಿವಿಯ ।
ನಾಕ್ಷೋಭದಿಂ ಸೀಳಿದೊಡೆ ನೆತ್ತರಿಲ್ಲದೆ ಮ ।
ಹಾಕ್ಷೀರಧಾರೆ ಪೊರಮಟ್ಟುದು ಸಮಸ್ತಲೋಕಂ ಕಂಡು ಬೆರಗಾಗಲು ॥ ೧೬ ॥

ಮತ್ತೆ ಧೌಮ್ಯಂ ಭೀಮಸೇನನಂ ಕರೆದು ಪುರು ।
ಷೋತ್ತಮಂ ಪ್ರೀತನಪ್ಪವೊಲಿನ್ನು ಬಾಳಿಂದ ।
ಕತ್ತರಿಸು ಕುದುರೆಯ ತಲೆಯನೆಂದು ನೇಮಿಸಿದೊಡನಿಲಸುತನಾ ಕ್ಷಣದೊಳು ॥
ಒತ್ತಿಡಿವ ವಾದ್ಯಘೋಷದೊಳಮಲ ಬರ್ಹಗಳ ।
ಬಿತ್ತರದ ಪರಿಪೂತ ವಾಜಿ ಶಿರಮಂ ಛೇದಿ ।
ಸುತ್ತಿರಲದಿಳೆಗೆ ಬೀಳದೆ ನಭಸ್ಥಳಕಡರ್ದಡಗಿತಿನಮಂಡಲದೊಳು ॥ ೧೭ ॥

ಪರಿಶುದ್ಧವಾಗಿರ್ಪುದೀ ತುರಗಮೆಂದೊರೆದು ।
ಹರಿ ಹೊಯ್ದನದರುರಸ್ಥಳದೊಳುರ್ವಿಗೆ ಬಿದ್ದು ।
ದಿರದೆ ಪೊರಮಟ್ಟು ಜೀವಾತ್ಮನತಿತೇಜದಿಂದಚ್ಯುತಾಸ್ಯದೊಳಡಗಲು ॥
ವರ ಮುನಿಗಳಮಲ ಧರ್ಮಮಿದೆಂದರೆಲೆ ಯುಧಿ ।
ಷ್ಠಿರ ಪೂರ್ವ ಯುಗದಧ್ವರಂಗಳೊಳ್ ಕಾಣೆವೀ । ॥ ೧೮ ॥
ಪರಿ ಪವಿತ್ರದ ಪಶುವನಿದು ನಿನಗೆ ದೊರೆಕೊಂಡು ಕ್ರತು ಸಫಲಮಾಯ್ತೆಂದರು ॥

ಐವೇಳ್ವೆನಾಶ್ಚರ್ಯಮಂ ಬಳಿಕ ವಾಜಿಯ ಕ ।
ಳೇವರಂ ಕರ್ಪೂರಮಾದುದತಿಶುಭ್ರದಿಂ ।
ಭಾವಿಸಿ ಮಹಾಮುನಿಗಳಿದುವೆ ಕೃಷ್ಣನ ಮಹಿಮೆಯೆಂದು ವಿಸ್ಮಿತರಾಗಲು ॥
ಭೂವರಂ ಹರಿಸಹಿತ ಪತ್ನಿಯಂ ಕೂಡಿ ಕೊಂ ।
ಡಾವೇಷ್ಟಿಸಿದ ಸಕಲ ಬಾಂಧವರ ಗಡಣದಿಂ ।
ಪಾವಕನ ಮುಂದೆ ಕುಳ್ಳಿರ್ದನದರಿಂದೆ ಹೋಮಂಗಳಂ ಮಾಡಿಸಲ್ಕೆ ॥ ೧೯ ॥

ಧಾರಿಣಿಗೆ ಕುಪ್ಪಳಿಸಿದಾ ತುರಗದೊಡಲ ಕ।
ರ್ಪೂರಮಂ ಸ್ರುವದಿಂದೆ ಸಂಗ್ರಹಿಸಿ ಶಾಸ್ತ್ರ ಪ್ರ।
ಕಾರದಿಂದಾಗ ವೇದವ್ಯಾಸ ಮುನಿಪನಮರೇಂದ್ರನಂ ಕರೆದು ಬರಿಸಿ॥
ಈ ರಾಜಕುಲತಿಲಕನಧ್ವರದೊಳೀವ ಘನ।
ಸಾರಾಹುತಿಯನಿದ ಸ್ವೀಕರಿಸು ಮುಂದೆ ನಿನ।
ಗಾರು ಕೊಡುವವರಿಲ್ಲ ಕಲಿಯುಗದೊಳೀ ತೆರದೊಳೆನೆ ಶಕ್ರನಿಂತೆಂದನು ॥ ೨೦ ॥

ಸರ್ವ ನಕ್ಷತ್ರ ಸಂಯುತದ ಗುರುವಾರವಾ।
ಗಿರ್ಪುದಿಂದೆಲೆ ಮುನೀಶ್ವರ ಮಹೀಪಾಲಂ ಸ।
ಮರ್ಪಿಸುವ ಘನಸಾರಾಹುತಿಯನಗ್ನಿ ಮುಖದಿಂದೆ ನೀನೆನಗಿತ್ತೊಡೆ॥
ದರ್ಪದಿಂ ತೃಪ್ತನಾದಪೆನೆಂದು ಸುರಪನೆ।
ಲ್ಲರ್ಪೊಗಳೆ ಪ್ರತ್ಯಕ್ಷಮಾಗಿ ಬಂದಿರಲಾಗ।
ಕರ್ಪೂರಮಂ ಸ್ರುವದೊಳನಲನೊಳ್ ಬೇಳಿದಂ ವ್ಯಾಸಮುನಿ ಮಂತ್ರದಿಂದೆ॥೨೧॥

ಪ್ರತ್ಯಕ್ಷಮಾದ ಶಕ್ರಾದಿ ದೇವತೆಗಳ್ಗೆ।
ಶ್ರುತ್ಯುಕ್ತ ಮಂತ್ರವಿಧಿಗಳ ವಿಧಾನಂಗಳಿಂ।
ದತ್ಯಧಿಕ ಘನಸಾರದಾಹುತಿಗಳಂ ಯಥಾಕ್ರಮದಿಂದೆ ಹುತವಹನೊಳು॥
ಸತ್ಯ ಸಂಪನ್ನ ವೇದವ್ಯಾಸನೀಯಲ್ಕೆ।
ಸುತ್ಯಾಗದೊಳ್ ಸವನಸಮಯದೊಳ್ ವಿರಚಿಸುವ।
ಕೃತ್ಯಂಗಳಿಂದೆ ನಡೆದುದು ಮಖಂ ತ್ರಿಜಗದ ಚರಾಚರಂ ಮಿಗೆ ತಣಿಯಲು ॥ ೨೨ ॥

ಸಾಕ್ಷಾತ್ಸುಯಜ್ಞಸ್ವರೂಪನಂತರ್ಯಾಮಿ।
ಸಾಕ್ಷಿಯಾಗಿರ್ದು ಮಾಡಿಸುವವಂ ಶ್ರೌತ ವಿ।
ದ್ಯಾಕ್ಷಮನೆನಿಪ್ಪ ಧೌಮ್ಯನೆ ಕರ್ಮ ಕರ್ತೃ ವಿಂಶತಿ ಕಮಲ ಸಂಭವರನು॥
ಈಕ್ಷಿಸಿದ ಬಕದಾಲ್ಭ್ಯನೇ ಬ್ರಹ್ಮನಾಚಾರ್ಯ।
ನೇ ಕ್ಷಿತಿಸುರಾಗ್ರ್ಯ ವೇದವ್ಯಾಸನಧ್ವರಕೆ।
ದೀಕ್ಷಿತನೆ ಯಮಜಂ ಮಹಾಮುನಿಗಳೇ ಋತ್ವಿಜರ್ ಪೊಸತಿದೆನಿಸದಿಹುದೆ॥ ೨೩ ॥

ಆಹುತಿಗಳಂ ಕೊಂಡು ಮಿಗೆ ತೇಜದಿಂದೊಪ್ಪು।
ವಾ ಹುತವಹ ಜ್ವಾಲೆಗಳ ಘನ ದರ್ಶನದೊ।
ಳಾ ಹೋಮಧೂಮ ಸಂಸ್ಪರ್ಶನದೊಳಾ ಕರ್ಮಕೃತ ಸೋಮಪಾನದಿಂದೆ॥
ಆ ಹೋತೃದುರು ಮಂತ್ರ ಘೋಷಣಶ್ರವಣದಿಂ।
ದಾ ಹವಿರ್ಗಂಧದಾಘ್ರಾಣದಿಂದಾ ಮಖದೊ।
ಳಾ ಹಿಮಕರಾನ್ವಯ ಲಲಾಮನೆಸೆದಂ ಪೂತನಾಗಿ ಸಂತೋಷದಿಂದೆ ॥ ೨೪ ॥

ಯಾಗದಿಂ ತಣಿದು ಪಾವನಮಾದುದಿಳೆ ಹವಿ ।
ರ್ಭಾಗದಿಂ ತುಷ್ಟಿವಡೆದುದು ದೇವತಾವಳಿ ಸ ।
ರಾಗದಿಂದಸುರಾರಿ ಸಂತುಷ್ಟನಾಗಿ ತೆಗೆದಪ್ಪಿ ಭೂಪಾಲಕಂಗೆ ॥
ಈಗ ನಿನ್ನಧ್ವರಂ ಸಾಂಗದಿಂ ಸಂಪೂರ್ಣ ।
ಮಾಗಿ ಮುಗಿದುದು ಮಾಳ್ಪುದವಭೃತ ಸ್ನಾನಮಂ ।
ಭಾಗೀರಥಿಯೊಳೆಂದು ನೇಮಿಸಿದನಖಿಳ ಮುನಿಜನಮೈದೆ ಕೊಂಡಾಡಲು ॥ ೨೫ ॥

ವಿಪ್ರ ವಧೆ ಮೊದಲಾದ ಬಹು ಪಾಪ ಸಂಚಿತಂ ।
ಕ್ಷಿಪ್ರದಿಂ ಪೋಗಿ ಪರಿಶುದ್ಧಮಹುದೆಂಬ ವೇ ।
ದಪ್ರಮಾಣದ ವಾಜಿಮೇಧಾವಭೃತಮಂ ಮುನೀಶ್ವರರ್ ಮಾಡಿಸಲ್ಕೆ ॥
ಸುಪ್ರಸನ್ನತೆಯಿಂದೆ ಸಾನ್ನಿಧ್ಯಮಾಗಿ ಬಿಡ ।
ದಪ್ರಮೇಯಂ ತಾನಿರಲ್ಕೆ ನೃಪ ಮೌಳಿ ಪರ ।
ಮಪ್ರೀತನಾಗಿ ತೊಳಗಿದನಧ್ವರಂ ಮುಗಿಯೆ ರಾಜ ಮುನಿಗಣದ ನಡುವೆ ॥ ೨೬ ॥

ರಮಣಿಸಹಿತರಸನಭಿಷಿಕ್ತನಾದಂ ಯಥಾ ।
ಕ್ರಮದಿಂದೆ ಸೋಮ ಪಾನಂಗೈದರೆಲ್ಲರುಂ ।
ವಿಮಲ ಹೋಮಂಗಳ ಪುರೋಡಾಶ ಶೇಷಮಂ ಪ್ರಾಶಿಸಿದರುತ್ಸವದೊಳು ॥
ತಮತಮಗೆ ವಂದಿಗಳ್ ಕೊಂಡಾಡೆ ಗಾಯಕರ್ ।
ತ್ತಮರೊಲಿದು ಪಾಡೆ ನರ್ತನದ ಮೇಳವದ ಸಂ।
ಭ್ರಮದಿಂದೆ ವೀಣಾದಿ ವಾದಿತ್ರ ಘೋಷಮಂ ಮಾಡೆ ನೃಪವರನೆಸೆದನು॥ ೨೭ ॥

ವಿನುತ ರತ್ನಾದ್ರಿ ಶಿಖರಸ್ಥಮಾಗಿರುತಿರ್ಪ ।
ಕನಕ ವೃಷಮಂ ಕೊಟ್ಟನವನಿಪಂ ಬಕದಾಲ್ಭ್ಯ ।
ಮುನಿಗೆ ಬಳಿಕೊಂದೊಂದು ರಥವನೊಂದೊಂದಿಭವನೀರೈದು ವಾಜಿಗಳನು ॥
ಅನುಚರ ಚತುಷ್ಟಯುವನೊಂದು ಕೊಳಗದ ಮುತ್ತ ।
ನನುಪಮ ಸುವರ್ಣ ಶತ ಭಾರಮಂ ನೂರು ಕಾಂ ।
ಚನ ವಿಭೂಷಿತ ಸುರಭಿಗಳನಿತ್ತು ಮನ್ನಿಸಿದನಖಿಳ ಋತ್ವಿಕ್ಕುಗಳನು ॥ ೨೮ ॥

ಇಂತಖಿಳ ಋತ್ವಿಕ್ಕುಗಳ್ಗಿತ್ತು ಮನ್ನಿಸಿದ ।
ನಂತಾದರಿಸಿದನೆಲ್ಲಾ ದ್ವಾರ ಪಾಲಕರ ।
ನಂತರಿಸದುಳಿದ ಮುನಿ ನಿಕರಕಿಬ್ಬಾ ದಾನವಂ ಕೊಟ್ಟನುಚಿತದಿಂದೆ ॥
ತಿಂತಿಣಿಸಿ ನೆರೆದಿಹ ಸಮಸ್ತ ಭೂನಿರ್ಜರರ ।
ಸಂತತಿಗಳಂ ತಣಿಸಿದಂ ಮಹಾಧನದಿಂದೆ ।
ನಂತರದೊಳರಸುಪಚರಿಸಿದಂ ಚಂದ್ರಹಾಸಾದಿ ಪೃಥ್ವೀಶ್ವರರನು ॥ ೨೯ ॥

ಘೋಟಕ ಸಹಸ್ರಮಂ ಶತಶತ ಗಜಂಗಳಂ ।
ಕೋಟಿ ಪರಿಮಿತ ಸುವರ್ಣಂಗಳಂ ಮಣಿಮಯ ಕಿ ।
ರೀಟಾದಿ ಭೂಷಣಾವಳಿಗಳಂ ಕೊಟ್ಟಖಿಳ ಭೂಪಾಲರಂ ಮನ್ನಿಸಿ ॥
ಪಾಟಿ ಮಿಗೆ ರುಕ್ಮಿಣೀದೇವಿ ಮೊದಲಾಗಿಹ ವ ।
ಧೂಟಿಯರ ವರ್ಗಮಂ ನೃಪತಿ ಸತ್ಕರಿಸಿದಂ ।
ಮಿಾಟೆನಿಪ ವಿವಿಧ ರತ್ನಾಭರಣ ರಾಜಿಗಳನಿತ್ತಲಂಕಾರದಿಂದೆ ॥ ೩೦ ॥

ನಯದೊಳರಸಂ ಬಳಿಕ ಮುನಿನಿಕರ ಭೂಪಾಲ
ಚಯದಿಂದೆ ಸಕಲ ಜನ ಜಾಲದಿಂದೆಸೆವ ಮಣಿ ।
ಮಯ ಸಭಾ ಮಧ್ಯದೊಳ್ ದಿವ್ಯ ಸಿಂಹಾಸನದ ಮೇಲೆ ಮುರಹರನನಿರಿಸಿ ॥
ಪ್ರಿಯದಿಂದಲಂಕಾರ ಪೂಜೆಗಳೊಳುಪಚರಿಸಿ ।
ಹಯಮೇಧ ಫಲವನಚ್ಯುತ ಕರದೊಳೀಯಲ್ಕೆ । [ಗಳು ॥ ೩೧ ॥
ಜಯ ಜಯೆಂದುದು ಲೋಕವಲರ ಮಳೆಗರೆದು ಮೊಳಗಿದವು ಸುರದುಂದುಭಿ

ಬಳಸಿದ ಮಹೀಪಾಲರೊಡಹುಟ್ಟಿದರ್ ಬಂಧು॥
ಬಳಗಂಗಳಖಿಳ ಮುನಿ ಮುಖ್ಯರುಪಚಿತರಾಗೆ ।
ನಳಿನಾಂಬಕನ ಕರದೊಳಧ್ವರದ ಸುಕೃತಮಂ ಕೊಟ್ಟು ತನ್ನಮಳ ಮುಖಕೆ
ಕಳಸಮಿಡೆ ಮೂಜಗಂ ಮಿಗೆ ತಣಿದು ಕೊಂಡಾಡ ।
ಲುಳಿದ ಯೂಪಂಗಳೊಳ್ ಕಟ್ಟಿರ್ದ ಪಶುಗಳಂ ।
ಕಳೆದೆಲ್ಲಮಂ ಬಿಡಿಸಿ ತೊಳಗಿ ಬೆಳಗಿದನಿಂದ್ರ ತೇಜದಿಂ ಮನುಜೇಂದ್ರನು ॥ ೩೨ ॥

ವಾಜಿ ಮೇಧಕ್ರತು ಸಮಾಪ್ತಮಾದುದು ಬಳಿಕ ॥
ರಾಜ ಮುನಿನಿಕರಮಂ ಪ್ರಾರ್ಥಿಸಿ ವೃಕೋದರಂ ।
ರಾಜಿಸುವ ಕನಕಮಯ ಮಂಡಪದೊಳರುಣ ಕಂಬಳದ ಪಸೆಗಳ ಮಿಸುನಿಯ ॥
ಭಾಜನದ ಕೆಲ ಬಲದ ರತ್ನ ದೀಪದ ಪೊನ್ನ ।
ಹೂಜಿಗಳ ಪನ್ನೀರ ಪರಿವಿಡಿಯಲೆಡೆಯಾಗೆ ।
ಭೋಜನಕೆ ಬೇಕಾದ ಭಕ್ಷ್ಯ ಭೋಜ್ಯಾದಿಗಳನೊದವಿಸಿದನಾದರದೊಳು ॥ ೩೩ ॥

ನಾನಾ ವಿಧದ ರಸದೊಳೆಸೆವ ಪರಿಕರದನ್ನ ।
ಪಾನಾದಿ ಭಕ್ಷ್ಯಭೋಜ್ಯಾವಳಿಗಳಿಂದೆ ಪವ ।
ಮಾನಾತ್ಮಜಂ ಮಹೀಸುರ ತತಿಯನಾದರಿಸಿ ಭೋಜನಾನಂತರದೊಳು ॥
ಭೂನುತ ಸುಗಂಧ ಕರ್ದಮದಿಂದೆ ವಿತತ ಪ್ರ ।
ಸೂನಾವಳಿಗಳಿಂದೆ ವೀಟಿಕಾ ವಿಭವದಿಂ ।
ದಾನಾತಿಶಯದಿಂದೆ ಸತ್ಕರಿಸಿ ತಣಿಪಿದಂ ಪ್ರತಿದಿನಂ ಪ್ರೀತಿಯಿಂದೆ ॥ ೩೪ ॥

ಬಹಳ ಸನ್ಮಾನಮಂ ತಳೆದಖಿಳ ಭೂಸುರ ನಿ ।
ವಹವೈದೆ ಕೊಂಡಾಡಿತಂಬುಜದಳಾಂಬಕನ ।
ಮಹಿಮೆಯಂ ಧರ್ಮಜನ ಚರಿತಮಂ ಭೀಮನ ವಿಶೇಷ ಗುಣಮಂ ಪಾರ್ಥನ ॥
ವಿಹಿತ ವಿನಯಂಗಳಂ ನಕುಲನ ವಿವೇಕಮಂ ।
ಸಹದೇವನುಚಿತಮಂ ಧೌಮ್ಯನ ವಿಚಾರಮಂ ।
ಮಹಿಯ ಮನ್ನೆಯರ ಸನ್ಮೈತ್ರಿಯಂ ಮುನಿ ವರಾಧಿಕ್ಯಮಂ ತತ್ಕ್ರತುವನು ॥೩೫॥

ಬಕದಾಲ್ಭ್ಯ ಮೊದಲಾದ ಋಷಿಗಳಂ ಕೃಷ್ಣಾದಿ ।
ಸಕಲ ಭೂಪಾಲರಂ ಕೂಡಿಕೊಂಡವನೀಶ ।
ಮುಕುರನಧ್ವರ ಸಭಾಸ್ಥಾನದೊಳ್ ನಾನಾ ಸುಕಥೆಗಳಂ ಕೇಳುತಿರ್ದು ॥
ವಿಕಸಿತ ಹೃದಯನಾಗಿ ಮುದದಿಂದೆ ಭೂ ದೇವ ।
ನಿಕರಕುಳಿವರ್ಥಂಗಳೆಲ್ಲಮಂ ಚೆಲ್ಲಿ ಸಮ ।
ಧಿಕ ವೈಭವಂಗಳಂ ನಗರಪ್ರವೇಶಮಂ ಮಾಡಿದಂ ಸಂಭ್ರಮದೊಳು ॥ ೩೬ ॥

ತೃಪ್ತ ಭೋಜನದಿಂದೆ ಭೂರಿ ದಕ್ಷಿಣೆಗಳಿಂ
ದಿಷ್ಟ ದಾನದೊಳಾದ ವಸ್ತು ಸಂಮೋಹದಿಂ ।
ತುಷ್ಟಿನಡೆದಖಿಳ ಭೂಸುರ ತತಿ ನರೇಂದ್ರನಂ ಪರಸಿ ಬೀಳ್ಕೊಂಡ ಬಳಿಕ ॥
ದೃಷ್ಟಿಗಾಶ್ಚರ್ಯಮಾಗಿಹ ಯಜ್ಞಮಂ ಪೊಗಳು ।
ತಷ್ಟ ದಿಗ್ವಳಯದಾಶ್ರಮ ಜನಪದಂಗಳ್ಗೆ ।
ಹೃಷ್ಟತೆಯೊಳೈದಿದುದು ತಮತಮಗೆ ಪೊತ್ತ ಬಹುಧನದ ಭಾರಂಗಳಿಂದೆ ॥ ೩೭ ॥

ರೋಮಶ ವಶಿಷ್ಠ ಬಕದಾಲ್ಭ್ಯ ವೇದವ್ಯಾಸ ॥
ವಾಮದೇವಾದಿ ಮುನಿ ಮುಖ್ಯರವನೀಶನಂ ।
ಪ್ರೇಮದಿಂ ಪರಸಿ ಮಾನಿತರಾಗಿ ಬೀಳ್ಕೊಂಡು ತಳರ್ದರಾಶ್ರಮಕೆ ಬಳಿಕ ॥
ಭೂಮಿಪತಿಗಳನೆಲ್ಲರಂ ಸಕಲ ಯಾದವ ।
ಸ್ತೋಮ ಸಹಿತಂಬುಜದಳಾಕ್ಷನಂ ಸತ್ಕರಿಸಿ ।
ಭೀಮ ಪಾರ್ಥರನೊಡನೊಡನೆ ಕಳುಹಿದಂ ಯುಧಿಷ್ಠಿರನವರವರ ನಗರಿಗೆ ॥೩೮ ॥

ಸಂಭಾವಿಸಿದನಧ್ವರದೊಳೆಲ್ಲರಂ ಬಳಿಕ ।
ಸಂಭೋಗಮರ್ಜುನಂಗಾ ಪ್ರಮೀಳೆಯು ಕೂಡೆ।
ಸಂಭವಿಸುವಂತೆ ನೇಮಿಸಿದನಿಭ ನಗರದೊಳ್ ಕುಂತಿ ಸಹಿತನುಜರೊಡನೆ ॥
ತೊಂಭತ್ತು ವರುಷಪರಿಯಂತರದೊಳೈದೆ ಸುಖ ।
ದಿಂ ಭೂವಲಯದ ಸಾಮ್ರಾಜ್ಯಮಂ ಮಾಡುತಿ ।
ರ್ದಂ ಭಾರತಾಗ್ರಣಿ ಯುಧಿಷ್ಠಿರಂ ದೇವಪುರ ಲಕ್ಷ್ಮೀಶನಾಜ್ಞೆಯಿಂದೆ ॥ ೩೯ ॥

ಈ ಚತುರ್ದಶ ಭುವನದೊಳ್ ಪಾಂಡವ ಸ್ಥಾಪ ।
ನಾಚಾರ್ಯನೆನಿಸಿಕೊಂಬುದೆ ಪೆರ್ಮೆಯೆಂದು ಮನು ।
ಜೋಚಿತದ ಲೀಲೆಯಿಂ ತಳೆದ ಯಾದವ ಸಾರ್ವಭೌಮಂ ನಿಜಾನತರ್ಗೆ ॥
ಭೂಚಕ್ರದೊಳ್ ಪಸರಿಸುವ ಕೀರ್ತಿಯಂ ಮಾಡ ।
ಲಾಚಂದ್ರಮಾಗಿರ್ಪ ತೆರದಿಂದಲೀ ಮತಿಗೆ ।
ಗೋಚರಿಸೆ ಕೃತಿಗೆ ನಾಯಕನಾದನಮರಪುರದೊಡೆಯ ಲಕ್ಷ್ಮೀಕಾಂತನು ॥ ೪೦ ॥

ಈ ಪರಿಯೊಳಾಶ್ವಮೇಧಿಕದ ವೃತ್ತಾಂತಮಂ ।
ತಾಪಸೋತ್ತಮನಾದ ಜೈಮಿನಿ ಮುನೀಶ್ವರಂ ।
ಭೂಪಾಲ ತಿಲಕ ಜನಮೇಜಯಂಗೊರೆದ ಸಂಗತಿಗಳಂ ಸಕಲ ಜನಕೆ ॥
ವ್ಯಾಪಿಸಿದ ಸುಪ್ರೌಢಿ ಮೆರೆಯೆ ಕನ್ನಡದ ಭಾ ।
ಷಾ ಪದ್ಧತಿಯೊಳಣ್ಣಮಾಂಕನ ಕುಮಾರ ಲ ।
ಕ್ಷ್ಮೀಪತಿಯ ಮುಖದಿಂದೆ ರಚಿಸಿದಂ ಕೃತಿಯಾಗಿ ಸುರಪುರದ ಲಕ್ಷ್ಮೀಶನು ॥೪೧॥

ಅಶ್ವಮೇಧಿಕ ಪರ್ವದಮಲ ಸತ್ಕಥೆ ಯಾವ ।
ನಾಶ್ವಾದಿ ನೃಪರ ಚರಿತಂಗೇಳ್ದ ಮಾನವ ।
ಗೈಶ್ವರ್ಯಮಾರೋಗ್ಯಮಾಯುಷ್ಯಮಭಿವೃದ್ಧಿ ಕಲಿನಾಶನಂ ಧರೆಯೊಳು ॥
ಆಶ್ವೇತ ಕೀರ್ತಿಸುತ ಲಾಭ ಶತ್ರುಕ್ಷಯಂ ।
ಶಾಶ್ವತ ಸ್ವರ್ಗ ಭೋಗಂಗಳಾದಪುವು ಸ ।
ರ್ವೇಶ್ವರನ ಭಕ್ತಿ ದೊರೆಕೊಂಡಪುದು ದೇವಪುರ ಲಕ್ಷ್ಮೀಶನಾಜ್ಞೆಯಿಂದೆ ॥೪೨॥

ಉಪವನ ತಟಾಕ ಪ್ರತಿಷ್ಠೆ ದೇವಾಲಯ ।
ಪ್ರಪೆಗಳ ಸಕಲ ದಾನ ಧರ್ಮೋಪಕಾರ ವೇ ।
ದ ಪುರಾಣದಪರಿಮಿತವಾದ ಪುಣ್ಯಕ್ಷೇತ್ರ ವಾಸ ತೀರ್ಥಸ್ನಾನದ ॥
ಜಪ ಹೋಮ ಸುವ್ರತ ಸಮಾಧಿ ಯೋಗಧ್ಯಾನ ।
ತಪಸುಗಳ ಹರಿಹರಾರ್ಚನೆಯ ಸುಕೃತಂಗಳಾ ।
ದಪುದು ಜೈಮಿನಿ ಭಾರತದೊಳೊಂದು ವರ್ಣಮಂ ಪ್ರೀತಿಯಿಂ ಕೇಳ್ದವರ್ಗೆ ॥೪೩॥

ತೊಳಗುವ ಸುವರ್ಣ ಭೂಷಣದಿಂದೆ ಸೇರಿಸಿದ ।
ಲಲಿತ ಮುಕ್ತಾಭರಣದಿಂದೆ ಮಿಗೆ ರಂಜಿಸುವ ।
ಪಲವಲಂಕಾರಂಗಳಿಡಿದ ಚೆಲ್ವಿನ ದೇವಪುರದ ಲಕ್ಷ್ಮೀಕಾಂತನ ॥
ವಿಲಸಿತದ ಕೃತಿ ಲಲನೆ ಮೃದು ಪದ ವಿಲಾಸದಿಂ ।
ಸಲೆ ಸೊಗಸಲಡಿಗಡಿಗೆ ನಡೆಯಲ್ಕೆ ಚಿತ್ತಂಗ ।
ಳೊಲಿದೆರಗದಿರ್ಪುವೆ ಧರೆಯೊಳಗೆ ರಸಿಕರಾಗಿರ್ದ ಭಾವಕ ನಿಕರದ ॥೪೪॥

ಲೋಕದೊಳಖಿಳ ಪುಣ್ಯ ಕರ್ಮದಿಂ ಧರ್ಮದಿಂ ।
ದೇಕಾಗ್ರವಾಗಿರ್ದ ಯೋಗದಿಂ ಯಾಗದಿಂ ।
ಭೂ ಕನಕಮಣಿ ಧೇನು ದಾನದಿಂ ಧ್ಯಾನದಿಂ ಪಡೆವ ಸದ್ಗತಿಯನೀವ ॥
ಈ ಕಥೆಯನೊಲವಿಂದೆ ಕೇಳ್ದರ್ಗೆ ಪೇಳ್ದರ್ಗೆ ।
ಶೋಕ ಭಯ ದುಃಖ ಸಂತಾಪಮಂ ಪಾಪಮಂ ।
ನೂಕಿ ನಿರ್ಮಲತರ ಸುಬುದ್ಧಿಯಂ ಸಿದ್ಧಿಯಂ ಹರಿ ಕೊಡುತಿಹಂ ಕೃಪೆಯೊಳು ॥ ೪೫ ॥

ಪುಣ್ಯಮಿದು ಕೃಷ್ಣ ಚರಿತಾಮೃತಂ ಸುಕವೀಂದ್ರ ।
ಗಣ್ಯಮಿದು ಶೃಂಗಾರ ಕುಸುಮ ತರು ತುರುಗಿದಾ ।
ರಣ್ಯಮಿದು ನವರಸ ಪ್ರೌಢಿ ಲಾಲಿತ್ಯ ನಾನಾ ವಿಚಿತ್ರಾರ್ಥಂಗಳ ॥
ಗಣ್ಯಮಿದು ಶಾರದೆಯ ಸಮ್ಮೋಹನಾಂಗ ಲಾ ।
ವಣ್ಯವಿದು ಭಾವಕರ ಕಿವಿದೊಡವಿಗೊದವಿದ ಹಿ ।
ರಣ್ಯಮಿದು ಭೂತಳದೊಳೆನೆ ವಿರಾಜಿಪುದು ಲಕ್ಷ್ಮೀಪತಿಯ ಕಾವ್ಯರಚನೆ ॥ ೪೬ ॥

—: ಸಮಾಪ್ತಿ :—

ಮಂಗಳಮಸ್ತು.

WD 973—GPB—15,000—28-3-56

ಅನುಬಂಧ

ಕವಿ ಲಕ್ಷ್ಮೀಶನ ಕೀರ್ತನೆಗಳನ್ನು ಕುರಿತು

ಕನ್ನಡ ಜೈಮಿನಿ ಭಾರತದ ಕವಿ ಲಕ್ಷ್ಮೀಶನಿಂದ ವಿರಚಿತವಾದ ಹಲವು ಕೀರ್ತನಗಳು ಉಂಟೆಂದು ಕರ್ಣಾಕರ್ಣಿಯಾಗಿ ನಮಗೆ ತಿಳಿದುಬಂದಿದ್ದಿತು. ನಾವು ಈ ಬಗ್ಗೆ ಪರಿಶೀಲನೆ ನಡೆಸುತ್ತಿರುವಲ್ಲಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ (೧೯೨೨ನೇ ಜನವರಿ ಸಂಚಿಕೆಯಲ್ಲಿ) "ದೇವನೂರು ಲಕ್ಷ್ಮೀಕಾಂತ ಹೆಬ್ಬಾರರು ಮಾಡಿದ ಕೀರ್ತನೆಗಳು" ಎಂಬ ಹೆಸರಿನಿಂದ ಪ್ರಕಟವಾಗಿರುವ ಹಾಡುಗಳ ವಿಚಾರ ನಮ್ಮ ಅವಗಾಹನೆಗೆ ಬಂದಿತು. ಅದೇ ಸಂಚಿಕೆಯಲ್ಲಿ ಈ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ಶ್ರೀ ಕುಮಾಂಡೂರು ರಾಮಸ್ವಾಮಯ್ಯಂಗಾರ್ಯರು ಕವಿಯ ವಿಚಾರವಾಗಿಯೂ, ದೇವನೂರಿನ ವಿಚಾರವಾಗಿಯೂ ಬರೆದಿರುವ ಕೆಲವು ಸಂಗತಿಗಳು ನಮ್ಮ ಗಮನಕ್ಕೆ ಬಂದುವು. ವಾಚಕರ ಅವಗಾಹನೆಗಾಗಿ ಆ ವಿಷಯಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿರುತ್ತೇವೆ.

೧. "ಕಡೂರು ತಾಲ್ಲೂಕು, ದೇವನೂರು ಲಕ್ಷ್ಮೀಕಾಂತ ದೇವಾಲಯದಲ್ಲಿ ಈ ಕವಿಯು ಜೈಮಿನಿಯನ್ನು ಬರೆದ ಹಜಾರ ಮಂಟಪವು ಈತನಿಂದಲೇ ಕಟ್ಟಿಸಲ್ಪಟ್ಟಿತು. ಇವನೂ, ಇವನ ಮಗನೂ ಕಟ್ಟಿಸಿದ ಮಂಟಪಗಳ ಲೆಕ್ಕವು ಈಚೆಗೆ ದೊರೆತ ಒಂದು ಓಲೆಯಲ್ಲಿ ಬರೆಯಲ್ಪಟ್ಟಿದೆ. ಅದರ ಯಥಾಪ್ರತಿಯನ್ನು ಇಲ್ಲಿ ತಿಳಿಸಿದೆ:

೨. ಲಕ್ಷ್ಮೀಕಾಂತ ಹೆಬ್ಬಾರರು (ಕವಿ ಲಕ್ಷ್ಮೀಶ) ದೇವರ ಸಾಕ್ಷಾತ್ಕಾರವನ್ನು ಹೊಂದಿದ ಮೇಲೆ ಜನರು ಈತನ ವಿಗ್ರಹವನ್ನು ಮಾಡಿಸಿ ಇತರ ಆಳ್ವಾರು ವಿಗ್ರಹಗಳ ಜತೆಯಲ್ಲಿ ಈ ದೇವಾಲಯದಲ್ಲಿಯೇ ಪ್ರತಿಷ್ಠಿಸಿ ಅಂದಿನಿಂದ ಇತರ ವಿಗ್ರಹಗಳಂತೆ ಇದಕ್ಕೂ ಪೂಜೆಯನ್ನು ನಡೆಸುತ್ತಿರುವರು. ಪ್ರತಿವರ್ಷವೂ ಚೈತ್ರಶುದ್ಧ ಪೂರ್ಣಿಮೆಯ ದಿನ ಈ ಕವಿಯ ತಿರುನಕ್ಷತ್ರವು ದೇವಸ್ಥಾನದಲ್ಲಿ ನಡೆಸಲ್ಪಡುತ್ತಿರುವುದು.

೩. ಪ್ರತಿವರ್ಷವೂ ಕೊಟ್ಟಾರೋತ್ಸವದಲ್ಲಿ ಇತರ ಕಡೆಗಳಲ್ಲಿಲ್ಲದ ಒಂದು ಹೊಸ ಪದ್ಧತಿಯು ಇಲ್ಲಿ ಪೂರ್ವದಿಂದಲೂ ಆಚರಣೆಯಲ್ಲಿ ಬಂದಿದೆ. ಉತ್ಸವ ಕಾಲದಲ್ಲಿ ವೇದ ಪಾರಾಯಣ, ದ್ರಾವಿಡ ಪ್ರಬಂಧ ಇವುಗಳ ತರುವಾಯ ಈ ಲಕ್ಷ್ಮೀಶನಿಂದ ರಚಿತವಾದ ಜೈಮಿನಿಯಲ್ಲಿ ಹೇಳಲ್ಪಟ್ಟಿರುವ ದೇವತಾಸ್ತುತಿಯ ಕೆಲವು ಪದ್ಯಗಳನ್ನು ದೇವರ ಸಾನ್ನಿಧ್ಯದಲ್ಲಿ ಓದುವರು. ದೇವಾಲಯದ ಧರ್ಮಕರ್ತರೂ ಅಧಿಕಾರಿಗಳೂ ಪೂರ್ವದಿಂದ ಅನುಸರಿಸಿ ಬಂದ ಈ ಪದ್ಧತಿಯನ್ನು ತಪ್ಪದೆ ನಡೆಸಿಕೊಂಡು ಬರುತ್ತಿದ್ದಾರೆ.

ಈ ದೇವನೂರು ಸ್ಥಳ ಪುರಾಣದಲ್ಲಿ ಇದಕ್ಕೆ ಗೀರ್ವಾಣಪುರ, ಸುರಪುರ ಮುಂತಾದ ಹೆಸರುಗಳು ಪ್ರಯೋಗಿಸಲ್ಪಡುತ್ತಿವೆ. ಈ ಕವಿಯು ರಚಿಸಿದ ಹಾಡುಗಳಲ್ಲಿಯೂ ಈ ಅಂಕಿತವೇ ಕಂಡುಬರುತ್ತಿದೆ. ಈ ಕವಿಯು ಹೆಬ್ಬಾರ ಶ್ರೀವೈಷ್ಣವರ ಪಂಗಡಕ್ಕೆ ಸೇರಿದವನೆಂತಲೂ, ಈತನ ಜ್ಞಾತಿಗಳೂ ಬಂಧುಗಳೂ ಈ ಪ್ರಾಂತದಲ್ಲಿ ವಾಸವಾಗಿರುವರೆಂತಲೂ ತಿಳಿಯಬಂದಿರುವುದರಿಂದಲೂ, ಈತನ ಮನೆಯಿದ್ದ ಪಾಳು ನಿವೇಶನವು ಈಗಲೂ ಜನರಿಂದ ತೋರಿಸಲ್ಪಡುವುದರಿಂದಲೂ ಈ ಲಕ್ಷ್ಮೀಶ ಕವಿಯು ದೇವನೂರಿನವನಲ್ಲವೆಂದು ಸ್ಥಾಪಿಸಲು ಯಾರೂ ಸಾಹಸಗೊಳ್ಳಬೇಕಾಗಿಲ್ಲ.

೫. ಮಾಗಡಿ ತಾಲ್ಲೂಕು, ಸೋಲೂರು ಸ್ಥಳದ ಕರಣಿಕ ಚಿಕ್ಕಣ್ಣನಿಗೆ ಈತನ ಧರ್ಮಪತ್ನಿಯಾದ ಚಿನ್ನಮ್ಮನ ಗರ್ಭದಲ್ಲಿ ಜನಿಸಿದ ಹುಚ್ಚಕವಿಯು ತಚ್ಚೇಕೆರೆಯ ರಂಗನಾಥದೇವರ ಅಂಕಿತದಿಂದ ರಚಿಸಿರುವ '**ಯಾಗ ಚರಿತ್ರೆ**' ಎಂಬ ಯಕ್ಷಗಾನ ಕೃತಿಯು ಜೈಮಿನಿ ಭಾರತದ ಆಧಾರದ ಮೇಲೆಯೇ ಬರೆಯಲ್ಪಟ್ಟುದು ಈಚೆಗೆ ಸಿಕ್ಕಿರುವುದು. ಲಕ್ಷ್ಮೀಶನ ಜೈಮಿನಿಯು ಈ ದೇಶದಲ್ಲಿ ಬರೆಯದೆ ಬಹುದೂರ ಪ್ರಾಂತದಲ್ಲಿ ರಚಿತವಾಗಿದ್ದರೆ ಅಂತಹ ಪ್ರತಿಯು ಮೈಸೂರು ದೇಶದ ಪ್ರತಿ ಗ್ರಾಮದಲ್ಲಿಯೂ ಅಷ್ಟು ಬೇಗ ಪ್ರಸಿದ್ಧಿಗೆ ಬರುವುದು ಅಸಂಭವವು.

೬. ದೇವನೂರಿನಲ್ಲಿ ದೊರೆತ ಒಂದೆರಡು ಓಲೆಯ ಪ್ರತಿಗಳಲ್ಲಿ "ಅಣ್ಣಮಾಂಕನ ಸುತ" ಎಂದು ಬರೆದಿದೆ. ಕವಿ ಲಕ್ಷ್ಮೀಕಾಂತನ ಮಗನಿಗೆ ಅಣ್ಣಯ್ಯ (ಹೆಬ್ಬಾರ)ನೆಂಬ ಹೆಸರಿರುವುದರಿಂದಲೂ ಕನ್ನಡ ಬರೆಹದಲ್ಲಿ 'ಮ'ಕಾರ 'ಯ'ಕಾರಗಳಿಗೆ ಹೆಚ್ಚು ವ್ಯತ್ಯಾಸವಿಲ್ಲದೆ ಹೋಲಿಕೆ ಸರಿಯಾಗಿರುವುದರಿಂದಲೂ ಈ ಕವಿಯ ತಂದೆಯ ಹೆಸರು ಅಣ್ಣಯ್ಯನೆಂದಿರಬಹುದೇ ಹೊರತು ಅಣ್ಣಮನಾಗಿರಲಾರದು. ಅಚ್ಚಿನ ಪುಸ್ತಕಗಳಲ್ಲಿ ಅಣ್ಣಮಾಂಕನೆಂದಿರುವುದು ಲೇಖಕ ಪ್ರಮಾದ ಜನಿತ ದೋಷವೆಂದು ಭಾವಿಸಬೇಕಾಗಿದೆ.

....ಇಲ್ಲಿ ಹೇಳಿರುವ ಕಾರಣಗಳಿಂದ ಲಕ್ಷ್ಮೀಕಾಂತನೆಂಬ ಕವಿಯ ಜನ್ಮಭೂಮಿಯು ಕಡೂರು ತಾಲ್ಲೂಕು, ದೇವನೂರೇ ಎಂತಲೂ ಈತನು ಹೆಬ್ಬಾರ ಶ್ರೀವೈಷ್ಣವನೆಂತಲೂ ಮುನ್ನೂರು ವರ್ಷಗಳ ಹಿಂದಿನವನೆಂತಲೂ ನಿರ್ಧರಿಸಲಿಕ್ಕೆ ಅಡ್ಡಿಯಿಲ್ಲ.

ದೇವನೂರು ದೇವಾಲಯದಲ್ಲಿ ೧೯ ಅಂಕಣಗಳ ಹಜಾರ ಲಕ್ಷ್ಮೀಕಾಂತ ಹೆಬ್ಬಾರು ಕಟ್ಟಿಸಿದ್ದು. ೧೧ ಅಂಕಣಗಳು ವಿಷ್ಣುವರ್ಧನರಾಯರು ಕಟ್ಟಿಸಿದ್ದು. ಪ್ರಾಕಾರ, ಧಾರಾಮಂಟಪ ಲಕ್ಷ್ಮೀಕಾಂತನ ಮಗ 'ಅಣ್ಣಯ್ಯ' ಹೆಬ್ಬಾರರು ಕಟ್ಟಿಸಿದ್ದು."

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೧೯೨೧, ಏಪ್ರಿಲ್ ಸಂಚಿಕೆಯಲ್ಲಿ ಕವಿ ಲಕ್ಷ್ಮೀಶನ ಬಗ್ಗೆ ಈ ಮುಂದೆ ಹೇಳುವ ಸಂಗತಿಗಳನ್ನು ತಿಳಿಸಲಾಗಿದೆ :

೧. ಕಡೂರು ತಾ॥ ಹನ್ನೆರಡನೆಯ ನಂ. ಶಾಸನವು ಶಕೆ ೧೪೪೦ನೆಯ ಬಹುಧಾನ್ಯ ಸಂವತ್ಸರದಲ್ಲಿ ಬರೆಯಲ್ಪಟ್ಟುದು. ಅದರಿಂದ ದೇವನೂರಿಗೆ ಲಕ್ಷ್ಮೀನಾರಾಯಣಪುರವೆಂಬ ಹೆಸರಿತ್ತೆಂತಲೂ, ಲಕ್ಷ್ಮೀಕಾಂತ ದೇವರಿಗೆ ಕೆಲವು ದಾನಗಳು ಕೊಡಲ್ಪಟ್ಟವೆಂತಲೂ ತಿಳಿದುಬರುವುದು; ಮತ್ತು ಅದೇ ಗ್ರಾಮದ ಬಳಿಯಿರುವ ೧೪೮೧ರಲ್ಲಿ ಬರೆಯಲ್ಪಟ್ಟ ಶಾಸನದಲ್ಲಿ ಇದಕ್ಕೆ 'ದೇವನೂರು' ಎಂಬ ಹೆಸರು ಉಪಯೋಗಿಸಲ್ಪಟ್ಟಿದೆ.

ಈ ಮೇಲೆ ಕಂಡ ಬರಹವು—

(೧) ಕವಿ ಲಕ್ಷ್ಮೀಶನಿಗೆ 'ಅಣ್ಣಯ್ಯ' ಎಂಬ ಮಗನಿದ್ದನು. ತಂದೆ, ಮಗ ಇಬ್ಬರೂ ದೇವಾಲಯದ ಕೆಲವು ಭಾಗ ಕಟ್ಟಿಸಿದ್ದಾರೆ.

(೨) ದೇವರ ಪೂಜಾಕಾಲದಲ್ಲಿ ಜೈಮಿನಿ ಭಾರತದ ಪದ್ಯಗಳನ್ನು ಪಠಿಸುತ್ತಾರೆ.

(೩) ದೇವನೂರು ಸ್ಥಳ ಪುರಾಣದಲ್ಲಿ ಗೀರ್ವಾಣಪುರ, ಸುರಪುರ ಎಂಬ ಹೆಸರುಗಳಿವೆ.

(೪) ಸೋಲೂರು ಹುಚ್ಚಕವಿ ರಚಿಸಿರುವ "ಯಾಗ ಚರಿತ್ರೆ" ಎಂಬ ಯಕ್ಷಗಾನ ಕೃತಿಗೆ ಕನ್ನಡ ಜೈಮಿನಿ ಆಧಾರ.

(೫) ಕವಿ ತಂದೆ ಹೆಸರು ಅಣ್ಣಯ್ಯನೆಂದಿರಬಹುದೇ ಹೊರತು ಅಣ್ಣಮನಾಗಿರಲಾರದು.

(೬) ಶಾಸನಗಳಲ್ಲಿ ಕೂಡ 'ದೇವನೂರು' ಎಂಬ ಹೆಸರಿದೆ. ಲಕ್ಷ್ಮೀನಾರಾಯಣಪುರ ಎಂಬ ಹೆಸರು ಕೂಡ ಶಾಸನದಲ್ಲಿದೆ.

ಎಂಬ ವಿಷಯಗಳು ಹೊಸದಾಗಿ ನಮ್ಮ ಮುಂದೆ ಕಾಣಿಸಿಕೊಂಡಿವೆ. ವಿದ್ವಾಂಸರು ಈ ವಿಷಯಗಳನ್ನೆಲ್ಲಾ ಪರಿಶೀಲಿಸಬೇಕು.

ಈಗ ನಾವು ಹತ್ತು ಹಾಡುಗಳನ್ನು ಕನ್ನಡಿಗರ ಅವಗಾಹನೆಗಾಗಿ ಪ್ರಕಟಿಸಿರುವೆವು. "ಈ ಹಾಡುಗಳು ಗ್ರಂಥಸ್ಥವಾಗಿಲ್ಲ. ಜನ ಪರಂಪರೆಯಿಂದ ಕರ್ಣಾಕರ್ಣಿಕೆಯಾಗಿ ಹೇಳುತ್ತಾ ಬಂದಿರುವವುಗಳನ್ನು ಸಂಗ್ರಹಿಸಿದೆ" ಎಂದು ಸಂಗ್ರಾಹಕರಾದ ಶ್ರೀ ಕುಮಾಂಡೂರು ರಾಮಸ್ವಾಮಯ್ಯಂಗಾರ್ಯರು ಹೇಳಿರುತ್ತಾರೆ.

ಈ ಹಾಡುಗಳಲ್ಲಿ ಲಕ್ಷ್ಮೀಪತಿ, ದೇವಪುರ ಲಕ್ಷ್ಮೀಶ, ಸುರಪುರ ಪತಿ, ಸುರಪುರ ಲಕ್ಷ್ಮೀಶ, ಶ್ರೀ ಲಕ್ಷ್ಮೀಶ ಮಂಗಲೋತ್ತುಂಗ, ಶ್ರೀ ಲಕ್ಷ್ಮೀಪತಿ, ವರಲಕ್ಷ್ಮೀ ಕಾಂತನ, ದೇವಪುರದ ಸಿರಿವರ, ಪಾಹಿ ಲಕ್ಷ್ಮೀಶ ಎಂಬ ಅಂಕಿತಗಳಿವೆ. ಹಾಡುಗಳು ಜನರ ಬಾಯಿಯಲ್ಲಿ ಓಡಾಡಿ ಕೆಲವೆಡೆ ಅಶುದ್ಧವಾಗಿವೆ. ಈ ಹಾಡುಗಳನ್ನುಳ್ಳ ತಾಳೆಯೋಲೆ ಗ್ರಂಥಗಳು ಸಿಕ್ಕಿದಹೊರತು ಇದರ ಶುದ್ಧ ಪಾಠವನ್ನು ನಾವು ಕಂಡುಹಿಡಿಯಲಾಗುವುದಿಲ್ಲ. ಈ ಹಾಡುಗಳ ಪ್ರಕಟನೆಯಿಂದ ಕನ್ನಡಿಗರಲ್ಲಿ ಮೂಲ ಗ್ರಂಥವನ್ನು ಹುಡುಕುವ ಪ್ರಚೋದನೆಯಾದೀತೆಂದು ನಂಬುತ್ತೇವೆ.

ಕವಿ ಲಕ್ಷ್ಮೀಶನು ಭಾಗವತನಾದುದರಿಂದಲೂ, ಸಂಗೀತ ಸುಕಲಾನಿಪುಣನಾದುದರಿಂದಲೂ, ಕವಿಯ ಕಾಲವು ಹರಿದಾಸರ ಅಭ್ಯುದಯ ಕಾಲವಾಗಿ ಹಾಡುಗಳ ರಚನೆಯ ಸುವರ್ಣಯುಗವಾದುದರಿಂದಲೂ, ಈ ಹಾಡುಗಳು ಲಕ್ಷ್ಮೀಶ ವಿರಚಿತಗಳಾಗಿರಬಹುದು. ಇವು ಒಳ್ಳೆಯ ಕವಿ ಬರೆದ ಹಾಡುಗಳಂತೆ ಕಾಣುತ್ತಿವೆ. ಕೊಂಚ ಶ್ರಮವಹಿಸಿ ಹುಡುಕಿದರೆ ತಾಳೆಯೋಲೆಯ ಸಂಗ್ರಹದಲ್ಲಿ ಕೂಡ ನಾವು ಈ ಹಾಡುಗಳನ್ನು ಕಾಣಬಹುದು ಎಂದು ನಮ್ಮ ನಂಬಿಕೆಯಿದೆ.

ತಾ. ೧೫-೬-೧೯೫೬
ಬೆಂಗಳೂರು.

ಇಂತು
ಬ. ಶಿವಮೂರ್ತಿಶಾಸ್ತ್ರೀ.

ಕವಿ ಲಕ್ಷ್ಮೀಶನ ಕೀರ್ತನೆಗಳು.

೧. ರಾಗ—ಮಧ್ಯಮಾವತಿ ; ತಾಳ...

ಶರಣಾಗು ಸಂಪೂರ್ಣ । ಶರಣು ಜಿತಾರ್ಣ
ಕರುಣಾಮೃತಾ ಕೀರ್ಣ । ಕರ ನೀಲವರ್ಣ ॥ ಪಲ್ಲವಿ ॥

ಅತಸೀಕುಸುಮಗಾತ್ರ । ಅರವಿಂದನೇತ್ರ
ಚತುರಾಸ್ಯನುತ ಚಿತ್ರ । ಚಾರು ಚಾರಿತ್ರ ॥
ಧೃತ ಗೋವರ್ಧನ ಗೋತ್ರ । ದಿವಿಜೇಂದ್ರ ಸ್ತೋತ್ರ
ಶತಯಾಗ ಸುತಮಿತ್ರ । ಸೌಪರ್ಣ ಯಾತ್ರ ॥ ೧ ॥

ಸ್ಮರಕೋಟಿ ಲಾವಣ್ಯ ॥ ಪುರಜಿದ್ವರೇಣ್ಯ
ಪುರುಹೂತಾದಿ ಶರಣ್ಯ । ಪುರುಷಾಗ್ರಗಣ್ಯ ॥
ದುರಿತಮಹ ರೇಣ್ಯ (?) । ದಾನ ಸಾದ್ಗುಣ್ಯ
ಪರಿಣತ ಲಾವಣ್ಯ । ಪರಮ ಕಾರುಣ್ಯ ॥ ೨ ॥

ಕಮಲ ರಮ್ಯ ವಿಲಾಸ । ಕೌಸ್ತುಭೋದ್ಭಾಸ
ಕಮನೀಯ ಸುವಿಭೂಷ । ಕರಪೀತವಾಸ ॥
ಅಮಿತೇಂದು ರುಚಿಹಾಸ । ಆದಿಶಂಖೋಲ್ಲಾಸ (?)
ಸುಮನಸ ಪುರಾವಾಸ । ಪಾಹಿ ಲಕ್ಷ್ಮೀಶಾ ॥ ೩ ॥

೨. ರಾಗ—ನಾಟಿ ; ತಾಳ...

ಜಯ ಜಯ ಕೃಪಾಂಬುಧಿಯೆ । ಜಯ ಸುಗುಣ ಶರನಿಧಿಯೆ
ಜಯತು ಸಂಶ್ರುತ ನಿಧಿಯೆ ॥ ವಿಮಳ ಸುಧಿಯೇ ॥ ಪಲ್ಲವಿ ॥
ಜಯಸಮಸ್ತೋಪಧಿಯೆ......................
ಜಯ ಜಯತು ಸಲಕೆನ್ನ ಸೌಭಾಗ್ಯ ನಿಧಿಯೆ ॥ ಅನು ॥

ಶ್ರುತಿನುತಿ ಪ್ರಖ್ಯಾತೆ । ನತನಿರ್ಜಿತವ್ರಾತೆ
ಸತತ ಸತ್ಸಮಿತೆ ವರ ಸೌಖ್ಯಪ್ರದಾತೇ ॥
ರತಿಪತಿಪಿತ ಪ್ರೀತೆ ರತುನ ಕರ ಸಂಜಾತೆ ॥
ನುತಿಸಲೆನ್ನಳವೆ ನಿನ್ನನು ಲೋಕನಾತೆ ॥ ಜಯತು ॥ ॥ ೧ ॥

ವಿಗಡ ವಿಶ್ರುತ ಮಾಯೆ । ತ್ರಿಗುಣಾನ್ವಿತ ವಿಡಾಯೆ
ನಿಗಮ ನಿರುತೋಪಾಯೆ । ನಿತ್ಯೆನಿರಪಾಯೆ ॥
ಜಗನಮೋಹನ ಕಾಯೆ । ಅಗಣಿತೋಪಮದಾಯೆ
ಪೊಗಳಲೆನ್ನಳವೆ ನಿನ್ನನು ಲೋಕ ಮಾತೇ ॥ ಜಯತು ॥ ॥ ೨ ॥

ಪರಮಶಕ್ತಿ ಗುಣಾಢ್ಯೆ । ನಿರುತಾಗ ಮಾವೇದ್ಯೆ
ಸ್ಮರನ ಪೆತ್ತತಿ ಚೋದ್ಯೆ । ಸೌಖ್ಯಪ್ರದಾದ್ಯೆ ॥
ಸುರನಗರದಧಿನಾಥ । ವರಲಕ್ಷ್ಮೀಕಾಂತನಾ
ಅರಸಿ ಸಿರಿ ಮಾ ಲಕ್ಷ್ಮಿ ಭವರೋಗವೈದ್ಯೇ ॥ ಜಯತು ॥ ॥ ೩ ॥

೩. ರಾಗ—ನಾಟಿ; ತಾಳ....

ಭಜಿಸಿರೋ ಮನದಣಿಯ । ಸುಜನಾಬ್ಜ ದಿನಮಣಿಯ
ಭುಜಗಾರಿಗಮನ ತಿಂಥಿಣಿಯ ಸತ್ಕಣಿಯ ॥ ಪಲ್ಲವಿ ॥
ರಜನಿಚರಗುಣಶ್ರೇಣಿಯ (?) । ಅಜಭವ ಸುರಾಗ್ರಣಿಯ
ತ್ರಿಜಗ ಮೋಹನ ಮಣಿಯ । ಸೊಬಗಿನ ಕಣಿಯ ॥ ಅನು ॥

ಪೊಳೆವ ಮಕುಟದ ಫಣಿಯ । ತಿಲಕದಲಿ ರಂಜಿಸುವ
ಪ್ರಣವ ಗೋಚರ ಸುಧಾ। ಮಯದ ಕದಪಿನಲಿ ॥
ತೊಳಪ ಕುಂಡಲದ ನಾ । ಸಿಕದ ಮೂಗುತಿಯೆಸೆಯೆ
ಸುಲಿಪಲ್ಲ ನಗೆಮೊಗದ । ಸುಲಭಸೌಂದರನ ॥ ೧ ॥

ಪದಕಮಣಿಮಯ ಮೌಕ್ತಿ । ಕದ ಹಾರ ತ್ರಿಸರ ಕಂ
ಧರ ವೈಜಯಂತಿ ಯೊಲ । ಪಿನ ಬಾವುಲಿ ॥
ಮುದದ ಕಂಕಣ ಕರದ । ಮುದ್ರೆಯೆಸೆವಾ ಬೆರಳ
ಗದೆ ಸುದರ್ಶನ ಕಂಬು । ಮದನ ಶರಧರನು ॥ ೨ ॥

ಉರದ ಪೊಂಬಣ್ಣ ದಂ । ಬರತರಣಿ ಶತಕೋಟಿ
ಕಿರಣತ್ರಿಶಿ (?) ಕುಮುದ ವ । ರ್ಣದ ತನು ರುಚಿಯಾ ॥
ಹರ ಸುರೇಶ್ವರವಿರಂ । ಚ್ಯಾದಿ ವಂದಿತ ಚರಣ
ಸರಸಿರುಹ ವರದೇವ । ಪುರದ ಸಿರಿವರನ

೪. ಪಾದಾದಿ ಕೇಶ ಪರ್ಯಂತ ಸ್ತುತಿ. ರಾಗ...

ಸಿರಿಯ ಕರಾಬ್ಜ ಪರಾಗದಿಂ ರಂಜಿಪ
ಸರಸಿಜ ಕುಂಕುಮ ರಜರಮ್ಯವೆಂದೆನಿಪ ॥
ನಿರುತ ಯೋಗೀಂದ್ರ ಹೃತ್ಕಮಲವನರಳಿಪ
ತರುಣಾತಪದ ಕಾಂತಿಯೆನೆ ಕಂಗೊಳಿಪ ॥
ವರಶ್ರುತಿ ಸೀಮಂತ ಸಿಂಧೂರವೆನೆ ತೋರ್ಪ
ಉರು ಕಾಳಿಯ ಫಣ ರತುನಾರತಿ (?)ಯೆನಿಪ ॥
ಸುರುಚಿರ ಶೋಣಪ್ರವಾಳವ ಸೋಲಿಪ
ಅರುಣಾಂಬುರ ಹದಂದದಿ ಥಳಥಳಿಪ ॥ ಐಸಿರಿಯ ॥ ಪ ॥

ಚರಣ ತಳಂಗಳೊಪ್ಪುವ ತನಿ ಕೆಂಪಿನ
ಶರಣ ಚಿಂತಾಮಣಿಯ ನಸುಗೆಂಪಿನ
ಧರಣಿಯು ನೀರಡಿ ಮಾಡಿದ ಪೆಂಪಿನ
ಕರುಣದಿ ಕಲ್ಲ ಪೆಣ್ಮಾಡಿದ ಸೊಂಪಿನ
ಅರ ಶಂಖ ಪದ್ಮ ರೇಖಾಂಕಿತದಿಂಪಿನ (?)
ಸುರುನೃಪಗರ್ವ ನಿರ್ವಾಹಾಪಗುಂಪಿನ (?)
ಸುಠಮಣಿಮಕುಟಿ ನಾಯಕದ ಸೋಂಪಿನ (?)
ಪರಮ ಪಾವನ ಪಾದದುಂಗುಟದಲಂಪಿನ ॥ ಐಸಿರಿಯ ॥ ॥ ೧ ॥

ಕಂಜಭವಾಂಡ ಸೋಂಕದ ಮುನ್ನ ಹೆಳೆಗುವ (?)
ಸಂಜನಿಸಿಹ ಗಂಗೆ ಮುದದಲ್ಲಿ ಮಳುಗುವ
ಭಂಜಿಸಿ ತಮವ ಜಗಂಗಳ ಬೆಳಗುವ
ಮಂಜೀರ ಕಡಗ ಥಾಪುರಿ ಗಳಿಂ ಮೊಳಗುವ
ಮಂಜುಳಾಂಗದಿ ನಖಪಙ್ಕ್ತಿಗಳ್ ತೊಳಗುವ
ರಂಜನೆಯಿಂ ಶ್ರೀಮದಂಘ್ರಿಗಳೆಸವ
ಸಂಚಿತ ಸೌಮ್ಯ ಜಂಘೆಗಳಿಂ ಸೊಗಯಿಸುವ
ಕುಂಜರ ರುಚಿಯ ಪೂರ್ಣೇಂದು ರಂಜಿಸುವ ॥ ಐಸಿರಿಯ ॥ ॥ ೨ ॥

ಅಳವಟ್ಟ ಪೀತಾಂಬರದ ಸುಮಧ್ಯದ
ಕಳಕಾಂಚಿ ದಾಮದುನ್ನತ ಕಟಿತಟದ
ನಳಿನಾಲವೋದಿತ (?) ನಾಭಿಪಂಕರುಹದ
ಇಳೆಯ ಜನಂಗಳಿಗೆನಿಸುವವುದರದ (?)
ವಿಳಸದಲಂಕೃತ ಬಾಹು ಚತುಷ್ಕದ
ಮಳೆ ಶಂಖಚಕ್ರ ಸದಬ್ಜ ಸಂಭೃತದ
ಪೊಳೆವ ಕೌಸ್ತುಭಮಣಿ ಶ್ರೀವತ್ಸೋದರದ
ತುಳಸಿ ಮಂದಾರ ಮಾಲೆಗಳ ಕಂಧರದ ॥ ಐಸಿರಿಯ ॥ ॥ ೩ ॥

ಘನ ಸೌಭಗ ಗಂಡ ಮಂಡಲ ಯುಗ್ಮದ
ಮನೋಹರ ಮಕರ ಕುಂಡಲ ಕರ್ಣ ಯುಗ್ಮದ
ವನಜನೇತ್ರಂಗಳ ಕರುಣಾಕಟಾಕ್ಷದ
ವಿನುತ ಮೌಕ್ತಿಕದಿಂದ ಮೆರೆವ ನಾಸಿಕದ
ಸನುಮೋಹನದಿ ಸಮನಿಪ ಚುಬುಕಾಗ್ರದ
ತನಿರಸ ತುಳುಕುವ ಚೆಲುವಿನಧರದ
ಸಲಲಿತ ವದನದ ವರದಂತ ಪಙ್ತಿಯ
ಇನಿಗೆದರುವೆಳೆ ನಗೆಯ ಸಿರಿಮೊಗದ ‖ ಐಸಿರಿಯ ‖ ‖ ೪ ‖

ಸಿಂಗಾಡಿಯಿಂ ಮಿರಗುವ ಪುರ್ಬುಗಳ ಸ |
ದ್ಭೃಂಗಾಳಕಂಗಳ ಮಿರುಪ ನಾಸಿಕವೆಳೆ
ದಿಂಗಳ ಪೊಂಗಿನ (?) ಕಸ್ತೂರಿ ತಿಲಕ ರ
ತ್ನಾಂಗದ ರಂಗಿನ ಮಕುಟ ಮಸ್ತಕದ ನೀ
ಲಾಂಗದಳಾಂಗನೆಯರು (?) ಸುರಪುರ ಮಧ್ಯ
ರಂಗದೊಳಂಗನೆಯರು ಕೂಡಿ ನಿಖಿಳ ಜ
ಗಂಗಳ ಹಿಂಗದೆ ಪೊರೆವ ಶ್ರೀ ಲಕ್ಷ್ಮೀಶ
ಮಂಗಳೋತ್ತುಂಗ ಮೂರುತಿಗೆ ನಮೋ ನಮೋ ‖ ಐಸಿರಿಯ ‖ ‖ ೫ ‖

೫. ಕೇಶಾದಿ ಪಾದಪರ್ಯಂತ ಸ್ತುತಿ. ರಾಗ...; ತಾಳ...

ಶ್ರೀ ಮಣಿಮೌಳಿ ಮಸ್ತಕದ ಕಸ್ತುರಿಯ ಲ
ಲಾಮಮಯ ವೆನಿಸುವ ವರ ಪಣೆಯಾ ‖

ಭ್ರೂಮಧ್ಯದೊಳ್ವೆರೆಯಿಂದೊಪ್ಪುವ
ನಾಮದ ತುರುಗೆವೆಯ ‖

ತಾಮರಸಾಯತ ನೇತ್ರ ದಾನತ ಸು
ಕ್ಷೇಮಂಕರದ ನೋಟದ ‖

ರಾಮಣೀಯಕವಾದ ಮಕರ ಕುಂಡಲದ ಸು
ರಾಮಯದಾ ಕದಪಿನ ‖

ಚಾಮೀಕರ ಕುಟ್ಮಲನಾಸಿಕದಭಿ
ರಾಮ ಸುಮೌಕ್ತಿಕದಾ ‖

ಮಾ ಮನೋಹರ ಚುಬುಕಾಗ್ರದ ನವಪಲ್ಲ
ವಾ ಮಿಳಿತಾಧರದ ‖

ಸೋಮ ವದನ ದೆಳನಗೆಯಾ ಮೊಳೆವಲ್ಲ
ಕೌಮುದಿಯಾ ಸೊಬಗಿನ ॥
ನೇಮಿತಾಂಗದ ತೋಳಬಂದಿ ಕಂಕಣದ ಮುಂ
ಗೈ ಮುರಾರಿಯೆ ಮುದ್ರೆ (?) ಯಾ॥
ಐ ಮೊಗದಾ ತೆರೆದ ಕಮಲ
ಕೌಮೋದಕಿ ಖಡ್ಗ ಕಮಲ ಕಂಬುಗಿಸಿ
...........ಚಕ್ರಾಯುಧದ ॥
ಶ್ರೀ ಮೆರೆಯುವುದರ ಶ್ರೀ ವತ್ಸ ಕೌಸ್ತುಭದಿ
ವ್ಯಾಮೋದದ ಗಂಧ ಲೇಪನದ ॥
ರೋಮಾವಳಿಯ ಪೊಡೆವಲರ ಪಿ
ತಾಮಹ ಸುನೀತ (?) ನಾಭಿಯಾ ॥
ಸೌಮಾನಸಿ ತಾಳ್ದು ಪಲಿತ (?) ಮಣಿ
ಸ್ತೋಮಾ ಭರಣಂಗಳಾ ॥
ಜೀಮೂಲ ಶಲಿ (?) ಯೆನೆ
ಶ್ಯಾಮಲ ರುಚಿರಾಂಗದ ॥
ಹೇಮಾಂಬರದಸಿ ಮಧ್ಯದ ಕಾಂಚೀ
ದಾಮದ ಕಟಿತಟದ ॥
ಪ್ರೇಮಿತವಾದ ವೂರುಗಳ ಸು
ಖಾಮಗಳ ಮುದದಿ ತಾಳ್ದುವರ (?)
ಮಾಮ ಜಂಘೆಯ ತೊಡರಿನ ಪೊಂಗೆಜ್ಜೆ
ಯಾ ಮಣಿ ಮಂಜೀರಂಗಳ ॥
ಸೋಮಸೂರ್ಯರ ಸೋಲಿಪ ನಖಕಾಂತಿಯ
ಭೂಮಿ ಪಾವನ ಗಂಗೆಯುದಿಸಿದುಂಗುಟದ ಯ
ಶೋ ಮೋಹನ ರೂಪಿನ ॥
ಕಾಮ ಕೋಟಿ ಲಾವಣ್ಯ ಸುಲಲಿತ ಮ
ಹಾ ಮೋಹನ................
ಪ್ರೇಮದೊಳಾ (ನತ) ಜನರ ಸಲಹುವ ಮ
ಹಾ ಮಾತೆ ಶ್ರೀ ಲಕ್ಷ್ಮೀಪತಿಯ॥
ಶ್ರೀ ಮಣಿ ಮೌಳಿ ಮಸ್ತಕದ ಕಸ್ತೂರಿ ಲ
ಲಾಮವೆನಿಪ ಪಣೆಯ ॥

೬. ದಶಾವತಾರದ ಹಾಡು. ರಾಗ........; ತಾಳ........

ನಮೋ ನಮೋ ನಾರದ ವಂದ್ಯ। ನಮೋ ನಮೋ ನಿಗಮನಿಕರ ವೇದ್ಯ ‖ಪ‖
ನಮೋ ವರದಾದಿಪ ಸುರಪುರ ಲಕ್ಷ್ಮೀಶ । ಭವಭಯ ರೋಗ ವೈದ್ಯ ‖ ಅನು ‖
ಹರಿಚರನಾಗಿ ವೇದವ ತಂದೆ । ಹರಿಪತಿಯನು ಮೇಲಾಂತುನಿಂದೆ।
ಹರಿನಯನನ ಕೊಂದೆ । ಹರಿಮು ರೂಪಾದೆ ನೀ । ಹರಿಪದ ಕಡಿಯನಿಟ್ಟೆ॥
ಹರಿವಂಶಜರನೆಲ್ಲರ ತರಿದೆ ಹರಿವಾಹಿನಿಯ ನೀನಾಳ್ದೆ
ಹರಿಸುತ ಗೊಲಿದು ಹೆಂಗಳ ವ್ರತಕೆಡಿಸಿದೆ । ಹರಿವಾಹನ ಜಯತು ‖ ೧ ‖

ಶಿವವಾಹನ ಧ್ವಜರೂಪ । ಶಿವಧರನೆನಿಪ ಯುಗ ಪ್ರತಾಪ।
ಶಿವಭಕ್ತನ ಕೊಂದೆ ಶಿವನ ರೂಪಾದೆ। ನೀಂ ಪದ ಕಡಿಯನಿಟ್ಟೆ।
ಶಿವವೈರಿಯ ರಿಪುವೆನಿಸಿದೆ। ಶಿವನ ಬಿಲ್ಲನು ಬಾಗಿಸಿ ಮುರಿದೆ।
ಶಿವನ ತುಳಿದೆ ನೀ ಶಿವನಿಗೆ ಸಖನಾದೆ। ಶಿವವಾಹನ ಜಯತು ‖ ೨ ‖

ಸುರಜ್ಯೇಷ್ಠನಿಗೆ ಶ್ರುತಿಯನಿತ್ತೆ। ಸುರರಿಗೆ ಸುಧೆಯನು ಕರೆದೆರೆದೆ ‖
ಸುರನಗ ವರ್ಣ ಹಿರಣ್ಯಕ್ಷನ ಕೊಂದೆ। ಸುರ ಸಿಂಧುವಪಡೆದೆ ‖
ಸುರಭಿಯನೆವದಿ ಭೂಪರನೆಲ್ಲ ತರಿದೆ। ಸುರರಿಪು ದಶವದನನ ತರಿದೆ॥
ಸುರನಗವರ್ಣ ಸರ್ವಜ್ಞ ಹಯಾರೂಢ । ಸುರಪುರ ಲಕ್ಷ್ಮೀಶ ‖ ೩ ‖

೭. ರಾಗ......; ತಾಳ........

ಆಕಾರವಿಲ್ಲದ ಅನಾದಿಯೊಳು ಪಂತ
ಸಾಕಾರನಾಗಿಹನು ಶ್ರೀ ಲಕ್ಷ್ಮೀಕಾಂತ ‖ ಪ ‖
ಕುಸುಮಶರನ ಪೂವು ಅದರೊಳಗಿಲ್ಲ
ಎಸೆಯೆ ಕೋದಂಡ ಕಬ್ಬೈಸೆಧನುವಲ್ಲ ‖
ಹೊಸ ಬಗೆಯಾಗಿ ನಾಂಟುದ ಸರಳಲ್ಲ
ವಿಷಮ ವಿಗ್ರಹಕಿನ್ನು ಕೇಳ್ ಪ್ರಾಣವಿಲ್ಲ ‖ ೧ ‖

ಮುಂದುವರೆವರೆ ಮೋಹರದೊಳು ತನ್ನ
ಚಂದದಿಂ ದೊಪ್ಪುವಂಗವ ಕಾಣೆಮುನ್ನ ‖
ಕುಂದ ಕೇಡಗೆಯೆಸಳಿವೆ ನೋಡು ತನ್ನ
ಸಂದಿಸಿತೇನೊ ಚಿದ್ರೂಪ ಗುಣರನ್ನ ‖ ೨ ‖

ಸರಿಯಲ್ಲದವರೊಳು ಸಮರವ ಮಾಡಿ
ಧುರದೊಳು ಮಿಗೆ ನೊಂದೆನ್ನೆಯ ಮೈಬಾಡಿ ‖
ಪರಿಹರಿಸೆಲವೂ ಸುರತ (?) ಮಧ್ಯೆ ಕೂಡಿ
ಸುರಪುರಪತಿ ಸುರತ (?) ವಿರದೊಂದುಗೂಡಿ ‖ ೩ ‖

೮. ಎಚ್ಚರಿಕೆ—ಉದಯರಾಗ—ರಾಗ ಆರಭಿ, ತಾಳ..............

ಸಚ್ಚಿದಾನಂದಮಯ ಗೆಚ್ಚರಿಕೆ।
ನಿಶ್ಚಯದ ನಿರುಪಮಂ ಗೆಚ್ಚರಿಕೆ।
ಅಚ್ಚರಿಯ ಸಚ್ಚಿತ್ತ ಗೆಚ್ಚರಿಕೆ।
ಸಚ್ಚಿದಾನಂದಮಯಗೆಚ್ಚರಿಕೆ ॥ ಪಲ್ಲ ॥

ಕಾಂತೆಯರ ಮನೆಗೆ ಶ್ರೀಕಾಂತ ಪೊರಮಡುತಿಹನು
ಕಾಂತೆಯರು ಕಟ್ಟು ಮೆಟ್ಟದ ವೊಲೆಚ್ಚರಿಕೆ ॥ ಅನು ॥

ಸಂಚಿತಾಭರಣಗಳ ಮಿಂಚುಗುರು ಚರಣಗಳ
ಕುಂಚಕಾಳಂಜಿಯಾವರೆಲ್ಲ ವೆಚ್ಚರಿಕೆ ॥ ೧ ॥

ನೀಡೆಸೆವ ಸೆಳ್ಳುಗುರು ಮೂಡುತಿಹ ಮೊಲೆಹೊಗರು
ಆಡಿಸುವ ಹಡಪದವರೀಗ ಎಚ್ಚರಿಕೆ ॥ ೨ ॥

ಬಿಂಬಾಧರಂ ಪೊಳೆಯೆಕಂಬು ಕಂಠವು ಹೊಳೆಯೆ
ಪೊಂಬಾಳ ದೀವಿಗೆಯ ಜನರು ಎಚ್ಚರಿಕೆ ॥ ೩ ॥

ಚೆನ್ನಸಿರಿಯರ ಮನೆಯ ಚಿನ್ನವಾಗಿಲ ಕೊನೆಯ
ರನ್ನದೋರಣ ತಡಿಯವರೆಚ್ಚರಿಕೆ ॥ ೪ ॥

ಇಂದಿರಾದೇವಿಯರ ಮಂದಿರದ ಬೀದಿಯೊಳು
ಸಂದಣಿಯಲತಿ ಜತನವಿರಲಿ ಯಚ್ಚರಿಕೆ ॥ ೫ ॥

ದೇವಿಯರ ಮನೆಗೆ ವಿವಾಹ ಲಾಭೇರಿ ಬಂದ (?)
ದೇವಪುರ ಲಕ್ಷ್ಮೀಶ ಗೆಚ್ಚರಿಕೆ ॥ ೬ ॥

೯. ಉದಯರಾಗ—ರಾಗ ಭೂಪಾಳಿ; ತಾಳ.........

ಏಳಯ್ಯ ರಾಕ್ಷಸಾಂತಕ ದನುಜ ಸಂಹಾರ
ಏಳಯ್ಯ ರಾಜೀವ ನಯನ ನವನೀತ ಚೋರ
ಏಳು ಲಕ್ಷ್ಮೀ ಮನೋಹರ ॥ ಹರಿಯೆ ॥ ಏಳಯ್ಯ ॥ ॥ ಪಲ್ಲ ॥

ದಿನಪನುದಯಂ ಗೆಯ್ಯೆ ದಿಕ್ಪಾಲಕರ್ನೆರೆಯೆ
ಕನಕ ಭೂಷಣದ ಕಾಂತೆಯರು ಆರತಿಪಿಡಿಯೆ
ಅನುಪಮಗೆ ಜಯವೆಂದು ಬಂದು ನಿಂದೈಧಾರೆ
ಇನಕುಲನೆ ನಲಿದುಪ್ಪವಡಿಸು ಶ್ರೀ ಹರಿಯೇ ॥ ೧ ॥

ಪ್ರಹ್ಲಾದ ನಾರದರು ವಾಸಿಷ್ಠ ಗೌತಮರು
ಮಹಮುನಿಗಳತ್ರಿಭಾರದ್ವಾಜ ಗೌತಮರು
ಬಹುವಿಧಧಿ ಕಶ್ಯಪರು ಹನುಮಂತ ತುಂಬುರರು
... .ಪಾಡುತ್ತಲೈಧಾರೆ ಇನಕುಲನೆ ನಲಿದು ‖ ೨ ‖

ದೇವಗಂಗೆಯು ಕೊಂಡು ದೇವರ್ಕಳ್ಳೈದಿದರು
ದೇವತಾವಳಿ ಬಂದು ದೇವ ಜಯವೆನುತಿಹರು
ದೇವಪುರದಲಿ ನಿಂದ ದೇವಕಿಯ ವರಕಂದ
ದೇವಲಕ್ಷ್ಮೀಪತಿಯು ದೇವ ನೀನೇಳ್ಳೈ ಹರಿಯೇ ‖ ೩ ‖

೧೦. ಉದಯರಾಗ (ಗಜೇಂದ್ರ ಮೋಕ್ಷಣ)—ರಾಗ—ಸಾವೇರಿ : ತಾಳ.........

ನಾರಾಯಣಾಯೋಂ ನಮೋ ನಾರಾಯಣಾಯೋಂ ನಮೋ ‖
ನಾರಾಯಣಾಯ ವರ ನಾಗೇಂದ್ರ ಶಯನಾಯ
ನಾರದಾದ್ಯಖಿಳ ಮುನಿನುತ ಚರಿತ್ರಾಯ ‖
ಘೋರ ಭವ ದುಃಖ ಸಂಹಾರಾಯ ಪಾಹಿಮಾಂ
ಕಾರುಣ್ಯಲೋಚನಾಯ ಹರಯೇ ನಾರಾಯಣಾಯ ‖ ಪ ‖

‖ವಾ. ಷ‖ ಪಾಂಡ್ಯ ದೇಶದಲಿ ಯಿಂದ್ರದ್ಯುಮ್ನನೆಂಬ ಭೂ
ಮಂಡಲಾಧಿಪನು ವೈರಾಗ್ಯದಿಂ ಹರಿಪಾದ
ಪುಂಡರೀಕ ಧ್ಯಾನ ತಪದೊಳಿರೆ ತಾನಾಗ ಚಂಡ ತಾಪಸನಗಸ್ತ್ಯ‖
ಹಿಂದು ಶಿಷ್ಯರ್ವೆರಸಿ ಬರಲು ಸತ್ಕರಿಸದಿರೆ
ಕಂಡು ಗಜ ಯೋನಿಯಲಿ ಜನಿಸು ಪೋಗೆಂದು ವು
ದ್ದಂಡ ಶಾಪವನಿತ್ತು ಮುನಿಪೋಗಲಿತ್ತ ತಾಂ ಶುಂಡಾಲನಾದನರಸ ‖ ೧ ‖

(ಅಚ್ಚಾಗಿರುವ ಉದಯರಾಗದ ಪುಸ್ತಕದಲ್ಲ ಇದೇ ಮೊದಲಾದ ೧೦ ಪದ್ಯಗಳು ಇವೆ)

ಆವನಿದನುದಯ ಕಾಲದೊಳೆದ್ದು ಭಕ್ತಿಯಿಂ
ಭಾವ ಶುದ್ಧಿಯಲಿ ಹೇಳುವನೊ ಕೇಳುವನೊ ಅವನ
ಘಾವಳಿಯು ಪರಿಹರಿಸಿ ಸುಜ್ಞಾನ ಪದವೀವ ದೇಹಾವಸಾನದಲ್ಲಿ ‖
ಶ್ರೀ ವಾಸುದೇವನಾ ಜ್ಞಾಪಿಸಿ ಗಜೇಂದ್ರ ಸಹಿ
ತಾಂ ವಿಹಂಗಾಧಿಪನ ತಾನೇರಿ ಬಿಜಯಂಗೆಯ್ದ
ದೇವಪುರ ಲಕ್ಷ್ಮೀವರನ ನೆನೆವ ಭಕ್ತರ್ಗೆ ಭಂಗ ಬರ್ಪುದೆ ಲೋಕದಿ ‖ ೨ ‖

ಕನ್ನಡ ಜೈಮಿನಿ ಭಾರತ

ಶುದ್ಧಾಶುದ್ಧ ಪತ್ರಿಕೆ

ಪುಟ	ಪದ್ಯ	ಪಂಕ್ತಿ	ಅಶುದ್ಧ	ಶುದ್ಧ
೧೫	೫೫	೬	ಪತಿಜ್ಞೆ	ಪ್ರತಿಜ್ಞೆ
೧೬	೬೪	೪	ಹರಿವಹಿತೆ	ಹರಿಸಹಿತ
೩೪	೩೫	೩	ಶತಃಘ	ಶರೌಘ
೩೪	೩೮	೧	ತುರೇ	ಘೂತುರೇ
೪೧	೭೧	೬	ಹೈಂಡಿಂಬಿ	ಹೈಡಿಂಬಿ
೪೬	೨೬	೨	ನುಗುತಿದೇನೆರೆ	ನಗುತಿದೇನೆರೆ
೬೬	೪೮	೨	ರಿಯಲಾ	ನರಿಯಲಾ
೭೩	೨೩	೫	ಸಮಾಪದೊಳೆಸವ	ಸಮಾಪದೊಳೆಸೆವ
೭೪	೨೮	೬	ಎಂಬಾಪ್ತದೊಡನೆ	ಎಂಬಾಪ್ತನೊಡನೆ
೭೬	೩೬	೪	ಉದ್ಯದ ರೂಥವಾಂ	ಉದ್ಯದ್ವರೂಥವಾಂ
೯೯	೩೧	೧	ತಥ ವಹು	ತಥ್ಯವಹು
೧೦೧	೬	೧	ಶಿವನಲ	ಶಿವನಲ್ಲ
೧೦೩	೧೭	೫	ಅಶ್ವಮೇಥವಾಂ	ಅಶ್ವಮೇಧವಾಂ
೧೦೪	೨೦	೩	ತುರಗಮೇಮೆಧೀ ಗ್ಯೆವುದು	ತುರಗಮೇಧಮೇ ಗ್ಯೆವುದು
೧೦೮	೪೩	೨	ಣಗನೆಗೆ	ಗಣನೆಗೆ
೧೧೦	೫೨	೨	ಪ್ರದ ಮ್ನ	ಪ್ರದ್ಯುಮ್ನ
೧೧೩	೧೩	೪	ತವಗೊಂದಪತ್ಯಮುಲ ದಯಿನದೊಡೆ	ತನಗೊಂದಪತ್ಯಮುದ ಯಿಸದೊಡೆ
೧೧೪	೧೭	೧	ಮಿಡಿದೊದೊಡೆವಂತೆ	ಮಿಡಿದೊಡೊಡೆವಂತೆ
೧೧೪	೧೯	೨	ಪಯಾಗೆ	ಪರಿಯಾಗೆ
೧೧೫	೨೧	೫	ಚ ಂಬನ	ಚುಂಬನ
೧೨೦	ಸೂಚನೆ	೨	ಮರಾಳಧ ಜಂ	ಮರಾಳಧ್ವಜಂ
೧೨೨	೧೩	೬	ಬನ್ನೈಸಿದಂ	ಬನ್ನೈಸಿದಂ
೧೨೫	೨೭	೩	ವಾರಿಯಾಂ	ವಾರಿಯುಂ
೧೨೬	೩೦	೩	ಶಿಖಂಗಳಿಂ	ವಿಶಿಖಂಗಳಿಂ
೧೨೬	೩೧	೨	ಕಿರುದು	ಕಿರಿದು
೧೨೬	೩೩	೨	ಪಲಗ	ಪಲಗೆ
೧೨೭	೩೮	೨	ತೌರಿಡುವ	ಕೌರಿಡುವ
೧೩೧	೪	೩	ಮ...............	ಮದೀಯುವೈರದೊಳೆ ಬಾಳ್ದ
೧೩೧	೪	೬	ಹೋಗೆನುತೆಚ್ಚ.....	ನು ಹೋಗೆನುತೆಚ್ಚನಾ ಪಾರ್ಥನು
೧೩೨	೭	೩	ತನ್ನನಳುಕಿಸಲಯೆ	ತನ್ನನಳುಕಿಸಲರಿಯೆ
೧೩೩	೧೦	೨	ತಾತಂಡನಂತಿಹ ಕಲಸುಧನ್ವ	ತಾಂಡನಂತಿಹ ಕಲಸುಧನ್ವ

ಪುಟ	ಪದ್ಯ	ಪಂಕ್ತಿ	ಅಶುದ್ಧ	ಶುದ್ಧ
೧೩೩	೧೪	೨	ಗ ವಾಜಿ	ಗಜವಾಜಿ
೧೩೫	೨೧	೩	ಸುಧ್ವನ್ವಂಗೆ	ಸುಧನ್ವಂಗೆ
೧೪೫	೬	೨	ತಕ್ಕಜದೊಳೌಕ್ಕ ಲಕ್ಕಿದಂ	ತಕ್ಕಜದೊಳೊಕ್ಕ ಲಕ್ಕಿದಂ
೧೪೬	೧೧	೫	ಪೊಸವೊಸೆಯ	ಪೊಸವುಸೆಯ
೧೪೬	೧೩	೩	ತೆಗೆದವೊಚ್ಚೊಡಾ	ತೆಗೆದೆಚ್ಚೊಡಾ
೧೪೭	೧೭	೩	ರಡಹತಾ	ಕೆಡಹಿತಾ
೧೪೭	೧೭	೪	ವ ರವೆಯಂ	ಮರವೆಯಿಂ
೧೪೭	೧೯	೩	ವ ದನಾರಿ	ಮದನಾರಿ
೧..೮	೨೩	೨	ಬಸ ಟಾ	ಬಸುಟಾ
೧೪೯	೨೮	೬	ಕೃಗಳ	ಕೈಗಳ
೧೫೧	೪	೬	ಅವಧಿಯಿಲ್ಲದೆ	ಅವಧಿಯಿಲ್ಲದೆ
೧೫೨	೫	೪	ಸೊಕ್ಕುದಕ್ಕೆಯೊಳ್	ಸೊಕ್ಕುದೆಕ್ಕೆಯೊಳ್
೧೫೩	೧೩	೩	ಕಾಂತನುಕೂಲ	ಕಾಂತಾನುಕೂಲ
೧೬೯	೩೯	೩	ಭೀಷಣನರಗಲು	ಭೀಷಣನೆರಗಲು
೧೭೨	೧	೬	ಒಡಿದುಪು	ಒಡಿದುವು
೧೭೨	೩	೧	ನೃತ್ಯದಿನನಂಧಕಾ—	ನೃತ್ಯದಿನಂಧಕಾ—
೧೭೭	೨೭	೩	ಮಿದ್ರುಮಚ್ಛವಿಯ	ವಿದ್ರುಮಚ್ಛವಿಯ
೧೭೭	೨೯	೩	ನೀಳ್ದಚ	ನೀಳ್ದ
೧೭೭	೨೯	೪	ಚಿಮ್ಮಿಸಿದರ್	ಚಿಮ್ಮಿಸಿದರ್ ಚ
೧೮೦	೪೨	೩	ನ ತಕಾಶ್ಯಪಂ	ನುತಕಾಶ್ಯಪಂ
೧೯೧	೩೧	೪	ರಾಗರಸದಿಂಜ	ರಾಗರಸದಿಂದೆ
೧೯೩	೪೧	೪	ಪೊರಮುಟ್ಟು	ಪೊರಮುಟ್ಟು
೧೯೭	೬೦	೩	ತುರಗಳ್	ತುರಗ
೧೯೭	೬೦	೪	ಪೊರದಿಸಿ	ಪೊರಗಿರಿಸಿ
೧೯೮	೩	೩	ಧುರ್ನಿಮಿತ್ತಂಗಳಂ	ದುರ್ನಿಮಿತ್ತಂಗಳಂ
೨೦೦	೧೦	೩	.—ಕಟದಿಂ	—ಕಟದಿಂದೆ
೨೦೦	೧೨	೬	ಪೂನಿನೊಳ್	ಪೂವಿನೊಳ್
೨೦೧	೧೭	೩	ಧರೆಗೆ ಬೞದ	ದೆರೆಗೆ ಬೞದ
೨೦೭	೪೮	೧	ನುತರಮನೆಯ	ನುತನರಮನೆಯ
೨೧೧	೧	೪	ಸಂಪ್ರೀತಿಯಂ	ಸಂಪ್ರೀತಿಯಿಂ
೨೧೨	೧೦	೨	ಕರಮಾನಂವೆನಲವರ	ಕರಮಾನರಿವೆನೆನಲವರ
೨೧೨	೧೧	೬	ಬೊನ್ನೊಳು	ಬೆನ್ನೊಳು
೨೧೨	೧೪	೩	ಎಲನೆಲವೊ	ಎಲವೆಲವೊ
೨೧೩	೧೫	೪	ಪೂಗೋಲ್ಗಳ್ ವೊರಾಯ್ತು	ಪೂಗೋಲ್ಗಳೊ ರಾಯ್ತು
೨೧೫	೨೭	೧	ಶತೃಘ್ನ	ಶತ್ರುಘ್ನ
೨೧೫	೨೭	೬	ಶ್ಛೇದವಂ	ಚ್ಛೇದವಂ
೨೨೬	೧೮	೧	ಗಣಿನದಿನುತಿರ	ಗಣಿನದಿನುತಿರ
೨೨೬	೧೮	೩	ನಸುಃಗುತೆ	ನಸುನಗುತೆ
೨೩೪	೫೭	೫	ಪಳಮಂಜಡಿಗಳೆಂಬ	ಪಳಮಂಜರಿಗಳೆಂಬ
೨೩೫	೬೩	೩	ಎಂತಾದೊದಂ	ಎಂತಾದೊಡಂ
೨೩೭	೪	೩	ನಾರವರ	ನಾರವಂ
೨೩೯	೧೪	೬	ಅಡಗಿದುವಿಯೊಳ... ನಸದಳಿದು	ಅಡಗಿದುವಿಳೆಯೊಳ... ನನವಳಿದು
೨೪೧	೨೧	೫	ಭವನ ಭವವ	ಭವನ ಭವನ

ಪುಟ	ಪದ್ಯ	ಪಂಕ್ತಿ	ಅಶುದ್ಧ	ಶುದ್ಧ
೨೪೨	೨೬	೬	ಪ್ರವಾಹಂಪಯೆ	ಪ್ರವಾಹಂ ಪರಿಯೆ
೨೪೨	೨೮	೨	ಧಿಸುವನಾ	ದಿಸುವನಾ
೨೪೩	೩೩	೩	ಗಲುಬೆಯು	ತಾಗಲುಭಯು
೨೪೩	೩೩	೬	ಕಡಿವಡೆಡು	ಕಡಿವಡೆದು
೨೪೪	೩೯	೫	ಚಿತ್ರತ	ಚಿತ್ರಿತ
೨೪೪	೩೯	೬	ಕುಂಭನಿಗೆ	ಕುಂಭಿನಿಗೆ
೨೪೫	೪೪	೩	ಬೊಡೆಹೊಡೆದು	ಹೊಡೆಹೊಡೆದು
೨೪೯	೧೩	೫	ಬರೆಕೆಯ್ದು	ಬರಿಗೆಯ್ದು
೨೫೧	೨೩	೬	ನೆಲದೊಳೊರ್ರ್ ವರಾಗಸ—	ನೆಲದೊಳೊರ್ವ ರಾಗಸ—
೨೫೫	೪೩	೧	ಹೊಣ್	ಹೂಣ್
೨೫೬	೪೬	೩	ಅರುಣಾಂಬರೆವಂ	ಅರುಣಾಂಬುವಂ
೨೫೭	೫೪	೪	ವಾಡಿದನೇ	ಮಾಡಿದನೇ
೨೬೦	೩	೪	ಕಪರ್ದಿಗಳೊಳ್	ಕಪರ್ದಿಗಳ್
೨೬೦	೪	೫	ಪಧ್ಮ	ಪದ್ಮ
೨೬೧	೫	೩	ಪೊತ್ಮವಂ	ಪೂತ್ರವಂ
೨೬೪	೨೦	೩	ಬೇಹುರದನನ್ಯರ	ಬೇಹುದನನ್ಯರ
೨೬೫	೨೬	೨	ಮಣಿಲೀಪ	ಮಣಿದೀಪ
೨೬೮	೪೩	೧	ದುಸ್ಸ್ವಾಭಾವರ್	ದುಸ್ಸ್ವಭಾವರ್
೨೬೯	೪೬	೨	ಬದ್ಧಿದ್ವನದಿರ:ಳ್	ಬದ್ಧ ದಿನದಿರಾಳ್
೨೭೧	೫೫	೬	ದಪ್ಪಳಿಸು	ದಪ್ಪಳಿಸು
೨೭೩	೬೮	೪	ಪರಸದರ್	ಪರಸಿದರ್
೨೮೨	೨೫	೪	ಗೀರುಶ್ಶೈಲ	ಗುರುಶ್ಶೈಲ
೨೮೬	೪೯	೩	ತಳೆದರ್ಜುನಂ	ತಳೆದರರ್ಜುನಂ
೨೯೫	೨೮	೬	ನಿನಗೆಂದು	ನಿನಗೆಂದನು
೨೯೭	೩೮	೨	ಮಲ್ಲದೆಲ್ಲಯಲುಂ	ಮಲ್ಲದೆಲ್ಲಯುಂ
೩೦೧	೫೫	೩	ಪೂರೆಯೊಳಿಹ	ಪೊರೆಯೊಳಿಹ
೩೦೧	೫೬	೫	ಭಾಂತಿಯೇತಕೆ	ಭ್ರಾಂತಿಯೇತಕೆ
೩೦೩	೬೫	೫	ದಾನವಿದ ಕಂತೆನಲ್	ದಾನಮದಕಂತೆನಲ್
೩೧೩	೩೭	೬	ರಥಾವಾಜಿಗಳ್	ರಥವಾಜಿಗಳ್
೩೧೩	೩೯	೩	ನೆಲದಾನ್ಮಾರಕಟಾ	ನೆಲದಾಣ್ಮರಕಟಾ
೩೧೫	೪೯	೫	ವಿಲ್ಲಂತಕವರ	ವಲ್ಲಂತಕನವರ
೩೧೬	೫೧	೬	ಸಾಕಿದೆಂದ	ಸಾಕಿದೆಂದು
೩೧೭	೫೬	೫	ಮಹಾನವ	ಮಹಾನದ
೩೨೨	೨೪	೬	ಪೊಳಿನೊಳಾ	ಪೊಳ್ತಿನೊಳಾ
೩೨೪	೨೪	೪	ಪೋದರಂತ್ಯರ್	ಪೋದರಂತ್ಯಜರ್
೩೨೫	೩೬	೪	ಮೆಲ್ನುದಿ	ಮೆಲ್ನುಡಿ
೩೨೫	೩೭	೩	ಪೂರ್ಣೇಂದುವೆಂದ	ಪೂರ್ಣೇಂದುವೆಂದು
೩೨೭	೪೫	೧	ಪಜ್ಜೆವಿಡೆ	ಪಜ್ಜೆವಿಡಿ
೩೨೭	೪೦	೫	ದಭಯು	ದುಭಯು
೩೩೦	೬೧	೩	ವಳದೊಳ್ಪಂ	ಧವಳದೊಳ್ಪಂ
೩೩೫	೨೦	೫	ಪೊಸಶಕಟ	ಪೊಸತಕಟ
೩೩೯	೪೪	೧	ಸಮಾರೂಧನಾಗಿ	ಸಮಾರೂಢನಾಗಿ
೩೪೦	೪೮	೬	ವಿಶ್ರಮನಾಗಿ	ವಿಶ್ರಮಕಾಗಿ
೩೪೧	೨	೩	ನಿತಂಬದಿ	ನಿತಂಬನಿ
೩೪೨	೯	೩	ನರಳ್ಯಾಡಿಗಳಿಕ್ಕೆ	ಸರಳಾರಡಿಗಳಿಕ್ಕೆ

ಪುಟ	ಪದ್ಯ	ಪಂಕ್ತಿ	ಅಶುದ್ಧ	ಶುದ್ಧ
೩೪೩	೧೨	೩	ಶುಧಾಂಶು	ಸುಧಾಂಶು
೩೪೩	೧೨	೪	ನುದಮಲ	ಸದಮಲ
೩೪೩	೧೨	೬	ಪೊರೆಮಟ್ಟರು	ಪೊರಮಟ್ಟರು
೩೪೭	೩೩	೫	ಕಾಂತನೊಳಂ ಬೆಣಿಕೆ	ಕಾಂತನೊಳೆಂಬೆಣಿಕೆ
೩೪೮	೩೫	೩	ಬ. ಸುಯ್ವಳು	ಬಿಸುಸುಯ್ವಳು
೩೪೮	೩೫	೫	ನೀರ್ವೊದಯ್ದಂ	ನೀರ್ವೊಯ್ದ
೩೫೧	೫೪	೩	ಪುರಂಧ್ರಿಯೆರ್ರೈದೆ	ಪುರಂಧ್ರಿಯರ್ರೈದೆ
೩೫೮	೩೨	೬	ಬಯ್ಯುತ್ತಿಂತೆಂದನು	ಬಯ್ಯ್ಯುತಿಂತೆಂದನು
೩೬೦	೪೪	೪	ಬಂದನೆಂದು	ಬಂದೆನೆಂದು
೩೬೨	೫೦	೪	ತಿವಿ	ಕಿವಿ
೩೬೨	೫೧	೩	ಮದನನಿದ್ದೆಗ್ಗೈದ	ಮದನನಿದ್ದೇಗ್ಗೈದ
೩೬೩	೫೬	೨	ಪೆರ್ಮರುಳಿಂದೆ	ಪೆರ್ಮರುಳಿಂತೆ
೩೬೫	೬೭	೩	ಗೊಂಣ್ಗೆ	ಗೋಣ್ಗೆ
೩೬೭	೭೫	೨	ಬನಿದವರುಂಟೆ	ಬರಿಸಿದವರುಂಟೆ
೩೬೮	೩	೨	ನವಧ ಸಿಳೆಯ	ನವಧರಿಸಿಳೆಯ
೩೭೦	೧೩	೨	ಸಮ್ಮನಿಸೆ	ಸುಮ್ಮನಿಹೆ
೩೭೨	೨೨	೩	ಕೇಳ್ದವರ್ಗಂದು	ಕೇಳ್ದವರ್ಗೆಂದು
೩೭೩	೨೫	೬	ಕುಯ್ಯ್ಯಳಾಂತು	ಕಯ್ಯೊಳಾಂತು
೩೭೪	೩೨	೨	ತಳಿತಸೆವುದು	ತಳಿತೆಸೆವುದು
೩೮೧	೮	೧	ಪಣ್ಣಗ ಂ	ಪಣ್ಣಳಿಂ
೩೮೧	೮	೩	ನೆಲವೇರಿ	ನಲವೇರಿ
೩೮೪	೨೦	೨	ಪೊರಮಟ್ಟರದರ	ಪೊರಮಟ್ಟರವರ
೩೮೭	೩೮	೨	ಸುಕ್ಸ್ರುಪ	ಸ್ರುಕ್ಸ್ರುವ
೩೮೭	೩೯	೩	ವಶಿಷ್ಠ	ವಸಿಷ್ಠ
೩೯೦	೫೧	೧	ಸಾಕ	ಸಾಲ
೩೯೧	೨	೩	ವಶಿಷ್ಠನ	ವಸಿಷ್ಠನ
೩೯೧	೨	೬	ಣ್ಣಾಪುದು	ಣ್ಣಾವುದು
೩೯೨	೭	೧	ತಾರತಮ್ಯನವರಿತು	ತಾರತಮ್ಯವನರಿತು
೩೯೫	೨೨	೫	ಸನವನಮಯ	ನವನ ಸಮಯ
೩೯೮	೩೭	೩	ಪರಿಸಿ	ಪರಸಿ
೩೯೮	೩೮	೧	ವಶಿಷ್ಠ	ವಸಿಷ್ಠ

WD 973—GPB—15,000—24-7-56

ಬೆಲೆ : ಒಂದು ರೂಪಾಯಿ